ವೇ|| ದೊಡ್ಡಬೆಲೆ ನಾರಾಯಣಶಾಸ್ತ್ರಿಗಳಿಂದ

ಪ್ರತಿಪದ ಟೀಕಾತಾತ್ಪರ್ಯ ಬರೆಯಲ್ಪಟ್ಟಿದೆ.

★

ಶ್ರೀರಸ್ತು.

ಶ್ರೀ ಜಾನಕೀಜಾನಯೇನಮಃ.

ಶ್ರೀ ಭರ್ತೃಹರಿ ಮಹಾ ಕವಿಯ

# ಸುಭಾಷಿತ ಗ್ರಂಥವು.



ವೇ॥ ದೊಡ್ಡಬೆಲೆ, ನಾರಾಯಣ ಶಾಸ್ತ್ರಿಗಳವರ,

ಪ್ರತಿಪದ ಟೀಕಾ ತಾತ್ಪರ್ಯದೊಂದಿಗೆ ಸೇರಿಸಲ್ಪಟ್ಟು

ಮಪ್ರಾಪ್ತವಾಗಿ ಎಂ. ವಿ. ಗೋವಿಂದರಾಜುಲುಸೆಟ್ಟಿ ಯವರಲ್ಲಿದ್ದ

ಇದರ ಹಕ್ಕನ್ನು ಪಡೆದ

ಶ್ರೀ ಚೌಡೇಶ್ವರೀ ಬುಕ್ಕುಡಿಪೋ ಪ್ರೊಪ್ರೈಟರ್

M. ಮುನಿನಾಗಪ್ಪನವರ

—ಸ್ವೀಯ—

ಶ್ರೀ ಚೌಡೇಶ್ವರೀ ಮುದ್ರಾಕ್ಷರ ಶಾಲೆಯಲ್ಲಿ ಮುದ್ರಿತವಾಗಿ,

ಪ್ರಚುರಗೊಂಡಿದೆ.

ಶತಕತ್ರಯ.

ನಾಲ್ಕನೆಯ ಮುದ್ರಣ ೧,೫೦೦ ಪ್ರತಿಗಳು.

ಬೆಂಗಳೂರು ಸಿಟಿ.

1925.

# ಉಪೋದ್ಘಾತ.

ಅಯ್ಯಾ !

ಮಮದೇಶಬಂಧುಗಳಿರಾ ! ಪ್ರಪಂಚದೊಳು ಐಹಿಕ, ಆ ಮುಷ್ಮಿ
ಕ, ಎಂಬದಾಗಿ ಸುಖವು ಎರಡು ಬಗೆಯಾಗಿರುವುದು; ಆ ಸುಖವು ಯ
ಕ್ತಾಯುಕ್ತ ವಿಚಾರಪೂರ್ವಕವಾಗಿ ಯುಕ್ತ ಧರ್ಮಾನುಷ್ಠಾ
ಅಯುಕ್ತ ಧರ್ಮಪ್ರವೃತ್ತ್ಯೌದಾಸೀನ್ಯ, ಇವುಗಳಿಂದುಂಟಾಗತಕ್ಕದಾ
ರುವುದು; ಲೋಕದಲ್ಲಿ ಆಹಾರ, ನಿದ್ರಾ, ಭಯ, ಗ್ರಾಮ್ಯಧರ್ಮ
ಳೆಂಬಿವು, ಇತರ ಸಕಲ ಪ್ರಾಣಿಗಳಿಗೂ, ಮನುಜರಿಗೂ ಸಮಾನವಾ
ದ್ದಾಗ್ಯೂ ಯುಕ್ತಾಯುಕ್ತ ವಿವೇಚನೆ, ತದನುಗುಣಾನುಷ್ಠಾನ ಎಂ
ವುಮಾತ್ರ ಮನುಷ್ಯರಿಗೆ ವಿಶೇಷ ಧರ್ಮವಾಗಿರುವುದು, ತಾದೃ
ವಿವೇಕವು ಸಕಲ ವಿಷಯಗತ ಸಾರಾಸಾರ ಧರ್ಮ ಪರಿಜ್ಞಾನ ಮಂತರ
ಉಂಟಾಗಲಾರದು; ಆದಕಾರಣ ಭರ್ತೃಹರಿಯೆಂಬ ಮಹಾ ಯೋಗಿಯ
ಸರ್ವವಸ್ತು ತದ್ಧರ್ಮಗಳ ತತ್ವವನ್ನೂ ಅವುಗಳಿಂದುಂಟಾಗುವ ಇಹಪ
ಲೋಕ ಸುಖದ ಇಯತ್ತೆಯನ್ನೂ ತಿಳಿದು, ಅಕುತೋಭಯವಾಗಿರುವ
ಮುಷ್ಮಿಕ ಸುಖನಿದಾನವಾದ ವೈರಾಗ್ಯಭಾಗ್ಯವನ್ನು ಸಂಪಾದಿಸಿ, ಸ್ವಸ
ಭಾಗ್ಯವನ್ನು ಕೇವಲ ಸ್ವೋಪಯೋಗಪಡಿಸಿಕೊಳ್ಳುವ ನಿರ್ಭಾಗ್ಯರಂತಾ
ಗದೆ, ಇತರ ಲೌಕಿಕರೂ ಆ ಅಮೋಘವಾದ ವೈರಾಗ್ಯಭಾಗ್ಯವನ್ನು ಪ
ದು ಅಸಾಧಾರಣವಾದ ಸುಖಾನುಭವವನ್ನು ಮಾಡಲೆಂದಾಲೋಚಿ
ತತ್ಪ್ರಾಪ್ತಿ ಕಾರಣವಾದ ಅಶೇಷವಿಷಯಪರಿಜ್ಞಾನ ವುಂಟಾಗಲುಕ್ರಮವಾ
ನೀತಿ, ಶೃಂಗಾರ, ವೈರಾಗ್ಯಗಳೆಂಬದಾಗಿ ಶತಕತ್ರಯದಿಂ ಕೂಡಿದ ಸುಭ
ಷಿತವೆಂಬೊಂದು ಸರ್ವೋತ್ತಮವಾದ ಗ್ರಂಥವನ್ನು ವಿರಚಿಸಿ ಪ್ರಚಾರ
ಡಿಸಿದನು; ಆ ಗ್ರಂಥವು ಕೇವಲ ಗೀರ್ವಾಣವಾಣೀ ಪರಿಜ್ಞಾನವುಳ್ಳವರ
ಸಾಧ್ಯವಾಗಿರುವುದು. ಅತಃ ಸುಲಭವಾಗಿ ಸಕಲ ಲೋಕೋಪಯೋಗವಾ
ಗುವಂತೆ ದೇಶಭಾಷೆಯೊಳು ವಿಶದವಾದ ಟೀಕೆಯನ್ನೂ, ಸಾರವಾದ ತಾ
ರ್ಯವನ್ನೂ ವೇ॥ ದೊಡ್ಡಬೆಲೆ, ನಾರಾಯಣ ಶಾಸ್ತ್ರಿಗಳು ರಚಿಸಿದರ
ಬಳಿಕ ಅದರ ಸಕಲ ಸ್ವಾತಂತ್ರ್ಯವನ್ನು ಹಿಂದೆ ಸೂಚಿಸಿರುವಂತೆ ಪಡೆ
M. ಮು ನಿ ನಾ ಗ ಪ್ಪ ನವರಿಂದ ಪ್ರಕಟಿಸಲ್ಪಟ್ಟಿದೆ. ಗುಣೈಕ ಪ
ಕ್ಷಪಾತಿಗಳಾದ ಸಜ್ಜನರು ಗುಣಾಂಶವನ್ನು ಮಾತ್ರ ಪರಿಗ್ರಹಿಸಿ ಸಂತೋ
... ಕೋರುವ.

M. ಮುನಿನಾಗಪ್ಪ.

ಶ್ರೀ ಸೀತಾರಾಮಾಭ್ಯಾಂನಮಃ.

ಟೀಕಾ ತಾತ್ಪರ್ಯಸಹಿತವಾದ

# ಭರ್ತೃಹರಿ ಸುಭಾಷಿತದಲ್ಲಿನ

## ನೀತಿಶತಕವು.

### ೧ನೇ ಭಾಗ.

ಶ್ಲೋ॥ ಜನ್ಮಾದ್ಯಸ್ಯ ಯತೋ ಯಚ್ಚ ಶಾಸ್ತ್ರಯೋನಿ ಪರಾತ್ಪರಂ ।
ತದ್ಬ್ರಹ್ಮ ಸರ್ವಗಂ ನಿತ್ಯಂ ನೌಮಿ ಸರ್ವಾರ್ಥಸಿದ್ಧಯೆ ॥

ಈ ಲೋಕದಲ್ಲಿ ಸಕಲ ಶಾಸ್ತ್ರಾರ್ಥ ಸಾರವನ್ನರಿತು, ಕವಿಕುಲತಿಲ ರೆಂದೆನ್ನಿಸಿಕೊಂಡು, ಮೂರ್ತೀಭವಿಸಿದ ಸದ್ಗುಣ ಸಂಘದಂತಿದ್ದ ಭರ್ತೃ ರಿ ಎಂಬ ಮಹಾ ಯೋಗೀಶ್ವರನು ತನ್ನ ಯೋಗಮಹಿಮೆಯಿಂದ ನಿಖಿಲ ಪಂಚವನ್ನು ಕರತಲಾಮಲಕದಂತೆ ತಿಳಿದು, ಲೋಕೋಪಕಾರ ಮಾಡೆ ೀಸುಗ ವಾತ್ಸಲ್ಯದಿಂದುದ್ಯುಕ್ತನಾಗಿ, ಲೋಕ ವ್ಯವಹಾರ ಜ್ಞಾನಕ್ಕೆ ುಖ್ಯಕಾರಣವಾದ ನೀತಿ, ಶೃಂಗಾರ, ವೈರಾಗ್ಯ, ವರ್ಣನಾರೂಪವಾದ ುಭಾಷಿತ ತ್ರಿಶತಿಎಂಬ ಹೆಸರುಳ್ಳ ಗ್ರಂಥವನ್ನು ರಚಿಸಲಾರಂಭಿಸಿ," ನು ರಚಿಸುವ ಗ್ರಂಥಕ್ಕೆ ವಿಘ್ನಗಳು ಬಾರದೆ ಪರಿಸಮಾಪ್ತಿಯೂ, ೋಕ ಪ್ರಸಿದ್ಧಿಯೂ, ಉಂಟಾಗುವುದಕ್ಕೆ ಆದಿಕಾರಣವಾಗಿರುವ ಪರಂ ್ಯೋತಿ ಸ್ವರೂಪೇಷ್ಟ ದೇವತಾ ನಮಸ್ಕಾರಾತ್ಮಕ ಮಂಗಳವನ್ನು ಾಡುತ್ತಾನೆ.—

ಶ್ಲೋ॥ ದಿಕ್ಕಾಲಾದ್ಯನವಚ್ಛಿನ್ನಾನಂತಚಿನ್ಮಾತ್ರಮೂರ್ತಯೇ ।
ಸ್ವಾನುಭೂತ್ಯೇಕಮಾನಾಯ ನಮಶ್ಶಾಂತಾಯತೇಜಸೆ ॥೧॥

ಟೀ॥ ದಿಕ್ಕಾಲಾದ್ಯನವಚ್ಛಿನ್ನಾನಂತಚಿನ್ಮಾತ್ರಮೂರ್ತಯೆ—ದಿಕ್-ಪೂರ್ವಾ ದಿಕ್ಕುಗಳು, ಕಾಲ=ಭೂತಾದಿ ಕಾಲಗಳು, ಆದಿ=ಮೊದಲಾದವುಗಳಿಂದ (ಎಂದರೆ ುಗಳಿಂದ) ಅಪರಿಚ್ಛಿನ್ನ=ಅಳೆಯಲ್ಪಡದಿರುವ, ಅನಂತ=ಕೊನೆಯಿಲ್ಲದ, ಚಿನ್ಮಾ =ಜ್ಞಾನಮಾತ್ರವೇ, ಮೂರ್ತಯೆ=ಶರೀರವಾಗಿ ಉಳ್ಳ ಸ್ವಾನುಭೂತ್ಯೇಕಮಾ

ನಾಯ—ಸ್ವಾನುಭೂತಿ=ಆತ್ಮಾನುಭವವೇ, ಏಕ=ಮುಖ್ಯವಾದ, ಮಾನಾಯ=
ಪ್ರಮಾಣವಾಗುಳ್ಳ, ಶಾಂತಾಯ=ಶಾಂತವಾದ, ತೇಜಸೆ=ಪ್ರಕಾಶಕಕ್ಕೋಸ್ಕರ
ನಮಃ=ನಮಸ್ಕಾರವು. .... .... ॥ ೧

ತಾ॥ ಪೂರ್ವ ಪಶ್ಚಿಮ ಮೊದಲಾದ ದಿಕ್ಕುಗಳನ್ನೂ, ಭೂತ ಭವಿ
ಷ್ಯದ್ವರ್ತಮಾನ ಕಾಲಗಳನ್ನೂ ವ್ಯಾಪಿಸಿ, ಮತ್ತು ಆದ್ಯಂತ ಶೂನ್ಯವಾಗಿ
ಯೂ, ಜ್ಞಾನಾನಂದ ಸ್ವರೂಪವಾಗಿಯೂ, ಅವರವರ ಸ್ವಾನುಭವವೆ
ಮುಖ್ಯವಾದ ಪ್ರಮಾಣವಾಗಿ ಉಳ್ಳದ್ದಾಗಿಯೂ ಇರುವ ಶಾಂತವಾ
ತೇಜೋರೂಪವಾದ ಪರಮಾತ್ಮನಿಗೆ ನಮಸ್ಕರಿಸುವೆನು. ॥ ೧

---

## ಮೂರ್ಖಪದ್ಧತಿ ಪ್ರಾರಂಭವು.

ಶ್ಲೋ॥ ಬೋದ್ಧಾರೋಮತ್ಸರಗ್ರಸ್ತಾಃ ಪ್ರಭವಸ್ಸ್ಮಯದೂಷಿತಾಃ ।
ಅಬೋಧೋಪಹತಾಶ್ಚಾನ್ಯೇಜೀರ್ಣಮಂಗೇಸುಭಾಷಿತಂ ॥ ೨

ಟೀ॥ ಬೋದ್ಧಾರಃ=ವಿದ್ವಾಂಸರು, ಮತ್ಸರಗ್ರಸ್ತಾಃ—ಮತ್ಸರ=ಅಸೂಯೆ
ಯಿಂದ, ಗ್ರಸ್ತಾಃ=ಆಕ್ರಮಿಸಲ್ಪಟ್ಟಿರುವರು, ಪ್ರಭವಃ=ಅರಸರು, ಸ್ಮಯದೂಷಿ
ತಾಃ—ಸ್ಮಯ=ಅಹಂಕಾರದಿಂದ, ದೂಷಿತಾಃ=ವ್ಯಾಪ್ತರಾದವರು, ಅನ್ಯೇ=ಇತ
ರು, ಅಬೋಧೋಪಹತಾಃ—ಅಬೋಧ=ಅಜ್ಞಾನದಿಂದ, ಉಪಹತಾಃ=ಯುಕ್ತ
ರಾದವರು, ಸುಭಾಷಿತಂ=ನೀತಿವಚನವು, ಅಂಗೇ=ಅಂತರಂಗದಲ್ಲಿ, ಜೀರ್ಣಂ=ಅಣ
ಹೋಯಿತು, ... ... ॥ ೨

ತಾ॥ ಲೋಕವ್ಯವಹಾರ ಕಾರಣವಾದ ನೀತಿಶಾಸ್ತ್ರವನ್ನು ಪ್ರಚಾ
ಮಾಡತಕ್ಕ ಯೋಗ್ಯತೆಯುಳ್ಳ ವಿದ್ವಾಂಸರು ತಮಗಿರುವ ಪ್ರತಿಷ್ಠೆಗೆ ಭಂ
ವುಂಟಾಗುವದೆಂಬ ಅಸೂಯೆಯಿಂದ ಮತ್ತೊಬ್ಬರಿಗೆ ಹೇಳುವುದಿಲ್ಲ
ಅಥವಾ ಪ್ರಭುಗಳಾದರೂ ಪ್ರಚಾರಪಡಿಸುವರೆಂದರೆ, ಅವರು ಅಹಂಭಾ
ದಿಂದ ಕೂಡಿದವರಾದ್ದರಿಂದ ಲೋಕೋಪಕಾರ ಲೇಶವೂ ಅವರಿಗವಶ್ಯ
ವಿಲ್ಲ. ಈ ಪಂಡಿತ ಪ್ರಭು ವ್ಯತಿರಿಕ್ತರಾದ ಜನರಾದರೋ ಸ್ವಭಾವದಿ
ದಲೇ ಅಜ್ಞರಾಗಿರುವರು. ಏವಂಚ ಯಾವವಿಧದಿಂದಲೂ ನೀತಿ ಪ್ರಚಾ
ವಿಲ್ಲದೆ ಹೋದುದರಿಂದ ನೀತಿಶಾಸ್ತ್ರವು ಅಂತರಂಗದಲ್ಲಿಯೇ ಅಡಗಿಹೋ
ಬೇಕಾಯಿತು. .... .... .... ॥ ೨

ಶ್ಲೋ॥ ಅಜ್ಞಸ್ಸುಖಮಾರಾಧ್ಯಸ್ಸುಖತರಮಾರಾಧ್ಯತೇವಿಶೇಷಜ್ಞಃ ।
ಜ್ಞಾನಲವದುರ್ವಿದಗ್ಧಂಬ್ರಹ್ಮಾಪಿನರಂನರಂಜಯತಿ ॥ ೩ ॥

ಟೀ॥ ಮೂರ್ಖ ಸಮಾಧಾನವು ಅಸಾಧ್ಯವೆಂಬರ್ಥವನ್ನು ಹೇಳುತ್ತಾನೆ— ಅಜ್ಞಃ=ಮೂಢನು, ಸುಖಂ=ಸುಲಭವಾಗಿ, ಆರಾಧ್ಯಃ=ಸಮಾಧಾನ ಮಾಡಲರ್ಹನು, ವಿಶೇಷಜ್ಞಃ=ಪ್ರಜ್ಞಾಶಾಲಿಯು, ಸುಖತರಂ=ಬಹು ಸುಲಭವಾಗಿ, ಆರಾಧ್ಯತೇ=ಸಮಾಧಾನ ಮಾಡಲ್ಪಡುತ್ತಾನೆ, ಜ್ಞಾನಲವದುರ್ವಿದಗ್ಧಂ—ಜ್ಞಾನ=ತಿಳುವಳಿಕೆಯು, ಲವ=ಚೂರಿನಿಂದ, ದುರ್ವಿದಗ್ಧಂ=ದುಷ್ಟನಾದ (ಎಂದರೆ ಕೂಡಿರುವ) ನರಂ=ಮನುಷ್ಯನನ್ನು, ಬ್ರಹ್ಮಾಪಿ=ಸೃಷ್ಟಿಕರ್ತನು ಕೂಡ, ನರಂಜಯತಿ=ಪ್ರಕಾಶ ಪಡಿಸಲಾರನು. ... ... ॥ ೩ ॥

ತಾ॥ ಏನೂತಿಳಿಯದ ಮೂಢನನ್ನು ಸಾಧಾರಣವಾಗಿ ತಿಳುವಳಿಕೆಯುಳ್ಳವನನ್ನಾಗಿ ಮಾಡಬಹುದು, ಬುದ್ಧಿವಂತನನ್ನು ಬಹು ಸುಲಭವಾಗಿ ಪಂಡಿತನನ್ನಾಗಿ ಮಾಡಬಹುದು, ತಿಳಿದೂ ತಿಳಿಯದ ಅವಿವೇಕಿಯಾಗಿರುವ ಮನುಷ್ಯನನ್ನು ಜ್ಞಾನಿಯನ್ನಾಗಿ ಮಾಡಲು ಸೃಷ್ಟಿಕರ್ತನಾದ ಚತುರ್ಮುಖನಿಗೂ ಅಸಾಧ್ಯವು. .... .... ॥ ೩ ॥

ಶ್ಲೋ॥ ಪ್ರಸಹ್ಯಮಣಿಮುದ್ಧರೇನ್ಮಕರ ವಕ್ತ್ರದಂಷ್ಟ್ರಾಂತರಾತ್ಸಮುದ್ರ
ಮಪಿಸಂತರೇತ್ಪ್ರಚಲದೂರ್ಮಿಮಾಲಾಕುಲಂ॥ ಭುಜಂಗಮಪಿಕೋ
ಪಿತಂಶಿರಸಿಪುಷ್ಪವದ್ಧಾರಯೇನ್ನತು ಪ್ರತಿನಿವಿಷ್ಟಮೂರ್ಖಜನಚಿ
ತ್ತಮಾರಾಧಯೇತ್ .... ॥ ೪ ॥

ಟೀ॥ ಮೂರ್ಖರ ಮನಸ್ಸು ಸಮಾಧಾನ ಮಾಡಲಸಾಧ್ಯವೆಂಬರ್ಥವನ್ನು ಎರಡು ಶ್ಲೋಕಗಳಿಂದ ಹೇಳುತ್ತಾನೆ—ಮಕರವಕ್ತ್ರದಂಷ್ಟ್ರಾಂತರಾತ್—ಮಕರ=ಶಿಂಶುಮಾರವೆಂಬ ಮೊಸಳೆಯು, ವಕ್ತ್ರ=ಬಾಯಿಯಲ್ಲಿರುವ, ದಂಷ್ಟ್ರ=ಕೋರೆಹಲ್ಲಿನ, ಅಂತರಾತ್=ಮಧ್ಯಭಾಗದ ದೆಸೆಯಿಂದ, ಪ್ರಸಹ್ಯ=ಬಲತ್ಕಾರದಿಂದ, ಮಣಿಂ=ರತ್ನವನ್ನು, ಉದ್ಧರೇತ್=ಎತ್ತಬಹುದು, ಪ್ರಚಲದೂರ್ಮಿಮಾಲಾಕುಲಂ—ಪ್ರಚಲತ್=ವಿಶೇಷವಾಗಿ ಚಲಿಸುತ್ತಿರುವ, ಊರ್ಮಿ=ಅಲೆಗಳ, ಮಾಲಾ=ಸಾಲಿನಿಂದ, ಆಕುಲಂ=ವ್ಯಾಪ್ತವಾಗಿರುವ, ಸಮುದ್ರಮಪಿ=ಸಾಗರವನ್ನು ಕೂಡ, ಸಂತರೇತ್=ದಾಟಬಹುದು, ಕೋಪಿತಂ=ಕೋಪ ಉಂಟಾಗಿರುವ, ಭುಜಂಗಮಪಿ=ಸರ್ಪವನ್ನು ಕೂಡ, ಶಿರಸಿ=ತಲೆಯಲ್ಲಿ, ಪುಷ್ಪವತ್=ಹೂವಿನಂತೆ, ಧಾರಯೇತ್=ಧರಿಸಬಹುದು. (ಆದರೆ)ಪ್ರತಿನಿವಿಷ್ಟಮೂರ್ಖಜನಚಿತ್ತಂ—ಪ್ರತಿನಿವಿಷ್ಟ=ದುರಾಗ್ರಹದಿಂದ ಕೂಡಿರುವ (ಎಂದರೆ ಕೆಟ್ಟಕೋಪದಿಂದ ಕೂಡಿದ) ಮೂರ್ಖಜನ=ಮೂಢಜನರ, ಚಿತ್ತಂ=ಮನಸ್ಸನ್ನು, ನಾರಾಧಯೇತ್=ಸಮಾಧಾನ ಮಾಡಲಾಗದು ॥೪॥

ತಾ॥ ಲೋಕದಲ್ಲಿ ಯಾವ ಮನುಷ್ಯನಾದರೂ ಶಿಂಶುಮಾರವೆಂಬ ಮೊಸಳೆಯ ಬಾಯಿಯೊಳಗೆ ಹಲ್ಲಿನ ಸಂದಿನಲ್ಲಿರುವ ರತ್ನವನ್ನಾದರೂ

ಬಹಳ ಸಂಕಟಪಟ್ಟು ಅತಿಪ್ರಯಾಸದಿಂದ ಮೇಲಕ್ಕೆ ತೆಗೆದಾನು, ಮತ್ತು ಅಲ್ಲಕಲ್ಲೋಲವಾಗಿರುವ ಅಲೆಗಳಿಂದ ಭಯಂಕರವಾದ ಸಮುದ್ರವನ್ನಾದರೂ ಯಾವದಾದರೊಂದು ಸಾಧನೆಯಿಂದಲಾಗಲೀ ಅಥವಾ ಹನುಮಂತನಂತೆ ಶಕ್ತಿ ವಿಶೇಷದಿಂದಲಾಗಲೀ ದಾಟಬಹುದು. ಇದೂ ಅಲ್ಲದೆ ಮಹಾಕೋಪದಿಂದ ಕೂಡಿದ ಸರ್ಪವನ್ನಾದರೂ ಮಣಿಮಂತ್ರಾದಿ ಬಲದಿಂದ ತಲೆಯಲ್ಲಿ ಹೂವಿನಂತೆ ಮುಡಿಯಬಹುದು. ಕೆಟ್ಟ ಕೋಪದಿಂದ ಕೂಡಿರುವ ಮೂರ್ಖರ ಮನಸ್ಸನ್ನು ಮಾತ್ರ ಸಮಾಧಾನ ಮಾಡುವುದಕ್ಕೆ ಯಾವ ವಿಧವಾದ ಸಾಧನವೂ ಇಲ್ಲದಿರುವದರಿಂದ ಅಶಕ್ಯವಾಗಿರುವುದು, ॥ ೪ ॥

ಶ್ಲೋ॥ ಲಭೇತಸಿಕತಾಸುತೈಲಮಪಿಯತ್ನತಃಪೀಡಯರ್ನ್ಪಿಬೇಚ್ಚ ಮೃಗತೃಷ್ಣಿಕಾಸುಸಲಿಲಂಪಿಪಾಸಾರ್ದಿತಃ॥ ಕದಾಚಿದಪಿಪರ್ಯಟರ್ನ್ಶಶವಿಷಾಣಮಾಸಾದಯೇನ್ನತುಪ್ರತಿನಿವಿಷ್ಟ ಮೂರ್ಖಜನಚಿತ್ತಮಾರಾಧಯೇತ್ .... ॥ ೫ ॥

ಟೀ॥ ಹಿಂದಿನ ಶ್ಲೋಕದಲ್ಲಿ ಸ್ವಲ್ಪಮಟ್ಟಿಗೆ ಅಸಾಧ್ಯವಾದ ವಸ್ತುವನ್ನು ಸಾಧಿಸಿದಾಗ್ಯೂ ಮೂರ್ಖರ ಮನಸ್ಸನ್ನು ಸಮಾಧಾನ ಮಾಡುವುದು ಅಸಾಧ್ಯವೆಂದು ಹೇಳಿ, ಈ ಶ್ಲೋಕದಲ್ಲಿ ಸುತರಾಂ ಅಸಾಧ್ಯ ವಸ್ತುವನ್ನಾದರೂ ಸಾಧಿಸ ಬಹುದು, ಮೂರ್ಖರ ಮನಸ್ಸಮಾಧಾನವು ಅತ್ಯಂತಾಸಾಧ್ಯವೆಂದು ಹೇಳುತ್ತಾನೆ— ಯತ್ನತಃ=ಯಾವದಾದರೊಂದು ಪ್ರಯತ್ನದ್ದೆಸೆಯಿಂದ, ಪೀಡಯರ್ನ್=ಪೀಡಿಸುವಂಥಾವನಾಗಿ, ಸಿಕತಾಸ್ವಪಿ=ಮರಳಲ್ಲಿಯಾದರೂ, ತೈಲಂ=ಎಣ್ಣೆಯನ್ನು, ಲಭೇತ=ಹೊಂದಬಹುದು. ಪಿಪಾಸಾರ್ದಿತಃ—ಪಿಪಾಸಾ=ದಾಹದಿಂದ, ಅರ್ದಿತಃ=ಪೀಡಿತನಾಗಿ, ಮೃಗತೃಷ್ಣಿಕಾಸು=ಮರು ಮರೀಚಿಕೆಗಳಲ್ಲಿ(ಎಂದರೆ ಬಿಸಿಲು ಕುದುರೆಗಳಲ್ಲಿ) ಸಲಿಲಂ=ಉದಕವನ್ನು, ಪಿಬೇಚ್ಚ=ಕುಡಿಯಲೂ ಬಹುದು, ಪರ್ಯಟರ್ನ್=ಸಂಚರಿಸುತ್ತಿರುವನಾಗಿ, ಕದಾಚಿತ್=ಒಂದಾನೊಂದು ಸಮಯದಲ್ಲಿ, ಶಶವಿಷಾಣಂ—ಶಶ=ಮೊಲದ, ವಿಷಾಣಮಪಿ=ಕೊಂಬನ್ನಾದರೂ, ಆಸಾದಯೇತ್=ಸಂಪಾದಿಸಬಹುದು, ಪ್ರತಿನಿಷ್ಟಮೂರ್ಖಜನಚಿತ್ತಂ—ಪ್ರತಿನಿವಿಷ್ಟ=ದುರಾಗ್ರಹದಿಂದ ಕೂಡಿದ, ಮೂರ್ಖಜನ=ಮೂಢಜನರ, ಚಿತ್ತಂ=ಮನಸ್ಸನ್ನು, ನತ್ವಾರಾಧಯೇತ್=ಸಮಾಧಾನ ಪಡಿಸಲಾಗದು. ಈ ಎರಡು ಶ್ಲೋಕಗಳೂ, ಪೃಥ್ವೀವೃತ್ತವು, ಜ-ಸ-ಜ-ಸ-ಈಗಣಗಳು ಬಂದು ಲ-ಗು-ಗಳು ೮-೯ ನೆಯ ಸ್ಥಾನದಲ್ಲಿ ಯತಿಯುಳ್ಳದ್ದಾಗಿಯೂ ಇರುವುದು ಲಕ್ಷಣವೆಂದು ಅರಿವುದು, ..... ..... ॥ ೫ ॥

ತಾ॥ ಯಂತ್ರ ಮೊದಲಾದ ಸಹಾಯದಿಂದ ಏನಾದರೂ ಪ್ರಯಾಸಪಟ್ಟು ಮರಳಿನಲ್ಲಿ ಎಣ್ಣೆಯನ್ನಾದರೂ ತೆಗೆಯಬಹುದು, ಮತ್ತು ಬಹು

ಬಾಯಾರಿಕೆಯಿಂದ ಕಷ್ಟಪಡುತ್ತಿರುವ ಸಮಯದಲ್ಲಿ ಬಿಸಿಲ್ಗೊರೆಯೊಳಗಾದರೂ ಯಥೇಚ್ಛವಾಗಿ ಉದಕವನ್ನು ಪಾನ ಮಾಡಬಹುದು. ಇದೂ ಅಲ್ಲದೆ ಲೋಕವೆಲ್ಲಾ ತಿರುಗಿ ಯಾವಾಗಲೂ ಶಬ್ದಮಾತ್ರದಲ್ಲಿರುವ ಮೊಲದ ಕೊಂಬನ್ನಾದರೂ ಸಂಪಾದಿಸಬಹುದು. ಕೆಟ್ಟ ಕೋಪದಿಂದ ಕೂಡಿರುವ ಮೂಢರ ಮನಸ್ಸನ್ನು ಮಾತ್ರ ಸಮಾಧಾನಮಾಡುವುದು ಯಾವನಿಂದಲೂ ಆಗಲಾರದು. .... ॥ ೫ ॥

ಶ್ಲೋ॥ ವ್ಯಾಳಂಬಾಲಮೃಣಾಳತಂತುಭಿರಸೌ ರೋದ್ಧುಂಸಮುಜ್ಜೃಂಭತೆ
ಭೇತ್ತುಂವಜ್ರಮಣಿಂಶಿರೀಷ ಕುಸುಮಪ್ರಾಂತೇನಸನ್ನಹ್ಯತಿ ॥
ಮಾಧುರ್ಯಂಮಧುಬಿಂದುನಾರಚಯಿತುಂಕ್ಷಾರಾಂಬುಧೇರೀಹತೆಮೂ
ರ್ಖಾನ್ಯಃಪ್ರತಿನೇತುಮಿಚ್ಛತಿಬಲಾತ್ಸೂಕ್ತೈಸ್ಸುಧಾಸ್ಯಂದಿಭಿಃ ॥

ಟೀ॥ ಮೂರ್ಖರ ಮನಸ್ಸಮಾಧಾನ ಪಡಿಸುತ್ತೇನೆಂದು ಪ್ರಯತ್ನ ಪಡುವಿಕೆಯು ಅತ್ಯಂತ ಅಯೋಗ್ಯತೆಯು ಎಂಬ ಅರ್ಥವನ್ನು ಹೇಳುತ್ತಾನೆ. ಯಃ=ಯಾವ ಮನುಷ್ಯನು, ಬಲಾತ್=ಬಲಾತ್ಕಾರದ ದೆಸೆಯಿಂದ, ಸುಧಾಸ್ಯಂದಿಭಿಃ—ಸುಧಾ=ಅಮೃತರಸವನ್ನು, ಸ್ಯಂದಿಭಿಃ=ಸ್ರವಿಸುತ್ತಿರುವ, ಸೂಕ್ತೈಃ=ಪ್ರಿಯೋಕ್ತಿಗಳಿಂದ, ಮೂರ್ಖಾನ್=ಮೂಢರನ್ನು, ಪ್ರತಿನೇತುಂ=ಸಮಾಧಾನ ಮಾಡುವುದಕ್ಕೆ, ಇಚ್ಛತಿ=ಅಪೇಕ್ಷಿಸುತ್ತಾನೆಯೊ, ಅಸೌ=ಈ ಮನುಷ್ಯನು, ವ್ಯಾಳಂ=ದುಷ್ಟ ಗಜವನ್ನು, ಬಾಲಮೃಣಾಳತಂತುಭಿಃ—ಬಾಲ=ಎಳೇದಾದ, ಮೃಣಾಳ=ತಾವರೇ ದಂಟಿನ, ತಂತುಭಿಃ=ದಾರಗಳಿಂದ, ರೋದ್ಧುಂ=ತಡೆಯುವುದಕ್ಕೆ, (ಅಥವಾ ಕಟ್ಟುವದಕ್ಕೆ) ಸಮುಜ್ಜೃಂಭತೆ=ಪ್ರಯತ್ನ ಪಡುತ್ತಾನೆ, ವಜ್ರಮಣಿಂ=ವಜ್ರವೆಂಬ ರತ್ನವನ್ನು, ಶಿರೀಷಕುಸುಮಪ್ರಾಂತೇನ—ಶಿರೀಷಕುಸುಮ=ಬಂದಾನೊಂದು ಸೂಕ್ಷ್ಮವಾದ ಹೂವಿನ (ಬೆಟ್ಟಮಲ್ಲಿಗೆಯ) ಪ್ರಾಂತೇನ=ರೇಕಿನಿಂದ, ಭೇತ್ತುಂ=ಸೀಳುವುದಕ್ಕೆ, ಸನ್ನಹ್ಯತಿ=ಉದ್ಯುಕ್ತನಾಗುವನು, ಕ್ಷಾರಾಂಬುಧೇಃ=ಉಪ್ಪಿನ ಕಡಲಿಗೆ, ಮಧುಬಿಂದುನಾ—ಮಧು=ಜೇನುತುಪ್ಪದ, ಬಿಂದುನಾ=ಒಂದು ತೊಟ್ಟಿನಿಂದ, ಮಾಧುರ್ಯಂ=ರುಚಿಯನ್ನು, ರಚಯಿತುಂ=ಉಂಟುಮಾಡುವುದಕ್ಕೆ, ಈಹತೆ=ಅಪೇಕ್ಷಿಸುತ್ತಾನೆ, ನಿದರ್ಶನಾಲಂಕಾರವು, ಶಾರ್ದೂಲವಿಕ್ರೀಡಿತ ವೃತ್ತವು.

ಶ್ಲೋ॥ ಸೂರ್ಯಾಶ್ವೈರ್ಮಸಜಾಸ್ತತಾಸ್ಸಗುರವಃ=೧೨ನೆಯ ವರ್ಣದಲ್ಲಿ ಯತಿಯುಳ್ಳದ್ದಾಗಿಯೂ, ಮ-ಸ-ಜ-ತ-ತ ಈ ಗಣಗಳು, ೧ ಗುರುವು, ಉಂಟಾಗಿರುವಿಕೆಯು ಲಕ್ಷಣವೆಂದರಿವುದು. ... ..... ॥ ೬ ॥

ತಾ॥ ಎಳೆಯ ತಾವರೆಯ ದಂಟಿನಲ್ಲಿರುವ ಸಣ್ಣ ದಾರದಿಂದ ದುಷ್ಟ ಗಜವನ್ನು ಹಿಡಿದುಕಟ್ಟುವೆನೆಂತಲೂ, ಬೆಟ್ಟಮಲ್ಲಿಗೆಯಹೂವಿನ ರೇಕಿ

ನಿಂದ ವಜ್ರವನ್ನು ಸೀಳುವೆನೆಂತಲೂ, ಒಂದು ಬೊಟ್ಟು ಜೇನು ತುಪ್ಪವನ್ನು ಹಾಕಿ ಕ್ಷಾರವಾಗಿರುವ ಸಮುದ್ರವನ್ನೆಲ್ಲಾ ಸಿಹಿಯಾಗಿರುವಂತೆ ಮಾಡುವೆನೆಂತಲೂ ಪ್ರಯತ್ನ ಪಡುವವನು ಎಷ್ಟು ಅವಿವೇಕಿಯೋ? ಅಮೃತರಸವನ್ನು ಸುರಿಸುತ್ತಿರುವ ಹಿತವಾದ ಮಾತುಗಳಿಂದ ಮೂರ್ಖರ ಮನಸ್ಸನ್ನು ಸಮಾಧಾನ ಪಡಿಸುತ್ತೇನೆಂದು ಉದ್ಯುಕ್ತನಾಗತಕ್ಕವನು ಅವನಿಗಿಂತಲೂ ಅಷ್ಟು ಅಯೋಗ್ಯನು. ಎಂದರೆ ಸರ್ವಥಾ ಮೂರ್ಖರ ಮನಸ್ಸನ್ನು ಸಮಾಧಾನ ಮಾಡಲಾಗದೆಂದು ಭಾವವು .... ॥೬॥

ಶ್ಲೋ॥ ಸ್ವಾಯತ್ತಮೇಕಾಂತಹಿತಂವಿಧಾತಾ ವಿನಿರ್ಮಿತಂಛಾದನಮಜ್ಞತಾಯಾಃ ॥ ವಿಶೇಷತಸ್ಸರ್ವವಿದಾಂಸಮಾಜೇವಿಭೂಷಣಂಮೌನಮಪಂಡಿತಾನಾಂ .... .... ॥ ೭ ॥

ಟೀ॥ ಮೂರ್ಖರಿಗೆ ಸಂರಕ್ಷಕವಾದ ಮಾರ್ಗವನ್ನು ಹೇಳುತ್ತಾನೆ—ವಿಧಾತಾ=ಬ್ರಹ್ಮನಿಂದ, ಸ್ವಾಯತ್ತಂ=ಸ್ವಾಧೀನವಾಗಿಯೂ, ಏಕಾಂತಹಿತಂ=ಏಕಾಂತ=ಅಂತರಂಗಕ್ಕೆ ಹಿತಂ=ಪ್ರಿಯಕರವಾಗಿಯೂ, ವಿಶೇಷತಃ=ಅತಿಶಯವಾಗಿ, ಸರ್ವವಿದಾಂ=ಸರ್ವಜ್ಞರಾದವರ, ಸಮಾಜೇ=ಸಭೆಯಲ್ಲಿ, ವಿಭೂಷಣಂ=ಅಲಂಕಾರವಾಗಿಯೂ ಇರುವ, ಮೌನಂ=ಸುಮ್ಮನಿರುವಿಕೆಯು, ಅಜ್ಞತಾಯಾಃ=ಮೂಢತನಕ್ಕೆ, ಛಾದನಂ=ಮರೆಯಾಗಿ, ವಿನಿರ್ಮಿತಂ=ನಿರ್ಮಿಸಲ್ಪಟ್ಟಿರುವದು, ಉಪಜಾತಿ ವೃತ್ತವು ತ-ತ-ಜ ಗಣಗಳು ೨ ಗುರುವು ಉಳ್ಳದ್ದು ಇಂದ್ರವಜ್ರಾವೃತ್ತವೆಂತಲೂ, ಜ-ತ-ಜ ಗಣಗಳು ೨ ಗುರುಗಳು ಉಳ್ಳದ್ದು ಉಪೇಂದ್ರ ವಜ್ರಾವೃತ್ತವೆಂತಲೂ, ಪ್ರಥಮ ಪಾದವು ಇಂದ್ರವಜ್ರಾಲಕ್ಷಣದಿಂದಲೂ, ದ್ವಿತೀಯಪಾದವು ಉಪೇಂದ್ರ ವಜ್ರಾಲಕ್ಷಣದಿಂದಲೂ ಕೂಡಿ, ಮಿಶ್ರವಾಗಿದ್ದರೆ ಉಪಜಾತಿವೃತ್ತವೆಂತಲೂ ಭೇದವನ್ನು ತಿಳಿಯತಕ್ಕದ್ದು. ... ... ... ॥ ೭ ॥

ತಾ॥ ಸೃಷ್ಟಿಕರ್ತನಾದ ಬ್ರಹ್ಮನು ಮೂಢರಾದವರು ಸರ್ವಜ್ಞರ ಸಭೆಗೆ ಹೋದರೆ ಅವರ ಮೂಢತನವು ಪ್ರಕಾಶಕ್ಕೆ ಬರದೆ ಮರೆಯಾಗಿರುವಂತೆಯೂ. ಅಂತರಂಗಕ್ಕೆ ಹಿತಕರವಾಗಿಯೂ, ಅಲಂಕಾರವಾಗಿಯೂ ಇರುವಂತೆ, ಮೌನವೆಂಬ ಒಂದು ದೊಡ್ಡ ವಸ್ತುವನ್ನು ನಿರ್ಮಿಸಿಕೊಟ್ಟಿರುವನು, ಎಂದರೆ ಮೂಢರು ವಿದ್ವಾಂಸರಿರುವ ಸ್ಥಳಕ್ಕೆ ಹೋದರೆ ಮಾತನಾಡದಿರುವುದೇ ಅಲಂಕಾರವಾಗಿರುವುದು ಎಂದು ಭಾವವು. ಇದರಿಂದ ಒಂದು ವೇಳೆ ಪಂಡಿತನು ಮೂರ್ಖರ ಗುಂಪಿಗೆ ಹೋದರೆ ಆತನಿಗೂ ಅಲ್ಲಿ ಮಾತನಾಡದಿರುವುದೇ ಅಲಂಕಾರವೆಂದು ತೋರುವುದು .... ॥ ೭ ॥

ಶ್ಲೋ॥ ಯದಾಕಿಂಚಿಜ್ಜ್ಞೋಽಹಂಗಜ ಇವಮದಾಂಧಸ್ಸಮಭವಂತದಾ ಸರ್ವಜ್ಞೋಽಸ್ಮೀತ್ಯಭವದವಲಿಪ್ತಂಮಮಮನಃ ॥ ಯದಾಕಿಂಚಿ ತ್ಕಿಂಚಿದ್ಬುಧಜನಸಕಾಶಾದವಗತಂ ತದಾಮೂರ್ಖೋಽಸ್ಮೀತಿಜ್ವರ ಇವಮದೋಮೇವ್ಯಪಗತಃ .... ॥ ೮ ॥

ಟೀ॥ ಒಬ್ಬನೊಬ್ಬ ಅನುಭವಸ್ಥನ ರೀತಿಯನ್ನು ತಿಳಿಸುತ್ತಾನೆ—ಕಿಂಚಿತ್—ಅಲ್ಪವನ್ನು, ಜ್ಞಃ=ತಿಳಿದವನಾಗಿ, ಯದಾ=ಯಾವಾಗ, ಗಜಇವ=ಆನೆಯಂತೆ ಮದಾಂಧಃ—ಮದ=ಗರ್ವದಿಂದ, ಅಂಧಃ=ಕಣ್ಣುಕಾಣದವನು (ಎಂದರೆ ಅವಿವೇಕಿಯು) ಸಮಭವಂ=ಆದೆನೊ, ತದಾ=ಆ ಸಮಯದಲ್ಲಿ, ಸರ್ವಜ್ಞಃ=ಎಲ್ಲವನ್ನು ತಿಳಿದವನು, ಅಸ್ಮಿ=ಆದೆನು, ಇತಿ=ಹೀಗೆಂದು, ಮಮ=ನನ್ನ, ಮನಃ=ಮನಸ್ಸು, ಅವಲಿಪ್ತಂ=ಗರ್ವದಿಂದ ಕೂಡಿದ್ದು, ಅಭವತ್=ಆಯಿತು, ಯದಾ=ಯಾವ ಸಮಯದಲ್ಲಿ, ಬುಧಜನಸಕಾಶಾತ್=ವಿದ್ವಜ್ಜನರ ಮುಖದಿಂದ, ಕಿಚಿತ್ಕಿಂಚಿತ್=ಸ್ವಲ್ಪ ಸ್ವಲ್ಪವಾಗಿ, ಅವಗತಂ=ತಿಳಿಯಲ್ಪಟ್ಟಿತೊ, ತದಾ=ಆಗ, ಮೂರ್ಖಃ=ಮೂಢನು, ಅಸ್ಮಿ=ಆದೆನು, ಇತಿ=ಹೀಗೆಂದು, ಮೇ=ನನ್ನ, ಮದಃ=ಅಹಂಕಾರವು, ಜ್ವರಇವ=ಜ್ವರದಂತೆ, ವ್ಯಪಗತಃ=ಇಳಿದುಹೋಯಿತು, ಶಿಖರಿಣೀವೃತ್ತವು, ೬-೧೧ರಲ್ಲಿ ಯತಿಯುಳ್ಳದ್ದಾಗಿಯೂ, ಯ-ಮ-ನ-ಸ-ಭ-ಗಣಗಳುಳ್ಳದ್ದಾಗಿಯೂ, ೧-ಲ-೧-ಗು ಉಂಟಾಗಿರುವಿಕೆಯು ಲಕ್ಷಣವೆಂದರಿವುದು. .... ॥ ೮ ॥

ತಾ॥ ಮೊದಲು ಸ್ವಲ್ಪ ಲೋಕ ವ್ಯವಹಾರವೂ ಶಾಸ್ತ್ರಜ್ಞಾನವೂ ಉಂಟಾಗಲು, ಒಡನೆಯೇ ನಾನು ಸರ್ವಜ್ಞನಾದೆನೆಂದು ಮದದಾನೆಯಂತೆ ಮಹಾ ಕೊಬ್ಬಿಸಿದ ಕೂಡಿದ್ದೆನು. ಮತ್ತು ನನ್ನ ಮನಸ್ಸಿಗೆ ಬಹು ಅಹಂಕಾರವೂ ಉಂಟಾಯಿತು. ತರುವಾಯ ವಿದ್ವಜ್ಜನರ ಮುಖದಿಂದ ಸ್ವಲ್ಪ ವಿಶೇಷವಾಗಿ ತಿಳಿಯುತ್ತ ಬರಲು, ಆಗ ನನಗೇನು ತಿಳಿಯುವುದು ? ವ್ಯರ್ಥವಾಗಿ ಅಹಂಕಾರದಿಂದ ಸರ್ವಜ್ಞನೆಂದು ಕೊಬ್ಬಿದ್ದೆನಲ್ಲಾ ! ಇನ್ನೂ ನಾನು ತಿಳಿಯಬೇಕಾದದ್ದು ಅನೇಕವಾಗಿರುವುದು ; ಛೀ! ಮೊದಲು ನನಗೆ ಉಂಟಾದದ್ದು ಅತ್ಯಂತ ಅವಿವೇಕವು, ಎಂದು ಅಹಂಕಾರವು ಕ್ರಮೇಣ ಇಳಿದುಹೋಗುವದು. (ಎಂದರೆ ಅಲ್ಪಜ್ಞನಾದಾಗ ಅಹಂಕಾರ ಉಂಟಾಗಿ ಬುದ್ಧಿಶಾಲಿಯಾಗುತ್ತ ಬರಲು ಅಹಂಕಾರವು ಇಳಿದು ಹೋಗುವುದು) ಎಂದು ಭಾವವು. .... .... ॥ ೮ ॥

ಶ್ಲೋ॥ ಕ್ರಿಮಿಕುಲಚಿತಂಲಾಲಾಕ್ಲಿನ್ನಂವಿಗಂಧಿಜುಗುಪ್ಸಿತಂನಿರುಪಮರಸಪ್ರೀತ್ಯಾಖಾದರ್ನರಾಸ್ಥಿನಿರಾಮಿಷಂ ॥ ಸುರಪತಿಮಪಿಶ್ವಾಪಾರ್ಶ್ವಸ್ಥ

ಸ್ಥಂವಿಲೋಕ್ಯನಶಂಕತೇನಹಿಗಣಯತಿಕ್ಷುದ್ರೋ ಜಂತುಃಪರಿಗ್ರ
ಹಫಲ್ಗುತಾಂ .... .... ॥ ೯ ॥

ಟೀ॥ ಮೂರ್ಖನಿಗೆ ಖಹು ಹೀನವಾದ ದೃಷ್ಟಾಂತವನ್ನು ಹೇಳುತ್ತಾನೆ— ಶ್ವಾ=ನಾಯಿಯು, ಕ್ರಿಮಿಕುಲಚಿತಂ—ಕ್ರಿಮಿ=ಹುಳಗಳಿಂದ, ಚಿತಂ=ವ್ಯಾಪ್ತವಾಗಿರುವ, ಲಾಲಾಕ್ಲಿನ್ನಂ—ಲಾಲಾ=ಜೊಲ್ಲಿನಿಂದ, ಕ್ಲಿನ್ನಂ=ನನೆದಿರುವ, ವಿಗಂಧಿ=ದುರ್ಗಂಧವುಳ್ಳ, ಜುಗುಪ್ಸಿತಂ=ಅಸಹ್ಯಕರವಾದ, ನಿರಾಮಿಷಂ=ಮಾಂಸವಿಲ್ಲದಿರುವ, ಖರಾಸ್ಥಿ—ಖರ=ಕತ್ತೆಯ, ಅಸ್ಥಿ=ಮೂಳೆಯನ್ನು. ನಿರುಪಮರಸಪ್ರೀತ್ಯಾ— ನಿರುಪಮ=ಅಸಮಾನವಾದ, ರಸ=ಮಧುರರುಚಿಯ, ಪ್ರೀತ್ಯಾ=ಪ್ರೇಮದಿಂದ, ಖಾದನ್=ತಿನ್ನುತ್ತಿರುವದಾಗಿ, ಪಾರ್ಶ್ವಸ್ಥಂ=ಪಕ್ಕದಲ್ಲಿರುವ, ಸುರಪತಿಮಪಿ=ದೇವೇಂದ್ರನನ್ನು ಕೂಡ, ವಿಲೋಕ್ಯ=ನೋಡಿ, ನಶಂಕತೇ=ಲಜ್ಜಿಸುವದಿಲ್ಲವು, ಹಿ= ಏಕೆಂದರೆ, ಕ್ಷುದ್ರಃ=ನೀಚವಾದ, ಜಂತುಃ=ಪ್ರಾಣಿಯು, ಪರಿಗ್ರಹಫಲ್ಗುತಾಂ— ಪರಿಗ್ರಹ=ತಾನು ಸ್ವೀಕರಿಸಿರುವ ವಸ್ತುವಿನಲ್ಲಿ, ಫಲ್ಗುತಾಂ=ಹೀನತೆಯನ್ನು, ನಗಣಯತಿ=ಎಣಿಸುವದಿಲ್ಲ, ಅಪ್ರಸ್ತುತ ಪ್ರಶಂಸಾಲಂಕಾರವು, ಹರಿಣೀವೃತ್ತವು ನ-ಸ-ಮ-ರ-ಸ ಗಣಗಳು ಲ-ಗು ಗಳು ೧೦ರಲ್ಲಿ ಯತಿಯೂ ಇರೋಣವು ಲಕ್ಷಣವೆಂದರಿವುದು. ... ... ... ॥ ೯ ॥

ತಾ॥ ಹುಳಗಳಿಂದ ಕೂಡಿ ಜೊಲ್ಲಿನಿಂದ ನನೆದು ದುರ್ವಾಸನೆಯುಂಟಾಗಿ ಅಸಹ್ಯಕರವಾದಕತ್ತೆಯ ಮೂಳೆಯನ್ನು ಬಾಯಿಯಲ್ಲಿ ಕಚ್ಚಿಕೊಂಡಿರುವ ನಾಯಿಯು, ಇದರಲ್ಲಿರುವ ರುಚಿಯು ಇನ್ನೆಲ್ಲಿಯೂ ಇಲ್ಲವೆಂದು ಪರಮಾದರದಿಂದ ಕಡಿಯುತ್ತಾ ಇರುವ ಸಮಯದಲ್ಲಿ, ತ್ರಿಲೋಕಾಧಿಪತಿಯಾದ ಇಂದ್ರನು ಬಂದು ಪಕ್ಕದಲ್ಲಿ ನಿಂತಿದ್ದರೂ ಅವನನ್ನು ನೋಡಿ ನಾನು ಈ ರೀತಿಯಾದ ಹೀನಕೆಲಸದಲ್ಲಿ ಆಸಕ್ತನಾಗಿರುವೆನೆಂದು ಸ್ವಲ್ಪವೂ ನಾಚಿಕೆ ಪಡುವದಿಲ್ಲವು. ಏಕೆಂದರೆ, ಲೋಕದಲ್ಲಿ ಪ್ರತಿಯೊಬ್ಬನೂ ತಾನು ಕೈಕೊಂಡಿರುವ ಕೆಲಸದಲ್ಲಿ ಅಥವಾ ವಸ್ತುವಿನಲ್ಲಿ ದೋಷವನ್ನು ಎಂದಿಗೂ ಎಣಿಸುವದೇ ಇಲ್ಲ ಎಂಬೀ ನ್ಯಾಯವು ಲೋಕಸಿದ್ಧವಾಗಿರುವುದು. .... .... ॥ ೯ ॥

ಶ್ಲೋ॥ ಶಿರಶ್ಶಾರ್ವಂಸ್ವರ್ಗಾತ್ಪಶುಪತಿಶಿರಸ್ತಃಕ್ಷಿತಿಧರಂ ಮಹೀಧ್ರಾದು
ತ್ತುಂಗಾದವನಿಮವನೇಶ್ಚಾಪಿಜಲಧಿಂ ॥ ಅಧೋಗಂಗಾಸೇಯಂಪ
ದಮುಪಗತಾಸ್ತೋಕಮಥವಾ ವಿವೇಕಭ್ರಷ್ಟಾನಾಂ ಭವತಿವಿನಿ
ಪಾತಶ್ಶತಮುಖಃ .... .... ॥ ೧೦ ॥

ಟೀ॥ ಅವಿವೇಕವು ಅತ್ಯಂತ ಅನರ್ಥವನ್ನುಂಟುಮಾಡತಕ್ಕದ್ದಾದ ಕಾರಣ ವಿವೇಕವೇ ಮುಖ್ಯವಾದದ್ದೆಂಬರ್ಥವನ್ನು ತೋರಿಸುತ್ತಾನೆ- ಯಾಗಂಗಾ=ಯಾವ ಗಂಗೆಯು, ಸ್ವರ್ಗಾತ್=ಸ್ವರ್ಗಲೋಕದ ದೆಸೆಯಿಂದ, ಶಾರ್ವಂ=ಈಶ್ವರನ ಸಂಬಂಧವಾದ, ಶಿರಃ=ತಲೆಯನ್ನು, ಉಪಗತಾ=ಹೊಂದಿದಳೋ, ಪಶುಪತಿಶಿರಸ್ತಃ=ಪಶುಪತಿ=ಶಂಕರನ, ಶಿರಸ್ತಃ=ತಲೆಯ ದೆಸೆಯಿಂದ, ಕ್ಷಿತಿಧರಂ=ಹಿಮವತ್ಪರ್ವತವನ್ನು, ಉಪಗತಾ=ಹೊಂದಿದಳೋ, ಉತ್ತುಂಗಾತ್=ಉನ್ನತವಾದ ಮಹೀಧ್ರಾತ್=ಹಿಮವತ್ಪರ್ವತದ ದೆಸೆಯಿಂದ, ಅವನಿಂ=ಭೂಮಿಯನ್ನು, ಉಪಗತಾ=ಹೊಂದಿದಳೋ, ಅವನೇಶ್ಚಾಪಿ=ಭೂಮಿಯ ದೆಸೆಯಿಂದಲೂ, ಜಲಧಿಂ=ಸಮುದ್ರವನ್ನು ಉಪಗತಾ=ಹೊಂದಿದಳೋ, ಅಥೋ=ಅನಂತರದಲ್ಲಿ, ಸೇಯಂ=ಆ ಈ ಗಂಗೆಯು ಸ್ತೋಕಂಪದಂ=ಸ್ವಲ್ಪವಾದ ಸ್ಥಾನವನ್ನು (ಎಂದರೆ ಪಾತಾಳವನ್ನು)ಉಪಗತಾ=ಹೊಂದಿದಳು, ಅಥವಾ ಅದು ಹಾಗೆಯೇ ಸರಿ, ವಿವೇಕಭ್ರಷ್ಟನಾಂ=ವಿವೇಕಶೂನ್ಯರಿಗೂ, ಸ್ಥಾನಭ್ರಷ್ಟರಾದವರಿಗೂ, ವಿನಿಪಾತಃ=ಭಂಗವು, (ಅಧಃ ಪತನವೂ,) ಶತಮುಖಃ=ಬಹುಪ್ರಕಾರವಾಗಿ,ಭವತಿ=ಉಂಟಾಗುವುದು. ಪರ್ಯಾಯಾಲಂಕಾರವು, ಶಿಖರಿಣೀವೃತ್ತವು. ... ... ..... ॥೧೦॥

ತಾ॥ ಲೋಕಪ್ರಸಿದ್ಧಳಾದ ಗಂಗೆಯು ಮೊದಲು ಸ್ವರ್ಗಲೋಕದಲ್ಲಿದ್ದು, ಅಲ್ಲಿಂದ ಶಂಕರನ ತಲೆಯಮೇಲೆ ಬಿದ್ದು, ಅಲ್ಲಿಂದ ಹಿಮವತ್ಪರ್ವತದ ಮೇಲೆ ಬಂದು, ಆ ಬೆಟ್ಟದಿಂದ ಭೂಮಿಗೆ ಉರುಳಿ, ಅಲ್ಲಿಂದ ಸಮುದ್ರಕ್ಕೆ ಧುಮಿಕಿ, ತರುವಾಯ ಪಾತಾಳವನ್ನು ಸೇರಿದಳು. ಆದುದರಿಂದ ಸರ್ವ ಪೂಜ್ಯಳಾದ ಗಂಗೆಗೂ ಸ್ವಸ್ಥಾನದಿಂದ ಭ್ರಂಶವುಂಟಾಗಲು ಅಧಃಪತನವುಂಟಾಯಿತು. ಹೀಗಿರುವಲ್ಲಿ ವಿವೇಕಶೂನ್ಯರಾದವರಿಗೆ ಅನರ್ಥವೆಂಬುದು, ಹೀಗೆ ನಾನಾಮುಖದಲ್ಲಿ ಉಂಟಾಗುವದಾದಕಾರಣ ವಿವೇಕಭ್ರಷ್ಟನಾಗಬಾರದೆಂದು ಭಾವವು. ಇಲ್ಲಿ ನಹಿನಿಂದಾನ್ಯಾಯವು, ಎಂದರೆ ಈ ನಿಂದೆಯು ನಿಂದ್ಯವಾದ ಭ್ರಷ್ಟನನ್ನು ನಿಂದಿಸಲಿಕ್ಕೇಬಂದುದು, ಪೂಜ್ಯಳಾದ ಗಂಗೆಯನ್ನು ನಿಂದಿಸಲಿಕ್ಕೆ ಬಂದುದಲ್ಲ. .... ॥ ೧೦ ॥

ಶ್ಲೋ॥ ಶಕ್ಯೋವಾರಯಿತುಂಜಲೇನಹುತಭುಕ್ಛತ್ರೇಣಸೂರ್ಯಾತಪೋ
ನಾಗೇಂದ್ರೋನಿಶಿತಾಂಕುಶೇನಸಮದೋದಂಡೇನಗಾಗರ್ದಭಃ॥
ವ್ಯಾಧಿರ್ಭೇಷಜಸಂಗ್ರಹೈಶ್ಚವಿವಿಧೈರ್ಮಂತ್ರಪ್ರಯೋಗೈರ್ವಿ
ಷಂ ಸರ್ವಸ್ಯೌಷಧಮಸ್ತಿಶಾಸ್ತ್ರವಿಹಿತಂ ಮೂರ್ಖಸ್ಯನಾಸ್ತ್ಯೌ
ಷಧಂ .... .... ॥ ೧೧ ॥

ಟೀ॥ ಅಗ್ನಿಮೊದಲಾದ ಕ್ರೂರವಸ್ತುಗಳ ಶಾಂತಿಗೆ ಶಾಸ್ತ್ರಗಳಲ್ಲಿ ಸಾಧನವು

ಹೇಳಲ್ಪಟ್ಟಿರುವುದು. ಮೂರ್ಖಸಮಾಧಾನ ವಿಧಾನವು ದುರ್ಲಭವೆಂಬರ್ಥವನ್ನು ಸ್ಫುಟಮಾಡುತ್ತಾನೆ-ಹುತಭುಕ್=ಅಗ್ನಿಯು, ಜಲೇನ=ಉದಕದಿಂದ, ವಾರಯಿತುಂ=ನಿವಾರಣೆ ಮಾಡುವುದಕ್ಕೆ (ಎಂದರೆ ಶಾಂತಿಮಾಡುವುದಕ್ಕೆ,) ಶಕ್ಯಃ=ಸಾಧ್ಯವು, ಸೂರ್ಯಾತಪಃ—ಸೂರ್ಯ=ರವಿಯು, ಆತಪಃ=ಬಿಸಿಲು, ಛತ್ರೇಣ=ಕೊಡೆಯಿಂದ, ವಾರಯಿತುಂ=ನಿವಾರಣೆ ಮಾಡುವುದಕ್ಕೆ, ಶಕ್ಯಃ=ಸಾಧ್ಯವು, ಸಮದಃ=ಮದದಿಂದ ಕೂಡಿದ, ನಾಗೇಂದ್ರಃ=ಗಜರಾಜನು, ನಿಶಿತಾಂಕುಶೇನ—ನಿಶಿತ=ತೀಕ್ಷ್ಣವಾದ, ಅಂಕುಶೇನ=ಅಂಕುಶದಿಂದ, ವಾರಯಿತುಂ=ನಿವಾರಿಸುವುದಕ್ಕೆ, ಶಕ್ಯಃ=ಸಾಧ್ಯವು, ಗೌಃ=ವೃಷಭವು, ಗಾರ್ದಭಶ್ಚ=ಕತ್ತೆಯು, ದಂಡೇನ=ದೊಣ್ಣೆಯಿಂದ, ವಾರಯಿತುಂ=ನಿವಾರಣೆ ಮಾಡಲು, ಶಕ್ಯಃ=ಸಾಧ್ಯವು, ವ್ಯಾಧಿಃ=ರೋಗವು, ಭೇಷಜಸಂಗ್ರಹೈಶ್ಚ—ಭೇಷಜ=ಔಷಧಗಳು, ಸಂಗ್ರಹೈಶ್ಚ=ಮಂತ್ರ ಜಪಹೋಮ ಸುರಾರಾಧನೆಗಳು ಇವುಗಳಿಂದಲೂ, ವಾರಯಿತುಂ=ನಿವಾರಣೆ ಮಾಡುವುದಕ್ಕೆ, ಶಕ್ಯಃ=ಸಾಧ್ಯವು, ವಿಷಂ=ವಿಷವು=ವಿವಿಧೈಃ=ನಾನಾಪ್ರಕಾರವಾದ,ಮಂತ್ರೈಃ=ಪ್ರಣವಾದಿ ಮಂತ್ರಗಳಿಂದಲೂ, ಪ್ರಯೋಗೈಶ್ಚ=ಚಿಕಿತ್ಸೆಗಳಿಂದಲೂ, ವಾರಯಿತುಂ=ನಿವಾರಣೆ ಮಾಡುವುದಕ್ಕೆ, ಶಕ್ಯಃ=ಸಾಧ್ಯವು, ಸರ್ವಸ್ಯ=ಸಮಸ್ತಕ್ಕೂ, ಶಾಸ್ತ್ರವಿಹಿತಂ—ಶಾಸ್ತ್ರ=ಶಾಸ್ತ್ರಗಳಲ್ಲಿ, ವಿಹಿತಂ=ಹೇಳಲ್ಪಟ್ಟಿರುವ, ಔಷಧಂ=ಮದ್ದು, ಅಸ್ತಿ=ಉಂಟು, ಮೂರ್ಖಸ್ಯ=ಮೂಢನಿಗೆ, ಔಷಧಂ=ಔಷಧವು, ನಾಸ್ತಿ=ಇಲ್ಲವು. ... ... .... ॥೧೧॥

ತಾ॥ ಸುಡುವ ಬೆಂಕಿಯನ್ನು ನೀರುಹಾಕಿ ಆರಿಸಿ ಶಾಂತ ಮಾಡಬಹುದು. ಉರಿಯುತ್ತಿರುವ ಬಿಸಿಲನ್ನು ಕೊಡೆ ಮೊದಲಾದ ಮರೆಯನ್ನು ಮಾಡಿ ತಪ್ಪಿಸಬಹುದು. ಮತ್ತು ಮದಹತ್ತಿರುವ ಆನೆಯನ್ನು ಮೊನೆಯಾದ ಅಂಕುಶದಿಂದ ಹೊಡೆದು ನಿಲ್ಲಿಸಬಹುದು. ಅಲ್ಲದೆ ಎತ್ತನ್ನೂ ಕತ್ತೆಯನ್ನೂ ದೊಣ್ಣೆಯಿಂದ ಹೊಡೆದು ನಿಯಮಿಸಬಹುದು. ಔಷಧದಿಂದಲೂ ದೇವತಾರಾಧನೆ ಮೊದಲಾದವುಗಳಿಂದಲೂ ರೋಗವನ್ನು ಶಮನ ಮಾಡಬಹುದು. ಮಂತ್ರಗಳಿಂದಲೂ ಚಿಕಿತ್ಸೆಗಳಿಂದಲೂ ವಿಷವನ್ನಾದರೂ ಇಳಿಸಬಹುದು. ಹೀಗೆ ಪ್ರಾಣಿ ಹಿಂಸಾಕರಗಳಾದ ಈ ಮೇಲ್ಕಂಡ ಮತ್ತು ಇತರ ಕ್ರೂರವಸ್ತುಗಳಿಗೂ ಶಾಂತಿಕರಗಳಾದ ಔಷಧ, ಯುಕ್ತಿ ಮೊದಲಾದಸಾಧನಗಳು, ವೈದ್ಯ ಧರ್ಮನೀತಿ ಮೊದಲಾದ ಶಾಸ್ತ್ರಗಳಲ್ಲಿ ಹೇಳಲ್ಪಟ್ಟಿರುವವು. ಆದರೆ ಮೂರ್ಖತನದ ನಿವಾರಣೆಗೆಮಾತ್ರ ಎಲ್ಲಿಯೂ ಯಾವವಿಧವಾದ ಯುಕ್ತಿ ಮೊದಲಾದದ್ದೂ ಹೇಳಲ್ಪಡಲಿಲ್ಲವು. .... ॥ ೧೧ ॥

## ವಿದ್ವತ್ಪದ್ಧತಿ ಪ್ರಾರಂಭವು.

ಶ್ಲೋ॥ ಶಾಸ್ತ್ರೋಪಸ್ಕೃತಶಬ್ದಸುಂದರಗಿರಃ ಶಿಷ್ಯಪ್ರದೇಯಾಗಮಾ
ವಿಖ್ಯಾತಾಃಕವಯೋವಸಂತಿವಿಷಯೇ ಯಸ್ಯಪ್ರಭೋರ್ನಿರ್
ಧನಾಃ ॥ ತಜ್ಜಾಡ್ಯಂವಸುಧಾಧಿಪಸ್ಯಸುಧಿಯಸ್ತ್ವರ್ಥಂವಿ
ನಾಪೀಶ್ವರಾಃಕುತ್ಸ್ಯಾಸ್ಸ್ಯುಃಕುಪರೀಕ್ಷಕೈರ್ನಮಣಯೋ
ಯೈರರ್ಘತಃಪಾತಿತಾಃ .... .... ॥ ೧೨ ॥

ಟೀ॥ ತರುವಾಯ ಮೂರ್ಖಪದ್ಧತಿಗೆ ಪ್ರತಿಯಾಗಿರುವ ವಿದ್ವತ್ಪದ್ಧತಿಯನ್ನು ಹೇಳುತ್ತಾನೆ—ಅಥವಾ ಪೂರ್ವದಲ್ಲಿ ವಿವೇಕವು ಅತ್ಯಾವಶ್ಯಕವೆಂದು ಹೇಳಲ್ಪಟ್ಟಿತ್ತಾದ ಕಾರಣ, ವಿವೇಕಕ್ಕೆ ವಿದ್ಯೆಯು ಸಾಧಕವಾದುದರಿಂದ ಆ ವಿದ್ಯೆಯು ವಿದ್ವದಧೀನವಾದುದರಿಂದಲೂ, ವಿದ್ವತ್ಪದ್ಧತಿಯನ್ನು ಹೇಳುತ್ತಾನೆ—ಶಾಸ್ತ್ರೋಪಸ್ಕೃತಶಬ್ದಸುಂದರಗಿರಃ—ಶಾಸ್ತ್ರ=ನ್ಯಾಯಾದಿ ಶಾಸ್ತ್ರಗಳಿಂದ, ಉಪಸ್ಕೃತ=ಅಲಂಕರಿಸಲ್ಪಟ್ಟ, ಶಬ್ದ=ವ್ಯಾಕರಣ ಶಾಸ್ತ್ರದಿಂದ, ಸುಂದರ=ರಮಣೀಯಗಳಾದ, ಗಿರಃ=ವಾಕ್ಯಗಳುಳ್ಳ, ಶಿಷ್ಯಪ್ರದೇಯಾಗಮಾಃ—ಶಿಷ್ಯ=ವಿದ್ಯಾರ್ಥಿಗಳಿಗೆ ಪ್ರದೇಯ=ಕೊಡತಕ್ಕ, ಆಗಮಾಃ=ಶಾಸ್ತ್ರಗಳುಳ್ಳ, ವಿಖ್ಯಾತಾಃ=ಪ್ರಸಿದ್ಧರಾದ, ಕವಯಃ=ವಿದ್ವಾಂಸರು, ನಿರ್ಧನಾಃ=ಧನಹೀನರಾಗಿ, ಯಸ್ಯ=ಯಾವ, ಪ್ರಭೋಃ=ಅರಸಿನ ವಿಷಯೇ=ದೇಶದಲ್ಲಿ, (ಅಥವಾ ಸಮೀಪದಲ್ಲಿ) ವಸಂತಿ=ಇರುವರೋ, ತತ್=ಆ ದರಿದ್ರರಾಗಿರುವಿಕೆಯು, ವಸುಧಾಧಿಪಸ್ಯ=ಧೊರೆಯ, ಜಾಡ್ಯಂ=ಹೀನತೆಯು, ಸುಧಿಯಸ್ತು=ವಿದ್ವಾಂಸರಾದರೋ, ಅರ್ಥಂವಿನಾಪಿ=ದ್ರವ್ಯವಿಲ್ಲದಿದ್ದರೂ, ಈಶ್ವರಾಃ=ಐಶ್ವರ್ಯವಂತರು, ತು=ಆದರೆ, ಯೈಃ=ಯಾವ, ಕುಪರೀಕ್ಷಕೈಃ=ಕುತ್ಸಿತ ಪರೀಕ್ಷಕರಿಂದ, ಮಣಯಃ=ರತ್ನಗಳು, ಅರ್ಘತಃ=ಬೆಲೆಯುದೆಸೆಯಿಂದ, ಪಾತಿತಾಃ=ಹೀನಮಾಡಲ್ಪಟ್ಟವುಗಳಾಗಿ, ಕುತ್ಸ್ಯಾಃ=ಅಲ್ಪಬೆಲೆಗೆ ಯೋಗ್ಯಗಳು, ನಸ್ಯುಃ=ಆಗುವದಿಲ್ಲವು ॥ ಶಾರ್ದೂಲವಿಕ್ರೀಡಿತ ವೃತ್ತವು. ... ॥೧೨

ತಾ॥ ತರ್ಕ, ವ್ಯಾಕರಣ, ಮೀಮಾಂಸಾದಿ ಶಾಸ್ತ್ರಾಧ್ಯಯನವನ್ನು ಮಾಡಿ ಸಮರ್ಥರಾಗಿ, ಸರ್ವದಾ ವಿದ್ಯಾರ್ಥಿಗಳಿಗೆ ವಿದ್ಯಾಪ್ರದಾನವನ್ನು ಮಾಡುತ್ತಾ ಪ್ರಸಿದ್ಧರಾಗಿರುವ ಪಂಡಿತರು ಯಾವದೊರೆಯ ಬಳಿಯಲ್ಲಿ ದರಿದ್ರರಾಗಿರುವರೋ ಆ ಧೊರೆಗೇ ಇಂಥಾ ಪಂಡಿತರನ್ನು ಹೀನಸ್ಥಿತಿಯಲ್ಲಿಟ್ಟಿರುವನೆಂಬ ಅಪಕೀರ್ತಿಯುಂಟಾಗುವದು. ಆ ವಿದ್ವಾಂಸರು ಮಾತ್ರ ಪ್ರತ್ಯಕ್ಷವಾದ ದ್ರವ್ಯವಿಲ್ಲದಿದ್ದರೂ ಅಮೋಘವಾದ ವಿದ್ಯಾಧನವನ್ನು ಸಂಪಾದಿಸಿರುವದರಿಂದ ಸರ್ವದಾ ಐಶ್ವರ್ಯವಂತರೇ ಆಗಿರುವರು. ಅವರ ಉನ್ನತಸ್ಥಿತಿಗೇನೂ ಕಡಿಮೆಯಾಗುವದಿಲ್ಲವು. ಹೇಗೆಂದರೆ, ಅಮೂಲ್ಯವಾ

ದ ರತ್ನಗಳನ್ನು ರತ್ನಪರೀಕ್ಷಾ ಶಾಸ್ತ್ರದ ತಿಳುವಳಿಕೆ ಇಲ್ಲದ ಅಯೋಗ್ಯನ ಕೈಗೆಕೊಟ್ಟು ಅವನು ಅಜ್ಞತೆಯಿಂದ ಅದಕ್ಕೆ ಅಲ್ಪ ಬೆಲೆಯನ್ನು ಕಟ್ಟಿದಲು, ಅಷ್ಟುಮಾತ್ರದಿಂದಲೇ ಆ ರತ್ನಗಳು ಹೀನ ಬೆಲೆಯುಳ್ಳವುಗಳಾಗುವವೆ ? ಸರ್ವಥಾ ಆಗಲಾರವು. ಆದ್ದರಿಂದ ವಿದ್ಯಾವಂತರನ್ನು ಪ್ರಭುಗಳು ಗೌರವ ಸ್ಥಿತಿಯಲ್ಲಿಟ್ಟಿರಬೇಕು. .... .... ॥ ೧೨ ॥

ಶ್ಲೋ॥ ಹರ್ತುರ್ಯಾತಿನಗೋಚರಂ ಕಿಮಪಿಶಂ ಪುಷ್ಣಾತಿಯತ್ಸರ್ವದಾಪ್ಯ
ರ್ಥಿಭ್ಯಃಪ್ರತಿಪಾದ್ಯಮಾನಮನಿಶಂಪ್ರಾಪ್ನೋತಿವೃದ್ಧಿಂಪರಾಂ ॥
ಕಲ್ಪಾಂತೇಷ್ವಪಿನಪ್ರಯಾತಿನಿಧನಂವಿದ್ಯಾಖ್ಯಮಂತರ್ಧನಂಯೇ
ಷಾಂತಾನ್ಪ್ರತಿಮಾನಮುಜ್ಝತನೃಪಾಃಕಸ್ತೈಸ್ಸಹಸ್ಪರ್ಧತೆ ॥

ಟೀ॥ ಪ್ರಸಿದ್ಧವಾಗಿರುವ ಧನಕ್ಕಿಂತಲೂ ವಿದ್ಯಾಧನದಲ್ಲಿ ವೈಲಕ್ಷ್ಯವನ್ನು ತೋರಿಸುವದರಮೂಲಕ ವಿದ್ವಾಂಸರಿಗೆ ಮಹತ್ವವನ್ನು ತೋರಿಸುವವನಾಗಿ ಅವರಲ್ಲಿ ಗೌರವದಿಂದಿರುವದಕ್ಕಾಗಿ ಅರಸರನ್ನು ಸಂಬೋಧಿಸಿಹೇಳುತ್ತಾನೆ—ಯತ್= ಯಾವ, ವಿದ್ಯಾಖ್ಯಂ=ವಿದ್ಯವೆಂಬ ಹೆಸರುಳ್ಳ, ಧನಂ=ದ್ರವ್ಯವು, ಹರ್ತುಃ=ಕಳ್ಳನಿಗೆ, ಗೋಚರಂ=ಕಣ್ಣಿಗೆ ಕಾಣಿಸುವಿಕೆಯನ್ನು, ನಯಾತಿ=ಹೊಂದುವದಿಲ್ಲವೋ, ಸರ್ವದಾ=ಯಾವಾಗಲೂ, ಕಿಮಪಿ=ಹೇಳಲಶಕ್ಯವಾದ, ಶಂ=ಸುಖವನ್ನು, ಪುಷ್ಣಾತಿ=ವೃದ್ಧಿ ಪಡಿಸುವದೊ, ಅನಿಶಂ=ನಿರಂತರವೂ, ಅರ್ಥಿಭ್ಯಃ=ಯಾಚಕರಿಗೆ (ವಿದ್ಯಾರ್ಥಿಗಳಿಗೆ) ಪ್ರತಿಪಾದ್ಯಮಾನಮಪಿ=ಕೊಡಲ್ಪಡುತ್ತಿದ್ದಾಗ್ಯೂ, (ಹೇಳಲ್ಪಡುತ್ತಿದ್ದಾಗ್ಯೂ) ಪರಾಂ=ವಿಶೇಷವಾದ, ವೃದ್ಧಿಂ=ಅಭಿವೃದ್ಧಿಯನ್ನು, ಪ್ರಾಪ್ನೋತಿ=ಹೊಂದುತ್ತದೆಯೊ, ಕಲ್ಪಾಂತೇಷ್ವಪಿ=ಪ್ರಳಯ ಕಾಲಗಳಲ್ಲಿಯೂ, ನಿಧನಂ=ನಾಶವನ್ನು, ನಪ್ರಯಾತಿ=ಹೊಂದುವದಿಲ್ಲವೋ, ತತ್=ಆ, ವಿದ್ಯಾಖ್ಯಂ=ವಿದ್ಯೆ ಎಂಬ ನಾಮವುಳ್ಳ, ಅಂತರ್ಧನಂ=ರಹಸ್ಯವಾದ ಧನವು,ಯೇಷಾಂ=ಯಾವ ಜನರಿಗೆ,ಅಸ್ತಿ= ಉಂಟೋ, ತಾನ್=ಆ ವಿದ್ಯಾಧನರಾದ ಪಂಡಿತರನ್ನು ಕುರಿತು, ಹೇನೃಪಾಃ=ಎಲೈ ದೊರೆಗಳಿರಾ, ಮಾನಂ=ಕೋಪವನ್ನು, (ಅಥವಾ ಅಹಂಕಾರವನ್ನು,) ಉಜ್ಝತ= ಬಿಟ್ಟುಬಿಡಿ. ತೈಸ್ಸಹ=ಆ ವಿದ್ವಾಂಸರೊಡನೆ, ಕಃ=ಯಾವ ಮನುಷ್ಯನು, ಸ್ಪರ್ಧತೆ=ವಿವಾದ ಮಾಡುತ್ತಾನೆ? ವ್ಯತಿರೇಕಾಲಂಕಾರವು. ... ॥೧೩॥

ತಾ॥ ವಿದ್ಯವೆಂಬ ಧನವು ಕಣ್ಣಿಗೆ ಕಾಣಿಸದಿರುವದರಿಂದ ಕಳ್ಳರು ಕದಿಯಲಾರರು. ಮತ್ತು ಆ ವಿದ್ಯಾಧನವು ನಾನಾವಿಧವಾದ ಶಾಸ್ತ್ರಾರ್ಥ ಪರಿಜ್ಞಾನದ ಮೂಲಕ ಯಾವಾಗಲೂ ವಿಶೇಷವಾದ ಸುಖವನ್ನುಂಟು

ಮಾಡುವುದು; ಇದೂ ಅಲ್ಲದೆ ವಿದ್ಯಾರ್ಥಿಗಳಿಗೆ ಎಷ್ಟು ಹೇಳಿಕೊಡುತ್ತಿದ್ದಾಗ್ಯೂ ವೃದ್ಧಿಯಾಗುತ್ತಿರುವುದೇ ಅಲ್ಲದೆ ಸ್ವಲ್ಪವೂ ಕಡಿಮೆಯಾಗುವದಿಲ್ಲ. ಪ್ರಳಯ ಸಮಯದಲ್ಲಿಯೂ ನಾಶವಾಗುವದಿಲ್ಲ. ಆದುದರಿಂದ ಈ ಅಮೂಲ್ಯವಾದ ಧನವನ್ನು ಯಾರು ಸಂಪಾದಿಸಿರುವರೋ ಅಂಥವರ ವಿಷಯದಲ್ಲಿ, ಎಲೈ ದೊರೆಗಳಿರಾ! ಅಹಂಕಾರ ಪಡಬೇಡಿ, ಮತ್ತು ಕೋಪ ಮಾಡಬೇಡಿ, ಯಾವನಾದರೂ ಆ ಮಹನೀಯರೊಡನೆ ವಿವಾದ ಮಾಡಿಯಾನೆ? ಮಾಡಲಾರನು. ಆದುದರಿಂದ ಅವರನ್ನು ಮಾನನೀಯರನ್ನಾಗಿ ಭಾವಿಸಿರೆಂದು ಭಾವವು. .... .... ||೧೫||

ಶ್ಲೋ॥ ಅಧಿಗತಪರಮಾರ್ಥಾನ್ಪಂಡಿತಾನ್ಮಾವಮಂಸ್ಥಾಸ್ತೃಣಮಿವಲಘು
ಲಕ್ಷ್ಮೀರ್ನೈವತಾನ್ಸಂರುಣದ್ಧಿ ॥ ಅಭಿನವಮದರೇಖಾಶ್ಯಾಮ
ಗಂಡಸ್ಥಲಾನಾಂನಭವತಿಬಿಸತಂತುರ್ವಾರಣಂವಾರಣಾನಾಂ ॥

ಟೀ॥ ಸಂಪತ್ತು ವಿದ್ವಾಂಸರನ್ನು ತಡೆಯಲಾರದು. ಆದುದರಿಂದ ವಿದ್ವಜ್ಜನರಲ್ಲಿ ಬಹುಮಾನಾಚರಣತತ್ಪರರಾಗಿರಬೇಕೆಂದು ಪುನಃ ಅರಸರನ್ನು ಸಂಬೋಧಿಸುತ್ತಾನೆ—ಹೇನೃಪ=ಓ ಧೊರೆಯೆ, ಅಧಿಗತಪರಮಾರ್ಥಾನ್—ಅಧಿಗತ=ತಿಳಿಯಲ್ಪಟ್ಟ. ಪರಮಾರ್ಥ—ತತ್ವಾರ್ಥವುಳ್ಳ, (ಅಥವಾ ಹೊಂದಲ್ಪಟ್ಟ ಪುರುಷಾರ್ಥವುಳ್ಳ) ಪಂಡಿತಾನ್=ವಿದ್ವಜ್ಜನರನ್ನು, ಮಾವಮಂಸ್ಥಾಃ=ಅಪಮಾನ ಮಾಡಬೇಡ, ತೃಣಮಿವ=ಹುಲ್ಲಿನಂತೆ, ಲಘು=ತುಚ್ಛವಾದ, ಲಕ್ಷ್ಮೀಃ=ಸಂಪತ್ತು, ತಾನ್=ಆ ಪಂಡಿತರನ್ನು, ನೈವಸಂರುಣದ್ಧಿ=ತಡಿಯಲಾರದು. ಅಭಿನವಮದರೇಖಾಶ್ಯಾಮಗಂಡಸ್ಥಲಾನಾಂ—ಅಭಿನವ=ಹೊಸದಾದ, ಮದ=ಮದೋದಕದ, ರೇಖಾ=ಗೆರೆಗಳಿಂದ, ಶ್ಯಾಮ=ಕಪ್ಪಾದ, ಗಂಡಸ್ಥಲಾನಾಂ=ಕಪೋಲ ಪ್ರದೇಶವುಳ್ಳ, ವಾರಣಾನಾಂ=ಮದಗಜಗಳಿಗೆ, ಬಿಸತಂತುಃ—ಬಿಸ=ತಾವರೆಯ ದಂಟಿನ, ತಂತುಃ=ದಾರವು, ವಾರಣಂ=ತಡೆಯು, ನಭವತಿ=ಆಗುವದಿಲ್ಲ. ದೃಷ್ಟಾಂತಾಲಂಕಾರವು, ಮಾಲಿನೀ ವೃತ್ತವು. ಶ್ಲೋ॥ ನನಮಯಯಯುತೇಯಂ ಮಾಲಿನೀಭೋಗಿಲೋಕೈಃ ॥ ನ-ನ-ಮ-ಯ-ಯ ಈ ಗಣಗಳು ೮ ಮತ್ತು ೭ ರಲ್ಲಿ ಯತಿಯು ಇರೋಣವು ಲಕ್ಷಣವೆಂದುತಿಳಿಯಬೇಕು. ... ... ... ... ||೧೬

ತಾ॥ ಎಲೈ ದೊರೆಯೇ! ಕೇಳು_ಸಕಲ ಶಾಸ್ತ್ರಾರ್ಥಗಳ ಸಾರವನ್ನು ತಿಳಿದಿರುವ ವಿದ್ವಜ್ಜನರನ್ನು ಎಂದಿಗೂ ಅಪಮಾನ ಮಾಡಬೇಡ. ನಿನ್ನ ಅಸ್ವಲ್ಪವಾದ ಸಂಪತ್ತು ಅವರನ್ನೆಂದಿಗೂ ತಡೆಯಲಾರದು. ಹೇಗೆಂದರೆ, ಮದಹತ್ತಿಮದೋದಕದ ಗೆರೆಗಳಿಂದ ಕಪ್ಪಾಗಿರುವ ಕಪಾಳ

ಗಳುಳ್ಳ ಮದದಾನಗಳನ್ನು ತಾವರೆಯ ದಂಟುಗಳಲ್ಲಿರುವ ಸಣ್ಣದಾರಗಳಿಂದ ತಡೆದು ಕಟ್ಟುವದಕ್ಕಾಗುವದೇ ? ಇಲ್ಲವು. ಆದಕಾರಣ ಪಂಡಿತರನ್ನು ಗೌರವಿಸುತ್ತಿರುವದು ಶ್ರೇಯಸ್ಕರವೆಂದರಿವುದು. .... ॥೧೪॥

ಶ್ಲೋ॥ ಅಂಭೋಜಿನೀವನವಿಹಾರವಿಲಾಸಮೇವಹಂಸಸ್ಯಹಂತಿನಿತರಾಂ
ಕುಪಿತೋವಿಧಾತಾ ॥ ನತ್ವಸ್ಯದುಗ್ಧಜಲಭೇದವಿಧೌಪ್ರಸಿದ್ಧಾಂ
ವೈದಗ್ಧ್ಯಕೀರ್ತಿಮಪಹರ್ತುಮಸೌಸಮರ್ಥಃ ॥೧೫॥

ಟೀ॥ ಸೃಷ್ಟಿಕರ್ತನಾದ ಬ್ರಹ್ಮನೂ ಪಾಂಡಿತ್ಯವನ್ನು ಅಪಹರಿಸಲಾರನೆಂಬರ್ಥದಲ್ಲಿ ದೃಷ್ಟಾಂತ ಸಹಿತವಾಗಿ ಹೇಳುತ್ತಾನೆ—ವಿಧಾತಾ=ಬ್ರಹ್ಮನು, ಕುಪಿತಃ=ಕೋಪಗೊಂಡವನಾಗಿ, ಹಂಸಸ್ಯ=ತನ್ನ ವಾಹನವಾದ ಹಂಸಪಕ್ಷಿಗೆ, ಅಂಭೋಜಿನೀವನವಿಹಾರವಿಲಾಸಮೇವ—ಅಂಭೋಜಿನೀ=ಕಮಲ ಲತೆಗಳ, ವನ=ತೋಟದಲ್ಲಿ, ವಿಹಾರ=ಕ್ರೀಡೆಯೆಂಬ, ವಿಲಾಸಮೇವ=ಆಟವನ್ನು ಮಾತ್ರವೇ, ಹಂತಿ=ನಾಶಮಾಡುತ್ತಾನೆ, ಕಿಂತು=ಆದರೆ, ಅಸೌ=ಈ ಬ್ರಹ್ಮನು, ಹಂಸಸ್ಯ=ಹಂಸಪಕ್ಷಿಯು, ದುಗ್ಧಜಲಭೇದವಿಧೌ—ದುಗ್ಧ=ಹಾಲು, ಜಲ=ನೀರು ಇವುಗಳ, ಭೇದ=ಬೇರ್ಪಡಿಸುವಿಕೆಯೆಂಬ, ವಿಧೌ=ಕಾರ್ಯದಲ್ಲಿ, ಪ್ರಸಿದ್ಧಾಂ=ಪ್ರಖ್ಯಾತವಾದ, ವೈದಗ್ಧ್ಯಕೀರ್ತಿಂ-ವೈದಗ್ಧ್ಯ=ಚಾತುರ್ಯದಿಂದುಂಟಾದ, ಕೀರ್ತಿಂ=ಯಶಸ್ಸನ್ನು, ಅಪಹರ್ತುಂ=ಅಪಹರಿಸುವದಕ್ಕೆ, ನಸಮರ್ಥಃ=ಶಕ್ತನಾಗುವದಿಲ್ಲ. ಅಪ್ರಸ್ತುತ ಪ್ರಶಂಸಾಲಂಕಾರವು, ವಸಂತತಿಲಕಾವೃತ್ತವು, ತ-ಭ-ಜ-ಜ- ಈ ಗಣಗಳು ೨ ಗುರುಗಳು ಇರುವಿಕೆಯು ಲಕ್ಷಣವು. ...... ... ... ॥೧೫॥

ತಾ॥ ಬ್ರಹ್ಮನು ತನ್ನ ವಾಹನವಾಗಿರುವ ಹಂಸಪಕ್ಷಿಯ ವಿಷಯದಲ್ಲಿ ಕೋಪಗೊಂಡಾಗ್ಯೂ, ಆ ಹಂಸಪಕ್ಷಿಯು ಆಹಾರಾರ್ಥವಾಗಿ ಸಂಚರಿಸುವ ತಾವರೆಯಬಳ್ಳಿಗಳ ತೋಟವನ್ನು ಹಾಳುಮಾಡಿ ಅಲ್ಲಿಸಂಚರಿಸಕೂಡದೆಂದಿಷ್ಟುಮಾತ್ರ ಮಾಡುವನು. ಅಲ್ಲದೆ "ಹಾಲು ನೀರು ಬೆರಸಿಟ್ಟರೆ ನೀರನ್ನು ಬೇರ್ಪಡಿಸಿ ಚಾತುರ್ಯದಿಂದ ಹಾಲನ್ನು ಮಾತ್ರವೇ ಹಂಸವು ಪಾನಮಾಡುವದು" ಎಂದು ಆಹಂಸಪಕ್ಷಿಗೆ ವುಂಟಾಗಿರುವ ಲೋಕಪ್ರಸಿದ್ಧವಾದ ಕೀರ್ತಿಯನ್ನು ಎಂದಿಗೂ ಅಪಹರಿಸಲಾರನು. ಹೀಗೆಯೇ ರಾಜನು ಒಂದುವೇಳೆ ಕೋಪಗೊಂಡರೂ ವಿದ್ವಾಂಸರನ್ನು ತನ್ನ ದೇಶದಲ್ಲಿರಕೂಡದೆಂಬ ನಿರ್ಬಂಧ ಮಾತ್ರ ಮಾಡುವನಲ್ಲದೆ ಅವರಲ್ಲಿರುವ ಅಸದೃಶವಾದ ಪಾಂಡಿತ್ಯವನ್ನು ಮಾತ್ರ ಅಪಹರಿಸಲಾರನು. ಆದಕಾರಣ ಪಂಡಿತರ ವಿಷಯದಲ್ಲಿ ವಿಧೇಯತೆಯಿಂದಿರಬೇಕೆಂದು ಭಾವವು. .... ॥೧೫॥

ಶ್ಲೋ॥ ಕೇಯೂರಾಣಿನಭೂಷಯಂತಿಪುರುಷಂಹಾರಾನಚಂದ್ರೋಜ್ವಲಾಃ
ನಸ್ನಾನಂನವಿಲೇಪನಂನಕುಸುಮಂನಾಲಂಕೃತಾಮೂರ್ಧಜಾಃ॥
ವಾಣ್ಯೇಕಾಸಮಲಂಕರೋತಿಪುರುಷಂಯಾಸಂಸ್ಕೃತಾಧಾರ್ಯತೇ
ಕ್ಷೀಯಂತೇಖಿಲಭೂಷಣಾನಿಸತತಂವಾಗ್ಭೂಷಣಂಭೂಷಣಂ॥

ಟೀ॥ ಈ ಎರಡು ಶ್ಲೋಕಗಳಿಂದ ವಿದ್ವಜ್ಜನರಿಗೆ ವಿದ್ಯೆಯೇ ಅಲಂಕಾರವೆಂದು ಹೇಳುತ್ತಾನೆ—ಕೇಯೂರಾಣಿ=ಭುಜಕೀರ್ತಿಗಳು, ಪುರುಷಂ=ಮನುಷ್ಯನನ್ನು ನಭೂಷಯಂತಿ=ಅಲಂಕರಿಸುವದಿಲ್ಲ. ಚಂದ್ರೋಜ್ವಲಾಃ—ಚಂದ್ರ=ಚಂದ್ರನಂತೆ, ಉಜ್ವಲಾಃ=ಪ್ರಕಾಶಮಾನಗಳಾದ, ಹಾರಾಃ=ಮುತ್ತಿನ ಹಾರಗಳು, ನಭೂಷಯಂತಿ=ಅಲಂಕರಿಸವು. ಸ್ನಾನಂ=ಅಭ್ಯಂಗ ಮೊದಲಾದ ಸ್ನಾನವು, ನಭೂಷ, ಯತಿ=ಅಲಂಕರಿಸುವದಿಲ್ಲ. ವಿಲೇಪನಂ=ಪರಿಮಳ ದ್ರವ್ಯವು, ನಭೂಷಯತಿ=ಅಲಂಕರಿಸುವದಿಲ್ಲ. ಕುಸುಮಂ=ಹೂವು, ನಭೂಷಯತಿ=ಅಲಂಕರಿಸುವದಿಲ್ಲ, ಅಲಂಕೃತಾಃ=ಶೃಂಗರಿಸಲ್ಪಟ್ಟ, ಮೂರ್ಧಜಾಃ=ಕೂದಲುಗಳು. ನಭೂಷಯಂತಿ=ಅಲಂಕರಿಸುವದಿಲ್ಲ, ಯಾ=ಯಾವ, ಸಂಸ್ಕೃತಾ=ತರ್ಕ ವ್ಯಾಕರಣಾದಿ ಶಾಸ್ತ್ರಗಳಿಂದ ಶುದ್ಧವಾದ, ವಾಕ್=ವಾಕ್ಯ, ಧಾರ್ಯತೇ=ಧರಿಸಲ್ಪಡುವದೋ, ಸಾ=ಆ, ಏಕಾ=ಒಂದಾದ, ವಾಣೀ=ವಾಕ್ಯೇ, ಪುರುಷಂ=ಮನುಷ್ಯನನ್ನು, ಸಮಲಂಕರೋತಿ=ಚನ್ನಾಗಿ ಅಲಂಕರಿಸುವುದು, ಅಖಿಲಭೂಷಣಾನಿ—ಅಖಿಲ=ಈ ಮೇಲೆ ಹೇಳಿದ ಎಲ್ಲಾ, ಭೂಷಣಾನಿ=ಒಡವೆಗಳೂ. ಕ್ಷೀಯಂತೇ=ನಾಶವಾಗುವವು. ಅತಃ=ಆದಕಾರಣ, ವಾಗ್ಭೂಷಣಂ—ವಾಕ್=ಸಂಸ್ಕೃತ ವಾಕ್ಯವೆಂಬ, ಭೂಷಣಂ=ಒಡವೆಯೇ, ಸತತಂ=ಯಾವಾಗಲೂ, ಭೂಷಣಂ=ಅಲಂಕಾರವು. ವ್ಯತಿರೇಕಾಲಂಕಾರವು. ಶಾರ್ದೂಲವಿಕ್ರೀಡಿತ ವೃತ್ತವು. ... ... ॥ ೧೬ ॥

ತಾ॥ ರತ್ನಖಚಿತಗಳಾಗಿ ದಿವ್ಯವಾಗಿರುವ ಭುಜಕೀರ್ತಿಗಳೆಂಬ ಒಡವೆಗಳೂ ಪುರುಷನನ್ನು ಅಲಂಕರಿಸವು. ಮತ್ತು ಪೂರ್ಣವಾ ಚಂದ್ರನಂತೆ ಹೊಳೆವ ಮುಕ್ತಾಹಾರಗಳು ಭೂಷಿಸುವದಿಲ್ಲ. ಮಲ್ಲಿಗೆ, ಸಂಪಿಗೆ ಮೊದಲಾದ ಎಣ್ಣೆಯನ್ನೊತ್ತಿಕೊಂಡು ಮಾಡಿಕೊಳ್ಳುವ ಅಭ್ಯಂಗ ಸ್ನಾನವೂ ಅಲಂಕರಿಸುವದಿಲ್ಲ. ಇನ್ನೂ ನಾನಾ ವಿಧವಾದ ಘನಸಾರ, ಕಸ್ತೂರಿ, ಗಂಧಸಾರ ಮೊದಲಾದ ಪರಿಮಳ ಲೇಪನವೂ ಭೂಷಣವಾಗುವದಿಲ್ಲ. ಇದೂ ಅಲ್ಲದೆ, ಜಾಜಿ ಮಲ್ಲಿಗೆ ಮೊದಲಾದ ಹೂವುಗಳು,ಉದ್ದವಾಗಿ ಬೆಳಸಿ ಸೊಗಸಾಗಿ ಗಂಟುಹಾಕಿರುವ ಕೂದಲುಗಳೂ, ಅಲಂಕಾರ ಮಾಡುವದಿಲ್ಲ. ಮತ್ತೇನೆಂದರೆ-ನ್ಯಾಯ ವ್ಯಾಕರಣಾದಿ ಶಾಸ್ತ್ರಗಳಿಂದ ಪರಿ

ಶುದ್ಧವಾಗಿರುವ ಸಂಸ್ಕೃತ ವಾಣಿಯೊಂದೇ ನಿರಂತರವೂ ಪುರುಷನನ್ನು ಅಲಂಕರಿಸುವುದು. ಏಕೆಂದರೆ-ಈ ಸಂಸ್ಕೃತ ವಾಣಿಯೊಂದನ್ನು ಬಿಟ್ಟು ಇತರ ಭೂಷಗಳೆಲ್ಲವೂ ಸ್ವಲ್ಪ ಕಾಲದಲ್ಲಿಯೇ ನಾಶವನ್ನು ಪಡೆಯುವವು, ಆದಕಾರಣ ನಿತ್ಯಶುದ್ಧವಾದ ವಾಣಿಯೇ ಭೂಷಣವೆಂದು ಭಾವವು ||೧೭||

ಶ್ಲೋ|| ವಿದ್ಯಾನಾಮನರಸ್ಯರೂಪಮಧಿಕಂಪ್ರಚ್ಛನ್ನಗುಪ್ತಂಧನಂವಿದ್ಯಾ
ಭೋಗಕರೀಯಶಸ್ಸುಖಕರೀವಿದ್ಯಾಗುರೂಣಾಂಗುರುಃ || ವಿದ್ಯಾ
ಬಂಧುಜನೋವಿದೇಶಗಮನೇ ವಿದ್ಯಾಪರಾದೇವತಾವಿದ್ಯಾರಾಜಸು
ಪೂಜ್ಯತೇನಹಿಧನಂವಿದ್ಯಾವಿಹೀನಃಪಶುಃ ||೧೮||

ಟೀ|| ವಿದ್ಯಾನಾಮ=ವಿದ್ಯವೇ, ನರಸ್ಯ=ಮನುಷ್ಯನಿಗೆ, ಅಧಿಕಂ=ವಿಶೇಷವಾದ, ರೂಪಂ=ಆಕಾರವು, ಪ್ರಚ್ಛನ್ನಗುಪ್ತಂ—ಪ್ರಚ್ಛನ್ನ=ರಹಸ್ಯವಾಗಿ, ಗುಪ್ತಂ=ರಕ್ಷಿಸಲ್ಪಟ್ಟ, ಧನಂ=ದ್ರವ್ಯವು, ವಿದ್ಯಾ=ವಿದ್ಯವು, ಭೋಗಕರೀ—ಭೋಗ=ಹೂವು ಗಂಧ ಮೊದಲಾದ ಸುಖ ಸಾಧನಗಳನ್ನು, ಕರೀ=ಉಂಟುಮಾಡತಕ್ಕದ್ದು, ಯಶಸ್ಸುಖಕರೀ—ಯಶಃ=ಕೀರ್ತಿಯು, ಸುಖ=ಇಂದ್ರಿಯತೃಪ್ತಿಯು ಇವುಗಳನ್ನು ಕರೀ=ಉಂಟುಮಾಡುವದು, ವಿದ್ಯಾ=ವಿದ್ಯೆಯು, ಗುರೂಣಾಮಪಿ=ಉಪದೇಶ ಮಾಡತಕ್ಕವರಿಗೂ, ಗುರುಃ=ಉಪದೇಶಮಾಡತಕ್ಕದ್ದು, ವಿದ್ಯಾ=ವಿದ್ಯವು, ವಿದೇಶಗಮನೇ—ವಿದೇಶ=ಪರದೇಶವನ್ನು ಕುರಿತು, ಗಮನೇ=ಹೋದಸಮಯದಲ್ಲಿ, ಬಂಧುಜನಃ=ಮಿತ್ರಜನವು. ವಿದ್ಯಾ=ವಿದ್ಯವೇ, ಪರಾ=ಪರಮಾತ್ಮಸ್ವರೂಪವಾದ ದೇವತಾ=ದೇವರು, ವಿದ್ಯಾ=ವಿದ್ಯವು, ರಾಜಸು=ಭೂಪಾಲರಲ್ಲಿ, ಪೂಜ್ಯತೇ=ಪೂಜಿಸಲ್ಪಡುವದು, ಧನಂ=ದ್ರವ್ಯವು, ನಹಿಪೂಜ್ಯತೇ=ಪೂಜಿಸಲ್ಪಡುವದಿಲ್ಲ. ತತ್=ಆದಕಾರಣ. ವಿದ್ಯಾವಿಹೀನಃ—ವಿದ್ಯಾ=ವಿದ್ಯದಿಂದ, ವಿಹೀನಃ=ಶೂನ್ಯನಾದವನು, ಪಶುಃ=ಚತುಷ್ಪಾದ ಜಂತುಸಮಾನನು. ನಿರವಯುವಮಾಲಾ ರೂಪಕಾಲಂಕಾರವು. ... ... ... ||೧೮||

ತಾ|| ಲೋಕದಲ್ಲಿ ಮನುಷ್ಯನಿಗೆ ವಿದ್ಯೆಯೇ ಅಮೋಘವಾದ ಥಾಳಿಥಳ್ಯವನ್ನುಂಟುಮಾಡುವ ಆಕಾರವು, ಮತ್ತು ಆ ವಿದ್ಯೆಯೇ ಗುಪ್ತವಾಗಿ ಪಾಲಿಸಲ್ಪಟ್ಟ ಧನವು, ನಾನಾ ಭೋಗಗಳನ್ನು ಸಂಪಾದಿಸಿಕೊಡುವುದಲ್ಲದೆ ಸರ್ವೋತ್ತಮವಾದ ಸುಖವನ್ನೂ ಲೋಕಪ್ರಶಸ್ತವಾದ ಕೀರ್ತಿಯನ್ನೂ ಉಂಟುಮಾಡತಕ್ಕದ್ದು. ಇವಲ್ಲದೆ ಗುರುಗಳಿಗೂ ಆಚಾರ್ಯ ಸ್ವರೂಪವಾಗಿರುವುದು. ಇದು ದೇಶಾಂತರಕ್ಕೆ ಹೋದ ಸಮಯದಲ್ಲಿ ಬಂಧು ಜನಗಳಂತೆ ಉಪಚರಿಸುವದು. ಆ ವಿದ್ಯವೇ ಪರಮಾತ್ಮಸ್ವರೂಪ

ವಾದ ದೇವತೆಯು, ಅಂಥಾ ವಿದ್ಯವನ್ನೇ ರಾಜಾಧಿರಾಜರೂ ಶ್ಲಾಘಿಸುವರು. ದ್ರವ್ಯವನ್ನು ಇಷ್ಟವುಟ್ಟಿಗೆ ಯಾರೂ ಶ್ಲಾಘಿಸರು. ಆದುದರಿಂದಲೇ ಇಂಥಾ ಅಸದೃಶವಾದ ವಿದ್ಯವನ್ನೇ ಸಂಪಾದಿಸಬೇಕು. ಆವಿದ್ಯೆಯಿಲ್ಲದವನು ನಾಲ್ಕು ಕಾಲುಳ್ಳ ಜಂತುವಿಗೆ ಸಮಾನನಾದವನೆಂದು ಭಾವಿಸಬೇಕು.॥೧೩॥

ಶ್ಲೋ ॥ ಕ್ಷಾಂತಿಶ್ಚೇತ್ಕವಚೇನಕಿಂಕಿಮರಿಭಿಃಕ್ರೋಧೋಸ್ತಿಚೇದ್ದೇಹಿ
ನಾಂ ಜ್ಞಾತಿಶ್ಚೇದನಲೇನಕಿಂಯದಿಸುಹೃದ್ದಿವ್ಯೌಷಧೈಃಕಿಂಫ
ಲಂ ॥ ಕಿಂಸರ್ಪೈರ್ಯದಿದುರ್ಜನಾಃಕಿಮುಧನೈರ್ವಿದ್ಯಾನವದ್ಯಾ
ಯದಿವ್ರೀಡಾಚೇತ್ಕಿಮುಭೂಷಣೈಸ್ಸುಕವಿತಾಯದ್ಯಸ್ತಿರಾಜ್ಯೇ
ನಕಿಂ .... .... ॥ ೧೪ ॥

ಟೀ॥ ಪ್ರಜೆಗಳಿಗೆ ಹಿತಾಹಿತಗಳನ್ನು ವರ್ಣಿಸುವದರ ಮೂಲಕ ವಿದ್ಯೆಯೇ ಸರ್ವೈಶ್ವರ್ಯಕ್ಕೂ ಕಾರಣವೆಂಬುದನ್ನು ತಿಳಿಸುತ್ತಾನೆ—ದೇಹಿನಾಂ=ಪ್ರಾಣಿಗಳಿಗೆ, ಕ್ಷಾಂತಿಃ=ತಾಳ್ಮೆಯು, ಅಸ್ತಿಚೇತ್=ಇದ್ದದ್ದೇ ಆದರೆ, ಕವಚೇನ=ವಜ್ರಕವಚದಿಂದ, (ಅಥವಾ ಕರ್ಮದಿಂದ) ಕಿಂ=ಏನು ಪ್ರಯೋಜನ, ಕ್ರೋಧಃ=ಕೋಪವು, ಅಸ್ತಿಚೇತ್=ಇದ್ದದ್ದೇ ಆದರೆ, ಅರಿಭಿಃ=ಶತ್ರುಗಳಿಂದ, ಕಿಂ=ಏನು ಫಲ, ಜ್ಞಾತಿಃ=ದಾಯಾದಿಯು, ಅಸ್ತಿಚೇತ್=ಇದ್ದವನೇ ಆದರೆ, ಅನಲೇನ=ಬೆಂಕಿಯಿಂದ, ಕಿಂ=ಏನು ಪ್ರಯೋಜನ, ಸುಹೃತ್=ಉತ್ತಮವಾದ ಸ್ನೇಹಿತನು, ಅಸ್ತಿಯದಿ=ಇದ್ದರೆ, ದಿವ್ಯೌಷಧೈಃ=ಸಿದ್ಧೌಷಧಿಗಳಿಂದ, ಕಿಂ=ಏನು ಪ್ರಯೋಜನ, ದುರ್ಜನಾಃ=ನೀಚರು, ಸಂತಿಯದಿ=ಇದ್ದವರೇ ಆದರೆ, ಸರ್ಪೈಃ=ಹಾವುಗಳಿಂದ, ಕಿಂ=ಏನು ಪ್ರಯೋಜನ, ಅನವದ್ಯಾ=ದೋಷರಹಿತವಾದ, ವಿದ್ಯಾ=ವಿದ್ಯವು, ಅಸ್ತಿಯದಿ=ಇದ್ದರೆ, ಧನೈಃ=ದ್ರವ್ಯಗಳಿಂದ, ಕಿಂ=ಏನು ಪ್ರಯೋಜನ, ವ್ರೀಡಾ=ಕೆಟ್ಟ ಕೆಲಸ ಮಾಡುವದರಲ್ಲಿ ನಾಚಿಕೆಯು, ಅಸ್ತಿಚೇತ್=ಇದ್ದರೆ, ಭೂಷಣೈಃ=ಒಡವೆಗಳಿಂದ, ಕಿಂ=ಏನು ಪ್ರಯೋಜನ, ಸುಕವಿತಾ=ಒಳ್ಳೆಯ ಕವಿತ್ವವು, ಅಸ್ತಿಯದಿ=ಇದ್ದರೆ, ರಾಜ್ಯೇನ=ಮಂಡಲಾಧಿಪತ್ಯದಿಂದ, ಕಿಂ=ಏನು ಪ್ರಯೋಜನವು.

ತಾ॥ ಯುದ್ಧಕಾಲದಲ್ಲಿ ವಜ್ರಕವಚವು ಹೇಗೆ ರಕ್ಷಿಸುವದೋ, ಅಥವಾ ಸುಕೃತವನ್ನುಂಟುಮಾಡುವದರ ಮೂಲಕ ಸತ್ಕರ್ಮವು ಯಾವ ರೀತಿಯಾಗಿ ರಕ್ಷಿಸುವದೋ, ಅದರಂತೆಯೇ ತಾಳ್ಮೆಯು ಲೋಕದಲ್ಲಿ ಎಲ್ಲಾ ಪ್ರಾಣಿಗಳನ್ನೂ ಕಾಪಾಡುವದು. ಮತ್ತು ಶತ್ರುಗಳು ಹೇಗೆ ನಾನಾ ವಿಧವಾದ ಉಪದ್ರವಗಳನ್ನು ಮಾಡುತ್ತಾರೆಯೋ, ಹಾಗೆ ಕೋಪವು ಬಹು ಹಾನಿಯನ್ನುಂಟುಮಾಡುವದು. ಬೆಂಕಿಯು ಹೇಗೆ ದಹಿಸುವದರಿಂದ

ಮಹದನರ್ಥವನ್ನುಂಟುಮಾಡುವದೋ, ಹಾಗೆ ಜ್ಞಾತಿಯು ನಿರ್ಮೂಲ ಮಾಡತಕ್ಕವನು. ದಿವ್ಯೌಷಧಗಳು ಯಾವ ಪ್ರಕಾರವಾಗಿ ಅತ್ಯಂತ ಹಿತಾರೋಗ್ಯವನ್ನುಂಟುಮಾಡುವವೋ, ಹಾಗೆ ಸನ್ಮಿತ್ರನೂ ಹಿತೋಪದೇಶಾದಿಗಳಿಂದ ಅತ್ಯಂತ ಪ್ರಿಯಕರನು. ಸರ್ಪಗಳೆಂತು ವಿಷವನ್ನು ಕಾರಿ ಕೊಲ್ಲುವವೋ, ದುರ್ಜನರೂ ಅಂತು ಪ್ರಾಣಾಪಹಾರಿಗಳು, ದ್ರವ್ಯವು ಯಾವ ಮೇರಿಗೆ ಸುಖಸಾಧನವೋ, ಅವರಂತೆಯೇ ನಿರ್ದೋಷವಾಗಿರುವ ವೇದವೇದಾಂಗಾದಿ ರೂಪವಾದ ಸದ್ವಿದ್ಯೆಯು ಸಕಲ ಭೋಗಗಳಿಗೂ ಸಾಧಕವಾಗಿರುವದು. ಮತ್ತು ಕೆಟ್ಟ ಕೆಲಸ ಮಾಡುವವರಲ್ಲಿ ಲಜ್ಜೆಯುಂಟಾಗಿದ್ದರೆ ಅದೇ ದಿವ್ಯಾಭರಣಗಳಂತೆ ಅಲಂಕರಿಸುವದು, ಸಕಲ ಜನಾನಂದಕರವಾದ ಸತ್ಕವಿತ್ವವಿದ್ದರೆ ಸಕಲಲೋಕವನ್ನು ಸ್ವಾಧೀನ ಮಾಡಿಕೊಡುವದಾದಕಾರಣ ರಾಜ್ಯಾಧಿಪತ್ಯಕ್ಕೆ ಸಮಾನವಾಗಿರುವದು. ಆದುದರಿಂದಲೆ ಈ ಮೇಲೆ ಹೇಳಿದವುಗಳಲ್ಲಿ ದೋಷಾಂಶಗಳನ್ನು ತ್ಯಜಿಸಿ ಗುಣಾಂಶಗಳನ್ನು ಗ್ರಹಿಸಬೇಕೆಂದು ಭಾವವು .... ॥ ೧೪ ॥

ಶ್ಲೋ॥ ದಾಕ್ಷಿಣ್ಯಂಸ್ವಜನೇದಯಾಪರಿಜನೇಶಾಠ್ಯಂಸದಾದುರ್ಜನೇಪ್ರೀತಿ
ಸ್ಸಾಧುಜನೇನಯೋನೃಪಜನೇವಿದ್ವಜ್ಜನೇಚಾರ್ಜವಂ ॥ ಶೌ
ರ್ಯಂಶತ್ರುಜನೇಕ್ಷಮಾಗುರುಜನೇ ಕಾಂತಾಜನೇಧೃಷ್ಟತಾಯೇ
ಚೈವಂಪುರುಷಾಃಕಲಾಸುಕುಶಲಾಸ್ತೇಷ್ವೇವಲೋಕಸ್ಥಿತಿಃ॥೧೫॥

ಟೀ॥ ವಿದ್ವಜ್ಜನರ ಗುಣವನ್ನು ವರ್ಣಿಸುವವನಾಗಿ ಅವರೇ ಲೋಕವ್ಯವಸ್ಥಾಪಕರೆಂದು ಹೇಳುತ್ತಾನೆ—ಸ್ವಜನೇ=ಬಂಧುಜನರಲ್ಲಿ, ದಾಕ್ಷಿಣ್ಯಂ=ಇಷ್ಟಾನುಸಾರವಾಗಿರುವಿಕೆಯು, ಪರಿಜನೇ=ಸೇವಕಜನರಲ್ಲಿ, ದಯಾ=ಕರುಣವು, ದುರ್ಜನೇ=ನೀಚರಲ್ಲಿ, ಶಾಠ್ಯಂ=ಅಹಿತಕರಣವು. ಸಾಧುಜನೇ=ಸಜ್ಜನರಲ್ಲಿ, ಪ್ರೀತಿಃ=ಸ್ನೇಹವು, (ಅಥವಾ ಆದರವು) ನೃಪಜನೇ=ಅರಸರ ವಿಷಯದಲ್ಲಿ, ನಯಃ=ನೀತಿಯು, ವಿದ್ವಜ್ಜನೇ=ಪಂಡಿತರ ವಿಷಯದಲ್ಲಿ, ಆರ್ಜವಂ=ಸರಿಯಾದ ನಡತೆಯು, ಶತ್ರುಜನೇ=ದ್ವೇಷಿಗಳ ವಿಷಯದಲ್ಲಿ, ಶೌರ್ಯಂ=ವಿಕ್ರಮವು, ಗುರುಜನೇ=ಹಿರಿಯರಲ್ಲಿ, ಕ್ಷಮಾ=ತಾಳ್ಮೆಯು. ಕಾಂತಾಜನೇ=ಹೆಂಗಸರ ವಿಷಯದಲ್ಲಿ, ಧೃಷ್ಟತಾ=ಧೈರ್ಯವು, (ಅಥವಾ ಪ್ರೌಢಿಮೆಯು) ಏವಂ=ಈ ಮೇಲೆ ಹೇಳಿದಮೇರೆ, ಕಲಾಸು=ವಿದ್ಯೆಗಳಲ್ಲಿ, ಯೇ=ಯಾವಜನರು, ಕುಶಲಾಃ=ಚತುರರೋ, ತೇಷ್ವೇವ=ಆ ಪುರುಷರಲ್ಲಿಯೇ, ಲೋಕಸ್ಥಿತಿಃ=ಲೋಕಮರ್ಯಾದೆಯು. ..... ॥ ೧೫ ॥

ತಾ॥ ತಮ್ಮ ಬಂಧುಜನಗಳಲ್ಲಿ ದಾಕ್ಷಿಣ್ಯಪರರಾಗಿಯೂ, ಸೇವಕ

ರಲ್ಲಿ ದಯಾಶಾಲಿಗಳಾಗಿಯೂ, ದುರ್ಜನರನ್ನು ಶಿಕ್ಷಿಸತಕ್ಕವರಾಗಿಯೂ, ಸಜ್ಜನರನ್ನು ಸ್ನೇಹಿಸುತ್ತಲೂ, ಪ್ರಭುಜನರನ್ನು ಆಶ್ರೈಸುತ್ತಲೂ, ವಿದ್ವಾಂಸರ ವಿಷಯದಲ್ಲಿ ವಕ್ರತೆಯಿಲ್ಲದೆ ಸರಿಯಾದ ನಡತೆಯುಳ್ಳವರಾಗಿಯೂ, ಶತ್ರುಜನರಲ್ಲಿ ವಿಕ್ರಮವನ್ನು ತೋರಿಸುತ್ತಲೂ, ಗುರುಹಿರಿಯರಲ್ಲಿ ಕೇವಲ ಸಹನದಿಂದ ವಿಧೇಯತೆಯನ್ನು ತೋರಿಸುತ್ತಲೂ, ಹೆಂಗಸರಿಗೆ ಅಧೀನರಾಗದೆ ಅವರ ವಿಷಯದಲ್ಲಿ ಪ್ರೌಢಿಮೆಯನ್ನು ತೋರುತ್ತಲೂ, ಇರುವ ಪುರುಷರು ಯಾರೋ, ಅಂಥವರೇ ಲೋಕವ್ಯವಹಾರದ ಸಕಲ ಮರ್ಯಾದೆಗಳನ್ನೂ ತಿಳಿದವರು. ಎಂದರೆ ಈ ರೀತಿಯಾಗಿರತಕ್ಕವರು ವಿದ್ಯಾವಂತರಲ್ಲದೆ ಇತರರಿಂದಲಾಗದಾದಕಾರಣ ವಿದ್ಯವೇ ಪ್ರಧಾನವು ಅದನ್ನೇ ಸಂಪಾದಿಸಬೇಕೆಂದು ಅಂತರಂಗವು. .... ||೧೯||

ಶ್ಲೋ||ಜಾಡ್ಯಂಧಿಯೋಹರತಿಸಿಂಚತಿವಾಚಿಸತ್ಯಂಮಾನೋನ್ನತಿಂದಿಶತಿಪಾ
ಪಮಪಾಕರೋತಿ। ಚೇತಃಪ್ರಸಾದಯತಿದಿಕ್ಷುತನೋತಿಕೀರ್ತಿಂಸ
ತ್ಸಂಗತಿಃಕಥಯಕಿಂನಕರೋತಿಪುಂಸಾಂ .... || ೨೦ ||

ಟೀ|| ಈ ರೀತಿಯಾಗಿ ವಿದ್ವಜ್ಜನರನ್ನು ವರ್ಣಿಸಿ ಈಗ ಅಂತವರ ಸಹವಾಸವೇ ಸಕಲ ಶ್ರೇಯಸ್ಕರವೆಂದು ಹೇಳುತ್ತಾನೆ—ಧಿಯಃ=ಬುದ್ಧಿಯ, ಜಾಡ್ಯಂ=ಮಾಂದ್ಯವನ್ನು, ಹರತಿ=ಅಪಹರಿಸುವದು, ವಾಚಿ=ವಚನದಲ್ಲಿ, ಸತ್ಯಂ=ಸತ್ಯತೆಯನ್ನು, ಸಿಂಚತಿ=ಉಂಟುಮಾಡುವದು, ಮಾನೋನ್ನತಿಂ—ಮಾನ=ಬಹುಮತಿಯ, ಉನ್ನತಿಂ=ಅತಿಶಯವನ್ನು, ದಿಶತಿ=ಕೊಡುವದು, ಪಾಪಂ=ಪಾಪಕರ್ಮವನ್ನು, ಅಪಾಕರೋತಿ=ತಿರಸ್ಕರಿಸುವದು, (ನಾಶಮಾಡುವದು) ಚೇತಃ=ಮನಸ್ಸನ್ನು, ಪ್ರಸಾದಯತಿ=ನಿರ್ಮಲವಾಗಿ ಮಾಡುವದು, ದಿಕ್ಷು=ದಿಕ್ಕುಗಳಲ್ಲಿ, ಕೀರ್ತಿಂ=ಯಶಸ್ಸನ್ನು, ತನೋತಿ=ವಿಸ್ತಾರ ಮಾಡುವದು, ಅತಃ=ಆದಕಾರಣ, ಸತ್ಸಂಗತಿಃ=ಸಜ್ಜನ ಸಹವಾಸವು, ಪುಂಸಾಂ=ಪುರುಷರಿಗೆ, ಕಿಂ=ಮತ್ತಾವ ಶ್ರೇಯಸ್ಸನ್ನು ನಕರೋತಿ=ಉಂಟುಮಾಡುವದಿಲ್ಲವು, ಕಥಯ=ಹೇಳು, ಸಮುಚ್ಚಯಾಲಂಕಾರವು, ವಸಂತತಿಲಕಾವೃತ್ತವು. ... ... ... || ೨೦ ||

ತಾ|| ಸಜ್ಜನರ ಸಹವಾಸವು ಮನುಷ್ಯನ ಮತಿಗುಂಟಾಗಿರುವ ಜಡತನವನ್ನು ಹೋಗಲಾಡಿಸುವುದು. ಅಲ್ಲದೆ ಸುಳ್ಳನ್ನು ಹೇಳಲೀಸದೆ ಯಾವಾಗಲೂ ಸತ್ಯವನ್ನೇ ನುಡಿಯುವಂತೆ ಮಾಡುವುದು. ಮತ್ತು ಬಹು ಗೌರವವನ್ನುಂಟುಮಾಡುವುದು. ಪಾಪಕರ್ಮದಲ್ಲಿ ಪ್ರವೃತ್ತಿಯನ್ನುಂಟುಮಾಡುವದಿಲ್ಲವು. ಚಿತ್ತಶುದ್ಧಿಯನ್ನುಂಟು ಮಾಡುವದು. ನಾನಾ ದಿಕ್ಕುಗಳ

ಲ್ಲಿಯೂ ಸತ್ಕೀರ್ತಿಯನ್ನು ಸಂಪಾದಿಸಿಕೊಳ್ಳುವುದು, ಆದಕಾರಣದಿಂದ. ಲೇ ದುರ್ಜನರ ಸಂಗವನ್ನು ತ್ಯಜಿಸಿ ವಿದ್ವಜ್ಜನರಾದ ಸಾಧುಗಳ ಸಹವಾಸವನ್ನೇ ಮಾಡಬೇಕೆಂದಾಶಯವು. ॥ ೨೦ ॥

ಶ್ಲೋ॥ ಜಯಂತಿತೇಸುಕೃತಿನೋರಸಸಿದ್ಧಾಃಕವೀಶ್ವರಾಃ।ನಾಸ್ತಿತೇಷಾಂ
ಯಶಃಕಾಯೇಜರಾಮರಣಜಂಭಯಂ ॥ .... ॥೨೧॥

ಟೀ॥ ಅಸಾಧಾರಣಮಹಿಮರಾದ ಆ ವಿದ್ವಜ್ಜನರ ಸರ್ವೋತ್ಕೃಷ್ಟತ್ವವನ್ನು ಹೇಳುತ್ತಾನೆ— ಸುಕೃತಿನಃ=ಧನ್ಯರಾದ, ರಸಸಿದ್ಧಾಃ—ರಸ=ಶೃಂಗಾರಾದಿ ರಸಗಳಿಂದ, ಅಥವಾ ರಸಾಯನಾದಿಗಳಿಂದ, ಸಿದ್ಧಾಃ=ಪ್ರಸಿದ್ಧರಾದ, ಅಥವಾ ಜ್ಞಾನಿಗಳಾದ, (ಅಥವಾ, ರಸಸಿದ್ಧಾಃ=ಬ್ರಹ್ಮಜ್ಞಾನವುಳ್ಳ) ತೇ=ಪೂರ್ವೋಕ್ತರಾದ ಕವಿಸಾರ್ವಭೌಮರು, (ಅಥವಾ ಪಂಡಿತೋತ್ತಮರು) ಜಯಂತಿ=ಸರ್ವೋತ್ಕೃಷ್ಟರಾಗಿರುವರು, ತೇಷಾಂ=ಅವರ, ಯಶಃಕಾಯೇ=ಕೀರ್ತಿಶರೀರದಲ್ಲಿ, ಜರಾಮರಣಜಂ—ಜರಾ=ಮುಪ್ಪು, ಮರಣ=ಸಾವು, ಇವುಗಳ ದೆಸೆಯಿಂದ, ಜಂ=ಹುಟ್ಟಿದ, ಭಯಂ=ಭೀತಿಯು, ನಾಸ್ತಿ=ಇಲ್ಲವು. ಕಾವ್ಯಲಿಂಗಾಲಂಕಾರವು, ಅನುಷ್ಟುಭವೃತ್ತವು ಶ್ಲೋ॥ ಪಂಚಮಂಲಘುಸರ್ವತ್ರಸಪ್ತಮಂದ್ವಿಚತುರ್ಥಯೋಃ। ಗುರುಷಷ್ಠಂಚಸರ್ವೇಷಾಮೇತಚ್ಛ್ಲೋಕಸ್ಯಲಕ್ಷಣಂ ॥ ಎಲ್ಲಾ ಪಾದಗಳಲ್ಲಿಯೂ,-೫ನೇ ವರ್ಣವು ಲಘುವಾಗಿಯೂ, ೨.೪ರಲ್ಲಿ ೭ನೇ ವರ್ಣವು ಲಘುವಾಗಿಯೂ, ಮತ್ತು ೪ ಪಾದಗಳಲ್ಲಿಯೂ, ೬ನೇ ವರ್ಣವು ಗುರುವಾಗಿಯೂ ಇರುವುದು ಲಕ್ಷಣವೆಂದರಿವುದು.॥೨೧॥

ತಾ॥ ಪಂಡಿತೋತ್ತಮರು ಸಂಪಾದಿಸಿರುವ ಕೀರ್ತಿಯೆಂಬ ಶರೀರಕ್ಕೆ ಮುಪ್ಪು ಮರಣಗಳೆಂಬಿವು ಎಂದಿಗೂ ಬರುವದಿಲ್ಲವು. ಆದಕಾರಣದಿಂದಲೇ ಅವರು ಒಂದುವೇಳೆ ದೇಹತ್ಯಾಗವನ್ನು ಮಾಡಿ ಲೋಕಾಂತರಕ್ಕೆ ಹೋಗಿದ್ದರೂ ಯಶಶ್ಶರೀರದಿಂದ ಸರ್ವೋನ್ನತರಾಗಿ ಈಗಲೂ ಅವರು ಆವರ ಗ್ರಂಥಗಳಿಂದ ಜೀವಿಸಿ ಇರುವರೆಂದು ಭಾವವು..... ....॥೨೧॥

## ಶೌರ್ಯಪದ್ಧತಿ ಪ್ರಾರಂಭವು.

ಶ್ಲೋ॥ ಕ್ಷುತ್ಕ್ಷಾಮೋಪಿಜರಾಕೃಶೋಪಿಶಿಥಿಲಪ್ರಾಯೋಪಿಕಷ್ಟಾಂದಶಾ
ಮಾಪನ್ನೋಪಿವಿಪನ್ನದೀಧಿತಿರಪಿಪ್ರಾಣೇಷುನಶ್ಯತ್ಸ್ವಪಿ ॥ ಮ
ತ್ತೇಭೇಂದ್ರವಿಭಿನ್ನಕುಂಭಪಿಶಿತಗ್ರಾಸೈಕಬದ್ಧಸ್ಪೃಹಃಕಿಂಜೀ
ರ್ಣಂತೃಣಮತ್ತಿಮಾನಮಹತಾಮಗ್ರೇಸರಃಕೇಸರೀ ॥೨೨॥

ಟೀ॥ ವಿದ್ವಾಂಸರಿಗೂ ಮಾನಶೌರ್ಯಗಳು ಅವಶ್ಯಕಗಳಾದುದರಿಂದ ಶೌರ್ಯ
ಪದ್ಧತಿಯನ್ನು ಆರಂಭಿಸಿ ಹೇಳುತ್ತಾನೆ—ಕ್ಷುತ್‍ಕ್ಷಾಮೋಽಪಿ—ಕ್ಷುತ್=ಹಸಿವಿನಿಂ
ದ, ಕ್ಷಾಮೋಽಪಿ=ಕ್ಷಯಿಸಿದಾಗ್ಯೂ, ಜರಾಕೃಶೋಽಪಿ—ಜರಾ=ಮುಪ್ಪಿನಿಂದ, ಕೃ
ಶೋಽಪಿ—ಜೀರ್ಣವಾದಾಗ್ಯೂ, ಶಿಥಿಲಪ್ರಾಯೋಽಪಿ—ಶಿಥಿಲ=ಹೀನವಾದ, ಪ್ರಾಯೋಽ
ಪಿ=ಬಲವುಳ್ಳದ್ದಾದರೂ, ಕಷ್ಟಾಂ=ಶೋಚನೀಯವಾದ, ದಶಾಂ=ಅವಸ್ಥೆಯನ್ನು
ಆಪನ್ನೋಽಪಿ=ಹೊಂದಿದಾಗ್ಯೂ, ವಿಪನ್ನದೀಧಿತಿರಪಿ—ವಿಪನ್ನ=ನಷ್ಟವಾದ, ದೀ
ಧಿತಿರಪಿ=ಕಾಂತಿಯುಳ್ಳದ್ದಾದರೂ, ಪ್ರಾಣೇಷು=ಪ್ರಾಣಗಳು, ನಶ್ಯತ್ಸ್ವಪಿ=ನಾಶ
ವಾಗುತ್ತಿರುವವುಗಳಾದರೂ, ಮತ್ತೇಭೇಂದ್ರವಿಭಿನ್ನ ಕುಂಭಪಿಶಿತಗ್ರಾಸೈಕ ಬದ್ಧ
ಸ್ಪೃಹಃ—ಮತ್ತ=ಮದಿಸಿರುವ, ಇಭೇಂದ್ರ=ಗಜರಾಜನ, ವಿಭಿನ್ನ=ಸೀಳಲ್ಪಟ್ಟ,
ಕುಂಭ=ಕುಂಭಸ್ಥಲದಲ್ಲಿರುವ, ಪಿಶಿತ=ಮಾಂಸದ, ಗ್ರಾಸ=ಆಹಾರದಲ್ಲಿ, ಏಕ=
ಮುಖ್ಯವಾಗಿ, ಬದ್ಧ=ಕಟ್ಟಲ್ಪಟ್ಟ, ಸ್ಪೃಹಃ=ಆಶೆಯುಳ್ಳ, ಮಾನಮಹತಾಂ—ಮಾ
ನ=ಗೌರವದಿಂದ, ಮಹತಾಂ=ಮಹನೀಯರಾದವರೊಳಗೆ, ಅಗ್ರೇಸರಃ=ಅಗ್ರಗ
ಣ್ಯವಾದ, ಕೇಸರೀ=ಸಿಂಹವು, ಜೀರ್ಣಂ=ಒಣಗಿರುವ, ತೃಣಂ=ಹುಲ್ಲನ್ನು, ಅತ್ತಿ
ಕಿಂ=ತಿನ್ನುವದೇನು? ಅಪ್ರಸ್ತುತಪ್ರಶಂಸಾಲಂಕಾರವು ... ॥೨೨॥

ತಾ॥ ಯಾವಾಗಲೂ ಮದಿಸಿರುವ ಆನೆಯ ತಲೆಯನ್ನು ಒಡೆದು ಅಲ್ಲಿ
ರುವ ಮಾಂಸವನ್ನು ಕಬಳಿಸುವದರಲ್ಲಿಯೇ ಮುಖ್ಯವಾದ ಆಶೆಯುಂಟಾ
ಗಿರೋಣದರಿಂದಲೇ, ಮಾನಶೌರ್ಯವಂತರ ಗುಂಪಿನಲ್ಲಿ ಅಗ್ರಗಣ್ಯವೆನಿಸಿ
ರುವ ಸಿಂಹವು ಹಸಿವೆಯಿಂದ ಕ್ಷಯಿಸುತ್ತಿದ್ದರೂ, ಮತ್ತು ಮುಪ್ಪಿನಿಂದ
ಬಡವಾದರೂ, ಪ್ರಾಯವು ಕುಗ್ಗಿದರೂ, ಶೋಚನೀಯವಾದ ಅವಸ್ಥೆ
ಯನ್ನು ಹೊಂದಿದರೂ, ಕಳೆಗುಂದಿದರೂ, ಇದೂಅಲ್ಲದೆ ಪ್ರಾಣಗಳೇ
ಈಗಾಗ ಹೋಗುವವುಗಳಾಗಿದ್ದರೂ, ಒಣಗಿ ಹೋದ ಹುಲ್ಲನ್ನು ಎಂದಿ
ಗಾದರೂ ಅದು ತಿನ್ನುವದುಂಟೇ? ಸರ್ವಥಾ ತಿನ್ನುವದಿಲ್ಲವು. ಆದುದರಿಂ
ದಲೇ ಮಾನಶೌರ್ಯಶಾಲಿಗಳು ಯೋಚಿಸಿ ಯೋಗ್ಯವಾದ ಕಾರ್ಯಗಳಲ್ಲಿ
ಪ್ರವರ್ತಿಸಿ ಚಂದ್ರಸೂರ್ಯರಿರುವರೆಗೂ ಶಾಶ್ವತವಾಗಿರುವ ಮಾನಶೌರ್ಯ
ಗಳಿಂದ ಲಭಿಸಿದ ಕೀರ್ತಿಯನ್ನು ಸಂಪಾದಿಸಿ ಕೀರ್ತಿ ಶರೀರವುಳ್ಳವರಾಗಿ
ರಬೇಕಲ್ಲದೆ ಅಲ್ಪಕಾರ್ಯಗಳಲ್ಲಿ ಪ್ರವರ್ತಿಸಿ ದುರ್ಯಶಸ್ಸನ್ನು ಸಂಪಾದಿಸಬಾ
ರದೆಂದು ತಾತ್ಪರ್ಯವು.

ಶ್ಲೋ॥ ಸ್ವಲ್ಪಸ್ನಾಯುವಸಾವಸೇಕಮಲಿನಂ ನಿರ್ಮಾಂಸಮಪ್ಯಸ್ಥಿಗೋಃ
ಶ್ವಾ ಲಬ್ಧ್ವಾ ಪರಿತೋಷಮೇತಿ ನಚ ತತ್ತಸ್ಯ ಕ್ಷುಧಾಶಾಂತಯೇ॥
ಸಿಂಹೋ ಜಂಬುಕಮಂಕಮಾಗತಮಪಿ ತ್ಯಕ್ತ್ವಾ ನಿಹಂತಿ ದ್ವಿಪಂ ಸ
ರ್ವಃ ಕೃಚ್ಛ್ರಗತೋಽಪಿ ವಾಂಛತಿ ಜನಸ್ಸತ್ವಾನುರೂಪಂ ಫಲಂ ॥೨೩॥

ಟೀ॥ ಕ್ಷುದ್ರಜಂತುಗಳ ರೀತಿಯಲ್ಲಿಂ ಭರ್ತೃವಂ ರೀತ್ಯಂತರದಿಂದ ಪೇಳಿಸುತ್ತಾನೆ—ಶ್ವಾ=ನಾಯಿಯು, ಸ್ವಲ್ಪಸ್ನಾಯುವಸಾವಸೇಕಮಲಿನಂ—ಸ್ವಲ್ಪ=ಲೇಶಮಾತ್ರಗಳಾದ, ಸ್ನಾಯು=ನಸ್ನುಸವೆಂಬ ನಾಡೀ ವಿಶೇಷವು, ವಸಾ=ಕೊಬ್ಬು, ಇವುಗಳ, ಅವಸೇಕ=ರಸಸಂಪರ್ಕದಿಂದ, ಮಲಿನಮಪಿ=ದೂಷಿತವಾದಾಗ್ಯೂ, ನಿರ್ಮಾಂಸಂ=ಮಾಂಸಶೂನ್ಯವಾದಾಗ್ಯೂ, ಗೋಃ=ಪಶುವಿನ, ಅಸ್ಥಿ=ಮೂಳೆಯನ್ನು, ಲಬ್ಧ್ವಾ=ಹೊಂದಿ, ಪರಿತೋಷಂ=ಸಂತೋಷವನ್ನು, ಏತಿ=ಹೊಂದುತ್ತದೆ, ತಚ್ಚ=ಆ ಅಸ್ಥಿಯು, ತಸ್ಯ=ಆ ನಾಯಿಯ, ಕ್ಷುಧಾಶಾಂತಯೆ—ಕ್ಷುಧಾ=ಹಸಿವಿನ, ಶಾಂತಯೆ=ಶಮನಕ್ಕೋಸ್ಕರ, ನಚ=ಸಾಕಾಗುವದಿಲ್ಲವು, ಸಿಂಹಃ=ಸಿಂಹವು ಅಂಕಂ=ಸಮೀಪವನ್ನು ಕುರಿತು, ಆಗಮತಪಿ=ಬಂದಾಗ್ಯೂ, ಜಂಬುಕಂ=ನರಿಯನ್ನು, ತ್ಯಕ್ತ್ವಾ=ಬಿಟ್ಟು, ದ್ವಿಪಂ=ಆನೆಯನ್ನು, ನಿಹಂತಿ=ಸಂಹರಿಸುವದು, ಸರ್ವಃ=ಸಮಸ್ತ ಜನವು, ಕೃಛ್ರಗತೋಪಿ—ಕೃಛ್ರ=ಕಷ್ಟವನ್ನು, ಗತೋಪಿ=ಹೊಂದಿದಾಗ್ಯೂ, ಸತ್ವಾನುರೂಪಂ—ಸತ್ವ—ಸ್ವಶಕ್ತಿಗೆ, ಅನುರೂಪಂ—ಅನುಗುಣವಾದ ಫಲಂ=ಲಾಭವನ್ನು, ವಾಂಛತಿ=ಕೋರುವದು. ... ॥೨೩॥

ತಾ॥ ಅತ್ಯಲ್ಪವಾದ ಕೊಬ್ಬು ಮೊದಲಾದವುಗಳಿಂ ನನೆದತಿದೂಷಿತವಾಗಿರುವ ಎತ್ತಿನ ಮೂಳೆಯನ್ನು ಹೊಂದಿ ನಾಯಿಯು ಆನಂದಿಸುವದು ಆದರೂ ಅದರಿಂದದರ ಹಸಿವಣಗುವದಿಲ್ಲವು. ಸಿಂಹವಾದರೋ ಸಮೀಪಕ್ಕೆ ಬಂದರೂ ನರಿಯನ್ನು ಕೊಲ್ಲದೆ ಗಜವನ್ನು ಸಂಹರಿಸುವದು. ಇದರಂತೆಯೇ ಲೋಕದೊಳು ಸರ್ವರೂ ತಮ್ಮ ತಮ್ಮ ಯೋಗ್ಯತೆಗನುಗುಣವಾದಫಲದಲ್ಲಿ ಪ್ರವೃತ್ತಿಯುಳ್ಳವರಾಗುವರೆಂದು ತಾತ್ಪರ್ಯವು. ॥೨೩॥

ಶ್ಲೋ॥ ಲಾಂಗೂಲಚಾಲನಮಧಶ್ಚರಣಾವಘಾತಂ ಭೂಮೌನಿಪತ್ಯವದ
ನೋದರದರ್ಶನಂಚ ॥ ಶ್ವಾಪಿಂಡದಸ್ಯಕುರುತೆಗಜಪುಂಗವಸ್ತುಧೀ
ರಂವಿಲೋಕಯತಿಚಾಟುಶತೈಶ್ಚಭುಂಕ್ತೆ ॥ .... ॥೨೪॥

ಟೀ। ಕ್ಷುದ್ರಜಂತುವಿನ ಚೇಷ್ಟಾವಿಶೇಷವಂ ಪೇಳುತ್ತಾನೆ—ಶ್ವಾ=ನಾಯಿಯು, ಲಾಂಗೂಲಚಾಲನಂ—ಲಾಂಗೂಲ=ಬಾಲದ, ಚಾಲನಂ=ಅಲ್ಲಾಡಿಸುವಿಕೆಯನ್ನು, ಅಧಃ=ಭೂಪ್ರದೇಶದಲ್ಲಿ, ಚರಣಾವಘಾತಂ—ಚರಣ=ಕಾಲಗಳಿಂದ, ಅವಘಾತಂ=ಕೆರಿಯುವಿಕೆ ಮೊದಲಾದ್ದನ್ನು, ಭೂಮೌ=ನೆಲದಲ್ಲಿ, ನಿಪತ್ಯ=ಬಿದ್ದು ವದನೋದರದರ್ಶನಂಚ—ವದನ=ಮುಖವು=ಉದರ=ಹೊಟ್ಟೆಯು ಇವುಗಳ, ದರ್ಶನಂಚ=ತೋರಿಸುವಿಕೆಯನ್ನು, ಪಿಂಡದಸ್ಯ=ಅನ್ನಕೊಡುವವನ, ಪುರಸ್ತಾತ್, ಮುಂಭಾಗದೊಳು, ಕುರುತೆ=ಮಾಡುವದು, ಗಜಪುಂಗವಸ್ತು—ಗಜೇಂದ್ರನಾದ

ಕೇನೆ.ತೀ, ಧೀರಂ—ಗಂಭೀರವಾಗಿ, ವಿಲೋಕಯತಿ=ನೋಡುವದು, ಚಾಟುಶತೈಃ—ಚಾಟು=ಪ್ರಿಯೋಕ್ತಿಗಳ, ಶತೈಃ=ನೂರರಿಂದ, ಭುಂಕ್ತೇ=ಭುಜಿಸುವದು ॥೨೪॥

ತಾ॥ ಪಿಂಡವೀವನಿದಿರಿನೊಳು ನಾಯಿಯು ಬಾಲವನ್ನಲ್ಲಾಡಿಸುತ್ತ, ಕಾಲುಗಳಿಂದ ಭೂಮಿಯನ್ನು ಕೆರೆಯುತ್ತ, ಭೂಮಿಯಲ್ಲಿಬಿದ್ದು ವದನೋದರಗಳನ್ನು ತೋರಿಸುತ್ತಲೂ ಚೇಷ್ಟಿಸುವುದು. ಗಜರಾಜನಾದರೋ ತನಗನ್ನವೀವನಂ ಗಂಭೀರದಿಂದೀಕ್ಷಿಸುತ್ತಾ ಆತನಿಂದ ಹೇಳಲ್ಪಟ್ಟ ಅನೇಕ ಪ್ರಿಯೋಕ್ತಿಗಳಿಂದ ತನಗಿಟ್ಟ ಆಹಾರವನ್ನು ಭುಜಿಸುವದಾದಕಾರಣ ಇವೇ ನೀಚಾನೀಚರಿಗೆ ದೃಷ್ಟಾಂತವೆಂದು ಭಾವವು. ॥೨೪॥

ಶ್ಲೋ॥ ಪರಿವರ್ತಿನಿಸಂಸಾರೇಮೃತಃಕೋವಾನಜಾಯತೇ ॥ ಸಜಾತೋಯೇನಜಾತೇನಯಾತಿವಂಶಸ್ಸಮುನ್ನತಿಂ ॥ ॥೨೫॥

ಟೀ॥ ಮಾನಶೌರ್ಯಸಂಪನ್ನನಾದ ವಂಶವರ್ಧಕನಿಗೇ ಸತ್ಫಲಾಭವು ಇತರನಿಗಿಲ್ಲವೆಂಬರ್ಥವಂ ಪೇಳುತ್ತಾನೆ—ಪರಿವರ್ತಿನಿ=ಧರ್ಮಾಧರ್ಮವಶದಿಂದ ಮರಳಿ ಮರಳಿ ತಿರುಗುತ್ತಿರುವ ಸಂಸಾರೇ=ಜರಾಮರಣರೂಪ ಸಂಸಾರದಲ್ಲಿ, ಕೋವಾ=ಯಾವ ಪ್ರಾಣಿಯು, ಮೃತಃ=ಸತ್ತವನಾಗಿ, ನಜಾಯತೇ=ಹುಟ್ಟುವದಿಲ್ಲವು ಯೇನ=ಯಾವ, ಜಾತೇನ=ಹುಟ್ಟಿದ ಪುರುಷನಿಂದ, ವಂಶಃ=ಕುಲವು, ಸಮುನ್ನತಿಂ=ಮಹದಾತ್ಕೃಷ್ಟ್ಯವಂ, ಯಾತಿ=ಪೊಂದುವುದೋ ಸಃ-ಆತನೇ, ಜಾತಃ=ಉತ್ಪನ್ನನಾದವನು. ... .... ... ॥೨೫॥

ತಾ॥ ಯದ್ಯಪಿ ಹುಟ್ಟಿದವನಿಗೆ ಮೃತ್ಯುವು ನಿಜವೆಂದೂ, ಮೃತನಾದವನಿಗೆ ಜನ್ಮವು ನಿಶ್ಚಯವೆಂಬದಾಗಿಯೂ ಇರುವ ಭಗವದ್ವಚನದಂತೆ ಸಂಸಾರಚಕ್ರದಲ್ಲಿ ಮೃತನಾದ ಯಾವ ಪ್ರಾಣಿಯು ಜನ್ಮಿಸುವದಿಲ್ಲ? ಎಲ್ಲರೂ ಜನಿಸುವರಾದರೂ ಅವರಲ್ಲಿ ಯಾವ ಜನಿಸಿದ ಪ್ರಾಣಿನಿಂದ ತನ್ನ ವಂಶವು ಪರಮೋತ್ಕೃಷ್ಟತ್ವವನ್ನು ಹೊಂದಿಸಲ್ಪಡುವದೋ ಅಂಥವನ ಉತ್ಪತ್ತಿಯೇ ಸಾರ್ಥಕವಾದದ್ದು. ಹಾಗಿಲ್ಲದೆ ಅಜಾಗಳಸ್ತನದಂತೆಹುಟ್ಟಿ ನಾಶವಾಗಿಸಾಯುವ ಇತರರಿಂದೇನು ಪ್ರಯೋಜನವೆಂದುಭಾವವು॥೨೫॥

ಶ್ಲೋ॥ ಕುಸುಮಸ್ತಬಕಸ್ಯೇವದ್ವಯೀವೃತ್ತಿರ್ಮನಸ್ವಿನಃ ॥ ಮೂರ್ಧ್ನಿವಾಸರ್ವಲೋಕಸ್ಯಶೀರ್ಯತೇವನಏವವಾ ॥ ॥೨೬॥

ಟೀ॥ ಆ ರೀತಿಯಾಗಿರತಕ್ಕ ಪುರುಷನ ಪ್ರಕಾರವಂ ಪೇಳುತ್ತಾನೆ—

ಕುಸುಮಸ್ತಬಕಸ್ಯೇವ—ಕುಸುಮ=ಪುಷ್ಪಗಳ, ಸ್ತಬಕಸ್ಯೇವ=ಗೊಂಚಲಿಯೋಪಾದಿಯಲ್ಲಿ, ಮನಸ್ವಿನಃ=ಧೀರನಿಗೆ, ದ್ವಯೀ=ಎರಡು ಪ್ರಕಾರವಾದ, ವೃತ್ತಿಃ=ವ್ಯಾಪಾರವು, ಸರ್ವಲೋಕಸ್ಯ=ಸರ್ವಜನರ, ಮೂರ್ಧ್ನಿವಾ=ಶಿರಸ್ಸಿನಲ್ಲಿಯಾದರೂ, (ಉನ್ನತ ಸ್ಥಾನದಲ್ಲಿಯಾದರೂ) ತಿಷ್ಠತೇ=ವಾಸವಾಗುತ್ತಾನೆ, ವಾಸವಾಗುತ್ತಾನೆ, ವನೇವಾ=ಕಾಡಿನಲ್ಲಿಯಾದರೂ, ಶೀರ್ಯತೇ=ನಶಿಸಿಹೋಗುತ್ತಾನೆ (ಈಶ್ಲೋಕದೊಳು ಕುಸುಮಸ್ತಬಕಸ್ಯೇವ ಎಂಬದಾಗಿ ಒಂದೇ ಪದವು.) ॥೨೬॥

ತಾ॥ ಮಾನಶೌರ್ಯಶಾಲಿಯಾದ ಧೀರನಿಗೆ ವೃತ್ತಿಯು ಹೂವಿನ ಗುಚ್ಛಿಯಂತೆ ಎರಡು ವಿಧವಾಗಿರುವುದು ಹೇಗೆಂದರೆ—ಕುಸುಮಸ್ತಬಕವು ಎಲ್ಲಾ ಪುರುಷರ ಶಿರಸ್ಸಿನಲ್ಲಿದ್ದು ನಾಶವಂ ಪಡೆಯುವದು. ಇಲ್ಲವೆ ಅರಣ್ಯದಲ್ಲಿಯೇ ನಶಿಸುವದು, ಅದರಂತೆ ಧೀರನು ಎಲ್ಲರಿಗಿಂತಲೂ ಉತ್ತಮ ಸ್ಥಿತಿಯಲ್ಲಿರುವನು, ಇಲ್ಲವೆ ಕಾಡಿನಲ್ಲಾದರೂ ಅಳಿಗುವನೆಂದಾಶಯವು ॥೨೬॥

ಶ್ಲೋ॥ ಸಂತ್ಯನ್ಯೇಪಿಬೃಹಸ್ಪತಿಪ್ರಭೃತಯಸ್ಸಂಭಾವಿತಾಃಪಂಚಷಾಸ್ತಾನ್
ಪ್ರತ್ಯೇಷವಿಶೇಷವಿಕ್ರಮರುಚೀರಾಹುರ್ನವೈರಾಯತೇ॥ ದ್ವಾವೇ
ವಗ್ರಸತೇದಿವಾಕರನಿಶಾಪ್ರಾಣೇಶ್ವರೌ ಭಾಸ್ವರೌಭ್ರಾತಃಪರ್ವಣಿ
ಪಶ್ಯದಾನವಪತಿಶ್ಶೀರ್ಷಾವಶೇಷಾಕೃತಿಃ .... ॥೨೭॥

ಟೀ॥ ಅನ್ಯೇ=ಮುಂದೆ ಹೇಳುವ ಸೂರ್ಯಚಂದ್ರರಿಗಿಂತಲೂ ಇತರರಾದ, ಬೃಹಸ್ಪತಿಪ್ರಭೃತಯಃ—ಬೃಹಸ್ಪತಿ=ಗುರುವೇ, ಪ್ರಭೃತಯಃ=ಮೊದಲಾದ ಬುಧ ಶುಕ್ರಾದಿಗಳು, ಪಂಚಷಾಃ=ಐದಾರಾದ, ಸಂಭಾವಿತಾಃ—ಗ್ರಾಹ್ಯರಾದ ಅಥವಾ ಬಹುಮತರಾದವರು, ಸಂತಿ=ಇರುತ್ತಾರೆ, ತಾನ್ ಪ್ರತಿ—ಆ ಬೃಹಸ್ಪತಿ ಮೊದಲಾದ ಗ್ರಹಗಳನ್ನು ಕುರಿತು, ವಿಶೇಷವಿಕ್ರಮರುಚೀ—ವಿಶೇಷ—ಅಧಿಕವಾಗಿ, ವಿಕ್ರಮ—ಪರಾಕ್ರಮ ಮಾಡುವದರಲ್ಲಿ, ಪ್ರೀತಿಃ—ವಿಶ್ವಾಸವುಳ್ಳ, ಏಷಃ—ಗ್ರಹಣಕರ್ತನೆಂದು ಪ್ರಸಿದ್ಧನಾದ, ರಾಹುಃ=ರಾಹುವು, ನವೈರಾಯತೇ=ದ್ವೇಷವಂ ಮಾಡುವದಿಲ್ಲವು, ಭಾಸ್ವರೌ=ಹೊಳೆಯುವ, ದ್ವೌ=ಇಬ್ಬರಾದ, ದಿವಾಕರನಿಶಾಪ್ರಾಣೇಶ್ವರೌ=ಸೂರ್ಯಚಂದ್ರರನ್ನು ಮಾತ್ರವೇ, ಶೀರ್ಷಾವಶೇಷಾಕೃತಿಃ—ಶೀರ್ಷ=ತಲೆಯು, ಅವಶೇಷ=ಶೇಷವಾದ, ಆಕೃತಿಃ=ಆಕಾರವುಳ್ಳ, ದಾನವಪತಿಃ=ದಾನವೇಂದ್ರನಾದ ಹಿಂದೆ ಹೇಳಲ್ಪಟ್ಟ ರಾಹುವು, ಪರ್ವಣಿ=ಪರ್ವಕಾಲದೊಳು, ಗ್ರಸತಿ—ನುಂಗುತ್ತಾನೆ, ಹೇಭ್ರಾತಃ=ಎಲೈ ಅಣ್ಣನೆ, ಪಶ್ಯ=ನೋಡು ... ॥೨೭॥

ತಾ॥ ಲೋಕದಲ್ಲಿ ಪ್ರಸಿದ್ಧರಾದ ಸೂರ್ಯಚಂದ್ರರಿಗಿಂತಲೂ ಇತರರಾಗಿ ಸಂಭಾವಿತರಾದ ಐದಾರುಮಂದಿ ಬೃಹಸ್ಪತಿ ಮೊದಲಾದ ಗ್ರಹಗಳ

ದ್ದರೂ ಇವರನ್ನು ಬಿಟ್ಟು ಕೇವಲ ಶಿರಸ್ಸು ಮಾತ್ರನೇ ಆಕಾರನಾಗಿ ಉಳ್ಳ ರಾಹುವು ಕೇವಲ ಸೂರ್ಯಚಂದ್ರರನ್ನು ಮಾತ್ರ ಪರ್ವಕಾಲಗಳೊಳು ಕಬಳಿಸುವನು. ಕೇವಲ ತಲೆಮಾತ್ರವುಳ್ಳವನಲ್ಲಿಯೇ ಇಷ್ಟು ಕಾರ್ಯ ಮಾಡುವಲ್ಲಿ ಸರ್ವಾವಯವಗಳೂ ಇದ್ದರೆ ಇನ್ನೆಷ್ಟು ಕಾರ್ಯವನ್ನು ಮಾಡುತ್ತಿದ್ದನೋ ಹೇಳಲಿಕ್ಕಾಗದು. ಎಂದರೆ ಮಾನ ಶೌರ್ಯಶಾಲಿಗಳು ತಮ್ಮಂಗೆ ಭಂಗವಾದಾರೂ ಗಣಿಸದೆ ಮಹತ್ಕಾರ್ಯವನ್ನೇ ಮಾಡಲುದ್ಯುಕ್ತರಾಗುವರೆಂದು ಭಾವವು.

ಶ್ಲೋ॥ ವಹತಿಭುವನಶ್ರೇಣೀಂಶೇಷಃ ಫಣಾಫಲಕಸ್ಥಿತಾಂ ಕಮಠಪತಿನಾ
ಮಧ್ಯೇಪೃಷ್ಠಂಸದಾಸಚಧಾರ್ಯತೇ ॥ ತಮಪಿಕುರುತೇಕ್ರೋಡಾ
ಧೀನಂಪಯೋಧಿರ ನಾದರಾದಹಹಮಹತಾಂನಿಸ್ಸೀಮಾನಶ್ಚರಿತ್ರ
ವಿಭೂತಯಃ ॥ .... .... ॥೨೮॥

ಟೀ॥ ಮಹಾತ್ಮರ ಮಹತ್ವವನ್ನು ಹೇಳುತ್ತಾನೆ. ಶೇಷಃ=ಆದಿಶೇಷನು, ಫಣಾಫಲಕಸ್ಥಿತಾಂ—ಫಣಾಫಲಕ=ಹಲಿಗೆಯೋಪಾದಿಯೊಳಿರುವ ಸಾವಿರ ಹೆಡೆಗಳಲ್ಲಿ, ಸ್ಥಿತಾಂ=ಇರುತ್ತಿರುವ, ಭುವನಶ್ರೇಣೀಂ—ಭುವನ=ಹದಿನಾಲ್ಕು ಲೋಕಗಳ, ಶ್ರೇಣೀಂ=ಸಾಲನ್ನು, ವಹತಿ=ವಹಿಸುತ್ತಾನೆ, ಸಚ=ಆ ಆದಿಶೇಷನು, ಕಮಠಪತಿನಾ=ಆದಿಕೂರ್ಮನಿಂದ, ಮಧ್ಯೇಪೃಷ್ಠಂ=ತನ್ನ ಹಿಂಭಾಗದ ಬೆನ್ನಿನಲ್ಲಿ, ಸದಾ=ನಿರಂತರವೂ, ಧಾರ್ಯತೇ=ವಹಿಸಲ್ಪಡುತ್ತಾನೆ, ತಮಪಿ=ಆ ಕೂರ್ಮನನ್ನು, ಪಯೋಧಿಃ=ಸಮುದ್ರನು, ಅನಾದರಾತ್=ಅನಾಯಾಸದ ದೆಸೆಯಿಂದ, ಕ್ರೋಡಾಧೀನಂ=ಆದಿ ವರಾಹನ ಅಧೀನವನ್ನು, ಕುರುತೇ=ಮಾಡುತ್ತಾನೆ, ಮಹತಾಂ=ಮಹಾತ್ಮರುಗಳ, ಚರಿತ್ರವಿಭೂತಯಃ—ಚರಿತ್ರ=ಸಚ್ಚರಿತ್ರೆಗಳ, ವಿಭೂತಯಃ=ಮಹಿಮೆಗಳು, ನಿಸ್ಸೀಮಾನಃ=ಅಪಾರವಾದವುಗಳು, ಅಹಹ=ಆಶ್ಚರ್ಯವು. ಇಲ್ಲಿ ಮಾಲಾದೀಪಕಾಲಂಕಾರವು, ಹರಿಣೀವೃತ್ತವು ... ... ॥೨೮॥

ತಾ॥ ಸರ್ಪರಾಜನಾದ ಶೇಷನು ಚತುರ್ದಶ ಭುವನವನ್ನು ತನ್ನ ಸಹಸ್ರ ಫಣಗಳಿಂದ ಧರಿಸಿದ್ದಾನೆ. ಆದಿಕೂರ್ಮನು ತನ್ನ ಬೆನ್ನಿನಿಂದ ಆ ಶೇಷನನ್ನು ಹೊತ್ತಿರುವನು. ಆ ಕೂರ್ಮನನ್ನು ಮಹಾಸಮುದ್ರನು ಆದಿ ವರಾಹನ ಕೋರೆದಾಡೆಯ ಸ್ವಾಧೀನವನ್ನಾಗಿ ಮಾಡಿರುವನು. ಆದ್ದರಿಂದ ಮಾನ ಶೌರ್ಯಶಾಲಿಗಳ ಅಸಾಧ್ಯ ವ್ಯಾಪಾರಗಳು ಅತಿ ಶ್ಲಾಘ್ಯವಾಗಿಯೂ, ಅತ್ಯಾಶ್ಚರ್ಯಕರಂಗಳಾಗಿಯೂ, ಅಪಾರಗಳಾಗಿಯೂ ಇರುವವು. ॥೨೮॥

ಶ್ಲೋ॥ ವರಂಪ್ರಾಣೋಚ್ಛೇದಸ್ಸಮದಮಘವನ್ಮುಕ್ತಕುಲಿಶಪ್ರಹಾರೈ
ರುದ್ಗಚ್ಛದ್ಬಹುಳದಹನೋದ್ಗಾರಗುರುಭಿಃ॥ ತುಷಾರಾದ್ರೇಸ್ಸೂ
ನೋರಹಹಪಿತರಿಕ್ಲೇಶವಿವಶೇ ನಚಾಸೌಸಂಪಾತಃಪಯಸಿಪಯ
ಸಾಂಪತ್ಯುರುಚಿತಃ .... .... ॥೨೯॥

ಟೀ॥ ಹಿಂದೆ ಹೇಳಲ್ಪಟ್ಟಮಹತ್ವವು ಮಾನ ಶೌರ್ಯ ಸಂಪನ್ನನಿಗೇ ಹೊರತು ತದಿತರನಿಗುಂಟಾಗಲಾರದೆಂದು ಮೈನಾಕನನ್ನು ದೃಷ್ಟಾಂತವಾಗಿ ಹೇಳುತ್ತಾನೆ.— ತುಷಾರಾದ್ರೇಃ=ಹಿಮವತ್ಪರ್ವತದ, ಸೂನೋಃ=ಮಗನಾದ ಮೈನಾಕನಿಗೆ, ಉದ್ಗಚ್ಛದ್ಬಹುಳದಹನೋದ್ಗಾರಗುರುಭಿಃ—ಉದ್ಗಚ್ಛತ್=ಮೇಲಕ್ಕೆ ಹೊರಡುತ್ತಿರುವ, ಬಹುಳ=ಅಧಿಕವಾದ, ದಹನ=ಬೆಂಕಿಯು, ಉದ್ಗಾರ=ವಮನಗಳಿಂದ, ಗುರುಭಿಃ=ದುಸ್ಸಹಗಳಾದ, ಸಮದಮಘವನ್ಮುಕ್ತಕುಲಿಶಪ್ರಹಾರೈಃ—ಸಮದ=ಮದದಿಂದೊಡಗೂಡಿದ, ಮಘವತ್=ದೇವೇಂದ್ರನಿಂದ, ಮುಕ್ತ=ಬಿಡಲ್ಪಟ್ಟ, ಕುಲಿಶ=ವಜ್ರಾಯುಧದ, ಪ್ರಹಾರೈಃ=ಹೊಡೆತಗಳಿಂದ, ಪ್ರಾಣೋಚ್ಛೇದಃ=ಮರಣವು, ವರಂ=ಉತ್ತಮವು. ಪಿತರಿ=ತಂದೆಯಾದ ಹಿಮವಂತನು, ಕ್ಲೇಶವಿವಶೇ—ಕ್ಲೇಶ=ಸಂತಾಪದಿಂದ, ವಿವಶೇ=ಪರವಶನಾಗುತ್ತಿರಲಾಗಿ, ಅಸೌ=ಈ ಪ್ರತ್ಯಕ್ಷವಾಗಿರುವ, ಪಯಸಾಂಪತ್ಯುಃ=ಸಮುದ್ರನ. ಪಯಸಿ=ಉದಕದಲ್ಲಿ, ಸಂಪಾತಃ=ಪ್ರವೇಶವು, ನೋಚಿತಶ್ಚ=ನ್ಯಾಯವಲ್ಲವು ... ... ... ॥೨೯॥

ತಾ॥ ಅತಿ ಕ್ರೂರನಾದ ದೇವೇಂದ್ರನಿಂದ ಬಿಡಲ್ಪಟ್ಟ ವಜ್ರಾಯುಧದ ಭಯಂಕರವಾದ ಪ್ರಹಾರಗಳಿಂದ ತನ್ನ ತಂದೆಯಾದ ಹಿಮವಂತನು ಅತ್ಯಂತ ದುಃಖಿತನಾಗಿರುವಲ್ಲಿ ಅಂಥಾ ಪ್ರಹಾರಗಳಿಂದ ತಾನೂ ಪ್ರಾಣವಂ ಬಿಡುವದು ಲೇಸಲ್ಲದೆ ಕೇವಲ ತನ್ನ ಪ್ರಾಣವನ್ನು ಮಾತ್ರ ಉಳಿಸಿಕೊಳ್ಳುವದಕ್ಕೋಸ್ಕರ ಸಮುದ್ರದಲ್ಲಿ ಪ್ರವೇಶಿಸಿ ತಲೆ ಮರಸಿಕೊಳ್ಳುವದು ಈ ಮೈನಾಕಪರ್ವತಕ್ಕೆ ಉಚಿತವೆ? ಶೌರ್ಯವಂತನಿಗೆ ಇದು ಸರ್ವಥಾ ಅಯೋಗ್ಯವೆಂದು ಭಾವವು. .... .... ॥೨೯॥

ಶ್ಲೋ॥ ಯದಚೇತನೋಪಿಪಾದೈಸ್ಸ್ಪೃಷ್ಟಃಪ್ರಜ್ವಲತಿಸವಿತುರಿನಕಾಂ
ತಃ॥ ತತ್ತೇಜಸ್ವೀಪುರುಷಃಪರಕೃತನಿಕೃತಿಂಕಥಂಸಹತೇ॥೩೦॥

ಟೀ॥ ಮಾನವಂತರು ಪರರಿಂದ ಮಾಡಲ್ಪಟ್ಟ ಅಪಮಾನವನ್ನು ಲೇಶಮಾತ್ರವೂ ಸಹಿಸರೆಂಬರ್ಥವನ್ನು ದೃಷ್ಟಾಂತದೊಂದಿಗೆ ಹೇಳುತ್ತಾನೆ. ಯತ್=ಯಾವಕಾರಣದ ದೆಸೆಯಿಂದ, ಅಚೇತನಃ=ಚೇತನ ಶೂನ್ಯವಾದ, ಅಥವಾ ನಿರ್ಜೀವವಾದ, ಇನಕಾಂತಃ=ಸೂರ್ಯಕಾಂತಮಣಿಯು, ಸವಿತುಃ=ಸೂರ್ಯನ, ಪಾದೈಃ=

ಪಾದಗಳಿಂದ, (ಕಿರಣಗಳಿಂದ) ಸ್ಪೃಷ್ಟಃ=ಮುಟ್ಟಲ್ಪಟ್ಟದ್ದಾಗಿ, (ಒಬೆಯಲ್ಪಟ್ಟದ್ದಾಗಿ) ಪ್ರಜ್ವಲತಿ=ಜ್ವಲಿಸುವದೋ, (ಕೋಪಯುಕ್ತವಾಗುವದೋ) ತತ್=ಆ ಕಾರಣದದೆಸೆಯಿಂದ, ತೇಜಸ್ವೀಪುರುಷಃ=ತೇಜಶ್ಶಾಲಿಯಾದವನು ಅಂದರೆ ಮಾನ ಶೌರ್ಯ ಸಂಪನ್ನನಾದ ಪುರುಷನು, ಪರಕೃತನಿಕೃತಿಂ—ಪರ=ಶತ್ರುಗಳಿಂದ, ಕೃತ=ಮಾಡಲ್ಪಟ್ಟ, ನಿಕೃತಿಂ=ತಿರಸ್ಕಾರವನ್ನು, ಕಥಂಸಹತೆ=ಹೇಗೆಸಹಿಸುವನು? ಇದು ಆರ್ಯಾವೃತ್ತದಲ್ಲಿ ಭೇದವು. .... ... ||೩೦||

ತಾ|| ಅಚೇತನವಾಗಿರುವ ಸೂರ್ಯಕಾಂತ ಮಣಿಯೂ ಕೂಡ ಸೂರ್ಯ ಕಿರಣಗಳಿಂದ ಮುಟ್ಟಲ್ಪಟ್ಟದ್ದಾಗಿ ಕ್ಷಣಮಾತ್ರದಲ್ಲಿ ಪ್ರಜ್ವಲಿಸುವದು. ಹೀಗಿರುವಲ್ಲಿ ಚೇತನನಾಗಿ ಮಾನಶೌರ್ಯಶಾಲಿಯಾದ ಪುರುಷನು ಪರರಿಂದ ಮಾಡಲ್ಪಟ್ಟ ತಿರಸ್ಕಾರವನ್ನು ಸಹಿಸುವನೆ? ಸರ್ವಥಾ ಸಹಿಸಲಾರನೆಂದು ಭಾವವು. .... .... .... ||೩೦||

ಶ್ಲೋ|| ಸಿಂಹಶ್ಶಿಶುರಪಿನಿಪತತಿಮದಮಲಿನ ಕಪೋಲಭಿತ್ತಿಷುಗಜೇಷು ||
ಪ್ರಕೃತಿರಿಯಂಸತ್ವವತಾಂನಖಲುವಯಸ್ತೇಜಸೋಂಹೇತುಃ ||೩೧||

ಟೀ|| ವಿಕ್ರಮಿಸುವದರಲ್ಲಿ ವಯಸ್ಸು ಕಾರಣವಲ್ಲವೆಂದು ಹೇಳುತ್ತಾನೆ—ಶಿಶುರಪಿ=ಎಳೆಯಮರಿಯಾದರೂ, ಸಿಂಹಃ=ಸಿಂಹವು, ಮದಮಲಿನಕಪೋಲಭಿತ್ತಿಷು—ಮದ=ಮದೋದಕದಿಂದ, ಮಲಿನ=ಮಾಸಿದ, ಕಪೋಲಭಿತ್ತಿಷು=ಗೋಡೆಯೋಪಾದಿಯಲ್ಲಿರುವ ಕಪೋಲ ಪ್ರದೇಶಗಳುಳ್ಳ, ಗಜೇಷು=ಆನೆಗಳಲ್ಲಿ, ನಿಪತತಿ=ಬೀಳುವದು, ಇಯಂ=ಈ ಬಾಲ್ಯದಲ್ಲಿಯೂ ವಿಕ್ರಮಿಸುವಿಕೆಯು, ಸತ್ವವತಾಂ=ಬಲಾಢ್ಯರಿಗೆ, ಪ್ರಕೃತಿಃ=ಸ್ವಭಾವವು, ತೇಜಸಾಂ=ಪ್ರತಾಪಗಳಿಗೆ, ವಯಃ=ವಯಸ್ಸು, ನಹೇತುಃ=ಕಾರಣವಲ್ಲವು. ... ... ... ||೩೧||

ತಾ|| ಸಿಂಹವು ಚಿಕ್ಕ ಮರಿಯಾದರೂ ಮದದಾನೆಯ ಕುಂಭಸ್ಥಳವನ್ನು ಬಗೆಯಲು ಆನೆಯಮೇಲೆ ಬೀಳುವದು. ಆದ್ದರಿಂದ ಪ್ರಪಂಚದಲ್ಲಿ ಈಮೇರೆಗೆ ಪರಾಕ್ರಮಿಸುವಿಕೆಯು ಶೌರ್ಯವಂತರಿಗೆ ಸ್ವಭಾವ ಸಿದ್ಧವಾದ ಗುಣವೇಹೊರತು ವಯಸ್ಸಿನಿಂದುಂಟಾಗತಕ್ಕದ್ದಲ್ಲವೆಂದು ಭಾವವು.

## ಅರ್ಥಪದ್ಧತಿ ಪ್ರಾರಂಭವು.

ಶ್ಲೋ|| ಜಾತಿರ್ಯಾತುರಸಾತಲಂ ಗುಣಗಣಸ್ತತ್ರಾಪ್ಯಧೋಗಚ್ಛತಾಂ ಶೀಲಂಶೈಲತಟಾತ್ಪತತ್ವಭಿಜನಸ್ಸಂದಹ್ಯತಾಂವಹ್ನಿನಾ || ಶೌರ್ಯೇ

ವೈರಿಣಿವಜ್ರಮಾಶುನಿಪತತ್ವರ್ಥೋಸ್ತುನಃಕೇವಲಂಯೇನೈಕೇನ
ವಿನಾಗುಣಾಸ್ತೃಣಲವಪ್ರಾಯಾಸ್ಸಮಸ್ತಾ ಇಮೇ ॥೩೨॥

ಟೀ॥ ಮಾನಶೌರ್ಯಗಳಿಗೂ ಅರ್ಥವು ಮೂಲವಾದ್ದರಿಂದ ಅರ್ಥಪದ್ಧತಿಯನ್ನು, ನಿರೂಪಿಸುತ್ತಾನೆ. ಜಾತಿಃ=ಬ್ರಾಹ್ಮಣತ್ವ, ಕ್ಷತ್ರಿಯತ್ವ ಮೊದಲಾದ ಜಾತಿಯು, ರಸಾತಲಂ=ಅಧೋಲೋಕವನ್ನು ಕುರಿತು, ಯಾತು=ಹೋಗಲಿ, ಗುಣಗಣಃ=ಧೈರ್ಯ ಔದಾರ್ಯ ಗಾಂಭೀರ್ಯ ಮೊದಲಾದ ಗುಣಗಳ ಸಮೂಹವು, ತತ್ರಾಪಿ=ಆ ರಸಾತಲಕ್ಕಿಂತಲೂ, ಅಧಃ=ಕೆಳಗಿನ ಲೋಕವನ್ನು, ಗಚ್ಛತಾಂ=ಹೋಗಲೀ ಶೀಲಂ=ಒಳ್ಳೇ ಸ್ವಭಾವವು ಅಥವಾ ಆಚಾರವು. ಶೈಲತಟಾತ್=ಪರ್ವತದ ಮೇಲಿನಿಂದ, ನಿಪತತು=ಬೀಳಲಿ, ಅಭಿಜನಃ=ವಂಶವು, ವಹ್ನಿನಾ=ಬೆಂಕಿಯಿಂದ, ಸಂದಹ್ಯತಾಂ=ದಹಿಸಲ್ಪಡಲಿ, ವೈರಿಣಿ=ಶತ್ರುವಾದ, ಶೌರ್ಯೆ=ಪರಾಕ್ರಮದಲ್ಲಿ, ಆಶು=ಶೀಘ್ರವಾಗಿ, ವಜ್ರಂ=ವಜ್ರಾಯುಧವು, ನಿಪತತು=ಬೀಳಲಿ, ನಃ=ನಮ್ಮಗಳಿಗೆ ಅರ್ಥಃ ಕೇವಲಂ=ಧನಮಾತ್ರ, ಅಸ್ತು=ಇರಲಿ, ಏಕೇನ=ಮುಖ್ಯವಾದ, ಯೇನವಿನಾ=ಯಾವ ಧನವಿಂದ ವಿನಾಯಿಸಿ, ಇಮೇಗುಣಾಃ=ಈ ಹಿಂದೆಹೇಳಿದ ಜಾತಿ, ಗುಣ, ಶೀಲ, ವಂಶ, ಶೌರ್ಯಗಳೆಂಬ ಗುಣಗಳು, ತೃಣಲವಪ್ರಾಯಾಃ—ತೃಣ=ಹುಲ್ಲಿನ, ಲವ=ಲೇಶದೊಡನೆ, ಪ್ರಾಯಾಃ=ಸಮಾನಗಳಾದವು. ಶಾರ್ದೂಲ ವಿಕ್ರೀಡಿತ ವೃತ್ತವು. .... .... .... .... ॥೩೨॥

ತಾ॥ ಜಾತಿಭ್ರಷ್ಟನಾದಾಗ್ಯೂ ಶೌರ್ಯ, ಔದಾರ್ಯ, ಮೊದಲಾದ ಯಾವ ಗುಣಗಳಿಲ್ಲದಿದ್ದಾಗ್ಯೂ, ಆಚಾರ ತಪ್ಪಿಹೋದರೂ, ವಂಶವು ಹಾಳಾಗಿ ಹೋದರೂ, ಶತ್ರುಕೈ ಬೆಂಕಿಬಿದ್ದು ಸುಟ್ಟುಹೋದಾಗ್ಯೂ, ಮುಖ್ಯವಾಗಿ ಧನವನ್ನು ಮಾತ್ರ ಸಂಪಾದಿಸಿರಬೇಕು. ಆಧನಬಂದಿಲ್ಲದೆ ಇನ್ನಾವ ಸದ್ಗುಣಗಳಿದ್ದಾಗ್ಯೂ ಈಗುಣಗಳೆಲ್ಲಾ ತೃಣಕಣಪ್ರಾಯಗಳು ಆದ್ದರಿಂದ ಸರ್ವದಾ ದ್ರವ್ಯಾರ್ಜನೆ ಮಾಡಬೇಕೆಂದು ಅರ್ಥಾಭಿಲಾಷಿಗಳ ಆಶಯವು. ॥೩೨॥

ಶ್ಲೋ॥ ಯಸ್ಯಾಸ್ತಿವಿತ್ತಂಸನರಃಕುಲೀನಸ್ಸಪಂಡಿತಸ್ಸಶ್ರುತವಾನ್‌ಗುಣ
ಜ್ಞಃ ॥ ಸಏವವಕ್ತಾಸಚದರ್ಶನೀಯಸ್ಸರ್ವೇಗುಣಾಃಕಾಂಚನ
ಮಾಶ್ರಯಂತೇ ॥ .... .... ॥೩೩॥

ಟೀ॥ ಗುಣವಿಲ್ಲದಿದ್ದರೂ ಅರ್ಥವಂತನಿಗೆ ಮಹಿಮೆಯೆಂಬರ್ಥವಂ ಹೇಳುತ್ತಾನೆ, ಯಸ್ಯ=ಯಾವ ಪುರುಷನಿಗೆ, ವಿತ್ತಂ=ಧನವು, ಅಸ್ತಿ=ಇರುವದೋ, ಸಃ ನರಃ=ಆ ಮನುಷ್ಯನು, ಕುಲೀನಃ=ಮಹಾಕುಲ ಪ್ರಸೂತನು, ಸಏವ=ಆ ಪುರುಷನೇ, ಪಂಡಿತಃ=ವಿದ್ವಾಂಸನು, ಸಏವ=ಅವನೇ, ಶ್ರುತವಾನ್=ಶಾಸ್ತ್ರಜ್ಞನು,

ಅಥವಾ ಧರ್ಮಶಾಸ್ತ್ರ ಮೊದಲಾದವುಗಳನ್ನು ಕೇಳುವದರಲ್ಲಿ ಚತುರನಾದವನು, ಸಏವ=ಆ ಮನುಜನೇ, ಗುಣಜ್ಞಃ=ಗುಣಗ್ರಾಹಿಯು, ಸಏವ=ಆ ಮಾನವನೇ, ವಕ್ತಾ ಚ=ವಾಗ್ಮಿಯು, ಸಏವ=ಆತನೇ, ದರ್ಶನೀಯಶ್ಚ=ಸುಂದರನಾದವನು, ಸರ್ವೇ=ಸಮಸ್ತವಾದ, ಗುಣಾಃ=ಪೂರ್ವೋಕ್ತವಾದ ಗುಣಗಳೆಲ್ಲವೂ, ಕಾಂಚನಂ=ಧನವನ್ನು, ಆಶ್ರಯಂತೇ=ಆಶ್ರಯಿಸಿಕೊಂಡಿರುವವು. ಅತಿಶಯೋಕ್ತ್ಯಲಂಕಾರವು, ಉಪಜಾತಿ ವೃತ್ತವು. ... ... ... ||೪೩||

ತಾ|| ಯಾವನು ಧನವಂತನೋ ಆತನೇ ಸತ್ಕುಲದಲ್ಲಿ ಹುಟ್ಟಿದವನೂ, ವಿದ್ವಾಂಸನೂ, ಸಕಲ ಧರ್ಮಗಳನ್ನು ಕೇಳುವದರಲ್ಲಿ ಕುಶಲನಾದವನೂ, ವಾಚಾಲಕನೂ, ಗುಣಗ್ರಾಹಿಯೂ, ದಿವ್ಯಸುಂದರನೂ ಆಗುವನು. ಹೇಗೆಂದರೆ, ಲೋಕದೊಳು ಎಲ್ಲಾ ಗುಣಗಳು ದ್ರವ್ಯವನ್ನಾಶ್ರಯಿಸಿರುವದರಿಂದ ಅಂಥ ದ್ರವ್ಯವುಳ್ಳವನಾದೊಡೆ ಸಕಲ ಗುಣಾಢ್ಯನೂ ಆಗುವನೆಂದು ಭಾವವು. .... .... .... ||೪೩||

ಶ್ಲೋ || ದೌರ್ಮಂತ್ರ್ಯಾನ್ನೃಪತಿರ್ವಿನಶ್ಯತಿಯತಿಸ್ಸಂಗಾತ್ಸುತೋಲಾಲನಾ
ದ್ವಿಪ್ರೋಽನಧ್ಯಯನಾತ್ಕುಲಂಕುತನಯಾಚ್ಛೀಲಂಖಲೋಪಾಸ
ನಾತ್ || ಹ್ರೀರ್ಮದ್ಯಾದನವೇಕ್ಷಣಾದಪಿಕೃಷಿಸ್ಸ್ನೇಹಃಪ್ರವಾ
ಸಾಶ್ರಯಾನ್ಮೈತ್ರೀಚಾಪ್ರಣಯಾತ್ಸಮೃದ್ಧಿರನಯಾತ್ತ್ಯಾಗಾ
ತ್ಪ್ರಮಾದಾದ್ಧನಂ || .... .... ||೪೪||

ಟೀ|| ಈ ಮುಂದೆ ಎರಡು ಶ್ಲೋಕಗಳಿಂದ ದ್ರವ್ಯ ಗುಣ ನಾಶವಾಗತಕ್ಕ ರೀತಿಯನ್ನು ಹೇಳುತ್ತಾನೆ. ನೃಪತಿಃ=ಅರಸನು, ದೌರ್ಮಂತ್ರ್ಯಾತ್=ದುರಾಲೋಚನೆಯ ದೆಸೆಯಿಂದ ಅಥವಾ ದುರ್ಮಂತ್ರಿಗಳುಳ್ಳೋಣದರ ದೆಸೆಯಿಂದ, ನಶ್ಯತಿ=ನಾಶವಾಗುತ್ತಾನೆ. ಯತಿಃ=ಯೋಗಿಯು. ಸಂಗಾತ್=ಸಮಾಗಮದ್ದೆಶೆಯಿಂದ ಅಥವಾ ಕಾಮ ಕ್ರೋಧ ಮೊದಲಾದವುಗಳ ಸಂಬಂಧದ ದೆಶೆಯಿಂದ. ನಶ್ಯತಿ=ನಾಶವಾಗುತ್ತಾನೆ, ಸುತಃ=ಮಗನು, ಲಾಲನಾತ್=ಲಾಲಿಸುವದರ ದೆಶೆಯಿಂದ, ನಶ್ಯತಿ=ನಾಶವಾಗುತ್ತಾನೆ, ವಿಪ್ರಃ=ಬ್ರಾಹ್ಮಣನು, ಅನಧ್ಯಯನಾತ್=ವೇದಶಾಸ್ತ್ರಗಳನ್ನು ಓದದಿರುವದರ ದೆಶೆಯಿಂದ, ನಶ್ಯತಿ=ನಾಶವಾಗುತ್ತಾನೆ. ಕುಲಂ=ಸದ್ವಂಶವು, ಕುತನಯಾತ್=ನೀಚನಾದ ಮಗನ ದೆಶೆಯಿಂದ, ನಶ್ಯತಿ=ನಾಶವಾಗುವದು, ಶೀಲಂ=ಒಳ್ಳೇ ಸ್ವಭಾವವು ಅಥವಾ ಸದಾಚಾರವು, ಖಲೋಪಾಸನಾತ್=ದುರ್ಜನ ಸಹವಾಸದದೆಶೆಯಿಂದ, ನಶ್ಯತಿ=ನಷ್ಟವಾಗುವದು, ಹ್ರೀಃ=ಅಸತ್ಕಾರ್ಯದಲ್ಲಿ ಪ್ರವರ್ತಿಸದೇ ಇರುವ ಲಜ್ಜೆಯು, ಮದ್ಯಾತ್=ಸುರಾಪಾನ ಮಾಡುವದರ ದೆಶೆಯಿಂದ, ನಶ್ಯತಿ=ನಾಶವಾಗುವದು, ಕೃಷಿಃ=ಸಸ್ಯವು ಎಂದರೆ ಬೆಳೆಯು, ಅನವೇಕ್ಷಣಾತ್=

ಉಪೇಕ್ಷೆಮಾಡುವದರ ದೆಸೆಯಿಂದ ಅಥವಾ ಅನಪೇಕ್ಷಣಾತ್=ಆಯಾಯ ಕಾಲದಲ್ಲಿ ಬೇಸಾಯ ಮಾಡದಿರುವದರ ದೆಸೆಯಿಂದ, ನಶ್ಯತಿ=ನಷ್ಟವಾಗುವದು, ಸ್ನೇಹಃ= ಹೆಂಡತಿ ಮಕ್ಕಳಲ್ಲಿ ಉಂಟಾಗಿರುವ ಮೋಹವು, ಪ್ರವಾಸಾಶ್ರಯಾತ್=ದೇಶಾಂತರವನ್ನಾಶ್ರಯಿಸುವದರ ದೆಸೆಯಿಂದ, ನಶ್ಯತಿ=ನಾಶವಾಗುವದು, ಮೈತ್ರೀ=ಮಿತ್ರಭಾವವು, ಅಪ್ರಣಯಾತ್=ಅನುರಾಗವಿಲ್ಲದಿರುವದರ ದೆಸೆಯಿಂದ, ನಶ್ಯತಿ=ನಷ್ಟವಾಗುವದು, ಸಮೃದ್ಧಿಃ=ಸಂಪತ್ತು, ಅನಯಾತ್=ನಯವಿಲ್ಲದಿರುವದರ ದೆಸೆಯಿಂದ, ನಶ್ಯತಿ=ನಾಶವಾಗುವದು, ಧನಂ=ದ್ರವ್ಯವು, ತ್ಯಾಗಾತ್=ಯಾಚಕರಿಗೆ ದಾನ ಮಾಡುವದರ ದೆಸೆಯಿಂದಲೂ, ಪ್ರಮಾದಾತ್=ಎಚ್ಚರಿಕೆ ಇಲ್ಲದಿರುವದರ ದೆಸೆಯಿಂದಲೂ, ನಶ್ಯತಿ=ನಾಶವಾಗುವದು ... ... ||೩೪||

ತಾ|| ದುಷ್ಟ ಮಂತ್ರಿಯಿಂದಲೂ, ದುರಾಚಾರದಿಂದಲೂ, ರಾಜನು ಕೆಡುವನು. ಸ್ವಚ್ಛಂದನ ವನಿತಾದಿ ವಿಷಯಾಭಿಲಾಷೆಯಿಂದ ಸನ್ಯಾಸಿಯು ಕೆಡುವನು. ಲಾಲಿಸುವದರಿಂದ ಪುತ್ರನು ಕೆಡುವನು. ವೇದವೇದಾಂಗಾದಿ ಶಾಸ್ತ್ರಾಭ್ಯಾಸ ಮಾಡದಿರುವದರಿಂದ ಬ್ರಾಹ್ಮಣನು ಕೆಡುವನು. ದುಷ್ಟ ಮಗನಿಂದ ಕುಲವು ಕೆಡುವದು. ನೀಚರ ಸಹವಾಸದಿಂದ ಸದಾಚಾರವು ನಷ್ಟವಾಗುವದು. ದುಷ್ಟಕಾರ್ಯದಲ್ಲಿ ಪ್ರವರ್ತಿಸದೆ ಹಿಂದೆಗೆಯುವ ಲಜ್ಜೆಯು ಮದ್ಯಪಾನ ಮಾಡುವದರಿಂದ ಕೆಡುವದು. ಆಯಾಯ ಕಾಲದೊಳು ತಕ್ಕ ಬೇಸಾಯ ಮಾಡದಿರುವದರಿಂದ ಬೆಳೆಯು ಕೆಡುವದು. ದಾರಾಪುತ್ರಾದಿಗಳಲ್ಲಿ ಉಂಟಾಗಿರುವ ಮೋಹವು ದೇಶಾಂತರದಲ್ಲಿ ವಾಸ ಮಾಡುವದರಿಂದ ಹೋಗುವದು. ಪರಸ್ಪರ ಅನುರಾಗವಿಲ್ಲದ್ದರಿಂದ ಮಿತ್ರತ್ವವು ಕೆಡುವದು. ದಾನದಿಂದಲೂ ಪ್ರಮಾದದಿಂದಲೂ ಧನವು ನಾಶವಾಗುವದೆಂದು ಭಾವವು. .... .... ||೩೪||

ಶ್ಲೋ|| ದಾನಂಭೋಗೋನಾಶಸ್ತಿಸ್ರೋಗತಯೋಭವಂತಿವಿತ್ತಸ್ಯ ||
ಯೋನದದಾತಿನಭುಙ್ತೇತಸ್ಯತೃತೀಯಾಗತಿರ್ಭವತಿ ||೩೫||

ಟೀ|| ದ್ರವ್ಯನಾಶಕ್ಕೆ ಉತ್ತಮ ಮಧ್ಯಮ ಮೊದಲಾದ ಮಾರ್ಗಗಳನ್ನು ತಿಳಿಸುತ್ತಾನೆ—ದಾನಂ=ಸತ್ಪಾತ್ರದಲ್ಲಿ ಕೊಡುವಿಕೆಯು, ಭೋಗಃ=ಸ್ವಚ್ಛಂದನ ವನಿತಾದಿ ಸುಖಾನುಭವವು, ನಾಶಃ=ಚೋರಾದಿಗಳಿಂದ ಲಯವು ಎಂದು, ವಿತ್ತಸ್ಯ= ದ್ರವ್ಯಕ್ಕೆ, ತಿಸ್ರಃ=ಮೂರಾದ, ಗತಯಃ=ಗಮನಗಳು ಅಥವಾ ಮಾರ್ಗಗಳು, ಯಃ=ಯಾವ ಪುರುಷನು, ನದದಾತಿ=ದಾನ ಮಾಡುವದಿಲ್ಲವೋ, ನಭುಂಕ್ತೇ= ಭೋಜನ ಮಾಡುವದಿಲ್ಲವೋ, ತಸ್ಯ=ಅಂಥವನ ವಿತ್ತಕ್ಕೆ, ತೃತೀಯಾಗತಿಃ=

ಮೂರನೆಯದಾದ ಮಾರ್ಗವು—ಭವತಿ=ಉಂಟಾಗುವದು, ವೃತ್ತವು ಆರ್ಯಾದಲ್ಲಿ ಭೇದವು. ... .... ... ॥೩೫॥

ತಾ॥ ಲೋಕದಲ್ಲಿ ದ್ರವ್ಯವು ನಾಶವಾಗುವದಕ್ಕೆ ಸತ್ಪಾತ್ರದಲ್ಲಿ ದಾನ ಮಾಡುವಿಕೆಯೆಂತಲೂ, ಸುಖಪಡುವಿಕೆಯೆಂತಲೂ, ಕಳ್ಳರು ಮೊದಲಾದವರಿಂದ ನಾಶವಾಗುವಿಕೆಯೆಂತಲೂ, ಮೂರು ಮಾರ್ಗಗಳಿರುವವು. ಆದರೆ ಯಾವನು ಆ ದ್ರವ್ಯವನ್ನು ಉಂಡು, ಎರಡನೆಯ ಮಾರ್ಗದಲ್ಲಿ ವ್ಯಯ ಮಾಡದಿರುವನೋ ಅಂಥಾವನ ಧನಕ್ಕೆ ಮೂರನೇ ಮಾರ್ಗವು ಸ್ವತಃ ಉಂಟಾಗುವದಾಗಿ ಬುದ್ಧಿಶಾಲಿಯಾದವನು ದಾತನಾಗಿರಬೇಕೆಂದು ಭಾವವು.॥೩೫॥

ಶ್ಲೋ॥ ಮಣಿಶ್ಶಾಣೋಲ್ಲೀಢಸ್ಸಮರವಿಜಯೀಹೇತಿದಳಿತೋಮದಕ್ಷೀ
ಣೋನಾಗಶ್ಶರದಿಸರಿದಾಶ್ಯಾನಪುಲಿನಾ ॥ ಕಳಾಶೇಷಶ್ಚಂದ್ರಃತಪ
ಸಿನಿರತಾಬಾಲವನಿತಾ ತನಿಮ್ನಾಶೋಭಂತೆಗಳಿತವಿಭವಾಶ್ಚಾರ್ಥಿ
ಷುನರಾಃ ॥ .... .... .... ॥೩೬॥

ಟೀ॥ ದಾನಶೀಲನಾದವನಿಗೆ ಬಡತನ ಬಂದಾಗ್ಯೂ ಅಲಂಕಾರವಾಗಿಯೇ ಇರುವದೆಂದು ಹೇಳುತ್ತಾನೆ—ಶಾಣೋದಲ್ಲೀಢಃ—ಶಾಣ=ಸಾಣೆಕಲ್ಲಿನಿಂದ, ಉಲ್ಲೀಢಃ=ಸಾಣೆ ಹಿಡಿಯಲ್ಪಟ್ಟ, ಮಣಿಃ=ರತ್ನವು, ಹೇತಿದಳಿತಃ—ಹೇತಿ=ಖಡ್ಗದಿಂದ, ದಳಿತಃ ಗಾಯಹೊಂದಲ್ಪಟ್ಟ, ಸಮರವಿಜಯೀ=ರಣಶೂರನು, ಮದಕ್ಷೀಣಃ=ಮದ—ಮದೋದಕದಿಂದ, ಕ್ಷೀಣಃ=ಕೃಶವಾದ, ನಾಗಃ=ಆನೆಯು,ಶರದಿ=ಶರತ್ಕಾಲದೊಳು ಆಶ್ಯಾನಪುಲಿನಾ—ಆಶ್ಯಾನ=ಸ್ವಲ್ಪ ಬಣಗಿದ, ಪುಲಿನಾ=ಮರಳುದಿಣ್ಣೆಗಳುಳ್ಳ ಸರಿತ್=ನದಿಯು. ಕಳಾಶೇಷಃ—ಕಳಾ=ಹದಿನಾರರಲ್ಲಿ ಒಂದು ಭಾಗವಾದ ಕಳೆಯೆ, ಶೇಷಃ=ಉಳಿದಿರುವ, ಚಂದ್ರಃ=ಇಂದುವು, ತಪಸಿ—ತಪಸ್ಸಿನಲ್ಲಿ ....ನಿರತಾ=ಆಸಕ್ತಳಾದ, ಬಾಲವನಿತಾ=ಮುಗ್ಧಾಂಗನೆಯು, ಅರ್ಥಿಷು=ಯಾಚಕರ ವಿಷಯದಲ್ಲಿ, ಗಳಿತವಿಭವಾಃ—ಗಳಿತ=ಯಾಚಕರ ಅಧೀನ ಮಾಡಲ್ಪಟ್ಟ, ವಿಭವಾಃ=ಸಂಪತ್ತು ಉಳ್ಳವರಾದಾಗ್ಯೂ, ನರಾಶ್ಚ=ಮನುಷ್ಯರೂ, ತನಿಮ್ನಾ=ಸೂಕ್ಷ್ಮಭಾವದಿಂದ, ಶೋಭಂತೇ=ಪ್ರಕಾಶಿಸುವರು, ಇಲ್ಲಿ ದೀಪಕಾಲಂಕಾರವು, ಶಿಖರಿಣೀ ವೃತ್ತವು. ॥೩೬॥

ತಾ॥ ಸಾಣೆ ಹಿಡಿದ ರತ್ನವು, ರಣಶೂರನಾಗಿ ಗಾಯಬಿದ್ದ ವೀರನು, ಮದವನ್ನು ಬಿಟ್ಟ ಆನೆಯು, ಸ್ವಲ್ಪ ಬಣಗಿದ ಮರಳು ದಿಣ್ಣೆಯುಳ್ಳ ನದಿಯು, ಅಗ್ನಿ ಮೊದಲಾದವರಿಂದ ಪಾನ ಮಾಡಲ್ಪಟ್ಟು ಕಳಾಮಾತ್ರ ಶೇಷವಾಗಿರುವ ಚಂದ್ರನು, ತಪಸ್ಸಿನಿಂದ ತಗ್ಗಿದ ಬಾಲೆಯೂ

ಸೂಕ್ಷ್ಮಭಾವದಿಂದ ಹೇಗೆ ಪ್ರಕಾಶಿಸುವರೋ ಹಾಗೆ, ದಾನಶೂರರಾದ ಮನುಷ್ಯರೂ ತಮ್ಮ ವಿಭವವನ್ನೆಲ್ಲಾ ಯಾಚಕರ ಅಧೀನ ಮಾಡಿದಾಗ್ಯೂ ಯಾಚಕರ ವಿಷಯದಲ್ಲಿ ಸ್ವಲ್ಪವಾಗಿ ದಾನಮಾಡುವ ಸ್ವಭಾವದಿಂದ ಪ್ರಕಾಶಿಸುವರೆಂದು ಭಾವವು. .... ... ॥೩೬॥

ಶ್ಲೋ॥ ಪರಿಕ್ಷೀಣಃ ಕಶ್ಚಿತ್ಸ್ಪೃಹಯತಿ ಯವಾನಾಂ ಪ್ರಸೃತಯೇ ಸ ಪಶ್ಚಾ
ತ್ಸಂಪೂರ್ಣಃ ಕಲಯತಿ ಧರಿತ್ರೀಂ ತೃಣಸಮಾಂ ॥ ಅತಶ್ಚಾನೇ
ಕಾಂತಾ ಗುರುಲಘುತಯಾರ್ಥೇಷು ಧನಿನಾಮವಸ್ಥಾ ವಸ್ತೂನಿ ಪ್ರ
ಥಯತಿ ಚ ಸಂಕೋಚಯತಿ ಚ॥ .... .... ॥೩೭॥

ಟೀ॥ ಪುರುಷನಿಗೆ ಧನವಿಲ್ಲದಿರುವ ಕಾಲದ ಅವಸ್ಥೆಯನ್ನೂ ಇರುವ ಕಾಲದ ಅವಸ್ಥೆಯನ್ನೂ ಹೇಳುತ್ತಾನೆ—ಕಶ್ಚಿತ್=ಒಬ್ಬಾನೊಬ್ಬ ಹಣಗಾರನು, ಪರಿಕ್ಷೀಣಃ=ದೈವವಶದಿಂದ ದರಿದ್ರನಾಗಿ, ಯವಾನಾಂ=ಯವಗಳೆಂಬ ಧಾನ್ಯ ವಿಶೇಷಗಳ, ಪ್ರಸೃತಯೇ=ಒಂದು ಸೇರೆಗೋಸ್ಕರ. ಸ್ಪೃಹಯತಿ=ಅಪೇಕ್ಷಿಸುವನು. ಸಃ—ಆ ಪುರುಷನೆ, ಪಶ್ಚಾತ್=ಅನಂತರದಲ್ಲಿ, ಸಂಪೂರ್ಣಃ=ಧನಿಕನಾಗಿ, ಧರಿತ್ರೀಂ=ಭೂಮಿಯನ್ನು, ತೃಣಸಮಾಂ—ತೃಣ=ಹುಲ್ಲಿನೊಡನೆ, ಸಮಾಂ—ಸರಿಯಾದದ್ದನ್ನಾಗಿ, ಕಲಯತಿ=ಎಣಿಸುತ್ತಾನೆ, ಅತಃ=ಆದಕಾರಣದ್ದೆಸೆಯಿಂದ, ಅರ್ಥೇಷು=ಯವೆ-ಭೂಮಿ ಮೊದಲಾದ ವಿಷಯಗಳಲ್ಲಿ, ಗುರುಲಘುತಯಾ=ಮಹತ್ವಾಲ್ಪತ್ವ ಭಾವದಿಂದ ಅನೇಕಾಂತಾ=ಬಹುಪ್ರಕಾರವಾದ, (ನಿಯಮವಿಲ್ಲದ) ಧನಿನಾಂ—ಹಣಗಾರ ಸಂಬಂಧವಾದ, ಅವಸ್ಥಾ=ವ್ಯಾಪಾರವು, (ದೆಸೆಯು) ವಸ್ತೂನಿ=ಯವೆ ಭೂಮಿ ಮೊದಲಾದ ಅಲ್ಪ ಮಹತ್ತರ ವಸ್ತುಗಳನ್ನು ಪ್ರಥಯತಿ ಚ—ಗುರುತ್ವವುಳ್ಳಂಥಾ ವುಗಳನ್ನಾಗಿ ಮಾಡುತ್ತದೆ, ಸಂಕೋಚಯತಿ ಚ=ಸ್ವಲ್ಪವಾದಂಥಾವುಗಳನ್ನಾಗಿಯೂ ಮಾಡುತ್ತದೆ. ಶಿಖರಿಣೀ ವೃತ್ತವು, ವೃತ್ತಲಕ್ಷಣವು ಹಿಂದೆ ಹೇಳಲ್ಪಟ್ಟಿದೆ. ॥೩೭॥

ತಾ॥ ಧನವಂತನಾದ ಒಬ್ಬಾನೊಬ್ಬ ಪುರುಷನು ದೈವವಶದಿಂದ ದರಿದ್ರನಾದವನಾಗಿ ಒಂದು ಸೇರೆ ಯವೆಗಳನ್ನೇ ಗೌರವವಾಗಿ ತಿಳಿದು ಅಷ್ಟುಮಾತ್ರ ದೊರೆತರೆ ಸಾಕೆಂದು ಅದನ್ನೇ ಅಪೇಕ್ಷಿಸುತ್ತಾನೆ. ದರಿದ್ರನಾಗಿದ್ದ ಅದೇ ಪುರುಷನೇ ಕಾಲಾಂತರದೊಳು ದೈವವಶದಿಂದ ಧನಸಂಪನ್ನನಾದಂಥಾವನಾಗಿ, ಧನಮದದಿಂದ ಈ ಭೂಮಿಯನ್ನೆಲ್ಲಾ ತೃಣಸಾಮ್ಯವಾಗಿ ತಿಳಿಯುತ್ತಾನೆ. ಆದಕಾರಣದಿಂದ ಯವೆ ಭೂಮಿ ಮೊದಲಾದ ವಿಷಯಗಳಲ್ಲಿ ಗುರುತ್ವ ಲಘುತ್ವಗಳಿಂದ ಗುರುತ್ವವಾದ ವಸ್ತುವಿನಲ್ಲಿ ಗೌರವವು, ಅಲ್ಪ ಪದಾರ್ಥದಲ್ಲಿ ಲಘುತ್ವವೆಂಬ ನಿಯಮವಿಲ್ಲದ ಭಾವನೆಯು

ಧನಿಕರಸಂಬಂಧವಾದ ವ್ಯಾಪಾರವು. ಎಂದರೆ—ದಾರಿದ್ರ್ಯದೆಶೆಯು ನೀಚವಾದ ವಸ್ತುವನ್ನು ಗೌರವವಾದದ್ದನ್ನಾಗಿ ಮಾಡುತ್ತದೆ. ಐಶ್ವರ್ಯಾವಸ್ಥೆಯು ಮಹತ್ಪದಾರ್ಥವನ್ನು ಕೂಡಾ ಸ್ವಲ್ಪವಾದದ್ದನ್ನಾಗಿ ಮಾಡುತ್ತದೆ. ಈರೀತಿಯಾದ ಧನಿಕನಿರ್ಧನರ ಅವಸ್ಥೆಯು ಲೋಕದೊಳು ಪ್ರತ್ಯಕ್ಷಸಿದ್ಧವಾಗಿರುವದಾದ ಕಾರಣದಿಂದ ವಿವೇಕಿಯಾದವನು ಈ ರೀತಿಯಾಗಿ ವ್ಯತ್ಯಸ್ತಬುದ್ಧಿಯುಳ್ಳವನಾಗಿರಬಾರದೆಂದುಭಾವವು. .... .... ॥೩೭॥

ಶ್ಲೋ॥ ರಾಜನ್‌ದುಧುಕ್ಷಸಿಯದಿಕ್ಷಿತಿಧೇನುಮೇನಾಂತೇನಾದ್ಯ ವತ್ಸಮಿವ
ಲೋಕಮಮುಂಪುಷಾಣ । ತಸ್ಮಿಂಶ್ಚಸಮ್ಯಗನಿಶಂಪರಿಪುಷ್ಯ
ಮಾಣೇನಾನಾಫಲಂಫಲತಿಕಲ್ಪಲತೇವಭೂಮಿಃ॥ .... ॥೩೮॥

ಟೀ॥ ಅನಂತರದಲ್ಲಿ ರಾಜನನ್ನು ಸಂಬೋಧಿಸುವವನಾಗಿ ಅವನಿಗೆ ಅರ್ಥಸಾಧನೋಪಾಯವನ್ನು ಉಪದೇಶಿಸುತ್ತಾನೆ—ಹೇರಾಜನ್=ಓ ರಾಜನೆ, ನೀನು, ಏನಾಂ=ಈ ನಿನ್ನ ಹಸ್ತಗತವಾದ, ಕ್ಷಿತಿಧೇನುಂ=ಆಕಳೋಪಾದಿಯಲ್ಲಿರತಕ್ಕ ಭೂಮಿಯನ್ನು, ದುಧುಕ್ಷಸಿಯದಿ=ಅರ್ಥವನ್ನು ಕರಿಯಲಿಚ್ಛೈಸುವನಾದರೆ, ತೇನ=ಆ ಹಿಂಡುವಿಕೆಯಿಂದ, ಅದ್ಯ=ಈಗ, ಅಮುಂ=ಈ ಉಪಲಭ್ಯಮಾನವಾದ, ಲೋಕಂ=ಜನವನ್ನು, ವತ್ಸಮಿವ=ಕರುವನ್ನೋಪಾದಿಯಲ್ಲಿ, ಪುಷಾಣ=ಪೋಷಣೆ ಮಾಡು, ತಸ್ಮಿಂಶ್ಚ=ಆ ಜನವು, ಅನಿಶಂ=ನಿರಂತರದಲ್ಲಿಯೂ, ಸಮ್ಯಕ್=ಚನ್ನಾಗಿ, ಪರಿಪುಷ್ಯಮಾಣೇಸತಿ=ಪರಿಪಾಲನೆ ಮಾಡಲ್ಪಡುವಂಥಾದ್ದಾಗುತ್ತಿರಲಾಗಿ, ಭೂಮಿಃ=ಕ್ಷಿತಿಯು, ಕಲ್ಪಲತೇವ=ಕಲ್ಪವಲ್ಲಿಯಂತೆ, ನಾನಾಫಲಂ=ಬಹುವಿಧವಾದ ಧನಧಾನ್ಯಾದಿ ರೂಪಫಲವನ್ನು, ಫಲತಿ=ಫಲಿಸುವದು, ಈ ಶ್ಲೋಕದೊಳು ಪೂರ್ವವಾಕ್ಯ ಮತ್ತು ಉತ್ತರವಾಕ್ಯದೊಳಿರುವ ಉಪಮಾಲಂಕಾರಗಳಿಗೆ ಅಂಗಾಂಗಿ ಭಾವದಿಂದ ಸಂಕರವು. ಇದು ವಸಂತತಿಲಕಾ ವೃತ್ತವು.

ತಾ॥ ಎಲೈ ರಾಜನೇ ! ನೀನು ನಿನ್ನ ಹಸ್ತವನ್ನು ಹೊಂದಿರುವ ಪ್ರಜೆಗಳೆಂಬ ವತ್ಸರನ್ನು ಚನ್ನಾಗಿ ಪೋಷಿಸು. ಹಾಗೆ ನೀನು ಲೋಕವನ್ನು ಚನ್ನಾಗಿ ಪಾಲಿಸಿದರೆ ಭೂಮಿಯು ಕಲ್ಪವೃಕ್ಷದೋಪಾದಿಯಲ್ಲಿ ನಾನಾ ಫಲಗಳನ್ನು ಫಲಿಸುವುದು; ಎಂದರೆ ಪ್ರಜೆಗಳನ್ನು ಪಾಲನೆ ಮಾಡಿದೊಡೆ ಭೂಮಿಯು ಚನ್ನಾಗಿ ಬೆಳೆಯುವದೆಂದು ಭಾವವು. ॥೩೮॥

ಶ್ಲೋ॥ ಸತ್ಯಾನೃತಾಚಪರುಷಾಪ್ರಿಯಭಾಷಿಣೀಚಹಿಂಸ್ರಾದಯಾಳುರಪಿ

ಚಾರ್ಥಪರಾವದಾನ್ಯಾ। ನಿತ್ಯವ್ಯಯಾಪ್ರಚುರನಿತ್ಯಧನಾಗಮಾಚ
ವಾರಾಂಗನೇವನೃಪನೀತಿರನೇಕರೂಪಾ .... ॥೪೯॥

ಟೀ॥ ಹಿಂದೆ ರಾಜನನ್ನು ಸಂಬೋಧಿಸಿ ಹೇಳಿದನಾದಕಾರಣ ಆ ರಾಜನೀತಿಯು ಬಹುವಿಧವೆಂಬರ್ಥವನ್ನು ಹೇಳುತ್ತಾನೆ—ಸತ್ಯಾ=ಸತ್ಯವನ್ನು ಹೇಳುವದು ಅನೃತಾಚ=ಅಸತ್ಯವನ್ನು ಪೇಳುವದು, ಪರುಷಾ=ಕಠಿನವಾದ ವಾಕ್ಯನ್ನು ನುಡಿಯುವದು, ಪ್ರಿಯಭಾಷಿಣೀಚ=ಮಧುರವಾದ ವಾಕ್ಯನ್ನು ನುಡಿಯುವುದು ಹಿಂಸ್ರಾ=ಘಾತುಕವಾದ್ದು, ದಯಾಳುರಪಿಚ=ಕರುಣೆಯಿಂದ ಕೂಡಿದ್ದು, ಅರ್ಥಪರಾ=ಧನಲೋಭವುಳ್ಳದ್ದು, ವದಾನ್ಯಾ=ದಾನಸಮರ್ಥವಾದದ್ದು, ನಿತ್ಯ=ಪ್ರತಿದಿನದಲ್ಲಿಯೂ, ವ್ಯಯಾ=ಧನತ್ಯಾಗವುಳ್ಳದ್ದು, ಪ್ರಚುರ=ಅಧಿಕವಾಗಿ, ನಿತ್ಯ=ನಿರಂತರದಲ್ಲಿಯೂ, ಧನ=ದ್ರವ್ಯದ,ಆಗಮಾಚ=ಬರುವಿಕೆ ಯುಳ್ಳದ್ದು, ಪ್ರಾಪ್ತಿಯುಳ್ಳಂಥಾದ್ದು ಆದ್ದರಿಂದ ವಾರಾಂಗನೇವ=ವೇಶ್ಯಸ್ತ್ರೀಯೋಪಾದಿಯಲ್ಲಿ, ನೃಪನೀತಿಃ=ರಾಜವೃತ್ತಿಯು, ಅನೇಕರೂಪಾ=ಬಹುಪ್ರಕಾರವಾದದ್ದು, ವಿರೋಧಾಭಾಸೋಪಮಾಲಂಕಾರಗಳಿಗೆ ಅಂಗಾಂಗಿ ಭಾವದಿಂದ ಸಂಕರವು. ॥೪೯॥

ತಾ॥ ರಾಜನೀತಿಯು ವೇಶ್ಯಸ್ತ್ರೀಯಂತೆ ಒಂದು ವಿಷಯದಲ್ಲಿ, ಯಥಾರ್ಥ ನುಡಿಯುವದಾಗಿಯೂ, ಮತ್ತೊಂದು ವಿಷಯದಲ್ಲಿ ಅಸತ್ಯ ಪೇಳುವದಾಗಿಯೂ, ಇನ್ನೊಂದು ವಿಷಯದಲ್ಲಿ ಕಠೋರವಾಗಿ ಹೇಳುವದಾಗಿಯೂ, ಮತ್ತೊಂದು ಸಮಯದಲ್ಲಿ ಹಿತವಾದ ವಾಕ್ಯನ್ನು ಹೇಳುವದಾಗಿಯೂ, ಬಂದಾನೊಂದು ಕಾಲದೊಳು ಹಿಂಸಿಸುವದಾಗಿಯೂ, ಒಂದು ಸಮಯದಲ್ಲಿ ಕಾರುಣ್ಯವುಳ್ಳದ್ದಾಗಿಯೂ, ಮತ್ತೊಂದು ವಿಷಯದಲ್ಲಿ ಅರ್ಥಾಪಹಾರಕವಾಗಿಯೂ, ಬಂದಾನೊಂದು ವಿಷಯದಲ್ಲಿ ವಿತರಣವುಳ್ಳದ್ದಾಗಿಯೂ, ಪ್ರತಿದಿನದಲ್ಲಿಯೂ ಧನತ್ಯಾಗವುಳ್ಳದ್ದಾಗಿಯೂ, ಮತ್ತೊಂದು ವಿಷಯದಲ್ಲಿ ನಿರಂತರದಲ್ಲಿ ಪ್ರಚುರವಾದ ಧನಪ್ರಾಪ್ತಿವುಳ್ಳದ್ದಾಗಿಯೂ, ಈ ರೀತಿಯಾಗಿ ಅನೇಕ ಪ್ರಕಾರವಾಗಿರುವದೇ ಹೊರತು, ನಿರಂತರದಲ್ಲಿಯೂ ಏಕರೂಪವಾಗಿರುವದಿಲ್ಲವು. ಹೇಗೆಂದರೆ-ವೇಶ್ಯಾಸ್ತ್ರೀಯು ಹೇಗೆ ಒಬ್ಬನಾಯಕನೊಡನೆ ಸತ್ಯವಾದ ವಾಕ್ಯ, ಮತ್ತೊಬ್ಬ ವಿಟನೊಡನೆ ಅಸತ್ಯವಾದ ವಾಕ್ಯ, ತದನುಸಾರವಾಗಿ ನುಡಿಯುವವಳಾಗಿರುವಳೋ ಹಾಗೆಯೇ ರಾಜನೀತಿಯು ಒಂದು ವಿಷಯದಲ್ಲಿ ಸತ್ಯ ನುಡಿಯುವದಾಗಿಯೂ, ಮತ್ತೊಂದು ವಿಷಯದಲ್ಲಿ ಅಸತ್ಯ ಹೇಳುವದಾಗಿಯೂ, ತತ್ತದ್ವಿಷಯಾನುಗುಣವಾಗಿ ಬಹು ಪ್ರಕಾರವಾಗಿರುವುದೆಂದು ಭಾವವು. ॥೪೯॥

ಶ್ಲೋ॥ ಆಜ್ಞಾ ನ ಕೀರ್ತಿಃ ಪಾಲನಂ ಬ್ರಾಹ್ಮಣಾನಾಂ ದಾನಂ ಭೋಗೋ
ಮಿತ್ರಸಂರಕ್ಷಣಂ ಚ ॥ ಯೇಷಾಮೇತೇ ಷಡ್ಗುಣಾ ನ ಪ್ರವೃತ್ತಾಃ
ಕೋರ್ಥಸ್ತೇಷಾಂ ಪಾರ್ಥಿವೋಪಾಶ್ರಯೇಣ .... ॥೪೦॥

ಟೀ॥ ಗುಣಾಢ್ಯನನ್ನು ಆಶ್ರಯಿಸಬೇಕೇ ವಿನಹಾ ನಿರ್ಗುಣನನ್ನು ಆಶ್ರಯಿಸುವದನುಚಿತವೆಂದು ಹೇಳುತ್ತಾನೆ. ಆಜ್ಞಾ=ಮರ್ಯಾದೆಯು (ಪಾಲಿಸ ಶಾಸನವು,) ಕೀರ್ತಿಃ=ದಾನಾದಿಗಳಿಂದುಂಟಾದ ಯಶಸ್ಸು, ಬ್ರಾಹ್ಮಣಾನಾಂ=ವಿಪ್ರರ, ಪಾಲನಂ=ರಕ್ಷಿಸೋಣವು, ದಾನಂ=ಸತ್ಪಾತ್ರಗಳಲ್ಲಿ ತ್ಯಾಗ ಮಾಡುವಿಕೆಯೂ, ಭೋಗಃ=ಸುಖಾನುಭವವು, ಮಿತ್ರ=ಸ್ನೇಹಿತರ, ಸಂರಕ್ಷಣಂಚ=ಪಾಲನವು ಎಂಬ, ಏತೇ=ಈ ಪ್ರತಿಪ್ರೋಕ್ತವಾದ, ಷಟ್=ಆರಾದ, ಗುಣಾಃ=ಗುಣಗಳು, ಯೇಷಾಂ=ಯಾವ ರಾಜರಿಗೆ, ನಪ್ರವೃತ್ತಾಃ=ಇರುವದಿಲ್ಲವೋ, ಹೇಪಾರ್ಥಿವ=ಎಲೈ ಅರಸೆ, ತೇಷಾಂ=ಅಂಥಾವರುಗಳ, ಉಪಾಶ್ರಯೇಣ=ಆಶ್ರಯದಿಂದ, ಕೋರ್ಥಃ=ಏನು ಲಾಭವು? ಇದು ಶಾಲಿನೀ ವೃತ್ತವು. .... ... ... ॥೪೦॥

ತಾ॥ ಎಲೈ ಅರಸೇ! ಲೋಕದಲ್ಲಿ ಮರ್ಯಾದಾ ಪರಿಪಾಲನ ರೂಪವಾದ ಶಾಸನವು, ದಾನಕ್ಷಾತ್ರಾದಿಗಳಿಂದುಂಟಾದ ಕೀರ್ತಿಯು, ಬ್ರಾಹ್ಮಣ ಪರಿಪಾಲನೆಯು, ಸತ್ಪಾತ್ರದಲ್ಲಿ ದಾನವು, ಸ್ರಕ್ಚಂದನವನಿತಾದಿ ಸುಖಾನುಭವವು, ಮಿತ್ರೋದ್ಧಾರವು ಎಂಬೀ ಆರು ಗುಣಗಳು ಯಾವರಾಜನಿಗಿರುವದಿಲ್ಲವೋ ಅಂಥಾರಾಜನ ಆಶ್ರಯದಿಂದೇನು ಫಲವೆಂದು ಭಾವವು. ॥೪೦॥

ಶ್ಲೋ॥ ಯದ್ಧಾತ್ರಾ ನಿಜಫಾಲಪಟ್ಟಲಿಖಿತಂ ಸ್ತೋಕಂ ಮಹದ್ವಾ ಧನಂ ತ
ತ್ಪ್ರಾಪ್ನೋತಿ ಮರುಸ್ಥಲೇಪಿ ನಿತರಾಂ ಮೇರೌ ಚ ನಾತೋಧಿಕಂ ॥
ತದ್ಧೀರೋ ಭವ ವಿತ್ತವತ್ಸು ಕೃಪಣಾಂ ವೃತ್ತಿಂ ವೃಥಾ ಮಾ ಕೃಥಾಃ
ಕೂಪೇ ಪಶ್ಯ ಪಯೋನಿಧಾವಪಿ ಘಟೋ ಗೃಹ್ಣಾತಿ ತುಲ್ಯಂ ಜಲಂ ॥

ಟೀ॥ ಹೇಗಿದ್ದರೂ ಲಾಭಾಲಾಭಗಳು ದೈವಾಧೀನಗಳಾದ್ದರಿಂದ ಕಾರ್ಪಣ್ಯವಂ ಮಾಡುವದನುಚಿತವೆಂದು ಹೇಳುತ್ತಾನೆ—ಧಾತ್ರಾ=ಬ್ರಹ್ಮನಿಂದ, ಸ್ತೋಕಂ=ಸ್ವಲ್ಪವಾದರೂ, ಮಹದ್ವಾ=ಬಹಳವಾದಾಗ್ಯೂ, ಯತ್=ಎಷ್ಟು ಅಥವಾ ಯಾವ, ನಿಜತನ್ನ, ಫಾಲ=ಹಣೆಯೆಂಬ, ಪಟ್ಟ=ಪಟ್ಟಿಯೊಳು, ಲಿಖಿತಂ=ಬರೆಯಲ್ಪಟ್ಟಿರುವದೋ, ತತ್ ಧನಂ=ಆದ್ರವ್ಯವನ್ನು, ಮರುಸ್ಥಲೇಪಿ=ನಿರ್ಜಲಪ್ರದೇಶದಲ್ಲಿಯಾದರೂ, ನಿತರಾಂ ಅತಿಶಯವಾಗಿ, ಪ್ರಾಪ್ನೋತಿ=ಪಡೆಯುತ್ತಾನೆ. ಮೇರೌಚ=ಕನಕಾಚಲದಲ್ಲಿಯೂ ಕೂಡ, ಅತಃ=ಈಧನಕ್ಕಿಂತಲೂ, ಅಧಿಕಂ=ಹೆಚ್ಚಾದಧನವನ್ನು, ನ=ಹೊಂದಲಾರನು. ತತ್=ಆ ಕಾರಣದಹೆಸೆಯಿಂದ, ಧೀರಃ=ಸ್ಥಿರಚಿತ್ತನಾದವನು, ಭವ=ಆಗು, ವಿತ್ತ

ವಿತ್ತ್ಸು=ಧನಾಢ್ಯರಲ್ಲಿ,ಕೃಪಣಾಂ=ದೀನವಾದ,ವೃತ್ತಿಂ=ವ್ಯಾಪಾರವನ್ನು, ವೃಥಾ= ವ್ಯರ್ಥವಾಗಿ, ಮಾಕೃಥಾಃ=ಮಾಡಬೇಡ,ಕೂಪೆ=ಸ್ವಲ್ಪಜಲವುಳ್ಳ ಸಣ್ಣಭಾವಿಯು ಯೂ, ಪಯೋನಿಧಾವಪಿ=ದೊಡ್ಡದಾದ ಸಮುದ್ರದಲ್ಲಿಯೂ ಘಟಃ=ಕಲಶವು ತುಲ್ಯಂ=ಮಿತವಾದ, (ಸಮವಾದ)ಜಲಂ=ಉದಕವನ್ನು, ಗೃಹ್ಣಾತಿ=ಗ್ರಹಿಸುವ ದು, ಪಶ್ಯ=ನೋಡು .... ... .... ||೪೧||

ತಾ|| ಸೃಷ್ಟಿಕರ್ತನಾದ ಬ್ರಹ್ಮನಿಂದ ಹಣೆಯೊಳಗೆ ಎಷ್ಟು ದ್ರವ್ಯವು ಇವನಿಗೆ ಲಭಿಸತಕ್ಕದೆಂದು ಬರೆಯಲ್ಪಟ್ಟಿರುವದೋ ಅಷ್ಟುಧನವು ಮರುಭೂಮಿಯಲ್ಲಿದ್ದಾಗ್ಯೂ ತಪ್ಪದೆ ದೊರೆಯುವದು, ಭಂಗಾರದ ಬೆಟ್ಟವೆಂದು ಮೇರುಪರ್ವತಕ್ಕೆ ಹೋದಾಗ್ಯೂ ಬ್ರಹ್ಮಲಿಖಿತಕ್ಕಿಂತಲೂ ಹೆಚ್ಚಾಗಿ ದೊರೆಯಲಾರದು. ಹೇಗೆಂದರೆ, ಒಂದು ಗಡಿಗೆಯು ಸಣ್ಣ ಕೊಳದೊಳಗಾದರೂ, ದೊಡ್ಡಸಾಗರದಲ್ಲಿಯಾದರೂ, ತನ್ನಲ್ಲಿ ಹಿಡಿಯುವಷ್ಟು ನೀರನ್ನು ಗ್ರಹಿಸುವದೇ ಹೊರತು ಭಾವಿಯೊಳು ಸ್ವಲ್ಪವಾಗಿಯೂ, ಸಮುದ್ರದಲ್ಲಿ ವಿಶೇಷವಾಗಿಯೂ ಎಂದಿಗೂ ಗ್ರಹಿಸಲಾರದಾದಕಾರಣ ಚಪಲನಾಗದೆ ಧೀರನಾಗಿ ಧನಾಢ್ಯರಲ್ಲಿ ಹೋಗಿ ದೀನವೃತ್ತಿಯಂ ಮಾಡಬಾರದೆಂದು ಭಾವವು. .... .... ||೪೧||

## ದುರ್ಜನ ಪದ್ಧತಿ ಪ್ರಾರಂಭವು.

ಶ್ಲೋ|| ಅಕರುಣತ್ವಮಕಾರಣ ವಿಗ್ರಹಃಪರಧನೆ ಪರಯೋಷಿತಿಚಸ್ಪೃಹಾ || ಸುಜನಬಂಧುಜನೇಷ್ವಸಹಿಷ್ಣುತಾಪ್ರಕೃತಿಸಿದ್ಧಮಿದಂಹಿ ದುರಾತ್ಮನಾಂ|| .... .... ||೪೨||

ಟೀ|| ಅರ್ಥಸಂಪನ್ನನಾದರೂ ದುರ್ಜನನಾದೊಡೆ ಗ್ರಾಹ್ಯನಲ್ಲವೆಂಬಾಶಯದಿಂದ ಅರ್ಥಪದ್ಧತಿ ನಿರೂಪಣಾಂತರದಲ್ಲಿ ದುರ್ಜನ ಪದ್ಧತಿಯನ್ನು ನಿರೂಪಿಸುವನಾಗಿ ಅವರ ಗುಣಗಳಂ ಹೇಳುತ್ತಾನೆ—ಅಕರುಣತ್ವಂ=ನಿರ್ದಯತ್ವವು, ಅಕಾರಣವಿಗ್ರಹಃ=ನಿಷ್ಕಾರಣವಾದ ಕಲಹವು, ಪರ=ಅನ್ಯರ, ಧನೆ=ದ್ರವ್ಯದಲ್ಲಿಯೂ ಪರ=ಅನ್ಯರ, ಯೋಷಿತಿಚ=ಅಂಗನೆಯರಲ್ಲಿಯೂ, ಸ್ಪೃಹಾ=ಆಶೆಯು,ಸುಜನ= ಸಜ್ಜನರಲ್ಲಿಯೂ, ಬಂಧುಜನೇಷುಚ=ಬಂಧುಜನಗಳಲ್ಲಿಯೂ,ಅಸಹಿಷ್ಣುತಾ=ಅಸಹನವೂ, ಇದಂ=ಈ ಸರ್ವವೂ, ದುರಾತ್ಮನಾಂ=ದುರ್ಜನರಿಗೆ, ಪ್ರಕೃತಿ=ಸ್ವಭಾವದಿಂದ, ಸಿದ್ಧಂ=ಸಿದ್ಧವಾದದ್ದು, ದ್ರುತವಿಲಂಬಿತವೃತ್ತವು, ನ-ಭ-ಭ-ರ-ಗಣಗಳಿರುವಿಕೆಯು ವೃತ್ತಲಕ್ಷಣವೆಂದರಿವುದು ... .... ||೪೨||

ತಾ॥ ನಿರ್ದಯೆ, ನಿಷ್ಕಾರಣ ಕಲಹ, ಪರದ್ರವ್ಯಾಪಹಾರ, ಪರಾಂಗನಾಸಂಭೋಗಾಭಿಲಾಷೆ, ಸಜ್ಜನ ಬಂಧುಜನಗಳಲ್ಲಿ ಅಸಹನ ಎಂಬೀ ಗುಣಗಳು ದುರಾತ್ಮರಿಗೆ ಸ್ವಭಾವಸಿದ್ಧಗಳಾದ ಕಾರಣ ಆ ದುರ್ಜನರು ದ್ರವ್ಯವಂತರಾದರೂ ಗ್ರಾಹ್ಯರಲ್ಲವೆಂದು ಭಾವವು. .... .... ॥೪೨॥

ಶ್ಲೋ॥ ದುರ್ಜನಃಪರಿಹರ್ತವ್ಯೋವಿದ್ಯಯಾಲಂಕೃತೋಽಪಿಸನ್ ॥ಮಣಿನಾ
ಭೂಷಿತಸ್ಸರ್ಪಃಕಿಮಸೌನಭಯಂಕರಃ .... ॥೪೩॥

ಟೀ॥ ದುರಾತ್ಮನು ಎಷ್ಟು ವಿದ್ಯಾಸಂಪನ್ನನಾದರೂ ಪರಿತ್ಯಾಜ್ಯನು, ಎಂಬರ್ಥವಂ ದೃಷ್ಟಾಂತ ಪೂರ್ವಕವಾಗಿ ಹೇಳುತ್ತಾನೆ. ದುರ್ಜನಃ=ದುರಾತ್ಮನು, ವಿದ್ಯಯಾ=ವೇದವೇದಾಂಗಾದಿ ವಿದ್ಯೆಯಿಂದ, ಅಲಂಕೃತೋಽಪಿಸನ್=ಭೂಷಿತನಾದಾಗ್ಯೂ, ಪರಿಹರ್ತವ್ಯಃ=ತ್ಯಾಗಮಾಡತಕ್ಕವನು, ಸರ್ಪಃ=ಹಾವು, ಮಣಿನಾ=ಮಾಣಿಕ್ಯದಿಂದ, ಭೂಷಿತಸ್ಸನ್ನಪಿ=ಅಲಂಕೃತವಾದಾಗ್ಯೂ, ಅಸೌ=ಈ ಸರ್ಪವು, ನಭಯಂಕರಃಕಿಂ=ಭಯಂಕರವಾದದ್ದಲ್ಲವೆ? ದೃಷ್ಟಾಂತಾಲಂಕಾರವು. ॥೪೩॥

ತಾ॥ ಎಷ್ಟು ಉತ್ತಮವಾದ ಮಾಣಿಕ್ಯದಿಂದ ಭೂಷಿತವಾದಾಗ್ಯೂ ಸರ್ಪವು ಭಯಂಕರವಾದ್ದರಿಂದ ಹೇಗೆ ತ್ಯಾಜ್ಯವೋ, ಹಾಗೆಯೇ ವೇದವೇದಾಂಗಾದಿವಿದ್ಯಾಧ್ಯಯನವಂ ಮಾಡಿ ಸಕಲವಿದ್ಯಾಪಾರಂಗತನಾಗಿದ್ದಾಗ್ಯೂ ದುರ್ಜನನಾದೊಡೆ ತ್ಯಜಿಸಲ್ಪಡತಕ್ಕವನೆಂದು ಭಾವವು .... ॥೪೩॥

ಶ್ಲೋ॥ ಜಾಡ್ಯಂಹ್ರೀಮತಿಗಣ್ಯತೇವ್ರತಶುಚೌದಂಭಶ್ಶುಚೌಕೈತವಂ
ಶೂರೇನಿರ್ಘೃಣತಾಮುನೌವಿಮತಿತಾದೈನ್ಯಂಪ್ರಿಯಾಲಾಪಿನಿ ॥
ತೇಜಸ್ವಿನ್ಯವಲಿಪ್ತತಾಮುಖರತಾವಕ್ತನ್ಯಶಕ್ತಿಸ್ಥಿರೇತತ್ಕೋನಾ
ಮಗುಣೋಭವೇತ್ಸಗುಣಿನಾಂಯೋದುರ್ಜನೈರ್ನಾಂಕಿತಃ॥೪೪॥

ಟೀ॥ ದುರ್ಜನನು ಸರ್ವದೂಷಕನೆಂಬರ್ಥವನ್ನು ಹೇಳುತ್ತಾನೆ—ಹ್ರೀಮತಿ=ನಾಚಿಕೆಯುಳ್ಳ ಪುರುಷನಲ್ಲಿ, ಜಾಡ್ಯಂ=ಮಾಂದ್ಯವು, ಗಣ್ಯತೇ=ಎಣಿಸಲ್ಪಡುವುದು, ವ್ರತ=ಚಾಂದ್ರಾಯಣಾದಿ ನಿಯಮಗಳಿಂದ, ಶುಚೌ=ಶುದ್ಧನಾದವನಲ್ಲಿ, ದಂಭಃ=ಡಂಭವು, ಗಣ್ಯತೆ-ಎಣಿಸಲ್ಪಡುವುದು, ಶುಚೌ=ಸ್ವಭಾವದಿಂದ ಪರಿಶುದ್ಧನಾದವನಲ್ಲಿ, ಕೈತವಂ=ಕಪಟವು, ಗಣ್ಯತೆ=ಎಣಿಸಲ್ಪಡುವುದು, ಶೂರೇ=ಧೀರನಲ್ಲಿ, ನಿರ್ಘೃಣತಾ=ನಿರ್ದಯೆಯು, ಗಣ್ಯತೆ=ಎಣಿಸಲ್ಪಡುವುದು, ಮುನೌ=ಮೌನಿಗಳಲ್ಲಿ ವಿಮತಿತಾ=ಬುದ್ಧಿಹೀನತೆಯು, ಗಣ್ಯತೆ=ಎಣಿಸಲ್ಪಡುವುದು, ಪ್ರಿಯಾಲಾಪಿನಿ

ಮಧುರ ವಚನವನ್ನು ನುಡಿವನಲ್ಲಿ, ದೈನ್ಯಂ=ದೀನತ್ವವು, ಗಣ್ಯತೇ=ಲೆಕ್ಕಿಸಲ್ಪಡುವುದು, ತೇಜಸ್ವಿನಿ=ಪ್ರೌಢಿಮೆಯುಳ್ಳವನಲ್ಲಿ, ಅಥವಾ ಪ್ರಭಾವವುಳ್ಳವನಲ್ಲಿ,ಅವಲಿಪ್ತತಾ=ಗರ್ವವು, ಗಣ್ಯತೇ=ಲೆಕ್ಕಿಸಲ್ಪಡುವುದು, ವಕ್ತವ್ಯ=ಹೇಳತಕ್ಕಮಾತುಗಳಲ್ಲಿ, ಶಕ್ತಿ=ಸಾಮರ್ಥ್ಯದಿಂದ, ಸ್ಥಿರೇ=ಧೀರನಾದವನಲ್ಲಿ, ಮುಖರತಾ=ಬಹುಭಾಷಿತ್ವವು,ಗಣ್ಯತೇ=ಎಣಿಸಲ್ಪಡುವುದು, ತತ್=ಆದಕಾರಣದದೆಸೆಯಿಂದ,=ಗುಣಿನಾಂ=ಗುಣಸಂಪನ್ನರ, ಯಃ=ಯಾವ ಗುಣವು, ದುರ್ಜನೈಃ=ದುರಾತ್ಮರಿಂದ, ನಾಂಕಿತಃ=ದೂಷಿಸಲ್ಪಡದಿರುವದೋ, ಸಕೋನಾಮಗುಣೋಭವೇತ್=ಆಗುಣವು ಎಂಥಾದ್ದಾದೀತು? ಶಾರ್ದೂಲವಿಕ್ರೀಡಿತ ವೃತ್ತವು. ... .... ॥೪೮॥

ತಾ॥ ದುರಾತ್ಮರಾದವರು—ಹೀನಕಾರ್ಯದಲ್ಲಿ ಪ್ರವರ್ತಿಸದೆ ಲಜ್ಜೆಪಡುವ ಮನುಷ್ಯನಲ್ಲಿ ಮಾಂದ್ಯವನ್ನೆಣಿಸುವರು. ಚಾಂದ್ರಾಯಣಾದಿ ವ್ರತಾಚಾರಗಳಿಂದ ಶುಚಿಯಾಗಿರುವವನಲ್ಲಿ ಡಂಭವಂ ಪೇಳ್ವರು. ಸ್ವಭಾವದಿಂದ ಪರಿಶುದ್ಧನಾದವನಲ್ಲಿ ಕಪಟವನ್ನೆಣಿಸುವರು. ಶೂರನಾದವನನ್ನ ದಯಾಶೂನ್ಯನೆಂದು ಪೇಳ್ವರು, ಮನನಶೀಲನಾದ ಮುನಿಯನ್ನು ಬುದ್ಧಿಹೀನನೆನ್ನುವರು, ಪ್ರಿಯವಾದಿಯನ್ನು ದೀನನೆನ್ನುವರು, ತೇಜಸ್ವಿಯನ್ನು ದುರಹಂಕಾರಿಯೆನ್ನುವರು. ತತ್ಕಾಲದಲ್ಲಿ ಉಚಿತವಾಗಿಮಾತನಾಡತಕ್ಕ ಧೀರನನ್ನು ಅಸಂಬದ್ಧ ಪ್ರಲಾಪಿಯೆಂದೆನ್ನುವರು. ಆದಕಾರಣ ಸಜ್ಜನರ ಗುಣಗಳೆಲ್ಲವೂ ದುರ್ಜನರಿಂದ ದೂಷಿಸಲ್ಪಡುವವಾಗಿ ದುರಾತ್ಮರಿಗೀಪರದೂಷಣೆಯು ಸ್ವಭಾವವೆಂದಾಶಯವು. .... ॥೪೪॥

ಶ್ಲೋ॥ಲೋಭಶ್ಚೇದಗುಣೇನಕಿಂಪಿಶುನತಾಯದ್ಯಸ್ತಿಕಿಂಪಾತಕೈಸ್ಸತ್ಯಂ
ಚೇತ್ತಪಸಾಚಕಿಂಶುಚಿಮನೋಯದ್ಯಸ್ತಿತೀರ್ಥೇನಕಿಂ ॥ಸೌಜ
ನ್ಯಂಯದಿಕಿಂಬಲೇನಮಹಿಮಾಯದ್ಯಸ್ತಿಕಿಮ್ಮಂಡನೈಸ್ಸದ್ವಿ
ದ್ಯಾಯದಿಕಿಂಧನೈರಪಯಶೋಯದ್ಯಸ್ತಿಕಿಂಮೃತ್ಯುನಾ ॥೪೫॥

ಟೀ॥ ಗುಣಾವಗುಣಗಳ ಮಾರ್ಗವಂ ಪೇಳುತ್ತಾನೆ—ಲೋಭಃ=ದ್ರವ್ಯಾದಿಗಳನ್ನು ಪಾಪಕರ್ಮದಿಂದ ಆರ್ಜನೇಚ್ಛೆಯು, ಅಸ್ತಿಚೇತ್=ಇದ್ದಹಾಗಾದರೆ, ಅಗುಣೇನ=ದುರ್ಗುಣದಿಂದ, ಕಿಂ=ಏನು ಪ್ರಯೋಜನ, ಪಿಶುನತಾ=ಪರದೂಷಣೆಯು, (ಚಾಡಿ ಹೇಳುವಿಕೆಯು) ಅಸ್ತಿಚೇತ್=ಇದ್ದದ್ದಾದರೆ, ಪಾತಕೈಃ=ಬ್ರಹ್ಮಹತ್ಯೆ ಮೊದಲಾದ ಪಾಪಗಳಿಂದ, ಕಿಂ=ಏನು ಪ್ರಯೋಜನ. ಸತ್ಯಂ=ಯಥಾರ್ಥ ಭಾಷಣವು ಅಥವಾ ಸಮದರ್ಶಿತ್ವವು. ಅಸ್ತಿಚೇತ್=ಇರುವದಾದರೆ, ತಪಸಾ=ಚಾಂದ್ರಾಯಣಾದಿ ತಪಸ್ಸುಗಳಿಂದ, ಕಿಂ=ಏನು ಪ್ರಯೋಜನವು ಶುಚಿ=ಪರಿಶುದ್ಧ

ಮೊದ, ಮನಃ=ಮನಸ್ಸು, ಅಸ್ತಿಯದಿ=ಇದ್ದದ್ದೇ ಆದರೆ, ತೀರ್ಥೇನ=ಗಂಗಾದಿ ತೀರ್ಥಗಳಿಂದ, ಕಿಂ=ಏನು ಪ್ರಯೋಜನ. ಸೌಜನ್ಯಂ=ಸುಜನತ್ವವು. ಅಸ್ತಿಯದಿ=ಇದ್ದದ್ದಾದರೆ. ಬಲೇನ=ಪರಿವಾರದಿಂದ. ಕಿಂ=ಏನು ಪ್ರಯೋಜನ. ಮಹಿಮಾ=ಮಹತ್ವವು, ಅಸ್ತಿಯದಿ=ಇದ್ದದ್ದಾದರೆ. ಮಂಡನೈಃ=ಕುಂಡಲಹಾರಗ ಮೊದಲಾದಅಲಂಕಾರಗಳಿಂದ, ಕಿಂ=ಏನು ಪ್ರಯೋಜನ. ಸದ್ವಿದ್ಯಾ=ಶ್ರೇಷ್ಠವಾದ ವಿದ್ಯೆಯು, ಅಸ್ತಿಯದಿ=ಇದ್ದದ್ದಾದರೆ, ಧನೈಃ=ದ್ರವ್ಯಗಳಿಂದ, ಕಿಂ=ಏನು ಪ್ರಯೋಜನ. ಅಪಯಶಃ=ಅಪಕೀರ್ತಿಯು, ಅಸ್ತಿಯದಿ—ಇದ್ದದ್ದಾದರೆ ಮೃತ್ಯುನಾ=ಮರಣದಿಂದ, ಕಿಂ=ಏನು ಪ್ರಯೋಜನ ॥೭೫॥

ತಾ॥ ದುರ್ಮಾರ್ಗದಿಂದ ಬಹಳವಾದ ಧನಾಕಾಂಕ್ಷೆಯು ದುರ್ಗುಣದಂತೆ ಅತ್ಯಂತ ನಿಂದಾವಹ ಮಾಡುದರಿಂದ ಆ ಧನಾಕಾಂಕ್ಷೆ ಒಂದಿರಲು ಬೇರೆ ದುರ್ಗುಣದಿಂದ ಏನೂಪ್ರಯೋಜನವಿಲ್ಲ, ಚಾಡಿಯು ಪರದೂಷಣೆಯು ಬ್ರಹ್ಮಹತ್ಯೆ ಮೊದಲಾದ ಪಾಪಗಳಂತೆ ಮನುಷ್ಯನನ್ನು ನರಕದಲ್ಲಿತಳ್ಳಲಿಕ್ಕೆ ಸಮರ್ಥವಾಗಿರಲು ಬೇರೆ ಪಾಪಗಳಿಂದ ಪ್ರಯೋಜನವಿಲ್ಲವು. ಯಥಾರ್ಥಭಾಷಣವು ಅಥವಾ ಸಮದರ್ಶಿತ್ವವು ಚಾಂದ್ರಾಯಣ ಮೊದಲಾದ ವ್ರತಗಳಂತೆ ಪರಿಶುದ್ಧಿ ಮಾಡಲು ಸಮರ್ಥವಾದ್ದರಿಂದ, ಅದು ಇರಲು, ಚಾಂದ್ರಾಯಣ ವ್ರತಮೊದಲಾದ ತಪಸ್ಸುಗಳಿಂದೇನೂ ಪ್ರಯೋಜನವಿಲ್ಲವು. ದ್ರೋಹಚಿಂತೆ ಮೊದಲಾದ ದುರಾಲೋಚನೆ ಮಾಡದಿರುವಿಕೆಯಿಂದ ನಿರ್ಮಲವಾದ ಮನಸ್ಸು, ಪ್ರಯಾಗ ಮೊದಲಾದ ತೀರ್ಥಗಳಂತೆ ಮೋಕ್ಷ ಮೂಲವಾದುದರಿಂದ, ಅಂತಪ್ಪ ಮನಸ್ಸಿರಲು, ಪ್ರಯಾಗಾದಿ ತೀರ್ಥಯಾತ್ರೆಗಳಿಂದ ಪ್ರಯೋಜನವಿಲ್ಲವು. ಸುಜನಭಾವನವು ಪರಿವಾರದಂತೆ ಅಶೇಷಕಾರ್ಯನಿರ್ವಾಹದಕ್ಷ ಮಾದುದರಿಂದಂತಪ್ಪ ಸೌಜನ್ಯವಿರಲು, ಬೇರೆಪರಿವಾರದಿಂದ ಪ್ರಯೋಜನವಿಲ್ಲವು. ಮಾಹಾತ್ಮ್ಯವು ಕುಂಡಲ ಹಾರ ಮೊದಲಾದವುಗಳಂತೆ ಅಲಂಕಾರವಾದುದರಿಂದ ಅಂತಪ್ಪ ಮಹಿಮೆ ಇರಲು, ಕಿರೀಟಕುಂಡಲಹಾರಾದ್ಯಲಂಕರಣಗಳಿಂದ ಪ್ರಯೋಜನವೇನೂ ಇಲ್ಲವು. [illegible]ವಾದ ವೇದವೇದಾಂಗ ಕಾವ್ಯನಾಟಕಾಲಂಕಾರಗೀತಾದಿವಿದ್ಯೆಯು ದ್ರವ್ಯಾರ್ಜನದಲ್ಲಿ ಸಮರ್ಥವಾದುದರಿಂದ, ಅಂಥಾಸದ್ವಿದ್ಯೆ ಇರಲು ದ್ರವ್ಯಗಳಿಂದೇನೂ ಪ್ರಯೋಜನವಿಲ್ಲವು, ಅಪಕೀರ್ತಿಯು ಮರಣಪ್ರಾಯವಾದುದರಿಂದ ಅಂತಪ್ಪ, ಮೃತಪ್ರಾಯವಾದ ಅಪಯಶವಿರಲು ಮರಣದಿಂದ ಪ್ರಯೋಜನವಿಲ್ಲವು. ಅಪಕೀರ್ತಿ ಬಂದನಂತರ ಇದ್ದರೂ ಸತ್ತಹಾಗೆಯೇ, ಆದ್ದ

ರಿಂದ, ನಿಪುಣನಾದ ಮನುಜನು ಈ ರೀತಿಯಾಗಿ ವಿಚಾರಮಾಡಿ ಸದ್ಗುಣಾರ್ಜನಪರನಾಗಬೇಕು.ಹಾಗೆ ಸುಗುಣ ದುರ್ಗುಣ ವಿಚಾರಣೆ ಮಾಡದಿರುವ ಪಕ್ಷದಲ್ಲಿ ದೌರ್ಜನ್ಯವು ಅನಾಯಾಸದಿಂದ ಸಾಧ್ಯವಾಗುವುದಾದಕಾರಣ, ಬುದ್ಧಿಶಾಲಿಯು ಅನರ್ಥಾವಹವಾದ ಈ ದುರ್ಗುಣಗಳನ್ನು ಬಿಟ್ಟು ಸುಗುಣ ಸಂಪಾದನತತ್ಪರನಾಗಬೇಕೆಂದು ಭಾವವು, ... ॥೪೫॥

ಶ್ಲೋ॥ಶಶೀದಿವಸಧೂಸರೋಗಳಿತಯೌವ್ವನಾಕಾಮಿನೀಸರೋವಿಗತವಾರಿಜಂಮುಖಮನಕ್ಷರಂಸ್ವಾಕೃತೇಃ ॥ ಪ್ರಭುರ್ಧನಪರಾಯಣ ಸ್ಸತತದುರ್ಗತಿಸ್ಸಜ್ಜನೋನೃಪಾಂಗಣಗತಃ ಖಲೋಮನಸಿ ಸಪ್ತಶಲ್ಯಾನಿಮೆ .... .... ॥೪೬॥

ಟೀ॥ ಒಬ್ಬನೊಬ್ಬ ಅನುಭವಿಯು ಕಷ್ಟವನ್ನು ಅನುಭವಿಸಿ ಹೇಳುತ್ತಾನೆ— ದಿವಸ-ಹಗಲಿನಲ್ಲಿ-ಧೂಸರಃ-ನಿಸ್ತೇಜಸ್ಕನಾದ,ಶಶೀ-ಚಂದ್ರನು,ಗಳಿತ—ಕಳೆದ,ಯೌವನಾ—ನೂತನವಯಸ್ಸುಳ್ಳ,ಕಾಮಿನೀ—ಸ್ತ್ರೀಯು,ವಿಗತ-ರಹಿತವಾದ,ವಾರಿಜಾ—ಕಮಲ ಸಮೂಹಗಳುಳ್ಳ.ಸರಃ—ಸರೋವರವು ಸ್ವಾಕೃತೇಃ—ಉತ್ತಮವಾದ ಆಕಾರವುಳ್ಳ ಪುರುಷನ, ಅನಕ್ಷರಂ=ಅಕ್ಷರಹೀನವಾದ, ಮುಖಂಚ—ಮುಖವು, ಧನ—ಹಣದಲ್ಲಿ,ಪರಾಯಣಃ=ಲುಬ್ಧನಾದ,ಪ್ರಭುಃ=ರಾಜನು, ಸತತದುರ್ಗತಿಃ—ನಿರಂತರ ದರಿದ್ರನಾದ, ಸಜ್ಜನಃ=ಸತ್ಪುರುಷನು, ನೃಪಾಂಗಣಗತಃ—ರಾಜಮಂದಿರದಲ್ಲಿರುವ ಖಲಶ್ಚ-ದುರ್ಜನನು,ಕೂಡಮೆ—ನನ್ನ,ಮನಸಿ=ಮನಸ್ಸಿನಲ್ಲಿ,ಸಪ್ತ—ಏಳಾದ,ಶಲ್ಯಾನಿ-ಶೂಲಪ್ರಾಯಗಳು. ಈ ಶ್ಲೋಕದಲ್ಲಿ ದೀಪಕಾಲಂಕಾರವು, ಪೃಥ್ವೀವೃತ್ತವು. ॥೪೬॥

ತಾ॥ ಹಗಲಿನೊಳು ಮಲಿನನಾದಚಂದ್ರನು, ಮುದುಕಿಯಾದ ಕಾಮಿನಿಯು, ಕಮಲವಿಲ್ಲದಿರುವ ಕೊಳವು, ಆಕಾರ ಮಾತ್ರವಿದ್ದು ಶಾಸ್ತ್ರಾಭ್ಯಾಸ ಮಾಡದಿರುವ ಪುರುಷನು, ನಿರಂತರ ಧನಲುಬ್ಧನಾದ ಅರಸು, ಅನವರತವೂ ದಾರಿದ್ರ್ಯವನ್ನನುಭವಿಸುವ ಸಜ್ಜನನು, ರಾಜಾಂಗಣದಲ್ಲಿರುವ ನೀಚನು ಎಂಬೀ ಏಳೂ ಶೂಲದಂತೆ ದುಃಖಕರಗಳಾದ್ದರಿಂದ ಇವರುಗಳಿಗಿಂಥಾ ಸಂಬಂಧವುಂಟಾಗಿರಬಾರದೆಂದು ಭಾವವು. .... ॥೪೭॥

ಶ್ಲೋ॥ ನಕಶ್ಚಿಚ್ಚಂಡಕೋಪಾನಾಮಾತ್ಮೀಯೋನಾಮಭೂಭುಜಾಂ ॥ ಹೋತಾರಮಪಿಜುಹ್ವಾನಂಸ್ಪೃಷ್ಟೋದಹತಿಪಾವಕಃ ॥೪೭॥

ಟೀ॥ ದುಷ್ಟ ರಾಜಲಕ್ಷಣವಂ ದೃಷ್ಟಾಂತ ಪೂರ್ವಕವಾಗಿ ಪೇಳುತ್ತಾನೆ— ಚಂಡಕೋಪಾನಾಂ—ಚಂಡ=ಉಗ್ರವಾದ, ಕೋಪಾನಾಂ=ಕ್ರೋಧವುಳ್ಳ, ಭೂಭುಜಾಂ=ಅರಸರಿಗೆ, ಕಶ್ಚಿತ್=ಯಾವನೊಬ್ಬ ಪುರುಷನೂ, ಆತ್ಮೀಯೋ ನಾಮ=ಸ್ವಂತನೆಂದು ಪ್ರಸಿದ್ಧನಾದವನು, ನ=ಇಲ್ಲವು, ಜುಹ್ವಾನಂ=ಹವನ ಮಾಡುತ್ತಿರುವ, ಹೋತಾರಮಪಿ=ಯಜಮಾನನನ್ನು ಕೂಡ, ಪಾವಕಃ=ಅಗ್ನಿಯು, ಸ್ಪೃಷ್ಟಃ=ಮುಟ್ಟಲ್ಪಟ್ಟದ್ದಾಗಿ, ದಹತಿ=ಸುಡುತ್ತದೆ ... ... ||೪೭||

ತಾ॥ ಪ್ರಚಂಡವಾದ ಕೋಪವುಳ್ಳ ಅರಸನಿಗೆ ಸ್ವಕೀಯನಾದವನು ಒಬ್ಬನೂ ಇಲ್ಲವು, ಯಾವ ರೀತಿಯಲ್ಲಿ ಹಿತಾಚರಣೆ ಮಾಡುತ್ತಿದ್ದಾಗ್ಯೂ ಅವನಿಗೆ ಅಹಿತನೇ; ಹೇಗೆಂದರೆ, ಅಗ್ನಿಯು ತನ್ನ ತುಪ್ಪವನ್ನು ಹವನ ಮಾಡುವ ಯಜಮಾನನು ಮುಟ್ಟಿದರೂ ಸುಡಲೇ ಸುಡುವದು. ಆದ್ದರಿಂದಲೇ ಇಂಥಾ ದುರಾತ್ಮನಾದ ಅರಸನನ್ನಾಶ್ರಯಿಸಬಾರದೆಂದು ಭಾವವು. ||೪೭||

ಶ್ಲೋ॥ ಮೌನಾನ್ಮೂಕಃಪ್ರವಚನಪಟುರ್ವಾಚಕೋಜಲ್ಪಕೋವಾಧೃ
ಷ್ಟಃಪಾರ್ಶ್ವೇಭವತಿಚವಸನ್ ದೂರತೋಪ್ಯಪ್ರಗಲ್ಭಃ ॥ ಕ್ಷಾಂ
ತ್ಯಾಭೀರುರ್ಯದಿನಸಹತೇಪ್ರಾಯಶೋನಾಭಿಜಾತಸ್ಸೇವಾಧರ್ಮಃ
ಪರಮಗಹನೋಯೋಗಿನಾಮಪ್ಯಗಮ್ಯಃ॥ .... ||೪೮||

ಟೀ॥ ಏತಕ್ಕೆ ಆಶ್ರಯಿಸಕೂಡದೆಂದರೆ ಅಂಥ ಅರಸನ ಸೇವೆ ಮಾಡುವಿಕೆಯು ಬಹಳ ಅಶಕ್ಯವೆಂದು ಪೇಳುತ್ತಾನೆ—ಮೌನಾತ್=ಸುಮ್ಮನಿರುವಿಕೆಯ ದೆಸೆಯಿಂದ, ಮೂಕಃ=ಮೂಗನು, ಭವತಿ=ಆಗುತ್ತಾನೆ, ಪ್ರವಚನ=ಮಾತನಾಡುವಿಕೆಯಲ್ಲಿ, ಪಟುಃ=ಸಮರ್ಥನಾದವನು, ವಾಚಕಃ=ಬಹು ಭಾಷಿಯು, ಜಲ್ಪಕೋ ವಾ=ಅಸಂಬದ್ಧ ಪ್ರಲಾಪಿಯು, ಭವತಿ=ಆಗುತ್ತಾನೆ, ಪಾರ್ಶ್ವೇ=ಸಮೀಪದಲ್ಲಿ ವಸನ್=ಇರುವನಾದರೆ, ಧೃಷ್ಟಃ=ಭಯಶೂನ್ಯನು, ಭವತಿ=ಆಗುತ್ತಾನೆ, ದೂರತಃ=ದೂರದಲ್ಲಿ, ವಸನ್=ಇರುವವನಾದರೆ, ಅಪ್ರಗಲ್ಭಃ=ಅಪ್ರೌಢನು, ಭವತಿ=ಆಗುತ್ತಾನೆ, ಕ್ಷಾಂತ್ಯಾ=ಶಮೆಯಿಂದ, ಭೀರುಃ=ಭಯಯುಕ್ತನು, ಭವತಿ=ಆಗುತ್ತಾನೆ, ಯದಿ=ಒಂದುವೇಳೆ, ನಸಹತೇ=ಸಹಿಸದವನಾದರೆ, ಪ್ರಾಯಶಃ=ಬಹುಪ್ರಕಾರವಾಗಿಯೂ, ಅಭಿಜಾತಃ=ಸತ್ಕುಲದಲ್ಲಿ ಪುಟ್ಟಿದವನು, ನ=ಆಗುವದಿಲ್ಲವು. ಪರಮಗಹನಃ=ಅತಿ ದುರವಗಾಹವಾದ, ಸೇವಾಧರ್ಮಃ = ಪರಿಚರಿಸುವಿಕೆಯು (ಪರಿಚಾರಿಕೆಯು) ಯೋಗಿನಾಮಪಿ=ಕಾಲತ್ರಯಾಭಿಜ್ಞರಾದ ಯೋಗಿಗಳಿಗೂ, ಅಗಮ್ಯಃ=ತಿಳಿಯಲಶಕ್ಯವಾದದ್ದು. ಇಲ್ಲಿ ಅತಿಶಯೋಕ್ತ್ಯಲಂಕಾರವು, ಮಂದಾಕ್ರಾಂತಾ

ವೃತ್ತವು. ನಾಲ್ಕು, ಆರು, ಏಳನೇ ವರ್ಣದಲ್ಲಿ ಯತಿಯುಳ್ಳದ್ದಾಗಿಯೂ, ಮ, ಭ, ನ, ತ ಗಣಗಳೂ, ಎರಡು ಗುರುಗಳೂ ಉಳ್ಳದ್ದಾಗಿರುವಿಕೆಯು ಲಕ್ಷಣವೆಂದರಿಯ ತಕ್ಕದ್ದು ... ... ... .... ||೪೮||

ತಾ|| ಸುಮ್ಮನಿದ್ದರೆ ಮೂಗನೆಂತಲೂ, ಮಾತನಾಡುವದರಲ್ಲಿ ಚತುರನಾಗಿದ್ದರೆ ಬಹುಭಾಷಿಯೆಂತಲೂ, ಪಕ್ಕದಲ್ಲಿಯೇ ಇರುತ್ತಿದ್ದರೆ ಅಹಂಕಾರಿಯೆಂತಲೂ, ಅಥವಾ ದೂರದಲ್ಲಿದ್ದರೆ ಅಸಮರ್ಥನೆಂತಲೂ, ತಾಳ್ಮೆಯುಳ್ಳನಾಗಿರಲು ಹೇಡಿಯೆಂತಲೂ, ಸಹಿಸದಿರುವನಾದರೆ ದುಷ್ಟಕುಲದಲ್ಲಿ ಹುಟ್ಟಿದವನೆಂತಲೂ ಹೇಳುವರು. ಆದುದರಿಂದಲೇ ಪರರಿಗೆ ಸೇವೆ ಮಾಡುವದು ಭೂತಭವಿಷ್ಯದ್ವರ್ತಮಾನಾದಿ ಕಾಲಜ್ಞಾನಿಗಳಾದ ಯೋಗಿಗಳಿಗೂ ಅಸಾಧ್ಯವಾಗಿರುವಲ್ಲಿ ನಮ್ಮಂಥವರಿಂದ ಸುತರಾಂ ಅಶಕ್ಯವೆಂದರಿವುದು. .... .... .... ||೪೮||

ಶ್ಲೋ|| ಉದ್ಭಾಸಿತಾಖಿಲಖಲಸ್ಯವಿಶೃಂಖಲಸ್ಯಪ್ರೋದ್ಗಾಢವಿಸ್ಮೃತನಿಜಾ
ಧಮಕರ್ಮವೃತ್ತೇಃ । ದೈವಾದವಾಪ್ತವಿಭವಸ್ಯಗುಣದ್ವಿಷೋಽ
ಸ್ಯನೀಚಸ್ಯಗೋಚರಗತೈಃ ಸುಖಮಾಸ್ಯತೇಕೈಃ .... ||೪೯||

ಟೀ|| ಬಹುಮಾತಿನಿಂದೇನು? ಅಂಥವನ ಮುಂದೆ ನಿಲ್ಲಲು ಅತ್ಯಶಕ್ಯವೆಂದು ಹೇಳುತ್ತಾನೆ—ಉದ್ಭಾಸಿತ=ಪ್ರಕಾಶ ಮಾಡಲ್ಪಟ್ಟ, ಅಖಿಲ=ಸಮಸ್ತರಾದ, ಖಲಸ್ಯ=ನೀಚರುಳ್ಳ, ವಿಶೃಂಖಲಸ್ಯ=ಮನಸ್ಸು ಬಂದಂತೆ ಪ್ರವರ್ತಿಸುತ್ತಿರುವ, ಪ್ರೋದ್ಗಾಢ=ಅತ್ಯಂತವಾಗಿ, ವಿಸ್ಮೃತ=ಮರೆಯಲ್ಪಟ್ಟ, ನಿಜ=ತನ್ನ, ಅಧಮಕರ್ಮ=ನೀಚಕೃತ್ಯದ, ವೃತ್ತೇಃ=ವ್ಯಾಪಾರವುಳ್ಳ, ದೈವಾತ್=ಅದೃಷ್ಟದವಶದಿಂದ, ಅವಾಪ್ತ=ಹೊಂದಲ್ಪಟ್ಟ, ವಿಭವಸ್ಯ=ಐಶ್ವರ್ಯಸಂಪತ್ತಿಯುಳ್ಳ, ಗುಣದ್ವಿಷಃ=ಸುಗುಣನಿಂದಕನಾದ, ಅಸ್ಯ=ಈ ಹಿಂದೆ ಹೇಳಲ್ಪಟ್ಟ ರಾಜನ, ಗೋಚರ=ದೇಶವನ್ನು, ಗತೈಃ=ಹೊಂದಿರುವ, ಕೈಃ=ಯಾವಜನಗಳಿಂದ, ಸುಖಂ=ಸುಖವಾಗಿ, ಆಸ್ಯತೇ=ಇರಲ್ಪಡುವದಾಗುತ್ತೆ? ಕಾವ್ಯಲಿಂಗಾಲಂಕಾರವು, ವಸಂತ ತಿಲಕಾವೃತ್ತವು ||೪೯||

ತಾ|| ನೀಚನಿಗೆ ದೊರೆತನ ಬಂದರೆ ಅಧಿಕಾರಗಳನ್ನು ಅಲ್ಪರಿಗೆ ಕೊಟ್ಟು, ವಿಧಿ ನಿಷೇಧಗಳಲ್ಲದೆ ಸ್ವೇಚ್ಛಾನುಸಾರವಾಗಿ ಪ್ರವರ್ತಿಸುತ್ತಾ, ತನ್ನ ಅಧಮ ಕರ್ಮಗಳನ್ನು ಸುತರಾಂ ಮರೆತು, ಈಗ ಏನೋ ದೈವವಶದಿಂದ ಐಶ್ವರ್ಯಸಂಪನ್ನನಾಗಿ ಸುಗುಣ ದ್ವೇಷಿಯಾಗುವನು. ಈ ಬಗೆಯ ನೀಚನಾಳುತಲಿರುವ ದೇಶದಲ್ಲಿ ಯಾವನು ಸುಖಲೇಶವನ್ನು ಹೊಂದಿಯಾನು?

ಹೊಂದುವದಿಲ್ಲವಾಗಿ ಇಂಥರಾಜನ ದೇಶದೊಳು ಬುದ್ಧಿಶಾಲಿಯಾದವನು ನಿಮಿಷವಾದರೂ ವಾಸಮಾಡಬಾರದೆಂದಾಶಯವು. ||೪೯||

ಶ್ಲೋ|| ಆರಂಭಗುರ್ವೀಕ್ಷಯಿಣೀಕ್ರಮೇಣಲಘ್ವೀಪುರಾವೃದ್ಧಿಮುಪೈತಿಪ
ಶ್ಚಾತ್ || ದಿನಸ್ಯಪೂರ್ವಾರ್ಧಪರಾರ್ಧಭಿನ್ನಾಛಾಯೇವಮೈತ್ರೀ
ಖಲಸಜ್ಜನಾನಾಂ .... .... ||೫೦||

ಟೀ|| ದುರ್ಜನ ಸಜ್ಜನರ ಸ್ನೇಹಪ್ರಕಾರವಂಪೇಳುತ್ತಾನೆ—ಪೂರ್ವಾರ್ಧ=ಪೂರ್ವಾಹ್ಣದಿಂದ, ಪರಾರ್ಧ=ಅಪರಾಹ್ಣದಿಂದ, ಭಿನ್ನಾ=ಪ್ರತ್ಯೇಕವಾದ, ದಿನಸ್ಯ=ಹಗಲಿನ, ಛಾಯೇವ=ನೆರಳಿನಂತೆ, ಖಲ=ದುರ್ಜನರ, ಸಜ್ಜನಾನಾಂ=ಸುಜನರ, ಮೈತ್ರೀ=ಮಿತ್ರತ್ವವು, ಆರಂಭ=ಪ್ರಾರಂಭಸಮಯದಲ್ಲಿ, ಗುರ್ವೀ=ಅಧಿಕವಾದದ್ದು ಕ್ರಮೇಣ=ಕಾಲಕ್ರಮದಿಂದ, ಕ್ಷಯಿಣೀ=ಕ್ಷಯಿಸುವದು, ಪುರಾ=ಪ್ರಾರಂಭ ಕಾಲದೊಳು, ಲಘ್ವೀ=ಸ್ವಲ್ಪವಾದದ್ದು, ಪಶ್ಚಾತ್=ಅನಂತರದಲ್ಲಿ, ವೃದ್ಧಿಂ=ಅಭಿವೃದ್ಧಿಯನ್ನು, ಉಪೈತಿ=ಹೊಂದುತ್ತದೆ. ಇಲ್ಲಿ ದುರ್ಜನ ಸುಜನರ ಮೈತ್ರಿಯನ್ನು ಉಪಮಾನಪೂರ್ವಕ ಕ್ರಮವಾಗಿ ವರ್ಣಿಸುವದರಿಂ ಯಥಾಸಂಖ್ಯಾಲಂಕಾರದಿಂದ ಸಂಕೀರ್ಣವಾದ ಉಪಮಾಲಂಕಾರವು. ವೃತ್ತವು ಉಪಜಾತಿಯು ... ||೫೦||

ತಾ|| ದುರ್ಜನರ ಮೈತ್ರಿಯು ಪ್ರಾತಃಕಾಲದ ನೆರಳಿನೋಪಾದಿಯೊಳು ಪ್ರಾರಂಭದಲ್ಲಿ ಬಹಳವಾದುದಾಗಿಯೂ, ಕಾಲಕ್ರಮದಿಂದ ಸಣ್ಣಸುವದಾಗಿಯೂ ಇರುವದು, ಸಜ್ಜನರ ಮೈತ್ರಿಯು ಮಧ್ಯಾಹ್ನ ಕಾಲದ ನೆರಳಿನಂತೆ ಪ್ರಾರಂಭ ಕಾಲದೊಳು ಸ್ವಲ್ಪವಾಗಿಯೂ, ದಿನಕ್ರಮೇಣ ವೃದ್ಧಿಹೊಂದುವ ಸ್ವಭಾವವುಳ್ಳದ್ದಾಗಿಯೂ ಇರುವದಾದುದರಿಂ ಬುದ್ಧಿಶಾಲಿಯು ಯುಕ್ತಾಯುಕ್ತ ವಿಚಾರಪರನಾಗಿ ಯಾವದು ಯುಕ್ತವೋ ಅದನ್ನು ಮಾಡತಕ್ಕದ್ದೆಂದು ಭಾವವು. .... ||೫೦||

ಶ್ಲೋ|| ಮೃಗಮೀನಸಜ್ಜನಾನಾಂತೃಣಜಲಸಂತೋಷವಿಹಿತವೃತ್ತೀನಾಂ ||
ಲುಬ್ಧಕಧೀವರಪಿಶುನಾನಿಷ್ಕಾರಣಮೇವವೈರಿಣೋಜಗತಿ||೫೧||

ಟೀ|| "ಅಕಾರಣತ್ವ ಮಕಾರಣವಿಗ್ರಹಃ" ಎಂಬದಾಗಿ ಯಾವ ದುಷ್ಟಸ್ವಭಾವ ಹೇಳಲ್ಪಟ್ಟಿತೋ, ಅದನ್ನೇ ಪ್ರಕಟಿಸುವವನಾಗಿ ಉಪಸಂಹರಿಸುತ್ತಾನೆ— ತೃಣ=ಎಳೆಯ ಗರಿಕೆಯಿಂದ, ಜಲ=ನೀರಿನಿಂದ, ಸಂತೋಷ=ಸಂತುಷ್ಟಿಯಿಂದ ವಿಹಿತ=ಮಾಡಲ್ಪಟ್ಟ, ವೃತ್ತೀನಾಂ=ಜೀವನವುಳ್ಳ, ಮೃಗ=ಜಿಂಕೆಗಳಿಗೆ, ಮೀನ=ಮತ್ಸ್ಯಗಳಿಗೆ, ಸಜ್ಜನಾನಾಂ=ಸಾಧುಜನಗಳಿಗೂ, ಲುಬ್ಧಕ=ಬೇಡರೂ, ಧೀವರ=

ಬೆಸ್ತರು, ಪಿಶುನಾಃ=ದುರ್ಜನರು, ಜಗತಿ=ಲೋಕದಲ್ಲಿ, ನಿಷ್ಕಾರಣಮೇವ=ನಿರ್ಹೇತುಕವಾಗಿಯೇ, ವೈರಿಣಃ=ದ್ವೇಷಿಗಳಾಗುವರು, ಇಲ್ಲಿ ಯಥಾಸಂಖ್ಯಾಲಂಕಾರವು, ಆರ್ಯಾವೃತ್ತವು ... ... ... ||೫೧||

ತಾ|| ಪರೋಪಕಾರವಿಲ್ಲದೆ ಕಾಡಿನಲ್ಲಿ ಹುಲ್ಲು ಮೊದಲಾದವುಗಳಿಂದ ಜೀವನ ಮಾಡುವ ಜಿಂಕೆ ಮೊದಲಾದ ಮೃಗಗಳಿಗೆ ಬೇಡರು ದ್ವೇಷಿಗಳಾಗಿ ಏರ್ಪಟ್ಟು ಅವುಗಳನ್ನು ಹಿಂಸಿಸುವರು. ನೀರಿನಲ್ಲಿ ವಾಸಮಾಡುತ್ತಾ ಜಲಪಾನಾದಿಗಳಿಂ ಜೀವನ ಮಾಡುವ ಮತ್ಸ್ಯ ಮೊದಲಾದವುಗಳಿಗೆ ನಿಷ್ಕಾರಣವಾಗಿಯೇ ಬೆಸ್ತರು ವೈರಿಗಳಾಗಿ ಅವುಗಳನ್ನು ಹಿಂಸಿಸುವರು. ದೈವವಶದಿಂದ ಲಬ್ಧವಾದುದರಿಂ ಸಂತುಷ್ಟರಾಗಿ ಪರಾಪಕಾರವಿಲ್ಲದೆ ಸಂತೋಷದಿಂ ಜೀವಿಸುವ ಸಜ್ಜನರಿಗೆ ದುರ್ಜನರು ನಿಷ್ಕಾರಣ ದ್ವೇಷಿಗಳಾಗಿ ಏರ್ಪಟ್ಟು ಅವರನ್ನು ಬಾಧಿಸುವರು. ಲೋಕದೊಳು ನಿಷ್ಕಾರಣವಾಗಿಯೇ ಸಜ್ಜನರನ್ನು ಹಿಂಸಿಸುವದು ದುರ್ಜನರ ಸ್ವಭಾವವೆಂದು ಭಾವವು .... .... .... ||೫೧||

## ಸುಜನಪದ್ಧತಿ ಪ್ರಾರಂಭವು.

ಶ್ಲೋ|| ವಾಂಛಾಸಜ್ಜನಸಂಗತೌ ಪರಗುಣೇ ಪ್ರೀತಿರ್ಗುರೌ ನಮ್ರತಾ
ವಿದ್ಯಾಯಾಂ ವ್ಯಸನಂ ಸ್ವಯೋಷಿತಿ ರತಿರ್ಲೋಕಾಪವಾದಾದ್ಭಯಂ ।
ಭಕ್ತಿಃ ಶೂಲಿನಿ ಶಕ್ತಿರಾತ್ಮದಮನೇ ಸಂಸರ್ಗಮುಕ್ತಿಃ ಖಲೈ ರೇತೇ
ಯೇಷು ವಸಂತಿ ನಿರ್ಮಲಗುಣಾಸ್ತೇಭ್ಯೋ ಮಹದ್ಭ್ಯೋ ನಮಃ ||೫೨||

ಟೀ|| ದುರ್ಜನಪದ್ಧತಿ ನಿರೂಪಣಾನಂತರ ವಿಲಕ್ಷಣವಾಗಿರುವದರಿಂದ ಸುಜನಪದ್ಧತಿಯುಂ ಹೇಳುತ್ತಾನೆ; ಈ ಸುಜನಪದ್ಧತಿಯು ಆದಿಯಲ್ಲಿ ಅತ್ಯಂತಾದರದಿಂದ ಆ ಸಜ್ಜನರನ್ನು ನಮಸ್ಕರಿಸುತ್ತಾನೆ—ಸಜ್ಜನ=ಸಾಧುಜನಗಳ, ಸಂಗತೌ=ಸಮಾಗಮದಲ್ಲಿ, ವಾಂಛಾ=ಅಭಿಲಾಷೆಯು, ಪರ=ಇತರರ, ಗುಣೇ=ಗುಣದಲ್ಲಿ, ಪ್ರೀತಿಃ=ಸಂತೋಷವು, ಗುರೌ=ವಿದ್ಯಾಗುರುವಿನಲ್ಲಿ, ನಮ್ರತಾ=ವಿಧೇಯತ್ವವು, ವಿದ್ಯಾಯಾಂ=ವೇದಾಂತಾದಿ ವಿದ್ಯಾಭ್ಯಾಸದಲ್ಲಿ, ವ್ಯಸನಂ=ಆಸಕ್ತಿಯು, ಸ್ವ=ತನ್ನ, ಯೋಷಿತಿ=ಸ್ತ್ರೀಯಲ್ಲಿ, ರತಿಃ=ಸಂಭೋಗವು, ಲೋಕಾಪವಾದಾತ್=ಲೋಕನಿಂದೆಯು ಬೆಳೆಯುವ, ಭಯಂ=ಭೀತಿಯು, ಶೂಲಿನಿ=ವಿಷ್ಣುವಿನಲ್ಲಿ, ಭಕ್ತಿಃ=ಅನುರಾಗವು, ಆ

ಶ್ಚ—ಮನಸ್ಸನ್ನು, ದಮನೇ—ಅಡಗಿಸುವುದರಲ್ಲಿ, ಶಕ್ತಿಃ—ಸಾಮರ್ಥ್ಯವು, ಖಲೈಃ—ದುರ್ಜನರೊಡನೆ, ಸಂಸರ್ಗಮುಕ್ತಿಃ—ಸಂಬಂಧತ್ಯಾಗವು, ಏತೇ—ಈ ಪೂರ್ವೋಕ್ತಂಗಳಾದ, ನಿರ್ಮಲ—ನಿರ್ದೋಷಗಳಾದ, ಗುಣಾಃ—ಗುಣಗಳು, ಯೇಷು—ಯಾವ ಪುರುಷರಲ್ಲಿ, ವಸಂತಿ—ವಾಸಮಾಡುತ್ತವೋ, ಮಹದ್ಭ್ಯಃ—ಮಹಾತ್ಮರಾದ, ತೇಭ್ಯಃ—ಅವರುಗಳಿಗೆ, ನಮಃ—ನಮಸ್ಕಾರವು. ಶಾರ್ದೂಲವಿಕ್ರೀಡಿತ ವೃತ್ತವು. ||೫೧||

ತಾ|| ಸಾಧು ಸಮಾಗಮವು ಮೋಕ್ಷ ಹೇತುವಾದ್ದರಿಂದ ಅದರಲ್ಲಿ ಜಿಹಾಸೆ ಇಲ್ಲದೆ ಅಪೇಕ್ಷೆ, ಪರರ ಗುಣಗಳಲ್ಲಿ ದೋಷಾರೋಪಣೆ ಇಲ್ಲದೆ ಸಂತೋಷ ಪಡುವಿಕೆ, ವಿದ್ಯೋಪದೇಶಕನಾದ ಗುರುವಿನಲ್ಲಿ ಮದೋನ್ಮತ್ತತೆ ಇಲ್ಲದೆ ಭಕ್ತಿಶ್ರದ್ಧೆಗಳಿಂದ ನಮ್ರತ್ವ, ದ್ಯೂತ ಮೊದಲಾದವುಗಳಲ್ಲಿ ಆಸಕ್ತಿ ಇಲ್ಲದೆ ಮೋಕ್ಷಸಾಧಕವಾದ ಬ್ರಹ್ಮ ಜ್ಞಾನವನ್ನುಂಟುಮಾಡುವ ವೇದಾಂತ ವಿದ್ಯೆಯಲ್ಲಿ ಆಸಕ್ತಿ, ಪರಸ್ತ್ರೀಯಲ್ಲಿ ಆಸಕ್ತಿಯಿಲ್ಲದೆ ತನ್ನ ಸ್ತ್ರೀಯಲ್ಲಿ ಸಂಭೋಗ, ಲೋಕಾಪವಾದಕ್ಕೆ ಲಜ್ಜಾತ್ಯಾಗಮಾಡದೆ ಅದಕ್ಕೆ ಅಂಜುವಿಕೆ, ಕ್ಷುದ್ರದೇವತೆಗಳಲ್ಲಿ ಭಕ್ತಿಯಿಲ್ಲದೆ ಪರಮಾತ್ಮನಾದ ವಿಷ್ಣುವಿನಲ್ಲಿ ಭಕ್ತಿ, ತನಗೆ ಅವಮಾನ ಉಂಟಾಗುತ್ತಿರಲಾಗಿ ಉಪಶಮದಿಂದ ಔದಾಸೀನ್ಯವನ್ನುವಹಿಸದೆ ಸಾಮರ್ಥ್ಯವನ್ನು ವಹಿಸುವಿಕೆ, ದುರ್ಜನಸಹವಾಸಾಭಿಲಾಷೆ ಇಲ್ಲದೆ ತತ್ತ್ಯಾಗ ಬುದ್ಧಿ, ಸಜ್ಜನ ಸಹವಾಸಾಪೇಕ್ಷೆ ಈ ಮೊದಲಾದ ನಿಷ್ಕಲ್ಮಷಗಳಾದ ಗುಣಗಳು ಯಾವ ಪುರುಷರಲ್ಲಿರುವವೋ ಅವರೇ ನಮಸ್ಕಾರಾರ್ಹರಾದುದರಿಂದ ಅಂಥ ಗುಣಗಳುಳ್ಳ ಸತ್ಪುರುಷರಿಗೆ ನಮಸ್ಕರಿಸುವೆನು ಎಂದು ತಾತ್ಪರ್ಯವು. ... .... ||೫೨||

ಶ್ಲೋ|| ವಿಪದಿಧೈರ್ಯಮಥಾಭ್ಯುದಯೇಕ್ಷಮಾಸದಸಿವಾಕ್ಪಟುತಾ
ಯುಧಿವಿಕ್ರಮಃ | ಯಶಸಿಚಾಭಿರತಿರ್ವ್ಯಸನಂಶ್ರುತೌಪ್ರಕೃತಿ
ಸಿದ್ಧಮಿದಂಹಿಮಹಾತ್ಮನಾಂ ||೫೩||

ಟೀ|| ಈ ಸಜ್ಜನರಿಗೆ ನಮಸ್ಕರಿಸಿ ಇವರಿಗೆ ಸ್ವಭಾವಸಿದ್ಧವಾದ ಗುಣಗಳನ್ನು ಹೇಳುತ್ತಾನೆ—ವಿಪದಿ—ವಿಪತ್ಕಾಲದಲ್ಲಿ, ಧೈರ್ಯಂ—ಚಿತ್ತಸ್ಥೈರ್ಯವು, ಅಥ—

ಅನಂತರ, ಸಂಪದಿ=ಸಂಪತ್ತಿನಲ್ಲಿ, ಕ್ಷಮಾ=ಸಹನವೂ, ಸದಸಿ=ವಿದ್ವತ್ಸಭೆಯಲ್ಲಿ, ವಾಕ್ಪಟುತಾ=ವಾಚಾಲತೆಯು, ಯುಧಿ=ಯುದ್ಧದಲ್ಲಿ, ವಿಕ್ರಮಃ=ಪರಾಕ್ರಮವು, ಯಶಸಿ=ಕೀರ್ತಿಯಲ್ಲಿ ಅಭಿರತಿಃ=ವಿಶ್ವಾಸವು, ಶ್ರುತೌ=ವೇದಶಾಸ್ತ್ರಾಭ್ಯಾಸದಲ್ಲಿ ವ್ಯಸನಂ=ಆಸಕ್ತಿಯು, ಇದಂ=ಈ ಸರ್ವವೂ, ಮಹಾತ್ಮನಾಂ=ಮಹಾನುಭಾವರಾದ ವರಿಗೆ, ಪ್ರಕೃತಿ=ಸ್ವಭಾವದಿಂದ, ಸಿದ್ಧಂ=ಸಿದ್ಧವಾಗಿರುವದಷ್ಟೆ. ಈ ಶ್ಲೋಕವು ದ್ರುತವಿಲಂಬಿತವೃತ್ತವು ... ... .... ||೫೩||

ತಾ|| ವಿಪತ್ತು ಬಂದಾಗ ಧೈರ್ಯವು, ಅಭಿವೃದ್ಧಿ ಕಾಲದೊಳು ಕ್ಷಮೆ, ಸಭೆಯಲ್ಲಿ ಸರಸವಚನರಚನಾರೂಪವಾದ ವಾಕ್ಪಟುತ್ವ, ಯುದ್ಧದಲ್ಲಿ ಹಿಂದಿರುಗದೆ ಪರಾಕ್ರಮ, ಕೀರ್ತಿಯನ್ನು ಸಂಪಾದಿಸುವದರಲ್ಲಿ ಆದರ, ವೇದಶಾಸ್ತ್ರಾಧ್ಯಯನ ಮಾಡುವದರಲ್ಲಿ ಆಸಕ್ತಿ, ಎಂಬಿವು ಮಹಾತ್ಮರಿಗೆ ಸ್ವಭಾವಸಿದ್ಧವಾದ ಗುಣಗಳೆಂದು ಭಾವವು ||೫೩||

ಶ್ಲೋ|| ಕರೇಶ್ಲಾಘ್ಯಸ್ತ್ಯಾಗಶ್ಶಿರಸಿಗುರುಪಾದಪ್ರಣಯಿತಾಮುಖೇಸತ್ಯಾ
ವಾಣೀವಿಜಯಿಭುಜಯೋರ್ವೀರ್ಯಮತುಲಂ || ಹೃದಿಸ್ವಚ್ಛಾವೃ
ತ್ತಿಶ್ಶ್ರುತಮಧಿಗತಂಚ ಶ್ರವಣಯೋರ್ವಿನಾಪ್ಯೈಶ್ವರ್ಯೇಣಪ್ರ
ಕೃತಿಮಹತಾಂಮಂಡನಮಿದಂ .... ||೫೪||

ಟೀ|| ಮಹನೀಯರಿಗೆ ಪ್ರಸಿದ್ಧವಾದ ಆಭರಣಗಳಿಗಿಂತಲೂ ವಿಲಕ್ಷಣವಾದ ಆಭರಣ ಸಂಪತ್ತನ್ನು ಹೇಳುತಾನೆ—ಕರೇ=ಹಸ್ತದಲ್ಲಿ, ಶ್ಲಾಘ್ಯಃ=ಪ್ರಶಸ್ತವಾದ, ತ್ಯಾಗಃ=ದಾನವು, ಮಂಡನಂ=ಅಲಂಕಾರವು, ಶಿರಸಿ=ತಲೆಯಲ್ಲಿ, ಗುರು=ಆಚಾರ್ಯನ, ಪಾದ=ಚರಣಗಳಲ್ಲಿ, ಪ್ರಣಯಿತಾ=ಅಭಿವಾದನ ತಾತ್ಪರ್ಯವು, ಮಂಡನಂ=ಅಲಂಕಾರವು, ಮುಖೇ=ಮೊಗದಲ್ಲಿ, ಸತ್ಯಾ=ಸತ್ಯವಾದ, ವಾಣೀ=ವಾಕ್ಯ, ಮಂಡನಂ=ಅಲಂಕಾರವು, ಭುಜಯೋಃ=ಬಾಹುಗಳಲ್ಲಿ, ಅತುಲಂ=ಅಸದೃಶವಾದ, ವಿಜಯಿ=ಜಯಶೀಲವಾದ, ವೀರ್ಯಂ=ಬಲವು, ಮಂಡನಂ=ಅಲಂಕಾರವು, ಹೃದಿ=ಅಂತರಂಗದಲ್ಲಿ, ಸ್ವಚ್ಛಾ=ಕಳಂಕರಹಿತವಾದ, ವೃತ್ತಿಃ=ವ್ಯಾಪಾರವು, ಮಂಡನಂ=ಅಲಂಕಾರವು. ಶ್ರವಣಯೋಃ=ಕರ್ಣಗಳಲ್ಲಿ, ಅಧಿಗತಂ=ಕೇಳಲ್ಪಟ್ಟ, ಶಾಸ್ತ್ರ=ಶಾಸ್ತ್ರವೇ, ಮಂಡನಂ=ಅಲಂಕಾರವು, ಇದಂ=ಈ ಪೂರ್ವೋಕ್ತವಾದ ದಾನ ಮೊದಲಾದ ಸರ್ವವೂ, ಐಶ್ವರ್ಯೇಣ=ಸಂಪತ್ತಿನಿಂದ, ವಿನಾಪಿ=ರಹಿತವಾದಾಗ್ಯೂ, ಪ್ರಕೃತಿ=ಸ್ವಭಾವದಿಂದ, ಮಹತಾಂ=ಮಹಾತ್ಮರಾದವರಿಗೆ, ಮಂಡನಂ=ಅಲಂಕಾರವು, ಶಿಖರಿಣೀವೃತ್ತವು. ... ... ... ||೫೪||

ತಾ|| ಹಸ್ತಗಳಿಗೆ ಶ್ಲಾಘ್ಯವಾದ ದಾನಮಾತುವಿಕೆಯುಳ್ಳವೆ ಕಡಗ

ಮೊದಲಾದ ಭೂಷಣವು ಅಲಂಕಾರವಲ್ಲ. ಶಿರಸ್ಸಿಗೆ ಗುರುಪಾದಾಭಿವಂದನವಲ್ಲದೆ ಕಿರೀಟವಲಂಕಾರವಲ್ಲ. ಮುಖಕ್ಕೆ ಸತ್ಯವಾಕ್ಯವಲ್ಲದೆ ತಾಂಬೂಲವಲಂಕಾರವಲ್ಲ. ಭುಜಗಳಿಗೆ ಅಸದೃಶವಾದ ಪರಾಕ್ರಮವಲಂಕಾರವಲ್ಲದೆ ಭುಜಕೀರ್ತಿ ಮೊದಲಾದದ್ದಲಂಕಾರವಲ್ಲ. ಹೃದಯಕ್ಕೆ ಕಪಟವಿಲ್ಲದಿರುವಿಕೆಯಲಂಕಾರವಲ್ಲದೆ ಹಾರಾದಿಗಳಿಂದಲಂಕಾರವಲ್ಲ ಕರ್ಣಗಳಿಗೆ ಶಾಸ್ತ್ರಶ್ರವಣವಲಂಕಾರವಲ್ಲದೆ ಕುಂಡಲಾದಿಗಳಲಂಕಾರವಲ್ಲ. ಆದಕಾರಣ ಮಹಾತ್ಮರಾದವರಿಗೆ ದಾನ, ಗುರುಪಾದಾಭಿವಂದನ, ಸತ್ಯವಾಕ್ಯ ಇವೇ ಅಲಂಕಾರವಾದುದರಿಂದ ಇವುಗಳನ್ನ ಅವಶ್ಯಕವಾಗಿ ಸಂಪಾದಿಸಬೇಂದುಭಾವವು॥೫೪॥

ಶ್ಲೋ॥ ಪ್ರಾಣಾಘಾತಾನ್ನಿವೃತ್ತಿಃ ಪರಧನಹರಣೇ ಸಂಯಮಸ್ಸತ್ಯವಾಕ್ಯಂ
ಕಾಲೇ ಶಕ್ತ್ಯಾ ಪ್ರದಾನಂ ಯುವತಿಜನಕಥಾಮೂಕಭಾವಃ ಪರೇ
ಷಾಂ ॥ ತೃಷ್ಣಾಸ್ರೋತೋವಿಭಂಗೋ ಗುರುಷು ಚ ವಿನಯಸ್ಸರ್ವ
ಭೂತಾನುಕಂಪಾ ಸಾಮಾನ್ಯಂ ಸರ್ವಶಾಸ್ತ್ರೇಷ್ವನುಪಹತವಿಧಿ
ಶ್ಶ್ರೇಯಸಾಮೇಷ ಪಂಥಾಃ .... .... ॥೫೫॥

ಟೀ॥ ಗುಣಾಢ್ಯತ್ವವು ಶ್ರೇಯಸ್ಸಿಗೆ ಕಾರಣವೆಂಬರ್ಥವನ್ನು ಹೇಳುತ್ತಾನೆ— ಪ್ರಾಣಾಘಾತಾತ್—ಪ್ರಾಣಹಿಂಸೆಯ ದೆಸೆಯಿಂದ, ನಿವೃತ್ತಿಃ—ಹಿಂದಿರುಗುವಿಕೆಯು, ಪರ—ಅನ್ಯರ, ಧನ—ದ್ರವ್ಯದ, ಹರಣೆ—ಅಪಹಾರದಲ್ಲಿ, ಸಂಯಮಃ—ಮನೋನಿಗ್ರಹವು ಕಾಲೆ—ಸಮಯದಲ್ಲಿ, ಸತ್ಯವಾಕ್ಯಂ—ಯಥಾರ್ಥಭಾಷಣವು, ಶಕ್ತ್ಯಾ—ದ್ರವ್ಯಾನುಗುಣದಿಂದ, ಪ್ರದಾನಂ—ದಾನವು, ಯುವತಿಜನ—ಸ್ತ್ರೀಜನಗಳ, ಕಥಾ—ವೃತ್ತಾಂತ ವಿಷಯದಲ್ಲಿ, ಮೂಕಭಾವಃ—ಸುಮ್ಮನಿರುವಿಕೆಯು, ಪರೇಷಾಂ—ಪರರ, ತೃಷ್ಣಾ—ಆಶೆಯೆಂಬ, ಸ್ರೋತಃ—ನದಿಯ, ವಿಭಂಗಃ—ನಾಶವು, ಗುರುಷು—ಗುರುಗಳ ವಿಷಯದಲ್ಲಿ, ವಿನಯಃ—ನಮ್ರಭಾವವು, ಸರ್ವ—ಸಮಸ್ತಗಳಾದ, ಭೂತ—ಪ್ರಾಣಿಗಳಲ್ಲಿ, ಅನುಕಂಪಾ—ದಯೆ, ಸಾಮಾನ್ಯಂ—ಸಮವಾಗಿ ನೋಡುವಿಕೆಯು ಸರ್ವ—ಸಮಸ್ತವಾದ, ಶಾಸ್ತ್ರೇಷು—ವೇದವೇದಾಂತಾದಿಶಾಸ್ತ್ರಗಳಲ್ಲಿ, ಅನುಪಹತ—ಅವಿಚ್ಛಿನ್ನವಾದ, ವಿಧಿಃ—ಅಧ್ಯಯನ ವಿಧಾನವು. ಏಷಃ—ಇದೆ, ಶ್ರೇಯಸಾಂ—ಇಹಪರ ಸೌಖ್ಯಗಳಿಗೆ, ಪಂಥಾಃ—ಮಾರ್ಗವು, ಸ್ರಗ್ಧರಾವೃತ್ತವು. ಮ. ರ. ಭ. ನ. ಯ. ಯ. ಯ. ಗಣಗಳು, ಮೂರು ಮತ್ತು ಏಳನೇ ವರ್ಣಗಳಲ್ಲಿ ಯತಿ ಇರುವಿಕೆಯು ಈ ವೃತ್ತ ಲಕ್ಷಣವೆಂದರಿಯತಕ್ಕದ್ದು .... ... ॥೫೫॥

ತಾ॥ ಪ್ರಾಣಹಿಂಸೆಮಾಡದಿರುವಿಕೆ, ಪರದ್ರವ್ಯವನ್ನಪಹರಿಸದಿರುವಿಕೆ, ಸತ್ಯವಚನ, ದ್ರವ್ಯಾನುಸಾರವಾಗಿ ದಾನ, ಪರಸ್ತ್ರೀ ವೃತ್ತಾಂತಕದಲ್ಲಿ ಮೌನಭಾವ, ಯಾಚಕರ ಆಶೆ ಪೂರ್ತಿಮಾಡುವಿಕೆ, ಮತ್ತು ಆಶೆಯಿಲ್ಲದಿರೋಣ, ಗುರುಗಳಲ್ಲಿ ನಮ್ರಭಾವ, ದಯೆಯಿಂದ ಸರ್ವ ಪ್ರಾಣಿಗಳನ್ನು ಸಮವಾಗಿ ನೋಡುವಿಕೆ, ಇವುಗಳೇ ಸರ್ವಶಾಸ್ತ್ರಪ್ರತಿಪಾದಿತಾರ್ಥಗಳಾದ ಕಾರಣ, ಇವುಗಳದರೊಡನೆ ಸಕಲ ಶ್ರೇಯಸ್ಸುಗಳೂ ಉಂಟಾಗುವವೆಂದು ಭಾವವು. ... ॥೫೫॥

ಶ್ಲೋ॥ ಸಂಪತ್ಸುಮಹತಾಂಚಿತ್ತಂಭವೇದುತ್ಪಲಕೋಮಲಂ॥ ಆಪತ್ಸು
ಚಮಹಾಶೈಲಶಿಲಾಸಂಘಾತಕರ್ಕಶಂ ... ॥೫೬॥

— ಟೀ॥ ಸಂಪದ್ವಿಪತ್ಸಮಯಗಳಲ್ಲಿ ಸುಜನರ ಮನಸ್ಸು ಇರುವರೀತೀಯಂತೆ ಹೇಳುತ್ತಾನೆ—ಸಂಪತ್ಸು=ಧನಧಾನ್ಯಾದಿ ಸಮೃದ್ಧಿಕಾಲಗಳಲ್ಲಿ, ಮಹತಾಂ=ಮಹಾತ್ಮರ ಚಿತ್ತಂ=ಮನಸ್ಸು, ಉತ್ಪಲ=ಕನ್ನೈದಿಲೆ ಹೂವಿನೋಪಾದಿಯಲ್ಲಿ, ಕೋಮಲಂ=ಮೃದುವಾದದ್ದು. ಭವೇತ್=ಆಗುವದು, ವಿಪತ್ಸು=ದಾರಿದ್ರ್ಯದ್ಯನರ್ಥ ಸಮಯಗಳಲ್ಲಿ, ಮಹಾಶೈಲಶಿಲಾಸಂಘಾತಕರ್ಕಶಂ—ಮಹಾಶೈಲ=ದೊಡ್ಡಬೆಟ್ಟದ, ಶಿಲಾಸಂಘಾತ=ಪಾಷಾಣ ಕೂಟದೋಪಾದಿಯಲ್ಲಿ, ಕರ್ಕಶಂ=ಕಠೋರವಾದದ್ದು ಭವೇತ್=ಆಗುವದು. ಉಪಮಾಲಂಕಾರವು ... ... ॥೫೬॥

ತಾ॥ ಮಹಾತ್ಮರಾದವರ ಮನಸ್ಸು ಸಂಪತ್ತು ಬಂದಾಗ ಅತಿಕೋಮಲವಾಗಿಯೂ, ವಿಪತ್ತು ಬಂದ ಕಾಲದಲ್ಲಿ ಪಾಷಾಣದಂತೆ ಅತಿಕಠಿನವಾಗಿಯೂ ಇರುವದಾದ ಕಾರಣ ಈ ವೃತ್ತಿಯನ್ನಾಶ್ರಯಿಸಬೇಕೆಂದು ಭಾವವು. ॥೫೬॥

ಶ್ಲೋ॥ ಪ್ರಿಯಾನ್ಯಾಯ್ಯಾವೃತ್ತಿರ್ಮಲಿನಮಸುಭಂಗೇಪ್ಯಸುಕರಂತ್ವಸಂ
ತೋನಾಭ್ಯರ್ಥ್ಯಾಸ್ಸುಹೃದಪಿನಯಾಚ್ಯಃಕಶಧನಃ । ವಿಪದ್ಯು
ಚ್ಚೈಃಸ್ಥೈರ್ಯಂಪದಮನುವಿಧೇಯಂಚಮಹತಾಂಸತಾಂಕೇ
ನೋದ್ದಿಷ್ಟಂವಿಷಮಮಸಿಧಾರಾವ್ರತಮಿದಂ ॥೫೭॥

ಟೀ॥ ಈ ಎರಡು ಶ್ಲೋಕಗಳಿಂದ ಸಜ್ಜನರಅಸಾಧಾರಣ ಧರ್ಮವನ್ನು ಹೇಳುತ್ತಾನೆ — ನ್ಯಾಯ್ಯಾ=ನ್ಯಾಯವನ್ನು ಬಿಡದಿರುವ, ವೃತ್ತಿಃ=ಜೀವನವು, ಪ್ರಿಯಾ=ಇಷ್ಟವಾದದ್ದು, ಅಸುಭಂಗೇಪಿ=ಪ್ರಾಣಪ್ರಯಾಣ ಸಮಯದಲ್ಲಿ ಕೂಡ, ಮಲಿನಂ=ದುಷ್ಕರ್ಮವು, ಅಸುಕರಂ=ಮಾಡತಕ್ಕದ್ದಲ್ಲವು, ಅಸಂತಃ=ಕೆಟ್ಟ

ಜಳು, ನಾಭ್ಯರ್ಥ್ಯಾಃ=ಯಾಚಿಸಲರ್ಹರಲ್ಲವು, ಸುಹೃದಪಿ=ಪ್ರಾಣಪ್ರಿಯ ಬಂಧು ವಾದಾಗ್ಯೂ, ಕೃಶಧನಃ=ದರಿದ್ರನಾಗಿದ್ದೋಣತೆ, ನಯಾಚ್ಯಃ=ಯಾಚಿಸಲು ಯೋಗ್ಯನಲ್ಲವು, ವಿಪದಿ=ಅನರ್ಥವಾದ ಸಂಕಟಕಾಲದಲ್ಲಿ, ಉಚ್ಚೈಃ=ಅಧಿಕವಾದ, ಸ್ಥೈರ್ಯಂ=ಧೈರ್ಯವು, ಮಹತಾಂ=ಶ್ರೇಷ್ಠರಾದವರ, ಅನುವಿಧೇಯಂ=ಅನುಕೂಲವಾದ, ಪದಂ=ವ್ಯವಸಾಯವಮಾಡಲ್ಪಟ್ಟ ಅಥವಾ ಯೋಗ್ಯವಾದ, ಇದಂ=ಈ ಪೂರ್ವೋಕ್ತವಾದ, ವಿಷಮಂ=ಅಸಾಧಾರಣವಾದ, ಅಸಿಧಾರಾವ್ರತಂ=ಖಡ್ಗಧಾರಾವ್ರತವು, ಸತಾಂ=ಸತ್ಪುರುಷರಿಗೆ, ಕೇನ=ಯಾರಿಂದ, ಉದ್ದಿಷ್ಟಂ=ಉಪದೇಶಿಸಲ್ಪಟ್ಟಿತೋ, (ಖಡ್ಗದಮೇಲೆ ಸಂಚರಿಸುವಿಕೆಯು ಅಸಿಧಾರಾವ್ರತವೆಂದು ಕೆಲವರಂಬುವರು, ಖಡ್ಗದ ಹದದಂತೆ ಅತಿ ತೀಕ್ಷ್ಣವಾದ ವ್ರತವೆಂದೂ, ಮತ್ತೆ ಕೆಲವರು, ಉತ್ತಮರಾದ ಯುವತಿಯರೂ, ಯೌವನ ಪುರುಷರೂ, ಉದ್ದೀಪಕವಾದ ಆಹಾರವಂಮಾಡಿ, ಗಂಧಪುಷ್ಪಾದಿಗಳಿಂದಲಂಕೃತರಾಗಿ, ಒಂದಾನೊಂದು ದಿವ್ಯಭವನದೊಳಸೇರಿ, ಶ್ಲಾಘ್ಯವಾದ ಹಂಸತೂಲಿಕಾತಲ್ಪದೊಳು ಶಯನಮಾಡಿ, ಪರಸ್ಪರ ಸಂಬಂಧವಿಲ್ಲದೆ ಸ್ಥಿರಚಿತ್ತರಾಗಿರುವಿಕೆಯು ಅಸಿಧಾರಾವ್ರತವೆಂದೂ ಕೆಲವರುಪೇಳ್ವರು) ಶಿಖರಿಣೀವೃತ್ತವು. .... ... .... ... ॥೫೭॥

ತಾ॥ ನ್ಯಾಯಮಂ ಬಿಡದೆ ಜೀವಿಸುವಿಕೆ, ಪ್ರಾಣಹೋಗುವ ಸಮಯದಲ್ಲಿಯೂ ದುರ್ಜನರನ್ನು ಯಾಚಿಸದಿರುವಿಕೆ, ದರಿದ್ರನಾದ ಸ್ನೇಹಿತನನ್ನು ಯಾಚಿಸದಿರುವಿಕೆ, ವಿಪತ್ಕಾಲದೊಳು ಚಿತ್ತಸ್ಥೈರ್ಯ ಎಂಬಿವು ಅಸಿಧಾರಾವ್ರತದಂತೆ ಅತಿ ತೀಕ್ಷ್ಣಗಳಾದಾಗ್ಯೂ ಮಹಾತ್ಮರಿಗೆ ಸ್ವಭಾವ ಸಿದ್ಧಗಳಾಗಿರುವವೆಂದು ಭಾವವು, .... .... ॥೫೭॥

ಶ್ಲೋ॥ ಪ್ರದಾನಂಪ್ರಚ್ಛನ್ನಂಗೃಹಮುಪಗತೇಸಂಭ್ರಮವಿಧಿಃಪ್ರಿಯಂ
ಕೃತ್ವಾಮೌನಂಸದಸಿಕಥನಂಚಾಪ್ಯುಪಕೃತೇಃ । ಅನುತ್ಸೇಕೋ
ಲಕ್ಷ್ಮ್ಯಾಂನಿರಭಿಭವಸಾರಾಃಪರಕಥಾಸ್ಸತಾಂಕೇನೋದ್ದಿಷ್ಟಂ
ವಿಷಮಮಸಿಧಾರಾವ್ರತಮಿದಂ .... ॥೫೮॥

ಟೀ॥ ಪ್ರಚ್ಛನ್ನಂ=ಗುಪ್ತವಾದ, ಪ್ರದಾನಂ=ದಾನವು, ಗೃಹಂ=ಸ್ವಮಂದಿರವನ್ನು ಕುರಿತು, (ಅರ್ಥಿನಿ) ಯಾಚಕನು, ಉಪಗತೇಸತಿ=ಬಂದವನಾಗುತ್ತಿರಲಾಗ, ಸಂಭ್ರಮವಿಧಿಃ=ಎದುರ್ಗೊಂಬುವಿಕೆ ಮೊದಲಾದ ಸಡಗರವು, ಪ್ರಿಯಂ=ಅಭೀಷ್ಟವನ್ನು, ಕೃತ್ವಾ=ಮಾಡಿ, ಮೌನಂ=ಸುಮ್ಮನಿರುವಿಕೆಯು, ಸದಸಿ=ರಾಜವಿದ್ವತ್ಸಭೆಯಲ್ಲಿ, ಉಪಕೃತೇಃ=ಪಡೆದ ಉಪಕಾರದ, ಕಥನಂ=ಹೇಳುವಿಕೆಯು, ಲಕ್ಷ್ಮ್ಯಾಂ=ಸಂಪತ್ತಿರುವಕಾಲದೊಳು, ಅನುತ್ಸೇಕಃ=ಗರ್ವಿಸದಿರುವಿಕೆಯು, ಪರ–

ಅನ್ಯರ, ಕಥಾಃ=ವೃತ್ತಾಂತಗಳು, ನಿರಭಿಭವಸಾರಾಃ=ತಿರಸ್ಕಾರ ಸಂಬಂಧವಿಲ್ಲದವುಗಳು ಎಂಬ, ಸತಾಂ=ಪೂಜ್ಯರಾದವರುಗಳಿಗೆ, ಇದಂ=ಈ ಪ್ರಾಗುಕ್ತವಾದ ವಿಷಮಂ=ಅಸಾಧಾರಣವಾದ, ಅಸಿಧಾರಾವ್ರತಂ=ಖಡ್ಗಧಾರಾವ್ರತವು, ಕೇನ=ಯಾರಿಂದ, ಉದ್ದಿಷ್ಟಂ=ಉಪದೇಶಿಸಲ್ಪಟ್ಟಿತೋ, ಶಿಖರಿಣೀವೃತ್ತವು. ॥೫೪॥

ತಾ॥ ಪ್ರಕಾಶಪಡಿಸದೆ ಗುಪ್ತವಾಗಿ ದಾನಮಾಡುವಿಕೆ, ಅತಿಥಿಯು ಮನೆಗೆ ಬಂದೊಡೆ ಪ್ರತ್ಯುತ್ಥಾನಾಭಿನಂದನಗಳಂ ಮಾಡಿ ಆತನ ಇಷ್ಟಾರ್ಥವಂ ನೆರವೇರಿಸಿ ಪ್ರಕಟನ ಮಾಡದೆ ತಾವು ಪರರಿಂದ ಪಡೆದ ಉಪಕಾರವಂ ರಾಜವಿದ್ವತ್ಸಭೆಗಳಲ್ಲಿ ಪ್ರಖ್ಯಾಪನೆ ಮಾಡುತ್ತಾ, ಐಶ್ವರ್ಯ ಬಂದಕಾಲದಲ್ಲಿ ನಿಗರ್ವಶಿರೋಮಣಿಗಳಾಗ ಪರರಂ ದೂಷಿಸದಿರುವಿಕೆ, ಎಂಬೀ ವ್ರತವು ಅಸಿಧಾರಾವ್ರತದಂತೆ ಅತಿ ತೀಕ್ಷ್ಣವಾಗಿದ್ದಾಗ್ಯೂ ಮಹಾತ್ಮರಿಗೆ ಸ್ವಭಾವ ಸಿದ್ಧವಾಗಿರುವದೆಂದು ಭಾವವು. .... ॥೫೪॥

ಶ್ಲೋ॥ ಸಂತಪ್ತಾಯಸಿಸಂಸ್ಥಿತಸ್ಯಪಯಸೋನಾಮಾಪಿನಜ್ಞಾಯತೇಮು
ಕ್ತಾಕಾರತಯಾತದೇವನಳಿನೀಪತ್ರಸ್ಥಿತಂದೃಶ್ಯತೇ । ಅಂತಸ್ಸಾ
ಗರಶುಕ್ತಿಮಧ್ಯಪತಿತಂ ತನ್ಮೌಕ್ತಿಕಂಜಾಯತೇಪ್ರಾಯೇಣಾಧ
ಮಮಧ್ಯಮೋತ್ತಮಜುಷಾಮೇವಂವಿಧಾವೃತ್ತಯಃ ॥೫೫॥

ಟೀ॥ ಅಧಮ ಮಧ್ಯಮೋತ್ತಮ ವೃತ್ತಿಯನ್ನು ಹೇಳುತ್ತಾನೆ—ಸಂತಪ್ತ=ಚೆನ್ನಾಗಿ ಕಾದಿರುವ, ಅಯಸಿ=ಕಬ್ಬಿಣದ ಗುಂಡಿನಲ್ಲಿ, ಸಂಸ್ಥಿತಸ್ಯ=ಹಾಕಲ್ಪಟ್ಟ ಪಯಸಃ=ನೀರಿನ, ನಾಮಾಪಿ=ಹೆಸರುಕೂಡ, ನಜ್ಞಾಯತೇ=ಕೇಳಲ್ಪಡುವದಿಲ್ಲವು ತದೇವ=ಆ ಉದಕವೇ, ನಳಿನೀ=ತಾವರೆಯು, ಪತ್ರ=ಎಲೆಯಲ್ಲಿ, ಸ್ಥಿತಂಸತ್=ಇರುತ್ತಿರುವದಾಗಿ, ಮುಕ್ತಾ=ಮುತ್ತಿನ, ಆಕಾರತಯಾ=ಸ್ವರೂಪದಿಂದ, ದೃಶ್ಯತೇ=ಕಾಣಲ್ಪಡುವದು, ತತ್=ಅದೇ ಜಲವೇ, ಅಂತಸ್ಸಾಗರ=ಸಮುದ್ರ ಮಧ್ಯದಲ್ಲಿರುವ, ಶುಕ್ತಿ=ಮುತ್ತಿನಚಿಪ್ಪಿನ, ಮಧ್ಯ=ನಡುಭಾಗದಲ್ಲಿ, ಪತಿತಂಸತ್=ಬಿದ್ದು, ಮೌಕ್ತಿಕಂ=ಮುತ್ತು, ಜಾಯತೇ=ಆಗುತ್ತದೆ. ಪ್ರಾಯೇಣ=ಪ್ರಾಯಶಃ, ಅಧಮ=ನಿಕೃಷ್ಟವಾದ, ಮಧ್ಯಮ=ಸಾಧಾರಣವಾದ, ಉತ್ತಮ=ಉತ್ಕೃಷ್ಟವಾದ ರೀತಿಯನ್ನು, ಜುಷಾಂ=ಹೊಂದಿರುವರ. ವೃತ್ತಯಃ=ವ್ಯಾಪಾರಗಳು ಅಥವಾ ರೀತಿಗಳು, ಏವಂವಿಧಾಃ=ಈ ಪ್ರಕಾರವಾದವುಗಳು. ಇಲ್ಲಿ ಯಥಾಸಂಖ್ಯಾಲಂಕಾರವು. ॥೫೫॥

ತಾ॥ ಚೆಂಪಾಗಿ ಕಾದಿರುವ ಕಬ್ಬಿಣದಗುಂಡಿನಲ್ಲಿ ಬಿದ್ದ ಸ್ವಾತಿಮಳೆಯು ಜಲಬಿಂದುವಿನಂತೆ, ನೀಚರನ್ನಾಶ್ರಯಿಸಿರುವನ ನಾಮ ಮಾತ್ರವೂ ಪ್ರಕಾಶಿಸುವದಿಲ್ಲವು. ಕಮಲಪತ್ರದಲ್ಲಿ ಬಿದ್ದಿರುವ ಆ ಜಲಬಿಂದುವಿನಂತೆ

ಮಧ್ಯಮನನ್ನಾಶ್ರಯಿಸಿರುವವನಿಗೆ ಪ್ರಯೋಜನವಿಲ್ಲದಿದ್ದರೂ ಸ್ವಲ್ಪಮಟ್ಟಿಗೆ ಪ್ರಕಾಶ ಉಂಟಾಗಿರುವದು. ಕಡಲ ಮಧ್ಯದಲ್ಲಿರುವ ಉತ್ತಮವಾದ ಮುತ್ತಿನಚಿಪ್ಪಿನಲ್ಲಿ ಬಿದ್ದು ಮುತ್ತಾದ ಆ ಜಲಬಿಂದುವಿನಂತೆ, ಉತ್ತಮ ಪುರುಷನನ್ನಾಶ್ರಯಿಸಿರುವಾತನು ಮಹತ್ಪ್ರಕಾಶವನ್ನೈದುವನಾದುದರಿಂದಲೇ ಮಹಾಶ್ರಯವನ್ನು ಮಾಡಬೇಕೆಂದು ಭಾವವು. ||೫೯||

ಶ್ಲೋ|| ಯಃಪ್ರೀಣಯೇತ್ಸುಚರಿತೈಃಪಿತರಂ ಸಪುತ್ರೋಯದ್ಭರ್ತುರೇವ
ಹಿತಮಿಚ್ಛತಿತತ್ಕಳತ್ರಂ||ತನ್ಮಿತ್ರಮಾಪದಿಸುಖೇಚಸಮಕ್ರಿಯಂ
ಯದೇತತ್ತ್ರಯಂಜಗತಿಪುಣ್ಯಕೃತೋಲಭಂತೇ .... ||೬೦||

ಟೀ|| ಸತ್ಪುತ್ರ ಕಳತ್ರ ಸಂಪತ್ತುಗಳು ಪುಣ್ಯವಂತನ ಆಧೀನಗಳೆಂಬರ್ಥವಂ ಪೇಳುತ್ತಾನೆ—ಯಃಪುತ್ರಃ=ಯಾವ ಮಗನು, ಸುಚರಿತೈಃ=ಸಚ್ಚರಿತ್ರಗಳಿಂದ ಅಥವಾ ಸದಾಚಾರಗಳಿಂದ, ಪಿತರಂ=ತಂದೆಯನ್ನು, ಪ್ರೀಣಯೇತ್=ಸಂತೋಷಪಡಿಸುವನೋ, ಸಪುತ್ರಃ=ಅವನೇಪುತ್ರಶಬ್ದವಾಚ್ಯನು, ಯತ್=ಯಾವ, ಕಳತ್ರಂ=ಸತಿಯು, ಭರ್ತುರೇವ=ಗಂಡನಿಗೇನೆ, ಹಿತಂ=ಇಷ್ಟವನ್ನು, ಇಚ್ಛತಿ=ಇಚ್ಛೈಸುವಳೋ, ತದೇವಕಳತ್ರಂ=ಅವಳೇಹೆಂಡತಿಯು, ಯತ್=ಯಾವಮಿತ್ರನು, ಆಪದಿ=ಆಪತ್ಕಾಲದಲ್ಲಿಯೂ, ಸುಖೇಚ=ಸುಖಕಾಲದಲ್ಲಿಯೂ, ಸಮ=ವ್ಯತ್ಯಾಸವಿಲ್ಲದ, ಕ್ರಿಯಂ=ವ್ಯಾಪಾರವುಳ್ಳವನಾಗಿರುವನೋ, ತತ್ಮಿತ್ರಂ=ಅವನೇ ಸ್ನೇಹಿತನು, ಏತತ್ತ್ರಯಂ=ಈ ಸತ್ಪುತ್ರ ಮೊದಲಾದ ಮೂರನ್ನು, ಜಗತಿ=ಭೂಮಿಯಲ್ಲಿ, ಪುಣ್ಯಕೃತಃ=ಸುಕೃತಿಗಳು, ಲಭಂತೇ=ಹೊಂದುವರು, ವಸಂತತಿಲಕಾವೃತ್ತವು ||೬೦||

ತಾ|| ಯಾವ ಮಗನು ತನ್ನ ತಂದೆಯನ್ನು ಸಚ್ಚರಿತ್ರಗಳಿಂದ ಸಂತೋಷಪಡಿಸುವನೋ ಅವನೇ ಪುತ್ರಶಬ್ದವಾಚ್ಯನು, (ಪುಂ ಎಂಬ ನರಕದಿಂದ ತಂದೆತಾಯಿಗಳನ್ನು ಉದ್ಧಾರ ಮಾಡುವನಾಗಿ ಪುತ್ರನು) ಯಾವ ಸ್ತ್ರೀಯು ಸರ್ವದಾ ತನ್ನ ಗಂಡನಿಗೇ ಹಿತವನ್ನಾಚರಿಸುವಳೋ ಅವಳೇ ಹೆಂಡತಿಯು ವಿಪತ್ಸಮಯ, ಸುಖಕಾಲ, ಎಂಬ ಉಭಯಕಾಲದಲ್ಲಿಯೂ, ಸಮನಾಗಿರುವವನೇ ಸನ್ಮಿತ್ರನು, ಆದ್ದರಿಂದ ಈ ಮೂರೂ ಲೋಕದಲ್ಲಿ ಧನ್ಯರಾದವರಿಗೆ ಲಭಿಸುವದೆಂದು ಭಾವವು. .... ||೬೦||

ಶ್ಲೋ|| ನಮ್ರತ್ವೇನೋನ್ನಮಂತಃಪರಗುಣಕಥನೈಸ್ಸ್ವಾನ್ಗುಣಾನ್ಖ್ಯಾ
ಪಯಂತಸ್ಸ್ವಾರ್ಥಾನ್ಸಂಪಾದಯಂತೋವಿತತಪೃಥುತರಾರಂಭಯತ್ನಾ.

ತ್ನಾಃಪರಾರ್ಥೇ ॥ ಕ್ಷಾಂತ್ಯೈವಾಕ್ಷೇಪರೂಕ್ಷಾಕ್ಷರಮುಖರಮುಖಾನ್ದುರ್ಜನಾನ್ದುಃಖಯಂತಸ್ಸಂತಸ್ಸಾಶ್ಚರ್ಯಚರ್ಯಾಜಗತಿಬಹುಮತಾಃಕಸ್ಯನಾಭ್ಯರ್ಚನೀಯಾಃ .... ॥೬೦॥

ಟೀ॥ ಸಜ್ಜನರು ಅಸಾಧಾರಣ ಧರ್ಮವುಳ್ಳವರಾದ ಕಾರಣ ಸರ್ವಪೂಜ್ಯರೆಂಬ ಥವಂ ಪೇಳುತ್ತಾನೆ—ನಮ್ರತ್ವೇನ=ನಮ್ರಭಾವದಿಂದ, ಉನ್ನಮಂತಃ=ಉತ್ತಮ ಸ್ಥಿತಿಯನ್ನು ಹೊಂದುವ, ಪರ=ಅನ್ಯರ, ಗುಣ=ಸದ್ಗುಣಗಳ, ಕಥನೈಃ=ವರ್ಣನೆಗಳಿಂದ, ಸ್ವಾನ್=ತಮ್ಮವುಗಳಾದ, ಗುಣಾನ್=ಸದ್ಗುಣಗಳನ್ನು, ಖ್ಯಾಪಯಂತಃ=ಪ್ರಕಟಿಸುತ್ತಿರುವ, ಪರಾರ್ಥೇ=ಪರಪ್ರಯೋಜನಕ್ಕೋಸ್ಕರ, ವಿತತ=ವಿಸ್ತಾರವಾದ, ಪೃಥುತರ=ಮಹತ್ತರವಾದ, ಆರಂಭ=ಪ್ರಾರಂಭವು, ಯತ್ನಾಃ=ಉತ್ಸಾಹವುಳ್ಳವರಾಗಿ, ಸ್ವಾರ್ಥಾನ್=ಸ್ವ ಪ್ರಯೋಜನಗಳನ್ನು, ಸಂಪಾದಯಂತಃ=ಸಂಪಾದಿಸಿಕೊಳ್ಳುತ್ತಿರುವ, ಕ್ಷಾಂತ್ಯೈವ=ಸಹನದಿಂದಲೇ, ಆಕ್ಷೇಪ=ನಿಂದೆಯಿಂದ, ರೂಕ್ಷ=ಕಠಿನವಾದ, ಅಕ್ಷರ=ಅಕ್ಷರಗಳುಳ್ಳ ಅಥವಾ ವಾಕ್ಯಗಳುಳ್ಳ, ಮುಖರ=ವಾಚಾಲಕವಾದ, ಮುಖಾನ್=ಮುಖಗಳುಳ್ಳ, ದುರ್ಜನಾನ್=ದುರಾತ್ಮರನ್ನು ದುಃಖಯಂತಃ=ಸಂತಾಪಪಡಿಸುತ್ತಿರುವ, ಸಾಶ್ಚರ್ಯ=ಆಶ್ಚರ್ಯದೊಡನೆ ಸಹಿತವಾದ, ಚರ್ಯಾಃ=ವ್ಯಾಪಾರಗಳುಳ್ಳವರಾಗಿ, ಸಂತಃ=ಸತ್ಪುರುಷರು, ಜಗತಿ=ಭೂಲೋಕದಲ್ಲಿ, ಬಹುಮತಾಃ=ಬಹುಮಾನಿತರಾಗಿ, ಕಸ್ಯ=ಯಾವ ಪುರುಷನಿಗೆ, ನಾಭ್ಯರ್ಚನೀಯಾಃ=ಪೂಜಾರ್ಹರಲ್ಲವು. ... ... ॥೬೦॥

ತಾ॥ ತಾವು ನಮ್ರರಾಗಿಯೇ ಉತ್ತಮ ಸ್ಥಿತಿಯನ್ನು ಹೊಂದುತ್ತಿರುವವರಾಗಿಯೂ, ಪರರ ಸದ್ಗುಣಗಳನ್ನು ಪ್ರಖ್ಯಾಪನ ಮಾಡುವದರ ಮೂಲಕ ಸ್ವಸದ್ಗುಣಗಳನ್ನು ಪ್ರಕಾಶಪಡಿಸಿಕೊಳ್ಳುತ್ತಾ, ಪರಪ್ರಯೋಜನಗಳನ್ನು ಮಾಡಲುತ್ಸಾಹವುಳ್ಳವರಾಗಿಯೇ ಸ್ವಪ್ರಯೋಜನಗಳನ್ನು ಸಂಪಾದಿಸಿಕೊಳ್ಳುತ್ತಾ, ತಾವು ಶಾಂತಿಯುಳ್ಳವರಾಗಿಯೇ ದುರ್ಜನರನ್ನು ಸಂತಾಪಪಡಿಸುತ್ತಾ ಇರುವ ಆಶ್ಚರ್ಯವಾದ ವ್ಯಾಪಾರವುಳ್ಳ ಸಜ್ಜನರು ಸರ್ವಮಾನ್ಯರೆಂದು ಭಾವವು. .... .... ॥೬೦॥

## ಪರೋಪಕಾರ ಪದ್ಧತಿ ಪ್ರಾರಂಭವು.

ಶ್ಲೋ॥ ಭವಂತಿನಮ್ರಾಸ್ತರವಃಫಲೋದ್ಗಮೈರ್ನವಾಂಬುಭಿರ್ದೂರವಿಲಂಬಿನೋಘನಾಃ ॥ ಅನುದ್ಧತಾಸ್ಸತ್ಪುರುಷಾಸ್ಸಮೃದ್ಧಿಭಿಸ್ಸ್ವಭಾವವಏವೈಷಪರೋಪಕಾರಿಣಾಂ .... ॥೬೧॥

ಟೀ॥ ಸಾಧುತ್ವಕ್ಕೆ ಪರೋಪಕಾರವೇ ಫಲವಾದ್ದರಿಂದ ಸುಜನಪದ್ಧತಿ ನಿರೂಪಣಾಂತರದಲ್ಲಿ ಪರೋಪಕಾರ ಪದ್ಧತಿಯನ್ನು ನಿರೂಪಿಸುತ್ತಾನೆ—ತರವಃ=ಮಾವು ಮೊದಲಾದ ಮರಗಳು, ಫಲ=ಹಣ್ಣುಗಳ, ಉದ್ಗಮೈಃ=ಭಾರಗಳಿಂದ, ನಮ್ರಾಃ=ತಗ್ಗುವಂಥವುಗಳು, ಭವಂತಿ-ಆಗುತ್ತವೆ. ಘನಾಃ=ಮೇಘಗಳು, ನವ=ನೂತನಗಳಾದ, ಅಂಬುಭಿಃ=ಉದಕಗಳಿಂದ, ಉಪಲಕ್ಷಿತಾಃ=ಕೂಡಿದವುಗಳಾಗಿ, ದೂರ=ಬಹುದೂರದಲ್ಲಿ, ವಿಲಂಬಿನಃ=ವರ್ಷಿಸುವದಕ್ಕೋಸ್ಕರ ಜೋಲಾಡುತ್ತಿರುವಂಥವುಗಳು, ಭವಂತಿ=ಆಗುತ್ತವೆ, ಸತ್ಪುರುಷಾಃ=ಸಜ್ಜನರು, ಸಮೃದ್ಧಿಭಿಃ=ಐಶ್ವರ್ಯಗಳಿಂದ, ಉಪಲಕ್ಷಿತಾಃ=ಕೂಡಿದವರಾಗಿ, ಅನುದ್ಧತಾಃ=ನಿರಹಂಕಾರಿಗಳು, ಅಥವಾ ನಮ್ರರಾದವರು, ಭವಂತಿ=ಆಗುವರು, ಏಷಃ=ಈ ಹಿಂದೆ ಹೇಳಿದ ವ್ಯವಹಾರವು, ಪರ=ಅನ್ಯರ. ಉಪಕಾರಿಣಾಂ=ಹಿತಾಚರಣೆಯುಳ್ಳ ಸತ್ಪುರುಷರಿಗೆ, ಸ್ವಭಾವವವ=ಸ್ವತಸ್ಸಿದ್ಧವಾದದ್ದು, ಅರ್ಥಾಂತರನ್ಯಾಸಾಲಂಕಾರವು. ವಂಶಸ್ಥವೃತ್ತವು-ಜ, ತ, ಜ, ರ ಗಣಗಳು ಮೂರನೇ ವರ್ಣದಲ್ಲಿ ವಿರಾಮವಿರುವಿಕೆಯು ಲಕ್ಷಣವೆಂದರಿವುದು. ... ... ... ||೭೦||

ತಾ॥ ವಿಶೇಷವಾದ ಫಲಭಾರಗಳಿಂದೊಡಗೂಡಿದ ಮಾವು ಮೊದಲಾದ ವೃಕ್ಷಗಳಂತೆಯೂ, ನೂತನವಾದ ಉದಕಗಳಿಂದೊಡಗೂಡಿ ಸರ್ವತ್ರ ವರ್ಷಿಸುವದಕ್ಕೋಸ್ಕರ ಜೋಲಾಡುವಮಾನಗಳಾದ ಮೇಘಗಳಂತೆಯೂ, ಧನಧಾನ್ಯಾದಿ ಸಮೃದ್ಧಿಗಳಿಂದೊಡಗೂಡಿ ನಿರಹಂಕಾರಿಗಳಾಗಿ ಪರೋಪಕಾರ ನಿರತರಾಗಿಯೂ ಇರುವಿಕೆಯು ಸಜ್ಜನರಿಗೆ ಸ್ವಭಾವ ಸಿದ್ಧವಾದ ಧರ್ಮವೆಂದಾಶಯವು .... .... ||೭೦||

ಶ್ಲೋ॥ ಶ್ರೋತ್ರಂ ಶ್ರುತೇನೈವ ನ ಕುಂಡಲೇನ ದಾನೇನ ಪಾಣಿರ್ನ ತು ಕಂಕಣೇನ ॥ ವಿಭಾತಿ ಕಾಯಃ ಕರುಣಾಕುಲಾನಾಂ ಪರೋಪಕಾರೇಣ ನ ಚಂದನೇನ .... .... ||೭೧||

ಟೀ॥ ಸಜ್ಜನರಿಗೆ ಮುಖ್ಯವಾದ ಅಲಂಕಾರ ಸಂಪತ್ತಿಯಂ ಪೇಳುತ್ತಾನೆ—ಕರುಣಾಕುಲಾನಾಂ=ದಯಾಳುಗಳಾದವರ, ಶ್ರೋತ್ರಂ=ಕಿವಿಗಳು, ಶ್ರುತೇನೈವ=ಧರ್ಮಶಾಸ್ತ್ರಶ್ರವಣದಿಂದಲೇ, ವಿಭಾತಿ=ಪ್ರಕಾಶಿಸುವದು, ಕುಂಡಲೇನ=ಮಣಿಮಯ ಕರ್ಣಕುಂಡಲಗಳಿಂದ, ನತು ವಿಭಾತಿ=ಪ್ರಕಾಶಿಸುವದಿಲ್ಲವು, ಪಾಣಿಃ=ಹಸ್ತವು, ದಾನೇನೈವ=ದಾನವನ್ನಾಡುವಿಕೆಯಿಂದಲೆ, ವಿಭಾತಿ=ಪ್ರಕಾಶಿಸುವದು, ಕಂಕಣೇನ=ಭಂಗಾರ ಮೊದಲಾದ ಕಡಗದಿಂದ, ನವಿಭಾತಿ=ಪ್ರಕಾಶಿಸುವದಿಲ್ಲವು, ಕಾಯಃ=ದೇಹವು, ಪರೋಪಕಾರೇಣೈವ=ಪರೋಪಕಾರದಿಂದಲೆ, ವಿಭಾತಿ=ಪ್ರಕಾಶಿಸುವದು. ಚಂದನೇನ=ಗಂಧದಿಂದ, ನತು ವಿಭಾತಿ=ಪ್ರಕಾಶಿಸುವದಿಲ್ಲವು, ಉಪಜಾತಿವೃತ್ತವು,

ತಾ॥ ಪರೋಪಕಾರ ನಿರತರಾದ ದಯಾಳುಗಳಿಗೆ ಶ್ರೋತ್ರಗಳು ಧರ್ಮಶಾಸ್ತ್ರಾದಿ ಶ್ರವಣಗಳಿಂದಲ್ಲದೆ ಕುಂಡಲಗಳಿಂದ ಪ್ರಕಾಶಿಸದು. ಹಸ್ತವು, ಸತ್ಪಾತ್ರದಲ್ಲಿ ದಾನಮಾಡುವದರಿಂದಲ್ಲದೆ ಸುವರ್ಣಕಂಕಣದಿಂ ಭಾಸಿಸದು. ಶರೀರವು ಸರ್ವದಾ ಪರೋಪಕಾರದಿಂದಲ್ಲದ ಕರ್ಪೂರ ಕಸ್ತೂರಿ ಮೊದಲಾದವುಗಳಿಂದೊಡಗೂಡಿದ ಚಂದನದಿಂದ ಪ್ರಕಾಶಿಸುವದಿಲ್ಲವು. ಆದ್ದರಿಂದಲೇ ಸರ್ವದಾ ಶಾಸ್ತ್ರಶ್ರವಣವನ್ನು, ಯಥಾಶಕ್ತಿ ದಾನವನ್ನು, ಪರೋಪಕಾರವನ್ನು ಮಾಡಬೇಕೆಂದು ಭಾವವು .... ॥೬೩॥

ಶ್ಲೋ॥ ಪದ್ಮಾಕರಂದಿನಕರೋವಿಕಚಂಕರೋತಿಚಂದ್ರೋವಿಕಾಸಯತಿ
ಕೈರವಚಕ್ರವಾಳಂ ॥ ನಾಭ್ಯರ್ಥಿತೋಜಲಧರೋಪಿಜಲಂದದಾ
ತಿಸಂತಸ್ಸ್ವಯಂಪರಹಿತೇವಿಹಿತಾಭಿಯೋಗಾಃ ॥೬೪॥

ಟೀ॥ ಯಾಚಿಸಲ್ಪಡದೆಯೇ ಪರೋಪಕಾರನಿರತರಾದ ಸಜ್ಜನರ ಚರಿತ್ರೆಯಂ, ವಿವರಿಸುತ್ತಾನೆ. ದಿನಕರಃ=ಸೂರ್ಯನು, ನಾಭ್ಯರ್ಥಿತಃ=ಯಾಚಿಸಲ್ಪಡದೆಯೇ, ಪದ್ಮಾಕರಂ=ಕಮಲವನವನ್ನು. ವಿಕಚಂ=ವಿಕಸಿತವಾದದ್ದನ್ನಾಗಿ. ಕರೋತಿ=ಮಾಡುತ್ತಾನೆ. ಚಂದ್ರೋಪಿ=ಚಂದ್ರನು ಕೂಡ, ಕೈರವಚಕ್ರವಾಳಂ=ಕುಮುದಸಮುದಾಯವನ್ನು, ವಿಕಾಸಯತಿ=ಅರಳಿಸುವನು, ಜಲಧರೋಪಿ=ಮೇಘವೂ ಕೂಡ, ನಾಭ್ಯರ್ಥಿತಸ್ಸನ್ನೇವ=ಯಾಚಿಸಲ್ಪಡದಿರುವದಾಗಿಯೆ, ಜಲಂ=ಉದಕವನ್ನು ದದಾತಿ=ಕೊಡುವದು, ಸಂತಃ=ಸತ್ಪುರುಷರು, ಪರಹಿತೆ—ಪರ=ಅನ್ಯರ, ಹಿತೆ=ಹಿತಾಚರಣೆಯಲ್ಲಿ, ವಿಹಿತಾಭಿಯೋಗಾಃ—ವಿಹಿತ=ಮಾಡಲ್ಪಟ್ಟ, ಅಭಿಯೋಗಾಃ=ಆಸಕ್ತಿಯುಳ್ಳವರು, ಅರ್ಥಾಂತರನ್ಯಾಸಾಲಂಕಾರವು. .... ॥೬೪॥

ತಾ॥ ಯಾಚಿಸಲ್ಪಡದವನಾಗಿಯೇ ಹೇಗೆ ಸೂರ್ಯನು ಕಮಲಗಳನ್ನು ಅರಳಿಸುವನೋ, ಮತ್ತು ಚಂದ್ರನು ಕೇಳಲ್ಪಡದವನಾಗಿಯೇ ಹೇಗೆ ಕುಮುದ ಪುಷ್ಪಗಳನ್ನು ವಿಕಾಸಮಾಡುವನೋ, ಮೇಘವು ಹೇಗೆ ಅಯಾಚಿತವಾಗಿಯೇ ಜಲವನ್ನು ವರ್ಷಿಸುವದೋ ಇವುಗಳಂತೆಯೇ ಸತ್ಪುರುಷರೂ ಅಯಾಚಿತರಾಗಿಯೇ ಪರೋಪಕಾರ ತತ್ಪರರೆಂದು ಭಾವವು. .... .... .... ॥೬೪॥

ಶ್ಲೋ॥ ಏಕೇಸತ್ಪುರುಷಾಃಪರಾರ್ಥಘಟಕಾಸ್ಸ್ವಾರ್ಥಾನ್ ಪರಿತ್ಯಜ್ಯಯೇ
ಸಾಮಾನ್ಯಾಸ್ತುಪರಾರ್ಥಮುದ್ಯಮಭೃತ ಸ್ಸ್ವಾರ್ಥಾವಿರೋಧೇ
ನಯೇ ॥ ತೇಮೀಮಾನುಷರಾಕ್ಷಸಾಃಪರಹಿತಂ ಸ್ವಾರ್ಥಾಯನಿ

ಘ್ನಂತಿಯೇಯೇತುಘ್ನಂತಿನಿರರ್ಥಕಂ ಪರಹಿತಂತೇಕೇನಜಾನೀ
ಮಹೇ ॥ .... .... .... ॥೭೪॥

ಟೀ॥ ನಡತೆಯ ತಾರತಮ್ಯದಿಂದ ಪುರುಷ ಭೇದವನ್ನು, ಹೇಳುತ್ತಾನೆ— ಯೇ=ಯಾವ ಪುರುಷರು, ಸ್ವ=ತಮ್ಮ, ಅರ್ಥಾನ್=ಪ್ರಯೋಜನಗಳನ್ನು, ಪರಿತ್ಯಜ್ಯ=ಬಿಟ್ಟು, ಪರ=ಇತರರ, ಅರ್ಥ=ಪ್ರಯೋಜನಗಳನ್ನು ಘಟಕಾಃ=ಘಟನೆ ಮಾಡತಕ್ಕ ಸ್ವಭಾವವುಳ್ಳವರೋ, ಏತೇ=ಇವರು, ಸತ್ಪುರುಷಾಃ=ಉತ್ತಮ ಪುರುಷರು, ಯೇತು=ಯಾವ ಪುರುಷರಾದರೆ, ಸ್ವ=ತಮ್ಮ, ಅರ್ಥ=ಪ್ರಯೋಜನಕ್ಕೆ ಅವಿರೋಧೇನ=ವಿರೋಧರಾಹಿತ್ಯದಿಂದಲೇ, ಪರ=ಇತರರ, ಅರ್ಥಂ=ಪ್ರಯೋಜನಕ್ಕೆ ನಿರ್ವಾಹಕರ್ಕೋಸ್ಕರ, ಉದ್ಯಮ=ಉದ್ಯೋಗವನ್ನು, ಭೃತಃ=ವಹಿಸುವರೋ, ತೇ=ಅವರು, ಸಾಮಾನ್ಯಾಃ=ಮಧ್ಯಮರು, ಯೇತು=ಯಾವ ಮನುಜನಾದರೆ, ಸ್ವ-ತಮ್ಮ ಅರ್ಥಾಯ=ಪ್ರಯೋಜನಕ್ಕೋಸ್ಕರ, ಪರ=ಇತರರ, ಹಿತಂ=ಪ್ರಯೋಜನವನ್ನು, ನಿಘ್ನಂತಿ=ನಾಶಮಾಡುವರೋ, ತೇಅಮೀ=ಈ ಪುರುಷರು, ಮಾನುಷ=ಮನುಷ್ಯಶಬ್ದದಿಂದ ಕರೆಯಲ್ಪಡುವ, ರಾಕ್ಷಸಾಃ=ರಾಕ್ಷಸರು, ಯೇತು=ಯಾವ ಪುರುಷರಾದರೆ, ನಿರರ್ಥಕಂ=ನಿಷ್ಪ್ರಯೋಜನವಾಗಿಯೆ, ಪರ=ಇತರರ, ಹಿತಂ=ಪ್ರಯೋಜನವನ್ನು, ಘ್ನಂತಿ=ನಾಶಗೊಳಿಸುವರೊ, ತೇ=ಆ ಪುರುಷರು, ಕೇ=ಎಂಥವರೊ, ನಜಾನೀಮಹೇ=ಅರಿಯೆವು, ಶಾರ್ದೂಲವಿಕ್ರೀಡಿತವೃತ್ತವು ... ॥೭೪॥

ತಾ॥ ಸ್ವಪ್ರಯೋಜನವನ್ನಾದರೂ ಬಿಟ್ಟು ಪರಪ್ರಯೋಜನವನ್ನು ಮಾತ್ರ ಮಾಡಲುದ್ಯಮಿಸುತ್ತಿರುವವರು ಉತ್ತಮ ಪುರುಷರೆಂತಲೂ, ಸ್ವಕಾರ್ಯಕ್ಕೆ ವಿರೋಧವಿಲ್ಲದಹಾಗೆ ಪರಪ್ರಯೋಜನವನ್ನು ಮಾಡಲುಜ್ಜುಗಿಸುವವರು ಮಧ್ಯಮ ಪುರುಷರೆಂತಲೂ, ಸ್ವಪ್ರಯೋಜನಕ್ಕಾಗಿ ಪರಪ್ರಯೋಜನವನ್ನು ಹಾಳು ಮಾಡುವವರು ಪುರುಷಾಧಮರೆಂತಲೂ, ಸ್ವಪ್ರಯೋಜನವನ್ನು ನಾಶಮಾಡಿಕೊಂಡು ಪರಪ್ರಯೋಜನವನ್ನೂ ಹಾಳು ಮಾಡುವ ನೀಚರು ಇಂಥವರೆಂದು ಉಚ್ಚರಿಸಲಿಕ್ಕೆ ಬಾರದಾಗಿದೆ ಶ್ರೇಯಸ್ಕಾಮಿಯಾದವನು ಇವುಗಳಲ್ಲಿ ಉತ್ತಮ ಮಾರ್ಗವನ್ನಾಶ್ರಯಿಸಬೇಕೆಂದು ಭಾವವು. .... .... ॥೭೪॥

ಶ್ಲೋ॥ ಪಾಪಾನ್ನಿವಾರಯತಿಯೋಜಯತೇಹಿತಾಯಗುಹ್ಯಂನಿಗೂಹತಿ
ಗುಣಾನ್ಪ್ರಕಟೀಕರೋತಿ ॥ ಆಪದ್ಗತಂಚನಜಹಾತಿದದಾತಿಕಾ
ಲೇಸನ್ಮಿತ್ರಲಕ್ಷಣಮಿದಂಪ್ರವದಂತಿಸಂತಃ .... ॥೭೫॥

ಟೀ॥ ಸನ್ಮಿತ್ರಲಕ್ಷಣವು ಹೇಳುತ್ತಾನೆ—ಪಾಪಾತ್=ಪಾಪಕೃತ್ಯದ ದೆಸೆ

ಯಿಂದ, ನಿವಾರಯತಿ=ಹಿಂದಿರುಗಿಸುತ್ತಾನೆ, ಹಿತಾಯ=ಸತ್ಕರ್ಮಾಚರಣೆಗೋಸ್ಕರ, ಯೋಜಯತಿ=ಪ್ರವರ್ತನಗೊಳಿಸುವವನು, ಗುಹ್ಯಂ=ರಹಸ್ಯವನ್ನು, ನಿಗೂಹತಿ, ಪ್ರಕಟಿಸದಿರುವನು, ಗುಣಾನ್=ಸದ್ಗುಣಗಳನ್ನು, ಪ್ರಕಟೀಕರೋತಿ=ಪ್ರಸಿದ್ಧಪಡಿಸುವನು, ಆಪತ್=ಅತಿಸಂಕಟವನ್ನು. ಗತಂಚ=ಹೊಂದಿರುವವನನ್ನು, ನಜಹಾತಿ=ಬಿಡುವದಿಲ್ಲವು, ಕಾಲೆ=ವ್ಯಸನಾದಿ ಸಮಯದಲ್ಲಿ, ದದಾತಿ=ಇಷ್ಟಾರ್ಥವನ್ನೀಯುವನು. ತದಿದಂ=ಆ ಈ ಪಾಪನಿವಾರಣೆ ಮೊದಲಾದುದೆಲ್ಲವು. ಸಂತಃ=ಸತ್ಪುರುಷರ, ಸತ್=ಕಪಟವಿಲ್ಲದಿರುವ. ಮಿತ್ರ=ಸ್ನೇಹಿತನ, ಲಕ್ಷಣಂ=ಸ್ವರೂಪವೆಂದು ಪ್ರವದಂತಿ=ಹೇಳುವರು. ವಸಂತತಿಲಕಾ ವೃತ್ತವು, ||೬೬||

ತಾ|| ಧರ್ಮೋಪದೇಶದಿಂದ ಪಾಪಕರ್ಮವನ್ನು ಮಾಡಿಸದೆಯೂ, ಸತ್ಕರ್ಮಾಚರಣೆಯಲ್ಲಿ ಪ್ರೋತ್ಸಾಹಗೊಳಿಸುತ್ತಲೂ, ರಹಸ್ಯವನ್ನು ಮರೆಮಾಡುತ್ತಲೂ, ಗುಣಗಳನ್ನು ಮಾಚದೆ ಪ್ರಕಟಿಸುತ್ತಲೂ, ಅತ್ಯಂತಾಪತ್ತಿನ ಸಮಯದಲ್ಲಿಯೂ ಕೈಬಿಡದಿರುವವನಾಗಿಯೂ, ದಾರಿದ್ರ್ಯಾದಿಗಳಿಂದ ಖಿನ್ನನಾಗಿರುವ ಕಾಲದಲ್ಲಿಅಭಿಲಷಿತವನ್ನೀಯುವ್ಯವದರಿಂದಮನಸ್ಸಂತೋಷಪಡಿಸುತ್ತಲೂ ಇರುವವನೇ ಕಪಟವಿಲ್ಲದ ಸನ್ಮಿತ್ರನೆಂದು ಸಜ್ಜನರು ಹೇಳುವರು. .... .... .... ||೬೬||

ಶ್ಲೋ|| ಕ್ಷೀರೇಣಾತ್ಮಗತೋದಕಾಯಹಿಗುಣಾದತ್ತಾಃಪುರಾತೇಽಖಿಲಾಕ್ಷೀ
ರೋತ್ತಾಪಮವೇಕ್ಷ್ಯತೇನಪಯಸಾಸ್ವಾತ್ಮಾ ಕೃಶಾನೌಹುತಃ ||
ಗಂತುಂಪಾವಕಮುನ್ಮನಸ್ತದಭವ ದ್ದೃಷ್ಟ್ವಾತುಮಿತ್ರಾಪದಂ
ಯುಕ್ತಂತೇನಜಲೇನಶಾಮ್ಯತಿಸತಾಂ ಮೈತ್ರೀಪುನಸ್ತ್ವೀದೃಶೀ||

ಟೀ|| ಪುನಃ ಆ ಮೈತ್ರಿಯನ್ನೇ ದೃಷ್ಟಾಂತಪೂರ್ವಕವಾಗಿ ವರ್ಣಿಸುತ್ತಾನೆ- ಕ್ಷೀರೇಣ=ಹಾಲಿನಿಂದ, ಆತ್ಮ ತನ್ನನ್ನು, ಗತ=ಹೊಂದಿದ, ಉದಕಾಯ=ಜಲಕ್ಕೋಸ್ಕರ, ಪುರಾ=ಪೂರ್ವದಲ್ಲಿ, ತೇ=ಪ್ರಸಿದ್ಧಗಳಾದ ಅಖಿಲಾಃ=ಸಮಸ್ತಗಳಾದ, ಗುಣಾಃ=ಮಾಧುರ್ಯ ಶುಭ್ರತ್ವ ಮೊದಲಾದ ಗುಣಗಳು, ದತ್ತಾಹಿ=ಕೊಡಲ್ಪಟ್ಟವಲ್ಲವೆ, ಕ್ಷೀರ=ಹಾಲಿನ, ಉತ್ತಾಪಂ=ಸಂತಾಪವನ್ನು ಅವೇಕ್ಷ್ಯ=ನೋಡಿ, ತೇನಪಯಸಾ=ಆ ನೀರಿನಿಂದ, ಸ್ವ=ತನ್ನ ಆತ್ಮಾ=ಶರೀರವು.ಕೃಶಾನೌ=ಅಗ್ನಿಯಲ್ಲಿ ಹುತಃ=ಹವನ ಮಾಡಲ್ಪಟ್ಟಿತು ತತ್=ಆ ಕ್ಷೀರವು ಮಿತ್ರ=ಸ್ನೇಹಿತವಾದ ಜಲದ, ಆಪದಂ=ಆಪತ್ತನ್ನು. ದೃಷ್ಟ್ವಾ=ನೋಡಿ, ಪಾವಕಂ=ಬೆಂಕಿಯನ್ನು, ಗಂತುಂ=ಹೊಂದುವದಕ್ಕೋಸ್ಕರ ಉನ್ಮನಃ=ಉದ್ಯುಕ್ತವಾದ ಮನಸ್ಸುಳ್ಳದ್ದು, ಅಭವತ್=ಆಯಿತು, ತೇನಜಲೇನ=ಆ ಉದಕದಿಂದ, ಯುಕ್ತಮಿತಿ=

ಕೂತಿದ್ದನೆಂದು, ಶಾಮ್ಯತಿ=ಶಮನವಾಗುವದು, ಸತಾಂ=ಸತ್ಪುರುಷರ, ಮೈತ್ರೀ=ಮಿತ್ರತ್ವವು, ಈ ದೃಶೀಪುನಃ=ಇಂಥಾದ್ದಲ್ಲವೆ, ಉತ್ಪ್ರೇಕ್ಷಾರ್ಥಾಂತರನ್ಯಾಸಾಲಂಕಾರಗಳಿಗೆ ಸಂಕರವು.

ಈ ಕ್ಷೀರವು ಮೊದಲು ತನ್ನನ್ನು ಹೊಂದಿ ಸ್ನೇಹವಾಡಿದ ನೀರಿಗೋಸ್ಕರ, ತನ್ನಲ್ಲಿದ್ದ ಶುಭ್ರತೆಯನ್ನು ರುಚಿಯನ್ನು ಕೊಡುವುದು. ಅನಂತರದೊಳಾಕ್ಷೀರವಂ ಒಲೆಯ ಮೇಲಿಟ್ಟು ಕಾಯಿಸುತ್ತಿರಲಾಗಲಾಜಲವು ಕ್ಷೀರದತಾಪವಂ ನೋಡಿ ತನ್ನ ಮಿತ್ರನಿಗೆ ವಿಪತ್ತು ಬಂದಿರುವದೆಂದು ತನ್ನ ದೇಹವನ್ನು ಅಗ್ನಿಗೆ ಒಪ್ಪಿಸುವದು. ಅನಂತರ ಕ್ಷೀರವು ತನ್ನ ಮಿತ್ರನಾದ ಜಲವು ತನಿಗೋಸ್ಕರ ಅಗ್ನಿಯನ್ನು ಹೊಂದಿತಾಗಿ ತಾನಿನ್ನಿರಬಾರದೆಂದು ಬೆಂಕಿಯಲ್ಲಿ ಬೀಳಲೋಸುಗ ಮೇಲಕ್ಕೆ ಬರಲು, ನೀರನ್ನು ಹಾಕುವರು, ಆಮೇಲೆ ನನ್ನ ಮಿತ್ರನು ಬಂದನೆಂದು ಕ್ಷೀರವು ಶಾಂತವಾಗುವದು. ಹೀಗೆ ಸನ್ಮಿತ್ರರು ಪರಸ್ಪರ ವಿಪತ್ಸಮಯಗಳಲ್ಲಿಯೂ ಅನ್ಯೋನ್ಯೋಪಕಾರಿಗಳಾಗಿರುವರೆಂದು ಭಾವವು. .... ||೬೭||

ಶ್ಲೋ|| ಇತಸ್ಸ್ವಪಿತಿಕೇಶವಃಕುಲಮಿತಸ್ತದೀಯ ದ್ವಿಷಾಮಿತಶ್ಚ ಶರಣಾರ್ಥಿನಾಂಶಿಖರಿಣಾಂಗಣಾಶ್ಶೇರತೆ || ಇತೋಪಿಬಡಬಾನಲಸ್ಸಹಸಮಸ್ತಸಂವರ್ತಕೈರಹೋವಿತತಮೂರ್ಜಿತಂಭರಸಹಂಚಸಿಂಧೋರ್ವಪುಃ. .... .... ||೬೮||

ಟೀ|| ಸಮುದ್ರನ ಮಾಹಾತ್ಮ್ಯವನ್ನು ಪೇಳುತ್ತಾನೆ—ಇತಃ=ಈ ಪ್ರದೇಶದಲ್ಲಿ ಕೇಶವಃ=ವಿಷ್ಣುವು, ಸ್ವಪಿತಿ=ನಿದ್ದೆ ಹೋಗುತ್ತಾನೆ, ಇತಃ=ಈ ಪ್ರದೇಶದೊಳು, ತದೀಯ=ಆ ವಿಷ್ಣುಸಂಬಂಧಿಗಳಾದ ದೇವತೆಗಳಿಗೆ, ದ್ವಿಷಾಂ=ಶತ್ರುಗಳಾದ ಹಿರಣ್ಯಾಕ್ಷರಾವಣಾದಿಗಳ, ಕುಲಂ=ಸಮೂಹವು, ತಿಷ್ಠತಿ=ಇಧೆ ಇತಃ=ಮತ್ತೊಂದು ಭಾಗದೊಳು, ಶರಣ=ಸಂರಕ್ಷಣೆಯನ್ನು, ಅರ್ಥಿನಾಂ=ಯಾಚಿಸುವ, ಶಿಖರಿಣಾಂ=ಮೈನಾಕಾದಿ ಪರ್ವತಗಳ, ಗಣಾಶ್ಚ=ಸಮೂಹಗಳು, ಶೇರತೆ=ಶಯನಿಸಿರುವವು, ಇತೋಪಿ=ಈ ಸ್ಥಾನಕ್ಕಿಂತಲೂ ಮತ್ತೊಂದು ಪ್ರದೇಶದೊಳು ಸಮಸ್ತ=ಅನೇಕಗಳಾದ, ಸಂವರ್ತಕೈಸ್ಸಹ=ಮೇಘವಿಶೇಷಗಳೊಡನೆ, ಬಡಬಾನಲೋಪಿ=ಬಡಬಾಗ್ನಿಯೂ, ವಸತಿ=ವಾಸಮಾಡುತ್ತಾನೆ, ತಸ್ಮಾತ್=ಆದಕಾರಣದಿಂದ, ಸಿಂಧೋಃ=ಸಮುದ್ರನ, ವಪುಃ=ಶರೀರವು, ವಿತತಂ=ವಿಸ್ತಾರವಾದದ್ದು, ಊರ್ಜಿತಂ=ವೃದ್ಧಿ ಹೊಂದುವದು, ಭರ=ಭಾರವನ್ನು, ಸಹಂಚ=ಸಹಿಸುವದಾಗಿಯೂ ಇರುವದು, ಅಹೋ=ಆಶ್ಚರ್ಯವು, ಅಧಿಕಾಲಂಕಾರಭೇದವು. ಪೃಥ್ವೀವೃತ್ತವು.

ತಾ॥ ಒಂದು ಪ್ರದೇಶದೊಳು ಕುಕ್ಷಿಸ್ಥಾಖಿಲಲೋಕನಾದ ವಿಷ್ಣುವು ಯೋಗಾನುಸಂಧಾನದಿಂದ್ಗೆನಿದ್ರೆಹೋಗುತ್ತಾನೆ. ಮತ್ತೊಂದು ಪ್ರದೇಶದಲ್ಲಿ ಆ ವಿಷ್ಣುವಿನ ವೈರಿಗಳಾದ ಹಿರಣ್ಯಾಕ್ಷ ರಾವಣ ಮೊದಲಾದಸುರುಗಳ ಸಮೂಹವಿರುವದು. ಮತ್ತೊಂದು ಭಾಗದೊಳು ಸಂರಕ್ಷಣೆಯನ್ನು ಕೋರುವ ಮೈನಾಕ ಮೊದಲಾದ ಬೆಟ್ಟಗಳ ಸಮೂಹಗಳು ಮಲಗಿರುವವು. ಮತ್ತೊಂದು ಪಾರ್ಶ್ವದಲ್ಲಿ ಪ್ರಳಯಕಾಲದಲ್ಲಿ ವರ್ಷಿಸುವ ಪುಷ್ಕಲಾವರ್ತಗಳೆಂಬ ಮೇಘಗಳೊಡನೆ ಸೇರಿದವನಾಗಿ ಬಡಬಾಗ್ನಿಯು ವಾಸವಮಾಡುತ್ತಾನೆ. ಆದುದರಿಂದ ಈ ಸಮುದ್ರನ ಶರೀರವು ಶ್ರೀ ಮಹಾವಿಷ್ಣುವಿಗೆ ಆಧಾರವಾದುದಾಗಿಯೂ, ವಿಸ್ತಾರವಾಗಿರುವದಾಗಿಯೂ, ಬಡಬಾಗ್ನಿಗೂ ಆಶ್ರಯವಾದಾಗ್ಯೂ ವರ್ಧಿಷ್ಣುವಾಗಿಯೂ, ಪರ್ವತಗಳನ್ನು ವಹಿಸುವದರಿಂದ ಭಾರ ವಹಿಸುವದರಲ್ಲಿ ಅತ್ಯಂತ ಸಮರ್ಥವಾಗಿಯೂ, ಅಪರಿಮಿತವಾದ ಮಹಿಮಾಶ್ರಯವಾಗಿಯೂ ಇರುವಕಾರಣ ಆಶ್ಚರ್ಯವೆಂದು ಭಾವವು. .... .... .... ॥೬೮॥

ಶ್ಲೋ॥ ಜಾತಃಕೂರ್ಮಸ್ಸಏಕಃ ಪೃಥುಭುವನಭರಾಯಾರ್ಪಿತಂ ಯೇನಪೃಷ್ಠಂಶ್ಲಾಘ್ಯಂ ಜನ್ಮಧ್ರುವಸ್ಯಭ್ರಮತಿನಿಯಮಿತಂಯತ್ರತೇಜಸ್ವಿಚಕ್ರಂ । ಸಂಜಾತವ್ಯರ್ಥಪಕ್ಷಾಃಪರಹಿತಕರಣೇನೋಪರಿಷ್ಟಾನ್ನಚಾಧೋಬ್ರಹ್ಮಾಂಡೋದುಂಬರಾಂತರ್ಮಶಕವದಪರೇಜಂತವೋಜಾತನಷ್ಟಾಃ .... .... ॥೬೯॥

ಟೀ॥ ಪರರಿಗೆ ಹಿತಾಚರಣವನ್ನು ಉಂಟುಮಾಡುವವರ ಜನ್ಮವೇ ಸಫಲವು, ತದಿತರರ ಜನ್ಮವು ವ್ಯರ್ಥವೆಂಬ ಅರ್ಥವನ್ನು ಹೇಳುತ್ತಾನೆ—ಏಕಃ=ಒಂದಾದ ಸಕೂರ್ಮಃ=ಆ ಪ್ರಸಿದ್ಧವಾದ ಆದಿಕೂರ್ಮವು, ಜಾತಃ=ಹುಟ್ಟಿತು, ಯೇನ=ಯಾವ ಕೂರ್ಮದಿಂದ, ಪೃಥು=ಅಧಿಕವಾದ, ಭುವನ=ಲೋಕಗಳ, ಭರಾಯ=ಭಾರಕ್ಕೋಸ್ಕರ, ಪೃಷ್ಠಃ=ಬೆನ್ನು, ಅರ್ಪಿತಂ=ಕೊಡಲ್ಪಟ್ಟಿತೋ, ಧ್ರುವಸ್ಯ=ಧ್ರುವನ–ಜನ್ಮ ಜನ್ಮವು, ಶ್ಲಾಘ್ಯಃ=ಸ್ತೋತ್ರಾರ್ಹವಾದದ್ದು, ಯತ್ರ=ಯಾವ ಧ್ರುವನಲ್ಲಿ, ತೇಜಸ್ವಿನಾಂ=ಗ್ರಹನಕ್ಷತ್ರಾದಿಗಳ, ಚಕ್ರಂ=ಶಿಂಶುಮಾರ ಚಕ್ರವು ಅಥವಾ ಗ್ರಹನಕ್ಷತ್ರ ಮಂಡಲವು, ನಿಯಮಿತಂಸತ್=ನಿಯೋಗಿಸಲ್ಪಟ್ಟದ್ದಾಗಿ, ಭ್ರಮತಿ=ತಿರುಗುವದೊ, ಪರ–ಇತರರಿಗೆ, ಹಿತ=ಪ್ರಿಯವನ್ನು, ಕರಣಿ–ಮಾಡುವದರಲ್ಲಿ. ಸಂಜಾತ–ಹುಟ್ಟಿದ, ವ್ಯರ್ಥ–ನಿಷ್ಫಲವಾದ, ಪಕ್ಷಾಃ=ಸಹಾಯಃಪುಳ್ಳಂಥಾ, ಅಪರೆ=ಉಕ್ತವ್ಯತಿರಿಕ್ತಗಳಾದ, ಜಂತವಃ=ಪ್ರಾಣಿಗಳು, ಉಪರಿಷ್ಟಾತ್–ಮೇಲೆ ಇರುವಂಥ

ವರೆ, ನಶಿಗುವವಿಲ್ಲ, ಅನ್ಯೇ=ಕೆಳಗೆ ಇರುವಂಥವರಾಗಿದ್ದೂ, ನಶಿಗುವವಿಲ್ಲ, ಕಿಂತು=ಮತ್ತೇನೆಂದರೆ, ಬ್ರಹ್ಮಾಂಡ=ಬ್ರಹ್ಮಾಂಡವೆಂಬ, ಉದುಂಬರ=ಅತ್ತಿಯ ಹಣ್ಣಿನ, ಅಂತಃ=ಒಳಗಿರುವ, ಮಶಕವತ್=ಸೊಳ್ಳೆಯೋಪಾದಿಯಲ್ಲಿ, ಜಾತನಷ್ಟಾಃ=ಉತ್ಪನ್ನರಾಗಿ ನಷ್ಟರಾಗುವರು, ಸ್ರಗ್ಧರಾವೃತ್ತವು. ರೂಪಕೋಪಮಾಲಂಕಾರಗಳ ಸಂಕರವು. ॥ ೬೯ ॥

ತಾ॥ ಲೋಕದಲ್ಲಿ ಪ್ರಾಣಿಯಾದವನು ಅನೇಕ ಜನ್ಮಗಳುಳ್ಳವನಾದಾಗ್ಯೂ ಸಮಸ್ತಭುವನ ಭಾರವನ್ನು ಹೊತ್ತು ಲೋಕೋಪಕಾರ ಮಾಡಿ ಪ್ರಸಿದ್ಧನಾಗಿರುವ ಆದಿಕೂರ್ಮನಂತೆಯಾದರೂ ಕೆಳಭಾಗದೊಳಿದ್ದು ಲೋಕೋಪಕಾರಿಯಾಗಿ ಕೀರ್ತಿಯಂ ಪಡೆದು ಪ್ರಸಿದ್ಧನಾಗಬೇಕು. ಇಲ್ಲವೆ ಸಮಸ್ತ ಲೋಕಗಳಗಿಂತಲೂ ಮೇಲೆ ಇದ್ದು ಗ್ರಹ ನಕ್ಷತ್ರಮಂಡಲಗಳನ್ನು ನಿಯಮಿಸುತ್ತಿರುವ ಧ್ರುವನಂತೆಯಾದರೂ ಔನ್ನತ್ಯವಂ ಪಡೆದು ಪರೋಪಕಾರಾಚರಣ ತತ್ಪರನಾಗಿ ಜನ್ಮಲಾಭವುಳ್ಳವನಾಗಬೇಕು. ಈ ಎರಡುಮಾರ್ಗವನ್ನೂ ಆಶ್ರಯಿಸದಿರುವ ಪ್ರಾಣಿಗಳು ಅತ್ತಿಯಹಣ್ಣಿನೊಳು ಹುಟ್ಟಿ ಸಾಯುವ ಹುಳಗಳಂತೆ ಹುಟ್ಟಿ ಸಾಯುವರನೇಕರಿದ್ದಾಗ್ಯೂ ನಿಷ್ಫಲವೆಂದು ಭಾವವು. .... .... ॥೬೯॥

ಶ್ಲೋ॥ ತೃಷ್ಣಾಂಛಿಂದಿಭಜಕ್ಷಮಾಂಜಹಿಮದಂಪಾಪೇರತಿಂಮಾಕೃಥಾಃಸ
ತ್ಯಂಬ್ರೂಹ್ಯನುಯಾಹಿ ಸಾಧುಪದವೀಂಸೇವಸ್ವವಿದ್ವಜ್ಜನಂ ॥
ಮಾನ್ಯಾನ್ಮಾನಯವಿದ್ವಿಷೋಽಪ್ಯನುನಯ ಪ್ರಖ್ಯಾಪಯಪ್ರಶ್ರ
ಯಂಕೀರ್ತಿಂ ಪಾಲಯದುಃಖಿತೇಕುರುದಯಾ ಮೇತತ್ಸತಾಂಚೇ
ಷ್ಟಿತಂ .... .... .... ॥೭೦॥

ಟೀ॥ ಸಾಧುಜನಗಳಂ ಸಂಬೋಧಿಸಿ ಸದಾಚಾರವಂ ಶಿಕ್ಷಿಸುತ್ತಾನೆ—ಹೇ ಜನ=ಎಲೈ ಮನುಜನೇ, ತೃಷ್ಣಾಂ=ಅಲಭ್ಯವಸ್ತುವಿನಲ್ಲುಂಟಾಗುವ ಅಭಿಲಾಷೆಯನ್ನು, ಛಿಂದಿ=ಕತ್ತರಿಸು, ಕ್ಷಮಾಂ=ಶಾಂತಿಯನ್ನು, ಭಜ=ಆಶ್ರಯಿಸು, ಮದಂ=ಅಹಂಕಾರವನ್ನು, ಜಹಿ=ಬಿಟ್ಟುಬಿಡು, ಪಾಪೇ=ಪಾಪಕರ್ಮಾಚರಣೆಯಲ್ಲಿ ರತಿಂ=ಪ್ರೀತಿಯನ್ನು, ಮಾಕೃಥಾಃ=ಮಾಡಬೇಡ, ಸತ್ಯಂ=ಸತ್ಯವಾಕ್ಯವನ್ನು, ಬ್ರೂಹಿ=ಹೇಳು, ಸಾಧುಪದವೀಂ—ಸಾಧು=ಸಜ್ಜನರ, ಪದವೀಂ=ಮಾರ್ಗವನ್ನು, ಅನುಯಾಹಿ=ಅನುಸರಿಸು, ವಿದ್ವಜ್ಜನಂ=ಪಂಡಿತಜನವನ್ನು, ಸೇವಸ್ವ=ಸೇವಿಸು, ಮಾನ್ಯಾನ್=ಪೂಜ್ಯರನ್ನು, ಮಾನಯ=ಪೂಜಿಸು, ವಿದ್ವಿಷೋಽಪಿ=ಶತ್ರುಗಳನ್ನು ಕೂ

ಡ, ಅನುನಯ=ಸನ್ಮಾನಿಸು, ಪ್ರಶ್ರಯಂ=ನಮ್ರಭಾವವನ್ನು, ಪ್ರಖ್ಯಾಪಯ=ಪ್ರಸಿದ್ಧಿಪಡಿಸು, ಕೀರ್ತಿಂ=ಯಶಸ್ಸನ್ನು, ಪಾಲಯ=ರಕ್ಷಿಸಿಕೊ, ದುಃಖಿತೇ=ದುಃಖಿಸುವ ಜನರಲ್ಲಿ, ದಯಾಂ=ಕೃಪೆಯನ್ನು, ಕುರು=ಮಾಡು, ಏತತ್=ಇದು, ಸತಾಂ=ಸಜ್ಜನರ, ಚೇಷ್ಟಿತಂ=ವ್ಯಾಪಾರವಾಗಿರುವದು. ... ... ॥ ೭೦ ॥

ತಾ॥ ಎಲೈ ಶ್ರೇಯೋವಂತನಾಗಬೇಕೆಂಬ ಪುರುಷನೆ! ಯಾವಾಗಲೂ ದುರ್ಲಭವಾದ ವಸ್ತುವಿನಲ್ಲಿ ಆಶೆಪಡದೆ, ಪರರಿಂದ ಕೇಡುಂಟಾದಾಗ್ಯೂ ತಾಳ್ಮೆಯುಳ್ಳವನಾಗಿ, ವಿದ್ಯಾದಿಗಳಿಂದುಂಟಾಗುವ ಗರ್ವವಂ ಪಡದೆ, ಪಾಪಕರ್ಮಾಚರಣೆಯಲ್ಲಿ ಪ್ರೀತಿಯಿಡದೆ, ಸತ್ಯವಂ ಪೇಳುತ್ತಾ, ಸಜ್ಜನರ ಮಾರ್ಗವನ್ನಾಶ್ರೈಸುತ್ತಾ, ವಿದ್ಯಾವಂತರನ್ನು ಸೇವಿಸುತ್ತ, ಪೂಜ್ಯರನ್ನು ಪೂಜಿಸುತ್ತ, ಶತ್ರುಗಳನ್ನು ಕೂಡ ಅನುಸರಿಸುತ್ತ, ವಿಧೇಯತೆಯಂ ಪ್ರಸಿದ್ಧಪಡಿಸುತ್ತ, ಯಶಸ್ಸನ್ನು ಕಾಪಾಡಿಕೊಳ್ಳುತ್ತ, ದುಃಖಿಗಳಲ್ಲಿ ದಯೆಗೈಯುತ್ತಲೂ ಇರುವದು ಸಾಧುಗಳ ಚರಿತ್ರೆಯಾದ್ದರಿಂದ ಈರೀತಿಯಾಗಿದ್ದೊಡೆ ಸುಖವಂ ಪಡೆಯುವಿಯೆಂದು ಭಾವವು. .... ॥೭೦॥

ಶ್ಲೋ॥ ಮನಸಿವಚಸಿಕಾಯೇಪುಣ್ಯಪೀಯೂಷ ಪೂರ್ಣಾಸ್ತ್ರಿಭುವನಮು
ಪಕಾರಶ್ರೇಣಿಭಿಃಪ್ರೀಣಯಂತಃ ॥ ಪರಗುಣಪರಮಾಣೂನ್ಪರ್ವ
ತೀಕೃತ್ಯನಿತ್ಯಂನಿಜಹೃದಿವಿಕಸಂತಸ್ಸಂತಿಸಂತಃಕಿಯಂತಃ ॥೭೧॥

ಟೀ॥ ಹಿಂದೆ ಹೇಳಿದ ಗುಣಾಢ್ಯರು ಅಪೂರ್ವರೆಂದು ಹೇಳುತ್ತಾನೆ—ಮನಸಿ=ಚಿತ್ತದಲ್ಲಿಯೂ, ವಚಸಿ=ವಾಕ್ಕಿನಲ್ಲಿಯೂ, ಕಾಯೇ=ದೇಹದಲ್ಲಿಯೂ, ಪುಣ್ಯ=ಸುಕೃತವೆಂಬ, ಪೀಯೂಷ=ಅಮೃತದಿಂದ, ಪೂರ್ಣಾಃ=ತುಂಬಿದ, ತ್ರಿಭುವನಂದ ಮೂರು ಲೋಕವನ್ನು, ಉಪಕಾರ=ಹಿತಾಚರಣೆಯ, ಶ್ರೇಣಿಭಿಃ=ಪರಂಪರೆಗಳಿಂದ, ಪ್ರೀಣಯಂತಃ=ಸಂತೋಷಪಡಿಸುವ, ಪರ=ಅನ್ಯರ, ಗುಣಪರಮಾಣೂನ್=ಅತ್ಯಲ್ಪ ಗುಣಗಳನ್ನು ಕೂಡ, ಪರ್ವತೀಕೃತ್ಯ=ಪರ್ವತದಂತೆ ಮಾಡಿ,ನಿಜ=ತಮ್ಮ, ಹೃದಿ=ಹೃದಯದಲ್ಲಿ ವಿಕಸಂತಃ=ಸಂತೋಷಿಸುವ, ಸಂತಃ=ಸಜ್ಜನರು, ಕಿಯಂತಃ=ಎಷ್ಟುಜನರು, ಸಂತಿ=ಇದಾರೆ ? ಮಾಲಿನೀವೃತ್ತವು. ॥ ೭೧ ॥

ತಾ॥ ಮನೋವಾಕ್ಕಾಯಗಳಲ್ಲಿ ಪುಣ್ಯವೆಂಬಮೃತದಿಂದ ಪರಿಪೂರ್ಣರಾಗಿ, ಮೂರುಲೋಕದ ಜನಗಳಿಗೂ ಉಪಕಾರ ಮಾಡುವದರಿಂತೃ[illegible]ಸುತ್ತಾ, ಪರರಅತ್ಯಲ್ಪಗುಣಗಳನ್ನು ಕೂಡ ಪರ್ವತದಂತೆ ಭಾವಿಸಿ ಆನಂದಿಸುತ್ತಿರುವ ಸತ್ಪುರುಷರು ಬಹಳ ವಿರಳರೆಂದು ಭಾವವು. ॥೭೧॥

# ಧೈರ್ಯಪದ್ಧತಿ ಪ್ರಾರಂಭವು.

ಶ್ಲೋ॥ ರತ್ನೈರ್ಮಹಾಬ್ಧೇಸ್ತುತುಷುರ್ನದೇವಾನಭೇಜಿರೇಭೀಮವಿಷೇಣ
ಭೀತಿಂ ॥ ಸುಧಾಂವಿನಾನಪ್ರಯಯುರ್ವಿರಾಮಂನನಿಶ್ಚಿತಾರ್ಥಾ
ದ್ವಿರಮಂತಿಧೀರಾಃ .... .... ॥೭೨॥

ಟೀ॥ ದೇವಾಃ=ದೇವತೆಗಳು, ಮಹಾಬ್ಧೇಃ=ಕ್ಷೀರಸಮುದ್ರದ ಸಂಬಂಧಿಗಳಾದ, ರತ್ನೈಃ=ಕೌಸ್ತುಭಾದಿ ರತ್ನಗಳಿಂದ, ನತುತುಷುಃ=ತೃಪ್ತಿಯಂ ಪಡೆಯಲಿಲ್ಲ. ಭೀಮ=ಭಯಂಕರವಾದ. ವಿಷೇಣ=ಕಾಲಕೂಟವಿಂದಲೂ, ಭೀತಿಂ=ಭಯವನ್ನು, ನಭೇಜಿರೆ=ಹೊಂದಲಿಲ್ಲ, ಸುಧಾಂವಿನಾ=ಅಮೃತವನ್ನು ವಿನಾಯಿಸಿ, ವಿರಾಮಂ=ವಿಶ್ರಾಂತಿಯನ್ನು, ನಪ್ರಯಯುಃ=ಹೊಂದಲಿಲ್ಲ, ಧೀರಾಃ=ಮನಸ್ವಿಗಳಾದವರು, ನಿಶ್ಚಿತ=ನಿಶ್ಚೈಸಲ್ಪಟ್ಟ, ಅರ್ಥಾತ್=ವಿಷಯಉದ್ದೆಶೆಯಿಂದ, ನವಿರಮಂತಿ=ವಿಶ್ರಾಂತಿಯನ್ನೈದುವದಿಲ್ಲವು. ಉಪಜಾತಿ ವೃತ್ತವು, ಅರ್ಥಾಂತರನ್ಯಾಸಾಲಂಕಾರವು. ... ... ... ॥೭೨

ತಾ॥ ದೇವತೆಗಳು ಸಾಗರಮಂ ಕಡೆಯುವ ಕಾಲದಲ್ಲಿ ಅದರೊಳ್ಪುಟ್ಟಿದ ರತ್ನಗಳಿಂದಲೂ, ಶ್ರೇಷ್ಠಗಳಾದ ಉಚ್ಚೈಶ್ರವಸ್ಸು ಮೊದಲಾದ ಪದಾರ್ಥಗಳಿಂದಲೂ ತೃಪ್ತರಾಗಲಿಲ್ಲ. ಭಯಂಕರವಾದ ವಿಷಹುಟ್ಟಿದಾಗ್ಯೂ ಅದರಿಂದ ಭಯಪಡದೆ ತಮ್ಮಿಷ್ಟಾರ್ಥವಾದ ಅಮೃತವಂ ಪಡೆದಹೊರತು ವಿಶ್ರಾಂತಿಯನ್ನೈದಲಿಲ್ಲ, ಹೀಗೆಯೇ ಲೋಕದಲ್ಲಿ ಧೀರರಾದವರು ಆರಂಭಿಸಿದ ಕಾರ್ಯದಲ್ಲಿ ತಮ್ಮಿಷ್ಟವಂ ಪಡೆದಹೊರತುವಿರಮಿಸುವದಿಲ್ಲವೆಂದು ಭಾವವು. .... .... .... ॥೭೨॥

ಶ್ಲೋ॥ ಪ್ರಾರಭ್ಯತೇನಖಲುವಿಘ್ನಭಯೇನ ನೀಚೈಃಪ್ರಾರಭ್ಯವಿಘ್ನವಿಹ
ತಾವಿರಮಂತಿಮಧ್ಯಾಃ। ವಿಘ್ನೈಃಪುನಃಪುನರಪಿಪ್ರತಿಹನ್ಯಮಾ
ನಾಃಪ್ರಾರಬ್ಧಮುತ್ತಮಗುಣಾನಪರಿತ್ಯಜಂತಿ ॥೭೩॥

ಟೀ॥ ಹೇಳಲ್ಪಟ್ಟಅರ್ಥವನ್ನೇ ನೀಚಾದಿ ತ್ರಯಂ . ಹೇಳುವದರ ದ್ವಾರಾ ದೃಢಪಡಿಸುತ್ತಾನೆ—ನೀಚೈಃ=ಅಧಮರಿಂದ, ವಿಘ್ನ=ಅಂತರಾಯಗಳ ದೆಸೆಯಿಂದುಂಟಾದ, ಭಯೇನ=ಭೀತಿಯಿಂದ, ಕಾರ್ಯಂ=ಕಾರ್ಯವು, ನಪ್ರಾರಭ್ಯತೆಖಲು=ಉಪಕ್ರಮಿಸಲ್ಪಡುವದಿಲ್ಲವು. ಮಧ್ಯಾಃ=ಮಧ್ಯಮ ಪುರುಷರು, ಕಾರ್ಯಂ=ಕಾರ್ಯವನ್ನು, ಪ್ರಾರಭ್ಯ=ಆರಂಭಿಸಿ, ವಿಘ್ನನಿಹತಾಃ—ವಿಘ್ನ=ಪ್ರತ್ಯೂಹಗಳಿಂದ, ನಿಹತಾಃ=ಪೆಟ್ಟು ಬಿದ್ದವರಾಗಿ, ವಿರಮಂತಿ=ವಿರಾಮವನ್ನೈದುವರು, ಉತ್ತಮಗುಣಾಃ=ಉತ್ತಮ ಗುಣವುಳ್ಳ ಪುರುಷರಾದರೋ, ವಿಘ್ನೈಃ=ಅಂತರಾಯಗಳಿಂದ,

ಮುಹುರ್ಮುಹುಃ=ಬಾರಿಬಾರಿಗೂ, ಪ್ರತಿಹನ್ಯಮಾನಾ ಅಪಿ=ಹೊಡೆಯಲ್ಪಟ್ಟವರಾದಾಗ್ಯೂ, ಪ್ರಾರಬ್ಧಂ=ಪ್ರಾರಂಭಿಸಲ್ಪಲ್ಪಟ್ಟ ಕಾರ್ಯವನ್ನು ನಪರಿತ್ಯಜಂತಿ=ಬಿಡುವದಿಲ್ಲವು, ವಸಂತ ತಿಲಕಾವೃತ್ತವು .... .... ॥೨೩॥

ತಾ॥ ನೀಚರಾದವರು ಯಾವದಾದರೊಂದು ಕಾರ್ಯವನ್ನುಮಾಡಬೇಕಾಗಿದ್ದರೆ ವಿಘ್ನಬರುವದೆಂಬ ಭೀತಿಯಿಂದ ಆರಂಭಿಸುವದೇ ಇಲ್ಲವು. ಮತ್ತೆ ಕೆಲವರು ಮಧ್ಯಮಪುರುಷರು ಆರಂಭಿಸಿದಾಗ್ಯೂ ಮಧ್ಯಭಾಗದಲ್ಲಿ ವಿಘ್ನದಿಂದ ನಿಹತರಾಗಿ ವಿರಮಿಸುವರು. ಧೈರ್ಯಶಾಲಿಗಳಾದ ಉತ್ತಮ ಪುರುಷರು ತಾವು ಆರಂಭಿಸಿದಕಾರ್ಯಕ್ಕೆ ಎಷ್ಟುವಿಘ್ನಗಳು ಬಂದಾಗ್ಯೂ ಹೆದರಿ ಬಿಟ್ಟುಬಿಡದೆ ಫಲವನ್ನು ಕಾಣುವರು. ಉತ್ತಮರಾದ ದೇವತೆಗಳು ಸಮುದ್ರಮಥನದಲ್ಲಿ ಹಾಲಾಹಲಾದಿ ವಿಘ್ನಗಳು ಬಂದಾಗ್ಯೂ ವಿರಮಿಸದೆ ಅಮೃತವನ್ನು ಪಡೆಯುವವರೆಗೂ ಹೇಗೆ ವಿಶ್ರಾಂತರಾಗಲಿಲ್ಲವೋ ಅದರಂತೆ ಎಲ್ಲರೂ ಕೊನೆಗಾಣುವ ಕೆಲಸಮಾಡಬೇಕೆಂದು ಭಾವವು ॥೨೩॥

ಶ್ಲೋ॥ ಕ್ವಚಿತ್ಪೃಥ್ವೀಶಯ್ಯಃ ಕ್ವಚಿದಪಿಚ ಪರ್ಯಂಕಶಯನಃ ಕ್ವಚಿಚ್ಛಾಕಾಹಾರಃ ಕ್ವಚಿದಪಿಚಶಾಲ್ಯೋದನರುಚಿಃ ॥ ಕ್ವಚಿತ್ಕಂಥಾಧಾರೀ ಕ್ವಚಿದಪಿಚದಿವ್ಯಾಂಬರಧರೋ ಮನಸ್ವೀ ಕಾರ್ಯಾರ್ಥೀ ನಗಣಯತಿದುಃಖಂನಚಸುಖಂ .... .... ॥೨೪॥

ಟೀ॥ ಕಾರ್ಯಾರ್ಥಿಯಾದ ಉತ್ತಮ ಪುರುಷನಿಗೆ ಸುಖದುಃಖ ಸಹನೆಯಂ ಹೇಳುತ್ತಾನೆ—ಕ್ವಚಿತ್=ಒಂದಾನೊಂದು,ದೇಶದಲ್ಲಿ, ಕಾಲದಲ್ಲಿಯಾಗಲಿ, ಪೃಥ್ವೀ=ಭೂಮಿಯೇ. ಶಯ್ಯಃ,ಶಯನವಾಗಿವುಳ್ಳವನಾದಾಗ್ಯೂ. ಕ್ವಚಿತ್=ಮತ್ತೊಂದು ಸ್ಥಳದಲ್ಲಿ ಪರ್ಯಂಕ=ಹಂಸತೂಲಿಕಾತಲ್ಪವೆ, ಶಯನೋಪಿ ಶಯನವಾಗಿವುಳ್ಳವನಾದಾಗ್ಯೂ, ಕ್ವಚಿತ್=ಸ್ಥಲಾಂತರದಲ್ಲಿ ಶಾಕ=ಕಾಯಿ ಸೊಪ್ಪುಮಾತ್ರವೆ. ಆಹಾರಃ=ಅನ್ನವಾಗಿ ವುಳ್ಳವನಾದಾಗ್ಯೂ. ಕ್ವಚಿತ್=ದೇಶಾಂತರದಲ್ಲಿ, ಶಾಲ್ಯೋದನ=ಷಡ್ರಸಾನ್ನದ, ರುಚಿಃ=ರುಚಿವುಳ್ಳವನಾದಾಗ್ಯೂ. ಕ್ವಚಿತ್=ಒಂದಾನೊಂದು ಸ್ಥಲದಲ್ಲಿ, ಕಂಥಾಧಾರೀ=ಬೊಂತೆಯನ್ನು ಹೊದ್ದುಕೊಂಡಿದ್ದರೂ; ಕ್ವಚಿತ್=ಮತ್ತೊಂದು ಸ್ಥಳದಲ್ಲಿ, ದಿವ್ಯಾಂಬರ=ಪೀತಾಂಬರವನ್ನು, ಧರೋಪಿ=ಧರಿಸಿಕೊಂಡಿರುವವನಾದಾಗ್ಯೂ, ಕಾರ್ಯಾರ್ಥೀ=ಕಾರ್ಯಾಭಿಲಾಷಿಯಾದ, ಮನಸ್ವೀ=ಧೀರನು, ದುಃಖಂ=ವ್ಯಸನವನ್ನು, ಸುಖಂಚ=ಆನಂದವನ್ನೂ, ನಗಣಯತಿ=ಎಣಿಸುವದಿಲ್ಲವು.

ತಾ॥ ತನ್ನಿಷ್ಟಾರ್ಥರೂಪವಾಗಿರುವ ಕಾರ್ಯವೇ ಮುಖ್ಯವೆಂದಿರುವ ಧೀರನು, ಒಂದಾನೊಂದು ಕಾಲದಲ್ಲಿ ಭೂಶಾಯಿಯಾಗಿದ್ದರೂ, ಮ

ತ್ತೊಂದು ಕಾಲದಲ್ಲಿ ಹಂಸತೂಲಿಕಾತಲ್ಪದಲ್ಲಿ ಶಯನಮಾಡುತ್ತಿದ್ದರೂ, ಒಂದಾನೊಂದು ಸ್ಥಲದಲ್ಲಿ ಗಡ್ಡೆ ಗೆಣಸುಗಳನ್ನು ತಿನ್ನುತ್ತಿದ್ದಾಗ್ಯೂ, ಮತ್ತೊಂದೆಡೆಯೊಳು ಷಡ್ರಸೋಪೇತವಾದ ಮೃಷ್ಟಾನ್ನವನ್ನು ಭುಂಜಿಸುತ್ತಿದ್ದಾಗ್ಯೂ, ಒಂದು ಕಾಲದಲ್ಲಿ ಬೊಂತೆಯನ್ನು ಧರಿಸಿದ್ದರೂ, ಮತ್ತೊಂದು ಸಮಯದೊಳು ಪೀತಾಂಬರಧಾರಿಯಾಗಿದ್ದರೂ, ಈ ಸುಖದುಃಖಗಳನ್ನೆಣಿಸನೆಂದುಭಾವವು. .... .... .... ॥೭೪॥

ಶ್ಲೋ॥ ನಿಂದಂತುನೀತಿನಿಪುಣಾಯದಿವಾಸ್ತುವಂತು ಲಕ್ಷ್ಮೀಸ್ಸಮಾವಿಶತು
ಗಚ್ಛತುವಾಯಥೇಷ್ಟಂ ॥ ಅದ್ಯೈವವಾಮರಣಮಸ್ತುಯುಗಾಂ
ತರೇವಾನ್ಯಾಯ್ಯಾತ್ಪಥಃಪ್ರವಿಚಲಂತಿಪದಂನಧೀರಾಃ ॥೭೫॥

ಟೀ ॥ ಧೀರರು ಲೋಕನಿಂದಾಸ್ತುತಿಗಳಿಗೋಸ್ಕರ ನ್ಯಾಯಮಾರ್ಗವ ಬಿಡುವದಿಲ್ಲವೆಂದು ಹೇಳುತ್ತಾನೆ—ನೀತಿ=ನಯದಲ್ಲಿ, ನಿಪುಣಾಃ=ಕುಶಲರಾದವರು ನಿಂದಂತು=ದೂಷಿಸಲಿ, ಯದಿವಾ=ಅಥವಾ, ಸ್ತುವಂತು=ಸ್ತುತಿಸಲಿ, ಲಕ್ಷ್ಮೀಃ=ಸಂಪತ್ತು, ಸಮಾಸವಿಶತು=ಉತ-ಅಥವಾ, ಯಥೇಷ್ಟಂ=ತಡೆಯಿಲ್ಲದಂತೆ=ಗಚ್ಛತುವಾ=ಹೊರಟುಹೋಗಲಿ, ಅದ್ಯೈವವಾ=ಈಗಲೇ ಮರಣಂ=ನಾಶವೆ,ಅಸು=ಆಗಲಿ,ಆಯುಗಾಂತರೇವಾ=ಕಲ್ಪಾಂತರದಲ್ಲಿಯಾದರೂ, ಅಸ್ತು-ಆಗಲಿ ತಥಾಪಿ=ಹಾಗಾದಾಗ್ಯೂ ಧೀರಾಃ=ಶೂರರು, ನ್ಯಾಯ್ಯಾತ್=ನೀತಿ-ತಪ್ಪದಿರುವ, ಪಥ-ಮಾರ್ಗದ್ದೆಶೆಯಿಂದ, ಪದಂ-ಅಡಿಯನ್ನು, ನಪ್ರವಿಚಲಂತಿ=ಚಲಿಸಿಹೋಗುವದಿಲ್ಲವು. ... ... ... ॥೭೫॥

ತಾ॥ ಲೋಕದಲ್ಲಿ ನೀತಿಶಾಸ್ತ್ರಜ್ಞರು ಭೂಷಿಸಿದಾಗ್ಯೂ ಇಲ್ಲವೆ ದೂಷಿಸಿದಾಗ್ಯೂ ಸಂಪತ್ತು ಬಂದರೂ ಅಥವಾ ಬಾರದಿದ್ದರೂ ಈಗಲೆ ಮರಣ ಉಂಟಾದಾಗ್ಯೂ ಅಥವಾ ಯುಗಾಂತರದಲ್ಲಿ ಉಂಟಾದರೂ ಧೀರರಾಧವರು ನ್ಯಾಯವಾದ ಮಾರ್ಗದಿಂದ ಎಂದಿಗೂ ಸ್ವಲ್ಪವಾದರೂ ಚಲಿಸಿಹೋಗರೆಂದು ಭಾವವು, .... .... .... ॥೭೫॥

ಶ್ಲೋ ॥ ಕಾಂತಾಕಟಾಕ್ಷವಿಶಿಖಾನಲುನಂತಿಯಸ್ಯಚಿತ್ತಂನನಿರ್ದಹತಿಕೋ
ಪಕೃಶಾನುತಾಪಃ ॥ ತರ್ಪಂತಿಭೂರಿವಿಷಯಾಶ್ಚನಲೋಭಪಾಶಾ
ಲೋಕತ್ರಯಂಜಯತಿಕೃತ್ಸ್ನಮಿದಂಸಧೀರಃ .... ॥೭೬॥

ಟೀ॥ ಧೀರನು ಯಾರು ? ಆತನು ಏನನ್ನು ಸಾಧಿಸುವನೆಂದಾಶಂಕಿಸಿ ಹೇಳುತ್ತಾನೆ ಯಸ್ಯ-ಯಾವ ಪುರುಷನ ಚಿತ್ತಂ-ಮನಸ್ಸನ್ನು, ಕಾಂತಾ-ರಮ

ಣಿಯು, ಕಟಾಕ್ಷ=ಕಡೆಗಂಣು-ನೋಟಗಳೆಂಬ, ವಿಶಿಖಾಃ=ಬಾಣಗಳು, ನಲುನಂತಿ= ಭೇದಿಸುವದಿಲ್ಲವೋ ಕೋಪ=ಕ್ರೋಧವೆಂಬ, ಕೃಶಾನು=ಅಗ್ನಿಯು, ತಾಪಃ=ಸಂತಾಪವು ನನಿರ್ದಹತಿ=ದಹಿಸುವದಿಲ್ಲವೋ ಭೂರಿ-ಬಲವತ್ತರಗಳಾದ=ವಿಷಯಾಃ= ಶಬ್ದಾದಿ ವಿಷಯಗಳು, ಲೋಭ=ಪರದ್ರವ್ಯಾಪಹಾರೇಚ್ಛೆಯೆಂಬ ಪಾಶಾಃ=ಹಗ್ಗಗಳು ನಕರ್ಷಂತಿ=ಆಶಾಯುಕ್ತವಾದದ್ದಾಗಿ ಮಾಡುವದಿಲ್ಲವೋ-ಸಃ=ಆತನೇ ಧೀರಃ=ಶೂರನು, ಸಃ=ಅವನು ಕೃತ್ಸ್ನಂ=ಸಮಸ್ತವಾದ ಇದಂ ಈ, ಲೋಕತ್ರಯಂ=ಮೂರು ಲೋಕವನ್ನು ಜಯತಿ=ಜಯಿಸುವನು. ... ॥೭೬॥

ತಾ॥ ಯಾವ ಪುರುಷನ ಚಿತ್ತವನ್ನು ಕಾಂತೆಯು ಕಡೆಗಂಣು ನೋಟಗಳೆಂಬ ಬಾಣಗಳು ಕತ್ತರಿಸುವದಿಲ್ಲವೋ, ಕ್ರೋಧಾಗ್ನಿಯು ತಾಪವು ಯಾವನ ಚಿತ್ತವನ್ನು ತಪನಗೊಳಸುವದಿಲ್ಲವೋ, ಶಬ್ದಾದಿ ವಿಷಯಗಳು ಮತ್ತು ಆಶಾಪಾಶಗಳು ಯಾವನ ಚಿತ್ತವನ್ನು ಲೋಭಗೋಳಿಸುವದಿಲ್ಲವೋ ಅವನೇ ಧೀರನು, ಅವನೇ ಈ ಮೂರು ಲೋಕಗಳನ್ನು ಜಯಿಸತಕ್ಕವನೆಂದು ಭಾವವು. .... .... .... ॥೭೬॥

ಶ್ಲೋ॥ ಕದರ್ಥಿತಸ್ಯಾಪಿಹಿಧೈರ್ಯವೃತ್ತೇರ್ನಶಕ್ಯತೇಧೈರ್ಯಗುಣಃಪ್ರಮಾಷ್ಟುಂ ॥ ಅಧೋಮುಖಸ್ಯಾಪಿಕೃತಸ್ಯವಹ್ನೇರ್ನಾಧಶ್ಶಿಖಾಯಾಂತಿಕದಾಚಿದೇವ .... .... ॥೭೭॥

ಟೀ॥ ಯಾವವಿಧದಿಂದಲೂ ಧೈರ್ಯಗುಣದತಿರಸ್ಕಾರವಂ ಮಾಡಲಿಕ್ಕಾಗುವದಿಲ್ಲವೆಂಬರ್ಥವಂ ದೃಷ್ಟಾಂತ ಪೂರ್ವಕವಾಗಿ ಪೇಳುತಾನೆ—ಕದರ್ಥಿತಸ್ಯಾಪಿ ಕುತ್ಸಿತಾರ್ಥ ಉಳ್ಳವನಾಗಿ ಮಾಡಲ್ಪಟ್ಟ, ಧೈರ್ಯವೃತ್ತೇಃ-ಧೈರ್ಯಸ್ವಭಾವವುಳ್ಳಮನುಷ್ಯನ, ಧೈರ್ಯ=ಧೈರ್ಯವೆಂಬ, ಗುಣಃ=ಗುಣವು, ಪ್ರಮಾಷ್ಟುಂ=ವ್ಯತ್ಯಾಸ ಮಾಡುವದಕ್ಕೆ=ನಶಕ್ಯತೇ=ಆಗುವದಿಲ್ಲವು ಅಧೋಮುಖಸ್ಯ=ತಲೆಕೆಳಗಾಗಿ, ಕೃತಸ್ಯಾಪಿ= ಮಾಡಲ್ಪಟ್ಟದ್ದಾದರೂ, ವಹ್ನೇಃ=ಬೆಂಕಿಯು, ಶಿಖಾಃ=ಜ್ವಾಲೆಗಳು, ಕದಾಚಿದೇವ= ಒಂದುಕಾಲದಲ್ಲಿಯೂ, ಅಧಃ=ಕೆಳಗಡೆಗೆ ನಯಾಂತಿ=ಹೋಗುವದಿಲ್ಲವು. ॥೭೭॥

ತಾ॥ ಬೆಂಕಿಯನ್ನು ತಲೆಕೆಳಗಾಗಿ ಹಿಡಿದುಕೊಂಡಾಗ್ಯೂ ಅದರ ಜ್ವಾಲೆಯು ಎಂದಿಗೂ ಮೇಲಕ್ಕೆ ಹೋಗುವದನ್ನು ಬಿಟ್ಟು ಕೆಳಭಾಗಕ್ಕೆ ಹೇಗೆ ಹೋಗುವದಿಲ್ಲವೋ, ಅದರಂತೆಯೇ ಧೀರನನ್ನು ಕುತ್ಸಿತ ಮಾಡಿದಾಗ್ಯೂ ಆತನ ಧೈರ್ಯವೆಂಬ ಗುಣವು ತಿರಸ್ಕರಿಸಲ್ಪಡುವದಿಲ್ಲವೆಂದು ಭಾವವು. .... .... .... ॥೭೭॥

ಶ್ಲೋ॥ ವಹ್ನಿಸ್ತಸ್ಯಜಲಾಯತೇಜಲನಿಧಿಃಕುಲ್ಯಾಯತೇತತ್‌ಕ್ಷಣಾನ್ಮೇ
ರುಸ್ಸ್ವಲ್ಪಶಿಲಾಯತೇಮೃಗಪತಿಸ್ಸದ್ಯಃಕುರಂಗಾಯತೇ ॥ ವ್ಯಾ
ಳೋಮಾಲ್ಯಗುಣಾಯತೇ ವಿಷರಸಃಪೀಯೂಷವರ್ಷಾಯತೇ
ಯಸ್ಯಾಂಗೇಖಿಲಲೋಕವಲ್ಲಭತರಂಶೀಲಂಸಮುನ್ಮೀಲತಿ ॥೭೮॥

ಟೀ॥ ಅಂತಪ್ಪ ಶೀಲವಿದ್ದರೆ ಲಾಭವೇನಂದರೆ ಪೇಳುತ್ತಾನೆ—ತಸ್ಯ= ಆ ಪುರುಷನಿಗೆ, ವಹ್ನಿಃ=ಬೆಂಕಿಯು, ಜಲಾಯತೆ=ನೀರಿನಂತಾಚರಿಪುದು, ಜಲನಿಧಿಃ=ಸಮುದ್ರವು, ಕುಲ್ಯಾಯತೇ=ಸಣ್ಣ ನದಿಯಂತಾಗುವದು, ತತ್‌ಕ್ಷಣಾತ್= ಆ ಕ್ಷಣದಲ್ಲಿಯೇ, ಮೇರುಃ=ಮೇರುಪರ್ವತವು, ಸ್ವಲ್ಪಶಿಲಾಯತೆ=ಸಣ್ಣ ಗುಂಡಿನಂತಾಗುವದು, ಮೃಗಪತಿಃ=ಸಿಂಹವು, ಸದ್ಯಃ=ನಿಮಿಷಕಾಲದಲ್ಲಿ, ಕುರಂಗಾಯತೇ=ಹುಲ್ಲೆಯಂತಾಗುವದು. ವ್ಯಾಳಃ=ಸರ್ಪವು, ಮಾಲ್ಯಗುಣಾಯತೇ=ಪುಷ್ಪಹಾರದಂತಾಚರಿಸುವದು, ವಿಷರಸಃ=ವಿಷದ ರಸವು, ಪೀಯೂಷವರ್ಷಾಯತೇ= ಅಮೃತವೃಷ್ಟಿಯಂತಾಗುವದು, ಯಸ್ಯ=ಯಾವಪುರುಷನ. ಅಂಗೆ=ಶರೀರದಲ್ಲಿ, ಅಖಿಲ=ಸಮಸ್ತರಾದ. ಲೋಕ=ಜನಗಳಿಗೆ, ವಲ್ಲಭತರಂ=ಪರಮ ಪ್ರೇಮಾಸ್ಪದವಾದ, ಶೀಲಂ=ಸತ್‌ಸ್ವಭಾವವು, ಸಮುನ್ಮೀಲತಿ=ಪ್ರಕಾಶಿಸುವದೋ. ॥೭೮॥

ತಾ॥ ಯಾವನಲ್ಲಿ ಸಕಲ ಜನಹಿತಕರವಾದ ಶೀಲವಿರುವದೋ, ಅಂಥವನಿಗೆ ಬೆಂಕಿಯು ನೀರಿನಂತೆ ತಣ್ಣಗಿರುವದು, ಸಮುದ್ರವು ಸಣ್ಣ ಕಾಲುವೆಯಂತಾಗುವದು, ಮೇರುಗಿರಿಯು ಸಣ್ಣ ಕಲ್ಲಾಗುವದು, ಸಿಂಹವು ಜಿಂಕೆಯಂತಾಗುವದು, ಸರ್ಪವು ಹೂವಿನಮಾಲೆಯಾಗುವದು, ವಿಷರಸವು ಅಮೃತ ರಸವಾಗುವದು, ಎಂದರೆ ಶೀಲಸಂಪನ್ನನಿಗೆ ದುಃಖಕಾರಣಗಳೆಲ್ಲವೂ ಸುಖಕಾರಣಗಳಾಗುವವೆಂದು ಭಾವವು. .... ॥೭೮॥

ಶ್ಲೋ॥ ಛಿನ್ನೋಪಿರೋಹತಿತರುಃ ಕ್ಷೀಣೋಪ್ಯುಪಚೀಯತೇಪುನಶ್ಚಂ
ದ್ರಃ । ಇತಿವಿಮೃಶಂತಸ್ಸಂತಸ್ಸಂತಪ್ಯಂತೇನವಿಶ್ಲಥೇಷುಲೋ
ಕೇಷು .... .... ॥೭೯॥

ಟೀ॥ ಇಂಥವರಿಗೆ ಯಾವಾಗಲೂ ಸಂತಾಪ ಉಂಟಾಗುವದಿಲ್ಲವೆಂಬರ್ಥವಂ ಪೇಳುತ್ತಾನೆ—ತರುಃ=ಮರವು, ಛಿನ್ನೋಪಿ=ಕತ್ತರಿಸಲ್ಪಟ್ಟಾಗ್ಯೂ, ರೋಹತಿ= ಬೆಳೆಯುವದು, ಕ್ಷೀಣೋಪಿ=ಕ್ಷಯಿಸಿಹೋದಾಗ್ಯೂ, ಚಂದ್ರಃ=ಚಂದ್ರನು=ಉಪಚೀಯತೆ=ವೃದ್ಧಿಹೊಂದುತ್ತಾನೆ, ಇತಿ=ಈ ಮೇರೆಗೆ. ವಿಮೃಶಂತಃ=ವಿ[illegible]ರದ ಮಾಡುವಂಥ, ಸಂತಃ=ಶೀಲಸಂಪನ್ನರು,ಲೋಕೇಷು=ಬಂಧುಜನಗಳು,ವಿಶ್ಲಥೇಷು= ಸಂತಪ್ತರಾಗಿದ್ದಾಗ್ಯೂ, ನಸಂತಪ್ಯಂತೆ=ಸಂತಾಪ ಪಡುವದಿಲ್ಲವು. ॥೭೯॥

ತಾ॥ ಮರವು ಕತ್ತರಿಸಿದಾಗ್ಯೂ ಪುನಃ ಚಿಗುರುವುದು, ಚಂದ್ರನು ಕೃಷ್ಣಪಕ್ಷದಲ್ಲಿ ಕ್ಷಯಿಸಿಹೋದಾಗ್ಯೂ ತಿರುಗಿ ವೃದ್ಧಿ ಹೊಂದುವನು ಎಂದು ವಿಚಾರಪರರಾದ ಸಜ್ಜನರು, ತಮ್ಮ ಬಂಧುಜನಗಳು ಕ್ಲೇಶ ಪಡುತ್ತಿದ್ದಾಗ್ಯೂ ವೃದ್ಧಿಕ್ಷಯಗಳನ್ನಾಲೋಚಿಸಿ ದುಃಖ ಪಡುವದಿಲ್ಲವೆಂದು ಭಾವವು. .... .... .... ॥೭೯॥

ಶ್ಲೋ॥ ಐಶ್ವರ್ಯಸ್ಯವಿಭೂಷಣಂಸುಜನತಾಶೌರ್ಯಸ್ಯವಾಕ್ಸಂಯಮಃಜ್ಞಾನ
ಸ್ಯೋಪಶಮಶ್ಶ್ರುತಸ್ಯವಿನಯೋ ವಿತ್ತಸ್ಯಪಾತ್ರೇವ್ಯಯಃ ॥
ಅಕ್ರೋಧಸ್ತಪಸಃಕ್ಷಮಾಪ್ರಭವಿತುರ್ಧರ್ಮಸ್ಯನಿರ್ವ್ಯಾಜತಾ ಸ
ರ್ವೇಷಾಮಪಿಸರ್ವ ಕಾರಣಮಿದಂಶೀಲಂಪರಂಭೂಷಣಂ ॥೮೦॥

ಟೀ॥ ಸಮಸ್ತಾಲಂಕಾರವೂ ಶೀಲವೇ ಎಂಬರ್ಥವನ್ನು ಹೇಳುತ್ತಾನೆ—ಐಶ್ವರ್ಯಸ್ಯ=ಸ್ವಾಮಿತ್ವಕ್ಕೆ, ಸುಜನತಾ=ಒಳ್ಳೆಯ ಸ್ವಭಾವವು, ವಿಭೂಷಣಂ=ಅಲಂಕಾರವು, ಶೌರ್ಯಸ್ಯ=ಪರಾಕ್ರಮಕ್ಕೆ, ವಾಕ್ಸಂಯಮಃ=ಸುಮ್ಮನಿರುವಿಕೆಯು, ಭೂಷಣಂ=ಅಲಂಕಾರವು, ಜ್ಞಾನಸ್ಯ=ವಿವೇಕಕ್ಕೆ, ಉಪಶಮಃ=ವೈರಾಗ್ಯವು, ಭೂಷಣಂ=ಅಲಂಕಾರವು, ಶ್ರುತಸ್ಯ=ಶಾಸ್ತ್ರಕ್ಕೆ, ವಿನಯಃ=ವಿಧೇಯತೆಯು, ಭೂಷಣಂ=ಅಲಂಕಾರವು, ವಿತ್ತಸ್ಯ=ದ್ರವ್ಯಕ್ಕೆ, ಪಾತ್ರೇ=ಸತ್ಪಾತ್ರದಲ್ಲಿ, ವ್ಯಯಃ=ವ್ರಯವು, ಭೂಷಣಂ=ಅಲಂಕಾರವು, ತಪಸಃ=ಚಾಂದ್ರಾಯಣಾದಿ ತಪಸ್ಸಿಗೆ, ಅಕ್ರೋಧಃ=ಕ್ರೋಧವಿಲ್ಲದಿರುವಿಕೆಯು, ಭೂಷಣಂ=ಅಲಂಕಾರವು, ಪ್ರಭವಿತುಃ=ಸಮರ್ಥನಿಗೆ, ಕ್ಷಮಾ=ಸಹನವು, ಭೂಷಣಂ=ಅಲಂಕಾರವು, ಧರ್ಮಸ್ಯ=ಸತ್ಪಾತ್ರದಲ್ಲಿ ದಾನ ಮಾಡುವಿಕೆಗೆ, ನಿರ್ವ್ಯಾಜತಾ=ನಿಷ್ಕಾರಣತ್ವವು, ಭೂಷಣಂ=ಅಲಂಕಾರವು, ಸರ್ವ-ಐಶ್ವರ್ಯಾದಿ ಸಮಸ್ತಕ್ಕೂ, ಕಾರಣಂ=ನಿಮಿತ್ತವಾದ, ಇದಂ=ಪೂರ್ವದಲ್ಲಿ ವರ್ಣಿಸಲ್ಪಟ್ಟ, ಶೀಲಂ=ಸದಾಚಾರವು, ಸರ್ವೇಷಾಮಪಿ=ಸಕಲಪ್ರಾಣಿಗಳಿಗೂ=ಪರಂ=ಸಜ್ಜನತ್ವಾದಿಗಳಿಗಿಂತಲೂ ಉತ್ತಮವಾದ, ಭೂಷಣಂ=ಅಲಂಕಾರವು. ॥೮೦॥

ತಾ॥ ಸ್ವಾಮಿತನಕ್ಕೆ ಒಳ್ಳೆಯತನವು ಅಲಂಕಾರವಲ್ಲದೆ ಕೆಟ್ಟತನವಲಂಕಾರವಲ್ಲವು. ಶೌರ್ಯಕ್ಕೆ ಸುಮ್ಮನಿರುವಿಕೆಯು ಭೂಷಣವಲ್ಲದೆ ಬಹು ಭಾಷಿತ್ವವು ಭೂಷಣವಲ್ಲವು. ವಿವೇಕಜ್ಞಾನಕ್ಕೆ ವಿಷಯಾಭಿಲಾಷೆ ಇಲ್ಲದಿರುವಿಕೆಯು ಅಲಂಕಾರವಲ್ಲದೆ ದುರಾಶೆಯಲಂಕಾರವಲ್ಲವು. ಸತ್ಪಾತ್ರದಲ್ಲಿ ದಾನ ಮಾಡುವಿಕೆಯೇ ಧನಕ್ಕೆ ಪ್ರಯೋಜನವಲ್ಲದೆ ನಟವಿಟಗಾಯಕರಿಗೀಯುವದು ಪ್ರಯೋಜನಕಾರಿಯಲ್ಲವು. ತಪಸ್ಸಿಗೆ ಕೋಪವಿಲ್ಲದಿರುವಿಕೆಯೆ ಮುಖ್ಯವಾದ ಅಲಂಕಾರವು. ಸಮರ್ಥನಾದವ

ನಿಗೆ ತಾಳ್ಮೆಯುಲಂಕಾರವಲ್ಲದೆ ಆಗ್ರಹವಲಂಕಾರವಲ್ಲವು. ಸತ್ಪಾತ್ರದಲ್ಲಿ ದಾನ ಮಾಡುವಿಕೆಗೆ, ಪ್ರತಿ ಪ್ರಯೋಜನೇಚ್ಛೆಯಿಲ್ಲದಿರುವಿಕೆಯೂ, ಧನವ್ಯಯ ದುಃಖವಿಲ್ಲದಿರುವಿಕೆಯೂ ಅಲಂಕಾರವು. ಆದರೆ ಸರ್ವ ಕಾಲದಲ್ಲಿಯೂ ಸಕಲಕ್ಕೂ ಮುಖ್ಯಕಾರಣವಾದ ಸದಾಚಾರವೆಂಬುವದು ಸರ್ವರಿಗೂ ಸರ್ವಭೂಷಣವೆಂದು ಭಾವವು. .... ||೮೦||

## ದೈವಪದ್ಧತಿ ಪ್ರಾರಂಭವು.

ಶ್ಲೋ|| ನೇತಾಯಸ್ಯಬೃಹಸ್ಪತಿಃಪ್ರಹರಣಂ ವಜ್ರಂಸುರಾಸ್ಸೈನಿಕಾ
ಸ್ಸ್ವರ್ಗೋದುರ್ಗಮನುಗ್ರಹಃ ಖಲುಹರೇರೈರಾವಣೋವಾರ
ಣಃ || ಇತ್ಯಾಶ್ಚರ್ಯಬಲಾನ್ವಿತೋಪಿಬಲಭಿದ್ಭಗ್ನಃಪರೈಸ್ಸಂಗರೇ
ತದ್ವ್ಯಕ್ತಂನನುದೈವಮೇವಶರಣಂಧಿಗ್ಧಿಗ್ವೃಥಾಪೌರುಷಂ ||೮೧||

ಟೀ|| ಧೈರ್ಯಶೀಲಗಳೆರಡೂ ದೈವಾಧೀನಗಳಾದ್ದರಿಂದ ತನ್ನಿರೂಪಣಾನಂತರದಲ್ಲಿ ದೈವಪದ್ಧತಿಯಂ ನಿರೂಪಿಸುತ್ತಾನೆ—ಯಸ್ಯಬಲಭಿದಃ=ಯಾವ ಇಂದ್ರನಿಗೆ, ನೇತಾ=ಶಿಕ್ಷಕನು, ಬೃಹಸ್ಪತಿಃ=ಸುರಾಚಾರ್ಯನೋ, ಪ್ರಹರಣಂ=ಆಯುಧವು, ವಜ್ರಂ=ವಜ್ರಾಯುಧವೋ, ಸುರಾಃ=ಅಮರರು, ಸೈನಿಕಾಃ=ಸೇನಾಜನರೋ, ದುರ್ಗಂ=ಕೋಟೆಯು, ಸ್ವರ್ಗಃ=ಸ್ವರ್ಗಲೋಕವೋ, ಹರೇಃ=ನಾರಾಯಣನ, ಅನುಗ್ರಹಃ=ಪ್ರೀತಿಯೋ, ವಾರಣಃ=ಗಜವು, ಐರಾವಣಃ=ಐರಾವತವೋ, ಇತಿ=ಈ ಪ್ರಕಾರವಾಗಿ, ಸಭಿಲಬಿತ್=ಆ ಇಂದ್ರನು, ಆಶ್ಚರ್ಯ=ಅಸಾಧಾರಣವಾದ, ಬಲ=ಶಕ್ತಿಯಿಂದ, ಅನ್ವಿತೋಪಿ=ಸಹಿತನಾಗಿದ್ದರೂ, ಸಂಗರೆ=ಯುದ್ಧದಲ್ಲಿ ಪರೈಃ=ಶತ್ರುಗಳಿಂದ, ಭಗ್ನಃ=ಪರಾಜಿತನಾದನೋ, ತಸ್ಮಾತ್=ಆದಕಾರಣದ್ದೆಸೆಯಿಂದ ದೈವಮೇವ=ದೈವವೇ, ಶರಣಂನನು=ರಕ್ಷಕವಾದದ್ದು ಯುಕ್ತಂ=ಯುಕ್ತವು,ಪೌರುಷಂ=ಪುರುಷಕಾರ್ಯವು, ಧಿಕ್‌ಧಿಕ್=ನಿಂದಿಸತಕ್ಕದ್ದು. ವೃಥಾ-ವ್ಯರ್ಥವು. ||೮೧||

ತಾ|| ತ್ರಿಲೋಕಾಧಿಪತಿಯಾದ ಇಂದ್ರನಿಗೆ ಸಾಕ್ಷಾದ್ಬೃಹಸ್ಪತಿಯೇ ಹಿತಾಹಿತಗಳನ್ನು ಬೋಧಿಸುವ ಶಿಕ್ಷಕನಾಗಿದ್ದಾಗ್ಯೂ. ಅಸದೃಶವಾದ ವಜ್ರಾಯುಧವೇ ಆಯುಧವಾಗಿದಾಗ್ಯೂ, ಅಮರರೇ ಸೈನಿಕರಾಗಿದ್ದಾಗ್ಯೂ, ಐರಾವತವು ವಾಹನವಾಗಿದ್ದಾಗ್ಯೂ, ಮತ್ತು ಜಗತ್ಕರ್ತನಾದ ಸಾಕ್ಷಾತ್ ಶ್ರೀಹರಿಯ ಅನುಗ್ರಹವಿದ್ದಾಗ್ಯೂ, ಈ ಮೇರಿಗೆಲ್ಲಾ ಅತ್ಯಾಶ್ಚರ್ಯ ಬಲವಿಂದೊಡಗೂಡಿದ ಆ ಇಂದ್ರನೂ ರಣದಲ್ಲಿ ಶತ್ರುಗಳಿಂದ ಪರಾ

ಚಿತನಾದನು. ಆದ್ದರಿಂದ ಹಾನಿವೃದ್ಧಿಗಳಿಗೆ ದೈವವು ಮುಖ್ಯಕಾರಣವೆಲ್ಲದೆ ಪೌರುಷವು ಏನೂ ಪ್ರಯೋಜನಕಾರಿಯಲ್ಲವೆಂದು ಭಾವವು. ॥೮೧॥

ಶ್ಲೋ॥ ಭಗ್ನಾಶಸ್ಯಕರಂಡಪಿಂಡಿತತನೋರ್ಮ್ಲಾನೇಂದ್ರಿಯಸ್ಯಕ್ಷುಧಾ ಕೃ
ತ್ವಾಖುರ್ವಿವರಂಸ್ವಯಂನಿಪತಿತೋ ನಕ್ತಂಮುಖೇಭೋಗಿನಃ ॥
ತೃಪ್ತಸ್ತತ್ಪಿಶಿತೇನಸತ್ವರಮಸೌತೇನೈವಯಾತಃಪಥಾ ಸ್ವಸ್ಥಾ
ಸ್ತಿಷ್ಠತದ್ದೈವಮೇವಹಿನೃಣಾಂ ವೃದ್ಧೌಕ್ಷಯೇಕಾರಣಂ ॥೮೨॥

ಟೀ॥ ಹೇಳಿದರ್ಥವನ್ನೇ ದೃಷ್ಟಾಂತಪೂರ್ವಕವಾಗಿ ಹೇಳುತ್ತಾನೆ—ಆಖುಃ=ಇಲಿಯು, ನಕ್ತಂ=ರಾತ್ರಿಯಲ್ಲಿ, ವಿವರಂ=ಬಿಲವನ್ನು, ಕೃತ್ವಾ=ಮಾಡಿಕೊಂಡು ಭಗ್ನ=ನಷ್ಟವಾದ, ಆಶಸ್ಯ=ಮನೋರಥವುಳ್ಳ, ಕರಂಡ=ಬುಟ್ಟಿಯಲ್ಲಿ, ಪಿಂಡಿತ=ಹುದಿಗಿಸಿಕೊಂಡ, ತನೋಃ=ಶರೀರವುಳ್ಳ, ಕ್ಷುಧಾ=ಹಸಿವಿನಿಂದ, ಮ್ಲಾನ=ಬಳಲಿದ, ಇಂದ್ರಿಯಸ್ಯ=ಇಂದ್ರಿಯ ಸಾಮರ್ಥ್ಯವುಳ್ಳ, ಭೋಗಿನಃ=ಹಾವಿನ, ಮುಖೆ=ಬಾಯಿಯಲ್ಲಿ, ನಿಪತಿತಃ=ಬಿದ್ದಿತು, ತತಃ=ಅನಂತರದಲ್ಲಿ, ಅಸೌ=ಈ ಸರ್ಪವು, ತತ್=ಆ ಇಲಿಯ, ಪಿಶಿತೇನ=ಮಾಂಸದಿಂದ, ತೃಪ್ತಃ=ತೃಪ್ತಿಹೊಂದಿದ್ದಾಗಿ, ತೇನೈವಪಥಾ=ಆ ಬಿಲದಿಂದಲೇ, ಯಾತಃ=ಹೊರಟುಹೋಯಿತು, ಭೋಜನಾಃ=ಎಲೈ ಮನುಷ್ಯರೇ, ಸ್ವಸ್ಥಾಃ=ಸ್ಥಿರಚಿತ್ತರಾಗಿ, ತಿಷ್ಠತ=ಇರಿ, ವೃದ್ಧೌ=ಅಭಿವೃದ್ಧಿಯಲ್ಲಿಯೂ, ಕ್ಷಯೆ=ನಾಶದಲ್ಲಿಯೂ, ದೈವಮೇವ=ದೈವವೇ, ಪರಂ=ಉತ್ಕೃಷ್ಟವಾದ, ಕಾರಣಂ=ನಿಮಿತ್ತವು. ... ... ॥೮೨॥

ತಾ॥ ಹೊರಗೆ ಹೋಗುವೆನೆಂಬದು ಮೊದಲಾದ ಆಶೆಯು ನಷ್ಟವಾಗಿ ಬುಟ್ಟಿಯಲ್ಲಿ ದೇಹವನ್ನು ಹುಗಿಸಿಕೊತ್ತಿಕೊಂಡು, ಇಂದ್ರಿಯಗಳ ಸಾಮರ್ಥ್ಯವೆಲ್ಲಾ ತಪ್ಪಿಹೋಗಿ, ಹಸಿವಿನಿಂದ ಬಳಲುತ್ತಿರುವ ಹಾವಿನಬುಟ್ಟಿಗೆ ರಾತ್ರಿವೇಳೆಯಲ್ಲಿ ಧಾನ್ಯಾದಿಗಳಿರುವದೆಂಬ ಭ್ರಾಂತಿಯಿಂದ ಇಲಿಯು ಬಿಲವನ್ನು ಕೊರೆದು ಹಸಿದಿದ್ದ ಹಾವಿನ ಬಾಯಿಗೆ ತುತ್ತಾಗುವದು. ಆ ಇಲಿಯ ಮಾಂಸಾಹಾರದಿಂದ ತೃಪ್ತವಾದ ಹಾವು ಅದೇ ಬಿಲದಿಂದ ಸುಖವಾಗಿ ಹೊರಗೆ ಹೊರಟು ಹೋಗುವದು. ಹೀಗೆಯೇ ಎಲ್ಲಾ ಪ್ರಾಣಿಗಳ ಹಾನಿ ವೃದ್ಧಿಗಳಲ್ಲಿಯೂ ಪ್ರಯತ್ನ ಮಾಡದಿದ್ದಾಗ್ಯೂ ದೈವವೇ ಮುಖ್ಯಕಾರಣವಾದ್ದರಿಂದ, ಎಲೈ ಮನುಷ್ಯರೇ! ದುರಾಶಾ ಪಿಶಾಚಗ್ರಸ್ತರಾಗಿ ಚಪಲಚಿತ್ತರಾಗದೆ ಸ್ಥಿರಚಿತ್ತರಾಗಿರಿ. ಉಂಟಾಗುವ ಹಾನಿ ವೃದ್ಧಿಗಳು ದೈವಾಯತ್ತಗಳಾಗಿಯೇ ಉಂಟಾಗುವವೆಂದು ಭಾವವು. .... ॥೮೨॥

ಶ್ಲೋ॥ ಯಥಾಕಂದುಕಪಾತೇನೋತ್ಪತತ್ಯಾರ್ಯಃಪತನ್ನಪಿ ॥ ತಥಾತ್ವ
ನಾರ್ಯಃಪತತಿಮೃತ್ಪಿಂಡಪತನಂಯಥಾ .... ॥೮೩॥

ಟೀ॥ ಆರ್ಯಃ=ದೈವಾಯತ್ತಿಕನು (ಎಂದರೆ ದೈವದ ಅಧೀನನಾಗಿರುವವನು) ಪತನ್ನಪಿ=ನೀಚಸ್ಥಿತಿಯನ್ನು ಹೊಂದಿದಾಗ್ಯೂ, ಕಂದುಕ=ಚಂಡಿನ, ಪಾತೇನಯಥಾ=ಪತನದಿಂದ ಹೇಗೋಹಾಗೆ, ಉತ್ಪತತಿ=ಉಛ್ರಯವನ್ನು ಹೊಂದುವನು. ತಥಾ=ಹಾಗೆಯೆ, ಅನಾರ್ಯಃ=ನೀಚನು, (ಎಂದರೆ ಕೇವಲ ಪೌರುಷವನ್ನು ಶ್ಲಾಘಿಸುವವನು) ಮೃತ್ಪಿಂಡಪತನಂಯಥಾ--ಮೃತ್ಪಿಂಡ=ಮಣ್ಣಿನ ಗಡ್ಡೆಯು, ಪತನಂಯಥಾ=ಬೀಳುವಿಕೆಯು ಹಾಗೆ, ಪತತಿ=ಅಧಃಪಾತವನ್ನೈದುವನು. ... ॥೮೩॥

ತಾ॥ ದೈವವೇ ಸಕಲ ಹಾನಿ ವೃದ್ಧಿಗಳಿಗೂ ಮುಖ್ಯಕಾರಣವೆಂದಿರುವ ಆರ್ಯನು ಒಂದುವೇಳೆ ಹೀನಸ್ಥಿತಿಗೆ ಬಂದಾಗ್ಯೂ, ಚಂಡು ಕೆಳಕ್ಕೆ ಬಿದ್ದಾಗ್ಯೂ, ಹೇಗೆ ಪುನಃ ಮೇಲಕ್ಕೆ ಹಾರುವದೋ, ಅದರಂತೆ ತಿರುಗಿ ಉಛ್ರಯವನ್ನು ಹೊಂದುವನು. ಕೇವಲ ಪೌರುಷವೇ ಮುಖ್ಯವೆಂದು ಹೇಳುವ ಅನಾರ್ಯನು ಹೀನಸ್ಥಿತಿಗೆ ಬಂದರೆ ಮಣ್ಣಿನ ಗಡ್ಡೆಯು ಕೆಳಗೆ ಬಿದ್ದರೆ ಹೇಗೆ ಪುನಃ ಮೇಲಕ್ಕೆ ಹಾರಲಾರದೋ ಹಾಗೆ ಉಛ್ರಯವನ್ನು ಎಂದಿಗೂ ಪಡೆಯಲಾರನೆಂದು ಭಾವವು. .... ॥೮೩॥

ಶ್ಲೋ॥ಖರ್ವಾಟೋದಿವಸೇಶ್ವರಸ್ಯಕಿರಣೈಸ್ಸಂತಾಪಿತೇಮಸ್ತಕೇಗಚ್ಛನ್
ದೇಶಮನಾತಪಂದ್ರುತಗತಿಸ್ತಾಳಸ್ಯಮೂಲಂಗತಃ ॥ ತತ್ರಾಪ್ಯ
ಸ್ಯಮಹಾಫಲೇನಪತತಾ ಭಗ್ನಂಸಶಬ್ದಂಶಿರಃ ಪ್ರಾಯೋಗಚ್ಛತಿ
ಯತ್ರದೈವಹತಕಸ್ತತ್ರೈವಯಾಂತ್ಯಾಪದಃ .... ॥೮೪॥

ಟೀ॥ ದೈವದಿಂದ ಪೆಟ್ಟುಬಿದ್ದವಗೆ ಎಲ್ಲಿಯೂ ಸುಖವಿಲ್ಲವೆಂಬರ್ಥವಂ ಪೇಳುತ್ತಾನೆ—ಖರ್ವಾಟಃ=ಬಟ್ಟತಲೆಯುವನು, ಮಸ್ತಕೆ=ತನ್ನ ತಲೆಯು, ದಿವಸೇಶ್ವರಸ್ಯ=ಸೂರ್ಯನ, ಕಿರಣೈಃ=ರಶ್ಮಿಗಳಿಂದ, (ಬಿಸಿಲಿನಿಂದ) ಸಂತಾಪಿತೇಸತಿ=ಸುಡಲ್ಪಡುತ್ತಿರಲಾಗಿ, ಅನಾತಪಂ=ಬಿಸಿಲಿಲ್ಲದಿರುವ, ದೇಶಂ=ಸ್ಥಲವನ್ನು ಕುರಿತು ದ್ರುತ=ಶೀಘ್ರವಾದ, ಗತಿಃ=ಗಮನವುಳ್ಳವನಾಗಿ, ತಾಳಸ್ಯ=ತಾಳೇಮರದ, ಮೂಲಂ=ಬುಡವನ್ನು ಗತಃ=ಹೊಂದಿದನು. ತತ್ರಾಪಿ=ಆ ತಾಳೇಮರದ ಬುಡದಲ್ಲಿಯೂ ಕೂಡ, ಪತತಾ=ಬೀಳುವ ಮಹಾಫಲೇನ=ದೊಡ್ಡ ಹಣ್ಣಿನಿಂದ, ಅಸ್ಯ=ಈಬಟ್ಟತಲೆಯುವನ, ಶಿರಃ=ತಲೆಯು,ಸಶಬ್ದಂ=ಶಬ್ದದಿಂದಕೂಡಿದ್ದಾಗಿ, ಭಗ್ನಂ=ಒಡೆಯಲ್ಪಟ್ಟಿತು. ದೈವಹತಕಃ=ದೈವಾನುಗ್ರಹ ಶೂನ್ಯನಾದವನು, ಯತ್ರ=ಯಾವ ಪ್ರದೇಶದಲ್ಲಿ, ಗಚ್ಛತಿ=ಹೋಗುವನೋ, ಆಪದೋಪಿ=ವಿಪತ್ತುಗಳೂ. ಪ್ರಾಯಃ=ಬಹುಪ್ರಕಾರವಾಗಿಯೂ,ತತ್ರೈವ=ಅಲ್ಲಿಗೇನೆ, ಯಾಂತಿ=ಹೋಗುವವು

ತಾ॥ ಬಬ್ಬಾನೊಬ್ಬ ಬಟ್ಟತಲೆಯುವನು ಬಿಸಿಲಿನಿಂದ ಬಳಲಿ ನೆರಳಿಗೆ ಹೋಗಬೇಕೆಂದೆಣಿಸಿ ತಾಳೇಮರದ ಕೆಳಗೆ ಹೋಗಲು, ಅಲ್ಲಿ ಆ ಮರದಿಂದ ತೊಟ್ಟು ಕಳಚಿ ಬಿದ್ದ ದೊಡ್ಡ ಹಣ್ಣಿನಿಂದ ತಲೆ ಒಡೆಯಿತು. (ಊರಲ್ಲಿ ಸೊಳ್ಳೆಯ ಕಾಟವೆಂದು ಅಡವಿಗೆ ಹೋದರೆ ಹುಲಿ ತಿಂದಿತೆಂಬಂತೆ) ದೈವಾನುಗ್ರಹ ತಪ್ಪಿದ ಪ್ರಾಣಿಯು ಎಲ್ಲಿಗೆ ಹೋದಾಗ್ಯೂ ಬಹುಶಃ ಆಪತ್ತುಗಳೂ ಅಲ್ಲಿಗೇ ಬರುವವೆಂದು ಭಾವವು. .... ॥೮೪॥

ಶ್ಲೋ॥ ಗಜಭುಜಂಗವಿಹಂಗಮಬಂಧನಂ ಶಶಿದಿವಾಕರಯೋರ್ಗ್ರಹಪೀಡನಂ ॥ ಮತಿಮತಾಂಚವಿಲೋಕ್ಯದರಿದ್ರತಾಂವಿಧಿರಹೋಬಲವಾನಿತಿಮೇಮತಿಃ ॥ .... .... ॥೮೫॥

ಟೀ॥ ದೈವವೇ ದೊಡ್ಡದೆಂದು ನನ್ನ ಬುದ್ಧಿಯೆಂಬದಾಗಿ ಹೇಳುತ್ತಾನೆ—ಗಜ=ಆನೆಯು, ಭುಜಂಗ=ಸರ್ಪವು, ವಿಹಂಗಮ=ಪಕ್ಷಿಯು ಇವುಗಳಿಗೆ, ಬಂಧನಂ=ಬಂಧನವು=ಶಶಿದಿವಾಕರಯೋಃ=ಚಂದ್ರಸೂರ್ಯರಿಗೆ, ಗ್ರಹ=ರಾಹು ಕೇತುಗಳ, ಪೀಡನಂ=ಬಾಧೆಯು, ಮತಿಮತಾಂ=ಬುದ್ಧಿಶಾಲಿಗಳಾದವರಿಗೆ, ದರಿದ್ರತಾಂಚ=ದಾರಿದ್ರ್ಯವನ್ನು, ವಿಲೋಕ್ಯ=ನೋಡಿ, ವಿಧಿಃ=ದೈವವು, ಬಲವಾನ್=ಬಲಿಷ್ಠನು, ಇತಿ=ಹೀಗೆಂದು, ಮೇ=ನನಗೆ, ಮತಿಃ=ಬುದ್ಧಿಯು, ಅಹೊ-ಆಶ್ಚರ್ಯವು. ॥೮೫॥

ತಾ॥ ಗ್ರಹಿಸಲಸಾಧ್ಯಗಳಾದ ಸರ್ಪ ಆನೆ ಪಕ್ಷಿಗಳಿಗೆ ಕೂಡ, ಹಾವಾಡಿಗ ಮೊದಲಾದವರಿಂದ ಬಂಧನವನ್ನೂ, ಜಗತ್ಪ್ರಕಾಶಕರಾದ ಸೂರ್ಯಚಂದ್ರರಿಗೆ ಕೂಡ ರಾಹುಕೇತು ಗ್ರಹಣವನ್ನೂ, ಕೇವಲ ಬುದ್ಧಿವಂತರಿಗೆ ದಾರಿದ್ರ್ಯವನ್ನೂ ಕಲ್ಪಿಸಿರುವ ವಿಧಿಯನ್ನು ನೆನೆಯಲು ಅಹಹ! ದೈವವುಬಲುದೊಡ್ಡದೆಂದು ನನ್ನ ಬುದ್ಧಿಯು ಇಾತೆಂದು ಭಾವವು ॥೮೫॥

ಶ್ಲೋ॥ ಸೃಜತಿತಾವದಶೇಷಗುಣಾಕರಂ ಪುರುಷರತ್ನಮಲಂಕರಣಂಭುವಃ ॥ ತದಪಿತತ್ ಕ್ಷಣಭಂಗಿಕರೋತಿಚೇದಹಹಕಷ್ಟಮಪಂಡಿತತಾವಿಧೇಃ ॥ .... .... ॥೮೬॥

ಟೀ ॥ ಹೀಗಾದರೆ ದೈವಕ್ಕೂ ಬುದ್ಧಿಯಿಲ್ಲವೆಂದು ಹೇಳುತ್ತಾನೆ—ವಿಧಿಃ=ಬ್ರಹ್ಮನು, ಅಶೇಷ=ಸಮಸ್ತವಾದ, ಗುಣ=ಸದ್ಗುಣಗಳಿಗೆ ಆಕರ=ಸ್ಥಾನವಾದ, ಭುವಃ=ಭೂಮಿಗೆ, ಅಲಂಕರಣಂ=ಭೂಷಣಸ್ವರೂಪವಾದ, ಪುರುಷ=ಮನುಷ್ಯನೆಂಬ, ರತ್ನಂ=ಮಣಿಯನ್ನು, ಶ್ರೇಷ್ಠವಾದ ಪುರುಷನನ್ನು ಸೃಜತಿತಾವತ್=ಸೃಷ್ಟಿಮಾಡುತ್ತಾನಷ್ಟೆ? ತದಪಿ=ಆ ಪುರುಷರತ್ನವನ್ನು ಕೂಡ, ಕ್ಷಣ=ನಿಮಿಷ

ಮಾತ್ರದಲ್ಲಿ, ಭಂಗಿ=ನಾಶವಾಗತಕ್ಕದ್ದನ್ನಾಗಿ, ಕರೋತಿಚೇತ್=ಮಾಡುವವನಾದರೆ, ವಿಧೇಃ=ದೈವದ, ಅಪಂಡಿತತಾ=ಮೂಢತನವು, ಅಹಹ=ಕಷ್ಟವು ... ॥೮೬॥

ತಾ॥ ಬ್ರಹ್ಮನು ಭೂಲೋಕಕ್ಕಲಂಕಾರಪ್ರಾಯವಾಗಿಯೂ ಮತ್ತು ಸಕಲ ಸದ್ಗುಣಗಳಿಗಾಕರವಾಗಿಯೂ ಇರುವ ಪುರುಷರತ್ನವನ್ನು ಸೃಷ್ಟಿಸಿ ಅಂಥಾ ರತ್ನವನ್ನೂ ಕೂಡ ಕ್ಷಣಮಾತ್ರದಲ್ಲಿ ನಾಶಮಾಡುತ್ತಾನಲ್ಲ? ಇವನ ಪಾಂಡಿತ್ಯವು ಅತಿ ನಿಂದ್ಯವಾದದ್ದೇಸರಿ, ತಾನು ಸೃಷ್ಟಿಮಾಡಿದ ಪುರುಷರತ್ನವನ್ನು ಸ್ಥಿರವಾಗಿರುವಂತೆ ಮಾಡಿದ್ದವನಾದರೆ ಕೇವಲ ಶ್ಲಾಘ್ಯನಾಗುತ್ತಿದ್ದನೆಂದು ಭಾವವು. .... .... ॥೮೬॥

ಶ್ಲೋ॥ ಅಯಮಮೃತನಿಧಾನಂನಾಯಕೋಽಪ್ಯೋಷಧೀನಾಂಶತಭಿಷಗನು
ಯಾತಶ್ಶಂಭುಮೂರ್ಧ್ನೋಽವತಂಸಃ ॥ ವಿರಹಯತಿನಚೈನಂರಾ
ಜಯಕ್ಷ್ಮಾಶಶಾಂಕಂಹತವಿಧಿಪರಿಪಾಕಃಕೇನವಾಲಂಘನೀಯಃ ॥

ಟೀ॥ ಯಾವ ರೀತಿಯಿಂದಲೂ ದೈವಗತಿಯನ್ನು ತಪ್ಪಿಸಲಿಕ್ಕಾಗುವದಿಲ್ಲವೆಂದು ಹೇಳುತ್ತಾನೆ—ಅಯಂ=ಈ ಕಾಣುತ್ತಲಿರುವ ಚಂದ್ರನು, ಅಮೃತ=ಅಮೃತಕ್ಕೆ, ನಿಧಾನಮಪಿ=ಸ್ಥಾನವಾದಾಗ್ಯೂ, ಓಷಧೀನಾಂ=ಸಂಜೀವಿನ್ಯಾದಿ ಔಷಧಿಗಳಿಗೆ, ನಾಯಕೋಽಪಿ=ಸ್ವಾಮಿಯಾದಾಗ್ಯೂ, ಶತಭಿಷಕ್=ಶತಭಿಷ ನಕ್ಷತ್ರದಿಂದ, (ನೂರು ವೈದ್ಯರಿಂದ) ಅನುಯಾತಃ=ಅನುಸರಿಸಲ್ಪಟ್ಟವನಾದಾಗ್ಯೂ, ಶಂಭು=ಶಂಕರನ, ಮೂರ್ಧಃ=ಶಿರಸ್ಸಿಗೆ, ಅವತಂಸಃ=ಭೂಷಣವಾಗಿದ್ದಾಗ್ಯೂ ಏನಂ=ಇಂಥಾ ಚಂದ್ರನನ್ನು ರಾಜಯಕ್ಷ್ಮಾ=ಕ್ಷಯರೋಗವು, ನವಿರಹಯತಿಖಲು=ಬಿಡುವದಿಲ್ಲವು, ಅತಃ=ಈದಕಾರಣದ ದೆಸೆಯಿಂದ, ಹತವಿಧಿ=ದುಷ್ಟದೈವದ, ಪರಿಪಾಕಃ=ವಿನಿಯೋಗವು, ಕೇನವಾ=ಯಾವನಿಂದ ತಾನೆ, ಲಂಘನೀಯಃ=ದಾಟಲು ಶಕ್ಯವಾದದ್ದು ॥೮೭॥

ತಾ॥ ಅಮೃತ ರಸಕ್ಕೆ ಗಣಿಯಾಗಿಯೂ, ಸಂಜೀವಿನ್ಯಾದಿ ಲತೆಗಳಿಗೆ ನಾಯಕನಾಗಿಯೂ, ಶತಭಿಷ ನಕ್ಷತ್ರದಿಂದಲೂ (ನೂರು ಮಂದಿ ವೈದ್ಯರಿಂದಲೂ) ಕೂಡ ಅನುಸರಿಸಲ್ಪಟ್ಟು ಸಾಕ್ಷಾತ್ ಶಂಕರ ಶಿರೋಭೂಷಣನಾಗಿಯೂ ಇರುವ ಇಂಥಾ ಈ ಚಂದ್ರನನ್ನು ಕ್ಷಯರೋಗವು ಬಿಡುವದಿಲ್ಲವಲ್ಲ? ಅಹಹ! ಆದ್ದರಿಂದಲೆ ದೈವಯೋಗವನ್ನು ದಾಟುವದಕ್ಕೆ ಯಾವನೂ ಸಮರ್ಥನಲ್ಲನೆಂದು ಭಾವವು. .... ॥೮೭॥

ಶ್ಲೋ॥ ಪ್ರಿಯಸಖವಿಪದ್ದಂಡಾಘಾತಪ್ರಪಾತಪರಂ ಪರಾಪರಿಚಯಬಲೇ
ಚಿಂತಾಚಕ್ರೇನಿಧಾಯವಿಧಿಃಖಲಃ ॥ ಮೃದಮಿವಬಲಾತ್ಪಿಂಡೀಕೃ

ತ್ಯವಿಪ್ರಗಲ್ಭಕುಲಾಲವದ್ಭ್ರಮಯತಿಮನೋನೋಜಾನೀಮಃಕಿಮತ್ರವಿಧಾಸ್ಯತಿ .... .... ॥೭೭॥

ಟೀ॥ ವಿಧಿಯೇ ಮನಸ್ಸಿಗೂ ನಿಯಾಮಕನೆಂದು ಸ್ನೇಹಿತನನ್ನು ಸಂಬೋಧಿಸಿ ಹೇಳುತ್ತಾನೆ—ಪ್ರಿಯಸಖ=ಎಲೈ ಇಷ್ಟನಾದ ಸ್ನೇಹಿತನೇ, ಖಲಃ=ನೀಚನಾದ, ಅಯಂವಿಧಿಃ=ಈ ಬ್ರಹ್ಮನು, ಪ್ರಗಲ್ಭ=ಪ್ರೌಢನಾದ, ಕುಲಾಲವತ್=ಕುಂಬಾರನೋಪಾದಿಯಲ್ಲಿ, ಮನಃ=ಮನಸ್ಸನ್ನು ಮೃದಮಿವ=ಮಣ್ಣಿನೋಪಾದಿಯಲ್ಲಿ, ಬಲಾತ್ ಬಲತ್ಕಾರದ್ದೆಸೆಯಿಂದ, ಪಿಂಡೀಕೃತ್ಯ=ಉಂಡೆಯಾಗಿ ಮಾಡಿ ವಿಪದ್ದಂಡಾಘಾತ=ಕಟ್ಟಿಗೆಯು ಪೆಟ್ಟುಗಳಂತಿರುವ ಆಪತ್ತುಗಳ, ಪ್ರವಾತಾನಾಂ=ದೊಡ್ಡಘಾಳಿಗಳ, ಪರಂಪರಾ=ಸಮೂಹಗಳ, (ಪಗಸ್ಪರಾವಯಪಸನ್ನಿವೇಶದ) ಬಲಿ=ಬಲವುಳ್ಳ, ಚಿಂತಾಚಕ್ರೇ=ಚಕ್ರದಂತಿರುವ ಚಿಂತೆಯಲ್ಲಿ, ನಿಧಾಯ=ಇಟ್ಟು ಭ್ರಮಯತಿ=ತಿರುಗಿಸುತ್ತಾನೆ, ಅತ್ರ=ಈ ತಿರುಗಿಸುವಿಕೆಯಲ್ಲಿ,ಕಿಂವಿಧಾಸ್ಯತಿ=ಏನನ್ನುಮಾಡುವನೊ, ನೋಜಾನೀಮಃ=ಅರಿಯೆವು. .... ॥೭೭॥

ತಾ॥ ಎಲೈ ಇಷ್ಟನಾದ ಸ್ನೇಹಿತನೇ! ಪಾಪಿಯಾದ ದೈವವು ನನ್ನ ಮನಸ್ಸನ್ನು ಪ್ರೌಢನಾದ ಕುಂಬಾರನ ಹಾಗೆ ಮಣ್ಣಿನಂತೆ ಉಂಡೆಮಾಡಿ ಕುಂಭವನ್ನು ತಟ್ಟುವ ಕಟ್ಟಿಗೆಯು ಪೆಟ್ಟನಂತಿರುವ ಆಪತ್ತುಗಳ ದೆಸೆಯಿಂದಲೂ ಗಾಳಿಯಿಂದಲೂ ಉಂಟಾದ ಪರಸ್ಪರ ಅವಯವಸನ್ನಿವೇಶದ ಬಲವುಳ್ಳ ಚಿಂತೆಯೆಂಬ ಚಕ್ರದೊಳಟ್ಟು ತಿರುಗಿಸುತ್ತಿರುವನು. ಲೋಕದೊಳು ಚಕ್ರದಲ್ಲಿ ಮಣ್ಣನ್ನಿಟ್ಟು ತಿರಿಗಿಸುವ ಕುಂಬಾರನು ಆ ಮಣ್ಣಿನಿಂದ ಕುಂಭವನ್ನು ಮಾಡುವನು. ಈ ಮನಸ್ಸನ್ನು ತಿರಿಗಿಸುವ ವಿಧಿಯು ಇನ್ನೇನನ್ನು ಮಾಡುವನೋ ಅರಿಯೆನೆಂದು ಭಾವವು. .... ॥೭೭॥

ಶ್ಲೋ॥ ವಿರಮವಿರಮಾಯಾಸಾದಸ್ಮಾದ್ದುರಧ್ಯವಸಾಯತೋವಿಪದಿಮಹತಾಂಧೈರ್ಯಧ್ವಂಸಂಯದೀಕ್ಷಿತುಮಾಹಸೇ ॥ ಅಯಿಜಡವಿಧೇಕಲ್ಪಾಪಾಯೇಸ್ಯಪೇತನಿಜಕ್ರಮಾಃಕುಲಶಿಖರಿಣಃಕ್ಷುದ್ರಾನ್ನೈತೇನವಾಜಲರಾಶಯಃ .... .... ॥೭೮॥

ಟೀ॥ ಈ ಮೇರೆಗೆ ವಿಪತ್ತುಗಳುಂಟುಮಾಡಿದಲ್ಲಿ ಧೈರ್ಯಧ್ವಂಸವು ಉಂಟಾಗುವದೆಂದು ತಿಳಿಯಬೇಡೆಂಬದಾಗಿ ದೈವವಂ ಗಣಿಸದೆ, ತಿರಸ್ಕರಿಸುತ್ತಾನೆ—ಅಯಿ=ಎಲೈ,=ಜಡ=ಮಂದವಾದ, ವಿಧೇ=ದೈವವೇ, ಅಸ್ಮಾತ್=ಈ, ದುರಧ್ಯವಸಾಯತಃ=ದುರುದ್ಯೋಗದಿಂದುಂಟಾದ ಪ್ರಯಾಸದ್ದೆಸೆಯಿಂದ, ವಿರಮವಿರಮ=ನಿಲ್ಲು ನಿಲ್ಲು, ವಿಪದಿ=ಆಪತ್ತಿನಲ್ಲಿ, ಮಹತಾಂ=ಮಹಾತ್ಮರಿಗೆ, ಧೈರ್ಯ=ಧೀರತ್ವದ, ಧ್ವಂಸಂ=

ನಾಶವನ್ನು, ಈಕ್ಷಿತುಂ=ನೋಡುವದಕ್ಕೋಸ್ಕರ, ಯಾತ್=ಯಾವ ಆಯಾಸದ್ದಿಕೆ ಯಿಂದ, ಈ ಹಸೇ=ಕಾಂಕ್ಷಿಸುವಿಯೋ, ಕಲ್ಪಪಾಯೇಪಿ=ಕಲ್ಪಾಂತರದಲ್ಲಿ ಕೂಡ, ಅಪೇತ=ಹೋದಂಥ,ನಿಜ=ತಮ್ಮ,ಕ್ರಮಾಃ=ಮರ್ಯಾದೆಯುಳ್ಳವುಗಳಾಗಿರುವ,ಏತೇ= ಈ ಧೀರರು, ಕುಲಶಿಖರಿಣಃ=ಈ ಮಹೇಂದ್ರ ಮೊದಲಾದ ಏಳು ಕುಲಪರ್ವತಗಳು, ಕ್ಷುದ್ರಾಃ=ತುಚ್ಛವಾದ, ಜಲರಾಶಯೋವಾ=ಸಪ್ತಸಮುದ್ರಗಳೂ, ನಖಲು=ಅಲ್ಲ ವಲ್ಲ. (ಮಹೇಂದ್ರ ಮಲಯ, ಸಹ್ಯ, ಸ ನುಮಂತ ಋಕ್ಷ, ವಿಂಧ್ಯ, ಪಾರಿಯಾತ್ರ ಈ ಏಳೂ, ಕುಲಪರ್ವತಗಳು. ಉಪ್ಪು, ಕಬ್ಬಿನಹಾಲು, ಮದ್ಯ, ತುಪ್ಪ, ಮೊಸರು, ಹಾಲು, ನೀರು, ಇವು ಏಳೂ ಕಡಲುಗಳು.) .... ॥೪೯॥

ತಾ॥ ಎಲೈ ಮಂದಮತಿಯುಳ್ಳ ದೈವವೇ ! ವಿಪತ್ಕಾಲದೊಳು ಮಹಾತ್ಮರಿಗೆ ಧೈರ್ಯಧ್ವಂಸವು ಉಂಟಾಗುವದೆಂದು ನೀನು ಕೋರುವ ಕೋರಿಕೆಯ ದುರುದ್ಯೋಗವಂ ಮಾಡದೆ ನಿಲ್ಲುವನಾಗು, ಏಕೆಂದರೆ, ಪ್ರಳಯ ಕಾಲದಲ್ಲಾದರೂ ಕುಲಪರ್ವತಗಳೂ ಸಮುದ್ರಗಳೂ ಕ್ಷುದ್ರರಂತೆ ಮೇರೆ ತಪ್ಪುವದುಂಟೆ ? ಹೀಗೆಯೇ ಮಹನೀಯರಿಗೆಂದಿಗೂ ಧೈರ್ಯ ವಿಪರ್ಯಯವುಂಟಾಗಲಾರದೆಂದು ಭಾವವು. .... .... ॥೪೯॥

ಶ್ಲೋ॥ ದೈವೇನಪ್ರಭುಣಾಸ್ವಯಂಜಗತಿಯದ್ಯಸ್ಯಪ್ರಮಾಣೀಕೃತಂ ।
ತತ್ತಸ್ಯೋಪನಮೇನ್ಮನಾಗಪಿಮಹಾನ್ನೈವಾಶ್ರಯಃಕಾರಣಂ ।
ಸರ್ವಾಶಾಪರಿಪೂರಕೇಜಲಧರೇವರ್ಷತ್ಯ ಪಿಪ್ರತ್ಯಹಂಸೂಕ್ಷ್ಮಾಪಿ
ಪತಂತಿಚಾತಕಮುಖೇದ್ವಿತ್ರಾಃಪಯೋಬಿಂದವಃ ॥೫೦॥

ಟೀ॥ ಆದರೂ ದೈವವೇ ಗತಿಯೆಂಬರ್ಥವಂ ಪೇಳುತ್ತಾನೆ—ಪ್ರಭುಣಾ= ಸಮರ್ಥನಾದ, ದೈವೇನ=ವಿಧಿಯಿಂದ, ಜಗತಿ=ಲೋಕದಲ್ಲಿ, ಯಸ್ಯ=ಯಾವ ಪುರುಷನಿಗೆ, ಯಾತ್=ಯಾವ ವಸ್ತುವು,ಪ್ರಮಾಣೀಕೃತಂ=ನಿಶ್ಚಯಿಸಲ್ಪಟ್ಟಿರುವುದು, ತತ್=ಆ ವಸ್ತುವು, ತಸ್ಯ=ಆ ಪುರುಷನನ್ನು, ಉಪನಮೇತ್=ಹೊಂದುವದು, ಮನಾಕ್=ಸ್ವಲ್ಪವಾದಾಗ್ಯೂ, ಮಹಾನ್=ದೊಡ್ಡದಾದ, ಆಶ್ರಯಃ=ಆಶ್ರಯವು, ನೈವಕಾರಣಂ=ಸಾಧನವಲ್ಲವು, ಸರ್ವ=ಸಕಲರ, ಆಶಾ=ಮನೋರಥವನ್ನು, ಪರಿಪೂರಕೆ=ಪರಿಪೂರ್ತಿ ಮಾಡತಕ್ಕ, ಜಲಧರೆ=ಮೇಘವು, ಪ್ರತ್ಯಹಂ=ಪ್ರತಿದಿವಸದಲ್ಲಿಯೂ, ವರ್ಷತಿಸತ್ಯಪಿ=ಮಳೆಗರಿಯುತ್ತಿದ್ದಾಗ್ಯೂ, ಚಾತಕೆ=ಚಾತಕವೆಂಬ ಪಕ್ಷಿಯ, ಮುಖೆ=ಬಾಯಿಯಲ್ಲಿ,ಸೂಕ್ಷ್ಮಾಃ=ಸಣ್ಣಗಿರುವ, ದ್ವಿತ್ರಾಃ=ಎರಡುಮೂರಾದ, ಪಯಃ=ಉದಕದ, ಬಿಂದವಃ=ತೊಟ್ಟುಗಳು, ಪತಂತಿ=ಬೀಳುತ್ತವೆ. ॥೫೦॥

ತಾ॥ ಸಮರ್ಥನಾದ ವಿಧಿಯು ಲೋಕದಲ್ಲಿ ಯಾವ ಪ್ರಾಣಿಗೆ

ಎಷ್ಟು ಪದಾರ್ಥವನ್ನು ನಿಶ್ಚಯಿಸಿ ಸೃಷ್ಟಿಸಿರುವನೋ, ಆ ಪ್ರಾಣಿಗೆ ಅದೇ ವಸ್ತುವು ಅಷ್ಟೇ ದೊರಿಯುವದಲ್ಲದೆ ಆಶ್ರಯ ಬಲದಿಂದ ಹೆಚ್ಚಾಗಿಯೂ ಅಥವಾ ಕಡಮೆಯಾಗಿಯೂ ದೊರಿಯುವದಿಲ್ಲವು, ಹೇಗೆಂದರೆ ಸಕಲ ಜನರ ಮನೋರಥವನ್ನು ಪರಿಪೂರ್ಣ ಮಾಡಲು ಸಮರ್ಥವಾದ ಮೇಘವು ಪ್ರತಿದಿನವೂ ವರ್ಷಿಸುತ್ತಿದ್ದಾಗ್ಯೂ ಸಣ್ಣದಾಗಿರುವ ಚಾತಕ ಪಕ್ಷಿಯ ಬಾಯಿಯಲ್ಲಿ ಸಣ್ಣದಾದ ಎರಡು ಮೂರೇ ನೀರಿನ ಬೊಟ್ಟುಗಳು ಬೀಳುವುವಾದ ಕಾರಣ ಸರ್ವವನ್ನು ಹೀಗೆಯೇ ಊಹಿಸಿ ನಡಿಯಬೇಕೆಂದು ಭಾವವು. .... .... ॥೯೦॥

ಶ್ಲೋ॥ ಯೇನೈವಾಂಬರಖಂಡೇನಸಂವೀತೋನಿಶಿಚಂದ್ರಮಾಃ । ತೇನೈವಚ
ದಿವಾಭಾನುರಹೋದೌರ್ಗತ್ಯಮೇತಯೋಃ .... ॥೯೦॥

ಟೀ॥ ನಿಶಿ=ರಾತ್ರಿಯಲ್ಲಿ, ಚಂದ್ರಮಾಃ=ಚಂದ್ರನು, ಯೇನೈವ=ಎಷ್ಟಾದ, (ಯಾವ) ಅಂಬರಖಂಡೇನ=ಬಟ್ಟೆಯ ಚೂರಿನಿಂದ, ಸಂವೀತಃ=ಹೊದಿಸಲ್ಪಟ್ಟಿರುವನೋ, ದಿವಾ=ಹಗಲಿನಲ್ಲಿ, ಭಾನುಃ=ಸೂರ್ಯನು, ತೇನೈವ=ಅಷ್ಟಾದ, ಖಂಡೇನ=ಬಟ್ಟೆಯ ಚೂರಿನಿಂದ, ಸಂವೀತಃ=ಸುತ್ತಲ್ಪಡುವನು, ಏತಯೋಃ=ಈ ಚಂದ್ರಸೂರ್ಯರ, ದೌರ್ಗತ್ಯಂ=ದುರ್ಗತಿಯು, ಅಹೋ=ಆಶ್ಚರ್ಯವು. ಮತ್ತು, ನಿಶಿ=ರಾತ್ರಿಯಲ್ಲಿ, ಚಂದ್ರಮಾಃ=ಚಂದ್ರನು, ಯೇನೈವ=ಯಾವ, ಅಂಬರಖಂಡೇನ=ಆಕಾಶದ ಭಾಗದಿಂದ, ಸಂವೀತಃ=ಆವರಿಸಲ್ಪಟ್ಟಿರುವನೊ, ದಿವಾ=ಹಗಲಿನಲ್ಲಿ, ಭಾನುಃ=ಸೂರ್ಯನು, ತೇನೈವ=ಅದರಿಂದಲೇ, ಸಂವೀತಃ=ಸುತ್ತಲ್ಪಟ್ಟಿರುವನು, ಏತಯೋಃ=ಇವರ, ದೌರ್ಗತ್ಯಂ=ದುರ್ಗತಿಯು, ಅಹೊ=ಆಶ್ಚರ್ಯ. ॥೯೦॥

ತಾ॥ ರಾತ್ರಿಕಾಲದೊಳು ಎಷ್ಟು ಪ್ರಮಾಣವುಳ್ಳ (ಆಕಾಶದ) ಬಟ್ಟೆಯ ಭಾಗದಿಂದ ಚಂದ್ರನು ಹೊದಿಸಲ್ಪಟ್ಟಿರುವನೊ, ಹಗಲಿನಲ್ಲಿ ಸೂರ್ಯನೂ ಅಷ್ಟೇ ಬಟ್ಟೆಯಿಂದ (ಆಕಾಶದಿಂದ) ಹೊದಿಸಲ್ಪಟ್ಟಿರುವನಲ್ಲ. ಅಹಹ ! ಜಗತ್ಪ್ರಕಾಶಕರಾದ ಸೂರ್ಯಚಂದ್ರರಿಗೂ ದೈವಗತಿಯು ತಪ್ಪಿದ್ದಲ್ಲವೆಂದು ಭಾವವು. (ಈ ಶ್ಲೋಕವು ನೂತನವಾಗಿ ಸೇರಿಸಿದ್ದೆಂದು ಹೇಳುವರು.) .... .... .... ॥೯೦॥

## ಕರ್ಮಪದ್ಧತಿ ಪ್ರಾರಂಭವು.

ಶ್ಲೋ॥ ನಮಸ್ಯಾಮೋದೇವಾನ್ನನುಹತ ವಿಧೇಸ್ತೇಪಿವಶಗಾವಿಧಿರ್ವಂದ್ಯ
ಸ್ಸೋಪಿಪ್ರತಿನಿಯತಕರ್ಮೈಕಫಲದಃ ॥ ಫಲಂಕರ್ಮಾಯತ್ತಂಯ

ದಃ ಕಿಮಪರೈಃ ಕಿಂಚ ವಿಧಿನಾ ನಮಸ್ತತ್ಕರ್ಮಭ್ಯೋ ವಿಧಿರಪಿ ನ ಯೇ
ಭ್ಯಃ ಪ್ರಭವತಿ .... .... ||೯೨||

ಟೀ|| ವಿಧಿಯೂ ಕರ್ಮಾಧೀನನಾದ ಕಾರಣ, ದೈವಪದ್ಧತ್ಯನಂತರದಲ್ಲಿ ಕರ್ಮ ಪದ್ಧತಿಯನ್ನು ನಿರೂಪಿಸುತ್ತಾನೆ—ದೇವಾನ್=ಇಂದ್ರಾದಿಗಳನ್ನು, ನಮಸ್ಯಾಮಃ=ನಮಸ್ಕರಿಸುವೆವು, ತೇ=ಆ, ದೇವಾಅಪಿ=ದೇವತೆಗಳು ಕೂಡ, ಹತ=ದುಷ್ಟನಾದ, ವಿಧೇಃ=ಬ್ರಹ್ಮನ. ವಶಗಾಃ=ಅಧೀನರಷ್ಟೆ, ಸಃ=ಆ. ವಿಧಿರಪಿ=ಬ್ರಹ್ಮನು ಕೂಡ, ವಂದ್ಯಃ=ಅಸ್ವತಂತ್ರನಾದ ಕಾರಣವೇ, ಪ್ರತಿನಿಯತ=ನಿಶ್ಚಯವಾದ; (ಕ್ಲೃಪ್ತವಾದ) ಕರ್ಮ=ಸದಸತ್ಕರ್ಮಗಳ, ಏಕ=ಮುಖ್ಯವಾದ, ಫಲ=ಫಲವನ್ನು. ದಃ=ಕೊಡುವವನು, ಫಲಂ=ಫಲವು, ಕರ್ಮ=ಕರ್ಮದ, ಆಯತ್ತಂಯದಿ=ಅಧೀನವಾದುದಾದರೆ, ಅಪರೈಃ=ಇತರ ದೇವತೆಗಳಿಂದ, ಕಿಂ=ಏನು ಫಲವು, ತತ್=ಆದಕಾರಣದ್ದೆಶೆಯಿಂದ, ಕರ್ಮಭ್ಯಃ=ಕರ್ಮಗಳಿಗೋಸ್ಕರ, ನಮಃ=ನಮಸ್ಕಾರವು, ವಿಧಿರಪಿ=ಬ್ರಹ್ಮನು ಕೂಡ, ಏಭ್ಯಃ=ಯಾವ ಕರ್ಮಗಳಿಗಿಂತಲೂ, ನಪ್ರಭವತಿ=ಸಮರ್ಥನಾಗುವದಿಲ್ಲವೋ ? ಇಲ್ಲಿ ಮಾಲಾದೀಪಕಾಲಂಕಾರವು. .... ||೯೨||

ತಾ|| ಅಹಹ ! ಇಗೋ ದೇವತೆಗಳಿಗೆಲ್ಲಾ ಒಂದು ನಮಸ್ಕಾರ. ಏಕೆಂದರೆ—ಇವರೆಲ್ಲಾ ವಿಧಿಗೆ ಆಧೀನರಾದವರು, ಆ ವಿಧಿತಾನೆ ಸ್ವತಂತ್ರನೇ ? ಅಲ್ಲ, ಅವನು ಕೂಡ ಯಾವ ಪ್ರಾಣಿಯ ಕರ್ಮವು ಎಂತಹ ಫಲವನ್ನು ಕೊಡುವದಕ್ಕೆ ಯೋಗ್ಯವಾಗಿರುವದೊ, ಅದನ್ನರಿತು ಆಯಾಯ ಪ್ರಾಣಿಯ ಕರ್ಮಕ್ಕನುಗುಣವಾಗಿ ಫಲವನ್ನು ಕೊಡುವನು. ಆದುದರಿಂದಲೇ ಸುಖದುಃಖವೆಂಬುವದು ಕರ್ಮಾಧೀನವಾಯಿತಾದಕಾರಣ ಇತರ ದೇವತೆಗಳಿಂದಲೂ ವಿಧಿಯಿಂದಲೂ ಏನೂ ಪ್ರಯೋಜನವಿಲ್ಲವು. ಮುಖ್ಯವಾಗಿ ಸತ್ಕರ್ಮಾಚರಣೆ ಮಾಡಬೇಕೆಂಬದಾಗಿ ಭಾವವು. ||೯೨||

ಶ್ಲೋ|| ಬ್ರಹ್ಮಾಯೇನಕುಲಾಲವನ್ನಿಯಮಿತೋ ಬ್ರಹ್ಮಾಂಡಭಾಂಡೋ
ದರೇವಿಷ್ಣುರ್ಯೇನದಶಾವತಾರಗಹನೇ ಕ್ಷಿಪ್ತೋಮಹಾಸಂಕಟೇ ||
ರುದ್ರೋಯೇನ ಕಪಾಲಪಾಣಿಪುಟಕೇ ಭಿಕ್ಷಾಟನಂಸೇವತೇ ಸೂ
ರ್ಯೋಭ್ರಾಮ್ಯತಿನಿತ್ಯಮೇವಗಗನೇ ತಸ್ಮೈನಮಃ ಕರ್ಮಣೇ ||

ಟೀ|| ಕರ್ಮಗಳಿಗಿಂತಲೂ ಬ್ರಹ್ಮನು ಕೂಡ ಸಮರ್ಥನಾಗುವದಿಲ್ಲವೆಂಬರ್ಥವಂ ವಿಶದವಮಾಡುತ್ತಾನೆ—ಯೇನ=ಯಾವ ಕರ್ಮದಿಂದ, ಬ್ರಹ್ಮಾ=ಚತುರ್ಮುಖನು, ಬ್ರಹ್ಮಾಂಡ=ಪ್ರಪಂಚವೆಂಬ, ಭಾಂಡ=ಗುಡಾಣದ, (ಅಥವಾ ಹರಿವಿಯ) ಉದರೇ=ಗರ್ಭದಲ್ಲಿ, ಕುಲಾಲವತ್=ಕುಂಬಾರನಂತೆ, ನಿಯಮಿತಃ=ಗೊತ್ತುಮಾಡ

ಲ್ಪಟ್ಟವನು, ಯೇನ=ಯಾವ ಕರ್ಮದಿಂದ, ವಿಷ್ಣುಃ=ಲಕ್ಷ್ಮೀಪತಿಯು, ಮಹಾ=ಅತಿಶಯವಾದ, ಸಂಕಟೇ=ಶ್ರಮವುಳ್ಳ, ದಶ=ಹತ್ತಾದ, ಅವತಾರ=ಅವತಾರಗಳೆಂಬ, ಗಹನೇ=ಕಾಡಿನಲ್ಲಿ, ಕ್ಷಿಪ್ತಃ=ನಿಯಮಿಸಲ್ಪಟ್ಟನು, ಯೇನಕರ್ಮಣಾ=ಯಾವ ಕರ್ಮದಿಂದ. ರುದ್ರಃ=ಮೃತ್ಯುಂಜಯನು, ಕಪಾಲ=ತಲೆ ಚಿಪ್ಪೆಂಬ, ಪಾಣಿಪುಟಕೇ=ಪಾಣಿಪಾತ್ರೆಯಲ್ಲಿ, ಭಿಕ್ಷಾಟನಂ=ಭಿಕ್ಷಕ್ಕಾಗಿ ಸಂಚಾರವನ್ನು, ಸೇವತೇ=ಆಚರಿಸುವನೋ, ಯೇನ=ಯಾವ ಕರ್ಮದಿಂದ, ಸೂರ್ಯಃ=ಭಾಸ್ಕರನು, ನಿಯಮಿತಃ=ನಿಯಮಿಸಲ್ಪಟ್ಟವನಾಗಿ, ನಿತ್ಯಮೇವ=ಸರ್ವಕಾಲದಲ್ಲಿಯೂ, ಭ್ರಾಮ್ಯತಿ=ಸುತ್ತುತ್ತಿರುವನೋ, ತಸ್ಮೈ=ಅಂಥ, ಕರ್ಮಣೇ=ಕರ್ಮಕ್ಕೆ, ನಮಃ=ನಮಸ್ಕಾರವು ॥೯೩॥

ತಾ॥ ಚತುರ್ಮುಖನಾದ ಬ್ರಹ್ಮನು ಕುಂಬಾರನಂತೆ ತನ್ನ ಕರ್ಮಾನುಸಾರವಾಗಿ ಈ ಪ್ರಪಂಚದಲ್ಲಿ ನಾನಾವಿಧ ಲೋಕ ವಸ್ತುಗಳನ್ನು ನಿರ್ಮಾಣ ಮಾಡತಕ್ಕ ಬಟ್ಟ ಅಧಿಕಾರಿಯಾಗಿ ನಿಯಮಿಸಲ್ಪಟ್ಟಿರುವನು. ಸಕಲ ಲೋಕಗಳಿಗಾಧಾರನಾಗಿರುವ ವಿಷ್ಣುವೂ ನಾನಾ ವಿಧವಾದ ಬಹು ಸಂಕಟವುಳ್ಳ ರಾಮಕೃಷ್ಣಾದಿ ಅವತಾರಗಳಲ್ಲಿ ತನ್ನ ಕರ್ಮದ ಬಲದಿಂದ ತೊಳಲಿದನು. ಮತ್ತು ಸಕಲ ಲೋಕ ಸಂಹಾರಕನಾದ ಶಂಕರನೂ, ಬ್ರಹ್ಮನ ತಲೆಚಿಪ್ಪನ್ನು ಕೈಯಲ್ಲಿ ಹಿಡಿದು ಭಿಕ್ಷಾನ್ನ ಭೋಜನವನ್ನು ಮಾಡುವನು. ಇದಲ್ಲದೆ ಸರ್ವಲೋಕ ಪ್ರಕಾಶಕನಾದ ಸೂರ್ಯನು ಅವನ ಕರ್ಮಾನುಸಾರ ಕ್ಷಣಕಾಲವಾದರೂ ವಿಶ್ರಮಿಸಿಕೊಳ್ಳಲು ವಿರಾಮವಿಲ್ಲದೆ ಸುತ್ತುತ್ತಲಿರುವನು. ಅಶೇಷವೂ ಕರ್ಮಾಧೀನವಾಗಿಯೇ ಇರುವದಾದ ಕಾರಣ ನಿಖಿಲಲೋಕ ನಿಯಾಮಕವಾಗಿರುವ ಶ್ಲಾಘ್ಯವಾದ ಕರ್ಮಕ್ಕೇ ನಮಸ್ಕಾರವು ಯೋಗ್ಯವು. .... ॥೯೩॥

ಶ್ಲೋ॥ ಯಾಸಾಧೂಂಶ್ಚ ಖಲಾನ್ಕರೋತಿವಿದುಷೋಮೂರ್ಖಾನ್ಹಿತಾನ್
ದ್ವೇಷಿಣಃಪ್ರತ್ಯಕ್ಷಂಕುರುತೇ ಪರೋಕ್ಷಮಮೃತಂಹಾಲಾಹಲಂತ
ತ್ಕ್ಷಣಾತ್॥ ತಾಮಾರಾಧಯಸತ್ಕ್ರಿಯಾಂಭಗವತೀಂಭೋಕ್ತುಂ
ಫಲಂವಾಂಛಿತಂಭೋಸಾಧೋ ವ್ಯಸನೈರ್ಗುಣೇಷು ವಿಪುಲೇಷ್ವಾ
ಸ್ಥಾಂವೃಥಾಮಾಕೃಥಾಃ .... .... ॥೯೪॥

ಟೀ॥ ಸಕಲ ಶ್ರೇಯಸ್ಸುಗಳಿಗೂ ಮುಖ್ಯಕಾರಣವಾಗಿರೋಣದರಿಂದಲೇ ಶ್ಲಾಘ್ಯವಾದ ಆ ಸತ್ಕರ್ಮವನ್ನೇ ಆಚರಿಸಬೇಕೆಂಬರ್ಥವನ್ನು ಸೂಚಿಸುತ್ತಾನೆ— ಯಾಸತ್ಕ್ರಿಯಾ=ಯಾವ ಸತ್ಕರ್ಮವು, ಖಲಾಂಶ್ಚ=ದುರ್ಜನರನ್ನು, ಸಾಧೂನ್—ಸಜ್ಜನರನ್ನಾಗಿ, ಕರೋತಿ=ಮಾಡುವದೋ, ಮೂರ್ಖಾನ್=ಮೂರ್ಖರನ್ನೂ

ವಿದುಷಃ=ವಿದ್ವಾಂಸರನ್ನಾಗಿ, ಕರೋತಿ=ಮಾಡುವದೋ, ದ್ವೇಷಿಣಃ=ಶತ್ರುಗಳನ್ನು, ಮಿತ್ರಾನ್=ಸನ್ಮಿತ್ರರನ್ನಾಗಿ, ಕರೋತಿ=ಮಾಡುವದೋ, ಪರೋಕ್ಷಂ=ಕಣ್ಣಿಗೆ ಕಾಣದಿರುವದನ್ನೂ, ಪ್ರತ್ಯಕ್ಷಂ=ಎದುರಿಗಿರುವದನ್ನಾಗಿ, ಕುರುತೇ=ಮಾಡುತ್ತದೆಯೋ, ಹಾಲಾಹಲಂ=ಕಾಲಕೂಟವೆಂಬ ವಿಷವನ್ನೂ, ತತ್‌ಕ್ಷಣಾತ್=ನಿಮಿಷಮಾತ್ರದಲ್ಲಿಯೇ, ಅಮೃತಂ=ಅಮೃತರಸವನ್ನಾಗಿ, ಕುರುತೇ=ಮಾಡುವದೊ, ಹೇ ಸಾಧೋ=ಎಲೈ ಸಜ್ಜನನೇ, (ಅಥವಾ ಎಲೈ ಚತುರನೇ) ವಾಂಛಿತಂ=ಇಷ್ಟವಾದ ಫಲಂ-ಲಾಭವನ್ನು, (ಅಥವಾ ಸುಖವನ್ನು) ಭೋಕ್ತುಂ=ಅನುಭವಿಸುವದಕ್ಕೆ, (ಇಚ್ಛಸಿಚೇತ್=ಅಪೇಕ್ಷಿಸುವನಾದರೆ), ಭಗವತೀಂ=ಪೂಜ್ಯವಾದ, ತಾಂಸತ್ಕ್ರಿಯಾಂ=ಆ ಸತ್ಕರ್ಮವನ್ನು, ಆರಾಧಯ=ಸೇವಿಸು, (ಅಥವಾ=ಆಚರಿಸು) ವ್ಯಸನೈಃ=ದುಃಖಗಳಿಂದ, ವಿಪುಲೇಷು=ವಿಶಾಲಗಳಾದ, ಗುಣೇಷು=ಸತ್ವ ರಜಸ್ತಮೋಗುಣಗಳಲ್ಲಿ, ವೃಥಾ=ವ್ಯರ್ಥವಾಗಿ, ಆಸ್ಥಾಂ=ಆಸಕ್ತಿಯನ್ನು, ಮಾಕೃಥಾಃ=ಮಾಡಬೇಡ, ಇದರಲ್ಲಿ ವಿಶೇಷಲಂಕಾರವು. ... ... ||೯೩||

ತಾ|| ಎಲೈ ಸಾಧುವೇ! ಕೇಳು—ನೀನು ನಾನಾವಿಧವಾದ ಸುಖಪಡಬೇಕಾಗಿದ್ದರೆ ಯಾವ ಸತ್ಕರ್ಮವಾದರೆ ತನ್ನ ಸಾಮರ್ಥ್ಯದಿಂದ ನೀಚರನ್ನು ಸಾಧುಗಳನ್ನಾಗಿಯೂ, ಮೂಢರನ್ನು ಪಂಡಿತರನ್ನಾಗಿಯೂ, ಶತ್ರುಗಳನ್ನು ಮಿತ್ರರನ್ನಾಗಿಯೂ, ಕಣ್ಣಿಗೆ ಕಾಣಿಸದಿರುವದನ್ನು ಪ್ರತ್ಯಕ್ಷದಲ್ಲಿರುವಂತೆಯೂ, ವಿಷವನ್ನು ಅಮೃತವನ್ನಾಗಿಯೂ ಮಾಡುವುದೋ, ಆ ಸತ್ಕರ್ಮವನ್ನೇ ಆಚರಿಸು; ಅದರಿಂದಲೇ ಸಮಸ್ತ ಭೋಗಗಳೂ ಉಂಟಾಗುವವು, ಹಾಗಿಲ್ಲದೆ ಬಹು ವ್ಯಸನಕ್ಕೆ ಕಾರಣವಾಗಿರುವ ಸತ್ವ ರಜಸ್ತಮೋಗುಣಗಳಲ್ಲಿ ಆಸಕ್ತನಾಗಬೇಡ, ಅವು ಕೇವಲ ದುಃಖಕಾರಣಗಳೆಂದು ತಿಳಿ. .... .... .... ||೯೪||

ಶ್ಲೋ|| ಶುಭ್ರಂಸದ್ಮಸವಿಭ್ರಮಾಯುವತಯಶ್ಶ್ವೇತಾತಪತ್ರೋಜ್ವಲಾ
ಲಕ್ಷ್ಮೀರಿತ್ಯನುಭೂಯತೆಚಿರಮನುಸ್ಯೂತೇಶುಭೇಕರ್ಮಣಿ ॥ ವಿ
ಚ್ಛಿನ್ನೇಸಿತರಾಮನಂಗಕಲಹಕ್ರೀಡಾತ್ರುಟತ್ತಂತುಕಂಮುಕ್ತಾ
ಜಾಲಮಿವಪ್ರಯಾತಿಝಡಿತಿಭ್ರಶ್ಯದ್ದಿಶೋದೃಶ್ಯತಾಂ ||೯೫||

ಟೀ|| ಹಾನಿವೃದ್ಧಿಗಳಿಗೂ ಕರ್ಮವೇ ಮೂಲವೆಂಬರ್ಥವನ್ನು ಹೇಳುತ್ತಾನೆ—ಚಿರಂ=ಬಹುಕಾಲದಿಂದ, ಅನುಸ್ಯೂತೆ=ಅನುಸರಿಸಿರುವ, ಶುಭೇಕರ್ಮಣಿ=ಸತ್ಕರ್ಮವು, (ಸಂಭವತಿಸತಿ=ಉಂಟಾಗಿರಲಾಗಿ) ಶುಭ್ರಂಸದ್ಮ=ಬೆಳ್ಳಗಿರುವ ಮನೆಯು (ಎಂದರೆ ಉಪ್ಪರಿಗೆಯು) ಸವಿಭ್ರಮಾಃ=ವಿಲಾಸಗಳಿಂದ ಸಹಿತರಾದ, ಯುವತಯಃ=ಕಾಮಿನಿಯರು, ಶ್ವೇತಾತಪತ್ರ=ಶ್ವೇತಛತ್ರದಿಂದ, ಉಜ್ವಲಾ=ಹೊಳೆಯುವ, ಲಕ್ಷ್ಮೀಃ=

ರಾಜ್ಯಲಕ್ಷ್ಮಿಯು, ಇತಿ=ಈ ಮೇರಿಗೆಲ್ಲಾ, ಅನುಭೂಯತೇ=ಅನುಭವಿಸಲ್ಪಡುವದೇ; ವಿಚ್ಛಿನ್ನೇಸತಿ=ಸತ್ಕರ್ಮವು ನಷ್ಟವಾಗುತ್ತಿರಲಾಗಿ, ನಿತರಾಂ=ವಿಶೇಷವಾದ, ಅನಂಗಕಲಹ=ರತಿಯುದ್ಧವೆಂಬ, ಕ್ರೀಡಾ=ಆಟದಲ್ಲಿ, ತ್ರುಟತ್=ಕಿತ್ತುಹೋದ, ತಂತುಕಂ=ದಾರವುಳ್ಳ, ಮುಕ್ತಾ=ಮುತ್ತುಗಳ, ಜಾಲಮಿವ=ಸಂಘದಂತೆ, ಝಡತಿ=ಜಾಗ್ರತೆಯಲ್ಲಿ, ಭ್ರಶ್ಯತ್=ಭ್ರಷ್ಟವಾಗಿ, ದಿಶಃ=ದಿಕ್ಕುಗಳನ್ನು ಕುರಿತು, ಯಾತಿ=ಹೋಗುವದು, ದೃಶ್ಯತಾಂ=ನೋಡಲ್ಪಡಲಿ. .... .... ॥೯೫॥

ತಾ॥ ಜನ್ಮಾಂತರದಲ್ಲಿ ಆಚರಿಸಿದ ಸುಕೃತವು ನಾಶವಾಗದೆ ಇರುವವರೆಗೂ, ರಾಜಮಂದಿರಕ್ಕೆ ಸಮಾನವಾದ ಮನೆಯು, ನಾನಾವಿಧವಾದ ವಿಲಾಸಗಳುಳ್ಳ ಲಲನೆಯರು, ಶ್ವೇತಛತ್ರ ಮೊದಲಾದ ಸಂಪತ್ತಿನಿಂದೊಡಗೂಡಿದ ರಾಜ್ಯಸಂಪತ್ತು, ಇವೇ ಮೊದಲಾದ ಬಗೆಬಗೆಯ ಸೌಭಾಗ್ಯಗಳು ಸಿದ್ಧವಾಗಿರುವವು. ಆ ಸತ್ಕರ್ಮವು ನಷ್ಟವಾಗಲು ಒಡನೆಯೆ ರತಿಕಾಲದೊಳು ಅಕಸ್ಮಾತ್ತಾಗಿ ಕಿತ್ತುಹೋದ ಮುತ್ತಿನಹಾರದ ಮುತ್ತುಗಳು ದಿಕ್ಕುದಿಕ್ಕಿಗೆ ಚೆಲ್ಲಿಹೋಗುವಂತೆ ಮನೆ ಮಕ್ಕಳು ಮೊದಲಾದವುಗಳೆಲ್ಲಾ ಕ್ಷಣಕಾಲದಲ್ಲಿ ಅಲ್ಲಲ್ಲಿಯೆ ನಾಶವಾಗಿ ಹೋಗುವವು. ಇದು ಸರ್ವಾನುಭವಸಿದ್ಧವಾಗಿರುವದು ನೋಡು. .... .... ॥೯೫॥

ಶ್ಲೋ॥ ಗುಣವದಗುಣವದ್ವಾಕುರ್ವತಾಕಾರ್ಯಜಾತಂಪರಿಣತಿರವಧಾರ್ಯಾ
ಯತ್ನತಃಪಂಡಿತೇನ ॥ ಅತಿರಭಸಕೃತಾನಾಂಕರ್ಮಣಾಮಾವಿಪ
ತ್ತೇರ್ಭವತಿಹೃದಯದಾಹೀಶಲ್ಯತುಲ್ಯೋವಿಪಾಕಃ ॥೯೬॥

ಟೀ॥ ತರುವಾಯ ಅದರ ಆಚರಣೆಯನ್ನು ತಿಳಿಸುತ್ತಾನೆ—ಗುಣವತ್=ಗುಣಸಂಯುಕ್ತವಾದ, ಅಗುಣವದ್ವಾ=ಗುಣರಹಿತವಾದರೂ, ಯತ್=ಯಾವ ಕಾರ್ಯ=ಕೆಲಸಗಳ. ಜಾತಂ=ಸಂಘವೋ. ತತ್=ಅದನ್ನು, ಕುರ್ವತಾ=ಮಾಡುವ, ಪಂಡಿತೇನ=ವಿವೇಕಿಯಿಂದ, ಪರಿಣತಿಃ=ಪರಿಪಾಕಾವಸ್ಥೆಯು, ಯತ್ನತಃ=ಪ್ರಯತ್ನದ ದೆಸೆಯಿಂದ, ಅವಧಾರ್ಯಾ=ತಿಳಿಯತಕ್ಕದ್ದು. ಅತಿರಭಸ=ಅತಿ ಜಾಗ್ರತೆಯಿಂದ, ಕೃತಾನಾಂ=ಮಾಡಲ್ಪಟ್ಟ, ಕರ್ಮಣಾಂ=ಕಾರ್ಯಗಳ, ಆವಿಪತ್ತೇಃ=ಫಲಪರ್ಯಂತವೂ, ಹೃದಯ=ಮನಸ್ಸಿಗೆ, ದಾಹೀ=ಸಂತಾಪಕರವಾದ, ಶಲ್ಯ=ಮುಳ್ಳಿಗೆ, ತುಲ್ಯಃ=ಸಮವಾದ, ವಿಪಾಕಃ=ಪರಿಪಾಕವು, ಭವತಿ=ಉಂಟಾಗುವದು. ॥೯೬॥

ತಾ॥ ವಿವೇಕಶಾಲಿಯಾದ ಪುರುಷನು ತಾನು ಮಾಡುವ ಕಾರ್ಯವು ಸುಗುಣವಾದದ್ದಾಗಲಿ ಅಥವಾ ದುರ್ಗುಣವಾದದ್ದಾಗಲಿ ಪ್ರಯತ್ನದಿಂದ ಅದರ ಫಲ ಪರಿಣಾಮವನ್ನು ಅವಶ್ಯಕವಾಗಿ ಮೊದಲು ತಿಳಿದು ಆರಂಭಿಸಿ

ಬೇಕು. ಹಾಗಿಲ್ಲದೆ ಆತುರಪಟ್ಟು ಅನಾಲೋಚನೆಯಿಂದ ಕಾರ್ಯವನ್ನು ಆರಂಭಿಸಿದರೆ ಅದು ಯಾವದಾದರೂ ಒಂದು ವಿಧವಾಗಿ ಪರಿಣಮಿಸುವವರೆಗೂ ಬಹು ಕಳಕಳವುಂಟಾಗುವದು ಆದುದರಿಂದ ಯೋಚಿಸಿ ಯಾವಕಾರ್ಯವನ್ನಾದರೂ ಮಾಡಬೇಕು. .... .... ॥೯೭॥

ಶ್ಲೋ॥ ಸ್ಥಾಲ್ಯಾಂವೈದೂರ್ಯಮಯ್ಯಾಂಪಚತಿತಿಲಖಲಾಂಚಾಂದನೈರಿಂಧ
ನಾದ್ಯೈಸ್ಸೌವರ್ಣೈರ್ಲಾಂಗಲಾಗ್ರೈರ್ವಿಲಿಖತಿವಸುಧಾಮರ್ಕತೂ
ಲಸ್ಯಹೇತೋಃ ॥ ಛಿತ್ವಾಕರ್ಪೂರಖಂಡಾನ್ವೃತಿಮಿಹಕುರುತೇ
ಕೋದ್ರವಾಣಾಂಸಮಂ ತಾತ್ಪ್ರಾಪ್ಯೇಮಾಂಕರ್ಮಭೂಮಿಂನಭ
ಜತಿಮನುಜೋಯಸ್ತಪೋಮಂದಭಾಗ್ಯಃ ॥೯೭॥

ಟೀ॥ ಸತ್ಕರ್ಮಾನುಷ್ಠಾನವಂ ಮಾಡದಿರುವನ ದುರ್ಬುದ್ಧಿಯನ್ನು ಸೂಚಿಸುತ್ತಾನೆ—ಇಮಾಂ=ಈ, ಕರ್ಮ-ಕರ್ಮಾಚರಣೆಗೆ ಯೋಗ್ಯವಾದ, ಭೂಮಿಂ=ಭೂಲೋಕವನ್ನು, ಪ್ರಾಪ್ಯ=ಹೊಂದಿ, ಮಂದಭಾಗ್ಯಃ=ನಿರ್ಭಾಗ್ಯನಾದ, ಯಃ=ಯಾವ, ಮನುಜಃ=ಮನುಷ್ಯನು, ತಪಃ=ಚಾಂದ್ರಾಯಣಾದಿ ವ್ರತವನ್ನು, ನಭಜತಿ=ಸೇವಿಸುವದಿಲ್ಲವೋ, ಸಃ=ಅವನು, ಇಹ=ಈ ಲೋಕದಲ್ಲಿ, ವೈದೂರ್ಯಮಯ್ಯಾಂ=ವಿದೂರವೆಂಬ ಮಣಿಯಿಂದ ರಚಿಸಿದ, ಸ್ಥಾಲ್ಯಾಂ=ಪಾತ್ರೆಯಲ್ಲಿ, ಚಾಂದನೈಃ=ಚಂದನ ಸಂಬಂಧವಾದ, ಇಂಧನಾದ್ಯೈಃ=ಕಟ್ಟಿಗೆಯ ಹೊರೆಗಳಿಂದ, ತಿಲಖಲಂ=ಎಳ್ಳಿನ ಹಿಂಡಿಯನ್ನು ಪಚತಿ=ಬೇಯಿಸುತ್ತಾನೆ, ಸೌವರ್ಣೈಃ=ಬಂಗಾರದಿಂದ ಮಾಡಿದ, ಲಾಂಗಲ=ನೇಗಲಿನ, ಅಗ್ರೈಃ=ಕೊನೆಗಳಿಂದ, ಅರ್ಕತೂಲಸ್ಯ=ಎಕ್ಕದಹತ್ತಿಯ, ಹೇತೋಃ=ನಿಮಿತ್ತವಾಗಿ, ವಸುಧಾಂ=ಭೂಮಿಯನ್ನು, ವಿಲಿಖತಿ=ಉಳುತ್ತಾನೆ, ಕರ್ಪೂರಖಂಡಾನ್=ಕರ್ಪೂರದ ತುಂಡುಗಳನ್ನು, ಛಿತ್ವಾ=ಪುಡಿಮಾಡಿ, ಕೋದ್ರವಾಣಾಂ=ಹಾರಕವೆಂಬ ಧಾನ್ಯಗಳಿಗೆ, ಸಮಂತಾತ್=ಎಲ್ಲಾ ಕಡೆಯಲ್ಲಿಯೂ, ವೃತಿಂ(ದಿ=ಕಟ್ಟೆಯನ್ನು,ತಿಯನ್ನು) ಕುರುತೇ=ಮಾಡುತ್ತಾನೆ.

ತಾ॥ ರತ್ನಖಚಿತವಾದ ಪಾತ್ರೆಯಲ್ಲಿ ಎಳ್ಳು ಹಿಂಡಿಯನ್ನು ಹಾಕಿ ಗಂಧದದ ಕಟ್ಟಿಗೆಗಳಿಂದಲುರಿಯಿಟ್ಟು ಬೇಯಿಸುವವನು, ಎಕ್ಕದ ಹತ್ತಿಯನ್ನು ಬೆಳೆಯುವದಕ್ಕಾಗಿ ಬಂಗಾರದನೇಗಲಿನಿಂದ ನೆಲವನ್ನು ಉಳುವವನು ಕರ್ಪೂರವನ್ನು ಪುಡಿಮಾಡಿ ಹಾರಕಕ್ಕೆ ಸುತ್ತಲೂ ಪಾತಿ ಕಟ್ಟುವವನು, ನಿರ್ಭಾಗ್ಯರಲ್ಲಿ ಎಷ್ಟು ಅಗ್ರಗಣ್ಯನೋ, ಅವರಂತೆಯೇ ಸಕಲ ಸತ್ಕರ್ಮಾನುಷ್ಠಾನಕ್ಕೆ ಸಾಧಕವಾಗಿರುವ ಈ ಕರ್ಮಭೂಮಿಯನ್ನು ಹೊಂದಿ ಸತ್ಕರ್ಮಾಚರಣೆಯನ್ನು ಮಾಡದಿರುವವನೂ ಅಷ್ಟು ನಿರ್ಭಾಗ್ಯನು, ಆದ

ಕಾರಣ ಈ ಭೂಮಿಯಲ್ಲಿ ಜನಿಸಿದ ಬಳಿಕ ಸಕಲ ಶ್ರೇಯಸ್ಸಿಗೂ ಸಾಧಕವಾಗಿರುವ ಸತ್ಕರ್ಮವನ್ನು ಆಚರಿಸಬೇಕೆಂದು ಭಾವವು. ॥೯೭॥

ಶ್ಲೋ॥ ನೈವಾಕೃತಿಃಫಲತಿನೈವಕುಲಂ ನಶೀಲಂವಿದ್ಯಾಪಿನೈವನಚಯತ್ನ
ಕೃತಾಪಿಸೇವಾ ॥ ಭಾಗ್ಯಾನಿಪೂರ್ವತಪಸಾಖಲುಸಂಚಿತಾನಿಕಾ
ಲೇಫಲಂತಿಪುರುಷಸ್ಯಯಥೇವವೃಕ್ಷಾಃ .... ॥೯೮॥

ಟೀ॥ ಪೂರ್ವಕರ್ಮವು ಫಲಕಾರಿಯಲ್ಲದೆ ಮತ್ತಾವದೂ ಇಲ್ಲವೆಂಬದನ್ನು ಅರುಹುತ್ತಾನೆ—ಆಕೃತಿಃ=ಆಕಾರವು, ನೈವಫಲತಿ=ಫಲಿಸುವದಿಲ್ಲವು, ಕುಲಂ=ಸದ್ವಂಶವು, ನೈವಫಲತಿ-ಫಲಿಸುವದಿಲ್ಲವು, ಶೀಲಂ=ಒಳ್ಳೇ ನಡತೆಯು, ನಫಲತಿ=ಫಲಿಸದು, ವಿದ್ಯಾಪಿ=ವಿದ್ಯವೂ, ನಫಲತಿ=ಫಲಿಸುವದಿಲ್ಲ,ಯತ್ನ=ಪ್ರಯತ್ನದಿಂದ, ಕೃತಾ=ಮಾಡಲ್ಪಟ್ಟ, ಸೇವಾಚ=ಸೇವೆಯು, ನೈವ=ಫಲಿಸುವದಿಲ್ಲವು, ಪೂರ್ವ=ಜನ್ಮಾಂತರದ, ತಪಸಾ=ತಪಸ್ಸಿನಿಂದ, ಸಂಚಿತಾನಿ=ಸಂಪಾದಿಸಲ್ಪಟ್ಟ, ಭಾಗ್ಯಾನಿ=ಸುಕೃತಗಳು, ವೃಕ್ಷಾಯಥಾ=ಮರಗಳಂತೆ, ಕಾಲಏವ=ಯೋಗ್ಯಕಾಲದಲ್ಲಿಯೇ, ಫಲಂತಿ=ಫಲಿಸುವವು, ಖಲು=ನಿಶ್ಚಯವು. .... ॥೯೮॥

ತಾ॥ ಮನುಷ್ಯನ ಸುಂದರವಾಗಿರುವ ಆಕಾರವು ಫಲಕಾರಿಯಾಗದು, ಮತ್ತು ತಾನು ಹುಟ್ಟಿರುವ ಉತ್ತಮವಾದ ಕುಲವು ಕಾರ್ಯಕಾರಿಯಾಗುವದಿಲ್ಲವು ಒಳ್ಳೇ ನಡತೆಯೂ ಕೆಲಸಕ್ಕೆ ಬಾರದು, ಇವಲ್ಲದೆ ಸದ್ವಿದ್ಯೆಯೂ ಫಲವನ್ನು ಕೊಡದು, ಇನ್ನು ಅತಿ ಪ್ರಯತ್ನದಿಂದ ಪರರಿಗೆ ಮಾಡಿದ ಸೇವೆಯೂ ಫಲಿಸದು, ಮತ್ತೇನಂದರೆ ತಾನು ಜನ್ಮಾಂತರದಲ್ಲಿ ಚನ್ನಾಗಿತಪಸ್ಸುಮಾಡಿ ಆರ್ಜಿಸಿರುವ ಸುಕೃತವೆಂಬದೊಂದೇ ಆಯಾಯ ಕಾಲವಲ್ಲಿ ಫಲವೃಕ್ಷಗಳು ಫಲಿಸುವಂತೆ ಸುಖದುಃಖಗಳನ್ನುಂಟುಮಾಡುವದೆಂದು ಭಾವವು. .... .... .... ॥೯೮॥

ಶ್ಲೋ॥ ಮಜ್ಜತ್ವಂಭಸಿಯಾತುಮೇರುಶಿಖರಂಶತ್ರೂನ್ಜಯತ್ವಾಹವೇವಾ
ಣಿಜ್ಯಂಕೃಷಿಸೇವನಾದಿಸಕಲಾವಿದ್ಯಾಃಕಲಾಶ್ಶಿಕ್ಷತು ॥ ಆಕಾಶಂ
ವಿಪುಲಂಪ್ರಯಾತುಖಗವತ್ಕೃತ್ವಾಪ್ರಯತ್ನಂಪರಂನಾಭಾವ್ಯಂಭ
ವತೀಹಕರ್ಮವಶತೋಭಾವ್ಯಸ್ಯನಾಶಃಕುತಃ ॥೯೯॥

ಟೀ॥ ಆದ, ಆಗುತ್ತಿರುವ ಮತ್ತು ಆಗಬೇಕಾದ ಕಾರ್ಯವೆಲ್ಲವೂ ಕರ್ಮದ ಬಲದಿಂದಲೇ=ಎಂಬರ್ಥವನ್ನು ಹೇಳುತ್ತಾನೆ—ಅಂಭಸಿ=ಜಲದಲ್ಲಿ, ಮಜ್ಜತು=ಮುಳುಗಲಿ, ಮೇರುಶಿಖರಂ=ಮೇರುಪರ್ವತದ ಶಿಖರವನ್ನು ಕುರಿತು,ಯಾತು=ಹೋಗಲಿ,

ಆಹವೇ=ಯುದ್ಧದಲ್ಲಿ, ಶತ್ರೂನ್=ರಿಪುಗಳನ್ನು, ಜಯತು=ಜಯಿಸಲಿ, ವಾಣಿಜ್ಯಂ=ವ್ಯಾಪಾರವನ್ನು, ಕೃಷಿ=ವ್ಯವಸಾಯವು, ಸೇವನ=ಸೇವೆಯು, ಆದಿ=ಮೊದಲಾದ, ಸಕಲಾಃ=ಸಮಸ್ತಗಳಾದ, ಕಲಾಃ=ವಿದ್ಯೆಗಳನ್ನು, ಶಿಕ್ಷತು=ಅಭ್ಯಸಿಸಲಿ, ಪರಂ=ಹೆಚ್ಚಾದ, ಪ್ರಯತ್ನಂ=ಪ್ರಯತ್ನವನ್ನು, ಕೃತ್ವಾ=ಮಾಡಿ, ಖಗವತ್=ಪಕ್ಷಿಯಂತೆ, ವಿಪುಲಂ=ವಿಶಾಲವಾದ, ಆಕಾಶಂ=ಅಂತರಿಕ್ಷವನ್ನು ಕುರಿತು, ಪ್ರಯಾತು=ಹೋಗಲಿ, ಇಹ=ಈ ಲೋಕದಲ್ಲಿ, ಅಭಾವ್ಯಂ=ಆಗದೇ ಇರತಕ್ಕದ್ದು ನಭವತಿ=ಆಗುವದಿಲ್ಲವು, ಭಾವ್ಯಸ್ಯ=ಆಗತಕ್ಕದ್ದಕ್ಕೆ, ನಾಶಃ=ವಿನಾಶವು, ಕುತಃ=ಹೇಗೆ?

ತಾ॥ ಜಲಸ್ತಂಭಾದಿ ಸಾಧನದಿಂದ ನೀರಿನಲ್ಲಿ ಮುಳುಗಿದರೂ, ಯೋಗಸಿದ್ಧಿಯ ಬಲದಿಂದ ಸ್ವರ್ಣಮಯವಾದ ಮೇರುಪರ್ವತದ ಶಿಖರಕ್ಕೆ ಹೋದರೂ, ಉಪಾಸನಾದಿ ಸಹಾಯದಿಂದ ಯುದ್ಧದಲ್ಲಿ ಶತ್ರುಗಳನ್ನು ಗೆದ್ದರೂ, ಮತ್ತು ಕ್ರಯವಿಕ್ರಯ ರೂಪವಾದ ವ್ಯಾಪಾರವು, ವ್ಯವಸಾಯವು, ಪರಸೇವೆಯು, ಅಥವಾ ವೇದವೇದಾಂಗಾದಿ ವಿದ್ಯೆಗಳು ಇವುಗಳನ್ನೆಲ್ಲಾ ಅಭ್ಯಾಸ ಮಾಡಿದರೂ, ಇನ್ನು ಪಾದುಕಾಸಿದ್ಧಿ ಮೊದಲಾದ ಪ್ರಯತ್ನವನ್ನು ಮಾಡಿಕೊಂಡು ಪಕ್ಷಿಯಂತೆ ಅಂತರಿಕ್ಷದಲ್ಲಿಯೆ ಹಾರಿದರೂ, ಆಗದೆ ಇರತಕ್ಕದ್ದು ಎಂದಿಗೂ ಆಗಲಾರದು ಆಗತಕ್ಕದ್ದಕ್ಕೆ ನಾಶವೂ ಉಂಟಾಗಲಾರದು. ॥೯೯॥

ಶ್ಲೋ ॥ ವನೇರಣೇಶತ್ರುಜಲಾಗ್ನಿಮಧ್ಯೇ ಮಹಾರ್ಣವೇಪರ್ವತಮಸ್ತಕೇವಾ ॥ ಸುಪ್ತಂಪ್ರಮತ್ತಂವಿಷಮಸ್ಥಿತಂವಾರಕ್ಷಂತಿಪುಣ್ಯಾನಿ ಪುರಾಕೃತಾನಿ ॥೧೦೦॥

ಟೀ॥ ಅತಿ ಸಂಕಟ ಸಂಭವಿಸಿದಾಗಲೂ ಪೂರ್ವಸುಕೃತವಿದ್ದಡೆ ಬಾಧಕವಿಲ್ಲವೆಂದು ಹೇಳುತ್ತಾನೆ—ವನೇ=ಕಾಡಿನಲ್ಲಿಯೂ, ರಣೇ=ಯುದ್ಧದಲ್ಲಿಯೂ, ಶತ್ರು=ವೈರಿಗಳು, ಜಲ=ಉದಕವು, ಅಗ್ನಿ=ಬೆಂಕಿಯು ಇವುಗಳ, ಮಧ್ಯೇ=ನಡುಭಾಗದಲ್ಲಿಯೂ, ಮಹಾರ್ಣವೇ=ಮಹಾಸಮುದ್ರದಲ್ಲಿಯೂ, ಪರ್ವತ=ಬೆಟ್ಟದ, ಮಸ್ತಕೇವಾ=ಶಿಖರದಲ್ಲಿಯೂ, ಸುಪ್ತಂ=ಮಲಗಿರುವವನನ್ನು, ಪ್ರಮತ್ತಂ=ಮದಿಸಿರುವವನನ್ನು, ವಿಷಮಸ್ಥಿತಂವಾ=ಸಂಕಟದಲ್ಲಿರುವವನನ್ನು, ಪುರಾಕೃತಾನಿ=ಪೂರ್ವದಲ್ಲಿ ಮಾಡಲ್ಪಟ್ಟ, ಪುಣ್ಯಾನಿ=ಸುಕೃತಗಳು, ರಕ್ಷಂತಿ=ಕಾಪಾಡುವವು, ॥೧೦೦॥

ತಾ॥ ಕಾಡಿನಲ್ಲಿ, ಯುದ್ಧದಲ್ಲಿ,ಶತ್ರುಮಧ್ಯದಲ್ಲಿ ಮತ್ತು ಜಲಮಧ್ಯದಲ್ಲಿ ಮಹಾ ಸಮುದ್ರಮಧ್ಯದಲ್ಲಿ ಪರ್ವತ ಶಿಖರದಲ್ಲಿಯೂ ಮಲಗಿರುವವನನ್ನೂ, ಮತ್ತನಾಗಿರುವವನನ್ನೂ, ಬಹು ಸಂಕಟದಲ್ಲಿರುವವನನ್ನೂ,

ಅವನವನ ಪೂರ್ವಜನ್ಮದ ಸುಕೃತವೇ ಪರಿಪಾಲಿಸುವದಲ್ಲದೆ ಈಗಿನ ಪುರುಷ ಪ್ರಯತ್ನವೇನೂ ಸಾಧಕವಾಗಲಾರದು. ॥೧೦೦॥

ಶ್ಲೋ॥ ಭೀಮಂವನಂ ಭವತಿತಸ್ಯಪುರಂಪ್ರಧಾನಂ ಸರ್ವೋಜನಸ್ಸ್ವಜನ
ತಾಮುಪಯಾತಿತಸ್ಯ ॥ ಕೃತ್ಸ್ನಾಚಭೂರ್ಭವತಿಸನ್ನಿಧಿರತ್ನ
ಪೂರ್ಣಾಯಸ್ಯಾಸ್ತಿಪೂರ್ವಸುಕೃತಂವಿಪುಲಂನರಸ್ಯ ॥೧೦೧॥

ಟೀ॥ ಪುಣ್ಯವಂತನಿಗೆ ಎಲ್ಲವೂ ಅನುಕೂಲಿಸುವವೆಂದು ಹೇಳುತ್ತಾನೆ—ಯಸ್ಯ=ಯಾವ ಮನುಷ್ಯನಿಗೆ, ವಿಪುಲಂ=ವಿಶಾಲವಾದ, ಪೂರ್ವಸುಕೃತಂ=ಪೂರ್ವಪುಣ್ಯವು, ಅಸ್ತಿ=ಉಂಟೋ, ತಸ್ಯ=ಆ ಪುರುಷನಿಗೆ, ಭೀಮಂ ಭಯಂಕರವಾದ, ವನಂ=ಕಾಡು, ಪ್ರಧಾನಂ=ಮುಖ್ಯವಾದ, ಪುರಂ=ಪಟ್ಟಣವು, ಭವತಿ=ಆಗುವುದು, ತಸ್ಯ=ಅವನಿಗೆ (ಸಮಸ್ತವಾದ), ಜನಃ=ಜನವು, ಸ್ವಜನತಾಂ=ಬಂಧುಜನ ಭಾವವನ್ನು, ಉಪಯಾತಿ=ಹೊಂದುವರು, ತಸ್ಯ=ಅವನಿಗೆ, ಕೃತ್ಸ್ನಾ=ಸಮಸ್ತವಾದ, ಭೂಶ್ಚ=ಭೂಮಿಯೂ, ಸತ್=ಉತ್ತಮವಾದ,ನಿಧಿ=ನಿಕ್ಷೇಪವು, ರತ್ನ=ರತ್ನಗಳು ಇವುಗಳಿಂದ, ಪೂರ್ಣಾ=ತುಂಬಿರುವದು,ಭವತಿ=ಆಗುವದು. ॥೧೦೧॥

ತಾ॥ ಯಾವ ಮನುಷ್ಯನಿಗಾದರೆ ಅಖಂಡವಾಗಿರುವ ಪೂರ್ವ ಜನ್ಮಾರ್ಜಿತರಾದ ಸುಕೃತವಿರುವದೋ ಅವನಿಗೆ ಭಯಂಕರವಾದ ಕಾಡೂ ರಾಜಧಾನಿಯಂತಾಗುವದು. ಮತ್ತು ಇತರ ಜನಗಳು ಕೂಡ ಬಂಧುಜನಗಳಾಗುವರು, ಸಕಲವಾದ ಭೂಮಿಯೂ ರತ್ನನಿಧಿಗಳಿಂದ ಪೂರ್ಣವಾದಂಥಾದ್ದಾಗುವದು, ಅದಕಾರಣ ಪೂರ್ವ ಸುಕೃತದಿಂದ ಸರ್ವವೂ ಸುಖಕರವೆಂದು ಭಾವವು ॥೧೦೧॥

ಇಂತು ದೊಡ್ಡಬೆಲೆ ನಾರಾಯಣ ಶಾಸ್ತ್ರಿಯಿಂದ
ರಚಿತವಾದ ಟೀಕಾತಾತ್ಪರ್ಯದೊಂದಿಗೆ

**ನೀತಿ ಶತಕವು ಸಂಪೂರ್ಣವಾದುದು.**

ಶ್ರೀ ಜಾನಕೀಜಾನಯೇ ನಮಃ.

## ಟೀಕಾ ತಾತ್ಪರ್ಯಸಹಿತವಾದ

# ಭರ್ತೃಹರಿಯಲ್ಲಿನ

## ಶೃಂಗಾರ ಶತಕವು.

### ೧ನೇ ಭಾಗ.

ಶ್ಲೋ॥ ಏಕಂವಸ್ತುದ್ವಿಧಾಕರ್ತುಂಬಹವಸ್ಸಂತಿಧನ್ವಿನಃ ।
ದ್ವಯೋರೈಕ್ಯಂವಿಧಾತಾಯಃನಮಸ್ತಾದೃಶಧನ್ವಿನೆ ॥

ಶ್ಲೋ॥ ಶಂಭುಸ್ವಯಂಭುಹರಯೋಹರಿಣೇಕ್ಷಣಾ ನಾಂಯೇನಾಕ್ರಿಯಂತ
ಸತತಂಗೃಹಕುಂಭದಾಸಾಃ ॥ ವಾಚಾಮಗೋಚರಚರಿತ್ರವಿಚಿತ್ರಿ
ತಾಯತಸ್ಮೈನಮೋಭಗವತೇಮಕರಧ್ವಜಾಯ ॥೧॥

ಟೀ॥ ಯೇನ=ಯಾವ ಮನ್ಮಥನಿಂದ, ಶಂಭುಸ್ವಯಂಭುಹರಯಃ=ಶಂಕರ ಚತುರ್ಮುಖ ನಾರಾಯಣರೂ, ಹರಿಣೇಕ್ಷಣಾನಾಂ=ಹುಲ್ಲೆಯ ಕಣ್ಣಿನಂತೆ ಕಣ್ಣುಳ್ಳ ಪಾರ್ವತಿ ಸರಸ್ವತಿ ಲಕ್ಷ್ಮಿಯರಿಗೆ, ಸತತಂ=ಯಾವಾಗಲು, ಗೃಹ=ಮನೆಯಲ್ಲಿ, ಕುಂಭದಾಸಾಃ=ಜಲಕುಂಭವಾಹಕ ಭೃತ್ಯರಾಗಿ, ಅಕ್ರಿಯಂತ=ಮಾಡಲ್ಪಟ್ಟರೊ, ವಾಚಾಂ=ಮಾತುಗಳಿಗೆ, ಅಗೋಚರ=ಅವಿಷಯವಾದ, ಚರಿತ್ರ=ಮಾಹಾತ್ಮ್ಯದಿಂದ. ವಿಚಿತ್ರಿತಾಯ=ಆಶ್ಚರ್ಯವುಳ್ಳವನಾಗಿ ಮಾಡಲ್ಪಟ್ಟ, ತಸ್ಮೈ=ಆ, ಭಗವತೇ=ಪೂಜ್ಯನಾದ. ಮಕರಧ್ವಜಾಯ=ಮನ್ಮಥನಿಗೆ. ನಮಃ=ನಮಸ್ಕಾರವು. ॥೧॥

ತಾ॥ ಯಾವ ಮನ್ಮಥನು ತನ್ನ ಮಹಿಮೆಯಿಂದ ಸೃಷ್ಟಿಸ್ಥಿತಿ ಸಂಹಾರಕಾರಿಗಳಾದ, ಬ್ರಹ್ಮ ವಿಷ್ಣು ಮಹೇಶರನ್ನು, ಶಾರದೇಂದಿರಾ ಶಂಕರಿಯರ ಮನೆಗಳಲ್ಲಿ ನೀರನ್ನು ಹೊರುವ ದಾಸರನ್ನಾಗಿ (ಎಂದರೆ ಅಧೀನರನ್ನಾಗಿ) ಮಾಡಿದನೊ, ಆದುದರಿಂದಲೇ ಅಂಥ ಅವಾಙ್ಮಾನಸ ಗೋಚರವಾದ ಚರಿತ್ರೆಯಿಂದ ಆಶ್ಚರ್ಯಕರನಾಗಿರುವ ಸಾಕ್ಷಾತ್ ಶ್ರೀ ಕೃಷ್ಣಸ್ವರೂಪನಾದ ಮನ್ಮಥನಿಗೆ ನಮಸ್ಕರಿಸುವೆನೆಂಬಾಶಯವು. ॥೧॥

ಶ್ಲೋ॥ ಸ್ಮಿತೇನಭಾವೇನಚಲಜ್ಜಯಾಭಿಯಾ ಪರಾಜ್ಮುಖೈರರ್ಧಕಟಾಕ್ಷ
ವೀಕ್ಷಣೈಃ ॥ ವಚೋಭಿರೀರ್ಷ್ಯಾಕಲಹೇನಲೀಲಯಾಸಮಸ್ತಭಾ
ವೈಃಖಲುಬಂಧನಂಸ್ತ್ರಿಯಃ .... ॥೨॥

ಟೀ॥ ಪ್ರಥಮ ಶ್ಲೋಕದಿಂದ ಮಂಗಳವನ್ನು ಮಾಡಿ ತರುವಾಯ ಸ್ತ್ರೀ ಪ್ರಶಂಸೆಯನ್ನು ಮಾಡಲುದ್ಯುಕ್ತನಾಗಿ ಮೊದಲು ಕಾಮಿನಿಯರೇ ಸಂಸಾರಬಂಧ ಕಾರಣವೆಂಬರ್ಥವನ್ನು ವಿಶದಪಡಿಸುತ್ತಾನೆ—ಸ್ಮಿತೇನ=ಮಂದಹಾಸದಿಂದ, ಭಾವೇನ=ಚಿತ್ತ ವಿಕಾರಾದಿ ಚೇಷ್ಟಾವಿಶೇಷದಿಂದ, ಲಜ್ಜಯಾ=ಅವಯವಗಳನ್ನು ಮರೆಮಾಡಿಕೊಳ್ಳುವ ಮನಸ್ಸಂಕೋಚರೂಪವಾದ ನಾಚಿಕೆಯಿಂದ, ಭಿಯಾ=ಆಕಸ್ಮಿಕವಾದ ಭಯದಿಂದ, ಪರಾಜ್ಮುಖೈಃ=ನಾಚಿಕೆಯಿಂದ ಹಿಂತಿರುಗಿದ, ಅರ್ಧಕಟಾಕ್ಷವೀಕ್ಷಣೈಃ=ಅಸಮಗ್ರವಾದ ಕಡೆಗಣ್ಣಿ ನೋಟಗಳಿಂದ, ವಚೋಭಿಃ=ಶುಕ ಕೋಕಿಲಗಳಂತೆ ಮಧುರವಾದ ಮಾತುಗಳಿಂದ, ಈರ್ಷ್ಯಾಕಲಹೇನ=ಅಸೂಯೆಯಿಂದುಂಟಾದ ಪ್ರಣಯ ಕಲಹದಿಂದ, ಲೀಲಯಾ=ವಿಲಾಸದಿಂದ, ಸಮಸ್ತಭಾವೈಃ=ಸಾತ್ವಿಕಸಂಚಾರ ಮೊದಲಾದ ಭಾವಗಳಿಂದಲೂ, ಸ್ತ್ರಿಯಃ=ಕಾಮಿನಿಯರು, ಬಂಧನಂ=ಸಂಸಾರಬಂಧ ಕಾರಣಭೂತರು, ಖಲು=ನಿಶ್ಚಯವು. .... ॥೨॥

ತಾ॥ ವಿಚಿತ್ರವಾದ ಹುಸಿನಗೆ, ವಿಲಕ್ಷಣವಾಗಿ ಚಿತ್ತವಿಕಾರಗಳಿಂದ ಅಂಗಚೇಷ್ಟೆಗಳು, ಅಂಗಗಳನ್ನಾಚ್ಛಾದನ ಮಾಡಿಕೊಳ್ಳುವ ಸಮಯದೊಳುಂಟಾಗುವ ವಿಜಾತೀಯವಾದ ನಾಚಿಕೆ, ಲಜ್ಜೆಯಿಂದ ಹಿಂತಿರುಗಿಸುವ ಕಡೆಗಣ್ಣು ನೋಟಗಳು, ಇಂಪಾದ ನುಡಿಗಳು, ಅನೇಕವಾದ ವಿಲಾಸಗಳು, ಅನಿರ್ವಾಚ್ಯವಾದ ಅಸೂಯೆಯು, ಪ್ರಣಯಕಲಹವು, ಎಂಬಿಷ್ಟುವಿಧವಾದ ಸಹಾಯ ಸಾಮಗ್ರಿಗಳಿರುವದರಿಂದಲೇ ನಾರಿಯರು ನರರ ಸಂಸಾರ ಬಂಧನಕ್ಕೆ ಮೂಲಕಾರಣರೆಂದರಿಯತಕ್ಕದ್ದು. .... ॥೨॥

ಶ್ಲೋ॥ ಭ್ರೂಚಾತುರ್ಯಾತ್ಕುಂಚಿತಾಕ್ಷಾಃಕಟಾಕ್ಷಾಃಸ್ನಿಗ್ಧಾವಾಚೋಲಜ್ಜಿ
ತಾಂತಾಶ್ಚಹಾಸಾಃ ॥ ಲೀಲಾಮಂದಂಪ್ರಸ್ಥಿತಂಚಸ್ಥಿತಂಚಸ್ತ್ರೀಣಾ
ಮೇತದ್ಭೂಷಣಂಚಾಯುಧಂಚ .... ॥೩॥

ಟೀ॥ ಹೇಳಿದರ್ಥವನ್ನು ಬೇರೆವಿಧದಿಂದ ಹೇಳುತ್ತಾನೆ—ಭ್ರೂಚಾತುರ್ಯಾತ್=ಕಣ್ಣು ಹುಬ್ಬುಗಳ ವೈಚಿತ್ರ್ಯದ ದೆಸೆಯಿಂದ, ಕುಂಚಿತಾಕ್ಷಾಃ=ಕೊಣಿಸುವ ಕಣ್ಣುಳ್ಳ, ಕಟಾಕ್ಷಾಃ=ಕಡೆಗಣ್ಣು ನೋಟಗಳು, ಸ್ನಿಗ್ಧಾಃ=ಸ್ನೇಹದಿಂದಕೂಡಿರುವ, ವಾಚಃ=ನುಡಿಗಳು, ಲಜ್ಜಿತಾಂತಾಃ=ನಾಚಿಕೆಯೇ ಕಡೆಯಲ್ಲಿಯುಳ್ಳ, ಹಾಸಾಶ್ಚ=ಮಂದಹಾಸಗಳು, ಲೀಲಾಮಂದಂ=ವಿಲಾಸದಿಂದ ಸುಂದರವಾದ, ಪ್ರಸ್ಥಿತಂಚ=ಮಂದಯಾ

ಶೇಷ, ಸ್ಥಿತಂಚ=ನಿಲ್ಲುವಿಕೆಯು, ಏತತ್=ಈ ಸಮಸ್ತವು, ಸ್ತ್ರೀಣಾಂ=ಸುಂದರಿಯ ರಿಗೆ, ಭೂಷಣಂಚ=ಅಲಂಕಾರವು, ಆಯುಧಂಚ=ಅಸ್ತ್ರವು. .... ||೩||

ತಾ|| ಹುಬ್ಬುಗಳನ್ನು ಮತ್ತು ಕಣ್ಣುಗಳನ್ನು ತಿರಿಗಿಸುವ ಚಾತುರ್ಯ, ಸುಂದರವಾದ ಕಡೆಗಣ್ಣು ನೋಟಗಳು, ಸ್ನೇಹದಿಂದ ಕೂಡಿರುವ ಕಿವಿಗಿಂಪಾದ ಮಾತುಗಳು, ನಾಚಿಕೆಯೇ ಮುಂದಾಗಿರುವ ಮಂದಹಾಸಗಳು, ಹಾಗೆಯೆ ವಿಚಿತ್ರವಾದ ವಿಲಾಸಗಳಿಂದ ಸುಂದರವಾದ ಮಂದಗಮನವು, ಚಮತ್ಕಾರವಾಗಿ ನಿಂತುಕೊಳ್ಳೋಣವು ಎಂಬಿವು ಅಂಗನೆಯರಿಗೆ ಅಮೋಘವಾದ ಅಲಂಕಾರಗಳಾಗಿಯೂ ಆಯುಧಗಳಾಗಿಯೂ ಇರುವವೆಂದರಿಯುವುದು. .... .... .... ||೩||

ಶ್ಲೋ|| ಕ್ವಚಿತ್ಸಭ್ರೂಭಂಗೈಃಕ್ವಚಿದಪಿಚ ಲಜ್ಜಾಪರಿಗತೈಃಕ್ವಚಿದ್ಭೂರಿ
ತ್ರಸ್ತೈಃಕ್ವಚಿದಪಿಚಲೀಲಾವಿಲಸಿತೈಃ ॥ ಕುಮಾರೀಣಾಮೇತೈ
ರ್ಮದನಸುಭಗೈರ್ನೇತ್ರವಲಿತೈಃಸ್ಫುರನ್ನೀಲಾಬ್ಜಾನಾಂಪ್ರಕರಪ
ರಿಕೀರ್ಣಾಇವದಿಶಃ .... .... ||೪||

ಟೀ|| ವಿಚಿತ್ರವಾದ ವಿಲಾಸಗಳನ್ನು ವರ್ಣಿಸುತ್ತಾನೆ—ಕ್ವಚಿತ್=ಒಂದು ಸ್ಥಳದಲ್ಲಿ, ಸಭ್ರೂಭಂಗೈಃ=ಕಣ್ಣುಹುಬ್ಬುಗಳ ಚಲನೆಗಳಿಂದ ಸಹಿತವಾದ, ಕ್ವಚಿದಪಿಚ=ಮತ್ತೊಂದು ಸ್ಥಳದಲ್ಲಿ, ಲಜ್ಜಾ=ನಾಚಿಕೆಯಿಂದ, ಪರಿಗತೈಃ=ವ್ಯಾಪ್ತವಾದ, ಅಥವಾ ಸ್ವಾನುಕೂಲ್ಯಪ್ರಕಾಶಕಗಳಾದ, ಕ್ವಚಿತ್=ಮತ್ತೊಂದು ಸ್ಥಳದಲ್ಲಿ, ಭೂರಿತ್ರಸ್ತೈಃ=ವಿಶೇಷವಾಗಿ ಭ್ರಾಂತಗಳಾದ, ಕ್ವಚಿದಪಿಚ=ಇನ್ನೊಂದೆಡೆಯೊಳು, ಲೀಲಾವಿಲಸಿತೈಃ=ವಿಲಾಸಗಳಿಂದ ಮನೋಹರಗಳಾದ, ಮದನ=ಮನ್ಮಥನಿಂದ, ಸುಭಗೈಃ=ಕೋಮಲಗಳಾದ, ಏತೈಃ=ಈ ಪ್ರಕಾರವಾದ, ಕುಮಾರೀಣಾಂ=ತರುಣಿಯರ, ನೇತ್ರವಲಿತೈಃ=ಕಟಾಕ್ಷಪ್ರಸರಣ ಪ್ರಕಾರಗಳಿಂದ, ದಿಶಃ=ದಿಕ್ಕುಗಳು, ಸ್ಫುರತ್=ಹೊಳೆಯುವ, ನೀಲಾಬ್ಜಾನಾಂ=ನೀಲೋತ್ಪಲಗಳ, ಪ್ರಕರ=ಸಮೂಹಗಳಿಂದ, ಪರಿಕೀರ್ಣಾಇವ=ಎರಚಲ್ಪಟ್ಟಂತಿರುವುವು. ... ||೪||

ತಾ|| ವಿರಕ್ತರಿಗೂ ಚಿತ್ತಚಾಂಚಲ್ಯವನ್ನುಂಟುಮಾಡುವ ಉತ್ಪಲಾಕ್ಷಿಯರಾದ ತರುಣಿಯರ ಕಟಾಕ್ಷಪಾತಗಳು, ಒಂದೆಡೆಯೊಳು ಕಣ್ಣು ಹುಬ್ಬುಗಳ ಚಲನ ಚಾತುರ್ಯದಿಂದ ಕೂಡಿ, ಮತ್ತೊಂದೆಡೆಯೊಳು ಸ್ವಾನುಕೂಲ್ಯ ಪ್ರಕಾಶಕವಾಗಿ, ಇನ್ನೊಂದುದಿಕ್ಕಿನಲ್ಲಿ ಅಕಸ್ಮಾತ್ತಾದ ಭಯದಿಂದ ಕೂಡಿದವುಗಳಾಗಿ, ಮತ್ತೊಂದು ಸ್ಥಲದಲ್ಲಿ ವಿಚಿತ್ರ ವಿಲಾಸಗಳಿಂದ ಹೊಳೆಯುತ್ತಲೂ ಇರುವದರಿಂದ ಎಲ್ಲದಿಕ್ಕುಗಳಲ್ಲಿಯೂ ನೀಲಕಮಲಗಳನ್ನು ಅ

ಥವಾ ಕನ್ನೈದಿಲೆಯು ಕುಸುಮಗಳನ್ನು ಎರಚಿರುವಂತಿರುವವೆಂದಾಶ‌ಯವು. .... .... .... ॥೪॥

ಶ್ಲೋ॥ ವಕ್ತ್ರಂಚಂದ್ರವಿಕಾಸಿಪಂಕಜಪರೀಹಾಸಕ್ಷಮೇಲೋಚನೇವರ್ಣ
ಸ್ಸ್ವರ್ಣಮಪಾಕರಿಷ್ಣುರಳಿನೀಜಿಷ್ಣುಃಕಚಾನಾಂಚಯಃ ॥ ವ
ಕ್ಷೋಜಾವಿಭಕುಂಭವಿಭ್ರಮಹರೌಗುರ್ವೀನಿತಂಬಸ್ಥಲೀವಾಚಾಂ
ಹಾರಿಚಮಾರ್ದವಂಯುವತಿಷುಸ್ವಾಭಾವಿಕಂಮಂಡನಂ ॥೫॥

ಟೀ॥ ಅಂಗನೆಯರಿಗೆ ಸ್ವಾಭಾವಿಕವಾದ ಅಲಂಕಾರವನ್ನು ಹೇಳುತ್ತಾನೆ— ಚಂದ್ರವಿಕಾಸಿ=ಚಂದ್ರನಂತೆ ಸುಂದರವಾದ, ವಕ್ತ್ರಂ=ಮುಖವು, ಪಂಕಜ=ಕಮಲಗಳನ್ನು, ಪರೀಹಾಸ=ಹಾಸ್ಯಮಾಡುವದರಲ್ಲಿ, ಕ್ಷಮೆ=ಶಕ್ತವಾದ, ಲೋಚನೆ=ಕಣ್ಣುಗಳು, ಸ್ವರ್ಣಂ=ಭಂಗಾರವನ್ನು, ಅಪಾಕರಿಷ್ಣುಃ=ತಿರಸ್ಕರಿಸುವ, ವರ್ಣಃ=ಶರೀರಕಾಂತಿಯು, ಅಲಿನೀಜಿಷ್ಣುಃ=ಭ್ರಮರಗಳನ್ನು ಜಯಿಸುವ, ಕಚಾನಾಂ=ಕೂದಲುಗಳ, ಚಯಃ=ಸಮುದಾಯವು, ಇಭ=ಆನೆಯ, ಕುಂಭ=ಕುಂಭಸ್ಥಲದ, ವಿಭ್ರಮ=ವಿಲಾಸವನ್ನು, ಹರೌ=ಅಪಹಾರ ಮಾಡುವ, ವಕ್ಷೋಜೌ=ಕುಚಗಳು, ಗುರ್ವೀ=ದೊಡ್ಡದಾದ, ನಿತಂಬಸ್ಥಲೀ=ಕಟಿಪಶ್ಚಾದ್ಭಾಗವು. ಹಾರಿ=ಮನೋಹರವಾದ, ವಾಚಾಂ=ಮಾತುಗಳ, ಮಾರ್ದವಂಚ=ಮಾಧುರ್ಯವು, ಏತತ್=ಈ ಸಮಸ್ತವು, ಯುವತಿಷು=ತರುಣಿಯರಲ್ಲಿ, ಸ್ವಾಭಾವಿಕಂ=ಸ್ವಭಾವಸಿದ್ಧವಾದ, ಮಂಡನಂ=ಅಲಂಕಾರವು. ... ... ॥೫॥

ತಾ॥ ಪೂರ್ಣಚಂದ್ರನಂತೆ ಹೊಳೆಯುವ ಮುಖ, ಕಮಲದಳಗಳಂತೆಸೆವ ಕಣ್ಣುಗಳು, ಸುವರ್ಣದಂತೆ ರಮಣೀಯವಾದ ವರ್ಣ, ನೈಲ್ಯದಿಂದ ದುಂಬಿಗಳಂತೆ ಬೆಳಗುವ ಕಚಭಾರ, ಕರಿವರ ಶಿರಸ್ಸಿನಂತೆಸೆವ ಕುಚಗಳು, ಗುರುವಾಗಿರುವ ಕಟಿಪಶ್ಚಾದ್ಭಾಗ, ಇಂಪಾದ ವಾಙ್ಮಾಧುರ್ಯ, ಇವೆಲ್ಲವೂ ಸುಂದರಿಯರಿಗೆ ನೈಜವಾದ ಅಲಂಕಾರವೆಂದರಿವುದು. .... .... .... ॥೫॥

ಶ್ಲೋ॥ ಸ್ಮಿತಂಕಿಂಚಿನ್ಮುಗ್ಧಂಸರಳತರಳೋದೃಷ್ಟಿವಿಭವಃ ಪರಿಸ್ಪಂದೋ
ವಾಚಾಮಭಿನವವಿಲಾಸೋಕ್ತಿಸರಸಃ ॥ ಗತಾನಾಮಾರಂಭಃಕಿಸಲ
ಯಿತಲೀಲಾಪರಿಕರಸ್ಸ್ಪೃಶಂತ್ಯಾಸ್ತಾರುಣ್ಯಂಕಿಮಿವನಹಿರಮ್ಯಂ
ಮೃಗದೃಶಃ .... .... .... ॥೬॥

ಟೀ॥ ಸ್ಮಿತಂ=ಮಂದಹಾಸವು, ಕಿಂಚಿತ್=ಸ್ವಲ್ಪವಾಗಿ, ಮುಗ್ಧಂ=ಸುಂದರ

ಕರವಾದದ್ದು, ದೃಷ್ಟಿವಿಭವಃ=ನೋಟದ ಸಂಪತ್ತು, ಸರಳ=ವಕ್ರವಿಲ್ಲದಂತೆ, ತರಳಃ=ಚಂಚಲವಾದದ್ದು, ವಾಚಾಂಪರಿಸ್ಪಂದಃ=ವಾಗ್ವ್ಯಾಪಾರವು, ಅಭಿನವ=ನೂತನವಾದ, ವಿಲಾಸ=ವಿಭ್ರಮಗಳುಳ್ಳ, ಉಕ್ತಿ=ನುಡಿಗಳಿಂದ, ಮಧುರಃ=ರಮಣೀಯವಾದದ್ದು, ಗತಾನಾಂ=ಗಮನಗಳ, ಆರಂಭಃ=ಉಪಕ್ರಮವು, ಕಿಸಲಯಿತ=ಚಿಗುರಿಸಲ್ಪಟ್ಟ, ಲೀಲಾಪರಿಕರಃ=ವಿಲಾಸಸಮೃದ್ಧಿಯು, ತಾರುಣ್ಯಂ=ಪ್ರಾಯವನ್ನು, ಸ್ಪೃಶಂತ್ಯಾಃ=ಸ್ಪರ್ಶಮಾಡುವ, ಮೃಗದೃಶಃ=ಹರಿಣಾಕ್ಷಿಯಾದ ತರುಣಿಯ ಸಂಬಂಧವಾದ, ಕಿಮಿವ=ಯಾವ ವ್ಯಾಪಾರವುತಾನೆ, ನಹಿರಮ್ಯಂ=ಮನೋಹರವಾಗಿರುವದಿಲ್ಲವು, ... ... ॥ ೬ ॥

ತಾ॥ ಸುಂದರವಾದ ಮಂದಹಾಸ, ರಮಣೀಯವಾದ ಕಡೆಗಣ್ಣು ನೋಟದಸಂಪತ್ತು, ಮೃದುವಾಗಿಯೂ, ಇಂಪಾಗಿಯೂ ಇರುವ ನುಡಿಗಳ ಮಾಧುರ್ಯ, ಅಂದವಾದ ಮಂದಯಾನ, ಈ ಮೇರಿಗೆಲ್ಲಾ ಇರುವ ಕಳೆದುಳಿದ ರನ್ನೆಯರ ಯಾವ ವಿಲಾಸಗಳು ರಮಣೀಯಗಳಾಗಿರುವದಿಲ್ಲವು ? ಎಂದರೆ ಸಕಲವೂ ಸುಂದರಗಳೆಂಬ ತಾತ್ಪರ್ಯವು. .... ॥ ೬ ॥

ಶ್ಲೋ॥ ದ್ರಷ್ಟವ್ಯೇಷುಕಿಮುತ್ತಮಂಮೃಗದೃಶಃಪ್ರೇಮಪ್ರಸನ್ನಂಮುಖಂ
ಘ್ರಾತವ್ಯೇಷ್ವಪಿಕಿಂತದಾಸ್ಯಪವನಃಶ್ರಾವ್ಯೇಷುಕಿಂತದ್ವಚಃ॥
ಕಿಂಸ್ವಾದ್ಯೇಷು ತದೋಷ್ಠಪಲ್ಲವರಸಃ ಸ್ಪೃಶ್ಯೇಷುಕಿಂತದ್ವಪು
ರ್ಧ್ಯೇಯಂಕಿಂನವಯೌವನಂಸಹೃದಯೈಸ್ಸರ್ವತ್ರತದ್ವಿಭ್ರಮಾಃ॥

ಟೀ॥ ಇಂದ್ರಿಯಗಳ ಪ್ರವೃತ್ತಿಗೆ ಮುಖ್ಯವಿಷಯಗಳು ಅಂಗನೆಯರ ಅವಯವಾದಿಗಳೇ ಎಂಬರ್ಥವನ್ನು ಹೇಳುತ್ತಾನೆ—ದ್ರಷ್ಟವ್ಯೇಷು=ದರ್ಶನೀಯ ವಸ್ತುಗಳಲ್ಲಿ, ಉತ್ತಮಂ=ಶ್ಲಾಘ್ಯವಾದ ವಸ್ತು, ಕಿಂ=ಏನು, ಪ್ರೇಮಪ್ರಸನ್ನಂ=ಅನುರಾಗದಿಂದ ಅರಳಿದ, ಮೃಗದೃಶಃ=ಹರಿಣಲೋಚನೆಯಾದ ತರುಣಿಯ, ಮುಖಂ=ವದನವು, ಘ್ರಾತವ್ಯೇಷ್ವಪಿ=ವಾಸನೆ ನೋಡತಕ್ಕ ವಸ್ತುಗಳಲ್ಲಿಯೂ, ಉತ್ತಮಂ=ಯೋಗ್ಯವಾದದ್ದು, ಕಿಂ=ಯಾವದು, ತತ್=ಆ ತರುಣಿಯ,ಆಸ್ಯಪವನಂ=ಮುಖಮಾರುತವು, ಶ್ರಾವ್ಯೇಷು=ಕೇಳಲು ಯೋಗ್ಯವಾದವುಗಳಲ್ಲಿ, ಉತ್ತಮಂ=ಶ್ರೇಷ್ಠವಾದದ್ದು, ಕಿಂ=ಏನು? ತತ್=ಆತರುಣಿಯ, ವಚಃ=ಮಾತು, ಸ್ವಾದ್ಯೇಷು=ರುಚಿನೋಡತಕ್ಕವುಗಳಲ್ಲಿ, ಉತ್ತಮಂ=ಯೋಗ್ಯವಾದದ್ದು, ಕಿಂ=ಯಾವದು? ತತ್=ಆ ತರುಣಿಯ, ಓಷ್ಠಪಲ್ಲವ=ಚಿಗುರಿನಂತಿರುವ ತುಟಿಯ, ರಸಃ=ಅಮೃತವು, ಸ್ಪೃಶ್ಯೇಷು=ಮುಟ್ಟಿನೋಡತಕ್ಕ ವಸ್ತುಗಳಲ್ಲಿ, ಉತ್ತಮಂ=ಉಚಿತವಾದದ್ದು, ಕಿಂ=ಏನು? ತದ್ವಪುಃ=ಆ ತರುಣಿಯ ಶರೀರವು, ಧ್ಯೇಯಂ=ಧ್ಯಾನಯೋಗ್ಯವಾದದ್ದು, ಕಿಂ=ಯಾವದು? ನವಯೌವನಂ=ಹೊಸದಾದ ಪ್ರಾಯವು, ಸಹೃದಯೈಃ=

ರಸಿಕ ಜನರಿಂದ. ಸರ್ವತ್ರ=ಎಲ್ಲಾದೇಶದಲ್ಲಿ ಅಥವಾ ಎಲ್ಲಾ ಸಮಯದಲ್ಲಿ, ತದ್ವಿಭ್ರಮಾಃ=ಆ ತರುಣಿಯ ವಿಲಾಸಗಳು, ಧ್ಯೇಯಾಃ=ಧ್ಯಾನಾರ್ಹಗಳು. ||೭||

ತಾ|| ನೋಡತಕ್ಕ ಸುಂದರವಸ್ತುಗಳಲ್ಲಿ ಅನುರಾಗದಿಂದ ಅರಳಿದಂತೆ ಹೊಳೆವ ತರುಣಿಯ ಮುಖವು ಕಮನೀಯವಲ್ಲದೆ ಮತ್ತೊಂದೂ ನೇತ್ರಾನಂದಕರವಲ್ಲ. ಹಾಗೆಯೇ ವಾಸನೆ ನೋಡತಕ್ಕ ವಸ್ತುಗಳಲ್ಲಿ ಕಮಲದಂತೆ ಗಂಧವುಳ್ಳ ಪದ್ಮಿನೀಜಾತ್ಯಂಗನೆಯ ಮುಖವಾರುತವೇ ಶ್ರೇಷ್ಠವಾದದ್ದು; ಕಿವಿಗಳಿಂದ ಕೇಳತಕ್ಕದ್ದರಲ್ಲಿ ಕಿವಿಕಿಂಪಾಗಿರುವ ಆ ಕಾಮಿನಿಯ ಮೃದುಮಧುರವಾದ ನುಡಿಯಲ್ಲದೆ ಮತ್ತೊಂದೂ ಉಚಿತವಲ್ಲವು, ಆಸ್ವಾದನ ಮಾಡತಕ್ಕದ್ದರಲ್ಲಿ ತರುಣಿಯ ಪಲ್ಲವದಂತಿರುವ ಅಧರದ ಅಮೃತರಸವಲ್ಲದೆ ಮತ್ತೊಂದಿಲ್ಲ, ಮುಟ್ಟತಕ್ಕದ್ದಕ್ಕೆ ಯೋಗ್ಯವಾದದ್ದು ತರುಣಿಯ ಕೋಮಲವಾದ ಅಂಗಗಳೇ. ಧ್ಯಾನಾರ್ಹವಾದದ್ದು ತರುಣಿಯ ನವಯೌವನವೇ. ಮತ್ತು ರಸಿಕಜನರಿಂದ ಸರ್ವದಾ ಧ್ಯೇಯವಾದವುಗಳು ಕಾಮಿನಿಯರ ವಿಲಾಸಗಳೇ ಅಲ್ಲದೆ ಇನ್ನಾವದೂ ಇಲ್ಲವೆಂದಾಶಯವು .... .... ||೭||

ಶ್ಲೋ|| ಏತಾಶ್ಚಲದ್ವಲಯಸಂಹತಿಮೇಖಲೋತ್ಥಝುಂಕಾರನೂಪುರಪರಾ
ಜಿತರಾಜಹಂಸ್ಯಃ || ಕುರ್ವಂತಿಕಸ್ಯನಮನೋವಿವಶಂತರುಣ್ಯೋ
ವಿತ್ರಸ್ತಮುಗ್ಧಹರಿಣೀಸದೃಶೈಃಕಟಾಕ್ಷೈಃ .... ||೮||

ಟೀ|| ಸಕಲರನ್ನೂ ಸಮ್ಮೋಹಗೊಳಿಸುವಿಕೆ ಎಂಬ ಧರ್ಮ ಇವರಿಗುಂಟೆಂಬದನ್ನು ವಿಶದಮಾಡುತ್ತಾನೆ.....ಚಲತ್=ಚಲಿಸುತ್ತಿರುವ, ವಲಯಸಂಹತಿ=ಕಂಕಣಶ್ರೇಣಿಯು, ಮೇಖಲ=ಡಾಬಿನಲ್ಲಿರುವ ಗೆಜ್ಜೆಗಳು ಇವುಗಳ ದೆಸೆಯಿಂದ, ಉತ್ಥ=ಹುಟ್ಟಿದ, ಝುಂಕಾರ=ಝುಂಝುಣ ಶಬ್ದದಿಂದ, ನೂಪುರ=ಕಾಲುಕಡಗಗಳ ಶಬ್ದದಿಂದಲೂ, ಪರಾಜಿತ=ಪರಾಜಯ ಹೊಂದಿಸಲ್ಪಟ್ಟ, ರಾಜಹಂಸ್ಯಃ=ರಾಜಹಂಸಾಂಗನೆಯರುಳ್ಳ, ಏತಾಃ=ಈ ಪೂರ್ವೋಕ್ತರಾದ, ತರುಣ್ಯಃ=ಯುವತಿಯರು, ವಿತ್ರಸ್ತ=ಭಯಪಟ್ಟ, ಮುಗ್ಧ=ಸುಂದರವಾದ, ಹರಿಣೀ=ಹೆಣ್ಣು ಜಿಂಕೆಗಳಿಗೆ, ಸದೃಶೈಃ=ಸಮಾನವಾದ, ಕಟಾಕ್ಷೈಃ=ಕಡೆಗಣ್ಣು ನೋಟಗಳಿಂದ, ಕಸ್ಯ=ಯಾವ ಪುರುಷನ, ಮನಃ=ಚಿತ್ತವನ್ನು, ವಿವಶಂ=ಮೋಹಿತವನ್ನಾಗಿ, ನಕುರ್ವಂತಿ=ಮಾಡುವದಿಲ್ಲವು? ... ... .... ||೮||

ತಾ|| ಕಾಲುಕಡಗಗಳ ಝೇಂಕಾರದಿಂದಲೂ, ಡಾಬಿನ ಗೆಜ್ಜೆಗಳ

ಕಿಂಕಿಣಿ ಧ್ವನಿಯಿಂದಲೂ, ಕೈಕಡಗಗಳ ಝಣತ್ಕಾರ ಶಬ್ದದಿಂದಲೂ, ಅವ್ಯಕ್ತ ಮಧುರವಾದ ಕಾಲುಕಡಗಗಳ ನಿನಾದದಿಂದಲೂ, ಮಂದಗಮನದಿಂದಲೂ, ವಿರಾಜಮಾನಗಳಾದ ರಾಜಹಂಸಗಳಂತೆ ರಮಣೀಯರಾಗಿರುವ ಮೇಲೆ ಹೇಳಿದ ತರುಣಿಯರು ಕಡೆಗಣ್ಣು ನೋಟಗಳ ಚಾತುರ್ಯದಿಂದ ವಿರಕ್ತನ ಮನಸ್ಸನ್ನೂ ಸೂರೆಗೊಂಬರೆಂಬ ಭಾವವು .... ॥೮॥

ಶ್ಲೋ॥ ಕುಂಕುಮಪಂಕಕಳಂಕಿತ ದೇಹಾಗೌರಪಯೋಧರಕಂಪಿತಹಾ
ರಾ॥ನೂಪುರಹಂಸರಣತ್ಪದಪದ್ಮಾ ಕಂನವಶೀಕುರುತೇಭುವಿರಾಮಾ

ಟೀ॥ ಕುಂಕುಮ=ಕೇಸರಿಯು ಅಥವಾ ಕುಂಕುಮದ, ಪಂಕ=ಕೆಸರಿನಿಂದ, ಕಳಂಕಿತ=ಗುರುತಾಗಿ ಮಾಡಲ್ಪಟ್ಟ, ದೇಹಾ=ಶರೀರವುಳ್ಳ, ಗೌರ=ಹೊಂಬಣ್ಣವಾದ, ಪಯೋಧರ=ಸ್ತನಗಳಲ್ಲಿ, ಕಂಪಿತ=ಚಲಿಸಲ್ಪಟ್ಟ, ಹಾರಾ=ಮುತ್ತಿನಹಾರವುಳ್ಳ ನೂಪುರಹಂಸ=ಹಂಸಗಳಂತಿರುವ ಕಾಲುಕಡಗಗಳಿಂದ, ರಣತ್=ಧ್ವನಿಮಾಡುವ, ಪದಪದ್ಮಾ=ಪಾದಕಮಲವುಳ್ಳ, ರಾಮಾ=ರಮಣಿಯು, ಭುವಿ=ಭೂಲೋಕದಲ್ಲಿ, ಕಂ=ಯಾವ ಪುರುಷನನ್ನು, ನವಶೀಕುರುತೇ=ಸ್ವಾಧೀನಪಡಿಸಿಕೊಳ್ಳುವದಿಲ್ಲ? ॥೯॥

ತಾ॥ ಕುಂಕುಮಕೇಸರಾನುಲೇಪದಿಂದಲೂ, ಹೊಂಬಣ್ಣವಾದ ಸ್ತನಗಳಲ್ಲಿ ಅತ್ತಿತ್ತ ಚಲಿಸುತಿರುವ ಮುತ್ತಿನ ಹಾರದಿಂದಲೂ, ಹಂಸಗಳಂತೆ ಕಿವಿಗಿಂಪಾಗಿ ಧ್ವನಿಗೈಯುವ ಪಾದಕಟಕಗಳಿಂದಲೂ, ಲೋಕೋತ್ತರ ಲಾವಣ್ಯವುಳ್ಳ ಲಲನೆಯು ವಿರಕ್ತಪುರುಷನನ್ನೂ ಸ್ವಾಧೀನಪಡಿಸಿಕೊಳ್ಳುವಳೆಂದು ಭಾವವು. .... .... ॥೯॥

ಶ್ಲೋ॥ ನೂನಂಹಿತೇಕವಿವರಾವಿಪರೀತವಾಚೋಯೇನಿತ್ಯಮಾಹುರಬಲಾ
ಇತಿಕಾಮಿನೀಸ್ತಾಃ ॥ಯಾಭಿರ್ವಿಲೋಲತರತಾರಕದೃಷ್ಟಿಪಾತೈ
ಶ್ಶಕ್ರಾದಯೋಽಪಿವಿಜಿತಾಸ್ತ್ವಬಲಾಃಕಥಂತಾಃ ॥೧೦॥

ಟೀ॥ ಸುಂದರಿಯರ ಸಾಮರ್ಥ್ಯವನ್ನು ವರ್ಣಿಸುತ್ತಾನೆ—ತೇ=ಆ ಪ್ರಸಿದ್ಧರಾದ, ಕವಿವರಾಃ=ಕವೀಶ್ವರರು, ವಿಪರೀತವಾಚಃ=ವ್ಯತ್ಯಸ್ತವಾದ ವಚನವುಳ್ಳವರು, ನೂನಂಹಿ=ಸತ್ಯವೆ, ಯೇ=ಯಾವ ಕವೀಶ್ವರರು, ತಾಃ=ಪ್ರಸಿದ್ಧರಾದ, ಕಾಮಿನೀಃ=ಕಾಮಿನಿಯರನ್ನು, ಅಬಲಾಃ=ದುರ್ಬಲರನ್ನಾಗಿ, ನಿತ್ಯಂ=ಯಾವಾಗಲು, ಆಹುಃ=ಹೇಳುವರೋ, ಯಾಭಿಃ=ಯಾವ ಕಾಮಿನಿಯರಿಂದ, ವಿಲೋಲತರ=ಅತ್ಯಂತ ಚಂಚಲಗಳಾದ, ದೃಷ್ಟಿ=ಕಟಾಕ್ಷಗಳ, ಪಾತೈಃ=ಪ್ರಸರಣಗಳಿಂದಲೇ, ಶಕ್ರಾದಯೋಽಪಿ=ಇಂದ್ರಾದಿಗಳೂ, ವಿಜಿತಾಃ=ಜಯಿಸಲ್ಪಟ್ಟರೊ, ತಾಸ್ತು=ಅವರಾದರೆ, ಅಬಲಾಃ=ಹೀನಬಲರು, ಕಥಂ=ಹೇಗೆ? ... — ॥೧೦॥

ತಾ॥ ಕೃಶಾಂಗಿಯರಾಗಿದ್ದರೂ, ಅಂಗನೆಯರ ಕಟಾಕ್ಷವೆಂಬ ಸರಣಿ ಮಾತ್ರದಿಂದಲೆ ಇಂದ್ರಾದಿ ಮಹಾಶೂರರೂ ಪರಾಜಿತರಾಗಿರುವಲ್ಲಿ, ಅಂಥಾ ಲಲನೆಯರು ಪ್ರಬಲೆಯರಲ್ಲದೆ ಅಬಲೆಯರು ಹೇಗೆ ಆದಾರು ? ಮತ್ತು ಯಾವಾಗಲೂ ಅವರನ್ನು ಅಬಲೆಯರೆಂದು ಹೇಳುವ ಕವೀಶ್ವರರು ಸುಳ್ಳು ಮಾತನ್ನು ಹೇಳತಕ್ಕವರಲ್ಲವೆ ? ಈ ವಿಷಯದಲ್ಲಿ ಸಂದೇಹವೇ ಇಲ್ಲವೆಂಬಾಶಯವು. .... .... .... ॥೧೧॥

ಶ್ಲೋ॥ ನೂನಮಾಜ್ಞಾಕರಸ್ತಸ್ಯಾಸ್ಸುಭ್ರುವೋಮಕರಧ್ವಜಃ ॥ ಯತ
ಸ್ತನ್ನೇತ್ರಸಂಚಾರಸೂಚಿತೇಷುಪ್ರವರ್ತತೇ .... ॥೧೧॥

ಟೀ॥ ಕಾಮನು ಕಾಮಿನಿಯರಿಗೆ ಕಿಂಕರನೆಂಬದನ್ನು ಹೇಳುತ್ತಾನೆ—ಮಕರಧ್ವಜಃ—ಮನ್ಮಥನೂ, ತಸ್ಯಾಃ—ಪ್ರಸಿದ್ಧಳಾದ, ಸುಭ್ರುವಃ—ಕಾಮಿನಿಯ, ಆಜ್ಞಾಕರಃ—ಸೇವಕನು, ನೂನಂ=ನಿಶ್ಚಯವು. ಯತಃ=ಯಾವಕಾರಣದ ದೆಸೆಯಿಂದ, ತತ್=ಆ ಕಾಮಿನಿಯರ, ನೇತ್ರ—ಕಟಾಕ್ಷಗಳ, ಸಂಚಾರ—ಪ್ರಸರಣದಿಂದ, ಸೂಚಿತೇಷು=ಸಂಜ್ಞೆಮಾಡಲ್ಪಟ್ಟವರಲ್ಲಿ, ಪ್ರವರ್ತತೇ—ಪ್ರವರ್ತಿಸುವನೋ? ॥೧೧॥

ತಾ॥ ಯಾವ ಕಾಮಿನಿಯು ಯಾವ ಪುರುಷನಲ್ಲಿ ಕಟಾಕ್ಷ ವಿಕ್ಷೇಪವನ್ನು ಮಾಡುವಳೋ, ಆ ಕ್ಷಣವೇ ಮನ್ಮಥನು ಅವರನ್ನು ಹೊಡೆದು ಕೆಡಹಲು ಪ್ರಯತ್ನಿಸುವನು. ಆದಕಾರಣವೇ ಕಾಮನಾ ಕಾಮಿನಿಯರಿಗೆ ಆಜ್ಞಾವಿಧಾಯಕನಾದ ಕಿಂಕರನು ಜಗದ್ವಶೀಕರಣ ಸಮರ್ಥನಾದ ಈ ಮನ್ಮಥನೇ ಅವರಿಗೆ ಸೇವಕನಾಗಿರುವಲ್ಲಿ ಅವರಬಲೆಯುವರು ಹೇಗೆ ? ಮತ್ತು ಅವರ ಸಾಮರ್ಥ್ಯವೆಷ್ಟರದು? .... .... ॥೧೧॥

ಶ್ಲೋ॥ ಕೇಶಾಸ್ಸಂಯಮಿನಃಶ್ರುತೇರಪಿಪರಂ ಪಾರಂಗತೇಲೋಚನೇಹ್ಯಂ
ತರ್ವಕ್ತ್ರಮಪಿಸ್ವಭಾವಶುಚಿಭಿಃಕೀರ್ಣಂದ್ವಿಜಾನಾಂಗಣೈಃ ॥
ಮುಕ್ತಾನಾಂಸತತಾಧಿವಾಸರುಚಿರೌ ವಕ್ಷೋಜಕುಂಭಾವಿಮಾವಿ
ತ್ಥಂತನ್ವಿವಪುಃಪ್ರಶಾಂತಮಪಿತೇರಾಗಂಕರೋತ್ಯೇವನಃ ॥೧೨॥

ಟೀ॥ ಶ್ಲೇಷಾರ್ಥ ಚಾತುರ್ಯದಿಂದ ಕಾಮಿನಿಯನ್ನು ಪ್ರಶಂಸಿಸುತ್ತಾನೆ—ಕೇಶಾಃ—ಕೂದಲುಗಳು, ಸಂಯಮಿನಃ—ಕೂಡಿರುವವು (ಗಂಟಾಗಿರುವವು) ನಿಯಮವುಳ್ಳವುಗಳು, ಲೋಚನೇಅಪಿ—ನೇತ್ರಗಳೂ, ಶ್ರುತೇಃ—ವೇದದ, ಕಿವಿಯ, ಪರಂ—ವಿಶೇಷವಾದ, ಪಾರಂ—ಕೊನೆಯನ್ನು, ಸಮೀಪವನ್ನು. ಗತೇ—ಹೊಂದಿರುವವು, ಅಂತರ್ವಕ್ತ್ರಮಪಿ—ಬಾಯಿಯ ಒಳಭಾಗವೂ, ಸ್ವಭಾವಶುಚಿಭಿಃ—ಸ್ವತಶ್ಶುದ್ಧವಾ

ದ, ದ್ವಿಜಾನಾಂ=ಬ್ರಾಹ್ಮಣರ, ಹಲ್ಲುಗಳ, ಗಣೈಃ=ಸಮುದಾಯಗಳಿಂದ, ಶೀರ್ಣಂ=ವ್ಯಾಪ್ತವಾಗಿರುವದು, ಇಮೌ=ಈ, ವಕ್ಷೋಜಕುಂಭೌ=ಕುಚಕುಂಭಗಳು, ಮುಕ್ತಾನಾಂ=ಮುತ್ತಿನಹಾರಗಳ, (ಮುಕ್ತರ) ಸತತಾಧಿವಾಸ=ನಿರಂತರಾವಾಸದಿಂದ; ರುಚಿರೌ=ಸುಂದರವಾದವುಗಳು, ತನ್ವಿ=ಎಲೆ ಕೃಶಾಂಗಿಯೆ, ಇತ್ಥಂ=ಈ ಪ್ರಕಾರವಾಗಿ, ತೇ=ನಿನ್ನ, ವಪುಃ=ಶರೀರವು, ಪ್ರಶಾಂತಮಪಿ=ನಿರ್ಮಲವಾಗಿರುವದು, ವೈರಾಗ್ಯಸಂಪತ್ತಿನಿಂದ ಕೂಡಿರುವದಾದರೂ. ನಃ=ನಮಗೆ, ರಾಗಮೇವ=ಅನುರಾಗವನ್ನೇ, ಸಂಭೋಗಾಭಿಲಾಷೆಯನ್ನೇ, ಕರೋತಿ=ಮಾಡುತ್ತದೆ. ... ||೧೨||

ತಾ|| ಎಲೈ ಕೃಶಾಂಗಿಯೆ ! ಗುಂಪಾಗಿರುವ ನಿನ್ನ ತಲೆಯ ಕೂದಲುಗಳು, ಕರ್ಣಾಂತ ವಿಶ್ರಾಂತವಾದ ಲೋಚನಗಳು, ಕಾಂತವಾದದಂತಗಳಿಂದಂದವಾದ ವದನವು, ಮುಕ್ತಾಹಾರದಿಂದ ಶೋಭಿಸುವ ಕುಚಕುಂಭಗಳು, ಇವುಗಳೆಲ್ಲವೂ ಕೇವಲ ನಿರ್ಮಲವಾಗಿರುವದರಿಂದಲೆ ಅತ್ಯಂತಾನುರಾಗವನ್ನುಂಟುಮಾಡುವವು, ಮತ್ತು-ಎಲೆ ಕೃಶವಾದ ಅವಯವವುಳ್ಳ ಅಬಲೆಯೆ ! ಕೇಶಗಳು ನಿಯಮವ್ರತವುಳ್ಳವುಗಳು, ನಿನ್ನಯ ನೇತ್ರಗಳು ವೇದಪಾರವನ್ನು ಹೊಂದಿರುವವು, ನಿನ್ನ ವದನವೋ ಶುದ್ಧವಾದ ಬ್ರಾಹ್ಮಣರೊಡನೆ ಸೇರಿರುವದು ; ಕುಚಗಳು ಮುಕ್ತರೊಡನೆ ಕೂಡಿರುವವು, ಈರೀತಿಯೊಳು ನಿನ್ನ ಅವಯವಗಳೆಲ್ಲಾ ಕೇವಲ ವೈರಾಗ್ಯಭಾವದಿಂದ ಕೂಡಿದ್ದರೂ ನಮಗೆ ಸಂಭೋಗಾಭಿಲಾಷೆಯನ್ನೇ ಉಂಟುಮಾಡುವದೆಂತಲೂ ಭಾವವು.

ಶ್ಲೋ|| ಮುಗ್ಧೇ ಧಾನುಷ್ಕತಾಕೇಯಮಪೂರ್ವಾ ತ್ವಯಿ ದೃಶ್ಯತೇ || ಯ
ಯಾವಿಧ್ಯಸಿ ಚೇತಾಂಸಿ ಗುಣೈರೇವ ಸಸಾಯಕೈಃ ||೧೩||

ಟೀ|| ಮುಗ್ಧೇ=ಎಲೆ ಸುಂದರಿ, ತ್ವಯಿ=ನಿನ್ನಲ್ಲಿ. ಅಪೂರ್ವಾ=ಪೂರ್ವದಲ್ಲಿ ಕಾಣದಿರುವ, ಧಾನುಷ್ಕತಾ=ಧನುರ್ಧರತ್ವವು, ದೃಶ್ಯತೇ=ಕಾಣಬರುವದು, ಇಯಂ=ಇದು, ಕಾ=ಎಂಥಾದ್ದು? ಯಯಾ=ಯಾವನಿನ್ನ ಧನುರ್ಧರತ್ವದಿಂದ, ಚೇತಾಂಸಿ=ಮನಸ್ಸುಗಳನ್ನು, ಗುಣೈರೇವ=ಮೌರ್ವಿಗಳಿಂದಲೇ, ರೂಪಯೌವನಾದಿ ಗುಣಗಳಿಂದಲೇ, ವಿಧ್ಯಸಿ=ಹೊಡೆಯುವಿ. ... ... ||೧೩||

ತಾ|| ಲೋಕದಲ್ಲಿ ಎಷ್ಟು ಚತುರನಾದ ಬಿಲ್ಲಾಳಾದರೂ ಕಣ್ಣಿಗೆ ಕಾಣಬರುವ ಗುರಿಯನ್ನು ಹೊಡೆಯುವದುಂಟು, ಎಲೆ ಕಾಮಿನಿ! ನೀನು ಮುಗ್ಧಳಾದಾಗ್ಯೂ ರೂಪ ಲಾವಣ್ಯಾದಿಗುಣಗಳಿಂದಲೆ ಸುತರಾಂ ಕಾಣಬರದಿರುವ ಪರರ ಮನಸ್ಸನ್ನು ಹೊಡೆದು ಕೆಡಹುವಿಯಲ್ಲ, ಅಹಹ ! ಈ ನಿನ್ನ ಬಿಲ್ಲಾಳುತನವು ಎಷ್ಟು ಶ್ಲಾಘ್ಯವಾಗಿರುವದು! ಎಂದರೆ ಯುವತಿಯು

ರಿಗೆ ಪುರುಷರನ್ನು ಮೋಹಗೊಳಿಸಲು ರೂಪಲಾವಣ್ಯಗಳೇ ಆಯುಧಗಳೆಂದು ಭಾವವು. .... .... ॥೧೩॥

ಶ್ಲೋ॥ ಸತಿಪ್ರದೀಪೇಸತ್ಯಗ್ನೌಸತ್ಸುತಾರಾಮಣೀಂದುಷು ॥ ವಿನಾಮೇ
ಮೃಗಶಾಬಾಕ್ಷ್ಯಾತಮೋಭೂತಮಿದಂಜಗತ್ .... ॥೧೪॥

ಟೀ॥ ಇನ್ನು ಮೇಲೆ ಕಾಮಿನಿಯರ ವಿಷಯವಾಗಿ ಕಾಮುಕರ ತಾತ್ಪರ್ಯವನ್ನು ತಿಳಿಸುತ್ತಾನೆ—ಪ್ರದೀಪೇ=ಪದಾರ್ಥಗಳನ್ನು ತೋರಿಸುವ ದೀಪವು, ಸತಿ=ಇದ್ದಾಗ್ಯೂ, ಅಗ್ನೌ=ಸರ್ವಪ್ರಕಾಶವಾದ ಅಗ್ನಿಯು, ಸತ್ಯಪಿ=ಇದ್ದರೂ, ತಥಾ=ಹಾಗೆಯೇ, ತಾರಾಮಣೀಂದುಷು=ನಕ್ಷತ್ರ, ರತ್ನ, ಚಂದ್ರರು, ಸತ್ಸ್ವಪಿ=ಇದ್ದರೂ, ಮೃಗಶಾಬಾಕ್ಷ್ಯಾವಿನಾ=ಹರಿಣ ಶಿಶುಲೋಚನೆಯಾದ ಕಾಮಿನಿಯಿಂದಲ್ಲದೆ, ಇದಂ=ಈ, ಜಗತ್=ಪ್ರಪಂಚವು, ಮೇ=ನನಗೆ, ತಮೋಭೂತಂ=ಅಂಧಕಾರವಾಗಿರುವದು,

ತಾ॥ ಪದಾರ್ಥಗಳನ್ನು ತೋರ್ಪಡಿಸುವ ಸಾಮರ್ಥ್ಯವುಳ್ಳ ದೀಪ, ಅಗ್ನಿ, ನಕ್ಷತ್ರಗಳು, ದಿವ್ಯವಾದ ರತ್ನಗಳು, ಚಂದ್ರನು, ಇಷ್ಟ ವಸ್ತುಗಳಿದ್ದಾಗ್ಯೂ ಹುಲ್ಲೆಯ ಕರುವಿನಂತೆ ಕಣ್ಣುಳ್ಳ ಕಾಮಿನಿಯೊಬ್ಬಳಿಲ್ಲದೊಡೆ ಲೋಕವೇ ಕಾಣುವದಿಲ್ಲವು, ಎಂದರೆ ಕಾಮುಕನ ಪ್ರಾಣವು ಕಾಮಿನಿಯಿಂದಲೇ ಇರುವದೆಂದಾಶಯವು. .... ॥೧೪॥

ಶ್ಲೋ॥ ಉದ್ವೃತ್ತಸ್ತನಭಾರಏಷತರಳೇನೇತ್ರೇಚಲೇಭ್ರೂಲತೇರಾಗಾಧಿ
ಷ್ಠಿತಮೋಷ್ಠಪಲ್ಲವಮಿದಂಕುರ್ವಂತುನಾಮವ್ಯಥಾಂ ॥ ಸೌಭಾ
ಗ್ಯಾಕ್ಷರಮಾಲಿಕೇವಲಿಖಿತಾಪುಷ್ಪಾಯುಧೇನಸ್ವಯಂಮಧ್ಯಸ್ಥಾ
ಪಿಕರೋತಿತಾಪಮಧಿಕಂರೋಮಾವಳೀಕೇನವಾ ॥೧೫॥

ಟೀ॥ ಉದ್ವೃತ್ತಃ=ಅತ್ಯಂತ ಗುಂಡಾಗಿರುವ, ದುರ್ಮಾರ್ಗಿಯಾದ, ಏಷಃ=ಈ, ಸ್ತನಭಾರಃ=ಕುಚ ಕುಂಭಗಳು, ತರಳೆ=ಲೀಲಾವಿಲೋಲಗಳಾದ, ಚಪಲಗಳಾದ, ನೇತ್ರೇ=ಕಣ್ಣುಗಳು, ಚಲೇಚ=ವಿಲಾಸಾತಿಶಯದಿಂದ ಚಂಚಲವಾದವುಗಳು, ಸ್ಥೈರ್ಯಹೀನಗಳು. ಭ್ರೂಲತೇಚ=ಬಳ್ಳಿಯಂತಿರುವ ಕಣ್ಣು ಹುಬ್ಬುಗಳು. ರಾಗ—ಕೋಪದಿಂದ, ಮಾತ್ಸರ್ಯದಿಂದ, ಅಧಿಷ್ಠಿತಂ=ಆಶ್ರಯಿಸಲ್ಪಟ್ಟಿರುವದು, ಇದಂ=ಈ, ಓಷ್ಠಪಲ್ಲವಂ=ಚಿಗುರಿನಂತಿರುವ ತುಟಿಯೂ. ವ್ಯಥಾಂ=ಮನಃಖೇದವನ್ನು, ಕುರ್ವಂತುನಾಮ=ಮಾಡಲಿ, ಪುಷ್ಪಾಯುಧೇನ=ಕಾಮದೇವನಿಂದ, ಸ್ವಯಂ=ತನ್ನ ಕೈಯಿಂದ, ಲಿಖಿತಾ=ಬರೆಯಲ್ಪಟ್ಟ, ಸೌಭಾಗ್ಯ=ಸುಕೃತ ವಿಶೇಷ ಸೂಚಕವಾದ, ಅಕ್ಷರ=ವರ್ಣಗಳ, ಮಾಲಿಕೇವ=ಪಂಙ್ತಿಯಂತಿರುವ, ಮಧ್ಯಸ್ಥಾಪಿ=ಮಧ್ಯಪ್ರದೇಶದಲ್ಲಿರುವ, ತಟಸ್ಥವಾಗಿದ್ದರೂ, ರೋಮಾವಳೀ=ರೋಮಪಂಙ್ತಿಯು, ಕೇನವಾ—

ಚಾಪಕಾರಣದಿಂದ, ಅಧಿಕಂ—ವಿಶೇಷವಾದ, ತಾಪಂ—ಸಂತಾಪವನ್ನು, ಕಿಕೋತಿ—ಮಾಡುವದೊ ? ... ... ... ||೧೪||

ತಾ|| ಅತ್ಯಂತ ವರ್ತುಲಾಕಾರವಾಗಿರುವ ಈ ಕುಚಕುಂಭಗಳು, ವಿಚಿತ್ರವಿಲಾಸಗಳಿಂದ ಚಂಚಲವಾದ ನಯನಗಳು, ಬಳ್ಳಿಗಳಂತೆ ಸುಂದರವಾದ ಕಣ್ಣು ಹುಬ್ಬುಗಳು, ಅತಿಶಯವಾದ ಆರುಣ್ಯದಿಂದ ಕೂಡಿ ಚಿಗುರಿನಂತಿರುವ ಚೆಂದುಟಿಯು ಇವುಗಳು ಬಂದುವೇಳೆ ಮನಸ್ಸಿಗೆ ಸಂತಾಪವನ್ನು ಮಾಡಿದರೂ ಮಾಡಬಹುದು ; ಮನ್ಮಥನು ಸುಕೃತ ವಿಶೇಷವನ್ನು ಸೂಚಿಸುವಂತೆ ಸ್ವಹಸ್ತ ಲಿಖಿತವಾದ ಅಕ್ಷರ ಪಙ್ತಿಯೋ ಎಂಬಂತಿರುವ ಈ ರೋಮರಾಜಿಯು ಕೇವಲ ಮಾಧ್ಯಸ್ಥ್ಯವನ್ನು ಹೊಂದಿದ್ದರೂ ಮನಸ್ಸಿಗೆ ವಿಶೇಷವಾಗಿ ವ್ಯಥೆಯನ್ನು ಯಾವ ಕಾರಣದಿಂದುಂಟು ಮಾಡುವದೋ ತಿಳಿಯುವದಿಲ್ಲವು, ಎಂದರೆ ನಾಭಿಯಮೇಲಣ ರೋಮಪಂಕ್ತಿಯು ಅತ್ಯಂತಾಹ್ಲಾದಕರವಾಗಿರುವದೆಂದು ತಾತ್ಪರ್ಯವು. .... ||೧೪||

ಶ್ಲೋ|| ಮುಖೇನಚಂದ್ರಕಾಂತೇನಮಹಾನೀಲೈಶ್ಶಿರೋರುಹೈಃ || ಕರಾಭ್ಯಾಂಪದ್ಮರಾಗಾಭ್ಯಾಂರೇಜೇಮಣಿಮಯೀವಸಾ ||೧೫||

ಟೀ|| ಚಂದ್ರಕಾಂತೇನ—ಇಂದುವಿನಂತೆ ಸುಂದರವಾದ, ಚಂದ್ರಕಾಂತಮಣಿರೂಪವಾದ, ಮುಖೇನ—ಮುಖದಿಂದಲೂ, ಮಹಾನೀಲೈಃ—ಅತ್ಯಂತ ಕಪ್ಪಾಗಿರುವ, ಸಿಂಹಳದ್ವೀಪದಲ್ಲಿ ಹುಟ್ಟಿದ ಮಹಾ ನೀಲಮಣಿಗಳಿಂದಲೂ, ಪದ್ಮರಾಗಾಭ್ಯಾಂ—ಕಮಲದಂತೆ ಕೆಂಪಾದ ಪದ್ಮರಾಗ ಮಣಿಗಳಿಂದಲೂ, ಸಾ—ಆ ಸುಂದರಿಯು, ಮಣಿಮಯೀವ—ಶ್ರೇಷ್ಠವಾಗಿಯೂ, ರತ್ನಮಯವಾಗಿಯೂ, ರೇಜೇ—ಪ್ರಕಾಶಿಸುವಳು.

ತಾ|| ಚಂದ್ರನಂತಿರುವ ಮುಖದಿಂದಲೂ, ಚಂದ್ರಕಾಂತಮಣಿಯಿಂದಲೂ, ಅತ್ಯಂತ ಕಪ್ಪಾಗಿರುವ ಮುಂಗುರುಳುಗಳಿಂದಲೂ, ಮಹಾ ನೀಲ ಮಣಿಗಳಿಂದಲೂ, ಕೆಂದಾವರೆಯಂತಿರುವ ಕರಗಳಿಂದಲೂ, ಪದ್ಮರಾಗ ರತ್ನಗಳಿಂದಲೂ, ಅಂಗನೆಯು ಸಾಕ್ಷಾತ್ ರತ್ನಸ್ವರೂಪವಾಗಿಯೇ ಇರುವಂತೆ ಹೊಳೆಯುವಳೆಂದಾಶಯವು. .... .... ||೧೫||

ಶ್ಲೋ|| ಗುರುಣಾಸ್ತನಭಾರೇಣಮುಖಚಂದ್ರೇಣಭಾಸ್ವತಾ || ಶನೈಶ್ಚರಾಭ್ಯಾಂಪಾದಾಭ್ಯಾಂರೇಜೇಗ್ರಹಮಯೀವಸಾ .... ||೧೬||

ಟೀ|| ಗುರುಣಾ—ದಪ್ಪವಾದ, ಬೃಹಸ್ಪತಿಗ್ರಹಸ್ವರೂಪದಿಂದ, ಸ್ತನಭಾರೇಣ—ಕುಚಭಾರದಿಂದಲೂ, ಭಾಸ್ವತಾ—ಹೊಳೆವಸೂರ್ಯಗ್ರಹರೂಪದಿಂದಲೂ, ಪು

ಖಚಂದ್ರೇಣ=ಚಂದ್ರನಂತಿರುವ ಮುಖದಿಂದಲೂ, ಶನೈಶ್ಚರಾಭ್ಯಾಂ=ಮಂದಯಾನ ಪಾದಗಳೆಂಬ ಶನೈಶ್ಚರರೆಂಬ ಗ್ರಹಗಳಿಂದಲೂ, ಸಾ=ಆ ಸುಂದರಿಯು, ಗ್ರಹಮಯೀವ=ಗ್ರಹಗಳ ಸ್ವರೂಪಳಾಗಿರುವಂತೆ, ರೇಜೇ=ಪ್ರಕಾಶಿಸುವಳು, .... ॥೧೭॥

ತಾ॥ ದಪ್ಪವಾಗಿರುವ ಕುಚಭಾರದಿಂದಲೂ, ಮತ್ತು ಚಂದ್ರನಂತಿರುವ ಮುಖದಿಂದಲೂ, ಗುರುಗ್ರಹದಿಂದಲೂ, ಮುಖವೆಂಬ ಚಂದ್ರಗ್ರಹದಿಂದಲೂ, ಮಂದಗಮನದಿಂದ ಶೋಭಿಸುವ ಪಾದಗಳಿಂದಲೂ, ಶನೈಶ್ಚರಗ್ರಹದಿಂದಲೂ, ಈ ಸುಂದರಿಯು ಗ್ರಹಸ್ವರೂಪವಾಗಿರುವಂತೆ ಹೊಳೆಯುತಲಿರುವಳೆಂದಾಶಯವು. .... .... ॥೧೭॥

ಶ್ಲೋ॥ ತಸ್ಯಾಸ್ಸ್ತನೌಯದಿಘನೌಜಘನಂಚ ಹಾರಿವಕ್ತ್ರಂಚಚಾರುತವ
ಚಿತ್ತಕಿಮಾಕುಲತ್ವಂ ॥ ಪುಣ್ಯಂಕುರುಷ್ವಯದಿತೇಷುತವಾಸ್ತಿ
ವಾಂಛಾಪುಣ್ಯೈರ್ವಿನಾನಹಿಭವಂತಿಸಮೀಹಿತಾರ್ಥಾಃ ॥೧೮॥

ಟೀ॥ ತಸ್ಯಾಃ=ಆ ತರುಣಿಯ, ಸ್ತನೌ=ಕುಚಗಳು, ಘನೌ=ನಿಬಿಡಗಳಾಗಿ ಇರುವವು, ಜಘನಂ=ಕಟಿ ಪುರೋಭಾಗವೂ, ಹಾರಿಚ=ಮನೋಹರವಾದದ್ದು, ವಕ್ತ್ರಂ=ಮುಖವು, ಚಾರು=ಸುಂದರವಾದದ್ದು, ಯದ್ಯಪಿ=ಆದಾಗ್ಯೂ, ಹೇಚಿತ್ತ=ಎಲೆ ಮನಸ್ಸೆ, ತವ=ನಿನಗೆ, ಆಕುಲತ್ವಂ=ಕಳವಳವು, (ಆಸೆಯು) ಕಿಂ=ಏತಕ್ಕೆ? ತೇಷು=ಆ ಸ್ತನಾದಿಗಳಲ್ಲಿ, ತವ=ನಿನಗೆ, ವಾಂಛಾ=ಸಂಭೋಗಾಭಿಲಾಷೆಯು, ಯದಿ=ಇದ್ದ ಪಕ್ಷದಲ್ಲಿ ಆದರೆ, ಪುಣ್ಯಂ=ಸುಕೃತವನ್ನು, ಕುರುಷ್ವ=ಮಾಡು, ಪುಣ್ಯೈರ್ವಿನಾ=ಸುಕೃತಗಳಿಂದಲ್ಲದೆ, ಸಮೀಹಿತಾರ್ಥಾಃ=ಇಷ್ಟಾರ್ಥಗಳು, ನಹಿಭವಂತಿ=ಉಂಟಾಗುವದಿಲ್ಲವು. .... ... .... ॥೧೮॥

ತಾ॥ ಕುಚಕುಂಭಗಳು ಕಮನೀಯಗಳಾಗಿರುವವು, ಮತ್ತು ಮಧ್ಯಪ್ರದೇಶ ಮೊದಲಾದದ್ದು ಮನೋಹರವಾಗಿರುವದು, ಮುಖವೂ ಸುಂದರವಾಗಿಯೇ ಇರುವದು, ಆದರೂ ಎಲೈ ಮನಸ್ಸೇ! ಅವುಗಳನ್ನು ನೋಡಿ ಆಶೆಯಿಂದ ಕಳವಳಪಡಬೇಡ, ಬಾದು ವೇಳೆ ಆಶೆಪಟ್ಟು ಅವುಗಳನ್ನು ಬಯಸುವಿಯಾದರೆ, ಜ್ಯೋತಿಷ್ಟೋಮಾದಿಗಳಿಂದುಂಟಾದ ಅಪೂರ್ವದಿಂದೊದಗುವ ರಂಭಾ ಸಂಭೋಗಾದಿಗಳಂತೆ ಅತಿಶಯವಾದ ಸುಕೃತದಿಂದಲೇ ಮೇಲೆ ಹೇಳಿದ ಕುಚಕುಂಭಾದಿ ಸಂಭೋಗವು ಸಂಭವಿಸುವದಲ್ಲದೆ, ಅನ್ಯಥಾ ಸಂಭವಿಸಲಾರದು. ಆದಕಾರಣದಿಂದಲೆ ಸುಕೃತವನ್ನು ಸಂಪಾದಿಸು.

ಶ್ಲೋ॥ ಇಮೇತಾರುಣ್ಯಶ್ರೀನವಪರಿಮಳಾಃ ಪ್ರೌಢಸುರತಪ್ರತಾಪಪ್ರಾ
ರಂಭಾಸ್ಸ್ಮರವಿಜಯದಾನಪ್ರತಿಭುವಃ ॥ ಚಿರಂಚೇತಶ್ಚೋರಾ
ಅಭಿನವವಿಕಾರೈಕಗುರವೋವಿಲಾಸವ್ಯಾಪಾರಾಃ ಕಿಮಪಿವಿಜಯಂ
ತೇಮೃಗದೃಶಾಂ .... .... ॥೧೯॥

ಟೀ॥ ತಾರುಣ್ಯಶ್ರೀ=ಯೌವನಸಂಪತ್ತಿನ, ನವ=ಹೊಸದಾದ, ಪರಿಮಳಾಃ=ಸೌಭಾಗ್ಯವಿಶೇಷವುಳ್ಳ, ಪ್ರೌಢ=ಪ್ರಚಂಡವಾದ, ಸುರತ=ರತಿಯಲ್ಲಿನ, ಪ್ರತಾಪ=ಸಾಮರ್ಥ್ಯದ, ಪ್ರಾರಂಭಾಃ=ಉಪಕ್ರಮಗಳಾದ, ಸ್ಮರ=ಮನ್ಮಥನಿಗೆ, ವಿಜಯದಾನ=ಗೆದ್ದುಕೊಡುವದರಲ್ಲಿ, ಪ್ರತಿಭುವಃ=ಲಗ್ನಕಗಳಾದ, ಚಿರಂ=ಬಹುಕಾಲದಿಂದ, ಚೇತಶ್ಚೋರಾಃ=ಚಿತ್ತವನ್ನು ಕದಿಯುವ, ಅಭಿನವ=ಹೊಸದಾದ, ವಿಕಾರ=ಪ್ರಾಯವಿಕಾರದಲ್ಲಿ, ಏಕಗುರವಃ=ಮುಖ್ಯೋಪದೇಶಕಗಳಾದ, ಮೃಗದೃಶಾಂ=ಹರಿಣಾಕ್ಷಿಯರಾದ ರಮಣಿಯರ ಸಂಬಂಧವಾದ, ಇಮೇ=ಈ ಮೇಲೆ ಹೇಳಿದ, ವಿಲಾಸವ್ಯಾಪಾರಾಃ=ಶೃಂಗಾರಚೇಷ್ಟೆಗಳು, ಕಿಮಪಿ=ಹೇಳಲಶಕ್ಯವಾಗಿ, ವಿಜಯಂತೇ=ಸರ್ವೋತ್ಕೃಷ್ಟಗಳಾಗಿರುವವು. .... .... ॥೧೯॥

ತಾ॥ ನವಯೌವನದ ಪರಿಮಳ ಸಂಪತ್ತಿನಂತೆಯೂ, ಸರ್ವೋತ್ತಮವಾಗಿರುವ ಸುರತ ಸಾಮರ್ಥ್ಯದ ಪ್ರಾರಂಭಗಳಂತೆಯೂ, ಕಾಮುಕರನ್ನು ಗೆದ್ದು ಕಾಮನಿಗೆ ವಿಜಯವನ್ನುಂಟುಮಾಡುವದರಲ್ಲಿ ಹೊಣೆಯಾಗಿಯೂ, ವಿರಕ್ತರ ಚಿತ್ತಚೌರ್ಯವನ್ನು ಮಾಡುವವುಗಳಾಗಿಯೂ, ಪ್ರಾಯದೊಳುಂಟಾಗುವ ನಾನಾ ವಿಕಾರಗಳಿಗೆ ಉಪಾಧ್ಯಾಯರಂತೆಯೂ ಇರುವ ಹರಿಣನಯನೆಯರಾದ ತರುಣಿಯರ ವಿಚಿತ್ರವಾದ ವಿಲಾಸ ವಿಶೇಷಗಳು ಪರಮಾನಂದಕರಗಳಾಗಿರುವವೆಂದು ತಾತ್ಪರ್ಯವು, .... ॥೧೯॥

ಶ್ಲೋ॥ ಪ್ರಣಯಮಧುರಾಃಪ್ರೇಮೋದಾರಾರಸಾಶ್ರಯತಾಂಗತಾಃಫಣಿತಿಮಧುರಾಮುಗ್ಧಪ್ರಾಯಾಃಪ್ರಕಾಶಿತಸಮ್ಮದಾಃ॥ ಪ್ರಕೃತಿಸು
ಭಗಾವಿಸ್ರಂಭಾರ್ದ್ರಾಸ್ಸ್ಮರೋದಯದಾಯಿನೋರಹಸಿಕಿಮಪಿ
ಸ್ವೈರಾಲಾಪಾಹರಂತಿಮೃಗೀದೃಶಾಂ .... ॥೨೦॥

ಟೀ॥ ಪ್ರಣಯ=ಸ್ನೇಹದಿಂದ, ಮಧುರಾಃ=ಸಂತಾಪಹರಗಳಾದ, ಪ್ರೇಮ=ಅನುರಾಗ ವಿಶೇಷದಿಂದ, ಉದಾರಾಃ=ಮನೋಹರಗಳಾದ, ರಸಾಶ್ರಯತಾಂ=ರಸಾಸ್ಪದತ್ವವನ್ನು, ಗತಾಃ=ಹೊಂದಿದ, ಫಣಿತಿ=ಸಂದರ್ಭ ವಿಶೇಷದಿಂದ, ಮಧುರಾಃ=ಇಂಪಾದ, ಮುಗ್ಧಪ್ರಾಯಾಃ=ಸುಕುಮಾರಿಗಳಾದ, ಅಮೃತಪ್ರಾಯಗಳಾದ, ಪ್ರಕಾಶಿತ=ವ್ಯಕ್ತಮಾಡಲ್ಪಟ್ಟ, ಸಮ್ಮದಾಃ=ಸಂಭೋಗೌತ್ಸುಕ್ಯವುಳ್ಳ,

ಪ್ರಕೃತಿ=ಸ್ವಭಾವದಿಂದ, ಸುಭಗಾಃ=ಪ್ರೀತಿಪೂರ್ವಕಗಳಾದ, (ಮನೋಹರಗಳಾದ) ವಿಸ್ರಂಭಾದ್ರ್ರಾಃ=ವಿಶ್ವಾಸ ಯುಕ್ತಗಳಾದ, ಸ್ಮರೋದಯದಾಯಿನಃ=ಮನ್ಮಥೋದ್ರೇಕವನ್ನುಂಟುಮಾಡುವ, ಮೃಗೀದೃಶಾಂ=ಕುರಂಗನಯನೆಯರ ಸಂಬಂಧವಾಗಿರುವ, ರಹಸಿ=ರಹಸ್ಯದಲ್ಲಿ, ಸ್ವೈರಾಲಾಪಾಃ=ಹಿತವಚನಗಳು, ಕಿಮಪಿ=ಅಪಾರವಾಗಿ, ಹರಂತಿ=ಮನೋಹರಗಳಾಗಿರುವವು. ... |೭೦|

ತಾ॥ ಅಂತರಂಗವನ್ನು ದ್ರವಿಸುವಂತೆ ಮಾಡುತ್ತ, ಸ್ನೇಹದಿಂದಸಂತಾಪಹರಗಳಾಗಿ, ಅನುರಾಗದಿಂದ ಗಂಭೀರಗಳಾಗಿ, ಶೃಂಗಾರಾದಿ ರಸಗಳಿಗೆ ಮುಖ್ಯಾಸ್ಪದಗಳೆಂದೆನಿಸಿ, ಆಯಾಯ ಸಂದರ್ಭ ವಿಶೇಷದಿಂದ ಇಂಪಾಗಿ, ಸೌಕುಮಾರ್ಯದಿಂದೊಡಗೂಡಿ, ಸಂಭೋಗದೊಳು ಕುತೂಹಲವನ್ನು ಸೂಚಿಸುತ, ಸ್ವಭಾವದಿಂದ ಸುಂದರಗಳಾಗಿ, ವಿಶ್ವಾಸ ಪರಿಪೂರ್ಣಗಳೆಂದೆನಿಸಿ, ಜಿತೇಂದ್ರಿಯನಿಗೂ ಮನ್ಮಥೋದ್ರೇಕವನ್ನುಂಟುಮಾಡುತ್ತಲೂ ಇರುವ ಹರಿಣನಯನೆಯರಾದ ರಮಣಿಯರ ರಹಸ್ಯದಲ್ಲಿನ ರುಚಿರವಾದ ವಚನಗಳು ಹೇಳಲಶಕ್ಯವಾದ ಆನಂದವನ್ನುಂಟುಮಾಡತಕ್ಕವುಗಳಾಗಿರುವವು. .... .... .... ‖೭೦‖

## ಸಂಭೋಗವರ್ಣನಾರಂಭವು.

ಶ್ಲೋ॥ ವಿಶ್ರಮ್ಯ ವಿಶ್ರಮ್ಯ ವನದ್ರುಮಾಣಾಂ ಛಾಯಾಸು ತನ್ವೀ ವಿಚಚಾರ
ಕಾಚಿತ್ ॥ ಸ್ತನೋತ್ತರೀಯೇಣ ಕರೋದ್ಧೃತೇನ ನಿವಾರಯಂ
ತೀ ಶಶಿನೋ ಮಯೂಖಾನ್ .... .... ‖೭೧‖

ಟೀ॥ ಸಂಯೋಗವಿಯೋಗಗಳನ್ನಾಶ್ರಯಿಸಿರುವ ಶೃಂಗಾರಗಳೊಳಗೆ ವಿರಹ ಶೃಂಗಾರವನ್ನು ವರ್ಣಿಸುತ್ತಾನೆ—ಕಾಚಿತ್=ಒಬ್ಬಾನೊಬ್ಬ, ತನ್ವೀ=ಕೃಶಾಂಗಿಯು, ವನದ್ರುಮಾಣಾಂ=ವನವೃಕ್ಷಗಳ, ಛಾಯಾಸು=ನೆರಳುಗಳಲ್ಲಿ, ವಿಶ್ರಮ್ಯ ವಿಶ್ರಮ್ಯ=ಪದೇಪದೇ ವಿಶ್ರಮಿಸಿಕೊಂಡು, ಕರೋದ್ಧೃತೇನ=ಕೈಯಿಂದ ಎತ್ತಲ್ಪಟ್ಟ, ಸ್ತನೋತ್ತರೀಯೇಣ=ಕುಚಕುಂಭಾಚ್ಛಾದನ ವಸ್ತ್ರದ ಸೆರಗಿನಿಂದ, ಶಶಿನಃ=ಚಂದ್ರನ, ಮಯೂಖಾನ್=ಕಿರಣಗಳನ್ನು, ನಿವಾರಯಂತೀ=ಹೋಗಲಾಡಿಸುವಳಾಗಿ ವಿಚಚಾರ=ತಿರುಗಿದಳು. .... ... .... ‖೭೧‖

ತಾ॥ ಒಬ್ಬಾನೊಬ್ಬ ಕೃಶಾಂಗಿಯು ವಿರಹತಾಪವನ್ನು ಸಹಿಸಲಾರದೆ ಕಾಲವನ್ನು ಕಳೆಯಲು ವನಕ್ಕೆ ತೆರಳಿ, ಅಲ್ಲಿ ತನ್ನ ಕುಚಗಳಮೇಲೆ ಹೊದೆದಿರುವ ಮೇಲ್ಹುಕಿನ ವಸ್ತ್ರದ ಕೊನೆಯಿಂದ ವಿರಹಿಗಳಿಗತ್ಯಂತ

ಸಂತಾಪಕರವಾದ ಚಂದ್ರಕಿರಣಗಳನ್ನು ಬೀಸಿ ಹೋಗಲಾಡಿಸುತ್ತ, ಮರಗಳ ನೆರಳಿನಲ್ಲಿ ಪದೇಪದೇ ವಿಶ್ರಮಿಸಿಕೊಳ್ಳುತ್ತ ಉಪಚಾರಮಾಡುತ್ತಿರುವಳೆಂದು ತಾತ್ಪರ್ಯವು. ಇಲ್ಲಿ ಹೇಳಲ್ಪಟ್ಟಿರುವ ನಾಯಕಿಯು ವಿರಹೋತ್ಕಂಠಿತೆಯು. .... .... ||೨೦||

ಶ್ಲೋ || ಅದರ್ಶನೇದರ್ಶನಮಾತ್ರಕಾಮಾದೃಷ್ಟ್ವಾಪರಿಷ್ವಂಗಸುಖೈಕ
ಲೋಲಾ || ಆಲಿಂಗಿತಾಯಾಂಪುನರಾಯತಾಕ್ಷ್ಯಾಮಾಶಾಸ್ಮಹೇವಿ
ಗ್ರಹಯೋರಭೇದಂ .... .... ||೨೧||

ಟೀ|| ಯಾ—ಯಾವ ಆಯತಾಕ್ಷಿಯು, ಅದರ್ಶನೇ—ಪ್ರಿಯನ ದರ್ಶನವಿಲ್ಲದಿರುವಲ್ಲಿ, ದರ್ಶನಮಾತ್ರ—ನೋಡುವಿಕೆಯುಮಾತ್ರದಲ್ಲಿ, ಕಾಮಾ—ಅಪೇಕ್ಷೆಯುಳ್ಳವಳೊ, ದೃಷ್ಟ್ವಾ—ನೋಡಿ, ಪರಿಷ್ವಂಗ—ಆಲಿಂಗನದ, ಸುಖ—ಸುಖದಲ್ಲಿ, ಏಕ—ಮುಖ್ಯವಾಗಿ, ಲೋಲಾ—ಆಸಕ್ತಳಾಗಿರುವಳೊ, ತಸ್ಯಾಂ—ಆ, ಆಯತಾಕ್ಷ್ಯಾಂ—ವಿಶಾಲಾಕ್ಷಿಯು, ಆಲಿಂಗಿತಾಯಾಂ—ಆಲಿಂಗಿಸಲ್ಪಡುತ್ತಿರಲಾಗಿ, ವಿಗ್ರಹಯೋಃ—ಶರೀರಗಳ, ಐಕ್ಯಮಂ—ಅಭೇದವನ್ನು, ಆಶಾಸ್ಮಹೇ—ಕೋರುವೆವು, ||೨೧||

ತಾ|| ವಲ್ಲಭನ ದರ್ಶನ ಉಂಟಾಗದಿರಲು ಅತಿ ಕುತೂಹಲದಿಂದ ನೋಡಿದರೆ ಸಾಕೆಂದು ಅಪೇಕ್ಷಿಸುತ್ತ, ಬಳಿಕ ನೋಡಲು ಆಲಿಂಗನ ಸುಖವನ್ನಪೇಕ್ಷಿಸುತ್ತ, ಅನಂತರ ಆಲಿಂಗನಮಾಡಲು, ಪರಸ್ಪರ ಶರೀರಗಳಿಗೆ ಭೇದವಿರುವದೆಂದು ತೋರದಿರುವ ವಿಶಾಲಾಕ್ಷಿಯಾದ ತರುಣಿಯು ಗಾಢಾಲಿಂಗನ ಸುಖವು ಬ್ರಹ್ಮಾನಂದಕ್ಕಿಂತಲೂ ಉತ್ತಮವಾಗಿರುವದರಿಂದ ಆ ಸುಖವನ್ನೇ ಕೋರುವೆವೆಂದು ತಾತ್ಪರ್ಯವು. .... ||೨೧||

ಶ್ಲೋ || ಮಾಲತೀಶಿರಸಿಜೃಂಭಣಂಮುಖೇಚಂದನಂವಪುಷಿಕುಂಕುಮಾವಿ
ಲಾ| ವಕ್ಷಸಿಪ್ರಿಯತಮಾಮದಾಲಸಾಸ್ವರ್ಗಏಷಪರಿಶಿಷ್ಟಆಗಮಃ||

ಟೀ|| ಅಂಗನಾಲಿಂಗನ ಸುಖವು ಸ್ವರ್ಗಸುಖ ಸದೃಶವೆಂಬದನ್ನು ಸೂಚಿಸುತ್ತಾನೆ -ಶಿರಸಿ—ತಲೆಯಲ್ಲಿ, ಮಾಲತೀ—ಜಾಜಿಯಹೂವಿನ ಮಾಲೆಯು, ಮುಖೇ—ವದನದಲ್ಲಿ, ಜೃಂಭಣಂ—ಮದನವಿಕಾರದಿಂದುಂಟಾದ ವಿಕಾಸವು, ವಪುಷಿ—ಶರೀರದಲ್ಲಿ, ಕುಂಕುಮ—ಕುಂಕುಮಕೇಸರಿಯು, ಆವಿಲಂ—ಲೇಪನವು, ವಕ್ಷಸಿ—ಎದೆಯಲ್ಲಿ, ಮದಾಲಸಾ—ಮದದಿಂದ ಮತ್ತಳಾದ, ಪ್ರಿಯತಮಾ—ವಲ್ಲಭೆಯು, ಏಷಃ—ಈ ಸುಖಸಮುದಾಯವು, ಸ್ವರ್ಗಃ—ಸ್ವರ್ಗಶಬ್ದವಾಚ್ಯವು, ಆಗಮಃ—ಇದಕ್ಕಿಂತಲೂ ಬೇರಾದ ಸ್ವರ್ಗವನ್ನು ಹೇಳುವ ಶಾಸ್ತ್ರವು. ಪರಿಶಿಷ್ಟಃ—ಮುಖ್ಯವಾದದ್ದಲ್ಲವು. ||೨೨||

ತಾ॥ ಮನೋಹರವಾದ ಜಾಜಿಯುಹುವ್ವನ್ನು ಮುಡಿದು, ಸುರತಿ ಸುಖಾಸಕ್ತಿ ಸೂಚಕವಾದ ಮುಖವಿಲಾಸದಿಂದೊಡಗೂಡಿ, ಕುಂಕುಮಕೇಸರಾದಿ ದಿವ್ಯಚಂದನ ಲೇಪನದಿಂದ ಶೋಭಿಸುವ ಪ್ರಿಯತಮೆಯು ಗಾಢಾಲಿಂಗನ ಉಂಟಾಗಿರಲು ಇದೇ ಸ್ವರ್ಗವೆಂಬ ಪದಾರ್ಥವಲ್ಲದೆ ಬೇರೆ ಸ್ವರ್ಗವಿರುವದೆಂದು ಹೇಳುವ ಶಾಸ್ತ್ರವು ಅನೃತವೆಂದು ತಾತ್ಪರ್ಯವು. ॥೨೩॥

ಶ್ಲೋ॥ ಪ್ರಾಙ್ಮಾಮೇತಿಮನಾಗನಾಗತರಸಂಜಾತಾಭಿಲಾಷಂತತಸ್ಸವ್ರೀ
ಡಂತದನುಶ್ಲಥೋದ್ಯಮಮಥಪ್ರಧ್ವಸ್ತಧೈರ್ಯಂಪುನಃ ॥ ಪ್ರೇಮಾ
ದ್ರ್ರಂಸ್ಪೃಹಣೀಯ ನಿರ್ಭರರಹಃಕ್ರೀಡಾಪ್ರಗಲ್ಭಂ ತತೋನಿ
ಸ್ಸಂಗಾಂಗವಿಕರ್ಷಣಾಧಿಕಸುಖಂರಮ್ಯಂಕುಲಸ್ತ್ರೀರತಂ ॥೨೪॥

ಟೀ॥ ಇನ್ನು ಅಂತವರ ಸಂಭೋಗವಂ ವರ್ಣಿಸಲುಪಕ್ರಮಿಸುತ್ತಾನೆ—ಪ್ರಾಕ್=ಆರಂಭದಲ್ಲಿ, ಮಾಮೇತಿ=ಬೇಡ ಬೇಡವೆಂದು, ಮನಾಕ್=ಸ್ವಲ್ಪವಾಗಿ, ಅನಾಗತ=ಅನುತ್ಪನ್ನವಾದ, ರಸಂ=ಅನುರಾಗವುಳ್ಳ, ತತಃ=ನಿಷೇಧಾನಂತರದಲ್ಲಿ, ಜಾತ=ಉಂಟಾದ, ಅಭಿಲಾಷಂ=ಕುತೂಹಲವುಳ್ಳ, ತದನು=ಅಭಿಲಾಷಾನಂತರದಲ್ಲಿ, ಸವ್ರೀಡಂ=ನಾಚಿಕೆಯಿಂದೊಡಗೂಡಿದ, ಅಥ=ನಾಚಿಕೆಯ ಅನಂತರದಲ್ಲಿ, ಶ್ಲಥ=ಶಿಥಿಲವಾದ, ಉದ್ಯಮಂ=ನಿಷೇಧ ಪ್ರಯತ್ನವುಳ್ಳ, ಪುನಃ=ತರುವಾಯ, ಪ್ರಧ್ವಸ್ತ=ನಷ್ಟವಾದ, ಧೈರ್ಯಂ=ಧೈರ್ಯವುಳ್ಳ, ತತಃ=ಅನಂತರದಲ್ಲಿ. ಪ್ರೇಮ=ಪ್ರೀತಿಯಿಂದ, ಆರ್ದ್ರಂ=ನೆನೆದಂಥ, ತತಃ=ತರುವಾಯ, ಸ್ಪೃಹಣೀಯ=ಕೋರತಕ್ಕ, ನಿರ್ಭರ=ಮರ್ಯಾದಾತೀತವಾದ, ರಹಃಕ್ರೀಡಾ=ಏಕಾಂತವಿಹಾರಗಳಿಂದ, ಪ್ರಗಲ್ಭಂ=ಪ್ರೌಢವಾದ, ತತಃ=ಆಮೇಲೆ, ನಿಸ್ಸಂಗ=ಕಡೆಯಿಲ್ಲದಿರುವ, ಅಂಗವಿಕರ್ಷಣ=ಕುಚಾದ್ಯವಯವಮರ್ದನದಿಂದ, ಅಧಿಕ=ವಿಶೇಷವಾದ, ಸುಖಂ=ಆನಂದವುಳ್ಳ, ಕುಲಸ್ತ್ರೀರತಂ=ಸ್ವಸ್ತ್ರೀಸಂಭೋಗವು, ರಮ್ಯಂ=ಸುಂದರವಾದದ್ದು. ... ॥೨೪॥

ತಾ॥ ಮುಗ್ಧಳಾದ ಸ್ವಾಂಗನಾಪ್ರಥಮ ಸಂಭೋಗವೆಂಬುದು ಆದಿಭಾಗದೊಳು ಅನಾಸ್ವಾದಿತರಸ ವುಂಟಾಗಿರುವದರಿಂದ ಬೇಡಬೇಡವೆಂಬ ನಿಷೇಧ ವಚನವುಳ್ಳದ್ದಾಗಿ, ತರುವಾಯ ಕೊಂಚ ಅಭಿಲಾಷೆಯುಳ್ಳದ್ದಾಗಿಯೂ, ಬಳಿಕ ನಾಚಿಕೆಯಿಂದೊಡಗೂಡಿರುವದಾಗಿಯೂ, ಅನಂತರ ನಿಷೇಧದಲ್ಲಿ ಶಿಥಿಲವಾದ ಪ್ರಯತ್ನವುಳ್ಳದ್ದಾಗಿಯೂ, ಹಾಗೆಯೇ ವಕ್ರತೆಯಿಲ್ಲದಿರುವದಾಗಿಯೂ, ಆ ಮೇಲೆ ಪ್ರೇಮರಸ ಪರಿಪೂರಿತವಾಗಿಯೂ, ಆ ತರುವಾಯ ಹೇಳಲಶಕ್ಯವಾದ ಏಕಾಂತ ವಿಹಾರಗಳ ಪ್ರೌಢಿಮೆಯುಳ್ಳದ್ದಾಗಿಯೂ, ತದನಂತರದೊಳು ತಡೆಯಿಲ್ಲದ ಕುಚಕುಂಭಾದ್ಯಾಲಿಂಗನಾದಿ ವಿವಿಧ

ವಿಲಾಸಗಳಿಂದ ಪೆರಮಾನಂದವುಳ್ಳದ್ದಾಗಿಯೂ ಇರುವದರಿಂದಲೇ ಅತ್ಯಂತ ಮನೋಹರವಾದದ್ದೆಂದಾಶಯವು. .... ॥೨೪॥

ಶ್ಲೋ॥ ಉರಸಿನಿಪತಿತಾನಾಂಸ್ರಸ್ತಧಮ್ಮಿಲ್ಲಕಾನಾಂ ಮುಕುಳಿತನಯನಾ
ನಾಂಕಿಂಚಿದುನ್ಮೀಲಿತಾನಾಂ ॥ ಉಪರಿಸುರತಖೇದಸ್ವಿನ್ನಗಂಡಸ್ಥ
ಲಾನಾಮಧರಮಧುವಧೂನಾಂಭಾಗ್ಯವಂತಃಪಿಬಂತಿ ॥೨೫॥

ಟೀ॥ ಸಂಭೋಗ ವಿಶೇಷಗಳಲ್ಲೊಂದು ಬಂಧವನ್ನು ವಿಶೇಷಿಸುತ್ತಾನೆ— ಉರಸಿ=ವಕ್ಷಸ್ಥಲದಲ್ಲಿ, ನಿಪತಿತಾನಾಂ=ಬಿದ್ದಿರುವ, ಸ್ರಸ್ತ=ಬಿಚ್ಚಿಹೋದ, ಧಮ್ಮಿಲ್ಲಕಾನಾಂ=ಕೂದಲುಗಳುಳ್ಳ, ಮುಕುಳಿತ=ಮುಚ್ಚಲ್ಪಟ್ಟ, ನಯನಾನಾಂ=ನೇತ್ರಗಳುಳ್ಳ, ಕಿಂಚಿತ್=ಕೊಂಚವಾಗಿ, ಉನ್ಮೀಲಿತಾನಾಂ=ತೆರೆಯುವಿಕೆಯುಳ್ಳ, ಉಪರಿ ಸುರತ=ಪುರುಷಾಯಿತದಿಂದುಂಟಾದ, ಖೇದ=ಶ್ರಮದಿಂದ, ಸ್ವಿನ್ನ=ಬೆವರ್ತ, ಗಂಡಸ್ಥಲಾನಾಂ=ಕಪೋಳಗಳುಳ್ಳ, ವಧೂನಾಂ=ಪ್ರಿಯತಮೆಯರಸಂಬಂಧವಾದ, ಅಧರ=ತುಟಿಯಲ್ಲಿರುವ, ಮಧು=ಮಧುರಸವನ್ನು, ಭಾಗ್ಯವಂತಃ=ಪುಣ್ಯಶಾಲಿಗಳು, ಪಿಬಂತಿ=ಪಾನಮಾಡುತ್ತಾರೆ, .... ... ॥೨೫॥

ತಾ॥ ವಕ್ಷಸ್ಥಲದೊಳು ಮಲಗಿ ತಲೆಯ ಎಣೆಗಂಟು ಬಿಚ್ಚಿಹೋಗಿ ಕಣ್ಣು ಸ್ವಲ್ಪ ಮುಚ್ಚಿ ಮುಚ್ಚದ ಹಾಗಿರುತ್ತ, ಉಪರಿಸುರತದ ಆಯಾಸದಿಂದ ಬೆವರಿದ ಕಪೋಲಗಳುಳ್ಳ ಸರ್ವಾಂಗ ಸುಂದರಿಯರ ಅಧರಾಮೃತವನ್ನು ಪಾನಮಾಡುವವರು ಭಾಗ್ಯವಂತರಾದ ಪುರುಷರಲ್ಲವೆ ? ಸಾಮಾನ್ಯರಿಗೆ ಸರ್ವಥಾ ಸಂಭವಿಸುವದಿಲ್ಲವು — .... ॥೨೫॥

ಶ್ಲೋ॥ ಆಮೀಲಿತನಯನಾನಾಂಯಸ್ಸುರತರಸೋನುಸಂವಿದಂಭಾತಿ । ಮಿ
ಥುನೈರ್ಮಿಥೋವಧಾರಿತಮವಿತಥಮಿದಮೇವಕಾಮನಿರ್ವಹಣಂ ॥

ಟೀ॥ ಆಮೀಲಿತನಯನಾನಾಂ=ಸ್ವಲ್ಪವಾಗಿ ಮುಚ್ಚಲ್ಪಟ್ಟ ಕಣ್ಣುಗಳುಳ್ಳ ಕಾಮಿನಿಯರ, ಯಃ=ಯಾವ, ಸುರತರಸಃ=ಸಂಭೋಗಾಸ್ವಾದವು, ಸಂವಿದಂ=ತಿಳುವಳಿಕೆಯನ್ನು, ಅನು=ಅನುಸರಿಸಿ, ಭಾತಿ=ಪ್ರಕಾಶಿಸುವದೋ, ಮಿಥುನೈಃ=ರಸಜ್ಞರಾದ ಸ್ತ್ರೀಪುರುಷರಿಂದ, ಮಿಥಃ=ಪರಸ್ಪರವಾಗಿ, ಅವಧಾರಿತಂ=ತಿಳಿಯಲ್ಪಡುವ, ಇದಮೇವ=ಇದೇ, ಕಾಮ=ಕಾಮಪುರುಷಾರ್ಥದ, ನಿರ್ವಹಣಂ=ಪ್ರತಿಷ್ಠೆಯು. ... .... .... ॥೨೬॥

ತಾ॥ ಸಂಭೋಗಕಾಲದೊಳು ಸುಖಪಾರವಶ್ಯದಿಂದ ಸ್ವಲ್ಪವಾಗಿ ಮುಚ್ಚಲ್ಪಟ್ಟ ನಯನಗಳುಳ್ಳ ಕಾಮಿನಿಯರ ಸುರತ ಸ್ವಾರಸ್ಯವೆಂಬದ್ದು

ಇದು ಇಂಥಾದ್ದೆಂಬದಾಗಿ ಆ ಸ್ತ್ರೀಪುರುಷರಿಬ್ಬರೂ ಪರಸ್ಪರವಾಗಿ ತಿಳಿದು ಅನುಭವಿಸಿದರೆ ಅದೇ ಸಾರ್ಥಕವಾದ ಕಾಮಪುರುಷಾರ್ಥವಲ್ಲದೆ ಅಜ್ಞಭಾವದಿಂದನುಭವಿಸುವಿಕೆಯೆಂಬುದು ಕೇವಲನಿಷ್ಫಲವೆಂದರಿವುದು.॥೨೬॥

ಶ್ಲೋ॥ ಇದಮನುಚಿತಮಕ್ರಮಶ್ಚ ಪುಂಸಾಂಯದಿಹ ಜರಾಸ್ವಪಿಮಾನ್ಮಥಾವಿಕಾರಾಃ ॥ ತದಪಿಚನಕೃತಂನಿತಂಬಿನೀನಾಂಸ್ತನಪತನಾವಧಿ ಜೀವಿತಂರತಂವಾ .... .... ॥೨೭॥

ಟೀ॥ ಸಂಭೋಗಾವಧಿಯನ್ನು ಸೂಚಿಸುತ್ತಾನೆ—ಇಹ=ಈ ಲೋಕದಲ್ಲಿ ಪುಂಸಾಂ=ಪುರುಷರಿಗೆ, ಇದಂ=ಇದು, ಅನುಚಿತಂ=ಅನ್ಯಾಯವು, ಅಕ್ರಮಶ್ಚ=ಅವ್ಯವಸ್ಥೆಯು, ಜರಾಸು=ವಾರ್ಧಕಾವಸ್ಥೆಗಳಲ್ಲಿಯೂ, ಮಾನ್ಮಥಾಃ=ಮನ್ಮಥನ ಸಂಬಂಧವಾದ, ವಿಕಾರಾಃ=ಆಸಕ್ತಿ ವಿಶೇಷಗಳು, ನಿತಂಬಿನೀನಾಂ=ಅಂಗನೆಯರಿಗೆ, ಸ್ತನ=ಉರೋಜಗಳ, ಪತನ=ಜೋಲುಬೀಳುವಿಕೆಯು, ಅವಧಿ=ವರೆಗೂ, ಜೀವಿತಂ=ಬದುಕುವಿಕೆಯು, ರತಂವಾ=ಸಂಭೋಗವು, ಇತಿಯತ್=ಎಂಬದು ಯಾವದೋ, ತದಪಿ=ಅದು, ನಕೃತಂ=ಮಾಡಲ್ಪಡಲಿಲ್ಲವು, ... ॥೨೭॥

ತಾ॥ ಪುರುಷರಿಗೆ ಮಾತ್ರ ಮುಪ್ಪಿನಲ್ಲಿಯು ಸಂಭೋಗಾಭಿಲಾಷೆಗಳನ್ನುಂಟುಮಾಡಿರುವದು ಅಕ್ರಮವಾಗಿಯೂ ಅನ್ಯಾಯವಾಗಿಯೂ ಇರುವದು, ಏಕೆಂದರೆ, ಕಾಮಿನಿಯರಿಗೆ ಕುಚಗಳು ಲಂಬಾಯಮಾನಗಳಾಗುವವರೆಗೂ ಅಥವಾ ಜೀವಿತಕಾಲದವರಿಗೂ ಸುರತವು ಸುಂದರವಾಗಿಯೂ ಸುಖಕರವಾಗಿಯೂಇರುವಂತೆ, ಚತುರಾನನನು ಚಾತುರ್ಯದಿಂದನಿರ್ಮಿಸಿದ್ದರೆ ಬಹು ಮನೋಹರವಾಗಿರುತ್ತಿತ್ತು. ಎಂದರೆ ಯುವತಿಯು ಸಹವಾಸವು ಸುಖಾವಹವೆಂದಾಶಯವು .... ॥೨೭॥

ಶ್ಲೋ॥ ರಾಜಂಸ್ತೃಷ್ಣಾಂಬುರಾಶೇರ್ನಹಿಜಗತಿ ಗತಃಕಶ್ಚಿದೇವಾವಸಾನಂ ಕೋವಾರ್ಥೋರ್ಥೈಃಪ್ರಭೂತೈಃಸ್ವವಪುಷಿಗಳತೇಯೌವನೇಸಾನುರಾಗೇ ॥ ಗಚ್ಛಾಮಸ್ಸದ್ಮತಾವದ್ವಿಕಸಿತಕುಮುದೇಂದೀವರಾಲೋಕಿನೀನಾಮಾಕ್ರಮ್ಯಾಕ್ರಮ್ಯರೂಪಂಝಡಿತಿನಜರಯಾಲುಪ್ಯತೇಪ್ರೇಯಸೀನಾಂ .... .... ॥೨೮॥

ಟೀ ॥ ರಾಜಸೇವಾಸಕ್ತಿಯಿಂದ ದೇಶಾಂತರವಾಸಿಯಾದ ಒಬ್ಬಾನೊಬ್ಬನ ವಚನವನ್ನು ಅಭಿನಯಿಸಿ ಪೇಳುತ್ತಾನೆ—ಹೇರಾಜನ್=ಎಲೈಅರಸೇ, ಜಗತಿ=ಲೋಕದಲ್ಲಿ, ಕಶ್ಚಿದೇವ=ಯಾವನೊಬ್ಬ, ಪುಮಾನ್=ಪುರುಷನು, ತೃಷ್ಣಾ=ಆಶೆಯೆಂಬ,

ಅಂಬುರಾಶೇಃ=ಸಮುದ್ರದ, ಅವಸಾನಂ=ಪಾರವನ್ನು, ನಗತಃ=ಹೊಂದಲಿಲ್ಲವು, ಸ್ವವಪುಷಿ=ತನ್ನ ಶರೀರದಲ್ಲಿ, ಸಾನುರಾಗೇ=ಸಂಭೋಗಾಸಕ್ತಿಯಿಂದೊಡಗೂಡಿದ, ಯೌವನೇ=ಪ್ರಾಯವು, ಗಳಿತೇ=ಶಿಥಿಲವಾಗುತ್ತಿರಲಾಗಿ, ಪ್ರಭೂತೈಃ=ವಿಶೇಷಗಳಾದ, ಅರ್ಥೈಃ=ದ್ರವ್ಯಗಳಿಂದ, ಕೋವಾರ್ಥಃ=ಏನುಪ್ರಯೋಜನವು. ಯಾವತ್=ಎಷ್ಟರೊಳಗಾಗಿ, ವಿಕಸಿತ=ಅರಳಿದ, ಕುಮುದ=ಕುಮುದಪುಷ್ಪಗಳು, ಇಂದೀವರ=ಕನ್ನೈದಿಲೆಗಳಂತೆ, ಆಲೋಕಿನೀನಾಂ=ನೋಟವುಳ್ಳ, ಪ್ರೇಯಸೀನಾಂ=ವಲ್ಲಭೆಯರ, ರೂಪಂ=ಸೌಂದರ್ಯವು, ಆಕ್ರಮ್ಯಾಕ್ರಮ್ಯ=ಪದೇಪದೇ ಆಕ್ರಮಿಸಿ, ಜರಸಾ=ಮುಪ್ಪಿನಿಂದ, ನಲುಪ್ಯತೇ=ಲೋಪ ಮಾಡಲ್ಪಡುವದಿಲ್ಲವೋ, ತಾವತ್=ಅಷ್ಟರೊಳಗಾಗಿ, ಝಡಿತಿ=ಜಾಗ್ರತೆಯಾಗಿ, ಸದ್ಮ=ಮನೆಯನ್ನು ಕುರಿತು, ಗಚ್ಛಾಮಃ=ಹೋಗೋಣ. ... .... ... ||೨೮||

ತಾ|| ಎಲೈ ದೊರೆಯೇ! ಲಾಲಿಸು—ಈ ಲೋಕದಲ್ಲಿ ಆಶೆಯೆಂಬ ಸಾಗರಕ್ಕೆ ಪಾರವೇ ಇಲ್ಲ. ಮತ್ತು ಈ ಶರೀರದಲ್ಲಿರುವ ನಾನಾವಿಧವಾದ ಸುಖಾನುಭವಕ್ಕೆ ಸಾಧಕವಾದ ಪ್ರಾಯವು ಗಳಿತವಾಗಿ ಹೋದ ತರುವಾಯ ಎಷ್ಟು ಸಂಪತ್ತಿದ್ದರೂ ವ್ಯರ್ಥ. ಆದುದರಿಂದಲೆ ವಿಕಸಿತವಾದ ಕುಮುದೇಂದೀವರಗಳಂತೆ ಆಲೋಕನವುಳ್ಳ ನಮ್ಮ ಕಾಮಿನಿಯರ ಸೌಂದರ್ಯವು ಮುಪ್ಪಿನಿಂದಾಕ್ರಮಿಸಲ್ಪಟ್ಟು ನಷ್ಟವಾಗುವದರೊಳಗಾಗಿ ಮನೆಯನ್ನು ಹೊಂದಿ ಸುಖಾನುಭವವನ್ನು ಮಾಡುವದೇ ಲೇಸೆಂದು ತಿಳಿಯತಕ್ಕದ್ದು. .... .... .... ||೨೮||

ಶ್ಲೋ|| ರಾಗಸ್ಯಾಗಾರಮೇಕಂನರಕಶತ ಮಹಾದುಃಖಸಂಪ್ರಾಪ್ತಿಹೇತು
ರ್ಮೋಹಸ್ಯೋತ್ಪತ್ತಿಬೀಜಂಜಲಧರಪಟಲಂಜ್ಞಾನತಾರಾಧಿಪಸ್ಯ ||
ಕಂದರ್ಪಸ್ಯೈಕಮಿತ್ರಂಪ್ರಕಟಿತ ವಿವಿಧಸ್ಪಷ್ಟದೋಷಪ್ರಬಂ
ಧಂಲೋಕೇಸ್ಮಿನ್ನಹ್ಯನರ್ಥ ವ್ರಜಕುಲಭವನಂಯೌವನಾದನ್ಯ
ದಸ್ತಿ .... .... .... ||೨೯||

ಟೀ|| ಪ್ರಾಯವು ಸಕಲಾನರ್ಥನಿದಾನವೆಂದು ಹೇಳುತ್ತಾನೆ.—ರಾಗಸ್ಯ=ಮಾತ್ಸರ್ಯಕ್ಕೆ, ಏಕಂ=ಮುಖ್ಯವಾದ, ಅಗಾರಂ=ಮನೆಯಾದ, ನರಕಶತ=ರೌರವಾದಿ ನೂರಾರು ನರಕಗಳಲ್ಲಿ ಉಂಟಾಗುವ, ಮಹಾ=ವಿಪರೀತವಾದ, ದುಃಖ=ಯಾತನೆಗಳ, ಸಂಪ್ರಾಪ್ತಿ=ಲಾಭಕ್ಕೆ. ಹೇತುಃ=ಕಾರಣವಾದ, ಮೋಹಸ್ಯ=ಭ್ರಾಂತಿಯು, ಉತ್ಪತ್ತಿಬೀಜಂ=ಜನನ ಬೀಜವಾದ, ಜ್ಞಾನತಾರಾಧಿಪಸ್ಯ=ತಿಳುವಳಿಕೆಯೆಂಬ ಚಂದ್ರನಿಗೆ ಜಲಧರಪಟಲಂ=ಮೇಘಪುಂಜ ಸಮಾನವಾದ, ಕಂದರ್ಪಸ್ಯ=ಮನ್ಮಥನಿ

ಗೆ, ಏಕಮಿತ್ರಂ=ಮುಖ್ಯ ಸ್ನೇಹಸ್ಥಾನವಾದ, ಪ್ರಕಟಿತ=ಪ್ರಸಿದ್ಧವಾದ, ವಿವಿಧ=ನಾನಾಪ್ರಕಾರವಾದ, ಸ್ಪಷ್ಟ=ನಿಸ್ಸಂಶಯವಾದ, ದೋಷ=ದೋಷಗಳ, ಪ್ರಪಂಚಃ=ರಾಶಿಯಾದ, ಯೌವನಾತ್=ಪ್ರಾಯಕ್ಕಿಂತಲೂ, ಅನ್ಯತ್=ಮತ್ತೊಂದು ಅನರ್ಥ=ಕೇಡುಗಳ, ವ್ರಜ=ಸಮುದಾಯಗಳಿಗೆ, ಕುಲಭವನಂ=ಜನ್ಮಭೂಮಿಯು ನಾಸ್ತಿ=ಇಲ್ಲವು, ... ... ... ||೨೯||

ತಾ|| ಮಾತ್ಸರ್ಯಕ್ಕೆ ಅಥವಾ ವಿಷಯಾಭಿಲಾಷೆಗೆ ಮುಖ್ಯಸ್ಥಾನವಾಗಿ, ರೌರವಾದಿ ನರಕಗಳಲ್ಲುಂಟಾಗುವ ವಿಚಿತ್ರವಾದ ಯಮಯಾತನೆಗಳ ಪ್ರಾಪ್ತಿಗೆ ಮೂಲವೆಂದೆನಿಸಿ,ಭ್ರಾಂತಿಗೆ ಮೂಲಕಾರಣವಾಗಿ, ವಿವೇಕದಪ್ರಕಾಶಕ್ಕೆ ಲೇಶವಾದರೂ ಆಸ್ಪದವನೀಯದೆ, ಕಾಮನಿಗೆ ಮುಖ್ಯಬಂಧುವಾಗಿ, ಮತ್ತು ಲೋಕಪ್ರಸಿದ್ಧವಾಗಿರುವ ಪರಮದೋಷಗಳಿಗೆ ತಾರುಮನೆಯಾಗಿಯೂ ಇರುವ ಪ್ರಾಯಕ್ಕಿಂತಲೂ ಮತ್ತೊಂದು ಕೇಡುಗಳಗಾಕರವಾದ ಎಡೆಯಿಲ್ಲವು. ಆದಕಾರಣ ಬುದ್ಧಿವಂತನು ಈಪ್ರಾಯದೊಳು ಉಪಾಯದಿಂದ ಅನರ್ಥಗಳಗಾಸ್ಪದವನುಕೊಡದೆ ವಿವೇಕಿಯಾಗಿರಬೇಕೆಂದು ಪರ್ಯವಸಿತವಾದ ತಾತ್ಪರ್ಯವು. .... .... ||೨೯||

ಶ್ಲೋ|| ಶೃಂಗಾರದ್ರುಮನೀರದೇಪ್ರಸೃಮರಕ್ರೀಡಾರಸಸ್ರೋತಸಿಪ್ರದ್ಯು
ಮ್ನಪಿ ್ರಯಬಾಂಧವೇಚತುರವಾಙ್ಮುಕ್ತಾಫಲೋದನ್ವತಿ || ತನ್ವೀ
ನೇತ್ರಚಕೋರಪಾರ್ವಣವಿಧೌ ಸೌಭಾಗ್ಯಲಕ್ಷ್ಮೀನಿಧೌ ಧನ್ಯಃ
ಕೋಪಿನವಿಕ್ರಿಯಾಂಕಲಯತೇಪ್ರಾಪ್ತೇನವೇಯೌವನೇ ||೩೦||

ಟೀ|| ಅನೇಕಾನರ್ಥಗಳಿಗೆ ಕಾರಣವಾದ ತಾರುಣ್ಯದಲ್ಲಿ ಅನೇಕರಲ್ಲೊಬ್ಬನು ವಿಕಾರವನ್ನುಹೊಂದದೆ ಇರುವನೆಂದು ಪೇಳುತ್ತಾನೆ—ಶೃಂಗಾರ=ಶೃಂಗಾರ ರಸವೆಂಬ, ದ್ರುಮ=ವೃಕ್ಷಕ್ಕೆ, ನೀರದೆ=ಮೇಘದಂತಿರುವ, ಪ್ರಸೃಮರ=ಅವಿಚ್ಛಿನ್ನವಾದ ಕ್ರೀಡಾವಿಕಾರಗಳೆಂಬ, ರಸ=ರಸಗಳ, ಸ್ರೋತಸಿ=ಪ್ರವಾಹರೂಪವಾದ, ಪ್ರದ್ಯುಮ್ನ=ಮನ್ಮಥನಿಗೆ, ಪ್ರಿಯಬಾಂಧವೆ=ಮುಖ್ಯಬಂಧುವಾದ, ಚತುರ=ಕುಶಲವಾದ, ವಾಕ್=ಮಾತುಗಳೆಂಬ, ಮುಕ್ತಾಫಲ=ಮುತ್ತುಗಳಿಗೆ, ಉದನ್ವತಿ=ಸಮುದ್ರಪ್ರಾಯವಾದ, ತನ್ವೀ=ಕೃಶಾಂಗಿಯರ, ನೇತ್ರ=ನಯನಗಳೆಂಬ, ಚಕೋರ=ಚಕ್ರವಾಕಪಕ್ಷಿಗಳಿಗೆ, ಪಾರ್ವಣವಿಧೌ=ಪೂರ್ಣಿಮಾ ಚಂದ್ರನಂತಿರುವ, ಸೌಭಾಗ್ಯಲಕ್ಷ್ಮೀ=ಸೌಂದರ್ಯಸಂಪತ್ತಿಗೆ, ನಿಧೌ=ನಿಕ್ಷೇಪವಾದ, ನವ=ನೂತನವಾದ, ಯೌವನ=ಪ್ರಾಯವು, ಪ್ರಾಪ್ತೇಸತಿ=ಉಂಟಾಗುತ್ತಿರಲಾಗಿ, ಧನ್ಯಃ=ಸುಕೃತಿಯಾದ, ಕೋಪಿ=ಒಬ್ಬನೊಬ್ಬನು, ವಿಕ್ರಿಯಾಂ=ವಿಕಾರವನ್ನು,ನಕಲಯತೇ=ಹೊಂದುವವಿಲ್ಲವು. .... .... ... ||೩೦||

ತಾ॥ ಅವೇಕ್ಷಣವಾದ ಶೃಂಗಾರರಸಕ್ಕೆ ಪೋಷಕವಾಗಿ, ವಿಚಿತ್ರವಾದ ವಿಲಾಸಗಳಿಗಾಕಾರನೆಂದೆನಿಸಿ, ಚತುರವಾದ ವಚನಗಳಿಗೆ ತೌರುಮನೆಯಾಗಿ, ಕೃಶಾಂಗಿಯರಾದ ಅಂಗನೆಯರ ನಯನಗಳಿಗಾನಂದವನ್ನುಂಟುಮಾಡುತ, ಸರ್ವೋತ್ತಮವಾದ ಸೌಂದರ್ಯಸಂಪತ್ತಿಗೆಡೆಯಾಗಿಯೂ ಇರುವ ನೂತನವಾದ ಪ್ರಾಯವು ಬಂದ ಸಂದರ್ಭದೊಳು ಲೋಕದಲ್ಲಿ ಅನೇಕರಲ್ಲೊಬ್ಬ ಮಹಾ ಸುಕೃತ ಶಾಲಿಯಾದ ವಿವೇಕಿಯು ವಿವಿಧವಾದ ವಿಕಾರವನ್ನೈದದೆ ಸನ್ಮಾರ್ಗದೊಳಿರುವನಲ್ಲದೆ ಸಾಧಾರಣವಾಗಿ ಎಲ್ಲರೂ ಇರಲಾರರೆಂದು ಭಾವವು. .... .... ॥೨೯॥

ಶ್ಲೋ॥ ಸಂಸಾರೇಸ್ಮಿನ್ನಸಾರೇಕುನೃಪತಿಭವನದ್ವಾರಸೇವಾಕಳಂಕವ್ಯಾ
ಸಂಗವ್ಯಸ್ತಧೈರ್ಯಂಕಥಮಮಲಧಿಯೋಮಾನಸಂಸಂವಿದಧ್ಯುಃ ॥
ಯದ್ಯೇತಾಃಪ್ರೋದ್ಯದಿಂದುದ್ಯುತಿನಿಚಯಭೃತೋನಸ್ಯುರಂಭೋ
ಜನೇತ್ರಾಃ ಪ್ರೇಂಖತ್ಕಾಂಚೀಕಲಾಪಾಸ್ತನಭರವಿನಮನ್ಮಧ್ಯಭಾ
ಜಸ್ತರುಣ್ಯಃ ॥ .... .... .... ॥೩೦॥

ಟೀ॥ ಕಾಮಿನೀ ಪರಿತ್ಯಾಗವಂ ಮಾಡಲು ತಾರುಣ್ಯವನರ್ಥಹೇತುವಲ್ಲವೆಂದು ಸೂಚಿಸುತ್ತಾನೆ—ಪ್ರೋದ್ಯತ್=ಉತ್ಪನ್ನವಾದ, ಇಂದು=ಚಂದ್ರನಂತೆ, ದ್ಯುತಿ=ಕಾಂತಿಯುಳ್ಳ, ನಿಚಯ=ವಸ್ತ್ರಗಳನ್ನು, ಭೃತಃ=ಧರಿಸುವ, ಅಂಭೋಜನೇತ್ರಾಃ=ಕಮಲದಂತೆನೇತ್ರವುಳ್ಳ, ಪ್ರೇಂಖತ್=ಚಲಿಸುವ, ಕಾಂಚೀ=ಡಾಬೆಂಬ, ಕಲಾಪಾಃ=ಆಭರಣವುಳ್ಳ, ಸ್ತನ=ಕುಚಗಳ, ಭರ=ಭಾರದಿಂದ, ವಿನಮತ್=ನಮ್ರವಾದ. ಮಧ್ಯ=ನಡುವನ್ನು, ಭಾಜಃ=ಹೊಂದಿರುವ, ತರುಣ್ಯಃ=ಯುವತಿಯರು, ನಸ್ಯುಃ=ಇಲ್ಲದಿದ್ದರೆ, ಅಮಲಧಿಯಃ=ನಿರ್ಮಲವಾದ ಬುದ್ಧಿಯುಳ್ಳ ಮಹನೀಯರು, ಮಾನಸಂ=ನಿಜಚಿತ್ತವನ್ನು, ಅಸಾರೆ=ನಿಸ್ಸಾರವಾದ, ಅಸ್ಮಿನ್=ಈ, ಕುನೃಪತಿ=ಕುತ್ಸಿತರಾಜರ, ಭವನ=ಮನೆಗಳ, ದ್ವಾರ=ಬಾಗಿಲುಗಳಲ್ಲಿ, ಸೇವಾ=ಅನುಸರಿಸುವಿಕೆಯೆಂಬ, ಕಳಂಕೆ=ಅಪವಾದದಲ್ಲಿ, ವ್ಯಾಸಂಗ=ಆಸಕ್ತಿಯಿಂದ, ವ್ಯಸ್ತ=ವ್ಯತ್ಯಸ್ತವಾದ, ಧೈರ್ಯಂ=ಧೀರತ್ವವುಳ್ಳದ್ದನ್ನಾಗಿ, ಕಥಂಸಂವಿದಧ್ಯುಃ=ಹೇಗೆ ಮಾಡುತ್ತಿದ್ದರು? ॥೩೦॥

ತಾ॥ ಉತ್ತಮವಾದ ಡಾಬು ಮೊದಲಾದ ಆಭರಣಗಳುಳ್ಳವರಾಗಿ, ಕೆಂದಾವರೆಗಳಂತೆ ಕಣ್ಣುಗಳಿಂದ ಶೋಭಿಸುತ್ತಲಿರುವ ಪೂರ್ಣಚಂದ್ರಾನನೆಯರಾದ ತರುಣಿಯರೇ ಇಲ್ಲದೆ ಹೋಗಿದ್ದರೆ, ನಿರ್ಮಲವಾದ ಮತಿಯುಳ್ಳ ಯಾವ ಮಹನೀಯರು ಈ ಜನನ ಮರಣ ಪ್ರವಾಹರೂಪವಾದ ಸಂಸಾರದಲ್ಲಿದ್ದುಕೊಂಡು, ತಮ್ಮ ಮನಸ್ಸನ್ನು ಕುತ್ಸಿತರಾದ ಭೂಮಿಪಾಲ

ಕರ ಮನೆಯ ಹೊರಬಾಗಿಲೊಳು ಬಹು ಕಾಲಂಕದಿಂದ ಕಾಯುವಿಕೆಯೆಂ
ಬ ಸೇವೆಯಿಂದ ಮಲಿನವಾದದ್ದನ್ನಾಗಿ ಮಾಡಿಕೊಂಡಾರು ? ಎಂದರೆ ಈ
ಕಾಮಿನಿಯರೇ ಅನರ್ಥಕ್ಕೆ ಮೂಲವಾದ ಕಾರಣ ಉಪಾಯವಾಗಿ ಅವ
ರಿಂದ ಮನಸ್ಸನ್ನು ಹಿಂತಿರುಗಿಸಬೇಕೆಂದು ಭಾವವು. .... ॥೩೧॥

ಶ್ಲೋ॥ ಸಿದ್ಧಾಧ್ಯಾಸಿತಕಂದರೆಹರವೃಷಸ್ಕಂಧಾವರುಗ್ಣದ್ರುಮೆಗಂಗಾಧೌ
ತಶಿಲಾತಲೆಹಿಮವತಸ್ಸ್ಥಾನೆಸ್ಥಿತೇಶ್ರೇಯಸಿ ॥ ಕಃಕುರ್ವೀತಶಿ
ರಃಪ್ರಣಾಮಮಲಿನಂಮ್ಲಾನಂಮನಸ್ವೀಜನೋ ಯದ್ವಿತ್ರಸ್ತಕು
ರಂಗಶಾಬನಯನಾನಸ್ಯುಸ್ಸ್ಮರಾಸ್ತ್ರಂಸ್ತ್ರಿಯಃ ॥೩೨॥

ಟೀ॥ ಸಿದ್ಧ=ಯೋಗಿಗಳಿಂದ, ಅಧ್ಯಾಸಿತ=ಆಶ್ರಯಿಸಲ್ಪಟ್ಟ, ಕಂದರೆ=ಗುಹೆ
ಗಳುಳ್ಳ, ಹರ=ಈಶ್ವರನ, ಸ್ಕಂದ=ಹೆಗಲಿನಿಂದ, ಅವರುಗ್ಣ=ಭಗ್ನವಾದ. ದ್ರುಮೆ=
ವೃಕ್ಷವುಳ್ಳ, ಗಂಗಾ=ಭಾಗೀರಥಿಯಿಂದ, ಧೌತ=ಶುದ್ಧವಾದ, ಶಿಲಾತಲೆ=ಪಾಷಾಣ
ಪ್ರದೇಶವುಳ್ಳ, ಶ್ರೇಯಸಿ=ಶ್ರೇಯಸ್ಕರವಾದ, ಹಿಮವತಃ=ಹಿಮವತ್ಪರ್ವತದ, ಸ್ಥಾ
ನೆ=ಪ್ರದೇಶವು, ಸ್ಥಿತೆ=ಇರುತ್ತಿರಲಾಗಿ, ವಿತ್ರಸ್ತ=ಭಯಪಟ್ಟ, ಕುರಂಗಶಾಬ=ಜಿಂ
ಕೆಯಮರಿಯ ನಯನದಂತೆ, ನಯನಾಃ=ಕಣ್ಣುಗಳುಳ್ಳ, ಸ್ಮರಾಸ್ತ್ರಂ=ಮನ್ಮಥನಿಗೆ
ಬಾಣವಾದ, ಸ್ತ್ರಿಯಃ=ಕಾಮಿನಿಯರು, ನಸ್ಯುರ್ಯದಿ=ಇಲ್ಲದೆ ಇದ್ದರೆ, ಮನಸ್ವೀ=
ಧೀರನಾದ, ಕಃಜನಃ=ಯಾವ ಮನುಷ್ಯನು, ಶಿರಃ=ತನ್ನ ಶಿರಸ್ಸನ್ನು, ಪ್ರಣಾ
ಮ=ಕುರಾಜವಂದನದಿಂದ, ಮಲಿನಂ=ಪ್ರತಿಷ್ಠಾರಹಿತವೆನಿಸುವ, ಮ್ಲಾನಂ=ಹೀನ
ವಾದದ್ದನ್ನಾಗಿ, ಕುರ್ವೀತ=ಮಾಡಿಯಾನು ? .... ॥೩೨॥

ತಾ॥ ಮಹಾ ಯೋಗಿಗಳು ವಾಸಮಾಡುವ ಗುಹೆಗಳುಳ್ಳದ್ದಾಗಿ, ಹ
ರ ಸಾನ್ನಿಧ್ಯದಿಂದೆಸೆಯುತ, ಭಾಗೀರಥೀಜಲದಿಂದ ಶುದ್ಧವಾದ ಶಿಲಾತಲಗ
ಳುಳ್ಳೋಣದರಿಂದಲೇ ಶ್ರೇಯಸ್ಕರವಾದ ಮೇರುಗಿರಿಯ ಪ್ರದೇಶವು ಸಿದ್ಧ
ವಾಗಿರುವಲ್ಲಿ, ಅದನ್ನು ಬಿಟ್ಟು ಕಾಮನಿಗೆ ಕಠೋರವಾದ ಕಾರ್ಮುಕದಂ
ತಿರುವ ಕುರಂಗನಯನೆಯರಾದ ಕಾಮಿನಿಯರೇ ಇಲ್ಲದೆ ಹೋದರೆ, ಮ
ತ್ತೆ ಯಾವ ಧೀರನಾದ ಮನುಜನು ಕುತ್ಸಿತರಾದ ರಾಜರ ಬಳಿಗೆ ಹೋಗಿ
ಅವರಿಗೆ ನಮಸ್ಕರಿಸಿ ಅದರಿಂದ ತನ್ನ ಉತ್ತಮಾಂಗವನ್ನು ಹೀನವಾದದ್ದ
ನ್ನಾಗಿ ಮಾಡಿಕೊಳ್ಳುವನು? ಎಂದರೆ ಹರಿಣನಯನೆಯರಾದ ತರುಣಿಯರೇ
ಸರ್ವಾನರ್ಥಮೂಲವೆಂದಾಶಯವು. .... .... ॥೩೨॥

ಶ್ಲೋ॥ ಸಂಸಾರತವಪರ್ಯಂತಪದವೀನದವೀಯಸೀ ॥ ಅಂತರಾದುಸ್ತರಾನ
ಸ್ಯುರ್ಯದಿತೇಮದಿರೇಕ್ಷಣಾಃ ॥ .... ॥೩೩॥

ಟೀ॥ ಹೇಸಂಸಾರ=ಎಲೈ ಸಂಸಾರವೇ, ತವ=ನಿನ್ನ, ಪರ್ಯಂತಪದವೀ=ಮೊಕ್ಷದೇಶವು, ತೇ=ನಿನ್ನ, ಅಂತರಾ=ನಡುವೆ, ದುಸ್ತರಾಃ=ದಾಟಲಶಕ್ಯವಾದ ನದಿಗಳಂತಿರುವ, ಮದಿರೇಕ್ಷಣಾಃ=ಕಾಮಿನಿಯರು, ನಸ್ಯುರ್ಯದಿ=ಇಲ್ಲದಿದ್ದರೆ, ನದವೀಯಸೀ=ದೂರವಲ್ಲವು. .... .... ... ॥೩೩॥

ತಾ॥ ನಡುವೆ ಕುರಂಗನಯನೆಯರಾದ ಕಾಮಿನಿಯರೆಂಬ ದಾಟಲಶಕ್ಯವಾದ ಮಹಾನದಿಗಳೇ ಇಲ್ಲದೆಹೋದರೆ, ಸಂಸಾರವೆಂಬ ಸಾಗರವನ್ನು ದಾಟುವದು ಲೇಶವೂ ಪ್ರಯಾಸವಲ್ಲವು. ಎಂದರೆ ಜನನಮರಣ ಪ್ರವಾಹರೂಪವಾದ ಸಂಸಾರ ಸಾಗರದೊಳು ಮುಳುಗಲು ಕಾಂತೆಯರೇ ಕಾರಣವೆಂದರಿವುದು. .... .... .... ॥೩೩॥

ಶ್ಲೋ॥ ದಿಶವನಹರಿಣೀಭ್ಯೋ ವಂಶಕಾಂಡಚ್ಛವೀನಾಂ ಕಬಳಮುಪಲಕೋಟಿಚ್ಛಿನ್ನಮೂಲಂ ಕುಶಾನಾಂ ॥ ಶುಕಯುವತಿಕಪೋಲಾಪಾಂಡು ತಾಂಬೂಲವಲ್ಲೀದಳಮರುಣನಖಾಗ್ರೈಃಪಾಟಿತಂವಾವಧೂಭ್ಯಃ॥

ಟೀ॥ ವನಹರಿಣೀಭ್ಯಃ=ಕಾಡಿನೊಳಿರುವ ಕುರಂಗಗಳಿಗೆ, ಉಪಲ=ಪಾಷಾಣಗಳ, ಕೋಟಿ=ಕೊನೆಯಿಂದ, ಛಿನ್ನ=ಕತ್ತರಿಸಲ್ಪಟ್ಟ, ಮೂಲಂ=ಬುಡವುಳ್ಳ, ವಂಶ=ಬಿದುರುಗಳ, ಕಾಂಡ=ದಂಡದಂತಿರುವ, ಛವೀನಾಂ=ಕಾಂತಿಯುಳ್ಳ, ಕುಶಾನಾಂ=ದರ್ಭೆಹುಲ್ಲುಗಳ, ಕಬಳಂ=ಗ್ರಾಸವನ್ನು, ದಿಶ=ಕೊಡು, ಅಥವಾ=ಹಾಗಿಲ್ಲದಿದ್ದರೆ, ವಧೂಭ್ಯಃ=ಪ್ರಿಯತಮೆಯರಿಗೆ, ಅರುಣ=ಕೆಂಪಾದ, ನಖ=ಉಗುರುಗಳ, ಅಗ್ರೈಃ=ಕೊನೆಗಳಿಂದ, ಪಾಟಿತಂ=ತುಂಡುಮಾಡಲ್ಪಟ್ಟ, ಶುಕಯುವತಿ=ಹೆಣ್ಣುಗಿಣಿಗಳ (ಶಕಯುವತಿ=ಶಕದೇಶಾಂಗನೆಯರ) ಕಪೋಲ=ಕೆನ್ನೆಯಂತೆ, ಆಪಾಂಡು=ಸ್ವಲ್ಪ ಶುಭ್ರವಾದ, ತಾಂಬೂಲವಲ್ಲೀದಳಂ=ವೀಳಯದೆಲೆಯನ್ನು, ದಿಶ=ಕೊಡು.

ತಾ॥ ವಿರಕ್ತಿಯುಂಟಾಗಿ ತಪಸ್ಸು ಮಾಡಬೇಕೆಂಬದಾಗಿ ಕೋರಿಕೆಯುಂಟಾದರೆ ಕಾಡಿಗೆ ಹೋಗಿ ವಾಸಮಾಡುತ್ತ ಅಲ್ಲಿರುವ ಹಸರು ಹುಲ್ಲನ್ನು ಕಲ್ಲಿನ ಕೊನೆಯಿಂದ ಕೊಯಿದು ಹರಿಣ ಶಿಶುಗಳಿಗೆ ಕಬಳವ ಮಾಡಿಕೊಡು, ಹಾಗಿಲ್ಲದೆ ಅನುರಕ್ತಿಯುಂಟಾಗಿದ್ದರೆ ಅತ್ಯಂತ ಎಳೆಯದಾಗಿರುವ ವೀಳಯದೆಲೆಗಳನ್ನು ಮಡಿಸಿ ನಿನ್ನ ಕಾಮಿನಿಯರಿಗೆಕೊಡುತ್ತ ಭೋಗವನ್ನಾದರೂ ಅನುಭವಿಸು, ಇಹಪರಗಳೆಂಬೆರಡು ಬಗೆಯಾದ ಸುಖದಿಂದಲೂ ಭ್ರಷ್ಟನಾಗಬಾರದೆಂದು ಭಾವವು. .... ॥೩೪॥

ಶ್ಲೋ॥ ಅಸಾರಾಸ್ಸರ್ವೇಽಕೀವಿರತಿವಿರಸಾಃಪಾಗವಿಷಯಾಜುಗುಪ್ಸ್ಯಂತಾಂ

ಯದ್ವಾನನುಸಕಲದೋಷಾಸ್ಪದಮಿತಿ ॥ ತಥಾಪ್ಯೇತದ್ಭೂಮೌನೆ
ಹಿಪರಹಿತಾತ್ಪುಣ್ಯಮಧಿಕಂ ನಚಾಸ್ಮಿನ್ಸಂಸಾರೇಕುವಲಯ ದೃ
ಶೋರಮ್ಯಮಪರಂ .... .... ॥೩೫॥

ಟೀ॥ ಜನ=ಎಲೈ ಜನಗಳಿರಾ, ತೇ=ಪ್ರಸಿದ್ಧಗಳಾದ, ಸರ್ವೇ=ಸಮಸ್ತವಾದ, ಪಾಪ=ಬಹುವಿಧಗಳಾದ, ವಿಷಯಾಃ=ಹೂವು ಗಂಧ ಹೆಣ್ಣು ಮೊದಲಾದ ವಿಷಯಗಳು, ಅಸಾರಾಃ=ಸಾರವಿಲ್ಲದವುಗಳು, ವಿರತಿ=ಪರಿಣಾಮದಲ್ಲಿ. ವಿರಸಾಃ=ಅನರ್ಥಕರಗಳು, ಯದ್ವಾ=ಅಥವಾ, ಸಕಲ=ಸಮಸ್ತವಾದ, ದೋಷ=ರಾಗದ್ವೇಷಾದಿ ದೋಷಗಳಿಗೆ, ಆಸ್ಪದಮ್=ಸ್ಥಾನವು, ಇತಿ=ಹೀಗೆಂದಾದರೂ, ಜುಗುಪ್ಸ್ಯಂತಾಂ=ಬಿಡಲ್ಪಡಲಿ, ತಥಾಪಿ=ಆದರೂ, ಏತದ್ಭೂಮೌ=ಈ ಭೂಮಂಡಲದಲ್ಲಿ, ಪರಹಿತಾತ್=ಪರೋಪಕಾರ ಮಾಡುವದಕ್ಕಿಂತಲೂ, ಅಧಿಕಂ=ಹೆಚ್ಚಾದ. ಪುಣ್ಯಂ=ಸುಕೃತವು. ನಾಸ್ತಿ=ಇಲ್ಲವು, ಅಸ್ಮಿನ್ಸಂಸಾರೆ=ಈ ಸಂಸಾರದೊಳಗೆ, ಕುವಲಯದೃಶಃ=ನೈದಿಲೆಯಂತೆ ನಯನವುಳ್ಳನಾರಿಗಿಂತಲೂ, ಅಪರಂ=ಮತ್ತೊಂದು, ರಮ್ಯಂ=ರಮಣೀಯವಾದ ವಸ್ತುವು, ನಚ=ಇಲ್ಲವು. ... ... ॥೩೫॥

ತಾ॥ ಎಲೈ ಜನಗಳಿರಾ! ಲಾಲಿಸಿರಿ—ಹೂವು, ಗಂಧ, ಹಣ್ಣು, ಹೆಣ್ಣು ಮೊದಲಾದ ವಿಷಯಗಳನ್ನು ಸಾರಶೂನ್ಯವಾದವುಗಳೆಂದೂ, ಅಥವಾ ಪರಿಣಾಮದೊಳು ಕೇಡನ್ನುಂಟುಮಾಡತಕ್ಕವುಗಳೆಂದೂ ಇಲ್ಲವೆ ರಾಗದ್ವೇಷ ಮೋಹಾದಿದೋಷಗಳಿಗೆ ಮುಖ್ಯಾಸ್ಪದವೆಂದಾದರೂ ತಿಳಿದು ಅವುಗಳನ್ನು ತ್ಯಾಗಮಾಡಬೇಕಾಗಿಯೇ ಇರುವದು ; ಆದರೂ ಈ ಭೂಲೋಕದಲ್ಲಿ ಪರೋಪಕಾರ ಮಾಡುವದಕ್ಕಿಂತಲೂ ಮತ್ತೊಂದುತ್ತಮವಾದದ್ದಿಲ್ಲವು. ಜನನಮರಣ ಪ್ರವಾಹರೂಪವಾದ ಸಂಸಾರದಲ್ಲಿಯಾದರೂ ಕನ್ನೈದಿಲೆಯಂತೆ ನಯನವುಳ್ಳ ತರುಣಿಗಿಂತಲೂ ಇನ್ನೊಂದು ರಮಣೀಯವಾದ ವಸ್ತುವು ಯಾವದೂ ಇಲ್ಲವು. .... ॥೩೫॥

ಶ್ಲೋ॥ ಮಾತ್ಸರ್ಯಮುತ್ಸಾರ್ಯವಿಚಾರ್ಯ ಕಾರ್ಯಮಾರ್ಯಾಸ್ಸಮರ್ಯಾದಮಿದಂ
ಬ್ರುವಂತು ॥ ಸೇವ್ಯಾನಿತಂಬಾಃಕಿಮುಭೂಧರಾಣಾಮುತಸ್ಮರ
ಸ್ಮೇರವಿಲಾಸಿನೀನಾಂ .... .... ॥೩೬॥

ಟೀ॥ ಆರ್ಯಾಃ=ಪಂಡಿತರು, ಮಾತ್ಸರ್ಯಂ=ಅಸೂಯೆಯನ್ನು, ಉತ್ಸಾರ್ಯ=ನಿಬಿಟ್ಟು, ಸ್ಮರ=ಮನ್ಮಥನಿಂದ. ಸ್ಮೇರ=ಹೊಳೆವ, ವಿಲಾಸಿನೀನಾಂ=ಸುಂದರಿಯರ ತಂಬಾಃ=ಕಟಿಪಶ್ಚಾದ್ಭಾಗಗಳು, ಸೇವ್ಯಾಃ=ಸೇವಿಸುವದಕ್ಕೆ ಯೋಗ್ಯವಾದವುಗಳೆ? ಭೂಧರಾಣಾಂ=ರಾಜರ, (ಪರ್ವತಗಳ) ನಿತಂಬಾಃ=ಕಟಿಪಶ್ಚಾದ್ಭಾಗಗಳು

(ಪ್ರಾಂತಭೂಮಿಗಳು) ಸೇವ್ಯಾಃ=ಸೇವಿಸುವದಕ್ಕೆ ಯೋಗ್ಯವಾದವುಗಳೆ? ವಿಚಾರ್ಯ=ವಿಚಾರವಮಾಡಿ, ಬ್ರುವಂತು=ಹೇಳಲಿ, .... .... ||೩೬||

ತಾ|| ಪ್ರಾಯವು ಪ್ರಾದುರ್ಭವಿಸಿ ಸಂಭೋಗದೊಳೌತ್ಸುಕ್ಯವನ್ನು ಸೂಚಿಸುವ ಮಂದಹಾಸದಿಂದ ಸುಂದರವಾದ ವದನಾರವಿಂದವುಳ್ಳ ಕಾಮಿನಿಯರ ಪೃಷ್ಠಭಾಗಗಳನ್ನು ಸೇವಿಸಬೇಕೇ? ಇಲ್ಲವೆ ಹಿಮಾಲಯದ ನಿತಂಬಪ್ರದೇಶವನ್ನು ಸೇವಿಸಬೇಕೆ? ಆರ್ಯರಾದವರು ಅಸೂಯೆಯನ್ನು ತೊರೆದು ವಿಚಾರವಮಾಡಿ ಇವೆರಡರಲ್ಲಿ ಅವಶ್ಯಕರ್ತವ್ಯವಾದದ್ದನ್ನು ಹೇಳಲಿ, ಎಂದರೆ ವೈರಾಗ್ಯ ಸಂಪತ್ತು ಒಡಗೂಡಿದ್ದ ಪರ್ವತ ಪ್ರಾಂತಗಳನ್ನಾಶ್ರಯಿಸಿ ತಪಸ್ಸು ಮಾಡಬಹುದು. ಹಾಗಿಲ್ಲದಿದ್ದರೆ ಕಾಮಿನಿಯರ ಪೃಷ್ಠಗಳನ್ನೇ ಸೇವಿಸಬಹುದೆಂದಾಶಯವು. .... ||೩೬||

ಶ್ಲೋ|| ಸಂಸಾರೇಸ್ವಪ್ನಸಾರೇಪರಿಣತಿತರಳೆದ್ವೇಗತೀಪಂಡಿತಾನಾಂತತ್ವ
ಜ್ಞಾನಾಮೃತಾಂಭಃಪ್ಲವಲಲಿತಧಿಯಾಂಯಾತುಕಾಲಃಕಥಂಚಿತ್||
ನೋಚೇನ್ಮುಗ್ಧಾಂಗನಾನಾಂಸ್ತನಘನಜಘನಾಭೋಗ ಸಂಭೋಗಿ
ನೀನಾಂ ಸ್ಥೂಲೋಪಸ್ಥಸ್ಥಲೀಷು ಸ್ಥಗಿತಕರತಲಸ್ಪರ್ಶಲೀಲೋ
ದ್ಯಮಾನಾಂ .... .... ||೩೭||

ಟೀ|| ಸ್ವಪ್ನಸಾರೆ=ಸ್ವಪ್ನಪದಾರ್ಥದಂತೆ ಅಸ್ಥಿರವಾದ, ಪರಿಣತಿತರಳೆ=ಪರಿಣಾಮದೊಳು ಸ್ಥಿರವಲ್ಲದ, ಸಂಸಾರೆ=ಸಂಸಾರದೊಳು, ಪಂಡಿತಾನಾಂ=ವಿವೇಕಿಗಳಿಗೆ, ದ್ವೇಗತೀ=ಎರಡವಸ್ಥೆಗಳು, ತತ್ವಜ್ಞಾನ=ಬ್ರಹ್ಮಜ್ಞಾನವೆಂಬ, ಅಮೃತಾಂಭಃ=ಶುದ್ಧೋದಕದಲ್ಲಿ, ಪ್ಲವ=ತೇಲುವದರಿಂದ, ಲಲಿತ=ಸುಂದರವಾದ, ಧಿಯಾಂ=ಬುದ್ಧಿಯುಳ್ಳವರಿಗೆ, ಕಥಂಚಿತ್=ಬಹುಪ್ರಯತ್ನದಿಂದ, ಕಾಲಃ=ಸಮಯವು, ಯಾತು=ಹೋಗಲಿ, (ಕಳೆಯಲಿ) ನೋಚೇತ್=ಹಾಗಿಲ್ಲದಿದ್ದರೆ, ಸ್ತನ=ಉರೋಜಗಳ, ಘನ=ನಿಬಿಡವಾದ, ಜಘನ=ಕಟಿಪುರೋಭಾಗಗಳ, ಆಭೋಗ=ವಿಸ್ತಾರದಲ್ಲಿ, ಸಂಭೋಗಿನೀನಾಂ=ಸಂಭೋಗೇಚ್ಛೆಯುಳ್ಳ, ಮುಗ್ಧಾಂಗನಾನಾಂ=ನವಯುವತಿಯರ, ಸ್ಥೂಲೋಪಸ್ಥಸ್ಥಲೀಷು=ವರ್ತುಲೋಚ್ಛ್ರನ ಮದನ ಸದನ ಪ್ರದೇಶಗಳಲ್ಲಿ. ಸ್ಥಗಿತ=ಕೂಡಿಸಲ್ಪಟ್ಟ, ಕರತಲ=ಪಾಣಿಪ್ರದೇಶದ, ಸ್ಪರ್ಶ=ಸಂಬಂಧದ, ಲೀಲಾ=ವಿಲಾಸದಲ್ಲಿ, ಉದ್ಯಮಾನಾಂ=ಪ್ರಯತ್ನವುಳ್ಳವರಿಗೆ, ಕಾಲಃ=ಸಮಯವು, ಯಾತು=ಕಳೆಯಲಿ ... ... .... ||೩೭||

ತಾ|| ಕನಸಿನ ಪದಾರ್ಥಗಳಂತೆ ಮಿಥ್ಯಾರೂಪವಾದ ಈ ಸಂಸಾರದಲ್ಲಿ ವಿವೇಕಿಗಳಾದವರು ತತ್ವಜ್ಞಾನದಿಂದ ನಿರ್ಮಲವಾದ ಮನಸ್ಸುಳ್ಳವ

ರಾಗಿ ಯಾದರೂ ಕಾಲವನ್ನು ಕಳೆಯುವರು. ಹಾಗಿಲ್ಲದೆ ಇಹಲೋಕ ಸು ಖದಲ್ಲಿಯೆ ಆಸಕ್ತಿಯಿದ್ದರೆ ವಿವಿಧವಾದ ಸಂಭೋಗಗಳಲ್ಲಿ ಅಭಿಲಾಷೆಯು ಳ್ಳತರುಣಿಯರ ಗುಹ್ಯಾದ್ಯವಯವಗಳಲ್ಲಿ ವಿಹರಿಸುತ್ತಲಾದರೂ ಕಾಲವನ್ನು ಕಳೆಯುವರು. ಯಾವದಾದರೊಂದು ಸುಖವನ್ನಾದರೂ ಚನ್ನಾಗಿ ಅನು ಭವಿಸಬೇಕೆಂದು ಭಾವವು. .... .... ॥೪೭॥

ಶ್ಲೋ॥ ಆವಾಸಃಕ್ರಿಯತಾಂಗಾಂಗೇಪಾಪಹಾರಿಣಿವಾರಿಣಿ ॥ ಸ್ತನದ್ವಯೇ
ತರುಣ್ಯಾವಾಮನೋಹಾರಿಣಿಹಾರಿಣಿ .... ॥೪೮॥

ಟೀ॥ ಪಾಪಹಾರಿಣಿ=ಪಾಪಹಾರಿಯಾಗಿ, ಗಾಂಗ=ಗಂಗಾಸಂಬಂಧವಾದ, ವಾ ರಿಣಿ=ಉದಕದಲ್ಲಿ, ಆವಾಸಃ=ನಿವಾಸವು, ಕ್ರಿಯತಾಂ=ಮಾಡಲ್ಪಡಲಿ, ತರುಣ್ಯಾಃ= ಯುವತಿಯರ, ಹಾರಿಣಿ=ಮುಕ್ತಾಹಾರವುಳ್ಳ, ಮನೋಹಾರಿಣಿ=ಮನೋಹರವಾದ, ಸ್ತನದ್ವಯೇವಾ=ಕುಚಯುಗ್ಮದಲ್ಲಿಯಾದರೂ, ಆವಾಸಃ=ವಾಸವು, ಕ್ರಿಯತಾಂ= ಮಾಡಲ್ಪಡಲಿ. ... ... ... ॥೪೮॥

ತಾ॥ ಸಕಲ ಪಾಪಹಾರಿಯಾದ ದೇವಗಂಗೆಯೊಳು ಸ್ನಾನ ಮೊದಲಾ ದವುಗಳನ್ನು ಮಾಡಿಕೊಂಡು ಆ ಗಂಗಾತೀರದಲ್ಲಿಯಾಗಲಿ, ಇಲ್ಲವೆ ಹರಿಣನ ಯನೆಯರಾದ ತರುಣಿಯರ ಕುಚಕುಂಭಗಳ ಸಂಭೋಗದಲ್ಲಿಯಾಗಲಿಆಸ ಕ್ತನಾಗಿ ವಾಸಮಾಡಿಕೊಂಡಿರಬೇಕಲ್ಲದೆ ಉಭಯ ಭ್ರಷ್ಟನಾಗಬಾರದು.

ಶ್ಲೋ॥ ಕಿಮಿಹಬಹುಭಿರುಕ್ತೈರ್ಯುಕ್ತಿಶೂನ್ಯೈಃಪ್ರಲಾಪೈರ್ದ್ವಯಮಿಹ
ಪುರುಷಾಣಾಂಸರ್ವದಾಸೇವನೀಯಂ ॥ ಅಭಿನವಮದಲೀಲಾಲಾ
ಲಸಂಸುಂದರೀಣಾಂಸ್ತನಭರಪರಿಖಿನ್ನಂಯೌವನಂವಾವನಂವಾ ॥

ಟೀ॥ ಇಹ=ಈವಿಷಯವಾಗಿ, ಬಹುಭಿಃ=ಅನೇಕವಾದ, ಯುಕ್ತಿಶೂನ್ಯೈಃ= ಉಪಾಯಹೀನವಾದ, ಪ್ರಲಾಪೈಃ=ನಿರರ್ಥಕವಾದ, ಉಕ್ತೈಃ=ಮಾತುಗಳಿಂದ, ಕಿಂ=ಫಲವೇನು? ಅಭಿನವ=ಹೊಸದಾದ, ಮದಲೀಲಾ=ಮನ್ಮಥವಿಲಾಸಗಳಲ್ಲಿ, ಲಾ ಲಸಂ=ಆಸಕ್ತವಾದ, ಸ್ತನಭರ=ಕುಚಭಾರದಿಂದ, ಪರಿಖಿನ್ನ=ಶ್ರಾಂತವಾದ, ಸುಂದ ರೀಣಾಂ=ಭಾಮಿನಿಯರ, ಯೌವನಂವಾ=ಪ್ರಾಯವಾಗಲಿ, ವನಂವಾ=ಕಾಡಾಗಲೀ, ಇಹ=ಈಲೋಕದಲ್ಲಿ, ಪುರುಷಾಣಾಂ=ಮನುಷ್ಯರಿಗೆ, ಸರ್ವದಾ=ಯಾವಾಗಲೂ, ಸೇವನೀಯಂ=ಸೇವೆಗೆ ಯೋಗ್ಯವಾಗಿರುವದು. .... ॥೪೯॥

ತಾ॥ ಯುಕ್ತಿಶೂನ್ಯಗಳಾಗಿಯೂ, ನಿರರ್ಥಕಗಳಾಗಿಯೂ ಇರುವಅನೇ ಕ ಮಾತುಗಳಿಂದೇನೂ ಪ್ರಯೋಜನವಿಲ್ಲವು. ಮತ್ತೇನೆಂದರೆ ಈ ಲೋ

ದಲ್ಲಿ ಮುಖ್ಯವಾಗಿ ಹೊಸಹೊಸದಾದ ಕಾಮವಿಕಾರಗಳಿಂದ ಸುಂದರವಾದ ಕಾಮಿನಿಯರ ಯೌವನವನ್ನಾದರೂ ಸೇವಿಸಬೇಕು, ಇಲ್ಲವೆ ವೈರಾಗ್ಯದಿಂದ ವನವನ್ನಾದರೂ ಹೊಂದಿ ತಪಸ್ಸನ್ನಾದರೂ ಅವಶ್ಯವಾಗಿ ಆಚರಿಸಬೇಕು ಉಭಯ ಭ್ರಷ್ಟರಾಗಬಾರದು. .... ॥೪೯॥

ಶ್ಲೋ॥ ಸತ್ಯಂಸದಾವಚ್ಮಿನಪಕ್ಷಪಾತಾಲ್ಲೋಕೇಷುಸಪ್ತಸ್ವಪಿತಥ್ಯಮೇತತ್ ॥ ನಾನ್ಯನ್ಮನೋಹಾರಿನಿತಂಬಿನೀಭ್ಯೋದುಃಖೈಕಹೇತುರ್ನಚಕಶ್ಚಿದನ್ಯಃ ॥ .... .... ॥೫೦॥

ಟೀ॥ ಸದಾ=ಯಾವಾಗಲೂ, ಸತ್ಯಂ=ನಿಜವನ್ನು. ವಚ್ಮಿ=ಹೇಳುವೆನು, ಪಕ್ಷಪಾತಾತ್=ವಂಚನೆಯಿಂದ, ನ=ಅಲ್ಲವು, ಸಪ್ತಸು=ಏಳಾದ, ಲೋಕೇಷ್ವಪಿ=ಲೋಕಗಳಲ್ಲಿಯೂ, ಏತತ್=ಈ ನಾನುಹೇಳುವದು, ತಥ್ಯಂ=ನಿಜವಾದದ್ದು, ನಿತಂಬಿನೀಭ್ಯಃ=ಕಾಮಿನಿಯರಿಗಿಂತಲೂ, ಅನ್ಯತ್=ಮತ್ತೊಂದು, ಮನೋಹಾರಿ=ಸುಂದರವಾದದ್ದು. ನ=ಅಲ್ಲವು. ಅನ್ಯಃ=ಇನ್ನೊಂದು, ದುಃಖ=ವ್ಯಥೆಗೆ, ಏಕ=ಮುಖ್ಯವಾದ, ಹೇತುಃ=ಕಾರಣವು, ಕಶ್ಚಿತ್=ಯಾವದೂ, ನ=ಇಲ್ಲವು, ॥೫೦॥

ತಾ॥ ಕಡೆಯದಾದ ಮತ್ತೊಂದು ಮಾತನ್ನು ಹೇಳುವೆನು. ಇದೇ ಮೂರು ಲೋಕದಲ್ಲಿಯೂ ಸತ್ಯವಾಗಿರುವದು. ಅದೇನೆಂದರೆ, ಲೋಕದಲ್ಲಿ ಸರ್ವಾಂಗಸುಂದರಿಯರಾದ ಕಾಮಿನಿಯರಿಗಿಂತಲೂ ಮತ್ತೊಂದು ಸುಂದರ ಪದಾರ್ಥವೂ ಇಲ್ಲವು ಅವರನ್ನು ವಿನಾ ಸಕಲ ದುಃಖಕಾರಣವಾದದ್ದು ಮತ್ತೊಂದಿಲ್ಲವು. ಸುಖದುಃಖಗಳೆರಡಕ್ಕೂ ಅವರೇ ಕಾರಣವೆಂದಾಶಯವು. .... .... .... ॥೫೦॥

---

## ಕಾಮಿನೀಗರ್ಹಣಾರಂಭವು.

ಶ್ಲೋ॥ ಕಾಂತೇತ್ಯುತ್ಪಲಲೋಚನೇತಿವಿಪುಲ ಶ್ರೋಣೀಭರೇತ್ಯುನ್ನಮತ್ಪೀನೋತ್ತುಂಗಪಯೋಧರೇತಿಸುಮುಖಾಂಭೋಜೇತಿಸುಭ್ರೂರಿತಿ ॥ ದೃಷ್ಟ್ವಾಮಾದ್ಯತಿಮೋದತೇಭಿರಮತೇಪ್ರಸ್ತೌತಿವಿದ್ವಾನಪಿ ಪ್ರತ್ಯಕ್ಷಾಶುಚಿಭಸ್ತ್ರಿಕಾಂಸ್ತ್ರಿಯಮಹೋ ಮೋಹಸ್ಯದುಶ್ಚೇಷ್ಟಿತಂ ॥ .... .... ॥೫೧॥

ಟೀ॥ ಕಾಮಿನಿಗಿಂತಲೂ ಮತ್ತೊಂದು ದುಃಖಕಾರಣವಿಲ್ಲವೆಂದು ಹೇಳಿದರ್ಥವ ನ್ನು ವಿವರಿಸಲು ಕಾಮಿನೀ ನಿಂದೆಯನ್ನಾರಂಭಿಸುತ್ತಾನೆ—ವಿದ್ವಾನಪಿ=ಜ್ಞಾನವಂತನಾದವನೂ, ಪ್ರತ್ಯಕ್ಷ=ಕಣ್ಣೆದುರಿಗೆ, ಅಶುಚಿ=ಅಶುದ್ಧವಾದ, ಭಸ್ತ್ರಿಕಾಂ=ಚರ್ಮ ಚೀಲವಾಗಿರುವ, ಸ್ತ್ರಿಯಂ=ಹೆಂಗಸನ್ನು, ದೃಷ್ಟ್ವಾ=ನೋಡಿ. ಕಾಂತೇತಿ=ಮನೋಹರಳೆಂದು, ಉತ್ಪಲಲೋಚನೇತಿ=ನೈದಿಲೆಯಂತೆ ನಯನವುಳ್ಳವಳೆಂದು, ವಿಪುಲ=ವಿಶಾಲವಾದ, ಶ್ರೋಣೀಭರೇತಿ=ನಿತಂಬ ಬಿಂಬವುಳ್ಳವಳೆಂದು, ಉನ್ನಮತ್=ಮೇಲ್ಭಾಗವನ್ನು ಹೊಂದುತಿರುವ, ಪೀನ=ಬಲಿತ, ಉತ್ತುಂಗ=ಉನ್ನತವಾದ, ಪಯೋಧರೇತಿ=ಕುಚಗಳುಳ್ಳವಳೆಂದು, ಸುಮುಖಾಂಭೋಜೇತಿ=ಸುಂದರ ವದನಾರವಿಂದವುಳ್ಳವಳೆಂದು, ಸುಭ್ರೂರಿತಿ=ಅಂದವಾದ ಕಣ್ಣುಹುಬ್ಬು ಉಳ್ಳವಳೆಂದೂ, ಮಾದ್ಯತಿ=ಮತ್ತನಾಗುವನು, ಮೋದತೆ=ಸಂತೋಷಿಸುವನು, ಅಭಿರಮತೆ=ಕ್ರೀಡಿಸುವನು ಪ್ರಸ್ತೌತಿ=ಸ್ತುತಿಸುವನು, ಅತಃ=ಆದಕಾರಣ, ಮೋಹಸ್ಯ=ಅಜ್ಞಾನದ, ದುಶ್ಚೇಷ್ಟಿತಂ=ದುರ್ವ್ಯಾಪಾರವು, ಅಹೋ=ಆಶ್ಚರ್ಯವು. ... ॥೪೧॥

ತಾ॥ ಅಶುದ್ಧವಾದ ಚರ್ಮದ ಚೀಲವೆಂದು ಪ್ರತ್ಯಕ್ಷವಾಗಿ ಕಾಣಬರುವ ಹೆಂಗಸನ್ನು ನೋಡಿ ಎಷ್ಟು ವಿವೇಕಶಾಲಿಯಾಗಿದ್ದರೂ ಆಹ! ಎಷ್ಟು ರಮಣೀಯಗಳಾಗಿರುವಳು ? ನೈದಿಲೆಯಂತೆ ನಯನಗಳಿರುವವೆ. ಹಾ : ವಿಶಾಲವಾದ ನಿತಂಬ ಬಿಂಬವುಳ್ಳವಳಾಗಿರುವಳು !! ಅಹಹ ! ಕನಕ ಕುಂಭದಂತಿರುವ ಕುಚಭಾರದಿಂದ ಶೋಭಿಸುವಳು ; ಅಹೋ ಸುಂದರ ವದನಾರವಿಂದವುಳ್ಳವಳೆ; ಆಹ; ಕಾಮನ ಬಿಲ್ಲಿನಂತೆಸೆವ ಭ್ರೂವಲ್ಲಿಯುಳ್ಳವಳೇ! ಎಂದೀಮೇರಿಗೆಲ್ಲ ನರನು ಮತ್ತನಾಗುತ, ಸಂತೋಷಿಸುತ, ಕ್ರೀಡಿಸುತ, ಸ್ತೋತ್ರಮಾಡುತಲಿರುವನಲ್ಲಾ, ಅಜ್ಞಾನದ ವ್ಯಾಪಾರವು ಎಷ್ಟು ಆಶ್ಚರ್ಯಕರವಾಗಿದೆ, ಪ್ರಜ್ಞಾಶಾಲಿಯನ್ನೂ ಮೋಹಗೊಳಿಸುವದು. ॥೪೧॥

ಶ್ಲೋ॥ ಸ್ಮೃತಾಭವತಿತಾಪಾಯದೃಷ್ಟಾಚೋನ್ಮಾದಕಾರಿಣೀ ॥ ಸ್ಪೃಷ್ಟಾಭವತಿಮೋಹಾಯಸಾನಾಮದಯಿತಾಕಥಂ ॥ ॥೪೨॥

ಟೀ॥ ಸ್ತ್ರೀಸ್ವರೂಪವನ್ನು ದೂಷಿಸುತ್ತಾನೆ—ಯಾ—ಯಾವಸ್ತ್ರೀಯು, ಸ್ಮೃತಾ=ಸ್ಮರಿಸಲ್ಪಟ್ಟವಳಾಗಿ, ತಾಪಾಯ=ಸಂತಾಪಕ್ಕಾಗಿ, ಭವತಿ=ಆಗುವಳೊ, ದೃಷ್ಟಾ=ನೋಡಲ್ಪಟ್ಟವಳಾಗಿ, ಉನ್ಮಾದಕಾರಿಣೀ=ಚಿತ್ತಭ್ರಮಣವನ್ನುಂಟು ಮಾಡುವಳೊ, ಸ್ಪೃಷ್ಟಾ=ಆಲಿಂಗಿತಳಾಗಿ, ಮೋಹಾಯಭವತಿ=ಬಹಿಃಪ್ರಪಂಚವನ್ನು ಮರೆಸುವಳೊ, ಸಾ=ಆ ಸ್ತ್ರೀಯು, ಕಥಂನಾಮ=ಹೇಗೆ, ದಯಿತಾ=ಪ್ರಿಯತಮೆಯು, ಭವತಿ=ಆಗುವಳು. .... ... ... ॥೪೨॥

ತಾ॥ ದೇಶಾಂತರದಲ್ಲಿಯಾದರೂ ಅಂಗನೆಯನ್ನು ಸ್ಮರಿಸಿಕೊಂಡರೆ ಮಹಾವಿರಹತಾಪವನ್ನುಂಟುಮಾಡುವಳು, ನೋಡಿದ ಒಡನೆಯೇ ಚಿತ್ತವೈಕಲ್ಯವನ್ನುಂಟುಮಾಡುವಳು, ಹಾಗೆಯೇ ಆಲಿಂಗಿಸಿದರೆ ಈ ಪ್ರಪಂಚದ ಜ್ಞಾನವನ್ನೇ ತಪ್ಪಿಸಿ ಬಿಡುವಳು. ಇಂಥಾ ಅಂಗನೆಯು ಯಾವ ಬಗೆಯಿಂದ ಪ್ರಿಯಳಾಗುವಳು ? ಸರ್ವಥಾ ಆಗಲಾರಳು. ॥೪೨॥

ಶ್ಲೋ॥ ತಾವದೇವಾಮೃತಮಯೀಯಾವಲ್ಲೋಚನಗೋಚರಾ । ಚಕ್ಷು
ಷ್ಪಥಾದತೀತಾತುವಿಷಾದಪ್ಯತಿರಿಚ್ಯತೇ .... ॥೪೩॥

ಟೀ॥ ವಧೂಃ=ಕಾಂತೆಯು, ಯಾವತ್=ಎಷ್ಟರವರೆಗೂ, ಲೋಚನ=ಕಂಣುಗಳಿಗೆ, ಗೋಚರಾ=ವಿಷಯಳೋ, ತಾವದೇವ=ಅದುವರೆಗೇ, ಅಮೃತಮಯೀ=ಅಮೃತರಸಸದೃಶಳು, ಚಕ್ಷುಷ್ಪಥಾತ್=ನೇತ್ರಮಾರ್ಗದ್ದೆಶೆಯಿಂದ, ಅತೀತಾತು=ಅತಿಕ್ರಮಿಸಿದವಳೇ ಆದರೆ, ವಿಷಾದಪಿ=ವಿಷಕ್ಕಿಂತಲೂ, ಅತಿರಿಚ್ಯತೇ=ಅತಿರಿಕ್ತಳಾಗುವಳು. .... .... .... ॥೪೩॥

ತಾ॥ ಕಮನೀಯಳಾದ ಕಾಂತೆಯು ಕಂಣೆದುರಿಗಿರುವವರೆಗೂ ಅಮೃತರಸದಂತೆ ಪ್ರಿಯತಮೆಯಾಗಿರುವಳು. ಹಾಗಿಲ್ಲದೆ ಮರೆಯಾದರೆ ವಿಷಕ್ಕಿಂತಲೂ ಅಧಿಕವಾಗಿ ಪರಿಣಮಿಸುವಳು. ಎಂದರೆ ಸುದತಿಯೇ ಸುಖದುಃಖಗಳಿಗೆ ಕಾರಣನೆಂದಾಶಯವು. .... ॥೪೩॥

ಶ್ಲೋ॥ ನಾಮೃತಂನವಿಷಂಕಿಂಚಿದೇಕಾಂಮುಕ್ತ್ವಾನಿತಂಬಿನೀಂ।ಸೈವಾ
ಮೃತಲತಾರಕ್ತಾವಿರಕ್ತಾವಿಷವಲ್ಲರೀ .... ॥೪೪॥

ಟೀ॥ ಹೇಳಿದರ್ಥವನ್ನು ಬೇರೆ ರೀತಿಯಿಂದ ಪೇಳುತ್ತಾನೆ—ಏಕಾಂ=ಒಬ್ಬಳಾದ, ನಿತಂಬಿನೀಂ=ಕಾಮಿನಿಯನ್ನು, ಮುಕ್ತ್ವಾ=ಬಿಟ್ಟು, ಅಮೃತಂ=ಅಮೃತಶಬ್ದಾರ್ಥವು, ಕಿಂಚಿತ್=ಮತ್ತೊಂದು ವಸ್ತುವು, ನಾಸ್ತಿ=ಇಲ್ಲವು, ವಿಷಂ=ವಿಷಪದಾರ್ಥವು, ಕಿಂಚಿತ್=ಮತ್ತೊಂದು, ನ=ಇಲ್ಲವು, ಸೈವ=ಆ ಕಾಮಿನಿಯೆ, ರಕ್ತಾ=ಅನುರಕ್ತಳಾಗಿದ್ದರೆ, ಅಮೃತ=ಅಮೃತ ರಸದಿಂದ ಕೂಡಿದ, ಲತಾ=ಲತೆಯು, ವಿರಕ್ತಾ=ಅನುರಾಗಶೂನ್ಯಳಾದರೆ, ವಿಷವಲ್ಲರೀ=ವಿಷದ ಬಳ್ಳಿಯೆ, ॥೪೪॥

ತಾ॥ ಅಂಗನೆಯು ಅನುರಾಗವುಳ್ಳವಳಾಗಿದ್ದರೆ ಅಮೃತದಂತೆ ಅತ್ಯಂತ ಪ್ರಿಯಳಾಗಿರುವಳು; ಅನುರಾಗಶೂನ್ಯಳಾದರೆ ವಿಷದಂತೆ ಪ್ರಾಣಾಪಹಾರಿಯಾಗುವಳು. ಆದಕಾರಣವೆ ಕಾಮಿನಿಯನ್ನು ಬಿಟ್ಟು ಬೇರೆ ಪ್ರಿಯ ವಸ್ತುವೂ ಅಪ್ರಿಯವಾದ ವಸ್ತುವೂ ಇಲ್ಲವೆಂದಾಶಯವು ॥೪೪॥

ಶ್ಲೋ॥ ಆವರ್ತಸ್ಸಂಶಯಾನಾಮವಿನಯಭುವನಂಪಟ್ಟಣಂಸಾಹಸಾನಾಂ ದೋಷಾಣಾಂ ಸನ್ನಿಧಾನಂಕಪಟಶತಮಯಂ ಕ್ಷೇತ್ರಮಪ್ರತ್ಯಯಾನಾಂ ॥ ಸ್ವರ್ಗದ್ವಾರಸ್ಯವಿಘ್ನೋನರಕಪುರಮುಖಂಸರ್ವಮಾಯಾಕರಂಡಂಸ್ತ್ರೀಯಂತ್ರಂಕೇನಸೃಷ್ಟಂವಿಷಮಮೃತಮಯಂಪ್ರಾಣಿಲೋಕಸ್ಯಪಾಶಃ .... ॥೪೫॥

ಟೀ॥ ಸ್ತ್ರೀಯನ್ನು ಸೃಷ್ಟಿಸಿದವನನ್ನು ದೂಷಿಸುತ್ತಾನೆ—ಸಂಶಯಾನಾಂ=ಸಂದೇಹಗಳಿಗೆ, ಆವರ್ತಃ=ಪರಿಪಾಕವು, ಅವಿನಯಾನಾಂ=ಅವಿಧೇಯತೆಗಳಿಗೆ ಭುವನಂ=ಲೋಕವು, ಸಾಹಸಾನಾಂ=ಸಾಮರ್ಥ್ಯಗಳಿಗೆ, ಪಟ್ಟಣಂ=ನಗರವು, ದೋಷಾಣಾಂ=ರಾಗದ್ವೇಷಾದಿ ದೋಷಗಳಿಗೆ, ಸನ್ನಿಧಿಃ=ಉತ್ತಮವಾದ ನಿಕ್ಷೇಪವು, ಕಪಟ=ಕೃತ್ರಿಮಗಳ, ಶತ=ನೂರುಗಳ, ಮಯಂ=ಸ್ವರೂಪವು, ಅಪ್ರತ್ಯಯಾನಾಂ=ಅವಿಶ್ವಾಸಗಳಿಗೆ, ಕ್ಷೇತ್ರಂ=ಉತ್ಪತ್ತಿ ಭೂಮಿಯು, ಸ್ವರ್ಗದ್ವಾರಸ್ಯ=ಸ್ವರ್ಗದ ಬಾಗಿಲಿಗೆ, ವಿಘ್ನಃ=ಪ್ರತಿಬಂಧಕವು, ನರಕಪುರಮುಖಂ=ಯಮಲೋಕ ದ್ವಾರವು, ಸರ್ವ=ಸಮಸ್ತವಾದ, ಮಾಯಾ=ಇಂದ್ರಜಾಲ ವಿದ್ಯೆಗಳ, ಕರಂಡಂ ಪೆಟ್ಟಿಗೆಯು, ವಿಷಂ=ವಿಷಸ್ವರೂಪವು, ಅಮೃತಂ=ಅಮೃತಪ್ರಾಯವು, ಪ್ರಾಣಿಲೋಕಸ್ಯ=ಪ್ರಾಣಿವರ್ಗಕ್ಕೆ, ಪಾಶಃ=ಬಂಧನಸ್ವರೂಪವೂ ಆದ, ಸ್ತ್ರೀಯಂತ್ರಂ=ಕಾಮಿನೀರೂಪವಾದ ಯಂತ್ರವು, ಕೇನ=ಯಾರಿಂದ. ಸೃಷ್ಟಂ=ನಿರ್ಮಿಸಲ್ಪಟ್ಟಿತು ? ॥೪೫॥

ತಾ॥ ಸಕಲ ಸಂಶಯಗಳಿಗಾಕರವಾಗಿ, ಅವಿನಯಗಳಿಗೆ ಆಧಾರವೆಂದೆನಿಸಿ, ಸಮಸ್ತವಾದ ಸಾಹಸಗಳಿಗೆ ಗಣಿಯಾಗಿ, ರಾಗದ್ವೇಷಾದಿ ದೋಷಗಳ ನಿಕ್ಷೇಪವೆಂದೆನಿಸಿ, ಅನೇಕ ಕೃತ್ರಿಮಗಳಿಗೆ ಜನ್ಮಭೂಮಿಯಾಗಿ, ಅಪನಂಬಿಕೆಗಳ ಮನೆಯಾಗಿ, ಸ್ವರ್ಗಪ್ರಾಪ್ತಿ ಸಾಧನವನ್ನು ಹಾಳುಮಾಡುತ, ನರಕಪ್ರಾಪ್ತಿಗೆ ಮುಖ್ಯಕಾರಣವಾಗಿ, ಎಲ್ಲಾ ಇಂದ್ರಜಾಲವಿದ್ಯೆಗಳಿಗೂ ಗುರುವಾಗಿ, ನೋಡುತ್ತಲೇ ಅಮೃತಮಯವಾಗಿ, ವಿಚಾರ ಮಾಡಲು ವಿಷಪುಂಜವಾಗಿ, ಪ್ರಾಣಿವರ್ಗಕ್ಕೆ ಬಂಧನಪಾಶವಾಗಿಯೂ ಇರುವ ಈ ಸ್ತ್ರೀಯಂತ್ರವನ್ನು ಯಾವನು ಸೃಷ್ಟಿಸಿದನೋ ಅವನ ಸಾಮರ್ಥ್ಯವು ಬಹು ಶ್ಲಾಘ್ಯವಾದದ್ದು. ಅಥವಾ ಇಂಥ ಬಹು ದುಷ್ಟ ವಸ್ತುವನ್ನು ನಿರ್ಮಿಸಿದನಾದ ಕಾರಣ ಅವನ ನಾಮೋಚ್ಚಾರಣವೂ ಪಾಪಹೇತುವೆಂದು ಭಾವವು. .... .... ॥೪೫॥

ಶ್ಲೋ॥ ನೋಸತ್ಯೇನಮೃಗಾಂಕಏಷವದನೀಭೂತೋನಚೇಂದೀವರದ್ವಂದ್ವಂಲೋಚನತಾಂಗತಂನಕನಕೈರಪ್ಯಂಗಯಷ್ಟಿಃಕೃತಾ ॥ ಕಿಂ

ಶ್ವೇವಂಕವಿಭಿಃಪ್ರತಾರಿತಮನಾಸ್ತತ್ವಂ ವಿಜಾನನ್ನಪಿತ್ವಙ್ಮಾಂಸಾ
ಸ್ಥಿಮಯಂವಪುರ್ಮೃಗದೃಶಾಂಮಂದೋಜನಸ್ಸೇವತೆ ॥೪೯॥

ಟೀ॥ ಅನರ್ಥಗಳಿಗೆ ಕಾರಣವಾಗಿರುವ ಅಂಗಯಸ್ಟಿಯನ್ನು ಕವಿಗಳ ವಾಗ್ವೈಖರಿಯಿಂದ ವಂಚಿತನಾದ ಮೂಢನು ಭ್ರಾಂತನಾಗುವನೆಂದು ಹೇಳುತ್ತಾನೆ— ಏಷಃ= ಈ ಕಾಣಬರುವ, ಮೃಗಾಂಕಃ=ಚಂದ್ರನು, ಸತ್ಯೇನ=ನಿಜದಿಂದ, ವದನೀಭೂತಃ= ಮುಖವಾಗಿ ಪರಿಣಮಿಸಿರುವವನು, ನ=ಅಲ್ಲ, ಇಂದೀವರ=ಕನ್ನೈದಿಲೆಗಳ, ದ್ವಂದ್ವಂ=ಯುಗ್ಮವು, ಲೋಚನತಾಂ=ನೇತ್ರಭಾವವನ್ನು, ನಗತಂ=ಹೊಂದಿ ಇಲ್ಲ, ಕನಕೈಃ=ಸುವರ್ಣಗಳಿಂದ, ಅಂಗಯಷ್ಟಿರಪಿ=ದಂಡಾಕಾರವಾಗಿರುವ ದೇಹವೂ, ನಕೃತಾ=ಮಾಡಲ್ಪಡಲಿಲ್ಲ, ಕಿಂತು=ಮತ್ತೇನೆಂದರೆ, ಏವಂ=ಈ ಪ್ರಕಾರವಾಗಿ, ಕವಿಭಿಃ=ಕವಿಗಳಿಂದ. ಪ್ರತಾರಿತ=ವಂಚಿಸಲ್ಪಟ್ಟ, ಮನಾಃ=ಮನಸ್ಸುಳ್ಳವನಾಗೀ ಮೂಢಃ=ಮೂಢನಾದ, ಜನಃ=ಜನವು, ತತ್ವಂ=ನಿಜವನ್ನು, ವಿಜಾನನ್ನಪಿ=ತಿಳಿದವನಾದರೂ, ಮೃಗದೃಶಾಂ=ಹರಿಣನಯನೆಯರ, ತ್ವಕ್=ತೊಗಲು, ಮಾಂಸ= ಮಾಂಸವು, ಅಸ್ಥಿ=ಮೂಳೆಯು, ಮಯಂ=ಇವುಗಳ ವಿಕಾರವಾದ, ವಪುಃ=ಶರೀರವನ್ನು, ಸೇವತೆ=ಸೇವಿಸುವನು. ... ॥೪೯॥

ತಾ॥ ಪ್ರಮಾಣವಾಗಿಯೂ ಮುಖವು ಚಂದ್ರನಲ್ಲ, ಚಂದ್ರನಂತೆಯೂ ಇಲ್ಲ, ಕಣ್ಣು ಕನ್ನೈದಿಲೆಯಲ್ಲ, ಮತ್ತು ನೈದಿಲೆಯಂತೆಯೂ ಇಲ್ಲ. ಶರೀರವೂ ಬಂಗಾರದಿಂದ ಮಾಡಿಲ್ಲ, ಬಂಗಾರದಂತೆಯೂ ಇಲ್ಲ, ರಕ್ತ, ಮಾಂಸ, ಕೊಬ್ಬು, ಮೂಳೆ, ನರ ಮೊದಲಾದವುಗಳಿಂದ ಮಾಡಲ್ಪಟ್ಟು ಅಸಹ್ಯಕರವಾಗಿದ್ದರೂ ಅನ್ಯಾಯವಾಗಿ ಕವಿಗಳು ನಾನಾ ಬಗೆಯಾಗಿ ವರ್ಣಿಸಿರುವ ದೇಹವನ್ನು ನೋಡಿ ನಿಜಸ್ಥಿತಿಯನ್ನು ತಿಳಿದಿದ್ದರೂ ಭ್ರಾಂತರಾಗಿ ಜನರು ಸ್ತ್ರೀಸಹವಾಸದೊಳಾಸಕ್ತರಾಗುವರು. ವಿವೇಕಿಯಾದವನು ಹಾಗೆ ಕೆಡಲಾರನೆಂದಭಿಪ್ರಾಯವು. .... ॥೪೯॥

ಶ್ಲೋ॥ ಲೀಲಾವತೀನಾಂಸಹಜಾವಿಲಾಸಾಸ್ತಏವಮೂಢಸ್ಯಹೃದಿಸ್ಫುರಂತಿ॥
ರಾಗೋನಳಿನ್ಯಾಹಿನಿಸರ್ಗಸಿದ್ಧಸ್ತತ್ರಭ್ರಮತ್ಯೇವವೃಥಾಷಡಂಘ್ರಿಃ

ಟೀ॥ ಜನರಿಗುಂಟಾಗುವ ಭ್ರಾಂತಿಯನ್ನು ಸದೃಷ್ಟಾಂತವಾಗಿ ತೋರಿಸುತ್ತಾನೆ—ಲೀಲಾವತೀನಾಂ=ವಿಲಾಸಿನಿಯರಿಗೆ, ವಿಲಾಸಾಃ=ವಿಭ್ರಮಗಳು, ಸಹಜಾಃ= ಸ್ವಾಭಾವಿಕಗಳು, ತಏವ=ಆ ವಿಲಾಸಗಳೇ, ಮೂಢಸ್ಯ=ಅವಿವೇಕಿಯ, ಹೃದಿ=ಮನಸ್ಸಿನಲ್ಲಿ, ಸ್ಫುರಂತಿ=ಹೊಳೆಯುವವು. ನಳಿನ್ಯಾಃ=ಕಮಲ ಲತೆಗೆ, ರಾಗಃ=ಕೆಂಪು, ನಿಸರ್ಗಸಿದ್ಧಃ=ಸ್ವಾಭಾವಸಿದ್ಧವಾದದ್ದು, ಷಡಂಘ್ರಿಃ=ಭ್ರಮರವು, ತತ್ರ=ಆ ಕಮಲ ಲತೆಯಲ್ಲಿ, ವೃಥಾ=ವ್ಯರ್ಥವಾಗಿ, ಭ್ರಮತಿ=ಭ್ರಮಿಸುವದು. ... ॥೫೦॥

ತಾ॥ ಕಮಲಲತೆಯು ಕೆಂಪಾಗಿರುವದು ಸಹಜವಾಗಿದ್ದರೂ ದುಂಬಿಯು ಹೇಗೆ ಭ್ರಾಂತಿಯಿಂದ ಅದರಲ್ಲಿ ಹೋಗಿ ಭ್ರಮಿಸುವದೊ, ಅದರಂತೆ ಲೋಕದೊಳು ಕಾಮಿನಿಯರಿಗೆ ವಿವಿಧವಾದ ವಿಲಾಸಗಳು ಸ್ವಭಾವಸಿದ್ಧವಾಗಿದ್ದರೂ ಮೂಢನು ಆ ವಿಲಾಸಗಳನ್ನು ನೋಡಿ ಭ್ರಾಂತನಾಗಿ ಮೋಹಹೊಂದುವನು. ವಿವೇಕಿಯು ಹಾಗೆ ಭ್ರಷ್ಟನಾಗುವದಿಲ್ಲವೆಂದಾಶಯವು.

ಶ್ಲೋ॥ ಯದೇತತ್ಪೂರ್ಣೇಂದುದ್ಯುತಿ ಹರಮುದಾರಾಕೃತಿಪರಂ ಮುಖಾ
ಬ್ಜಂತನ್ವಙ್ಗ್ಯಾಃಕಿಲವಸತಿಯತ್ರಾಧರಮಧು ॥ ಇದಂತತ್ಕಿಂಪಾ
ಕದ್ರುಮಫಲಮಿದಾನೀಮತಿರಸಂವ್ಯತೀತೇಽಸ್ಮಿನ್ಕಾಲೆವಿಷಮಿವಭ
ವಿಷ್ಯತ್ಯಸುಖದಂ .... .... ॥೪೮॥

ಟೀ॥ ರಮಣೀ ಮುಖವಿಲೋಕನ ಮಾತ್ರದಿಂದ ಮೋಹ ಪಡಬಾರದೆಂದು ಹೇಳುತ್ತಾನೆ—ಯದೇತತ್=ಯಾವ ಈ, ತನ್ವಙ್ಗ್ಯಾಃ=ಕೃಶಾಂಗಿಯ, ಮುಖಾಬ್ಜಂ=ಮುಖಕಮಲವು, ಪೂರ್ಣೇಂದು=ಪೂರ್ಣಚಂದ್ರನ, ದ್ಯುತಿ=ಕಾಂತಿಯನ್ನು, ಹರಂ=ಅಪಹರಿಸುವದು, ಪರಂ=ಅತ್ಯಂತವಾಗಿ, ಉದಾರ=ಉತ್ಕೃಷ್ಟವಾದ, ಆಕೃತಿ=ಆಕಾರವುಳ್ಳದ್ದು, ಯತ್ರ=ಯಾವ ಮುಖಕಮಲದಲ್ಲಿ, ಅಧರಮಧು=ಅಧರೋಷ್ಠ ಸಂಬಂಧವಾದ ಮಕರಂದವು, ಅಸ್ತಿಕಿಲ=ಉಂಟೋ, ತದಿದಂ=ಆ ಈ ಮುಖಕಮಲವು, ಇದಾನೀಂ=ಈಗ, ಅತಿರಸಂ=ಅತಿಶಯವಾದ ಮಾಧುರ್ಯವುಳ್ಳದ್ದು, ಕಿಂಪಾಕದ್ರುಮ=ಕಿಂಪಾಕವೆಂಬ ವೃಕ್ಷ ವಿಶೇಷದ, ಫಲಂ=ಫಲಸದೃಶವಾದದ್ದು, ಅಸ್ಮಿನ್ ಕಾಲೆ=ಈ ಕಾಲವು, ಅತಿಕ್ರಾಂತೆ=ಅತಿಕ್ರಮಿಸಿ ಹೋಗುತ್ತಿರಲಾಗಿ, ವಿಷಮಿವ=ವಿಷದಂತೆ, ಅಸುಖದಂ=ದುಃಖಪ್ರದವಾದದ್ದು, ಭವಿಷ್ಯತಿ=ಆಗುವದು. ॥೪೮॥

ತಾ॥ ಕಾಮಿನಿಯರ ಮುಖಕಮಲವು ಪೂರ್ಣಚಂದ್ರನಿಗಿಮ್ಮಡಿಯಾಗಿರುವದು, ಮತ್ತು ಗಂಭೀರವಾದ ಸೌಂದರ್ಯದಿಂದ ಶೋಭಿಸುವದು. ಮತ್ತು ಈ ಸುಂದರವಾದ ವದನದೊಳಿರುವ ಅಧರದೊಳು ಮಧುರಸವು ನೆಲೆಗೊಂಡಿರುವದೂ ಆಗಿ, ಪ್ರಕೃತಕಾಲದಲ್ಲಿ ತೋರುತಿದ್ದರೂ ಸ್ವಲ್ಪಕಾಲ ಕಳೆಯಲುತರುವಾಯ ದೋಷಭರಿತವಾಗಿರುವದರಿಂದಹಾಲಾಹಲದಂತೆ ದುಃಖಕರವಾಗುವದು. ಆದ್ದರಿಂದಲೆ ವಿಚಾರಮಾಡದೆ ಭ್ರಾಂತನಾಗಿ ಮೋಹವನ್ನು ಹೊಂದಬಾರದೆಂದು ತಾತ್ಪರ್ಯವು. ॥೪೮॥

ಶ್ಲೋ॥ ಉನ್ಮೀಲತ್ತ್ರಿವಳೀತರಂಗನಿಲಯಾಪ್ರೋತ್ತುಂಗಪೀನಸ್ತನದ್ವಂ
ದ್ವೇನೋದ್ಗತಚಕ್ರವಾಕಯುಗಳಾವಕ್ತ್ರಾಂಬುಜೋದ್ಭಾಸಿನೀ ॥

ಕಾಂತಾಕಾರಧರಾನದೀಯಮಭಿತಃ ಕ್ರೂರಾತ್ರನಾಪೇಕ್ಷತೆಸಂ
ಸಾರಾರ್ಣವಮಜ್ಜನಂಯದಿತದಾದೂರೇಣಸಂತ್ಯಜ್ಯತಾಂ ॥೪೯॥

ಟೀ॥ ಉನ್ಮೀಲತ್=ಉಂಟಾದ, ತ್ರಿವಳೀ=ವಳಿತ್ರಯವೆಂಬ, ತರಂಗ=ಅಲೆಗಳಿಗೆ, ನಿಲಯಾ=ಆಧಾರವಾದ, ಪ್ರೋತ್ತುಂಗ=ಉನ್ನತವಾದ, ಪೀನ=ಬಲಿತ ಸ್ತನದ್ವಂದ್ವೇನ=ಕುಚಯುಗ್ಮದಿಂದ, ಉದ್ಗತ=ಮೇಲಕ್ಕೆ ಹೊರಟು ಬರುವ, ಚಕ್ರವಾಕ=ಚಕ್ರವಾಕಪಕ್ಷಿಗಳ, ಯುಗಳಾ=ಯುಗ್ಮವುಳ್ಳ ವಕ್ತ್ರ=ಮುಖವೆಂಬ, ಅಂಬುಜ=ಕಮಲದಿಂದ, ಉದ್ಭಾಸಿನೀ=ಹೊಳೆಯುವ, ಅಭಿತಃ=ಸರ್ವತ್ರ, ಕ್ರೂರಾ=ಕ್ರೂರ ಜಂತುಗಳುಳ್ಳ, (ಕುಟಿಲಹೃದಯಳಾದ) ಕಾಂತಾಕಾರಧರಾ=ಸ್ತ್ರೀರೂಪಧಾರಿಯಾದ, ಇಯಂನದೀ=ಈ ನದಿಯು, ಅತ್ರ=ಈ ಲೋಕದಲ್ಲಿ, ಸಂಸಾರಾರ್ಣವಮಜ್ಜನಂ=ಸಂಸಾರವೆಂಬ ಸಮುದ್ರದೊಳು ಮುಳುಗುವಿಕೆಯನ್ನು, ನಾಪೇಕ್ಷತೆ ಯದಿ=ಅಪೇಕ್ಷಿಸದೆ ಹೋದರೆ, ತದಾ=ಆಗ, ದೂರೇಣ=ದೂರವಾಗಿ, ಸಂತ್ಯಜ್ಯತಾಂ=ಬಿಡಲ್ಪಡಲಿ, .... .... ... ॥೪೯॥

ತಾ॥ ವಳಿಗಳೆಂಬ ಅಲೆಗಳುಂಟಾಗಿ, ಕುಚಕುಂಭಗಳೆಂಬ ಚಕ್ರವಾಕಗಳಿಂದ ಶೋಭಿಸುತ್ತ, ಮುಖವೆಂಬ ತಾವರೆಯಿಂದ ಹೊಳೆಯುತ್ತಲೂ, ಸರ್ವತ್ರ ಕ್ರೂರವಾಗಿಯೂ ಇರುವದರಿಂದಲೇ ಕಾಂತೆಯು ಮಹಾನದಿಯ ಆಕಾರದಿಂದ ಶೋಭಿಸುವಳು. ಈ ನದಿಯನ್ನು ಆಶ್ರಯಿಸಿದರೆ ಸಮುದ್ರದಲ್ಲಿ ಹಾಕಿ ಮುಣಿಗಿಸುವದು. ಎಂದರೆ, ತರುಣಿಯನ್ನಾಶ್ರಯಿಸಿದರೆ ಜನನಮರಣ ಪ್ರವಾಹರೂಪವಾದ ಸಂಸಾರ ಸಾಗರದೊಳು ಮುಳುಗಬೇಕಾಗುವದು. ಆದ್ದರಿಂದ ಮುಣಗಿ ಹೋಗಲು ಅಭಿಲಾಷೆ ಇಲ್ಲದಿರುವವರು. ಈ ಕಾಮಿಯನ್ನು ದೂರವಾಗಿ ಬಿಡಬೇಕೆಂದು ಭಾವವು ॥೪೯॥

ಶ್ಲೋ॥ ಜಲ್ಪಂತಿಸಾರ್ಧಮನ್ಯೇನಪಶ್ಯಂತ್ಯನ್ಯಂಸವಿಭ್ರಮಾಃ ॥ ಹೃದಯೆ
ಚಿಂತಯಂತ್ಯನ್ಯಂಪ್ರಿಯಃಕೋನಾಮಯೋಷಿತಾಂ ॥೫೦॥

ಟೀ॥ ಈ ಕಾರಣದಿಂದಲೂ ಅಂಗನೆಯರು ವಿಶ್ವಾಸಾನರ್ಹರೆಂದು ಹೇಳುತ್ತಾನೆ॥ ಅನ್ಯೇನಸಾರ್ಧಂ=ಒಬ್ಬನೊಡನೆ, ಜಲ್ಪಂತಿ=ಮಾತನಾಡುವರು, ಅನ್ಯಂ=ಮತ್ತೊಬ್ಬನನ್ನು, ಸವಿಭ್ರಮಾಃ=ವಿಲಾಸದೊಡನೆ, ಪಶ್ಯಂತಿ=ನೋಡುವರು, ಹೃದಯೆ=ಮನಸ್ಸಿನಲ್ಲಿ, ಅನ್ಯಂ=ಇನ್ನೊಬ್ಬನನ್ನು, ಚಿಂತಯಂತಿ=ಧ್ಯಾನಿಸುವರು ಯೋಷಿತಾಂ=ಸ್ತ್ರೀಯರಿಗೆ, ಪ್ರಿಯಃ=ಇಷ್ಟನು, ಕೋನಾಮ=ಯಾರು ? ॥೫೦॥

ತಾ॥ ಲೋಕದಲ್ಲಿ ಕಾಮಿನಿಯರು ಒಬ್ಬನೊಡನೆ ಮಾತನಾಡುತ್ತ, ವಿಲಾಸಗಳಿಂದ ಮತ್ತೊಬ್ಬನನ್ನು ನೋಡುತ್ತ, ಹೃದಯದಲ್ಲಿ ಇನ್ನೊಬ್ಬ

ನನ್ನು ಧ್ಯಾನಿಸುತ್ತಲೂ ಇರುವರು. ಇಷ್ಟು ಕೃತ್ರಿಮ ಸ್ವಭಾವದಿಂದ ಕೂಡಿರುವ ಕಾಂತೆಗೆ ಯಾವನು ತಾನೆ ಇಷ್ಟನಾದಾನು? ಆದ್ದರಿಂದಲೆ ಇವರು ವಿಶ್ವಾಸಾನರ್ಹರೆಂದಾಶಯವು .... ||೫೪||

ಶ್ಲೋ|| ಅಪಸರಸಖೇ ದೂರಾದಸ್ಮಾತ್ಕಟಾಕ್ಷವಿಷಾನಲಾತ್ಪ್ರಕೃತಿ ವಿಷಮಾ
ದ್ಯೋಷಿತ್ಸರ್ಪಾದ್ವಿಲಾಸಫಣಾಭೃತಃ | ಇತರಫಣಿನಾದಷ್ಟಶ್ಶಕ್ಯ
ಶ್ಚಿಕಿತ್ಸಿತು ಮೌಷಧೈಶ್ಚತುರವನಿತಾ ಭೋಗಿಗ್ರಸ್ತಂತ್ಯಜಂತಿಹಿ
ಮಂತ್ರಿಣಃ .... .... ||೫೧||

ಟೀ|| ಹರಿಣಾಕ್ಷಿಯು ಹಾವೆಂದು ಭಯಪಡಿಸಿ ಮಿತ್ರನನ್ನು ದೂರವಾಗಿ ಬಾರೆಂದುಪದೇಶಿಸುತ್ತಾನೆ. ಹೇಸಖೆ=ಎಲೈಮಿತ್ರನೆ, ಕಟಾಕ್ಷ=ಕಡೆಗಣ್ಣನೋಟವೆಂಬ, ವಿಷಾನಲಾತ್=ವಿಷಾಗ್ನಿಯುಂತಿರುವ ಪ್ರಕೃತಿವಿಷಮಾತ್=ಸ್ವಭಾವದಿಂದ ವಕ್ರವಾದ, ವಿಲಾಸ=ವಿಭ್ರಮಗಳೆಂಬ, ಫಣಾ=ಹೆಡೆಯನ್ನು, ಭೃತಃ=ಧರಿಸಿರುವ, ಅಸ್ಮಾತ್=ಈ ಕಾಣಬರುವ, ಯೋಷಿತ್ಸರ್ಪಾತ್=ಅಂಗನೆ ಎಂಬ ಹಾವಿನ ದೆಸೆಯಿಂದ, ಅಪಸರ=ಹಿಂದಕ್ಕೆ ಹೋಗು, ಇತರ=ಲೋಕಪ್ರಸಿದ್ಧವಾದ, ಫಣಿನಾ=ಸರ್ಪದಿಂದ, ದಷ್ಟಃ=ಕಚ್ಚಲ್ಪಟ್ಟವನೇ ಆದರೆ, ಔಷಧೈಃ=ಮದ್ದುಗಳಿಂದ, ಚಿಕಿತ್ಸಿತುಂ=ಪ್ರತಿಕ್ರಿಯೆ, ಮಾಡುವದಕ್ಕೆ ಶಕ್ಯಃ=ಸಾಧ್ಯವು, ಚತುರ=ನಿಪುಣವಾದದ್ದು, ವನಿತಾ=ಅಂಗನೆಯೆಂಬ, ಭೋಗಿ=ಸರ್ಪದಿಂದ, ಗ್ರಸ್ತಂ=ಆಕ್ರಮಿಸಲ್ಪಟ್ಟವನನ್ನು (ಕಚ್ಚಲ್ಪಟ್ಟವನನ್ನು) ಮಂತ್ರಿಣಃ=ವಿಷವೈದ್ಯರು, ತ್ಯಜಂತಿಹಿ=ಬಿಡುವರಷ್ಟೆ ||೫೧||

ತಾ|| ಎಲೈ ಸ್ನೇಹಿತನೇ! ಕಟಾಕ್ಷವೆಂಬ ವಿಷಜ್ವಾಲೆಯುಂಟಾಗಿ, ನಾನಾವಿಧವಾದ ವಿಲಾಸಗಳೆಂಬ ಹೆಡೆಯನ್ನು ಧರಿಸಿ, ಸ್ವಭಾವದಿಂದಲೆ ಅತ್ಯಂತ ಕ್ರೂರವಾಗಿರುವ ತರುಣಿಯೆಂಬ ಸರ್ಪವನ್ನು ತ್ಯಜಿಸಿ ದೂರವಾಗಿ ಜಾಗ್ರತೆಯಿಂದ ಹೊರಟುಬಾ? ಏಕೆಂದರೆ, ಲೋಕದೊಳು ರೂಢವಾಗಿರುವ ಹಾವು ಕಚ್ಚಿದರೆ ಯಾವದಾದರೊಂದು ಔಷಧವನ್ನು ಹಾಕಿ ಆ ವಿಷವನ್ನು ಹೇಗಾದರೂ ಇಳಿಸಬಹುದು, ಬಾದುವೇಳೆ ಈ ಹೆಣ್ಣೆಂಬ ಹಾವಿನ ಕೈಗೆಸಿಕ್ಕಿ ಅದೇನಾದರೂ ಕಚ್ಚಿದ್ದೇ ಆದರೆ ಎಷ್ಟು ಶೂರನಾದ ವಿಷವೈದ್ಯನಾದರೂ ಆ ವಿಷವನ್ನಿಳಿಸಲು ಕೈಲಾಗದೆಂದು ದೂರವಾಗಿ ಕೈಬಿಟ್ಟು ಹೊರಟುಹೋಗುವನು, ಎಂದರೆ ಸರ್ಪಕ್ಕಿಂತಲೂ ಕ್ರೂರವಾಗಿರುವದರಿಂದಲೇ ತರುಣಿಯನ್ನು ದೂರವಾಗಿ ತ್ಯಜಿಸಬೇಕೆಂದಭಿಪ್ರಾಯವು ||೫೧||

ಶ್ಲೋ|| ಕಾಮಿನೀಕಾಯಕಾಂತಾರೇ ಕುಚಪರ್ವತದುರ್ಗಮೆ || ಮಾಸಂಚ

ರಮನಃಪಾಂಥತತ್ರಾಸ್ತೇಸ್ಮರತಸ್ಕರಃ .... ||೫೨||

ಟೀ|| ಇನ್ನು ಮನಸ್ಸನ್ನು ಭಯಪಡಿಸುತ್ತಾನೆ, ಹೇಮನಃಪಾಂಥ=ಎಲೈ ಮನಸ್ಸೆಂಬ ಮಾರ್ಗಸ್ಥನೇ, ಕುಚ=ಸ್ತನಗಳೆಂಬ, ಪರ್ವತ=ಬೆಟ್ಟಗಳಿಂದ, ದುರ್ಗಮೆ=ಗಹನವಾದ, ಕಾಮಿನೀ=ತರುಣಿಯ, ಕಾಯ=ಶರೀರವೆಂಬ, ಕಾಂತಾರೆ=ಅಡವಿಯಲ್ಲಿ, ಸ್ಮರತಸ್ಕರಃ=ಕಾಮನೆಂಬ ಚೋರನು, ಆಸ್ತೇ=ಇರುವನು, ತತ್ರ=ಅಲ್ಲಿ. ಮಾಸಂಚರ=ತಿರುಗಬೇಡ ... .... ... ||೫೨||

ತಾ|| ಎಲೈ ಮನಸ್ಸೆಂಬ ಮಾರ್ಗಸ್ಥನೆ, (ದಾರಿಹೋಕನೆ) ಕುಚಗಳೆಂಬ ಬೆಟ್ಟಗಳಿಂದ ಹೋಗಲಶಕ್ಯವಾಗಿ ಗಹನವಾಗಿರುವ ಕಾಮಿನಿಯ ಕಾಯವೆಂಬ ಕಾಡಿನೊಳು ಕಾಮನೆಂಬ ಕಳ್ಳನಿರುವನಾದಕಾರಣ ಅಲ್ಲಿ ಹೋಗಬೇಡ ಎಂದರೆ, ತರುಣಿಯಲ್ಲಾಸಕ್ತನಾದೊಡೆ ಕೆಡುವಿಯಾದ ಕಾರಣ ಆಸಕ್ತನಾಗಬೇಡವೆಂಬ ತಾತ್ಪರ್ಯವು. .... ||೫೨||

ಶ್ಲೋ|| ವಿಸ್ತಾರಿತಂಮಕರಕೇತನಧೀವರೇಣಸ್ತ್ರೀಸಂಜ್ಞಿತಂಬಡಿಶಮತ್ರ
ಭವಾಂಬುರಾಶೌ || ಯೇನಾಚಿರಾತ್ತದಧರಾಮಿಷಲೋಲಮರ್ತ್ಯ
ಮತ್ಸ್ಯಾನ್ವಿಕೃಷ್ಯವಿಪಚತ್ಯನುರಾಗವಹ್ನೌ ||೫೩||

ಟೀ || ಮತ್ತೊಂದು ರೀತಿಯಿಂದ ಭಯಪಡಿಸುತ್ತಾನೆ, ಮಕರಕೇತನ=ಮನ್ಮಥನೆಂಬ, ಧೀವರೇಣ=ಬೆಸ್ತನಿಂದ, ಅತ್ರ=ಈ, ಭವಾಂಬುರಾಶೌ=ಸಂಸಾರವೆಂಬ ಸಮುದ್ರಲ್ಲಿ, ಸ್ತ್ರೀ=ಹೆಂಗಸೆಂಬ, ಸಂಜ್ಞಿತಂ=ಸಂಜ್ಞೆಯುಳ್ಳ, ಬಡಿಶಂ=ಗಾಳವು, ವಿಸ್ತಾರಿತಂ=ಬೀಸಲ್ಪಟ್ಟಿರುವದು, ಯೇನ=ಯಾವಹೆಂಗಸೆಂಬ ಬಲೆಯಿಂದ, ತತ್=ಆ ಅಂಗನೆಯ, ಅಧರ=ತುಟಿಯೆಂಬ, ಆಮಿಷ=ಮಾಂಸಖಂಡದಲ್ಲಿ, ಲೋಲ=ಆಶಕ್ತರಾದ, ಮರ್ತ್ಯ=ಮನುಷ್ಯರೆಂಬ, ಮತ್ಸ್ಯಾನ್=ಮೀನುಗಳನ್ನು. ವಿಕೃಷ್ಯ=ಸೆಳೆದು, ಅನುರಾಗ=ಮಮತೆಯೆಂಬ, ವಹ್ನೌ=ಬೆಂಕಿಯಲ್ಲಿ, ವಿಪಚತಿ=ಚನ್ನಾಗಿ ಬೇಯಿಸುತ್ತಾನೆ.

ತಾ|| ಕಾಮನೆಂಬ ಬೆಸ್ತನು ಸಂಸಾರವೆಂಬ ಸಮುದ್ರದಲ್ಲಿ ಅಬಲೆಯೆಂಬ ಬಲೆಯನ್ನು ಬಿಟ್ಟು, ಆ ಅಬಲೆಯ ಅಧರವೆಂಬ ಮಾಂಸಖಂಡದಲ್ಲಾಸಕ್ತರಾದ ಮನುಜರೆಂಬ ಮೀನುಗಳನ್ನು ಸೆಳೆದು, ಅನುರಾಗವೆಂಬ ಅಗ್ನಿಯಲ್ಲಿ ಚನ್ನಾಗಿ ಬೇಯಿಸುವನು; ಎಂದರೆ ಅಂಗನೆಯೊಳಾಸಕ್ತನಾದವನು ಅಗ್ನಿಯಲ್ಲಿ ಬೆಂದವನಿಗಿಂತಲೂ ಹೆಚ್ಚಾಗಿ ದುಃಖಪಡುವನೆಂದು ಭಾವವು. .... .... .... ||೫೩||

ಶ್ಲೋ॥ ವ್ಯಾದೀರ್ಘೇಣಚಲೇನವಕ್ರಗತಿನಾ ತೇಜಸ್ವಿನಾಭೋಗಿನಾ. ನೀ
ಲಾಬ್ಜದ್ಯುತಿನಾಹಿನಾಪರಮಹಂದಷ್ಟೋನತಚ್ಚಕ್ಷುಷಾ ॥ ಶಿಷ್ಟಾತ್ರ
ಸ್ಸಂತಿಚಿಕಿತ್ಸಕಾದಿಶಿದಿಶಿ ಪ್ರಾಯೇಣಧರ್ಮಾರ್ಥಿನೋಮುಗ್ಧಾಕ್ಷಿ
ಕ್ಷಣವೀಕ್ಷಿತಸ್ಯನಹಿಮೋವೈದ್ಯೋನಚಾಪ್ಯೌಷಧಂ ॥೫೪॥

ಟೀ॥ ಇನ್ನು ಮೂರು ಶ್ಲೋಕಗಳಿಂದ, ಒಬ್ಬನೊಬ್ಬನ ಅನುಭವವನ್ನು ತಿಳಿಸುತ್ತಾನೆ.—ವ್ಯಾದೀರ್ಘೇಣ=ಅತ್ಯಂತ ಉದ್ದವಾದ, ಕರ್ಣಾಂತ ವಿಶ್ರಾಂತವಾದ, ಚಲೇನ=ಚಂಚಲವಾದ, ವಕ್ರವಾದ ಸ್ವಭಾವವುಳ್ಳ, ವಕ್ರಗತಿನಾ=ವಕ್ರಸಂಚಾರವುಳ್ಳ, ತೇಜಸ್ವಿನಾ=ಬಲವುಳ್ಳ, ಅತ್ಯಂತಪ್ರಕಾಶಿಸುವ, ಭೋಗಿನಾ=ಹೆಡೆಯುಳ್ಳ, ಆಭೋಗಿನಾ=ವಿಶಾಲವಾದ, ನೀಲಾಬ್ಜದ್ಯುತಿನಾ=ನೀಲಕಮಲದಂತೆ ಕಾಂತಿಯುಳ್ಳ, ಅಹಿನಾ=ಸರ್ಪದಿಂದ, ಪರಂ=ವಿಶೇಷವಾಗಿ, ಅಹಂ=ನಾನು, ದಷ್ಟಃ=ಕಚ್ಚಲ್ಪಟ್ಟಿರುವೆನು, ತಚ್ಚಕ್ಷುಷಾ—ತತ್=ಆ ಕಾಮಿನಿಯ,ಚಕ್ಷುಷಾ=ಕಟಾಕ್ಷದಿಂದ,ನದಷ್ಟಃ=ಕಚ್ಚಲ್ಪಡಲಿಲ್ಲವು,ಶಿಷ್ಟಾಃ-ಯೋಗ್ಯರಾದ,ಚಿಕಿತ್ಸಕಾಃ=ವೈದ್ಯರು, ಧರ್ಮಾರ್ಥಿನಃ=ಸುಕೃತಾಪೇಕ್ಷೆಯುಳ್ಳವರಾಗಿ,ದಿಶಿದಿಶಿ=ಪ್ರತಿದಿಕ್ಕಿನಲ್ಲಿಯೂ,ಪ್ರಾಯೇಣ=ಬಹುಶಃ ಸಂತಿ=ಇರುವರು,ಮುಗ್ಧೆ=ಸುಂದರಿಯು.ಅಕ್ಷಿ=ಕಣ್ಣುಗಳಿಂದ, ಕ್ಷಣ=ಕ್ಷಣಕಾಲವು,ವೀಕ್ಷಿತಸ್ಯ=ನೋಡಲ್ಪಟ್ಟ (ವೀಕ್ಷತಸ್ಯ=ಕಚ್ಚಲ್ಪಟ್ಟ) ಮೇ=ನನಿಗಾದರೊ,ವೈದ್ಯಃ=ಚಿಕಿತ್ಸಕನು, ನಹಿ=ಇಲ್ಲವು, ಔಷಧಂಚ=ಮದ್ದು ನ=ಇಲ್ಲವು,॥೫೪॥

ತಾ॥ ಉದ್ದವಾಗಿಯೂ, ಅತಿಚಪಲವಾಗಿಯೂ, ವಕ್ರವಾದ ಗಮನವುಳ್ಳದ್ದಾಗಿಯೂ, ಬಹು ಬಲವುಳ್ಳದ್ದಾಗಿಯೂ, ದೊಡ್ಡ ಹೆಡೆಯುಳ್ಳದ್ದಾಗಿಯೂ ಇರುವ ಕೃಷ್ಣಸರ್ಪದಿಂದ ಅನೇಕಾವರ್ತಿ ಕಚ್ಚಿಸಿಕೊಂಡಿರುವೆನು. ಅತ್ಯಂತ ವಿಶಾಲವಾಗಿ ಚಾಂಚಲ್ಯದಿಂದ ಹೊಳೆಯುವ, ವಕ್ರವಾದ ಕಾಮಿನಿಯ ಕಟಾಕ್ಷದಿಂದ ಮಾತ್ರ ಕಚ್ಚಿಸಿಕೊಳ್ಳಲಿಲ್ಲವು. ಏಕೆಂದರೆ ಬಾದುವೇಳೆ ರೂಢವಾಗಿರುವ ಹಾವಿನಿಂದ ಕಚ್ಚಿಸಿಕೊಂಡರೂ ಧರ್ಮಾರ್ಥವಾಗಿ ಔಷಧವನ್ನು ಕೊಟ್ಟು ವಿಷವನ್ನಿಳಿಸುವ ವೈದ್ಯರು ಎಲ್ಲಾ ಕಡೆಯಲ್ಲಿಯೂ ದೊರೆಯುವರು. ಕಾಮಿನಿಯ ಕಟಾಕ್ಷದಿಂದ ಕಚ್ಚಲ್ಪಟ್ಟವನೇ ಆದರೆ ತಕ್ಕ ವೈದ್ಯನೂ ಇಲ್ಲ. ಔಷಧವೂ ಸುತರಾಂ ಇಲ್ಲವು. ಮೋಹಾರ್ಣವದೊಳು ಮುಳಗುವದೇ ನಿಜವೆಂದರಿಯುವನು. ॥೫೪॥

ಶ್ಲೋ॥ ಇಹಹಿಮಧುರಗೀತಂನೃತ್ತಮೇತದ್ರಸೋಯಂ ಸ್ಫುರತಿಪರಿಮ
ಳೋಸೌಸ್ಪರ್ಶಏಷಸ್ತನಾನಾಂ ॥ ಇತಿಹತಪರಮಾರ್ಥೈರಿಂದ್ರ
ಯೈರ್ಭ್ರಾಮ್ಯಮಾಣಸ್ಸ್ವಹಿತಕರಣಧೂರ್ತೈಃಪಂಚಭಿರ್ವಂಚಿ
ತೋಸ್ಮಿ ॥ .... .... ॥೫೫॥

ಟೀ॥ ಇಹಹಿ=ಈ ತರುಣಿಯರಲ್ಲಿಯೆ, ಮಧುರಗೀತಂ=ಇಂಪಾದ ಗಾನವು, ಸ್ಫುರತಿ=ಪ್ರಕಾಶಿಸುವದು, ಏತತ್=ಇದೇ, ನೃತ್ಯಂ=ನಾಟ್ಯವು, ಸ್ಫುರತಿ=ತೋರುವದು, ಅಯಂ=ಇದೆ, ರಸಃ=ಅಧರಾಮೃತವು, ಸ್ಫುರತಿ=ಪ್ರಜ್ವಲಿಸುವದು, ಅಸೌ=ಈ, ಪರಿಮಳಃ=ವದನ ಗಂಧವು, ಸ್ಫುರತಿ=ಕಂಗೊಳಿಪುದು, ಏಷಃ=ಈ, ಸ್ತನಾನಾಂ=ಕುಚಗಳ, ಸ್ಪರ್ಶಃ=ಸ್ಪರ್ಶವು, ಸ್ಫುರತಿ=ಕಂಗೊಳಿಪುದು, ಇತಿ—ಈ ಪ್ರಕಾರವಾಗಿ, ಹತ=ನಷ್ಟವಾದ, ಪರಮಾರ್ಥೈಃ=ನಿಜವಾದ ಅರ್ಥವುಳ್ಳ, ಸ್ವಹಿತಕರಣಧೂರ್ತೈಃ=ತಮಗೆ ಹಿತವನ್ನು ಮಾಡಿಕೊಳ್ಳುವದರಲ್ಲಾಸಕ್ತವಾದ, ಪಂಚಭಿಃ=ಐದಾದ, ಇಂದ್ರಿಯೈಃ=ಶ್ರೋತ್ರಾದಿಗಳಿಂದ, ಭ್ರಾಮ್ಯಮಾಣಃ=ಭ್ರಮಿಸುವವನಾಗಿ, ವಂಚಿತಃ=ಮೋಸಗೊಳಿಸಲ್ಪಟ್ಟವನು, ಅಸ್ಮಿ=ಆಗಿರುವೆನು. ... ||೫೫||

ತಾ॥ ಈ ತರುಣಿಯರಲ್ಲಿಯೇ ಲೋಕೋತ್ತರವಾಗಿಯೂ, ಇಂಪಾಗಿಯೂ ಇರುವ ಗಾನವಿರುವದು, ಇವರ ನರ್ತನವೇ ಸರ್ವೋತ್ತಮವಾದದ್ದು, ಈ ಅಂಗನೆಯ ಅಧರಾಮೃತವೇ ಸರ್ವೋತ್ಕೃಷ್ಟವಾದದ್ದು. ಈ ಕಾಮಿನಿಯರ ವದನ ಕಮಲಗಂಧವೇ ಅತ್ಯುತ್ತಮವಾಗಿರುವದು. ಮತ್ತು ಈ ಕಾಂತೆಯರ ಕುಚಕುಂಭಗಳ ಸ್ಪರ್ಶವೇ ಪರಮಹಿತವಾದದ್ದು ಎಂಬೀ ಭ್ರಾಂತಿಯಿಂದ ಪರಮಾರ್ಥವನ್ನು ತೊರೆದು, ಸಾರವಿಲ್ಲದ ಸ್ವಪ್ರಯೋಜನವನ್ನು ಮಾಡಿಕೊಳ್ಳುವ ಕಿವಿ ಕಣ್ಣು ಮೊದಲಾದ ಪಂಚೇಂದ್ರಿಯಗಳಿಂದ ಅನ್ಯಾಯವಾಗಿ ವಂಚಿಸಲ್ಪಟ್ಟೆನು, ಆದರೆ ವಿವೇಕಿಯು ಹೀಗೆ ಆಗಬಾರದೆಂದು ಭಾವವು. .... ||೫೫||

ಶ್ಲೋ॥ ನಗಮ್ಯೋಮಂತ್ರಾಣಾಂನಚಭವತಿ ಭೈಷಜ್ಯವಿಷಯೋನಚಾಪಿ
ಪ್ರಧ್ವಂಸಂವ್ರಜತಿವಿವಿಧೈಃಶಾಂತಿಕಶತೈಃ ॥ ಭ್ರಮಾವೇಶಾದಂಗೆ
ಕಮಪಿವಿದಧದ್ಭಂಗಮಸಕೃತ್ಸ್ಮರಾಪಸ್ಮಾರೋಯಂಭ್ರಮಯತಿ
ದೃಶಂಘೂರ್ಣಯತಿಚ ॥ .... .... ||೫೬||

ಟೀ॥ ಅಂಗನೆಯೊಳು ವ್ಯಾಮೋಹವನ್ನುಂಟುಮಾಡುವ ಮದನನ್ನು ದೂಷಿಸುತ್ತಾನೆ— ಮಂತ್ರಾಣಾಂ=ಮಂತ್ರಗಳಿಗೆ, ನಗಮ್ಯಃ=ಸಾಧ್ಯವಾಗುವದಿಲ್ಲ; ಭೈಷಜ್ಯವಿಷಯಃ=ಔಷಧಗಳಿಗೆ ಗೋಚರವು, ನಚಭವತಿ=ಆಗುವದಿಲ್ಲ. ವಿವಿಧೈಃ=ನಾನಾಬಗೆಯಾದ, ಶಾಂತಿಕ=ಶಾಂತಿಗಳ, ಶತೈಃ=ನೂರುಗಳಿಂದ, ಪ್ರಧ್ವಂಸಂಚಾಪಿ=ನಾಶವನ್ನೂ, ನವ್ರಜತಿ=ಹೊಂದುವದಿಲ್ಲ, ಭ್ರಮಾವೇಶಾತ್=ಮೋಹವನ್ನುಂಟುಮಾಡುವದರ ದೆಶೆಯಿಂದ, ಅಂಗೆ=ಶರೀರದಲ್ಲಿ, ಕಮಪಿ=ಹೇಳಲಶಕ್ಯವಾದ, ಭಂಗಂ=ಜಾಡ್ಯವನ್ನು, ಅಸಕೃತ್=ಅನೇಕಾವರ್ತಿ, ವಿದಧತ್=ಉಂಟುಮಾಡುವ

ವ, ಸ್ಮರ-ಮನ್ಮಥ ಪ್ರಯುಕ್ತವಾದ, ಅಯಂ=ಈ, ಅಪಸ್ಮಾರಃ=ಅಪಸ್ಮಾರರೋಗವು, ದೃಶಂ=ದೃಷ್ಟಿಯನ್ನು. ಭ್ರಮಯತಿ=ಭ್ರಾಂತಿಗೊಳಿಸುವುದು, ಘೂರ್ಣಯತಿಚ=ತಿರುಗಿಸುವದು. .... .... .... ||೫೬||

ತಾ|| ಸಕಲವಾದ ಮಂತ್ರತಂತ್ರಗಳಿಗಸಾಧ್ಯವಾಗಿ, ಯಾವವಿಧವಾದ ಔಷಧಗಳಿಂದಲೂ ನಿವಾರಣ ಮಾಡಲಶಕ್ಯವೆನಿಸಿ ದೇವತಾರಾಧನಾದಿ ಶಾಂತಿಗಳಿಂದಲೂ ಸಮಾಧಾನವಾಗದಿರುವದಾಗಿ, ಎಲ್ಲಾ ಅವಯವಗಳಲ್ಲಿಯೂ, ವಿಚಿತ್ರವಾದ ಮೋಹವನ್ನುಂಟುಮಾಡುತಲಿರುವ ಕಾಮವಿಕಾರವೆಂಬ ಅಪಸ್ಮಾರರೋಗವು ದೃಷ್ಟಿಯನ್ನು ವ್ಯತ್ಯಾಸಪಡಿಸುತಲೂ ತಿರುಗಿಸುತ್ತಲೂ ಮತ್ತತೆಯನ್ನುಂಟುಮಾಡುವದು, ಕಾಮಿನಿಯ ಸಹವಾಸವು ಅಪಸ್ಮಾರರೋಗ ಸದೃಶವಾದದ್ದೆಂದು ಭಾವವು. ||೫೬||

ಶ್ಲೋ|| ಜಾತ್ಯಂಧಾಯಚದುರ್ಮುಖಾಯಚಜರಾಜೀರ್ಣಾಖಿಲಾಂಗಾಯಚ
ಗ್ರಾಮೀಣಾಯಚದುಷ್ಕುಲಾಯಚಗಳತ್ಕುಷ್ಠಾಭಿಭೂತಾಯಚ||
ಯಚ್ಛಂತೀಷುಮನೋಹರಂನಿಜವಪುರ್ಲಕ್ಷ್ಮೀಲವಶ್ರದ್ಧಯಾಪ
ಣ್ಯಸ್ತ್ರೀಷುವಿವೇಕಕಲ್ಪಲತಿಕಾಶಸ್ತ್ರೀಷುರಜ್ಯೇತಕಃ ||೫೭||

ಟೀ|| ಮೂರು ಶ್ಲೋಕಗಳಿಂದ ವೇಶ್ಯಾಂಗನೆಯನ್ನು ದೂಷಿಸುತ್ತಾನೆ— ಜಾತ್ಯಂಧಾಯಚ=ಹುಟ್ಟುಕುರುಡನಿಗೆ, ದುರ್ಮುಖಾಯಚ=ದುರ್ಭಾಷೆಯಿಂದ ದುಷ್ಟಮುಖವುಳ್ಳವನಿಗೆ, ಜರಾ=ಮುಪ್ಪಿನಿಂದ, ಜೀರ್ಣ=ಶಿಥಿಲವಾದ, ಅಂಗಾಯಚ=ಅವಯವವುಳ್ಳವನಿಗೆ, ಗ್ರಾಮೀಣಾಯಚ=ಹಳ್ಳಿಯ ಕುರುಬನಿಗೆ, ದುಷ್ಕುಲಾಯಚ=ಹೀನಕುಲದಲ್ಲ ಹುಟ್ಟಿದವನಿಗೆ, ಗಳತ್=ಬಿದ್ದುಹೋಗುವ, ಕುಷ್ಠ=ಕುಷ್ಠರೋಗದಿಂದ, ಅಭಿಭೂತಾಯಚ=ತಿರಸ್ಕೃತನಿಗೆ, ಲಕ್ಷ್ಮೀ=ಸಂಪತ್ತಿನ, ಲವ=ಲೇಶದ, ಶ್ರದ್ಧಯಾ=ವಿಶ್ವಾಸದಿಂದ, ಮನೋಹರಂ=ಸುಂದರವಾದ, ನಿಜಂ=ಸ್ವಂತವಾದ, ವಪುಃ=ಶರೀರವನ್ನು, ಯಚ್ಛಂತೀಷು=ಕೊಡುವ, ವಿವೇಕ=ಯುಕ್ತಾಯುಕ್ತವಿಚಾರವೆಂಬ,ಕಲ್ಪಲತಿಕಾ=ಕಲ್ಪಲತೆಗೆ,ಶಸ್ತ್ರೀಷು=ಆಯುಧಗಳಾದ,ಪಣ್ಯಸ್ತ್ರೀಷು=ವೇಶ್ಯಾಂಗನೆಯರಲ್ಲಿ, ಕಃ=ಯಾವ ಪುರುಷನು,ರಜ್ಯೇತ=ಅನುರಕ್ತನಾದಾನು?||೫೭||

ತಾ|| ಹುಟ್ಟುಕುರುಡನಿಗೂ, ಅಸಂಬದ್ಧಪ್ರಲಾಪಿಗೂ, ಅಜ್ಜುಗುಜ್ಜು ಮುದುಕನಿಗಾದರೂ, ಅಜ್ಞಾತ ಕುಲಗೋತ್ರನಿಗೂ, ಹೀನಕುಲದೊಳು ಪುಟ್ಟಿದವನಿಗೂ, ಕುಷ್ಠಾದಿ ಮಹಾವ್ಯಾಧಿಗ್ರಸ್ತನಿಗೂ, ಅತ್ಯಲ್ಪವಾದ ಧನದಾಶೆಯಿಂದ ಸಂಭೋಗಾರ್ಥವಾಗಿ ತಮ್ಮ ಮನೋಹರವಾದ

ಶರೀರವನ್ನು ದಾನಮಾಡುತ್ತ, ಯುಕ್ತಾಯುಕ್ತ ವಿಚಾರವೆಂಬ ಎಳೆಯ ಬಳ್ಳಿಯನ್ನು ಅಮೂಲಾಗ್ರವಾಗಿ ಹಾಳುಮಾಡುವ ವೇಶ್ಯಾಂಗನೆಯರಲ್ಲಿ ಯಾವನಾದರೂ ವಿಶ್ವಾಸವನ್ನು ಮಾಡುವನೆ? ಒಂದು ಕಾಲಕ್ಕೂ ಮಾಡಲಾರನು .... .... ॥೫೭॥

ಶ್ಲೋ॥ ವೇಶ್ಯಾಸೌ ಮದನಜ್ವಾಲಾರೂಪೇಂಧನವಿವರ್ಧಿತಾ । ಕಾಮಿಭಿರ್ಯ
ತ್ರ ಹೂಯಂತೇ ಯೌವನಾನಿ ಧನಾನಿ ಚ .... ॥೫೮॥

ಟೀ॥ ಅಸೌ=ಈ, ವೇಶ್ಯಾ=ಸೂಳೆಯು, ರೂಪ=ಸೌಂದರ್ಯವೆಂಬ, ಇಂಧನ=ಕಟ್ಟಿಗೆಯಿಂದ, ವಿವರ್ಧಿತಾ=ವೃದ್ಧಿ ಹೊಂದಿಸಲ್ಪಟ್ಟ, ಮದನಜ್ವಾಲಾ=ಮನ್ಮಥಾಗ್ನಿಯು. ಯತ್ರ=ಯಾವ ಮದನಜ್ವಾಲಾರೂಪವಾದ ವೇಶ್ಯೆಯಲ್ಲಿ, ಕಾಮಿಭಿಃ=ಕಾಮುಕರಿಂದ, ಯೌವನಾನಿ=ಹೊಸದಾದ ವಯಸ್ಸುಗಳು. ಧನಾನಿಚ=ದ್ರವ್ಯಗಳೂ, ಹೂಯಂತೇ=ಹವನ ಮಾಲ್ಪಡುತ್ತವೆ.... .... ॥೫೮॥

ತಾ॥ ಸೌಂದರ್ಯವೆಂಬ ಕಟ್ಟಿಗೆಯಿಂದುರಿಯುತ್ತಿರುವ ವೇಶ್ಯಾಂಗನೆಯೆಂಬ ಮದನಾಗ್ನಿಯಲ್ಲಿ ಕಾಮುಕರು ತಮ್ಮ ಪ್ರಾಯವನ್ನು, ದ್ರವ್ಯವನ್ನು ಇತ್ತು ನಷ್ಟವಾಗುವರು. ವಿವೇಕಿಯಾದವನು ಹಾಗೆ ಆಗಬಾರದೆಂದಾಶಯವು. .... .... .... ॥೫೮॥

ಶ್ಲೋ॥ ಕಶ್ಚುಂಬತಿ ಕುಲಪುರುಷೋ ವೇಶ್ಯಾಧರ ಪಲ್ಲವಂ ಮನೋಜ್ಞಮ
ಪಿ॥ ಚಾರಭಟಚೋರಚೇಟಕವಿಟನಟನಿಷ್ಠೀವನಶರಾವಂ ॥೫೯॥

ಟೀ॥ ಮನೋಜ್ಞಮಪಿ=ಸುಂದರವಾಗಿದ್ದರೂ. ವೇಶ್ಯಾಯಾಃ=ವೇಶ್ಯಾಂಗನೆಯ, ಅಧರಪಲ್ಲವಂ=ಚಿಗುರಿನಂತಿರುವ ತುಟಿಯನ್ನು, ಕಃಕುಲಪುರುಷಃ=ಸತ್ಕುಲಪ್ರಸೂತನಾದ ಯಾವ ಮನುಷ್ಯನು, ಚುಂಬತಿ=ಚುಂಬಿಸುವನು? ತತ್=ಆ ಅಧರವು, ಚಾರ=ಗೂಢಪುರುಷರು, ಭಟ=ಯೋಧರು, ಚೋರ=ಕಳ್ಳರು. ಚೇಟಕ=ಸ್ತ್ರೀಪುರುಷಸಂಧಾನ ಕುಶಲರು, ವಿಟ=ಜಾರರು, ನಟ=ವೇಷಧಾರಿಗಳಾದ ನರ್ತಕರು ಇವರುಗಳ, ನಿಷ್ಠೀವನಶರಾವಂ=ಉಚ್ಚಿಷ್ಟಪಾತ್ರೆಯು, .... ॥೫೯॥

ತಾ॥ ನಟರು, ವಿಟರು, ತಲೆಹಿಡುಕರು, ಚೋರರು ಮೊದಲಾದ ಹೀನಜಾತಿಯವರ ಎಂಜಲಿನ ಸಂಬಂಧದಿಂದ ಎಂಜಲುಬೋಕಿಯಂತೆ ಅತ್ಯಸಹ್ಯಕರವಾಗಿ, ನೋಡುವದಕ್ಕೆ ಮಾತ್ರ ಸುಂದರವಾಗಿಕಾಣುವ ವೇಶ್ಯಾಂಗನೆಯ ತುಟಿಯನ್ನು ಜಾತಿನೀತಿ ಕುಲಾಚಾರ ಧರ್ಮಗಳನ್ನು ತಿಳಿದ ಕುಲಪುರುಷನು ಒಂದು ಕಾಲಕ್ಕಾದರೂ ಚುಂಬಿಸುವನೆ? ಸರ್ವಥಾ ಚುಂಬಿಸಲಾರನು. .... .... .... ॥೫೯॥

ಶ್ಲೋ॥ ಮಧುತಿಷ್ಠತಿವಾಚಿಯೋಷಿತಾಂಹೃದಿಹಾಲಾಹಲಮೇವಕೇವಲಂ।
ಅತಏವನಿಪೀಯತೇಽಧರೋಹೃದಯಂಮುಷ್ಟಿಭಿರೇವತಾಡ್ಯತೇ॥

ಟೀ॥ ಸ್ತ್ರೀಯರುಸರ್ವಥಾ ತ್ಯಾಜ್ಯರು ಎಂಬದಾಗಿ ಸೂಚಿಸುತ್ತಾನೆ.—ಯೋಷಿತಾಂ=ಸ್ತ್ರೀಯರ, ವಾಚಿ=ವಾಕ್ಕಿನಲ್ಲಿ, ಮಧು=ಅಮೃತವು, ತಿಷ್ಠತಿ=ಇರುವದು, ಹೃದಯೆ=ಶರೀರದಲ್ಲಿ, (ಎದೆಯಲ್ಲಿ) ಕೇವಲಂ=ವಿಶೇಷವಾಗಿ, ಹಾಲಾಹಲಮೇವ=ಕಾಲಕೂಟವಿಷವೆ, ಅತಏವ=ಆದಕಾರಣದಿಂದಲೆ,ಅಧರಃ=ತುಟಿಯು, ನಿಪೀಯತೆ=ಪಾನವಮಾಡಲ್ಪಡುವದು, ಹೃದಯಂ=ಎದೆಯು, ಮುಷ್ಟಿಭಿಃ=ಹಿಡಿಗಳಿಂದ, ತಾಡ್ಯತ ಏವ=ಹೊಡೆಯಲ್ಪಡುವದು .... ... ॥೬೦॥

ತಾ॥ ವನಿತೆಯರ ವಾಕ್ಕಿನೊಳು ಅಮೃತವಿರುವದು. ಹೃದಯದೊಳು ಕಾಲಕೂಟ ವಿಷವಿರುವದು. ಆದುದರಿಂದಲೇ ಲೋಕದೊಳು ಜನರೆಲ್ಲರೂ ಅಂಗನೆಯರ ಅಧರವನ್ನು ಆನಂದದಿಂದ ಚುಂಬಿಸುವರು. ಹೃದಯವನ್ನು ಹಸ್ತಗಳಿಂದ ಮರ್ದಿಸುವರು ಎಂದರೆ ಕಾಮಿನಿಯರು ಮಾತನ್ನು ಮಾತ್ರ ಮೃದುವಾಗಿ ಆಡುತ, ಹೃದಯದಲ್ಲಿ ವಿಷವನ್ನು ತುಂಬಿಕೊಂಡಿರುವರು, ಆದ್ದರಿಂದಲೆ ತ್ಯಾಜ್ಯರೆಂದಾಶಯವು .... ॥೬೦॥

## ಸುವಿರಕ್ತ ದುರ್ವಿರಕ್ತ ಪದ್ಧತಿ ವರ್ಣನಾರಂಭವು.

ಶ್ಲೋ॥ ಧನ್ಯಾಸ್ತಏವಧವಳಾಯತಲೋಚನಾನಾಂ ತಾರುಣ್ಯದರ್ಪಘನಪೀನಪಯೋಧರಾಣಾಂ ॥ ಕ್ಷಾಮೋದರೋಪರಿಲಸತ್ತ್ರಿವಳೀಲತಾನಾಂದೃಷ್ಟ್ವಾಕೃತಿಂವಿಕೃತಿಮೇತಿಮನೋನಯೇಷಾಂ ॥೬೧॥

ಟೀ॥ ಮೊದಲು ಸುವಿರಕ್ತರನ್ನು ವರ್ಣಿಸುತ್ತಾನೆ—ಧವಳ=ಬೆಳ್ಳಗಿರುವ, ಆಯತ=ವಿಶಾಲವಾದ, ಲೋಚನಾನಾಂ=ನಯನವುಳ್ಳ, ತಾರುಣ್ಯದರ್ಪ=ಪ್ರಾಯದ ಮದದಿಂದ, ಘನ=ನಿಬಿಡವಾದ, ಪೀನ=ಬಲಿತ, ಪಯೋಧರಾಣಾಂ=ಕುಚಗಳುಳ್ಳ, ಕ್ಷಾಮೋದರ=ಕೃಶವಾದ ಮಧ್ಯದ, ಉಪರಿ=ಮೇಲೆ, ಲಸತ್=ಹೊಳೆವ, ತ್ರಿವಳೀಲತಾನಾಂ=ಬಳ್ಳಿಯಂತಿರುವ ವಳಿತ್ರಯವುಳ್ಳ ಕಾಮಿನಿಯರ, ಆಕೃತಿಂ=ಆಕಾರವನ್ನು, ದೃಷ್ಟ್ವಾ=ನೋಡಿ, ಯೇಷಾಂ=ಯಾರ, ಮನಃ=ಮನಸ್ಸು, ವಿಕೃತಿಂ=ವಿಕಾರವನ್ನು, ನೈತಿ=ಹೊಂದುವದಿಲ್ಲವೋ, ತಏವ=ಅವರೆ, ಧನ್ಯಾಃ=ಸುಕೃತಿಗಳು

ತಾ॥ ಪುಂಡರೀಕ ದಳದಂತೆ ಧವಳವಾಗಿಯೂ, ವಿಶಾಲವಾಗಿಯೂ

ಇರುವ ನಯನಗಳುಳ್ಳವರಾಗಿ, ಪ್ರಾಯದ ಕೊಬ್ಬಿನಿಂದ ಬಲಿತು ನಿಬಿಡ ವಾದ ಕುಚಕುಂಭಗಳಿಂದ ಶೋಭಿಸುತ್ತ, ಕೃಶವಾಗಿರುವ ಮಧ್ಯಭಾಗದ ಮೇಲ್ಭಾಗದೊಳು ಶೋಭಿಸುವ ತ್ರಿವಳಿಗಳಿಂದ ರಮಣೀಯರಾದ ತರುಣಿ ಯರ ಮನೋಹರವಾದ ಸೌಂದರ್ಯವನ್ನು ನೋಡಿ ಯಾರ ಮನಸ್ಸಿನಲ್ಲಿ ವಿಕಾ ರವನ್ನೈದದಿರುವದೊ ಅವರೇ ಲೋಕದೊಳು ಸರ್ವೋತ್ತಮರಾದ ಸುಕೃ ತಿಗಳೆಂದರಿಯತಕ್ಕದ್ದು .... .... .... ॥೬೧॥

ಶ್ಲೋ॥ ಬಾಲೇಲೀಲಾಮುಕುಳಿತಮಮೀಮಂಥರಾದೃಷ್ಟಿಪಾತಾಃಕಿಂಕ್ಷಿ
ಪ್ಯಂತೇವಿರಮವಿರಮವ್ಯರ್ಥಏಷಶ್ರಮಸ್ತೇ ॥ ಸಂಪ್ರತ್ಯನ್ಯೇ
ವಯಮುಪರತಂಬಾಲ್ಯಮಾಸ್ಥಾ ವನಾಂತೇಕ್ಷೀಣೋಮೋಹಸ್ತೃ
ಣಮಿವಜಗಜ್ಜಾಲಮಾಲೋಕಯಾಮಃ .... ॥೬೨॥

ಟೀ॥ ವೈರಾಗ್ಯವನ್ನು ಪ್ರಕಟಿಸುತ್ತಾನೆ--ಹೇಬಾಲೆ=ಎಲೈ ಮುಗ್ಧೆಯೇ, ಲೀ ಲಾ=ವಿಲಾಸದಿಂದ, ಮುಕುಳಿತಂ=ನಿಮೀಲವುಳ್ಳಂತೆ, ಮಂಥರಾಃ=ಮಂದವಾದ, ಅಮೀ=ಈ, ದೃಷ್ಟಿಪಾತಾಃ=ಕಟಾಕ್ಷಗಳು, ಕಿಂ=ಏತಕ್ಕೋಸ್ಕರ, ಕ್ಷಿಪ್ಯಂತೇ=ಪ್ರ ಸರಿಸಲ್ಪಡುತ್ತವೆ, ವಿರಮವಿರಮ=ನಿಲ್ಲಿಸು ನಿಲ್ಲಿಸು, ಏಷಃ=ಈ, ತೇ=ನಿನ್ನ, ಶ್ರ ಮಃ=ಆಯಾಸವು, ವ್ಯರ್ಥಃ=ನಿಷ್ಫಲವು, ಸಂಪ್ರತಿ=ಈಗ, ವಯಂ=ನಾವುಗಳು, ಅನ್ಯೇ=ಬೇರೆಜನಗಳು, ಬಾಲ್ಯಂ=ಚಿಕ್ಕತನವು, ಉಪರತಂ=ನಷ್ಟವಾಯಿತು, ಆಸ್ಥಾ= ವಿಶ್ವಾಸವು, ವನಾಂತೇ=ಅರಣ್ಯಮಧ್ಯದಲ್ಲಿ, ವರ್ತತೇ=ಇರುವದು, ಮೋಹಃ=ಅಜ್ಞಾ ನವು, ಕ್ಷೀಣಃ=ನಷ್ಟವಾಯಿತು, ಜಗಜ್ಜಾಲಂ=ಅಶೇಷ ಪ್ರಪಂಚವನ್ನು, ತೃಣ ಮಿವ=ನಿಸ್ಸಾರ ಪದಾರ್ಥದಂತೆ, ಆಲೋಕಯಾಮಃ=ನೋಡುವೆವು. ॥೬೨॥

ತಾ॥ ಎಲೆ ತರುಣಿಯೆ, ವಿಚಿತ್ರವಾದ ವಿಲಾಸಗಳಿಂದ ಚಮತ್ಕಾರ ವಾದ ಕಟಾಕ್ಷಗಳನ್ನು ನಮ್ಮ ಮೇಲೆ ಹಾಕಬೇಡ, ಏತಕ್ಕೆ ಶ್ರಮಪ ಡುವಿ, ಸುಮ್ಮನಿರು, ಏತಕ್ಕೆಂದರೆ-ನಮಗೆ ಅವಿವೇಕವು ಕಳೆದು ಹೋ ಯಿತು. ಈಗಲೋ, ಕಾಡಿನಲ್ಲಿ ವಾಸಮಾಡಲು ಆಶೆಯು. ಅಜ್ಞಾನ ವು ನಷ್ಟವಾಯಿತು, ಆದುದರಿಂದಲೆ ಸಮಸ್ತ ಪ್ರಪಂಚವನ್ನೂ ನಿಸ್ಸಾರ ಮಾದುದನ್ನಾಗಿ ನೋಡುವೆವು, ಆದ್ದರಿಂದ ಮೊದಲಿಗಿಂತಲೂ ಬೇರೆ ಜನ ವಾಗಿರುವೆವು, ನಿಮ್ಮ ಚಾತುರ್ಯಕ್ಕೆ ಒಳಗಾಗೆವು. .... ॥೬೨॥

ಶ್ಲೋ॥ ಇಯಂಬಾಲಾಮಾಂ ಪ್ರತ್ಯನವರತಮಿಂದೀವರದಳಪ್ರಭಾಚೋ
ರಂಚಕ್ಷುಃಕ್ಷಿಪತಿಕಿಮಭಿಪ್ರೇತಮನಯಾ ॥ ಗತೋಮೋಹೋ

ಸ್ಮಾಕಂಸ್ಮರಶಬರಬಾಣವ್ಯತಿಕರಜ್ವರಜ್ವಾಲಾ ಶಾಂತಾತದಪಿನವ
ರಾಕೀವಿರಮತಿ .... .... ॥೬೨॥

ಟೀ॥ ಹೇಳಿದರ್ಥವನ್ನು ಬೇರೆವಿಧದಿಂದ ಹೇಳುತ್ತಾನೆ—ಇಯಂ=ಈ, ಬಾಲಾ=ಮುಗ್ಧೆಯು, ಮಾಂಪ್ರತಿ=ನನ್ನನ್ನು ಕುರಿತು, ಅನವರತಂ=ಯಾವಾಗಲೂ, ಇಂದೀವರ=ಕನ್ನೈದಿಲೆಯ, ದಳ=ಪತ್ರದ, ಪ್ರಭಾ=ಕಾಂತಿಯನ್ನು, ಚೋರಂ=ಅಪಹರಿಸುವ, ಚಕ್ಷುಃ=ದೃಷ್ಟಿಯನ್ನು, ಕ್ಷಿಪತಿ=ಪ್ರಸರಿಸುವಳು, ಅನಯಾ=ಈ ಬಾಲೆಯಿಂದ, ಕಿಂ=ಏನು, ಅಭಿಪ್ರೇತಂ=ಅಪೇಕ್ಷಿಸಲ್ಪಟ್ಟಿರುವದೋ, ಅಸ್ಮಾಕಂ=ನಮಗೆ, ಮೋಹಃ=ಭ್ರಮೆಯು, ಗತಃ=ಶಾಂತವಾಯಿತು, ಸ್ಮರ=ಮನ್ಮಥನೆಂಬ, ಶಬರ=ಬೇಡನ, ಬಾಣ=ಅಂಬಿನ, ವ್ಯತಿಕರ=ಸಂಬಂಧದಿಂದುಂಟಾದ, ಜ್ವರ=ಸಂತಾಪದ, ಜ್ವಾಲಾ=ಉರಿಯು, ಶಾಂತಾ=ತಣ್ಣಗಾಯಿತು, ತದಪಿ=ಹಾಗಾದಾಗ್ಯೂ, ವರಾಕೀ=ಈ ತುಚ್ಛಗಳು, ನವಿರಮತಿ=ಸುಮ್ಮನಾಗಳು. ॥೬೨॥

ತಾ॥ ಸಂಭೋಗಾಭಿಲಾಷೆಯು ಶಾಂತವಾಗಿ, ಕಾಮನೆಂಬ ಬೇಡನಂಬಿನ ಪೆಟ್ಟಿನಿಂದುಂಟಾಗುವ ಮದನಸಂತಾಪಗಳೊಂದೂ ಇಲ್ಲದೆ ಇದ್ದಾಗ್ಯೂ, ನಮ್ಮನ್ನು ನೋಡಿ ಕನ್ನೈದಿಲೆಯಂತೆ ಕಮನೀಯವಾದ ಕಣ್ಣುಳ್ಳ ಕುತ್ಸಿತಳಾದೀ ಕಾಮಿನಿಯು ಸುಮ್ಮನಿರದೆ ಕಟಾಕ್ಷಗಳನ್ನು ನಮ್ಮ ಮೇಲೆ ವೃಥಾ ಹಾಕುವಳಲ್ಲ ? ಇನ್ನೆಂದಿಗೂ ಇವಳಿಗೆ ನಾವು ವಶರಾಗೆವು ಎಂದು ಒಬ್ಬಾನೊಬ್ಬ ವೈರಾಗ್ಯವನ್ನು ಹೊಂದಿದಾತನ ವಚನವನ್ನಭಿನಯಿಸಿ ಪೇಳಿದನೆಂದು ಭಾವವು .... ॥೬೨॥

ಶ್ಲೋ॥ ಕಿಂಕಂದರ್ಪಶರಂಕದರ್ಥಯಸಿರೇಕೋದಂಡಟಂಕಾರಿತಂರೇರೇ
ಕೋಕಿಲಕೋಮಲಂಕಲರವಂಕಿಂವಾವೃಥಾಜಲ್ಪಸಿ॥ ಮುಗ್ಧೇ
ಸ್ನಿಗ್ಧವಿದಗ್ಧಚಾರು ಮಧುರೈರ್ಲೋಲೈಃಕಟಾಕ್ಷೈರಲಂಚೇತ
ಶ್ಚುಂಬಿತವಾಸುದೇವಚರಣಧ್ಯಾನಾಮೃತಂವರ್ತತೇ ॥೬೩॥

ಟೀ॥ ಕಂದರ್ಪನ ದರ್ಪವನ್ನು ನಿರಾಕರಿಸುವ ಮಾತನ್ನು ಹೇಳುತ್ತಾನೆ—ರೇಕಂದರ್ಪ=ಎಲಾ ನೀಚಮನ್ಮಥನೇ, ಕೋದಂಡಟಂಕಾರಿತಂ=ಕೋದಂಡದಂತೆ ಟಂಕಾರವುಳ್ಳ, ಶರಂ=ನಿನ್ನ ಬಾಣವನ್ನು, ಕಿಂ=ಏತಕ್ಕೋಸ್ಕರ, ಕದರ್ಥಯಸಿ=ವ್ಯರ್ಥವಾಗಿ ಮಾಡಿಕೊಳ್ಳುತ್ತೀಯೆ, ರೇಕೋಕಿಲ=ಎಲಾ ಹೀನಕೋಗಿಲೆಯೇ, ಕೋಮಲಂ=ಮನೋಹರವಾದ, ಕಲರವಂ=ಮಧುರಸ್ವರವನ್ನು, ಕಿಂವಾ=ಏತಕ್ಕೋಸ್ಕರ, ವೃಥಾ=ವ್ಯರ್ಥವಾಗಿ, ಜಲ್ಪಸಿ=ಕೂಗುತ್ತೀಯೆ ! ರೇಮುಗ್ಧೇ=ಎಲೇ ಸುಂದರಿ, ಸ್ನಿಗ್ಧ=ಸ್ನೇಹಯುಕ್ತವಾದ, ವಿದಗ್ಧ=ವಿಲಾಸ ಸೂಚನೆಯಲ್ಲಿ ಚತುರವಾದ,

ಚಾರು=ಮನೋಹರವಾದ, ಮಧುರೈಃ=ಹಿತವಾದ, ಲೋಲೈಃ=ಚಂಚಲವಾದ, ಕಟಾಕ್ಷೈಃ=ಕಡೆಗಣ್ಣು ನೋಟಗಳಿಂದ, ಅಲಂ=ಸಾಕು, ಚೇತಃ=ನನ್ನ ಮನಸ್ಸು, ಚುಂಬಿತ=ಆಸ್ವಾದಿಸಲ್ಪಟ್ಟ, ವಾಸುದೇವ=ನಾರಾಯಣನ, ಚರಣ=ಪಾದಗಳ, ಧ್ಯಾನ=ಧ್ಯಾನವೆಂಬ, ಅಮೃತಂ=ಅಮೃತವುಳ್ಳದ್ದಾಗಿ, ವರ್ತತೆ=ಇರುವದು. ||೬೪||

ತಾ|| ಎಲಾ ನೀಚನಾದ ಕಾಮನೆ, ನಿರರ್ಥಕವಾಗಿ ಟಂಕಾರವನ್ನು ಮಾಡುತ ಏಕೆ ಬಾಣವನ್ನು ವ್ಯರ್ಥಮಾಡಿಕೊಳ್ಳುವಿ ? ಎಲೆ ಕೋಗಿಲೆಯೆ, ನಿರರ್ಥಕವಾಗಿ ಕೂಗಿ ಕಂಠವನ್ನು ಏತಕ್ಕೆ ಶೋಷಣೆ ಮಾಡಿಕೊಳ್ಳುತ್ತೀಯೆ ? ಎಲೆ ಕಾಮಿನಿಯೆ, ಬಹು ಸುಂದರವಾದ ನಿನ್ನ ಕಟಾಕ್ಷಗಳನ್ನು ಏಕೆ ಚಮತ್ಕಾರವಾಗಿ ನಮ್ಮಲ್ಲಿ ಪ್ರಸರಣ ಮಾಡುವಿ ? ನನ್ನ ಮನಸ್ಸು ನಿರಂತರದಲ್ಲಿಯೂ ನಾರಾಯಣನ ಚರಣಧ್ಯಾನವೆಂಬ ಅಮೃತಪಾನದಿಂದ ಪೂರ್ಣಾನಂದದೊಳಿರುವಲ್ಲಿ ನಿಮ್ಮ ಸಂಬಂಧವಾದ ಅಲ್ಪಸುಖದಲ್ಲಿ ಆಸಕ್ತನಾಗುವೆನೆ ? ಬಾದು ಕಾಲಕ್ಕೂ ಆಗೆನು. ನಾನು ಹರಿಕಿಂಕರನಲ್ಲದೆ ನಿಮ್ಮ ಕಿಂಕರನಲ್ಲವೆಂದು ತಿಳಿಯತಕ್ಕದ್ದು ||೬೪||

ಶ್ಲೋ|| ವಿರಹೇಪಿಸಂಗಮಃಖಲುಪರಸ್ಪರ ಸಂಗತಂಮನೋಯೇಷಾಂ |
ಹೃದಯಮಪಿವಿಘಟ್ಟಿತಂಚೇತ್ಸಂಗೋವಿರಹಂವಿಶೇಷಯತಿ ||೬೫||

ಟೀ|| ವಿರಾಗದ ರೀತಿಯನ್ನು ಹೇಳುತ್ತಾನೆ—ಯೇಷಾಂ=ಯಾವ ಸ್ತ್ರೀ ಪುರುಷರಿಗೆ, ಮನಃ=ಮನಸ್ಸು, ಪರಸ್ಪರಸಂಗತಂ=ಅನ್ಯೋನ್ಯಾನುರಾಗವುಳ್ಳದ್ದೊ ತೇಷಾಂ=ಅವರುಗಳಿಗೆ, ವಿರಹೇಪಿ=ವಿಯೋಗದಲ್ಲಿಯೂ, ಸಂಗಮಃ=ಸಮಾಗಮವೇ, ಖಲು=ನಿಶ್ಚಯವು, ಹೃದಯಮಪಿ=ಮನಸ್ಸೂ, ವಿಘಟ್ಟಿತಂಚೇತ್=ವಿಘಟನೆಯನ್ನು ಹೊಂದಿದ್ದೇ ಆದರೆ, ಸಂಗಃ=ಸಮಾಗಮವು, ವಿರಹಂ=ವಿಯೋಗವನ್ನು, ವಿಶೇಷಯತಿ=ಹೆಚ್ಚಿಸುವದು, ... ... ||೬೫||

ತಾ|| ಯಾವ ಸ್ತ್ರೀಪುರುಷರಿಗೆ ಮೊದಲು ಅನುರಾಗ ವಿಶೇಷದಿಂದ ಶರೀರಸಂಬಂಧ ಉಂಟಾಗಿರುವದೊ, ಅಂಥವರಿಗೆ ವಿರಹ ವುಂಟಾದಾಗ್ಯೂ ಮನಸ್ಸುಗಳು ಬೆರತಿರುವದರಿಂದ ಸಂಗಮವೆಂಬದು ತಪ್ಪಿಯಿಲ್ಲವು. ಆ ಮನಸ್ಸನ್ನು ನಿಮಿಷ ವೈರಾಗ್ಯಾಧೀನವನ್ನುಮಾಡಿದರೆ, ಆಗ ಮೊದಲು ಉಂಟಾಗಿದ್ದ ಸಂಗಮವು ತ್ಯಾಗಕ್ಕೆ, ಅನಭಿಮಾನಕ್ಕೂ ಕಾರಣವಾಗುವದೆಂದರಿಯುವ್ವುದು, .... .... ||೬೫||

ಶ್ಲೋ॥ ಕಿಂಗತೇನಯದಿಸಾನಜೀವತಿ ಪ್ರಾಣಿತಿಪ್ರಿಯತಮಾತಥಾಪಿಕಿಂ ।
ಇತ್ಯುದೀಕ್ಷ್ಯ ನವಮೇಘಮಾಲಿಕಾಂ ನಪ್ರಯಾತಿಪಥಿಕಸ್ಸ್ವ
ಮಂದಿರಂ .... .... ॥೬೬॥

ಟೀ॥ ಪ್ರವಾಸಿಯಾಗಿ ವಿರಕ್ತನಾಗಿರುವವನ ವೈರಾಗ್ಯವನ್ನು ಪ್ರಕಟಿಸುತ್ತಾನೆ—ಸಾ=ಆ, ಪ್ರಿಯತಮಾ=ವಲ್ಲಭೆಯು, ನಜೀವತಿಯದಿ=ವಿರಹದಿಂದ ಬದುಕದಿದ್ದರೆ, (ತದಾ=ಆಗ) ಗತೇನ=ಗಮನದಿಂದ, ಕಿಂ=ಏನು ಪ್ರಯೋಜನವು, ಪ್ರಾಣಿತಿ=ಬದುಕಿ ಇರುವಳು, ತಥಾಪಿ=ಹಾಗಾದರೂ, ಕಿಂ=ಏನು ಪ್ರಯೋಜನವು, ಇತಿ=ಈ ಪ್ರಕಾರ ವಿಚಾರಮಾಡಿ, ಪಥಿಕಃ=ಮಾರ್ಗಸ್ಥನು, ನವ=ಹೊಸದಾದ, ಮೇಘಮಾಲಿಕಾಂ=ಮೇಘಪಜ್ಕ್ತಿಯನ್ನು, ಉದೀಕ್ಷ್ಯ=ನೋಡಿ, ಸ್ವಮಂದಿರಂ=ತನ್ನ ಮನೆಯನ್ನು ಕುರಿತು, ನಪ್ರಯಾತಿ=ಹೋಗುವದಿಲ್ಲವು. ॥೬೬॥

ತಾ॥ ದೇಶಾಂತರದೊಳಿರುವ ಒಬ್ಬ ಮಾರ್ಗಸ್ಥನು ಹೇಳುತ್ತಾನೆ. ಈಗ ವರ್ಷಾಸಮಯವಾಗಿರುವದು, ಮನೆಯಲ್ಲಿ ನನ್ನ ವಲ್ಲಭೆಯು ವಿರಹ ವೇದನೆಯಿಂದ ಸತ್ತುಹೋಗಬಹುದು, ಹಾಗೆ ಸತ್ತುಹೋದರೆ ನಾನು ಹೋಗೋಣದರಿಂದೇನು ಫಲ? ಇಲ್ಲವೆ ಬದುಕಿಯೇ ಇದ್ದಳು, ಆಗಲೂ ನಾನು ಹೋಗಿ ಪ್ರಯೋಜನವಿಲ್ಲ? ಆದ್ದರಿಂದ ಹೋಗದೆ ಇಲ್ಲಿಯೇ ಇರುವದು ಲೇಸು; ಎಂದರೆ ಆಗತಕ್ಕದ್ದು ಸಿಲ್ಲದು, ಆಗದ್ದು ಆಗದು ಎಂಬದಾಗಿ ಸ್ಥಿರಬುದ್ಧಿಯುಳ್ಳವರಿಗೆ ಚಿಂತೆಯುಂಟಾಗದೆಂದು ಭಾವವು.

ಶ್ಲೋ॥ ವಿರಮತಬುಧಾಯೋಷಿತ್ಸಂಗಾತ್ಸುಖಾತ್ ಕ್ಷಣಭಂಗುರಾತ್ಕುರು
ತಕರುಣಾಮೈತ್ರೀಪ್ರಜ್ಞಾವಧೂಜನಸಂಗಮಂ ॥ ನಖಲುನರಕೇ
ಹಾರಾಕ್ರಾಂತಂಘನಸ್ತನಮಂಡಲಂ ಶರಣಮಥವಾಶ್ರೋಣೀಬಿಂ
ಬಂರಣನ್ಮಣಿಮೇಖಲಂ .... .... ॥೬೭॥

ಟೀ॥ ವಿವೇಕಿಗಳಿಗೆ ವೈರಾಗ್ಯವನ್ನುಪದೇಶಿಸುತ್ತಾನೆ—ಹೇಬುಧಾಃ=ಎಲೈ ವಿದ್ವಾಂಸರುಗಳಿರಾ, ಯೋಷಿತ್ಸಂಗಾತ್=ಅಂಗನಾ ಸಹವಾಸದ್ದೆಸೆಯಿಂದುಂಟಾದ, ಕ್ಷಣಭಂಗುರಾತ್=ಅತ್ಯಲ್ಪಕಾಲದೊಳು ನಾಶವಾಗುವ ಸುಖಾತ್=ಸುಖದ ದೆಸೆಯಿಂದ, ವಿರಮತ=ಸುಮ್ಮನಿರಿ, ಕರುಣಾ=ದಯೆಯು, ಮೈತ್ರೀ=ಸ್ನೇಹವು, ಪ್ರಜ್ಞಾ=ಬುದ್ಧಿವಿಶೇಷವು ಎಂಬ ವಧೂಜನ=ಸ್ತ್ರೀಜನರ, ಸಂಗಮಂ=ಸಂಬಂಧವನ್ನು, ಕುರುತ=ಮಾಡಿರಿ, ನರಕೇ=ನರಕದಲ್ಲಿ, ಹಾರ=ಮುಕ್ತಾಹಾರದಿಂದ, ಆಕ್ರಾಂತಂ=ಕೂಡಿರುವ, ಘನಸ್ತನಮಂಡಲಂ=ನಿಬಿಡವಾದ ಕುಚಭಾರವು, ಅಥವಾ=ಇಲ್ಲವೆ, ರಣತ್=ಧ್ವನಿಮಾಡುವ, ಮಣಿಮೇಖಲಂ=ಮಣಿಖಚಿತವಾದ ಡಾಬುವುಳ್ಳ, ಶ್ರೋಣೀ ಬಿಂಬಂ=ಕಟಿಪ್ರದೇಶವಾಗಲಿ, ಶರಣಂ=ರಕ್ಷಕವು, ನ=ಆಗುವದಿಲ್ಲವು ॥೬೭॥

ತಾ॥ ಎಲೈ ವಿದ್ವಜ್ಜನರುಗಳಿರಾ ! ಕ್ಷಣಕಾಲದೊಳು ನಾಶವಾಗಿ ಹೋಗುವ ಸ್ತ್ರೀಸಂಬಂಧದಿಂದುಂಟಾಗುವ ಅಲ್ಪಸುಖಕ್ಕೋಸ್ಕರ ಆಸಕ್ತರಾಗಿ ಕೆಡುವಿರಿ, ಜೀವ. ದುಃಖಿಗಳಲ್ಲಿ ದಯೆಯೂ, ಸುಕೃತಿಗಳಲ್ಲಿ ಸ್ನೇಹವೂ, ವಿಶೇಷವಾದ ಪ್ರಜ್ಞೆಯೂ ಇವುಗಳ ಪರಿಶೀಲನೆಯಲ್ಲಿ ಆಸಕ್ತರಾಗಿರಬಾರದೆ? ಕಾಮಿನಿಯರ ಕುಚಕುಚಕಟಿಪ್ರದೇಶಗಳನ್ನು ನಂಬಿಕೊಂಡಿದ್ದರೆ ಯಮನವರು ಬಂದು ಎಳೆದೊಯ್ಯುವ ಸಮಯದೊಳು ಇವುಗಳೆಲ್ಲ ಆ ನರಕದಲ್ಲಿ ರಕ್ಷಿಸುವವೇ? ಒಂದುಕಾಲಕ್ಕೂ ರಕ್ಷಿಸವು. ಆದುದರಿಂದಲೇ ವೈರಾಗ್ಯವನ್ನು ಸೇವಿಸಿರಿ. .... .... .... ॥೬೭॥

ಶ್ಲೋ॥ ಯದಾಯೋಗಾಭ್ಯಾಸವ್ಯಸನಕೃಶಯೋರಾತ್ಮಮನಸೋರವಿಚ್ಛಿ
ನ್ನಾಮೈತ್ರೀಸ್ಫುರತಿಕೃತಿನಸ್ತಸ್ಯಕಿಮುತೈಃ । ಪ್ರಿಯಾಣಾಮಾ
ಲಾಪೈರಧರಮಧುಭಿರ್ವಕ್ತ್ರವಿಧುಭಿಸ್ಸನಿಶ್ವಾಸಾಮೋದೈಸ್ಸಕು
ಚಕಲಶಾಶ್ಲೇಷಸುರತೈಃ .... .... ॥೬೮॥

ಟೀ॥ ಹಿಂದೆ ಸಾಂಖ್ಯಮತರೀತಿಯಿಂದ ವೈರಾಗ್ಯವನ್ನು ಹೇಳಿ ಯೋಗಮತಾನುಸಾರವಾಗಿ ಹೇಳುತ್ತಾನೆ—ಯದಾ=ಯಾವಾಗ, ಯಸ್ಯ=ಯಾವನ, ಯೋಗಾಭ್ಯಾಸ=ಯೋಗಾಭ್ಯಾಸದಲ್ಲಿ, ವ್ಯಸನ=ಆಸಕ್ತಿಯಿಂದ, ಕೃಶಯೋಃ=ಸೂಕ್ಷ್ಮಗಳಾದ, ಆತ್ಮಮನಸೋಃ=ಆತ್ಮಮನಸ್ಸುಗಳಿಗೆ, ಮೈತ್ರೀ=ಸುಕೃತಿಗಳಲ್ಲಿಸ್ನೇಹವು, ಸ್ಫುರತಿ=ಪ್ರಕಾಶಿಸುವದೊ, ತದಾ=ಆಗ, ತಸ್ಯಕೃತಿನಃ=ಆ ಧನ್ಯನಿಗೆ, ತೈಃ=ಆ, ಪ್ರಿಯಾಲಾಪೈಃ=ವಲ್ಲಭೆಯರ ಇಂಪಾದ ನುಡಿಗಳಿಂದ, ಅಧರಮಧುಭಿಃ=ಅಧರಾಮೃತಗಳಿಂದ ಸನಿಶ್ವಾಸಾಮೋದೈಃ=ಮುಖಮಾರುತ ಸುವಾಸನೆಗಳಿಂದ ಸಹಿತವಾದ, ವಕ್ತ್ರವಿಧುಭಿಃ=ಮುಖಚಂದ್ರರಿಂದಲೂ, ಸಕುಚಕಲಶಾಶ್ಲೇಷ=ಕುಚಾಲಿಂಗನೆಗಳಿಂದ ಸಹಿತವಾದ, ಸುರತೈಃ=ಸಂಭೋಗವಿಶೇಷಗಳಿಂದಲೂ, ಕಿಂ=ಏನುಪ್ರಯೋಜನವು॥

ತಾ॥ ಯಾವನಿಗಾಗಲೀ ಅಷ್ಟಾಂಗಯೋಗಾಭ್ಯಾಸ ಪರಿಶೀಲನೆಯಿಂದ ಆತ್ಮ ಮನಸ್ಸುಗಳು ನಿಯಮಿಸಲ್ಪಟ್ಟು, ವೈರಾಗ್ಯವು ಬಲಿತು, ಮೈತ್ರೀ ಕರುಣಾದಿಗಳು ಹೆಚ್ಚುವವೋ, ಆತನಿಗೆ ಬ್ರಹ್ಮಾನಂದಾನುಭವ ಉಂಟಾಗಿರುವಲ್ಲಿ ಸತಿಯರ ಮಧುರವಾದ ನುಡಿಗಳಲ್ಲಿಯಾಗಲಿ, ಅಧರಾಮೃತಗಳಾದ ಕೂಡಿ ಕಮಲಗಂಧದಂತೆ ಸುವಾಸನೆಯುಳ್ಳ ಮುಖಮಾರುತದಿಂದ ಶೋಭಿಸುವ ಮುಖಗಳಲ್ಲಿಯಾಗಲಿ, ಕುಚಕುಂಭಾದ್ಯಾಲಿಂಗನಗಳಿಂದೊಡಗೂಡಿದ ಸಂಭೋಗ ವಿಶೇಷಗಳಲ್ಲಿಯೇ ಆಗಲಿ, ಒಂದುಕಾಲಕ್ಕೂ

ದರೂ ಆಶೆಯುಂಟಾಗುವದುಂಟೆ ? ಸಕ್ಕರೆಯಿಂದೊಡಗೂಡಿ ಸವಿಯಾದ ಹಾಲು ಸಿದ್ಧವಾಗಿರಲು, ಕಲಗಚ್ಚಿನ ನೀರನ್ನು ಕುಡಿಯಲು ಕೀಳಸಿಗಾದರೂ ಮನಬರುವದುಂಟೆ ? ಬಂಲಾರದೆಂದರಿಯುವದು .... ॥೬೮॥

ಶ್ಲೋ॥ ಯದಾಸೀದಜ್ಞಾನಂಸ್ಮರತಿಮಿರಸಂಚಾರಜನಿತಂ ತದಾದೃಷ್ಟಂನಾರೀಮಯಮಿದಮಶೇಷಂಜಗದಿತಿ ॥ ಇದಾನೀಮಸ್ಮಾಕಂಪಟುತರವಿವೇಕಾಂಜನಜುಷಾಂ ಸಮೀಭೂತಾದೃಷ್ಟಿಸ್ತ್ರಿಭುವನಮಪಿಬ್ರಹ್ಮಮನುತೇ .... .... ॥೬೯॥

ಟೀ॥ ವೇದಾಂತರೀತಿಯಾದ ವೈರಾಗ್ಯವಂ ವರ್ಣಿಸುತ್ತಾನೆ—ಯದಾ=ಯಾವಾಗ, ಸ್ಮರ=ಕಾಮನೆಂಬ, ತಿಮಿರ=ನೇತ್ರರೋಗದ ಕತ್ತಲೆಯಲ್ಲಿ, ಸಂಚಾರ=ವ್ಯಾಪ್ತಿಯಿಂದ, ತಿರುಗುವಿಕೆಯಿಂದ, ಜನಿತಂ=ಉಂಟಾದ, ಅಜ್ಞಾನಂ=ಅವಿವೇಕವು, ಆಸೀತ್=ಉಂಟಾಯಿತೊ, ತದಾ=ಆಗ, ಅಶೇಷಂ=ಸಮಸ್ತವಾದ, ಇದಂ=ಈ, ಜಗತ್=ಪ್ರಪಂಚವು, ನಾರೀಮಯಂ=ಕಾಮಿನೀ ವಿಕಾರವಾದದ್ದು. ಇತಿ=ಹೀಗೆಂದು, ದೃಷ್ಟಂ=ನೋಡಲ್ಪಟ್ಟಿತು, ಇದಾನೀಂ=ಈಗ, ಪಟುತರ=ಸಮರ್ಥವಾದ, ವಿವೇಕ=ರೋಗನಿವಾರಣದಲ್ಲಿ ಚತುರವಾದ, ವಿವೇಕ=ತತ್ವಜ್ಞಾನವೆಂಬ ಅಂಜನ=ನೇತ್ರಕಲ್ಯಾಣವೆಂಬ ಸಿದ್ಧಾಂಜನವನ್ನು, ಜುಷಾಂ=ಹೊಂದಿರುವ, ಅಸ್ಮಾಕಂ=ನಮ್ಮಗಳ, ದೃಷ್ಟಿಃ=ಬುದ್ಧಿಯು, ಕಣ್ಣು, ಸಮೀಭೂತಾ=ಸ್ವಭಾವವನ್ನು ಹೊಂದಿರುವದಾಗಿ, ತ್ರಿಭುವನಂ=ಮೂರುಲೋಕಸಮುದಾಯವನ್ನು, ಬ್ರಹ್ಮ=ಪರಮಾತ್ಮರೂಪವಾದದ್ದನ್ನಾಗಿ, ಮನುತೇ=ತಿಳಿಯುತ್ತದೆ. ॥೬೮॥

ತಾ॥ ಯಾವಾಗಲಾದರೆ ನಮ್ಮ ಕಣ್ಣುಗಳೂ, ಮತಿಯೂ ಕಾಮವಿಕಾರವೆಂಬ ಅಂಧಕಾರದಿಂದಲೂ, ನೇತ್ರರೋಗದಿಂದಲೂ ಪೀಡಿತವಾದವೋ, ಆಗಲೇ ಪ್ರಪಂಚವೆಲ್ಲವೂ ಸ್ತ್ರೀಮಯವಾಗಿರುವದಲ್ಲದೆ ಮತ್ತೊಂದು ಬಗೆಯಾಗಿಲ್ಲವೆಂದು ನಿಶ್ಚಯಿಸಿದೆವು. ಈಗಲಾದರೋ, ಕತ್ತಲೆಯನ್ನೂ, ರೋಗವನ್ನೂ ನಿವಾರಣೆ ಮಾಡುವದರಲ್ಲಿ ಸಮರ್ಥವಾದ ತತ್ವಜ್ಞಾನವೆಂಬ ಬೆಳಕು, ನೇತ್ರಕಲ್ಯಾಣವೆಂಬ ಅಂಜನವು ಲಭಿಸಿತಾದ ಕಾರಣವೇ ಮತಿಯೂ ನಯನವೂ ಶುದ್ಧವಾಯಿತಾಗಿ ಪ್ರಪಂಚವೆಲ್ಲವನ್ನು ಬ್ರಹ್ಮಮಯವಾಗಿ ನೋಡುತಲಿರುವೆವು. ಹೀಗೆ ವಿವೇಕವು ಶ್ರೇಯಸ್ಸಿಗೆ ಕಾರಣವಾದುವರಿಂದ ಅದನ್ನು ಸಂಪಾದಿಸುವದರಲ್ಲಿ ಎಲ್ಲರೂ ಪ್ರಯತ್ನ ಪಡಬೇಕೆಂಬಾಶಯವು .... .... ॥೬೯॥

ಶ್ಲೋ॥ ತಾವದೇವ ಕೃತಿನಾಮಪಿ ಸ್ಫುರತ್ಯೇಷ ನಿರ್ಮಲವಿವೇಕದೀಪಕಃ ।
ಯಾವದೇವನ ಕುರಂಗಚಕ್ಷುಷಾಂ ತಾಡ್ಯತೇ ಚಟುಲಲೋಚನಾಂಚಲೈಃ॥ .... .... ॥೭೦॥

ಟೀ॥ ಇನ್ನು ದುರ್ವಿರಕ್ತರ ಮಾರ್ಗವನ್ನು ಹೇಳುತ್ತಾನೆ—ತಾವದೇವ= ಅದುವರೆಗೇ, ಕೃತಿನಾಮಪಿ=ಕುಶಲರಿಗೂ, ಏಷಃ=ಈ ಮೇಲೆ ಹೇಳಿದ, ನಿರ್ಮಲ= ನಿಷ್ಕಳಂಕವಾದ, ವಿವೇಕ=ತತ್ವಾವಬೋಧವೆಂಬ, ದೀಪಕಃ=ಪ್ರದೀಪವು, ಸ್ಫುರತಿ= ಹೊಳೆಯುವದು, ಕುರಂಗಚಕ್ಷುಷಾಂ=ಹರಿಣಾಕ್ಷಿಯರ, ಚಟುಲ=ಚಪಲವಾದ, ಲೋಚನಾಂಚಲೈಃ=ಕಟಾಕ್ಷವೀಕ್ಷಣಗಳಿಂದ, ಯಾವದೇವ — ಎಷ್ಟರವರೆಗೂ, ನತಾಡ್ಯತೇ=ಹೊಡಿಯಲ್ಪಡುವದಿಲ್ಲವೋ? .... .... ॥೭೦॥

ತಾ॥ ಲೋಕದೊಳು ಮನುಷ್ಯನೆಷ್ಟು ವಿವೇಕಿಯಾಗಿದ್ದರೂ ಕಾಮಿನೀ ಕಟಾಕ್ಷವೀಕ್ಷಣೆಗೆ ಪಾತ್ರನಾಗುವವರಿಗೆ ಅವನ ವಿವೇಕವು ಪ್ರಕಾಶಿಸುವದಲ್ಲದೆ ತರುವಾಯ ಕ್ಷಣಕಾಲವೂ ಪ್ರಕಾಶಿಸದೆಂದಾಶಯವು ॥೭೦॥

ಶ್ಲೋ॥ ವಚಸಿ ಭವತಿ ಸಂಗತ್ಯಾಗಮುದ್ದಿಶ್ಯ ವಾರ್ತಾ ಶ್ರುತಿಮುಖರಮುಖಾನಾಂ ಕೇವಲಂ ಪಂಡಿತಾನಾಂ॥ ಜಘನಮರುಣರತ್ನಗ್ರಂಥಿಕಾಂಚೀಕಲಾಪಂ ಕುವಲಯನಯನಾನಾಂ ಕೋ ವಿಹಾತುಂ ಸಮರ್ಥಃ ॥೭೧॥

ಟೀ॥ ದುರ್ವಿರಕ್ತ ವೈರಾಗ್ಯವು ವಚನಮಾತ್ರದಲ್ಲಿರುವದೆಂದು ಹೇಳುತ್ತಾನೆ— ಶ್ರುತಿ=ವೇದಗಳಿಂದ, ಮುಖರ — ಶಬ್ದಾಯಮಾನಗಳಾದ, ಮುಖಾನಾಂ=ವದನಗಳುಳ್ಳ, ಪಂಡಿತಾನಾಂ=ವಿದ್ವಾಂಸರಿಗೆ, ವಚಸಿಕೇವಲಂ=ವಾಕ್ಕಿನಲ್ಲಿ ಮಾತ್ರವೆ, ಸಂಗತ್ಯಾಗಮುದ್ದಿಶ್ಯ=ಅಂಗನಾಸಂಗತ್ಯಾಗವನ್ನು ಕುರಿತು, ವಾರ್ತಾ=ಮಾತು, ಭವತಿ=ಉಂಟಾಗುವದು, ಅರುಣರತ್ನಗ್ರಂಥಿ=ಪದ್ಮರಾಗಮಣಿಖಚಿತವಾದ, ಕಾಂಚೀ=ತಾಬೆಂಬ, ಕಲಾಪಂ=ಭೂಷಣವುಳ್ಳ, ಕುವಲಯನಯನಾನಾಂ=ಇಂದೀವರಾಕ್ಷಿಯರ, ಜಘನ=ಕಟಿಪುರೋಭಾಗವನ್ನು, ವಿಹಾತುಂ=ಬಿಡುವದಕ್ಕೆ. ಕಃ=ಯಾವನು, ಸಮರ್ಥಃ=ಶಕ್ತನು. .... .... ॥೭೧॥

ತಾ॥ ವೇದವೇದಾಂಗಾದಿ ವಿದ್ಯೆಗಳನ್ನೋದಿ ಎಷ್ಟು ಪಂಡಿತನಾಗಿದ್ದರೂ ಸ್ತ್ರೀಸಂಗ ತ್ಯಾಗವನ್ನು ಕುರಿತು ವಿರಾಗನೆಂಬುವದು ವಾಕ್ಕಿನಲ್ಲಿ ಮಾತ್ರ ವೃಥವಾಗಿರುವದಲ್ಲದೆ ಮನಸ್ಸಿನಲ್ಲಿ ತ್ಯಾಗವೆಂದಿಗೂ ಉಂಟಾಗಲಾರದು. ರಮಣೀಯವಾಗಿರುವ ಪದ್ಮರಾಗ ಮಣಿಗಳಿಂದ ಖಚಿತವಾದ ಡಾಬೆಂಬಾಭರಣದಿಂದತಿಮನೋಹರವಾದ ಕಾಮಿನಿಯು ಕಟಿಪುರೋಭಾಗವನ್ನು ತ್ಯಜಿಸಲು ಯಾವನಾದರೂ ಶಕ್ತನಾಗುವನೆ? ಒಂದು ಕಾಲಕ್ಕೂ ಸಮರ್ಥನಾಗಲಾರನು. .... .... ॥೭೧॥

ಶ್ಲೋ॥ ಸಪರಪ್ರತಾರಕೋಸೌನಿಂದತಿಯೋಳೀಕಪಂಡಿತೋಯುವತೀಃ ।
ಯಸ್ಮಾತ್ತಪಸೋಪಿಫಲಂಸ್ವರ್ಗಃಪೀಠಾಪ್ಸರಸಃ ॥೭೦॥

ಟೀ॥ ಯಃ=ಯಾವ ವಿದ್ವಾಂಸನು, ಯುವತೀಃ=ತರುಣಿಯರನ್ನು. ನಿಂದತಿ=ನಿಂದಿಸುವನೋ, ಸಃ=ಅವನು, ಪರ=ಇತರರನ್ನು, ಪ್ರತಾರಕಃ=ವಂಚಿಸುವ ಅಳೀಕಪಂಡಿತಃ=ಅನೃತವಾದ ವಿದ್ವಾಂಸನು, ಯಸ್ಮಾತ್=ಯಾವಕಾರಣದ್ದೆಸೆಯಿಂದ, ತಪಸಃ=ಚಾಂದ್ರಾಯಣಾದಿ ತಪಸ್ಸಿಗೆ, ಫಲಂ=ಫಲವು, ಸ್ವರ್ಗಃ=ಸ್ವರ್ಗಲೋಕವೋ, ಸ್ವರ್ಗೇಪಿ=ಆಸ್ವರ್ಗದಲ್ಲಿಯೂ, ಅಪ್ಸರಸಃ=ಅಪ್ಸರಸ್ತ್ರೀಯರೋ॥೭೦॥

ತಾ॥ ಛಿ! ತರುಣಿಯರು ಅನರ್ಥಕ್ಕೆ ಕಾರಣವಾದರು, ಅವರ ಸಂಬಂಧವು ಬಹುನಿಂದ್ಯವಾದದ್ದು ಎಂಬದಾಗಿ ಯಾವನಾದರೆ ನಾರಿಯರನ್ನು ನಿಂದಿಸುವನೋ, ಖಂಡಿತವಾಗಿಯೂ ಅವನು ನಿಜವಾದ ಪಂಡಿತನಲ್ಲವು. ಏಕೆಂದರೆ, ಚಾಂದ್ರಾಯಣವೇ ಮೊದಲಾದ ವ್ರತೋಪವಾಸಾದಿಗಳೆಲ್ಲಕ್ಕೂ ಸ್ವರ್ಗವೇ ಫಲವಾಗಿರುವದು: ಆ ಸ್ವರ್ಗಕ್ಕೆ ಹೋದರೆ ರಂಭಾದ್ಯಪ್ಸರಸ್ತ್ರೀಯರೇ ಅಲ್ಲಿರುವರು. ಅವರ ಸಂಭಂದವೆ ಅಲ್ಲಿನ ಸುಖವೂ ಆಗಿರುವದು, ಆದುದರಿಂದಲೆ ಸತಿಯು ಸಂಬಂಧವು ದೂಷ್ಯವಲ್ಲವೆಂದರಿವುದು.

ಶ್ಲೋ॥ ಮತ್ತೇಭಕುಂಭದಳನೇಭುವಿಸಂತಿಧೀರಾಃಕೇಚಿತ್ಪ್ರಚಂಡಮೃಗ
ರಾಜವಧೇಪಿದಕ್ಷಾಃ ॥ ಕಿಂತುಬ್ರವೀಮಿಬಲಿನಾಂಪುರತಃಪ್ರಸಹ್ಯ
ಕಂದರ್ಪದರ್ಪದಳನೇವಿರಳಾಮನುಷ್ಯಾಃ .... ॥೪೩॥

ಟೀ॥ ಕಾಮನು ಜಯಿಸಲಶಕ್ಯನೆಂದು ಪೇಳುತ್ತಾನೆ— ಭುವಿ=ಭೂಲೋಕದಲ್ಲಿ, ಮತ್ತ=ಮದಿಸಿದ, ಇಭ=ಆನೆಗಳ, ಕುಂಭ=ಕುಂಭಸ್ಥಳವನ್ನು, ದಳನೇ=ಸೀಳುವದರಲ್ಲಿ. (ಶಕ್ತಾಃ ಸಮರ್ಥರಾದ) ಧೀರಾಃ=ಶೂರರು, ಸಂತಿ=ಇರುವರು, ಕೇಚಿತ್=ಮತ್ತೆಕೆಲಬರು, ಪ್ರಚಂಡ=ಉದ್ದಂಡವಾದ, ಮೃಗರಾಜ=ಸಿಂಹಗಳ, ವಧೇಪಿ=ಸಂಹಾರದಲ್ಲಿಯೂ, ದಕ್ಷಾಃ=ಸಮರ್ಥರು, ಸಂತಿ=ಇರುವರು. ಕಿಂತು=ಮತ್ತೇನದರೆ, ಬಲಿನಾಂ=ಬಲಿಷ್ಠರಾದ ಜ್ಞಾನಬಲವುಳ್ಳವರ, ಪುರತಃ=ಮುಂದೆ, ಬ್ರವೀಮಿ = ಹೇಳುವೆನು, ಪ್ರಸಹ್ಯ = ಬಲತ್ಕಾರವಾಗಿ, ಕಂದರ್ಪ = ಮನ್ಮಥನ, ದರ್ಪ=ಮದವನ್ನು, ದಳನೆ=ಸೀಳುವದರಲ್ಲಿ, ಸಮರ್ಥಾಃ=ಶಕ್ತರಾದ, ಮನುಷ್ಯಾಃ=ಮನುಜರು, ವಿರಳಾಃ=ಅಪೂರ್ವವು. ... .... ॥೩೩॥

ತಾ॥ ಲೋಕದೊಳು ಮದ್ದಾನೆಗಳ ತಲೆಯನ್ನು ಒಡೆಯುತಕ್ಕ ಶೂರರು ಅನೇಕರಿರುವರು. ಪ್ರಚಂಡವಾದ ಸಿಂಹಗಳನ್ನು ಸಂಹಾರಮಾ

ಡುವ ವೀರರೂ ಬಹುಮಂದಿಯುಂಟು. ಜ್ಞಾನಬಲ, ದೇಹಬಲ ಇವೆರಡ ರಿಂದಲೂ ಕೂಡಿರುವ ಮಹನೀಯರ ಮುಂದೆ ಇಗೋ ಕೈಯೆತ್ತಿ ಘಂಟಾಘೋಷದಂತೆ ಹೇಳುವೆನು, ಕಾಮನ ಕೊಬ್ಬನ್ನು ಅಣಗಿಸುವ ಎಂದರೆ ಮನ್ಮಥನನ್ನು ಜಯಿಸುವ ಶೂರನು ಮಾತ್ರ ಬಹು ಅಪೂರ್ವ. ಎಂದರೆ ಕಾಮವಿಕಾರವನ್ನು ಗೆಲ್ಲುವದು ಕಷ್ಟವೆಂದಾಶಯವು ॥೨೩॥

ಶ್ಲೋ ॥ ಸನ್ಮಾರ್ಗೇತಾವದಾಸ್ತೇಪ್ರಭವತಿಚ ನರಸ್ತಾವದೇವೇಂದ್ರಿಯಾ
ಣಾಂಲಜ್ಜಾಂತಾವದ್ವಿಧತ್ತೇವಿನಯಮಪಿ ಸಮಾಲಂಬತೇತಾವದೇ
ವ॥ ಭ್ರೂಚಾಪಾಕೃಷ್ಟಮುಕ್ತಾಃಶ್ರವಣಪಥಗತಾನೀಲಪಕ್ಷ್ಮಾ
ಣಏತೇಯಾವಲ್ಲೀಲಾವತೀನಾಂಹೃದಿನಧೃತಿಮುಷೋದೃಷ್ಟಿಬಾ
ಣಾಃಪತಂತಿ .... .... .... ॥೨೪॥

ಟೀ॥ ಇನ್ನೊಂದು ಬಗೆಯಾದ ವಿಚಿತ್ರರಚನೆಯನ್ನು ಹೇಳುತ್ತಾನೆ. ಭ್ರೂ=ಕಣ್ಣುಹುಬ್ಬೆಂಬ, ಚಾಪ=ಬಿಲ್ಲಿನಿಂದ, ಆಕೃಷ್ಟ=ಎಳೆಯಲ್ಪಟ್ಟ, ಮುಕ್ತಾಃ=ಬಿಡಲ್ಪಟ್ಟ, ಶ್ರವಣಪಥಗತಾಃ=ಶ್ರೋತ್ರಮಾರ್ಗವನ್ನು ಹೊಂದಿರುವ, ನೀಲಪಕ್ಷ್ಮಾಣಃ=ಕಪ್ಪಾದ ರೆಪ್ಪೆಗಳು,(ಪಕ್ಷಗಳು ಉಳ್ಳ) ಧೃತಿಮುಷಃ=ಧೈರ್ಯ್ಯಾಪಹಾರಿಗಳಾದ, ಏತೇ=ಈ ಹಿಂದೆ ಹೇಳಿದ, ಲೀಲಾವತೀನಾಂ=ವಿಲಾಸಿನಿಯರ, ದೃಷ್ಟಿಬಾಣಾಃ=ಕಟಾಕ್ಷಗಳೆಂಬ ಬಾಣಗಳು, ಯಾವತ್=ಎಷ್ಟರವರೆಗೂ, ಹೃದಿ=ಮನಸ್ಸಿನಲ್ಲಿ, ಎದೆಯಲ್ಲಿ, ನಪತಂತಿ=ಬೀಳುವದಿಲ್ಲವೋ, ತಾವತ್=ಅದುವರೆಗೂ, ನರಃ=ಮನುಷ್ಯನು, ಸನ್ಮಾರ್ಗೇ=ವೇದೋಕ್ತವಾದ ಆಚಾರದಲ್ಲಿ, ಆಸ್ತೇ=ಇರುವನು, ಇಂದ್ರಿಯಾಣಾಂ=ಚಕ್ಷುರಾದೀಂದ್ರಿಯಗಳಿಗೆ, ತಾವದೇವ=ಅದುವರೆಗೇ, ಪ್ರಭವತಿ=ಯಜಮಾನನಾಗಿರುವನು, ಲಜ್ಜಾಂ=ಕೆಟ್ಟಕೆಲಸ ಮಾಡುವದರಲ್ಲಿ ನಾಚಿಕೆಯನ್ನು, ತಾವತ್=ಅದುವರಿಗೇ, ವಿಧತ್ತೇ=ಧರಿಸುವನು, ವಿನಯಮಪಿ=ವಿಧೇಯತೆಯನ್ನು, ತಾವದೇವ=ಅದುವರಿಗೇನೆ, ಸಮಾಲಂಬತೆ=ಆಶ್ರಯಿಸಿರುವನು. ... ॥೨೪॥

ತಾ॥ ಲೋಕದೊಳು ಎಷ್ಟು ಶೂರನಾದಾಗ್ಯೂ ಅಂಥವನ ಧೈರ್ಯವನ್ನು ಧ್ವಂಸಮಾಡುವ ಹರಿಣನಯನೆಯರಾದ ತರುಣಿಯರ ಕಟಾಕ್ಷಗಳೆಂಬ ಬಾಣಗಳಿಗೆ ಇವನು ಗೋಚರವಾಗದೆ ಇರುವವರೆಗೂ ಆತನು ಸದಾಚಾರ ಸಂಪನ್ನನಾಗಿಯೂ, ಕಣ್ಣು ಮೊದಲಾದ ಇಂದ್ರಿಯಗಳನ್ನು ತನ್ನ ಸ್ವಾಧೀನದಲ್ಲಿಟ್ಟುಕೊಂಡಿರುವವನಾಗಿಯೂ, ಕೆಟ್ಟ ಕೆಲಸದಲ್ಲಿ ಪ್ರವರ್ತಿಸುವದಕ್ಕೆ ನಾಚಿಕೆಪಡುವವನಾಗಿಯೂ, ವಿನಯಸಂಪತ್ತಿಯಿಂದೊಡಗೂಡಿದವನಾಗಿಯೂ ಇರುವನು. ಎಂದರೆ ಕಾಮಿನಿಯ ಕಟಾಕ್ಷಕ್ಕೆ ಪಾ

ರ್ರನಾದ ಒಡನೆಯೇ ಸದಾಚಾರ, ವಿನಯ, ನಾಚಿಕೆ, ಧೈರ್ಯ ಇವೆಲ್ಲವೂ ನಷ್ಟವಾಗುವವೆಂದು ಭಾವವು. .... ||೨೪||

ಶ್ಲೋ|| ಉನ್ಮತ್ತಪ್ರೇಮಸಂರಂಭಾದಾರಭಂತೇಯದಂಗನಾಃ || ತತ್ರ
ಪ್ರತ್ಯೂಹಮಾಧಾತುಂಬ್ರಹ್ಮಾಪಿಖಲುಕಾತರಃ ||೨೫||

ಟೀ|| ಅಂಗನಾ = ಕಾಮಿನಿಯರು, ಉನ್ಮತ್ತ=ಅತ್ಯಧಿಕವಾದ, ಪ್ರೇಮ=ಅನುರಾಗದ, ಸಂರಂಭಾತ್=ಸಂಭ್ರಮದ ದೆಶೆಯಿಂದ, ಯತ್=ಯಾವ ಕೆಲಸವನ್ನು, ಆರಭಂತೆ=ಪ್ರಾರಂಭಿಸುವರೋ, ತತ್ರ=ಆ ಕೆಲಸದಲ್ಲಿ, ಪ್ರತ್ಯೂಹಂ=ವಿಘ್ನವನ್ನು, ಆಘಾತುಂ=ಉಂಟುಮಾಡುವುದಕ್ಕೆ, ಬ್ರಹ್ಮಾಪಿ=ಚತುರ್ಮುಖನೂ, ಕಾತರಃ=ಭಯಪಡುವನು, ಖಲು=ನಿಶ್ಚಯವು. .... ||೨೫||

ತಾ|| ಕಾಮಿನಿಯರು ಅನುರಾಗದಿಂದಲೂ, ಸಂಭ್ರಮದಿಂದಲೂ ಯಾವ ಕೆಲಸವನ್ನಾದರೆ ಮಾಡಬೇಕೆಂದಾರಂಭಿಸುವರೋ ಅಂಥಾ ಕೆಲಸದಲ್ಲಿ ವಿಘ್ನವನ್ನಾಚರಿಸಲು ಸೃಷ್ಟಿಕರ್ತನಾದ ಚತುರಾನನನು ಕೂಡ ಅಸಮರ್ಥನು, ಹೀಗಿರುವಲ್ಲಿ ಇನ್ನಿತರರ ಪಾಡೇನು ? ಎಂದರೆ ಅಂಗನೆಯರಿಗೆ ಅಶೇಷರೂ ಅಧೀನರೆಂದಾಶಯವು. .... .... ||೨೫||

ಶ್ಲೋ|| ತಾವನ್ಮಹತ್ವಂಪಾಂಡಿತ್ಯಂಕುಲೀನತ್ವಂವಿವೇಕಿತಾ || ಯಾವ
ಜ್ಜ್ವಲತಿನಾಂಗೇಷುಹತಃಪಂಚೇಷುಪಾವಕಃ ||೨೬||

ಟೀ|| ಯಾವತ್=ಎಷ್ಟರವರೆಗೆ, ಹತಃ=ನೀಚವಾದ, ಪಂಚೇಷು=ಕಾಮನೆಂಬ, ಪಾವಕಃ=ಅಗ್ನಿಯು, ಅಂಗೇಷು=ಅವಯವಗಳಲ್ಲಿ, ನಜ್ವಲತಿ=ಉರಿಯುವುದಿಲ್ಲವೋ, ತಾವತ್=ಅದುವರೆಗೂ, ಮಹತ್ವಂ=ಮಹಿಮೆಯು, ಪಾಂಡಿತ್ಯಂ=ವಿದ್ಯಾಬಲವು, ಕುಲೀನತ್ವಂ=ಸತ್ಕುಲಪ್ರಸೂತತ್ವವು, ವಿವೇಕಿತಾ=ವಿವೇಕವು. ||೨೬||

ತಾ|| ಕಾಮವಿಕಾರವೆಂಬ ಬೆಂಕಿಯು ಪುರುಷನ ಹೃದಯದೊಳು ಹತ್ತಿಕೊಂಡು ಬೇಯುವವರೆಗೂ ಇವನಿಗೆ ಮಹಿಮೆ, ಕುಲೀನತ್ವ, ಪಾಂಡಿತ್ಯ, ಉತ್ತಮವಾದ ವಿವೇಕ, ಇವೆಲ್ಲವೂ ಇರುವವು. ಎಂದವೆ ಪಾಂಡಿತ್ಯ, ಉತ್ತಮವಾದ ವಿವೇಕ, ಇವೆಲ್ಲವೂ ನಾಶವಾಗುವವೆಂದು ಭಾವವು. .... .... .... ||೨೬||

ಶ್ಲೋ|| ಶಾಸ್ತ್ರಜ್ಞೋಪಿಪ್ರಗುಣಿತನಯೋವ್ಯಾತ್ತಬೋಧೋಪಿಬಾಢಂ
ಸಂಸಾರೇಸ್ಮಿನ್ಭವತಿವಿರಳೋಭಾಜನಂಸದ್ಗತೀನಾಂ || ಯೇನೈ

ತಸ್ಮಿನ್ನಿರಯನಗರದ್ವಾರಮುದ್ಘಾಟಯಂತೀವಾಮಾಕ್ಷೀಣಾಂಭವ
ತಿಕುಟಿಲಭ್ರೂಲತಾಕುಂಚಿಕೇವ .... ||೭೭||

ಟೀ|| ಸಂಸಾರಿಯಾದವನಿಗೆ ಸದ್ಗತಿಯು ದುರ್ಲಭವೆಂಬುವದರಲ್ಲಿ ಕಾರಣವನ್ನು ತೋರಿಸುತ್ತಾನೆ—ಶಾಸ್ತ್ರಜ್ಞೋಪಿ=ವಿದ್ಯಾವಂತನಾದರು, ಪ್ರಗುಣಿತ=ವಿಶೇಷವಾಗಿ ಆಕೃತಿಮಾಡಿದ್ದ, ನಯೋಪಿ=ನೀತಿ ಶಾಸ್ತ್ರವುಳ್ಳವನಾದರು, ಬಾಢಂ=ದೃಢವಾಗಿ, ಆತ್ಮಬೋಧೋಪಿ=ಉತ್ಪನ್ನವಾದ ಜ್ಞಾನವುಳ್ಳವನಾದರು, ಅಸ್ಮಿನ್=ಈ ನಡೆಯುತ್ತಿರುವ, ಸಂಸಾರೇ=ಸಂಸಾರದಲ್ಲಿ, ಸದ್ಗತೀನಾಂ=ಸನ್ಮಾರ್ಗಗಳಿಗೆ, ಭಾಜನಂ=ಯೋಗ್ಯನು, ವಿರಳಃ=ವ್ಯಗ್ಯನಾಗಿರುವನು, ಯೇನ=ಯಾವಕಾರಣದಿಂದ, ಏತಸ್ಮಿನ್=ಈ ಸಂಸಾರದಲ್ಲಿ, ವಾಮಾಕ್ಷೀಣಾಂ=ವಾಮಲೋಚನೆಯರ, ಕುಟಿಲ=ವಕ್ರವಾಗಿರುವ, ಭ್ರೂಲತಾ=ಲತೆಯಂತಿರುವ ಕಣ್ಣು ಹುಬ್ಬು, ಕುಂಚಿಕೇವ=ಬೀಗದ ಕೈಯ್ಯಂತೆ, ನಿರಯನಗರ=ಯಮರಾಜಧಾನಿಯ, ದ್ವಾರಂ=ಬಾಗಿಲನ್ನು, ಉದ್ಘಾಟಯಂತೀ=ತೆಗೆಯುವಂಥಾದ್ದು, ಭವತಿ=ಆಗುತ್ತದೆ. ||೭೭||

ತಾ|| ಲತೆಯಂತಿರುವ ಕಾಮಿನಿಯರ ಕಣ್ಣು ಹುಬ್ಬು ಯಮರಾಜಧಾನಿಯಬಾಗಿಲ ಬೀಗವನ್ನು ತೆಗೆಯುವ ಬೀಗದಕೈಯಂತಿದ್ದು, ಸಂಸಾರದಲ್ಲಿ ಸಿಲುಕಿದವರನ್ನು ಕರೆದೊಯ್ದು ನರಕವನ್ನು ಹೊಗಿಸಲು ಸಿದ್ಧವಾಗಿರುವಲ್ಲಿ, ಶಾಸ್ತ್ರಜ್ಞನಾದರೂ, ವಿನಯಸಂಪನ್ನನಾದರೂ, ಜ್ಞಾನಿಯಾದರೂ ನರಕದ್ವಾರವನ್ನು ಬಿಟ್ಟು ಬೇರೆ ಉತ್ತಮಗತಿಯನ್ನು ಹೊಂದತಕ್ಕವನು ಬಹುದುರ್ಲಭವು. ನಾರಿಯಾಧೀನನಿಗೆ ನರಕವು ಸಿದ್ಧವೆಂದರಿಯುವದು.

ಶ್ಲೋ|| ಕೃಶಃಕಾಣಃಖಂಜಃಶ್ರವಣರಹಿತಃ ಪುಚ್ಛವಿಕಲೋವ್ರಣೀಪೂ
ಯಕ್ಲಿನ್ನಃಕ್ರಿಮಿಕುಲಶತೈರಾವೃತತನುಃ || ಕ್ಷುಧಾಕ್ಷಾಮೋಜೀ
ರ್ಣಃಪಿಠರಕಕಪಾಲಾರ್ಪಿತಗಳಶ್ಶುನೀಮನ್ವೇತಿಶ್ವಾಹತಮಪಿಚ
ಹಂತ್ಯೇವಮದನಃ || .... .... ||೭೮||

ಟೀ|| ಎರಡು ಶ್ಲೋಕಗಳಿಂದ ಕಾಮನ ವಿಚಿತ್ರ ಚರಿತ್ರೆಯನ್ನು ಹೇಳುತ್ತಾನೆ—ಕೃಶಃ=ಒಡವಾದ, ಕಾಣಃ=ಒಂದು ಕಣ್ಣಿಲ್ಲದ. ಖಂಜಃ=ಕುಂಟಾದ, ಶ್ರವಣರಹಿತಃ=ಕಿವಿಯಿಲ್ಲದ, ಪುಚ್ಛವಿಕಲಃ=ಬಾಲವಿಲ್ಲದ, ವ್ರಣೀ=ಗಾಯವುಳ್ಳ, ಪೂಯಕ್ಲಿನ್ನಃ=ಕೀವಿನಿಂದ ನನೆದ, ಕ್ರಿಮಿ=ಹುಳಗಳ, ಕುಲಶತೈಃ=ಅನೇಕ ಪರಂಪರೆಗಳಿಂದ, ಆವೃತತನುಃ=ವ್ಯಾಪ್ತ, ಶರೀರವುಳ್ಳ, ಕ್ಷುಧಾಕ್ಷಾಮಃ=ಹಸಿವೆಯಿಂದ ಜೀರ್ಣವಾದ, ಜೀರ್ಣಃ=ಶಿಥಿಲವಾದ, ಪಿಠರಕ=ಮಡಿಕೆಯ, ಕಪಾಲ=ಮುಖಭಾಗದಲ್ಲಿ, ಅರ್ಪಿತ=ಇಡಲ್ಪಟ್ಟ, ಗಳಃ=ಕಂಠವುಳ್ಳದ್ದಾದರೂ, ಶ್ವಾ=ನಾಯಿಯು, ಶುನೀಂ=

ಹೆಣ್ಣು ನಾಯಿಯನ್ನು, ಅನ್ವೇತಿ=ಅನುಸರಿಸುವದು, ಮದನಃ=ಮನ್ಮಥನು, ಹತಂ ಮಪಿಚ=ಪೆಟ್ಟು ಬಿದ್ದವನನ್ನೇ, ಹಂತ್ಯೇವ=ಹಿಂಸಿಸುವನು. .... ||೨೮||

ತಾ|| ಬಹು ಕೃಶವಾಗಿಯೂ, ಕುರುಡಾಗಿಯೂ, ಕುಂಟಾಗಿಯೂ, ಕಿವಿಯಿಲ್ಲದೆಯೂ, ಬಲಹೀನವಾಗಿಯೂ, ದೇಹದೊಳು ಹುಣ್ಣುಳ್ಳದ್ದಾಗಿಯೂ ಆದುದರಿಂದಲೇ ಹುಳಗಳಿಂದ ಆಕ್ರಮಿಸಲ್ಪಟ್ಟದ್ದಾಗಿ, ಕೀವಿನಿಂದೊಡಗೂಡಿ ಹಸಿವೆಯಿಂದ ಬಳಲುತ್ತ ಕೇವಲ ಶಿಥಿಲವಾಗಿ ಮಡಿಕೆಯ ಕಂಠದೊಳಗೆ ತಗಲಿಕೊಂಡಿರುವ ಕೊರಳುಳ್ಳದ್ದಾಗಿರುವದರಿಂದಲೇ ಅಸಹ್ಯಕರವಾಗಿರುವ ನಾಯಿಯು ತನಗೆ ಇಷ್ಟು ಅವಸ್ಥೆ ಇದ್ದಾಗ್ಯೂ ಹೆಣ್ಣುನಾಯಿಯನ್ನು ಕಂಡರೆ ಬಡೆನೆಯೇ ಅದರ ಹಿಂದೆ ಅನುಸರಿಸುತ್ತಾ ಹೋಗುವದು. ಅಹಹ! ಕಾಮನು ಕೇವಲ ಕಷ್ಟಪಟ್ಟವನನ್ನೇ ಪುನಃ ಹಿಂಸಿಸಿ ಪ್ರಾಣ ತೆಗಿಯುವನು. ಈತನು ಅತಿನಿಂದ್ಯನೆಂದಾಶಯವು .... ||೨೮||

ಶ್ಲೋ|| ಸ್ತ್ರೀಮುದ್ರಾಂಕುಸುಮಾಯುಧಸ್ಯಜಯಿನೀಂ ಸರ್ವಾರ್ಥಸಂಪತ್ಕರೀಂ ಯೇಮೂಢಾಃಪ್ರವಿಹಾಯಯಾಂತಿಕುಧಿಯೊ ಮಿಥ್ಯಾಫಲಾನ್ವೇಷಿಣಃ || ತೇತೇನೈವನಿಹತ್ಯನಿರ್ದಯತರಂ ನಗ್ನೀಕೃತಾ ಮುಂಡಿತಾಃ ಕೇಚಿತ್ಪಂಚಶಿಖೀಕೃತಾಶ್ಚ ಜಟಿಲಾಃ ಕಾಪಾಲಿಕಾಶ್ಚಾಪರೇ || .... .... .... ||೨೯||

ಟೀ|| ಸರ್ವಾರ್ಥಸಂಪತ್ಕರೀಂ=ಸಕಲ ಪುರುಷಾರ್ಥ ಸಾಧಕಳಾದ, ಕುಸುಮಾಯುಧಸ್ಯ=ಕುಸುಮಬಾಣನನ್ನು, ಜಯಿನೀಂ=ಗೆಲ್ಲುವ, ಸ್ತ್ರೀಮುದ್ರಾಂ=ಅಂಗನೆಯೆಂಬ ಗುರುತನ್ನು (ಮೊಹರನ್ನು) ಕುಧಿಯಃ=ದುರ್ಬುದ್ಧಿಯುಳ್ಳ, ಯೇಮೂಢಾಃ=ಯಾವ ಅವಿವೇಕಿಗಳು, ಪ್ರವಿಹಾಯ=ಬಿಟ್ಟು, ಮಿಥ್ಯಾಫಲಾನ್ವೇಷಿಣಃ=ಅನೃತಫಲಾಭಿಲಾಷಿಗಳಾಗಿ, ಯಾಂತಿ=ಹೋಗುವರೋ, ತೇ=ಆ ಮೂಢರು, ತೇನೈವ=ಆ ಮನ್ಮಥನಿಂದಲೇ, ನಿರ್ದಯತರಂ=ದಯವಿಲ್ಲದಂತೆ, ನಿಹತ್ಯ=ಹೊಡೆದು, ಕೇಚಿತ್=ಕೆಲವರು, ನಗ್ನೀಕೃತಾಃ=ದಿಗಂಬರರಾಗಿ ಮಾಡಲ್ಪಟ್ಟರು, ಕೇಚಿತ್=ಮತ್ತೆ ಕೆಲವರು, ಮುಂಡಿತಾಃ=ಸನ್ಯಾಸಿಗಳಾಗಿ (ಪರಮಹಂಸರಾಗಿ) ಮಾಡಲ್ಪಟ್ಟರು, ಕೇಚಿತ್=ಇನ್ನು ಕೆಲವರು, ಪಂಚಶಿಖೀಕೃತಾಃ=ಪಂಚಶಿಖವುಳ್ಳವರಾಗಿಮಾಡಲ್ಪಟ್ಟರು, ಕೇಚಿತ್=ಬೇರೆ ಕೆಲವರು, ಜಟಿಲಾಃ=ಜಟಾಧಾರಿಗಳಾಗಿ, ಕೃತಾಃ=ಮಾಡಲ್ಪಟ್ಟರು, ಅಪರೇ=ಇತರರು, ಕಾಪಾಲಿಕಾಶ್ಚ=ಕಪಾಲಪಾಣಿಗಳಾಗಿಯೂ, ಕೃತಾಃ=ಮಾಡಲ್ಪಟ್ಟರು. .... .... ||೨೯||

ತಾ|| ಲೋಕದೊಳು ಸಕಲ ಪುರುಷಾರ್ಥಗಳ ಸಂಪತ್ತಿಗೆ ಮುಖ್ಯ

ಕಾರಣವಾಗಿ ಲೋಕೋತ್ತರನಾದ ಕಾಮನನ್ನು ಗೆಲ್ಲತಕ್ಕ ಶಕ್ತಿಯುಳ್ಳ ಕಾಮಿನಿಯರನ್ನು ಬಂದುವೇಳೆ ಯಾರಾದರೂ ಅಪೂರ್ವವಾಗಿ ಅವಿವೇಕದಿಂದ ತ್ಯಜಿಸಿ ಹೋಗುವರೋ, ಅಂಥವರನ್ನು ಕಾಮನು ತನ್ನ ಆಜ್ಞೋಲ್ಲಂಘನೆಯನ್ನು ಮಾಡಿದರೆಂಬ ಕೋಪದಿಂದ ದಂಡಿಸಿ ಕೆಲವರನ್ನು ಪರಮಹಂಸರನ್ನಾಗಿಯೂ, ಕೆಲವರನ್ನು ಪಂಚಶಿಖವುಳ್ಳವರನ್ನಾಗಿಯೂ, ಮತ್ತೆ ಕೆಲಬರನ್ನು ಜಟಾಧಾರಿಗಳನ್ನಾಗಿಯೂ, ಇನ್ನು ಕೆಲವರನ್ನು ದಿಗಂಬರರನ್ನಾಗಿಯೂ, ಇತರ ಕೆಲವರನ್ನು ಕಾಪಾಲಿಕರನ್ನಾಗಿಯೂ ಮಾಡಿ ಓಡಿಸಿದನು. ಉತ್ಪ್ರೇಕ್ಷಾಲಂಕಾರವು. .... ॥೭೯॥

ಶ್ಲೋ॥ ವಿಶ್ವಾಮಿತ್ರಪರಾಶರಪ್ರಭೃತಯೋವಾತಾಂಬುಪರ್ಣಾಶನಾಸ್ತೇ
ಪಿಸ್ತ್ರೀಮುಖಪಂಕಜಂಸುಲಲಿತಂದೃಷ್ಟ್ವೈವಮೋಹಂಗತಾಃ ॥
ಶಾಲ್ಯನ್ನಂಸಘೃತಂಪಯೋದಧಿಯುತಂಯೇಭುಂಜತೆಮಾನವಾಸ್ತೇ
ಷಾಮಿಂದ್ರಿಯನಿಗ್ರಹೋಯದಿಭವೇದ್ವಿಂಧ್ಯಃ ಪ್ಲವೇತ್ಸಾಗರೇ ॥

ಟೀ॥ ಮಹರ್ಷಿಗಳೂ ಇಂದ್ರಿಯ ನಿಗ್ರಹವನ್ನು ಮಾಡಲಾರದೆ ಹೋದರೆಂದು ಹೇಳುತ್ತಾನೆ—ವಾತಾಂಬುಪರ್ಣಾಶನಾಃ=ಗಾಳಿ, ನೀರು, ಎಲೆಗಳೇ ಆಹಾರವುಳ್ಳ, ವಿಶ್ವಾಮಿತ್ರಪರಾಶರಪ್ರಭೃತಯಃ=ವಿಶ್ವಾಮಿತ್ರ, ಪರಾಶರರೇ ಮೊದಲಾದ ಮಹರ್ಷಿಗಳು, ಯೇ=ಯಾರೋ, ತೇಪಿ=ಅಂಥವರೂ, ಸುಲಲಿತಂ=ಅತ್ಯಂತ ಸುಂದರವಾದ, ಸ್ತ್ರೀಮುಖಪಂಕಜಂ=ಕಾಮಿನಿಯರ ಕಮಲದಂತಿರುವ ಮುಖವನ್ನು, ದೃಷ್ಟ್ವೈವ=ನೋಡಿಯೆ, ಮೋಹಂ=ಭ್ರಾಂತಿಯನ್ನು, ಗತಾಃ=ಹೊಂದಿದರು, ಯೇ ಮಾನವಾಃ=ಯಾವ ಮನುಷ್ಯರಾದರೆ, ಸಘೃತಂ=ತುಪ್ಪದಿಂದಕೂಡಿದ, ಪಯೋದಧಿಯುತಂ=ಹಾಲು ಮೊಸರುಗಳಿಂದ ಕೂಡಿದ, ಶಾಲ್ಯನ್ನಂ=(ಭತ್ತದ ಸಣ್ಣಕ್ಕಿಯ) ಅನ್ನವನ್ನು, ಭುಂಜತೆ=ಭೋಜನ ಮಾಡುವರೋ, ತೇಷಾಂ=ಅಂಥವರಿಗೂ, ಇಂದ್ರಿಯನಿಗ್ರಹಃ=ಇಂದ್ರಿಯ ನಿಯಮವು, ಭವೇದ್ಯದಿ=ಉಂಟಾದರೆ, ತದಾ=ಆಗ, ವಿಂಧ್ಯಃ=ವಿಂಧ್ಯಪರ್ವತವು, ಸಾಗರೆ=ಸಮುದ್ರದಲ್ಲಿ, ಪ್ಲವೇತ್=ತೇಲುವದು.

ತಾ॥ ಗಾಳಿ, ನೀರು, ತರಗೆಲೆ, ಇವುಗಳನ್ನು ಮಾತ್ರನೇ ಆಹಾರ ಮಾಡಿಕೊಂಡಿದ್ದ ವಿಶ್ವಾಮಿತ್ರ, ಪರಾಶರ, ಶಾಂಡಿಲ್ಯ ಮೊದಲಾದ ಮಹರ್ಷಿಗಳು ಕೂಡ, ಅಸಲ್ಪ್ಯ ಮಂತಾದ ಶೃಂಗಿಯರ ಮುಖವನ್ನು ನೋಡಿದ ಮಾತ್ರದಿಂದಲೇ ಕಾಮಿಸಿ ಪರತಂತ್ರರಾಗಿ ಹೋದರು. ಹೀಗಿರುವಲ್ಲಿ ವೀರ್ಯವೃದ್ಧಿಕರವಾಗಿರುವ ಹಾಲು ತುಪ್ಪ ಮೊಸರು ಮೊದಲಾದ ಪದಾರ್ಥಗಳಿಂದೊಡಗೂಡಿದ ಮೃಷ್ಟಾನ್ನವನ್ನು ಭೋಜನ ಮಾಡುವ

ಸಾಮಾನ್ಯ ಮನುಷ್ಯರಿಗೂ ಇಂದ್ರಿಯನಿಗ್ರಹ ಸಾಮರ್ಥ್ಯ ವುಂಟಾಗುವ ಪಕ್ಷದಲ್ಲಿ, ವಿಂಧ್ಯಪರ್ವತವು ಸಮುದ್ರದಲ್ಲಿ ತೇಲಲು ಏನೂ ಸಂಶಯವಿಲ್ಲ, ಎಂದರೆ ಇಂದ್ರಿಯನಿಗ್ರಹ ಮಾಡುವಿಕೆಯು ಬಹು ಅಸಾಧ್ಯವೆಂದಾಶಯವು. .... .... .... ||೮೦||

## ಋತುವರ್ಣನಾರಂಭವು.

ಶ್ಲೋ|| ಪರಿಮಳಭೃತೋವಾತಾಶ್ಶಾಖಾನವಾಂಕುರಕೋಟಯೋಮಧುರ
ವಿಧುರೋತ್ಕಂಠಾಭಾಜಃಪ್ರಿಯಾಃಪಿಕಪಕ್ಷಿಣಾಂ || ವಿರಳವಿರಳ
ಸ್ವೇದೋದ್ಗಾರಾವಧೂವದನೇಂದವಃ ಪ್ರಸರತಿಮಧೌಧಾತ್ರ್ಯಾಂ
ಜಾತೋನಕಸ್ಯಗುಣೋದಯಃ || .... ||೮೧||

ಟೀ|| ಶೃಂಗಾರೋಪಯೋಗಿಯಾದ ಋತುವರ್ಣನವನ್ನಾರಂಭಿಸುತ್ತಾನೆ— ವಾತಾಃ=ಮಾರುತಗಳು, ಪರಿಮಳ=ಸುಗಂಧವನ್ನು, ಭೃತಃ=ಧರಿಸುವವು, ಶಾಖಾಃ=ಮರದ ಕೊನೆಗಳು, ನವ=ಹೊಸದಾದ, ಅಂಕುರ=ಚಿಗುರುಗಳ, ಕೋಟಯಃ=ಕೊನೆಗಳುಳ್ಳವು. ಪಿಕಪಕ್ಷಿಣಾಂ=ಕೋಗಿಲೆಗಳ, ಪ್ರಿಯಾಃ=ಅಂಗನೆಯರು, ಮಧುರ=ಹಿತವಾದ, ವಿಧುರ=ಕಷ್ಟವಾದ, ಉತ್ಕಂಠಾ=ಕೂಗುವುದರಲ್ಲಿ ಔತ್ಸುಕ್ಯವನ್ನು, ಭಾಜಃ=ಹೊಂದಿರುವವು, ವಧೂವದನೇಂದವಃ=ಕಾಮಿನಿಯರ ಚಂದ್ರನಂತಿರುವ ಮುಖಗಳು, ವಿರಳವಿರಳ=ಸ್ವಲ್ಪವಾದ, ಸ್ವೇದ=ಬೆವರಿನ, ಉದ್ಗಾರಾಃ=ಉದಯವುಳ್ಳವುಗಳು, ಧಾತ್ರ್ಯಾಂ=ಭೂಮಿಯಲ್ಲಿ, ಮಧೌ=ವಸಂತ ಋತುವು, ಪ್ರಸರತಿಸತಿ=ವ್ಯಾಪಿಸುತ್ತಿರಲಾಗಿ, ಕಸ್ಯ=ಯಾವ ವಸ್ತುವಿಗೆ, ಗುಣೋದಯಃ=ಗುಣೋತ್ಕರ್ಷವು, ನಜಾತಃ=ಉಂಟಾಗಲಿಲ್ಲವು. .... ||೮೧||

ತಾ|| ಶೈತ್ಯ ಸೌರಭ್ಯ ಮಾಂದ್ಯ ಗುಣವುಳ್ಳದ್ದಾಗಿ ಮಾರುತವು ಬೀಸುತಲಿರುವದು. ರಸಾಲಾದಿ ತರುಗಳೆಲ್ಲವೂ ಚಿಗುರುಗಳಿಂದ ಶೋಭಿಸುತ್ತಲಿರುವವು. ಕೋಗಿಲೆಗಳು ಕಿವಿಗಿಂಪಾಗಿ ಕೂಗುತ್ತಲಿರುವವು. ಉಷ್ಣಕಾಲದಾರಂಭವಾದ ಕಾರಣ ಚಂದ್ರನಂತೆಸೆವ ಕಾಮಿನಿಯರ ಮುಖಗಳು ಬೆಮರುತುಂತುರುಗಳಿಂದ ಹೊಳೆಯುವವು. ಆದುದರಿಂದಲೇ ವಸಂತ ಋತುವು ಪ್ರಾದುರ್ಭವಿಸಲು ಎಲ್ಲಾ ವಸ್ತುಗಳೂ ಅತಿಶಯದಿಂದ ಪ್ರಕಾಶಿಸುವದೆಂದಾಶಯವು. .... .... ||೮೧||

ಶ್ಲೋ॥ ಮಧುರಯಂಮಧುರೈರಪಿಕೋಕಿಲಾಕಲರವೈರ್ಮಲಯಸ್ಯಚವಾಯುಭಿಃ । ವಿರಹಿಣಃಪ್ರಹಿಣಸ್ತಿಶರೀರಿಣೋವಿಪದಿಹಂತಸುಧಾಪಿ ವಿಷಾಯತೇ .... .... .... ॥೮೨॥

ಟೀ॥ ಅಯಂ=ಈ, ಮಧುಃ=ವಸಂತ ಋತುವು, ಮಧುರೈರಪಿ=ಮನೋಹರವಾದವಾಗ್ಯೂ, ಕೋಕಿಲಾ=ಹೆಣ್ಣು ಕೋಗಿಲೆಗಳ, ಕಲ=ಅವ್ಯಕ್ತಮಧುರವಾದ, ರವೈಃ=ಧ್ವನಿಗಳಿಂದ, ಮಲಯಸ್ಯ=ಮಲಯಪರ್ವತದ, ವಾಯುಭಿಶ್ಚ=ಮಾರುತಗಳಿಂದಲೂ. ಶರೀರಿಣಃ=ದೇಹಧಾರಿಗಳಾದ, ವಿರಹಿಣಃ=ವಿಯೋಗಿ ಜನರನ್ನು, ಪ್ರಹಿಣಸ್ತಿ=ಹಿಂಸೆಪಡಿಸುವನು, ವಿಪದಿ=ವಿಪತ್ಕಾಲದಲ್ಲಿ, ಸುಧಾಪಿ=ಅಮೃತವೂ, ವಿಷಾಯತೇ=ವಿಷವಾಗಿ ಆಚರಿಸುವದು, ಹಂತ=ವಿಷಾದವು ... ॥೮೨॥

ತಾ॥ ವಸಂತಋತುವು ಕೇವಲ ಮನೋಹರವಾಗಿದ್ದರೂ ಇಂಪಾದ ಕೋಗಿಲೆಗಳ ಧ್ವನಿಗಳಿಂದಲೂ, ಮಲಯ ಪರ್ವತದ ಮಾರುತದಿಂದಲೂ, ವಿರಹಿ ಜನರನ್ನು ಬಹುವಾಗಿ ವ್ಯಥೆಪಡಿಸುವದು. ಅಹೋ! ಇದು ನ್ಯಾಯವಾಗಿರುವದು. ಏಕೆಂದರೆ, ವಿಪತ್ಕಾಲದಲ್ಲಿ ಅಮೃತವೂ ವಿಷವಾಗಿ ಪರಿಣಮಿಸುವದು. ಅಹಹ! ಬಹು ಕಷ್ಟವು. ವಸಂತ ಸಮಯವು ಕಾಮುಕರಿಗೆ ಕಾಮೋದ್ರೇಕವನ್ನುಂಟುಮಾಡುವದೆಂದು ಭಾವವು ॥೮೨॥

ಶ್ಲೋ॥ ಆವಾಸಃಕಿಲಿಕಿಂಚಿತಸ್ಯದಯಿತಾಃಪಾರ್ಶ್ವೇವಿಲಾಸಾಲಸಾಃಕರ್ಣೇ ಕೋಕಿಲಕಾಮಿನೀಕಲರವಃಸ್ಮೇರೋಲತಾಮಂಟಪಃ।ಗೋಷ್ಠೀ ಸತ್ಕವಿಭಿಸ್ಸಮಂಕತಿಪಯೈಸ್ಸ್ನಿಗ್ಧಾಸ್ಸಿತಾಂಶೋಃಕರಾಃಕೇಷಾಂ ಚಿತ್ಸುಖಯಂತಿಚಾತ್ರಹೃದಯಂಚೈತ್ರೇವಿಚಿತ್ರಾಸ್ಸ್ರಜಃ॥೮೩॥

ಟೀ॥ ವಿರಹಿಗಳಿಗೆ ವಿಶೇಷ ಕಷ್ಟವಲ್ಲದೆ ಇತರರಿಗಿಲ್ಲವೆಂದು ಹೇಳುತ್ತಾನೆ. ಪಾರ್ಶ್ವೇ=ಪಕ್ಕದಲ್ಲಿ, ಕಿಲಿಕಿಂಚಿತಸ್ಯ=ಮಂದಹಾಸಕ್ಕೆ, ಆವಾಸಃ=ಆಧಾರವಾದ ವಿಲಾಸ=ವಿಭ್ರಮಗಳಿಂದ, ಅಲಸಾಃ=ಮಂದರಾದ, ದಯಿತಾಃ=ಪ್ರಿಯತಮೆಯರು, ಕರ್ಣೇ=ಶ್ರವಣದಲ್ಲಿ, ಕೋಕಿಲಕಾಮಿನೀ=ಹೆಣ್ಣು ಕೋಗಿಲೆಗಳ, ಕಲರವಃ=ಮಧುರರವವು, ಸ್ಮೇರಃ=ವಿಕಸಿತ ಕುಸುಮವುಳ್ಳ, ಲತಾಮಂಟಪಃ=ಲತಾ ಗೃಹವು, ಕತಿಪಯೈಃ=ಕೆಲವರಾದ ಸತ್ಕವಿಭಿಸ್ಸಮಂ=ಉತ್ತಮ ಕವಿಗಳೊಡನೆ, ಗೋಷ್ಠೀ=ಪ್ರಸಂಗವು, ಸಿತಾಂಶೋಃ=ಚಂದ್ರನ, ಸ್ನಿಗ್ಧಾಃ=ಮನೋಹರವಾದ, ಕರಾಃ=ಕಿರಣಗಳು, ವಿಚಿತ್ರಾಃ=ನಾನಾವಿಧವಾದ, ಸ್ರಜಃ=ಹಾರಗಳು. ಅತ್ರ=ಈ ಚೈತ್ರೇ=ಚೈತ್ರಮಾಸದಲ್ಲಿ, ಕೇಷಾಂಚಿತ್=ಕೆಲವರ, ಹೃದಯಂ=ಮನಸ್ಸನ್ನು, ಸುಖಯಂತಿ=ಸುಖಪಡಿಸುವವು. .... ... ॥೮೩॥

ತಾ॥ ಪಕ್ಕದಲ್ಲಿ ಮಂದಹಾಸದಿಂದೊಡಗೂಡಿ ವಿಚಿತ್ರ ವಿಭ್ರಮಗಳಿಂದೆಸೆವ ಕಾಮಿನಿಯರು, ಕೋಕಿಲಾಂಗನೆಯರ ಕಮನೀಯವಾದ ಕಲರವವು, ವಿಕಸಿತ ಕುಸುಮಗಳಿಂದೆಸೆವ ಲತಾಗೃಹವು, ಸರಸವಾದ ಕವಿಗಳೊಡನೆ ಸರಸಸಲ್ಲಾಪವು, ಮನೋಹರವಾದ ಪೂರ್ಣ ಚಂದ್ರಕಿರಣಗಳು, ವಿಚಿತ್ರವಾದ ಪುಷ್ಪಹಾರಗಳು ಎಂಬೀಸಂಪತ್ತುಗಳನ್ನೀಚೈತ್ರಮಾಸದೊಳು ಕೆಲವರು ಅನುಭವಿಸುವರಲ್ಲದೆ ವಿರಹಿಗಳಿಗೆ ದುರ್ಲಭವು. ॥೮೩॥

ಶ್ಲೋ॥ ಪಾಂಥಸ್ತ್ರೀವಿರಹಾನಲಾಹುತಿಕಲಾಮಾತನ್ವತೀಮಂಜರೀಮಾಕಂ
ದೇಷುಪಿಕಾಂಗನಾಭಿರಧುನಾಸೋತ್ಕಂಠಮಾಲೋಕ್ಯತೇ। ಅಲ್ಪಾ
ಸ್ತೇನವಪಾಟಲಾಪರಿಮಳಪ್ರಾಗ್ಭಾರಪಾಟಚ್ಚರಾವಾಂತಿಕ್ಲಾಂತಿ
ವಿತಾನತಾನವಕೃತಶ್ಶ್ರೀಖಂಡಶೈಲಾನಿಲಾಃ ॥೮೪॥

ಟೀ॥ ಅಧುನಾ=ಈಗ, ಪಾಂಥಸ್ತ್ರೀ=ವಿರಹಸ್ತ್ರೀಯರ, ವಿರಹಾನಲ=ವಿರಹಾಗ್ನಿಯು, (ವಿಯೋಗಾಗ್ನಿ) ಆಹುತಿಕಲಾಂ=ಆಹುತಿ ಸಾಮ್ಯವನ್ನು, ಆತನ್ವತೀ=ಮಾಡುತಲಿರುವ, ಮಾಕಂದೇಷು=ಸಿಹಿಮಾವಿನ ಗಿಡದಲ್ಲಿರುವ, ಮಂಜರೀ=ಹೂವಿನ ಗೊಂಚಲು, ಪಿಕಾಂಗನಾಭಿಃ=ಹೆಣ್ಣು ಕೋಗಿಲೆಗಳಿಂದ, ಸೋತ್ಕಂಠ=ಆನಂದದೊಡನೆ, ಆಲೋಕ್ಯತೆ=ನೋಡಲ್ಪಡುತ್ತದೆ, ನವಪಾಟಲಾ=ಹೊಸದಾದ ಪಾಟಲೀ ಕುಸುಮಗಳ, ಪರಿಮಳಪ್ರಾಗ್ಭಾರ=ಪರಿಮಳ ಸಂಪತ್ತಿಯನ್ನು, ಪಾಟಚ್ಚರಾಃ=ಅಪಹರಿಸುವ, ಕ್ಲಾಂತಿ=ಬಳಲಿಕೆಗಳ, ವಿತಾನ=ಸಮುದಾಯವನ್ನು, ತಾನವ=ಕೃಶವಾದದ್ದನ್ನಾಗಿ, ಕೃತಃ=ಮಾಡುವ, ಅಲ್ಪಾಃ=ಸೂಕ್ಷ್ಮವಾಗಿರುವ, ಶ್ರೀಖಂಡ ಶೈಲ=ಮಲಯಪರ್ವತದ, ಅನಿಲಾಃ=ಮಾರುತಗಳು, ವಾಂತಿ=ಬೀಸುತಲಿರುವವು.

ತಾ॥ ದೇಶಾಂತರವನ್ನು ಕುರಿತು ಪ್ರಯಾಣ ಮಾಡಿರುವ ಪತಿಯುಳ್ಳ ಸತಿಯರ ವಿರಹಾಗ್ನಿಗೆ ಆಹುತಿಯ ಸೊಬಗನ್ನು ಸೂಚಿಸುತ್ತಿರುವ ಸಿಹಿಮಾವುಗಳಲ್ಲಿರುವ ಹೂವಿನಗೊಂಚಲುಗಳನ್ನು ಹೆಣ್ಣು ಕೋಗಿಲೆಗಳು ಬಹುಪ್ರೀತಿಯಿಂದ ನೋಡುತಲಿರುವವು, ಮತ್ತು ಪಾಟಲೀಪುಷ್ಪಗಳಲ್ಲಿರುವ ವಾಸನೆಯನ್ನು ತೆಗೆದುಕೊಂಡು ಶ್ರಮವನ್ನು ಪರಿಹರಿಸತಕ್ಕವುಗಳಾಗಿರುವ ಮಲಯ ಪರ್ವತದ ಮಂದಮಾರುತಗಳು ಬೀಸುತಲಿರುವವು. ಎಂದರೆ ವಸಂತ ಸಮಯದೊಳಿಷ್ಟು ಸಂಪತ್ತಿರುವದು. ವಿರಹಿಗಳಿಗತ್ಯಂತ ಕಷ್ಟವೆಂದರಿಯುವದು. .... ॥೮೪॥

ಶ್ಲೋ॥ ಪ್ರಥಿತಃಪ್ರಣಯವತೀನಾಂತಾವತ್ಪದಮಾತನೋತುಹೃದಿಮಾನಃ
ಭವತಿನಯಾವಚ್ಚಂದನತರುಸುರಭಿರ್ಮಲಯಪವಮಾನಃ ॥೮೫॥

ಟೀ॥ ಪ್ರಥಿತಃ=ದೃಢವಾದ, ಮಾನಃ=ಅಸೂಯೆಯಿಂದುಂಟಾದ ಕೋಪವು, ಪ್ರಣಯುವತೀನಾಂ=ಪ್ರಿಯಾತಮೆಯರ, ಹೃದಿ=ಮನಸ್ಸಿನಲ್ಲಿ, ತಾವತ್=ಆ ವರೆಗೂ, ಪದಂ=ಸ್ಥಾನವನ್ನು, ಆತನೋತು=ಮಾಡಲಿ, ಚಂದನತರು=ಶ್ರೀಗಂಧ ವೃಕ್ಷಗಳಿಂದ, ಸುರಭಿಃ=ಸುವಾಸನೆಯುಳ್ಳ, ಮಲಯಪವಮಾನಃ=ಮಲಯಮಾರುತವು, ಯಾವತ್=ಎಷ್ಟುಪರ್ಯಂತಕ್ಕೂ, ನಭವತಿ=ಆವಿರ್ಭವಿಸುವದಿಲ್ಲವೋ ॥೪೫॥

ತಾ॥ ವಸಂತ ಸಮಯವು ಪ್ರಾದುರ್ಭವಿಸಿ ಶ್ರೀಗಂಧದ ವಾಸನೆಯಿಂದೊಡಗೂಡಿದ ಮಲಯಪರ್ವತದ ಮಂದಮಾರುತವು ಬೀಸುವ ಪರ್ಯಂತವೂ ಕಾಮಿನಿಯರಿಗೆ ಪರಾಂಗನಾಸಕ್ತರಾದ ತಮ್ಮ ಪ್ರಿಯರ ವಿಷಯದಲ್ಲಿ ಉಂಟಾಗಿದ್ದ ಕೋಪವು ನೆಲೆಗೊಂಡಿರುವುದು. ಆ ಮಾರುತಸ್ಪರ್ಶವಾದ ಒಡನೆಯೇ, ಮಾನಿನಿಯರು ಮಾನವನ್ನು ತೊರೆದು ಪ್ರಿಯತಮರ ಪರತಂತ್ರರಾಗುವರು. ಮಂದಮಾರುತವು ಮದನೋದ್ರೇಕವೆಂದಾಶಯವು. .... .... .... ॥೪೫॥

ಶ್ಲೋ॥ ಸಹಕಾರಕುಸುಮಕೇಸರನಿಕರಭರಾಮೋದಮೂರ್ಛಿತದಿಗಂತೇ ।
ಮಧುರಮಧುವಿಧುರಮಧುಪೇ ಮಧೌಭವೇತ್ಕಸ್ಯನೋತ್ಕಂಠಾ ॥

ಟೀ॥ ಸಹಕಾರ=ಸಿಹಿಮಾವಿನಗಿಡಗಳ, ಕುಸುಮ=ಪುಷ್ಪಗಳ, ಕೇಸರ=ಕಿಂಜಲ್ಕಗಳ, ನಿಕರ=ಸಮುದಾಯದ, ಭರ=ಸಮೃದ್ಧಿಯ, ಆಮೋದ=ಪರಿಮಳದಿಂದ, ಮೂರ್ಛಿತ=ವ್ಯಾಪ್ತವಾದ, ದಿಗಂತೇ=ದಿಕ್ಕುಗಳಕೊನೆಗಳುಳ್ಳ ಮಧುರ=ಮಾಧುರ್ಯಗುಣದಿಂದ ಕೂಡಿದ, ಮಧು=ಮಕರಂದದಿಂದ, ವಿಧುರ=ವಿಹ್ವಲಗಳಾದ, (ಮದಿಸಿದ) ಮಧುಪೇ=ಭ್ರಮರಗಳುಳ್ಳ, ಮಧೌ=ವಸಂತಸಮಯದಲ್ಲಿ, ಕಸ್ಯ=ಯಾವನಿಗೆ, ಉತ್ಕಂಠಾ=ಸಂಭೋಗೌತ್ಸುಕ್ಯವು, ನಭವೇತ್=ಉಂಟಾಗದೆ ಹೋಗುವದು, ॥೪೬॥

ತಾ॥ ವಸಂತ ಸಮಯದೊಳು ಕುಸುಮಿಸಿರುವ ಸೀಮಾವಿನ ಗಿಡಗಳ ಕುಸುಮಕೇಸರಗಳ ಸುವಾಸನೆಯು ದಿಗಂತಕ್ಕೆ ವ್ಯಾಪಿಸಿ ಮಧುರವಾದ ಮಕರಂದ ಪಾನಮಾಡಿ ಮದಿಸಿ ದುಂಬಿಗಳು ಕಿವಿಗಿಂಪಾಗಿ ಝೇಂಕರಿಸುತ್ತಿರಲು, ಇಂತಪ್ಪ ಕಾಲದೊಳು ಮತ್ತೆ ಯಾವ ಪುರುಷನಿಗೆ ಅಥವಾ ಕಾಮಿನಿಗೆ ಆಗಲಿ, ಸಂಭೋಗೌತ್ಸುಕ್ಯವುಂಟಾಗುವದಿಲ್ಲವೋ ಅಂತವರನ್ನು ನಾನು ಕಾಣೆನು. ಎಂದರೆ ವಸಂತಕಾಲವು ಕಾಮವಿಕಾರಕ್ಕೆ ತೌರುಮನೆಯಂಪರಿವುದು .... .... ॥೪೬॥

ಶ್ಲೋ॥ ಅಚ್ಛಾಚ್ಛಚಂದನರಸಾರ್ದ್ರತರಾ ಮೃಗಾಕ್ಷ್ಯೋಧಾರಾಗೃಹಾಣಿ ಕು

ಸುಮನಸಿಚಕೌಮುದೀಚ ॥ ಮಂದೋಮರುತ್ಸುಮನಸಶ್ಶುಚಿ ಹರ್ಮ್ಯಪೃಷ್ಠಂಗ್ರೀಷ್ಮೇಮದಂಚಮದನಂಚವಿವರ್ಧಯಂತಿ॥೪೩॥

ಟೀ॥ ಇನ್ನು ಮೂರು ಶ್ಲೋಕಗಳಿಂದ ಗ್ರೀಷ್ಮರ್ತುವನ್ನು ವರ್ಣಿಸುತ್ತಾನೆ. ಅಚ್ಛಾಚ್ಛ=ಅತಿ ಸ್ವಚ್ಛವಾದ, ಚಂದನರಸ=ಪರಿಮಳದ್ರವದಿಂದ, ಆರ್ದ್ರತರ=ಸಿಕ್ತರಾದ (ತೊಡೆಯಲ್ಪಟ್ಟ) ಮೃಗಾಕ್ಷ್ಯಃ=ತರುಣಿಯರು, ಧಾರಾಗೃಹಾಣಿ=ಜಲಯಂತ್ರಗೃಹಗಳು ಕುಸುಮಾನಿಚ=ಮಲ್ಲಿಕಾದಿ ಪುಷ್ಪಗಳು, ಕೌಮುದೀಚ=ಚಂದ್ರಿಕೆಯೂ, ಮಂದಃಮರುತ್=ಮಂದಮಾರುತವು, ಸುಮನಸಃ=ಜಾಜಿಪುಷ್ಪಗಳು, ಶುಚಿ=ಶುದ್ಧವಾದ, ಹರ್ಮ್ಯಪೃಷ್ಠಂ=ಮೇಲುಪ್ಪರಿಗೆಯೂ ಇವುಗಳು, ಗ್ರೀಷ್ಮೇ=ಗ್ರೀಷ್ಮರ್ತುವಿನಲ್ಲಿ, ಮದಂಚ=ಹರ್ಷಾತಿಶಯವನ್ನು, ಮದನಂಚ=ಕಾಮವಿಕಾರವನ್ನೂ, ವಿವರ್ಧಯಂತಿ=ವೃದ್ಧಿಯನ್ನೈದಿಸುವವು. ॥೪೩॥

ತಾ॥ ಘಮಘಮಿಸುವ ವಾಸನೆಯುಳ್ಳ ಪರಿಮಳದ ಲೇಪನದಿಂದ ಶೋಭಿಸ ಹರಿಣನಯನೆಯರಾದ ತರುಣಿಯರು. ಜಲಯಂತ್ರಗಳಿಂದಾನಂದಕರವಾದ ಅಂತರ್ಗೃಹಗಳು, ಮಲ್ಲಿಗೆ, ಜಾಜಿ ಮೊದಲಾದ ದಿವ್ಯಕುಸುಮಗಳು, ಶ್ಲಾಘ್ಯವಾದ ಬೆಳ್ದಿಂಗಳು, ಸುಧಾಲೇಪನದಿಂದ ಶುದ್ಧವಾದ ಮೇಲುಪ್ಪರಿಗೆಯೂ ಮತ್ತು ಶೈತ್ಯಸೌಖ್ಯಗಳಿಂದೊಡಗೂಡಿದ ಮಂದಮಾರುತವು ಇವುಗಳು ಗ್ರೀಷ್ಮರ್ತುವಿನ ಸಮಯದೊಳು ಹೇಳಲಶಕ್ಯವಾದ ಕಾಮವಿಕಾರವನ್ನೂ ಅಪಾರವಾದ ಆನಂದವನ್ನೂ ಉಂಟುಮಾಡುವುವು.

ಶ್ಲೋ॥ ಸ್ರಜೋಹೃದ್ಯಾಮೋದಾವ್ಯಜನಪವನಶ್ಚಂದ್ರಕಿರಣಾಃಪರಾಗಃ ಕಾಸಾರೋಮಲಯಜರಜಶ್ಶೀಧುವಿಶದಂ । ಶುಚಿಸ್ಸೌಧೋತ್ಸಂಗಃಪ್ರತನುವಸನಂಪಂಕಜದೃಶೋನಿದಾಘರ್ತಾವೇತದ್ವಿಲಸತಿಲಭಂತೇಸುಕೃತಿನಃ ॥ .... .... ॥೪೪॥

ಟೀ॥ ಹೃದ್ಯಾಮೋದಾಃ=ಮನೋಹರವಾದ ವಾಸನೆಯುಳ್ಳ. ಸ್ರಜಃ=ಪುಷ್ಪಹಾರಗಳು, ವ್ಯಜನಪವನಃ=ಬೀಸಣಿಗೆಯಗಾಳಿಯೂ, ಚಂದ್ರಕಿರಣಾಃ=ಬೆಳ್ದಿಂಗಳು ಪರಾಗಃ=ಪುಷ್ಪಧೂಳಿಯೂ, ಕಾಸಾರಃ=ಕೊಳವು, ಮಲಯಜರಜಃ=ಪರಿಮಳದ ಪುಡಿಯೂ, ವಿಶದಂ=ನಿರ್ಮಲವಾದ, ಶೀಧು=ಮಕರಂದವು. ಶುಚಿಃ=ಶುದ್ಧವಾದ,ಸೌಧೋತ್ಸಂಗಃ=ಪ್ರಾಸಾದಪ್ರದೇಶವು, ಪ್ರತನುವಸನಂ=ಸೂಕ್ಷ್ಮವಸ್ತ್ರವು, ಪಂಕಜದೃಶಃ=ನಾರೀಸಂಕ್ಷಿಪ್ತ., ಏತತ್=ಈ ಸಮಸ್ತವನ್ನು,ನಿದಾಘರ್ತೌ=ಗ್ರೀಷ್ಮಕಾಲವು, ವಿಲಸತಿಸತಿ=ಪ್ರಕಾಶಿಸುತ್ತಿರಲಾಗಿ, ಸುಕೃತಿನಃ=ಪುಣ್ಯವಂತರು, ಲಭಂತೇ=ಹೊಂದುವರು. ॥೪೪॥

ತಾ॥ ಮನೋಹರವಾದ ಪುಷ್ಪಹಾರಗಳು, ಬೀಸಣಿಗೆಯ ಗಾಳಿಯು, ಪುಷ್ಪಪರಾಗವು, ದಿವ್ಯವಾದ ಕೊಳವು, ಪರಿಮಳ ದ್ರವ್ಯವು, ಆನಂದಕರವಾದ ಮಧುವು, ಶುಭ್ರವಾಗಿರುವ ಉಪ್ಪರಿಗೆಯು, ಸೂಕ್ಷ್ಮಾಂಬರವು, ಸರಸೀರುಹಲೋಚನೆಯರಾದ ಕಾಮಿನಿಯರು, ಎಂಬೀ ಪರಮಾನಂದಕರವಾದ ಸೌಭಾಗ್ಯಾತಿಶಯವನ್ನು ಗ್ರೀಷ್ಮಕಾಲದೊಳು ಸುಕೃತಿಗಳಾದವರು ಪಡೆದು ಉಪಭೋಗಿಸುವರಲ್ಲದೆ ಸಾಮಾನ್ಯರಿಗೆ ಸರ್ವಥಾ ದೊರಿಯಲಾರದು. ಎಂದರೆ ಈಭಾಮುಗ್ರಿಗಳು ಗ್ರೀಷ್ಮರ್ತುವಿನಲ್ಲಿ ಅತ್ಯಾನಂದವನ್ನುಂಟುಮಾಡತಕ್ಕವುಗಳೆಂದರಿವುದು. .... .... ॥೮೮॥

ಶ್ಲೋ॥ ಸುಧಾಶುಭ್ರಂಧಾಮ ಸ್ಫುರದಮಲರಶ್ಮಿಃಶಶಧರಃಪ್ರಿಯಾವಕ್ತ್ರಾಂ
ಭೋಜಂಮಲಯಜರಜಶ್ಚಾತಿಸುರಭಿ । ಸ್ರಜೋಹೃದ್ಯಾಮೋ
ದಾಸ್ತದಿದಮಖಿಲಂರಾಗಿಣಿಜನೇಕರೋತ್ಯಂತಃ ಕ್ಷೋಭಂನತುವಿ
ಷಯಸಂಸರ್ಗವಿಮುಖೇ .... ॥೮೯॥

ಟೀ॥ ಸುಧಾಶುಭ್ರಂ=ಸುಣ್ಣದಿಂದ ಬೆಳ್ಳಗಿರುವ (ಅಮೃತದಂತೆ ಶುದ್ಧವಾದ) ಧಾಮ=ಮನೆಯು, ಸ್ಫುರದಮಲರಶ್ಮಿಃ=ಹೊಳೆವನಿರ್ಮಲಕಾಂತಿಯುಳ್ಳ, ಶಶಧರಃ=ಚಂದ್ರನು, ಪ್ರಿಯಾವಕ್ತ್ರಾಂಭೋಜಂ=ಕಾಮಿನಿಯ ಕಮಲದಂತಿರುವ ಮುಖವು ಅತಿಸುರಭಿ=ಅತ್ಯಂತ ಸುವಾಸನೆಯುಳ್ಳ, ಮಲಯಜರಜಃ=ಶ್ರೀಗಂಧ ಚೂರ್ಣವು, ಹೃದ್ಯಾಮೋದಾಃ=ಮನೋಹರವಾದ ವಾಸನೆಯುಳ್ಳ, ಸ್ರಜಃ=ಪುಷ್ಪಹಾರಗಳು, ಅಖಿಲಂ=ಸಮಸ್ತವಾದ, ತದಿದಂ=ಆ ಈ ಸುವಸ್ತು ಸಮುದಾಯವು, ರಾಗಿಣಿ=ವಿಷಯಾಸಕ್ತರಾದ, ಜನೇ=ಜನರಲ್ಲಿ. ಅಂತಃಕ್ಷೋಭಂ=ಕಾಮೋದ್ರೇಕವನ್ನು ಕರೋತಿ=ಉಂಟುಮಾಡುವದು, ವಿಷಯಸಂಸರ್ಗವಿಮುಖೇತು=ವಿಷಯಾಭಿಲಾಷೆಯಿಲ್ಲದ ಯೋಗಿಜನರಲ್ಲಿಯಾದರೊ, ನಕರೋತಿ=ಉಂಟುಮಾಡುವದಿಲ್ಲವು, ॥೮೯॥

ತಾ॥ ಅಮೃತದಂತೆ ಶುಭ್ರವಾದ ಅಥವಾ ಸುಧಾಲೇಪನದಿಂದ ಶುಚಿಯಾದ ಮಂದಿರ, ನಿರ್ಮಲವಾದ ಚಂದ್ರ, ಕಿರಣಗಳು, ಮನೋಹರವಾದ ಭಾಮಿನಿಯ ಮುಖಕಮಲ, ಅತಿ ಸುವಾಸನೆಯುಳ್ಳ ಪರಿಮಳ, ಮಲ್ಲಿಗೆ ಜಾಜಿ ಮೊದಲಾದ ಕುಸುಮಗಳಿಂದ ವಿರಚಿತವಾದ ಹಾರಗಳು ಎಂಬೀ ಲೌಕಿಕ ಸಂಪತ್ತು, ವಿಷಯಾಭಿಲಾಷಿಗಳಾದ ಜನರಿಗೆ ಕಾಮವಿಕಾರೋದ್ರೇಕವನ್ನುಂಟುಮಾಡುವದಲ್ಲದೆ ಪರಮಾನಂದಾನುಭವಾಭಿಲಾಷಿಗಳಾದ ಯೋಗಿಗಳಿಗೆ ರುಚಿಸದೆಂದಾಶಯವು .... ॥೮೯॥

ಶ್ಲೋ॥ ತರುಣೀವೇಷೋದ್ದೀಪಿತಕಾಮಾವಿಕಸಜ್ಜಾತೀಪುಷ್ಪಸುಗಂಧಿಃ।
ಉನ್ನತಪೀನಪಯೋಧರಭಾರಾಪ್ರಾವೃಟ್ತನುತೇಕಸ್ಯನಹರ್ಷಂ ॥

ಟೀ॥ ಇನ್ನು ವರ್ಷರ್ತುವನ್ನು ವರ್ಣಿಸುತ್ತಾನೆ—ಉದ್ದೀಪಿತ=ಉಂಟುಮಾಡಲ್ಪಟ್ಟ, ಕಾಮಾ=ಸಂಭೋಗಾಭಿಲಾಷೆಯುಳ್ಳ, ವಿಕಸತ್=ಅರಳಿದ, ಜಾತೀಪುಷ್ಪ=ಜಾಜಿಹೂವುಗಳ, ಸುಗಂಧಿಃ=ಪರಿಮಳಗಂಧವುಳ್ಳ, ಉನ್ನತ=ಉತ್ತುಂಗವಾದ, ಪೀನ=ಒಲಿತ, ಪಯೋಧರ=ಉರೋಜಗಳ, ಮೇಘಗಳ, ಭಾರಾ=ಸಮುದಾಯವು, ಅತಿಶಯವುಳ್ಳ. ತರುಣೀ=ಯುವತಿಯು, ವೇಷಾ=ರೂಪಿನಂಥಾ ರೂಪವುಳ್ಳ, ಪ್ರಾವೃಟ್=ವರ್ಷಾಗಮಯವು, ಕಸ್ಯ=ಯಾವ ಪುರುಷನಿಗೆ, ಹರ್ಷಂ=ಸಂಭೋಗೌತ್ಸುಕ್ಯವನ್ನು, ನತನುತೇ=ಉಂಟುಮಾಡುವದಿಲ್ಲವು. .... ॥೯೦॥

ತಾ॥ ಕಾಮವಿಕಾರವನ್ನು ವೃದ್ಧಿಪಡಿಸುತ, ಅರಳಿದ ಜಾಜಿಹೂವುಗಳ ಸುವಾಸನೆಯಿಂದ ಶೋಭಿಸುತಲು, ದೃಢೋನ್ನತವಾದ ಪಯೋಧರ ಭಾರದಿಂದೆಸೆವುದರಿಂದಲೂ ತರುಣಿಯ ವೇಷದಂತಿರುವ ವೇಷವನಾಂತ ವರ್ಷಾಗಮಯವು ಲೋಕದೊಳು ವಿರಕ್ತನಿಗೂ ಸಂಭೋಗೌತ್ಸುಕ್ಯವನ್ನುಂಟುಮಾಡುವದು. .... .... .... ॥೯೦॥

ಶ್ಲೋ॥ ವಿಯದುಪಚಿತಮೇಘಂ ಭೂಮಯಃಕಂದಳಿನ್ಯೋ ನವಕುಟಜಕ
ದಂಬಾಮೋದಿನೋಗಂಧವಾಹಾಃ ॥ ಶಿಖಿಕುಲಕಲಕೇಕಾರಾವರ
ಮ್ಯಾವನಾಂತಾಸ್ಸುಖಿನಮಸುಖಿನಂವಾಸರ್ವಮುತ್ಕಂಠಯಂತಿ ॥

ಟೀ॥ ಉಪಚಿತ=ವಿಶೇಷವಾದ, ಮೇಘಂ=ಮೇಘಗಗಳುಳ್ಳ, ವಿಯತ್=ಆಕಾಶವು, ಕಂದಳಿನ್ಯಃ=ಅಂಕುರಗಳುಳ್ಳ, ಭೂಮಯಃ=ನೆಲಗಳು, ನವ=ಹೊಸದಾದ, ಕುಟಜ=ಬೆಟ್ಟಮಲ್ಲಿಗೆಗಳ, ಕದಂಬ=ಸಮುದಾಯದ, (ಈಚಲು ಹೂವುಗಳ) ಆಮೋದಿನಃ=ಪರಿಮಳವುಳ್ಳ, ಗಂಧವಾಹಾಃ=ವಾಯುಗಳು, ಶಿಖಿ=ಮಯೂರಗಳ, ಕುಲ ಸಮುದಾಯದ, ಕೇಕಾರಾವ=ಕೇಕಾ ಎಂಬ ಧ್ವನಿಗಳಿಂದ, ರಮ್ಯಾಃ=ರಮಣೀಯಗಳಾದ, ವನಾಂತಾಃ=ವನ ಮಧ್ಯಪ್ರದೇಶಗಳು, ಸುಖಿನಂ=ಸುಖಿಯನ್ನಾಗಲಿ, ದುಃಖಿನಂವಾ=ದುಃಖಿಯನ್ನಾಗಲಿ, ಸರ್ವಂ=ಎಲ್ಲರನ್ನು, ಉತ್ಕಂಠಯಂತಿ=ಸುರತೌತ್ಸುಕ್ಯವುಳ್ಳವನನ್ನಾಗಿ ಮಾಡುವದು. .... ॥೯೧॥

ತಾ॥ ಸಮೃದ್ಧವಾದ ಮೇಘಗಳಿಂದ ಶೋಭಾಯಮಾನವಾದ ಅಂತರಿಕ್ಷವು, ಅಲ್ಲಲ್ಲಿ ಮೊಳತು, ಚಿಗುರಿ, ರಮಣೀಯಗಳಾದ ಭೂಭಾರಗಳು, ಬೆಟ್ಟಮಲ್ಲಿಗೆ ಮೊದಲಾದ ಕುಸುಮಗಳ ಗಂಧದಿಂದಾನಂದಕರವಾದ ಮಂದಮಾರುತವು, ನವಿಲುಗಳ ಕೇಕಾ ಎಂಬ ನಿನಾದವು ಎಂಬಿವೆಲ್ಲವೂ ಈ

ವರ್ಷಾಕಾಲದೊಳು ಸುಖಿಗೂ ದುಃಖಿಗೂ ಕೂಡ ಸಂಭೋಗೌತ್ಸುಕ್ಯವ ನ್ನುಂಟುಮಾಡುವುದು. ಎಂದರೆ ಅಷ್ಟು ಸೊಬಗಿನಿಂದ ಶೋಭಿಸುವದೆಂ ಬಭಿಪ್ರಾಯವು .... .... ॥೯೧॥

ಶ್ಲೋ॥ ಉಪರಿಘನಂಘನಪಟಲಂತಿರ್ಯಗ್ಗಿರಯೋಪಿನರ್ತಿತಮಯೂರಾಃ ।
ಕ್ಷಿತಿರಪಿಕಂದಳಧವಳಾದೃಷ್ಟಿಂಪಥಿಕಃಕ್ವಪಾತಯತಿ ॥೯೨॥

ಟೀ॥ ಉಪರಿ=ಮೇಲೆ, ಘನಂ=ದಟ್ಟವಾದ, ಘನಪಟಲಂ=ಮೇಘಸಮುದಾಯವು, ತಿರ್ಯಕ್=ಪಕ್ಕದಲ್ಲಿ (ದಿಕ್ಕುಗಳಲ್ಲಿ) ನರ್ತಿತ=ನರ್ತನಮಾಡುತ್ತಿರುವ, ಮಯೂರಾಃ=ನವಿಲುಗಳುಳ್ಳ, ಗಿರಯೋಪಿ=ಪರ್ವತಗಳೂ, (ಸಂತಿ=ಇರುವವು) ಕ್ಷಿತಿರಪಿ=ಭೂಮಿಯೂ, ಕಂದಳಧವಳಾ=ಮೊಳಕೆಗಳಿಂದ ಸ್ವಚ್ಛವಾದದ್ದು. ಪಥಿಕಃ=ಮಾರ್ಗಸ್ಥನು, ದೃಷ್ಟಿಂ=ದೃಷ್ಟಿಯನ್ನು, ಕ್ವ=ಎಲ್ಲಿ, ಪಾತಯತಿ=ಇಡುವನು. ॥೯೨॥

ತಾ॥ ಮೇಲೆ ನೋಡಿದರೆ ಮೇಘಗರ್ಜನೆ, ಮತ್ತು ಸುತ್ತಲಾದರೋ ಮನೋಹರವಾಗಿ ನರ್ತಿಸುತಲಿರುವ ಮಯೂರಗಳ ಕೇಕಾನಾದ, ಭೂಮಿಯಲ್ಲಿ ಎಲ್ಲಿ ನೋಡಿದಾಗ್ಯೂ ಪೈರುಗಳು ಮೊಳೆತು ಸ್ವಚ್ಛವಾಗಿರುವುದು. ಇಂತಪ್ಪ ವರ್ಷಾಕಾಲದೊಳು ಮಾರ್ಗಸ್ಥನಾದ ವಿರಹಿಗೆ ಎಲ್ಲಿ ನೋಡಿದರೂ ಕಾಮೋದ್ರೇಕನಾಗುವದರಿಂದ ಬಹಳ ಕಷ್ಟವಾಗಿರುವದು.

ಶ್ಲೋ॥ ಇತೋವಿದ್ಯುದ್ವಲ್ಲೀವಿಲಸಿತಮಿತಃಕೇತಕಿತರೋಃ ಸ್ಫುರದ್ಗಂ
ಧಃಪ್ರೋದ್ಯಜ್ಜಲದನಿನದಸ್ಫೂರ್ಜಿತಮಿತಃ ॥ ಇತಃಕೇಕಿಕ್ರೀ
ಡಾಕಲಕಲರವಃ ಪಕ್ಷ್ಮಲದೃಶಾಂಕಥಂಯಾಸ್ಯಂತ್ಯೇತೇವಿರಹದಿ
ವಸಾಸ್ಸಂಭೃತರಸಾಃ .... .... ॥೯೩॥

ಟೀ॥ ಇತಃ=ಈಭಾಗದಲ್ಲಿ, ವಿದ್ಯುದ್ವಲ್ಲೀವಿಲಸಿತಂ=ಲತೆಯಂತಿರುವ ಮಿಂಚಿನ ವಿಲಾಸ, ಇತಃ=ಮತ್ತೊಂದು ಭಾಗದಲ್ಲಿ, ಕೇತಕಿತರೋಃ=ಕೇದಿಗೆ ಗಿಡದ (ಹೂವಿನ) ಸ್ಫುರದ್=ಹೊಳೆವ, ಗಂಧಃ=ವಾಸನೆ, ಇತಃ=ಇನ್ನೊಂದು ಕಡೆಯಲ್ಲಿ, ಪ್ರೋದ್ಯತ್=ಪ್ರಚುರವಾದ, ಜಲದ=ಮೇಘಗಳ, ನಿನದ=ಧ್ವನಿಯು, ಸ್ಫೂರ್ಜಿತಂ=ವ್ಯಾಪನೆಯು, ಇತಃ=ಮತ್ತೊಂದು ಕಡೆಯಲ್ಲಿ, ಕೇಕಿ=ಮಯೂರಗಳ, ಕ್ರೀಡಾ=ಆಟದಿಂದುಂಟಾದ, ಕಲಕಲರವಃ=ಕೋಲಾಹಲ ಧ್ವನಿಯು, (ಲಸತಿ=ಪ್ರಕಾಶಿಸುವದು,) ಪಕ್ಷ್ಮಲದೃಶಾಂ=ಚಂಚಲಾಕ್ಷಿಯರಿಗೆ, ಸಂಭೃತರಸಾಃ=ತುಂಬಿರುವ ಶೃಂಗಾರಾದಿ ರಸಗಳುಳ್ಳ, ಏತೇ=ಈ, ವಿರಹದಿವಸಾಃ=ವಿಯುಕ್ತವಾಸರಗಳು, ಕಥಂ=ಹೇಗೆ, ಯಾಸ್ಯಂತಿ=ಕಳೆಯುವವು. .... .... ॥೯೩॥

ತಾ॥ ಲತೆಯಂತೆ ಲಲಿತವಾದ ಮಿಂಚಿನ ಹೊಳಪಿನಿಂದಲೂ, ಕೇತಕೀ ಕುಸುಮಗಳ ಸುವಾಸನೆಯಿಂದಲೂ, ಮೇಘನಾದದ ವಿಜೃಂಭಣೆಯಿಂದಲೂ, ಬಂದೆಡೆಯೊಳು ಮಯೂರಗಳ ಮನೋಹರವಾದ ಕಲಕಲಾ ರವಗಳಿಂದಲೂ, ಅಸಮಾನವಾಗಿ ಶೋಭಿಸುವ ಈ ವರ್ಷಾದಿವಸಗಳಲ್ಲಿ ವಿರಹಿಣಿಯರಾಗಿರುವ ಹರಿಣನಯನೆಯರಾದ ತರುಣಿಯರಿಗೆ ಕಾಲವನ್ನು ಕಳೆಯುವದು ಬಹು ದುರ್ಲಭವೆಂದಾಶಯವು. .... ॥೯೩॥

ಶ್ಲೋ॥ ಅಸೂಚೀಸಂಚಾರೇತಮಸಿನಭಸಿಪ್ರೌಢಜಲದಧ್ವನಿಪ್ರಾಜ್ಞಂಮ
ನ್ಯೇಪತತಿಪೃಷತಾನಾಂಚನಿಚಯೇ ॥ ಇದಂಸೌದಾಮಿನ್ಯಾಃಕನಕ
ಕಮನೀಯಂವಿಲಸಿತಂಮುದಂಚಮ್ಲಾನಿಂಚ ಪ್ರಥಯತಿಪಥಿಸ್ವೈ
ರಸುದೃಶಾಂ .... .... ॥೯೪॥

ಟೀ॥ ತಮಸಿ=ಅಂಧಕಾರವು, ಅಸೂಚೀಸಂಚಾರೇಸತಿ=ಸೂಜಿಯು ತೂರಲಿಕ್ಕಾಗದಿರುತ್ತಿರಲಾಗಿ, ನಭಸಿ=ಆಕಾಶವು, ಪ್ರೌಢ=ವಿಶಾಲವಾದ, ಜಲದ=ಮೇಘಗಳ, ಧ್ವನಿ=ಶಬ್ದದಿಂದ, ಪ್ರಾಜ್ಞಂಮನ್ಯೇಸತಿ=ವಾಚಾಲಕವಾದದ್ದನ್ನಾಗಿ ತಿಳಿಯುತಿರಲು, ಪೃಷತಾನಾಂ=ಉದಕಬಿಂದುಗಳ, ನಿಚಯೇ=ಸಮುದಾಯವು, ಪತತಿಸತಿ=ಬೀಳುತ್ತಿರಲಾಗಿ, ಸೌದಾಮಿನ್ಯಾಃ=ಮಿಂಚಿನ, ಕನಕಕಮನೀಯಂ=ಸ್ವರ್ಣದಂತೆ ಸುಂದರವಾದ, ವಿಲಸಿತಂ=ವಿಲಾಸವು, ಸ್ವೈರಸುದೃಶಾಂ=ಅಭಿಸಾರಿಕೆಯರಾದ ಅಬಲೆಯರಿಗೆ, ಮುದಂಚ=ಸಂತೋಷವನ್ನು, ಮ್ಲಾನಿಂಚ=ವ್ಯಥೆಯನ್ನು, ಪ್ರಥಯತಿ=ಪ್ರಕಟಮಾಡುವದು. .... ॥೯೪॥

ತಾ॥ ಸೂಜಿಯು ಮೊನೆಯಷ್ಟು ಅವಕಾಶವಿಲ್ಲದೆ ಗಾಢಾಂಧಕಾರವು ವ್ಯಾಪಿಸಿ ಮೇಘಗರ್ಜನೆಯಿಂದೊಡಗೂಡಿ ತುಂತುರು ಹನಿಯು ಬೀಳುತ್ತಿರುವ ವರ್ಷಾಕಾಲದ ರಾತ್ರಿಯೊಳು ಸ್ವಕಾಂತರನ್ನರಸುತ ಸಂಕೇತಸ್ಥಾನವನ್ನೈದುವ ಅಭಿಸಾರಿಕೆಯರಾದ ತರುಣಿಯರಿಗೆ ಮಿಂಚಿನ ಹೊಳಪು ಮಾರ್ಗವನ್ನು ತೋರಿಸುವದರಿಂದ ಆನಂದವನ್ನು, ಇತರರು ತಮ್ಮನ್ನು ಕಾಣುವರೆಂಬದಾಗಿ ವ್ಯಥೆಯನ್ನು ಉಂಟುಮಾಡುವದು. .... ॥೯೪॥

ಶ್ಲೋ॥ ಆಸಾರೇಣನಹರ್ಮ್ಯತಃಪ್ರಿಯತಮೈರ್ಯಾತುಂಬಹಿಃಶಕ್ಯತೇಶೀತೋ
ತ್ಕಂಪನಿಮಿತ್ತಮಾಯತದೃಶಾಗಾಢಂಸಮಾಲಿಂಗ್ಯತೇ ॥ಜಾತಾಶ್ಶೀ
ಕರಶೀತಲಾಶ್ಚಮರುತೋ ರತ್ಯಂತಖೇದಚ್ಛಿದೋ ಧನ್ಯಾನಾಂ
ಬತದುರ್ದಿನಂಸುದಿನತಾಂಯಾತಿಪ್ರಿಯಾಸಂಗಮೇ ॥೯೫॥

ಟೀ॥ ಆಸಾರೇಣ=ಧಾರಾಸಂಪಾತದಿಂದ, ಬಹಿಃ=ಹೊರಗೆ, ಹರ್ಮ್ಯತಃ=ಉಪ್ಪರಿಗೆಯ ದೆಸೆಯಿಂದ, ಪ್ರಿಯತಮೈಃ=ವಲ್ಲಭರಿಂದ, ಯಾತುಂ=ಹೋಗುವುದಕ್ಕೆ, ನಶಕ್ಯತೇ=ಆಗುವದಿಲ್ಲ. ಶೀತ=ಛಳಿಯಿಂದುಂಟಾದ, ಉತ್ಕಂಪನಿಮಿತ್ತಂ=ನಡುಗುವದಕ್ಕಾಗಿ, ಆಯತದೃಶಾ=ವಿಶಾಲಾಕ್ಷಿಯಿಂದ, ಗಾಢಂ=ದೃಢವಾಗಿ, ಸಮಾಲಿಂಗ್ಯತೇ=ಆಲಿಂಗಿಸಲ್ಪಡುವನಾಗುತ್ತದೆ, ಶೀಕರ=ತುಂತುರುಗಳಿಂದ, ಶೀತಲಾಃ=ತಣ್ಣಗಿರುವ, ಮರುತಃ=ವಾಯುಗಳು, ರತ್ಯಂತ=ಸಂಭೋಗಾವಸಾನದೊಳುಂಟಾದ, ಖೇದ=ಆಯಾಸವನ್ನು, ಛಿದಃ=ನಿವಾರಣಮಾಡುವಂಥವುಗಳು, ಜಾತಾಃ=ಆಗುವವು ಧನ್ಯಾನಾಂ=ಸುಕೃತಿಗಳಿಗೆ, ಪ್ರಿಯಾಸಂಗಮೇ=ವಲ್ಲಭೆಯರ ಸಹವಾಸಕಾಲದೊಳು, ದುರ್ದಿನಂ=ದುರ್ದಿನವೂ, ಸುದಿನತಾಂ=ಒಳ್ಳೆಯದಿವಸದ ಭಾವವನ್ನು, ಯಾತಿ=ಹೊಂದುವುದು, ಬತ=ಆಶ್ಚರ್ಯವು, ||೯೫||

ತಾ॥ ಮೇಘಗಳಿಂದ ಆವೃತವಾಗಿ ತುಂತುರು ಹನಿಯು ಸುರಿಯುತ್ತಲಿರುವದರಿಂದ ಅಂತಃಪುರದೊಳಿರುವ ಪ್ರಿಯರು ಹೊರಗೆ ಹೊರಡಲಿಕ್ಕಾಗುವದಿಲ್ಲ. ಕೇವಲ ಛಳಿಯಿಂದ ಶರೀರವು ನಡುಗುವದಾವಕಾರಣ ಕಾಮಿನಿಯರು ಕಾಂತರನ್ನು ದೃಢವಾಗಿ ಆಲಿಂಗಿಸಿಕೊಂಬರು, ತಣ್ಣಗಿರುವ ಗಾಳಿಯು ಛಳಿಯು ರೂಪವಾಗಿದ್ದಾಗ್ಯೂ ಸಂಭೋಗಾವಸಾನದೊಳುಂಟಾದ ಆಯಾಸವನ್ನು ಪರಿಹರಿಸುವಂಥಾದ್ದಾಗುವದು. ಆದುದರಿಂದಲೇ ಸುಕೃತಿಗಳಾದ ಕಾಂತರಿಗೆ ಕಾಂತೆಯರ ಸಹವಾಸದೊಳು ಮೇಘಾವೃತವಾಗಿರುವ ದುರ್ದಿನವೂ ಅನುಕೂಲ್ಯವನ್ನುಂಟುಮಾಡುವದರಿಂದ ಸುದಿನವಾಗಿಯೇ ಪರಿಣಮಿಸುವದು. .... .... ||೯೫||

ಶ್ಲೋ॥ ಅರ್ಧಂಸುಪ್ತ್ವಾನಿಶಾಯಾಸ್ಸರಭಸಸುರತಾಯಾಸಸನ್ನಶ್ಲಥಾಂ
ಗಃಪ್ರೋದ್ಭೂತಾಸಹ್ಯತೃಷ್ಣೋಮಧುಮದನಿರತೋಹರ್ಮ್ಯಪೃ
ಷ್ಠೇವಿವಿಕ್ತೇ ॥ ಸಂಭೋಗಕ್ಲಾಂತಕಾಂತಾಶಿಥಿಲಭುಜಲತಾವ
ರ್ಜಿತಂಕರ್ಕರೀತೋಜ್ಯೋತ್ಸ್ನಾಭಿನ್ನಾಚ್ಛಧಾರಂನಪಿಬತಿಸ
ಲಿಲಂಶಾರದಂಮಂದಪುಣ್ಯಃ .... ||೯೬||

ಟೀ॥ ನಿಶಾಯಾಃ=ರಾತ್ರಿಯ, ಅರ್ಧಂ=ಅರ್ಧಭಾಗವನ್ನು, ಸುಪ್ತ್ವಾ=ಮಲಗಿದ್ದು, ಸರಭಸ=ಸಂಭ್ರಮದೊಡನೆ, ಸುರತ=ಸಂಭೋಗದ, ಆಯಾಸ=ಶ್ರಮದಿಂದ, ಸನ್ನ=ಚಲಿಸಿದ, ಶ್ಲಥ=ಶಿಥಿಲವಾದ, ಅಂಗಃ=ಅವಯವಗಳುಳ್ಳವನಾಗಿ, ಪ್ರೋದ್ಭೂತ=ಉಂಟಾದ, ಅಸಹ್ಯ=ಅಸಾಧ್ಯವಾದ, ತೃಷ್ಣಃ=ಬಾಯಾರಿಕೆಯುಳ್ಳ, ಮಧು=ಸಹಕಾರರಸ್ಯಾಂತಲೂ ಮೊದಲುಮಾಡಿದ ಮದ್ಯಪಾನದಿಂದುಂಟಾದ, ಮದ=ಮತ್ತ

ತೆಯಿಂದ, ನಿರತಃ=ಪರವಶವಾದವನಾಗಿ, ವಿವಿಕ್ತೇ=ರಹಸ್ಯವಾದ, ಹರ್ಮ್ಯಪೃಷ್ಠೇ=ಉಪ್ಪರಿಗೆಯ ಮೇಲ್ಭಾಗದಲ್ಲಿ, ಕರ್ಕರೀತಃ=ಗಿಂಡಿಯದೆಶೆಯಿಂದ, ಸಂಭೋಗ=ಸಹವಾಸದಿಂದ, ಕ್ಲಾಂತ=ಬಳಲಿದ, ಕಾಂತಾ=ವಲ್ಲಭೆಯರ, ಶಿಥಿಲ=ಶಿಥಿಲವಾದ, ಭುಜಲತಾ=ಲತೆಯಂತಿರುವ ಭುಜದಿಂದ, ಆವರ್ಜಿತಂ=ಬೊಗ್ಗಿಸಲ್ಪಟ್ಟ, ಜ್ಯೋತ್ಸ್ನಾ=ಬೆಳ್ದಿಂಗಳಿಂದ, ಭಿನ್ನ=ಕೂಡಿದ, ಅಚ್ಛ=ನಿರ್ಮಲವಾದ, ಧಾರಂ=ಧಾರೆಯುಳ್ಳೀಣ ಹೇಗೋಹಾಗೆ, ಶಾರದಂ=ಶರತ್ಕಾಲ ಸಂಬಂಧವಾದ, ಸಲಿಲಂ=ಉದಕವನ್ನು, ಮಂದಪುಣ್ಯಾಃ=ನಿರ್ಭಾಗ್ಯನು, ನಪಿಬತಿ=ಪಾನಮಾಡುವದಿಲ್ಲವು ||೯೬||

ತಾ|| ಶರತ್ಕಾಲದೊಳರ್ಧರಾತ್ರಿ ಪರ್ಯಂತವೂ ಸುಖಶಯನವಂ ಮಾಡಿ, ತರುವಾಯ ಮಧುರಸ ಪಾನದಿಂದ ಮತ್ತನಾಗಿ, ಸಹವಾಸದಿಂದುಂಟಾದ ಆಯಾಸದಿಂದ ಬಳಲಿದ ಅವಯವಗಳಿಂದೊಡಗೂಡಿ, ಬಳಿಕ ದಾಹಗೊಂಡು, ಮೇಲುಪ್ಪರಿಗೆಯೊಳು ರಹಸ್ಯಸ್ಥಾನದಲ್ಲಿ ಸಹವಾಸದಿಂದಾಯಾಸಹೊಂದಿದ ಕಾಂತೆಯು ಕಮನೀಯವಾದ ಬಾಹುಲತೆಯಿಂದ ಬೊಗ್ಗಿಸಲ್ಪಟ್ಟ ಗಿಂಡಿಯಿಂದ ಧಾರಾರೂಪವಾಗಿ ಬರುವ ಆನಂದಕರವಾದ ಹಂಸೋದಕವನ್ನು ಸುಕೃತಿಯು ಪಾನಮಾಡುವನಲ್ಲದೆ ನಿರ್ಭಾಗ್ಯನಿಗೆ ದೊರೆಯಲಾರದು (ಪ್ರಾತಃಕಾಲದೊಳು ಬೆಂಕಿಯಿಂದ ಕಾದು, ಬಳಿಕ ಬಿಸಿಲಿನೊಳದ್ದು ತರುವಾಯ ಆದಿನರಾತ್ರಿ ಬೆಳ್ದಿಂಗಳೊಳಗಿದ್ದ ಉದಕವು ಹಂಸೋದಕವೆನ್ನಲ್ಪಡುವದು ; ಇದು ದೇಹಕ್ಕೆ ಅತ್ಯಾರೋಗ್ಯವೆಂದು ಹೇಳುವರು.) ||೯೬||

ಶ್ಲೋ|| ಹೇಮಂತೇದಧಿದುಗ್ಧಸರ್ಪಿರಶನಾಮಾಂಜಿಷ್ಠವಾಸೋಭೃತಃ ಕಾ
ಶ್ಮೀರದ್ರವಸಾಂದ್ರದಿಗ್ಧವಪುಷಃಖಿನ್ನಾವಿಚಿತ್ರೈರತೈಃ || ವೃ
ತ್ತೋರುಸ್ತನಕಾಮಿನೀಜನ ಕೃತಾಶ್ಲೇಷಾಗೃಹಾಭ್ಯಂತರೇತಾಂ
ಬೂಲೀದಳಪೂಗಪೂರಿತಮುಖಾಧನ್ಯಾಸ್ಸುಖಂಶೇರತೆ ||೯೭||

ಟೀ|| ಹೇಮಂತೇ=ಹಿಮಂತರ್ತುವಿನಲ್ಲಿ, ದಧಿ=ಮೊಸರು, ದುಗ್ಧ=ಹಾಲು, ಸರ್ಪಿಃ=ತುಪ್ಪವು ಇವುಗಳೆ, ಅಶನಾಃ=ಆಹಾರವಾಗಿಯುಳ್ಳ, ಮಾಂಜಿಷ್ಠವಾಸಃ=ಕೆಂಪು ವಸ್ತ್ರಗಳನ್ನು, (ಸಕಲಾತಿ ಮೊದಲಾದವುಗಳನ್ನು) ಭೃತಃ=ಧರಿಸಿದವರಾಗಿ, ಕಾಶ್ಮೀರ=ಪರಿಮಳದ್ರವ್ಯದ, ದ್ರವ=ದ್ರವದಿಂದ, ದಿಗ್ಧ=ತೊಡೆಯಲ್ಪಟ್ಟ, ವಪುಷಃ=ಶರೀರವುಳ್ಳ, ವಿಚಿತ್ರೈಃ=ನಾನಾವಿಧವಾದ, ರತೈಃ=ಸಹವಾಸಗಳಿಂದ, ಖಿನ್ನಾಃ=ಶ್ರಾಂತರಾಗಿ, ವೃತ್ತ=ಗುಂಡಾದ, ಉರು=ದಪ್ಪವಾದ, ಸ್ತನ=ಕುಚಗಳುಳ್ಳ, ಕಾಮಿನೀಜನ=ಅಂಗನಾಜನರಿಂದ, ಕೃತ=ಮಾಡಲ್ಪಟ್ಟ, ಆಶ್ಲೇಷಾಃ=ಆಲಿಂಗನಗಳುಳ್ಳ, ತಾಂಬೂಲೀದಳ=ವೀಳೆಯದೆಲೆಗಳು, ಪೂಗ=ಅಡಿಕೆಯು, ಇವುಗಳಿಂದ, ಪೂರಿತ=ತುಂ

ಬಿದ, ಮುಖಾಃ=ವದನಗಳುಳ್ಳವರಾಗಿಯೂ, ಧನ್ಯಾಃ=ಸುಕೃತಿಗಳು, ಗೃಹಾಭ್ಯಂತರೇ=ಚಿಕ್ಕಮನೆಯಲ್ಲಿ, ಸುಖಂ=ಆನಂದವಾಗಿ, ಶೇರತೇ=ಮಲಗಿಕೊಳ್ಳುವರು, ॥೯೭॥

ತಾ॥ ಹಾಲು ಮೊಸರು ತುಪ್ಪ ಮೊದಲಾದ ಉತ್ತಮಾಹಾರವನ್ನು ಸೇವಿಸುತ ದಿವ್ಯವಾಗಿರುವ ಕಾಶ್ಮೀರ ಪರಿಮಳ ಲೇಪನವಂಗೈದು, ಶ್ಲಾಘ್ಯವಾದ ಪೂಗೀಫಲ ತಾಂಬೂಲಗಳಿಂದ ಶೋಭಾಯಮಾನವಾದ ಮುಖವುಳ್ಳವರಾಗಿ ದಿವ್ಯವಾದ ಸಕಲಾತಿ ಮೊದಲಾದ ವಸ್ತ್ರಗಳನ್ನು ಹೊದೆದು ಬಗೆಬಗೆಯಾದ ಸಂಭೋಗಗಳಿಂದ ಶ್ರಾಂತರಾಗುತ, ತೋರವಾಗಿಯೂ ಮತ್ತು ದುಂಡಾಗಿಯೂ ಬಲಿತೂ ಇರುವ ಉರೋಜಗಳಿಂದ ಅಸಮಾನವಾದ ಕಾಂತಿಯುಳ್ಳ ಕಾಮಿನಿಯರಿಂದಾಲಿಂಗಿತರಾಗಿ ಈ ಹಿಮಂತಋತು ಸಮಯದೊಳು ಒಳಮನೆಗಳಲ್ಲಿ ಬೆಚ್ಚಗೆ ಮಲಗಿ ಸುಕೃತಿಗಳಾದವರು ಸುಖಸಿದ್ಧಿಯಂ ಗೈಯ್ಯುವರು. .... ॥೯೭॥

ಶ್ಲೋ॥ ಪ್ರೋದ್ಯತ್ಪ್ರೌಢಪ್ರಿಯಂಗುದ್ಯುತಿಭೃತಿವಿಕಸತ್ಕುಂದಮಾದ್ಯದ್ದ್ವಿರೇಫೇಕಾಲೇಪ್ರಾಲೇಯವಾತಪ್ರಚಲವಿಲಸಿತೋದಾರಮಂದಾರಧಾಮ್ನಿ ॥ ಯೇಷಾಂನೋಕಂಠಲಗ್ನಾಕ್ಷಣಮಪಿತುಹಿನಕ್ಷೋದದಕ್ಷಾಮೃಗಾಕ್ಷೀತೇಷಾಮಾಯಾಮಯಾಮಾಯಮಸದನಸಮಾಯಾಮಿನೀಯಾತಿಯೂನಾಂ .... .... ॥೯೮॥

ಟೀ॥ ಪ್ರೋದ್ಯತ್=ಪ್ರಾದುರ್ಭವಿಸಿದ, ಪ್ರೌಢ=ದೃಢವಾದ, ಪ್ರಿಯಂಗು=ಪ್ರಿಯಂಗು ಧಾನ್ಯಗಳ (ನವಣೆಗಳ) ದ್ಯುತಿ=ಕಾಂತಿಯನ್ನು, ಭೃತಿ=ಧರಿಸಿರುವ, ವಿಕಸತ್=ಅರಳಿದ, ಕುಂದ=ಮಲ್ಲಿಕಾ ಕುಸುಮಗಳಿಂದ, ಮಾದ್ಯತ್=ಮದಿಸಿದ, ದ್ವಿರೇಫೇ=ಭ್ರಮರಗಳುಳ್ಳ, ಪ್ರಾಲೇಯ=ಮಂಜಿನಿಂದ ಕೂಡಿದ, ವಾತ=ವಾಯುವಿನ, ಪ್ರಚಲ=ಚಲನದಿಂದ, ವಿಲಸಿತ=ಪ್ರಕಾಶಮಾನವಾದ, ಉದಾರ=ಗಂಭೀರವಾದ, ಮಂದಾರ=ಮಂದಾರ ಕುಸುಮಗಳಿಗೆ, ಧಾಮ್ನಿ=ಆಧಾರವಾದ, ಕಾಲೇ=ಹೇಮಂತ ಸಮಯದಲ್ಲಿ, ಯೇಷಾಂ=ಯಾವಪುರುಷರಿಗೆ, ತುಹಿನಕ್ಷೋದ=ಶೀತನಿವಾರಣೆಯಲ್ಲಿ, ದಕ್ಷಾ=ಸಮರ್ಥಳಾದ, ಮೃಗಾಕ್ಷೀ=ತರುಣಿಯು, ಕ್ಷಣಮಪಿ=ಕ್ಷಣಕಾಲವಾದರೂ, ಕಂಠ=ಕೊರಳಿನಲ್ಲಿ, ಲಗ್ನಾ=ಸಂಬಂಧಿಸಿರುವಳು, ನೋ=ಆಗುವದಿಲ್ಲವೋ, ತೇಷಾಂ=ಅಂಥ, ಯೂನಾಂ=ತರುಣರಿಗೆ, ಆಯಾಮ=ನೀಳವಾದ, ಯಾಮಾ=ಜಾವವುಳ್ಳ, ಯಾಮಿನೀ=ರಾತ್ರಿಯು, ಯಮಸದನ=ಯಮಲೋಕದಂತೆ, ಸಮಾ=ಸಮಾನವಾಗಿ, ಯಾತಿ=ಕಳೆಯುವದು. ... ॥೯೮॥

ತಾ॥ ಪ್ರಿಯಂಗುವೆಂಬ ಧಾನ್ಯದಂತೆ (ನವಣೆಯಂತೆ) ಕಾಂತಿಯುಳ್ಳದ್ದಾಗಿ, ಅರಳಿದ ಕುಂದಮಂದಾರಾದಿ ಕುಸುಮರಸಾಸ್ವಾದನದಿಂದ ಮದಿಸಿರುವ ದುಂಬಿಗಳ ಝೇಂಕಾರದಿಂದೊಡಗೂಡಿ, ಹಿಮದಿಂದ ಶೀತಲವಾಗಿರುವ ವಾಯುವಿನಿಂದ ವಿಕಸಿತವಾದ ಕುಸುಮಗಳಿಗೆ ಆಕರವಾಗಿರುವ ಸರ್ವೋತ್ತಮವಾದ ಹೇಮಂತ ಸಮಯದೊಳು ದೃಢವಾಗಿ ಕಂಠಾಲಿಂಗನಮಂಗೈದು ಕುಚಕುಂಭಗಳೊಳು ಅವಿತುಕೊಂಡಿರುವ ಉಷ್ಣದಿಂದ ಶೀತವನ್ನು ಧ್ವಂಸಮಾಡುವ ಕಾಮಿನಿಯು ಕಂಠಾಲಿಂಗನವೆಂಬದು ಯಾವ ತರುಣನಿಗಾದರೆ ಕ್ಷಣಕಾಲವಾದರೂ ಇರುವದಿಲ್ಲವೋ? ಅಂತವನಿಗೆ ಆ ರಾತ್ರಿಯೊಳು ಕಾಲವನ್ನು ಕಳೆಯುವದು ಯಮಲೋಕದೊಳು ನರಕಯಾತನೆಯನ್ನನುಭವಿಸುವರಿಗೆ ಕ್ಷಣಕಾಲವನ್ನು ಕಳೆಯುವದೆಂತು ಕಷ್ಟವೋ? ಅದಕ್ಕಿಂತಅತಿಶಯವಾಗಿ ತೊಂದರೆಯಾಗುವದೆಂದಾಶಯವು. ॥೯೮॥

ಶ್ಲೋ॥ ಚುಂಬಂತೋಗಂಡಭಿತ್ತೀರಲಕವತಿಮುಖೇಸೀತ್ಕೃತಾನ್ಯಾದಧಾ
ನಾವಕ್ಷಸ್ಸೂತ್ಕಂಚುಕೇಷು ಸ್ತನಭರಪುಲಕೋದ್ಭೇದಮಾಪಾದ
ಯಂತಃ ॥ ಊರೂನಾಕಂಪಯಂತಃಪೃಥುಜಘನತಟಾತ್ಸ್ರಂಸ
ಯಂತೋಂಶುಕಾನಿವ್ಯಕ್ತಂಕಾಂತಾಜನಾನಾಂವಿಟಚರಿತಭೃತಶ್ಶೈ
ಶಿರಾಃವಾಂತಿವಾತಾಃ .... .... ॥೯೯॥

ಟೀ॥ ಗಂಡಭಿತ್ತೀಃ=ಗೋಡೆಗಳಂತಿರುವ ಕಪೋಲಗಳನ್ನು, ಚುಂಬಂತಃ=ಚುಂಬಿಸುವಂಥ, ಅಲಕವತಿ–ಮುಂಗುರುಳುಗಳುಳ್ಳ, ಮುಖೇ=ವದನದಲ್ಲಿ, ಸೀತ್ಕೃತಾನಿ=ಸೀತ್ಕಾರಗಳನ್ನು, ಆದಧಾನಾ=ಉಂಟುಮಾಡುವ, ವಕ್ಷಸ್ಸು=ವಕ್ಷಸ್ಥಲಗಳು, ಉತ್ಕಂಚುಕೇಷು=ಕಟ್ಟಲ್ಪಟ್ಟ ಕುಪ್ಪಸಗಳುಳ್ಳವುಗಳಾದರು, ಸ್ತನಭರ=ಕುಚಭಾರಗಳಲ್ಲಿ, ಪುಲಕೋದ್ಭೇದಂ=ರೋಮಾಂಚವನ್ನು, ಆಪಾದಯಂತಃ=ಉಂಟುಮಾಡುತಲಿರುವ, ಊರೂನ್–ತೊಡೆಗಳನ್ನು, ಆಕಂಪಯಂತಃ=ನಡುಗಿಸುತಲಿರುವ, ಪೃಥು=ದೊಡ್ಡದಾದ, ಜಘನ=ಕಟಿಪಶ್ಚಾದ್ಭಾಗದ, ತಟಾತ್=ಪ್ರದೇಶದವೆಸೆಯಿಂದ, ಅಂಶುಕಾನಿ=ವಸ್ತ್ರಗಳನ್ನು, ಸ್ರಂಸಯಂತಃ=ಜಾರಿಸುವ, ಕಾಂತಾಜನಾನಾಂ=ಅಂಗನಾಜನರೊಳಗೆ, ವ್ಯಕ್ತಂ=ಸ್ಫುಟವಾಗಿ, ವಿಟ=ಕಾಮುಕರ, ಚರಿತ=ನಡತೆಯನ್ನು, ಭೃತಃ=ಧರಿಸಿರುವ, ಶೈಶಿರಾಃ=ಶಿಶಿರರುತು ಸಂಬಂಧವಾದ, ವಾತಾಃ=ವಾಯುಗಳು, ವಾಂತಿ=ಬೀಸುತ್ತವೆ. ... ॥೯೯॥

ತಾ॥ ವಿಶಾಲವಾದ ಕಪೋಲಗಳನ್ನು ಚುಂಬಿಸುತ, ಮುಂಗುರುಳುಗಳುಳ್ಳ ಮುದ್ದುಮುಖದೊಳು ಸೀತ್ಕಾರವನ್ನುಂಟುಮಾಡುತ, ಕುಚಕುಂಭ

ಗಳು ಕುಪ್ಪಸಗಳಿಂದ ಕಟ್ಟಲ್ಪಟ್ಟವುಗಳಾಗಿದ್ದರೂ ಅವುಗಳಲ್ಲಿಯೂ ರೋಮಾಂಚವನ್ನುಂಟುಮಾಡುತ, ತೊಡೆಗಳನ್ನು ನಡುಗಿಸುತ್ತ, ಗಂಭೀರವಾದ ಕಟಿಪ್ರದೇಶದೊಳಿರುವ ವಸನವ ಸೆಳೆಯುತ್ತಲೂ ಈಮೇರಿಗೆಲ್ಲಾ ಕಾಮಿನಿಯರೊಳು ಕಾಮುಕರ ಚೇಷ್ಟೆಯನ್ನಾಚರಿಸುತ್ತಿರುವ ಶಿಶಿರರುತುವಿನ ಮನೋಹರವಾದ ವಾಯುಗಳು ಬೀಸುತ್ತಲಿರುವವು. ॥೯೯॥

ಶ್ಲೋ॥ ಕೇಶಾನಾಕುಲಯನ್ ದೃಶೋಮುಕುಳಯನ್ ವಾಸೋಬಲಾದಾಕ್ಷಿಪ
ನ್ನಾತನ್ವನ್ ಪುಲಕೋದ್ಗಮಂ ಪ್ರಕಟಯನ್ನಾವೇಗಕಂಪಂಶನೈಃ ॥
ವಾರಂವಾರಮುದಾರಸೀತ್ಕೃತಕೃತೋ ದಂತಚ್ಛದಾನ್ಪೀಡಯನ್
ಪ್ರಾಯಶ್ಶೈಶಿರಏಷಸಂಪ್ರತಿಮರುತ್ಕಾಂತಾಸುಕಾಂತಾಯತೆ॥೧೦೦॥

ಟೀ॥ ಕೇಶಾನ್=ಕೂದಲುಗಳನ್ನು, ಆಕುಲಯನ್=ವ್ಯಾಕುಲಪಡಿಸುವದಾಗಿ, ದೃಶಃ=ದೃಷ್ಟಿಗಳನ್ನು, ಮುಕುಳಯನ್=ಮುಚ್ಚಿಸುವದಾಗಿ. ವಾಸಃ=ವಸ್ತ್ರವನ್ನು. ಬಲಾತ್=ಬಲಾತ್ಕಾರದದೆಸೆಯಿಂದ, ಆಕ್ಷಿಪನ್=ಹಾರಿಸುವದಾಗಿ. ಪುಲಕೋದ್ಗಮಂ=ರೋಮಾಂಚವನ್ನು, ಆತನ್ವನ್=ಉಂಟುಮಾಡುವದಾಗಿ, ಆವೇಗ=ಭಯದಿಂದ, (ಅತಿಜಾಗ್ರತೆಯಿಂದ) ಕಂಪಂ=ನಡುಗುವಿಕೆಯನ್ನು, ಶನೈಃ=ಮೆಲ್ಲಗೆ. ಪ್ರಕಟಯನ್=ಉಂಟುಮಾಡುವದಾಗಿ, ವಾರಂವಾರಂ=ಪದೇಪದೇ, ಉದಾರ=ಗಂಭೀರವಾದ, ಸೀತ್ಕೃತ=ಸೀತ್ಕಾರವನ್ನು, ಕೃತಃ=ಮಾಡಿಸುವಂಥಾದ್ದಾಗಿ, ದಂತಚ್ಛದಾನ್=ತುಟಿಗಳನ್ನು, ಪೀಡಯನ್=ಬಾಧಿಸುವದಾಗಿಯೂ, ಏಷಃ=ಈ, ಶೈಶಿರಃ=ಶಿಶಿರರುತು ಸಂಬಂಧವಾದ, ಮರುತ್=ಗಾಳಿಯು, ಕಾಂತಾಸು=ಅಂಗನೆಯರಲ್ಲಿ, ಪ್ರಾಯಃ=ಬಹುಶಃ, ಕಾಂತಾಯತೆ=ವಲ್ಲಭನಂತಾಚರಿವುದು, ... ।೧೦೦।

ತಾ॥ ಕಾಂತೆಯರ ಕಮನೀಯವಾದ ಮುಂಗುರುಳುಗಳನ್ನು ಕೆದರುತ, ಕಣ್ಣುಗಳನ್ನು ಮುಚ್ಚಿಸುತ, ಉಟ್ಟಿರುವ ವಸ್ತ್ರವನ್ನು ಬಲಾತ್ಕಾರದಿಂದ ಸೆಳೆದು ಹಾರಿಸುತ, ರೋಮಾಂಚವನ್ನುಂಟುಮಾಡುತ, ಹಾಗೆಯೇ ದೇಹದೊಳು ಚಲನವನ್ನುಂಟುಮಾಡಿ, ಪದೇಪದೆ ಶ್ಲಾಘ್ಯವಾದ ಸೀತ್ಕಾರಾವಿರ್ಭಾವವನ್ನುಗೈಯ್ಯುತ, ಓಷ್ಠಪುಟಗಳನ್ನುಪೀಡಿಸುತಲೂ ಇರುವದರಿಂದಲೇ ಈ ಶಿಶಿರರುತುವಿನ ಮಾರುತವು ಕಾಮಿನಿಯರೊಳು ಕಾಮುಚೇಷ್ಟೆಯನ್ನು ಮಾಡುವ ಕಾಂತನಂತಿರುವುದೆಂದಾಶಯವು. ಉಪಮೋತ್ಪ್ರೇಕ್ಷಾಲಂಕಾರಗಳು ಸಂಕರವಾಗಿರುವವು. .... ॥೧೦೦॥

ಶೃಂಗಾರ ಶತಕವು ಸಮಾಪ್ತವಾದುದು.

ಶ್ರೀ ಜಾನಕೀಜಾನಯೇನಮಃ

ಟೀಕಾ ತಾತ್ಪರ್ಯಸಹಿತವಾದ

# ಭರ್ತೃಹರಿಯಲ್ಲನ.

## ವೈರಾಗ್ಯಶತಕವು.

### ೩ನೇ ಭಾಗ.

ಶ್ಲೋ॥ ಚೂಡೋತ್ತಂಸಿತಚಂದ್ರಚಾರುಕಲಿಕಾಚಂಚಚ್ಛಿಖಾಭಾಸ್ವರೋ
ಲೀಲಾದಗ್ಧವಿಲೋಲಕಾಮಶಲಭಶ್ಶ್ರೇಯೋದಶಾಗ್ರೇಸ್ಫುರನ್ ॥
ಅಂತಸ್ಸ್ಫೂರ್ಜದ ಪಾರಮೋಹತಿಮಿರ ಪ್ರಾಗ್ಭಾರಮುಚ್ಚಾಟ
ಯನ್ಚೇತಸ್ಸದ್ಮನಿಯೋಗಿನಾಂವಿಜಯತೇಜ್ಞಾನಪ್ರದೀಪೋಹರಃ ॥

ಶ್ಲೋ॥ ರಾಗಿಣಾಮಗ್ರಗಣ್ಯೋಯೋವಿರಾಗಿಷುಪುರಸ್ಸರಃ ।
ಸಾಂಬಂಸ್ಮರಹರಂನೌಮಿಭವಭೀತಿನಿವೃತ್ತಯೆ ॥

ಟೀ॥ ಚೂಡೋತ್ತಂಸಿತ=ಶಿರೋಭೂಷಣವಾಗಿ ಮಾಡಲ್ಪಟ್ಟ, ಚಂದ್ರ=ಚಂದ್ರನ, ಚಾರು=ಮನೋಹರವಾದ, ಕಳಿಕಾ=ಮೊಗ್ಗಿನಿಂದಲೋಪಾದಿಯುಳ್ಳ, ಚಂಚತ್=ಹೊಳೆಯುತ್ತಿರುವ, ಶಿಖಾ=ಅಗ್ರದಿಂದ ಭಾಸ್ವರಃ=ಪ್ರಕಾಶಿಸುತ್ತಿರುವ ಲೀಲಾದಗ್ಧವಿಲೋಲಕಾಮಶಲಭಃ—ಲೀಲಾ=ವಿಲಾಸದಿಂದ, ದಗ್ಧ=ಸುಡಲ್ಪಟ್ಟ, ವಿಲೋಲ=ಚಪಲನಾದ, ಕಾಮ=ಮನ್ಮಥನೆಂಬ, ಶಲಭಃ=ಮಿಡತೆಯುಳ್ಳ, ಶ್ರೇಯಃ=ಶುಭಕರಗಳಾದ, ದಶಾ=ಅವಸ್ಥೆಗಳ, ಅಗ್ರೇ=ಮೊದಲಿನಲ್ಲಿ, ಸ್ಫುರನ್=ಪ್ರಕಾಶಿಸುತ್ತಿರುವ, ಅಂತಃ=ಮನಸ್ಸಿನಲ್ಲಿ, ಸ್ಫೂರ್ಜತ್=ಹೆಚ್ಚುತಿರುವ, ಅಪಾರ=ಕೊನೆಯಿಲ್ಲದ, ಮೋಹ=ಅಜ್ಞಾನವೆಂಬ, ತಿಮಿರ=ಕತ್ತಲೆಯು, ಪ್ರಾಗ್ಭಾರಂ=ಮೂಲವನ್ನು, ಉಚ್ಚಾಟಯನ್=ನಾಶಮಾಡುತಿರುವ, ಜ್ಞಾನಪ್ರದೀಪಃ=ಜ್ಞಾನಪ್ರಕಾಶಕನಾದ, ಹರಃ=ಪರಮಶಿವನು, ಯೋಗಿನಾಂ=ಮಹಾಮುನಿಗಳ, ಚೇತಃ=ಚಿತ್ತವೆಂಬ, ಸದ್ಮನಿ=ಮನೆಯೊಳಗೆ, ವಿಜಯತೇ=ಸರ್ವೋತ್ಕರ್ಷದಿಂದಿರುವನು. ॥೧॥

ತಾ॥ ಶಿರೋಭೂಷಣವಾಗಿ ಮಾಡಿಕೊಂಡಿರುವ ಮತ್ತು ಹೂವಿನಮೊಗ್ಗಿನಂತಿರುವ ಚಂದ್ರರೇಖೆಯ ಅಗ್ರಭಾಗದಿಂದ ಶೋಭಿಸುತ್ತಿರುವ(ಅನವಾ

ಜಟೆಯಿಂದ ಹೊಳೆಯುವ) ನಾಗಿಯೂ, ಚಪಲನಾದ ಮನ್ಮಥನೆಂಬ ಮಿಡತೆಯನ್ನು ವಿಲಾಸಮಾತ್ರದಿಂದ ದಹಿಸಿದವನಾಗಿಯೂ, ನಾನಾವಿಧವಾದ ಶ್ರೇಯಸ್ಸುಗಳನ್ನುಂಟುಮಾಡತಕ್ಕವನಾಗಿಯೂ, ಅಂತಃಕರಣದಲ್ಲಿ ವ್ಯಾಪಿಸುತ್ತಿರುವ ಮೋಹಾಂಧಕಾರವನ್ನು ನಿವಾರಣೆ ಮಾಡತಕ್ಕವನಾಗಿಯೂ, ಜ್ಞಾನವನ್ನು ಪ್ರಕಾಶಮಾಡುವನಾಗಿಯೂ ಇರುವ ಶಂಕರನು ಸನಕಾದಿ ಯೋಗಿಗಳ ಮನವೆಂಬ ಮನೆಯೊಳು ಸರ್ವದಾ ಥಳಥಳಸುತ್ತಿರುವನು. ಶಿರೋಭೂಷಣವಾಗಿ ಸುಂದರವಾದ ಮೊಗ್ಗಿನಂತಿರುವ ಚಂದ್ರನೆಂಬ ಜ್ವಾಲೆಯಿಂದ ಹೊಳೆಯುತ, ನಿರಾಯಾಸದಿಂದ ಕಾಮನೆಂಬ ಮಿಡತೆಯನ್ನು ಸುಟ್ಟು, ಶ್ರೇಯಸ್ಸೆಂಬ ಬತ್ತಿಯ ಕೊನೆಯೊಳು ಥಳಥಳಸುತ್ತಲೂ, ಯೋಗಿಗಳ ಮನಸ್ಸೆಂಬ ಮನೆಯೊಳಿರುವ ಅಜ್ಞಾನವೆಂಬ ಕತ್ತಲೆಯನ್ನು ನಿವಾರಿಸುತ್ತ, ಜ್ಞಾನವೆಂಬ ಕರಣದಿಂದ ತಿಳಿಯಲ್ಪಡತಕ್ಕದ್ದಾಗಿಯೂ ಇರುವ ಹರನೆಂಬ ದೀಪವು ಅಲ್ಲಿಯೇ ಸರ್ವೋತ್ತಮವಾಗಿರುವದೆಂತಲೂ ತಾತ್ಪರ್ಯವು. ॥೧॥

ಶ್ಲೋ॥ ಭ್ರಾಂತಂದೇಶಮನೇಕದುರ್ಗವಿಷಮಂಪ್ರಾಪ್ತಂನಕಿಂಚಿತ್ಫಲಂತ್ಯ
ಕ್ತ್ವಾಜಾತಿಕುಲಾಭಿಮಾನಮುಚಿತಂಸೇವಾಕೃತಾನಿಷ್ಫಲಾ॥ಭು
ಕ್ತಂಮಾನವಿವರ್ಜಿತಂಪರಗೃಹೇಷ್ವಾಶಂಕಯಾಕಾಕವತ್ತೃಷೇ
ಜೃಂಭಸಿಪಾಪಕರ್ಮಪಿಶುನೇನಾದ್ಯಾಪಿಸಂತುಷ್ಯಸಿ ॥೨॥

ಟೀ॥ ವಿಷಯಾಭಿಲಾಷೆಗೆ ಆಶೆಯು ಮೂಲವಾದುದರಿಂದಾದಿಯೊಳ್ ತೃಷ್ಣೆಯನ್ನು ದೂಷಿಸುತ್ತಾನೆ—ಅನೇಕ=ಲೆಕ್ಕವಿಲ್ಲದ, ದುರ್ಗ=ದುರ್ಗಸ್ಥಾನಗಳಿಂದ ವಿಷಮಂ=ಘೋರವಾದ, ದೇಶಂ=ದೇಶವು, ಭ್ರಾಂತಂ=ಸುತ್ತಲ್ಪಟ್ಟಿತು. ಕಿಂಚಿತ್=ಸ್ವಲ್ಪವಾದ, ಫಲಂ=ಪ್ರಯೋಜನವೂ, ನಪ್ರಾಪ್ತಂ=ಹೊಂದಲ್ಪಡಲಿಲ್ಲ, ಉಚಿತಂ=ಯೋಗ್ಯವಾದ, ಜಾತಿ=ಬ್ರಾಹ್ಮಣತ್ವಾದಿ ಜಾತಿಯು, ಕುಲ=ಸದ್ವಂಶವು, ಇವುಗಳಲ್ಲಿ, ಅಭಿಮಾನಂ=ಮಮತೆಯನ್ನು, ತ್ಯಕ್ತ್ವಾ=ಬಿಟ್ಟು, ನಿಷ್ಫಲಾ=ಫಲಶೂನ್ಯವಾದ, ಸೇವಾ=ಸೇವೆಯು, ಕೃತಾ=ಮಾಡಲ್ಪಟ್ಟಿತು. ಮಾನವಿವರ್ಜಿತಂ=ಅಭಿಮಾನವಿಲ್ಲದಿರೋಣ ಹೇಗೋ ಹಾಗೆ, ಆಶಂಕಯಾ=ಸಂದೇಹದಿಂದ, ಪರಗೃಹೇಷು=ಪರರ ಮನೆಗಳಲ್ಲಿ, ಕಾಕವತ್=ಕಾಗೆಯಂತೆ, ಭುಕ್ತಂ=ಭೋಜನ ಮಾಡಲ್ಪಟ್ಟಿತು. ಪಾಪಕರ್ಮ=ಹೀನಕರ್ಮಗಳಿಗೆ, ಪಿಶುನೇ=ಪ್ರೇರಕವಾದ, ತೃಷ್ಣೇ=ಎಲೈ ಆಶೆಯೇ, ಜೃಂಭಸಿ=ಹೆಚ್ಚುತ್ತಿರುವೆ, ಅದ್ಯಾಪಿ=ಈಗಲೂ, ನಸಂತುಷ್ಯಸಿ=ತೃಪ್ತಳಾಗಲಿಲ್ಲವೆ? ... ... ... ॥೨॥

ತಾ॥ ಪರ್ವತ ಜಲ ವೃಕ್ಷ ಇವುಗಳಿಂದ ಗಹನವಾದ ದುರ್ಗಗಳನ್ನೆಲ್ಲಾ ತಿರುಗಿ, ಬ್ರಾಹ್ಮಣತ್ವ ಸದ್ವಂಶ ಮೊದಲಾದವುಗಳಲ್ಲಿ ಅಭಿಮಾನವನ್ನು ತೊರೆದು, ಪರರಿಗೆ ಸೇವೆಯನ್ನೆಸಗಿ, ಮಾನತ್ಯಾಗವನ್ನೂ ಮಾಡಿ ಬಹು ಸಂದೇಹದಿಂದ ಪಿಂಡವಂ ತಿಂಬುವ ಕಾಗೆಯಂತೆ ಪರಾನ್ನವಂ ತಿಂದರೂ ನಿಷ್ಫಲವೇ ಆಯಿತಲ್ಲದೆ ಲೇಶವೂ ಫಲವಾಗಲಿಲ್ಲ, ಆದರೂ, ಎಲೈ ಆಶೆಯೇ! ನನ್ನನ್ನು ಇಷ್ಟು ಅವಸ್ಥೆಪಡಿಸಿದಾಗ್ಯೂ ಇನ್ನೂ ನೀನು ಶಾಂತವಾಗದೆ ಹೆಚ್ಚುತ್ತಲೇ ಇರುವೆಯಲ್ಲಾ, ಆದರೂ ನಿನಗೆ ತೃಪ್ತಿಯಾಗಲಿಲ್ಲವೆ? .... .... ॥ ೨ ॥

ಶ್ಲೋ॥ ಉತ್ಖಾತಂನಿಧಿಶಂಕಯಾಕ್ಷಿತಿತಲಂಧ್ಮಾತಾಗಿರೇರ್ಧಾತವೋನಿಸ್ತೀರ್ಣಸ್ಸರಿತಾಂಪತಿರ್ನೃಪತಯೋಯತ್ನೇನಸಂತೋಷಿತಾಃ ॥ ಮಂತ್ರಾರಾಧನತತ್ಪರೇಣಮನಸಾನೀತಾಸ್ಸ್ಮಶಾನೇನಿಶಾಃಪ್ರಾಪ್ತಃಕಾಣವರಾಟಕೋಪಿನಮಯಾತೃಷ್ಣೇಸಕಾಮಾಭವ ॥೩॥

ಟೀ॥ ನಿಧಿ=ನಿಕ್ಷೇಪವೆಂಬ, ಶಂಕಯಾ=ಭ್ರಾಂತಿಯಿಂದ, ಕ್ಷಿತಿತಲಂ=ಭೂತಲವು, ಉತ್ಖಾತಂ=ಅಗಿಯಲ್ಪಟ್ಟಿತು, ಗಿರೇಃ=ಬೆಟ್ಟದ. ಧಾತವಃ=ಮಣಿಶಿಲೆ ಮೊದಲಾದ ಧಾತುಗಳು. ಧ್ಮಾತಾಃ=ಊದಲ್ಪಟ್ಟವು, ಸರಿತಾಂಪತಿಃ=ಸಮುದ್ರವು. ನಿಸ್ತೀರ್ಣಃ=ದಾಟಲ್ಪಟ್ಟಿತು, ನೃಪತಯಃ=ಅರಸರು, ಯತ್ನೇನ=ಪ್ರಯತ್ನದಿಂದ, ಸಂತೋಷಿತಾಃ=ಸಂತೋಷಗೊಳಿಸಲ್ಪಟ್ಟರು, ಮಂತ್ರಾರಾಧನ=ಮಂತ್ರಜಪದಲ್ಲಿ ತತ್ಪರೇಣ=ಆಸಕ್ತವಾದ, ಮನಸಾ=ಮನಸ್ಸಿನಿಂದ, ಸ್ಮಶಾನೇ=ಪಿತೃವನದಲ್ಲಿ, ನಿಶಾಃ=ರಾತ್ರಿಗಳು, ನೀತಾಃ=ಕಳೆಯಲ್ಪಟ್ಟವು, ಕಾಣವರಾಟಕೋಪಿ=ಕುರುಡ ಕವಡೆಯುಕೂಡ, ಮಯಾ=ನನ್ನಿಂದ, ನಪ್ರಾಪ್ತಃ=ಹೊಂದಲ್ಪಡಲಿಲ್ಲವು. ತೃಷ್ಣೇ=ಎಲೇ ಆಶೆಯೆ. ಸಕಾಮಾ=ಮನೋರಥವೊಡನೆ ಕೂಡಿದಂಥಾದ್ದು. ಭವ=ಆಗು. ॥೩॥

ತಾ॥ ನಿಕ್ಷೇಪವು ಸಿಕ್ಕುವುದೆಂಬ ಭ್ರಾಂತಿಯಿಂದ ಭೂಮಿಯನ್ನೆಲ್ಲಾ ಅಗಿದೆನು. ಬಂಗಾರವಾಗುವುದೆಂಬ ಭ್ರಮೆಯಿಂದ ಬೆಟ್ಟಗಳಲ್ಲಿರುವ ಮಣಿಶಿಲೆ ಮೊದಲಾದ ಧಾತುಗಳನ್ನು ಮೂಶೆಯೊಳಗೆ ಹಾಕಿ ಬೆಂಕಿಯಲ್ಲಿಟ್ಟು ಊದಿದೆನು. ಇವಲ್ಲದೆ ದ್ವೀಪಾಂತರಗಳಲ್ಲಿ ವ್ಯಾಪಾರಾದಿಗಳಿಂದ ವಿಶೇಷ ಲಾಭ ಸಂಪಾದಿಸುವೆನೆಂಬ ಆಶೆಯಿಂದ ಸಮುದ್ರವನ್ನೂ ದಾಟಿದೆನು. ಮತ್ತು ರಾಜರು ತೃಪ್ತರಾಗಿ ವಿಶೇಷವಾಗಿ ಬದುಕಿಸುವರೆಂಬ ಕಾತೂಹಲದಿಂದ ಅವರನ್ನು ಸೇವಾದಿಗಳಿಂದ ಸಂತೋಷಪಡಿಸಿದೆನು. ಮತ್ತು

ಮಂತ್ರಪುರಶ್ಚರಣೆಗಳನ್ನು ಮಾಡಿಲಕ್ಷ್ಮಿಯೇ ಮೊದಲಾದ ದೇವತೆಗಳನ್ನು ತೃಪ್ತಿಪಡಿಸಿ ಸಂಪತ್ತನ್ನು ಸಂಪಾದಿಸುವೆನೆಂಬ ಆಶೆಯಿಂದ ಭೂತಪ್ರೇತ ಪಿಶಾಚಾದಿಗಳ ಭಯವಿಲ್ಲದೆ ರಾತ್ರಿಕಾಲಗಳಲ್ಲಿ ಸ್ಮಶಾನಗಳಲ್ಲಿಯೂ ವಾಸ ಮಾಡಿದೆನು. ಈ ರೀತಿಯಾಗಿ ನಾನಾವಸ್ಥೆಗಳನ್ನು ಹೊಂದಿದರೂ ಒಂದು ಕುರುಡು ಕವಡೆಯೂ ದೊರೆಯಲಿಲ್ಲವು. ಎಲೈ ಆಶೆಯೇ ಇನ್ನಾದರೂ ಸಫಲವಾಗು; ಏದರೆ ಈ ರೀತಿಯಾಗಿ ಆಶೆಯೆಂಬುದು ಅನರ್ಥಗಳಿಗೆ ಕಾರಣವಲ್ಲದೆ ಇಷ್ಟಾರ್ಥಲಾಭವಾಗುವದಿಲ್ಲವಾದುದರಿಂದ ಆ ಆಶೆಯನ್ನು ನಿರ್ಮೂಲ ಮಾಡುವದರಲ್ಲಿ ಪ್ರಯತ್ನ ಮಾಡಬೇಕೆಂದು ಭಾವ ॥೩॥

ಶ್ಲೋ॥ ಖಲಾಲಾಪಾಸ್ಸೋಢಾಃಕಥಮಪಿತದಾರಾಧನಪರೈರ್ನಿಗೃಹ್ಯಾಂತ
ರ್ಬಾಷ್ಪಂಹಸಿತಮಪಿಶೂನ್ಯೇನಮನಸಾ ॥ ಕೃತೋವಿತ್ತಸ್ತಂಭ
ಪ್ರತಿಹತಧಿಯಾಮಂಜಲಿರಪಿತ್ವಮಾಶೇಮೋಘಾಶೇಕಿಮಪರಮ
ತೋನರ್ತಯಸಿಮಾಂ ॥ .... ॥೪॥

ಟೀ॥ ಖಲ=ದುರ್ಜನರ, ಅಲಾಪಾಃ=ದುರ್ಭಾಷೆಗಳು, ತದಾರಾಧನ=ಅವರ ಸೇವೆಯಲ್ಲಿ, ಪರೈಃ=ಆಸಕ್ತರಾದ, ಅಸ್ಮಾಭಿಃ=ನಮ್ಮಗಳಿಂದ, ಕಥಮಪಿ=ಅತಿಕಷ್ಟದಿಂದ, ಸೋಢಾಃ=ಸಹಿಸಲ್ಪಟ್ಟವು, ಅಂತಃ=ಒಳಗೆ, ಬಾಷ್ಪಂ=ಕಣ್ಣೀರನ್ನು ನಿಗೃಹ್ಯ=ಅಡಗಿಸಿ, ಶೂನ್ಯೇನ=ಉತ್ಸಾಹರಹಿತವಾದ, ಮನಸಾ=ಮನಸ್ಸಿನಿಂದ, ಹಸಿತಂ=ನಗಲ್ಪಟ್ಟಿತು, ವಿತ್ತ=ದ್ರವ್ಯದಿಂದುಂಟಾದ, ಸ್ತಂಭ=ಜಡೀಭಾವದಿಂದ, ಪ್ರತಿಹತ=ವಿವೇಕಶೂನ್ಯವಾದ, ಧಿಯಾಂ=ಬುದ್ಧಿಯುಳ್ಳವರಿಗೆ, ಅಂಜಲಿರಪಿ=ಬೊಗಸೆಯೂ, ಕೃತಃ=ಮಾಡಲ್ಪಟ್ಟಿತು, ಮೋಘಾಶೇ=ವ್ಯರ್ಥವಾದ ಮನೋರಥವುಳ್ಳ, ಆಶೇ=ಎಲೈ ತೃಷ್ಣೆಯೆ, ತ್ವಂ=ನೀನು, ಮಾಂ=ನನ್ನನ್ನು ಅಪರಂ=ಮತ್ತು, ಕಿಂ=ಏತಕ್ಕಾಗಿ, ನರ್ತಯಸಿ=ಕುಣಿಸುತ್ತೀಯೆ, ಶಿಖರಿಣೀವೃತ್ತವು. ॥೪॥

ತಾ॥ ಧನದಿಂದ ಮದಾಂಧರಾದವರ ಚಿತ್ತ ಒಪ್ಪುವಂತೆ ಇರಬೇಕೆಂದು ನೀಚಜನರ ದುರ್ಭಾಷೆಗಳನ್ನೆಲ್ಲಾ ಸಹಿಸಿದೆನು. ಆ ದುರ್ಜನರ ಹೀನವಾದ ಮಾತುಗಳನ್ನು ಕೇಳುವದರಿಂದುಂಟಾದ ದುಃಖದಿಂದ ಕಣ್ಣೀರನ್ನು ಸುರಿಸದೆ ಒಳಗೆ ಅಡಗಿಸಿ ಉತ್ಸಾಹವಿಲ್ಲದಿದ್ದರೂ ನಕ್ಕದ್ದಾಯಿತು. ಮತ್ತು ಆ ಹೀನರಬಳಿಯಲ್ಲಿ ಕೈಯೊಡ್ಡಿ ಬೇಡಲೂ ಬೇಡಿದೆನು, ಆದರೂ ನಿರರ್ಥಕವಾದ ಆಶೆಯೇ ! ಇನ್ನೂ ಏನೇನು ಆಟವನ್ನು ಆಡಿಸಬೇಕೆಂಬ ಕುತೂಹಲದಿಂದ ನನ್ನನ್ನು ಕುಣಿಸುವಿಯೋ ನನಗೆ ತಿಳಿಯದು. .... .... .... ॥೪॥

ಶ್ಲೋ॥ ಅಮೀಷಾಂಪ್ರಾಣಾನಾಂತುಲಿತಬಿಸಿನೀಪತ್ರಪಯಸಾಂಕೃತೇಕಿಂ
ನಾಸ್ಮಾಭಿರ್ವಿಗಳಿತವಿವೇಕೈರ್ವ್ಯವಸಿತಂ ॥ ಯದಾಢ್ಯಾನಾಮ
ಗ್ರೇದ್ರವಿಣಮದನಿಸ್ಸಂಜ್ಞಮನಸಾಂಕೃತಂಮಾನವ್ರೀಡೈರ್ನಿಜ
ಗುಣಕಥಾಪಾತಕಮಪಿ ॥ .... .... ॥೫॥

ಟೀ॥ ಈ ದುರಾಶೆಯು ಕೆಟ್ಟ ಚೇಷ್ಟೆಯಿಂದಲೇ ಅತ್ಯಂತ ಅಯೋಗ್ಯವಾದ ಕೆಲಸವನ್ನು ಮಾಡಿವೆವೆಂದು ಸೂಚಿಸುತ್ತಾನೆ. ತುಲಿತ=ಸರಿಹೋಲಿಸಲ್ಪಟ್ಟ ಬಿಸಿನೀಪತ್ರ=ತಾವರೆಯ ಎಲೆಯಲ್ಲಿರುವ, ಪಯಸಾಂ=ಜಲವುಳ್ಳ, ಅಮೀಷಾಂ=ಈ, ಪ್ರಾಣಾನಾಂಕೃತೇ=ಈಪ್ರಾಣಗಳಿಗಾಗಿ, ವಿಗಳಿತ=ಭ್ರಷ್ಟವಾದ, ವಿವೇಕೈಃ=ಯುಕ್ತಾಯುಕ್ತವಿಚಾರವುಳ್ಳ, ಅಸ್ಮಾಭಿಃ=ನಮ್ಮಗಳಿಂದ, ಕಿಂ=ಯಾವಕಾರ್ಯವು, ನವ್ಯವಸಿತಂ=ಮಾಡಲ್ಪಡಲಿಲ್ಲವು, ಯತ್=ಯಾವಕಾರಣದ್ದೆಶೆಯಿಂದ, ದ್ರವಿಣ=ದ್ರವ್ಯದ ಮದ=ದರ್ಪದಿಂದ, ನಿಸ್ಸಂಜ್ಞ=ಎಚ್ಚರವಿಲ್ಲದ, ಮನಸಾಂ=ಮನಸ್ಸುಳ್ಳ, ಆಢ್ಯಾನಾಂ=ಐಶ್ವರ್ಯವಂತರ, ಅಗ್ರೇ=ಮುಂಭಾಗದಲ್ಲಿ, ಮಾನವ್ರೀಡೈಃ=ಲಜ್ಜಾಹೀನರಾದ ನಮ್ಮಿಂದ, ನಿಜ=ನಮ್ಮ, ಗುಣ=ಗುಣಗಳ, ಕಥಾ=ಹೇಳುವಿಕೆಯು, ಪಾತಕಮಪಿ=ಪಾಪವೂ, ಕೃತಂ=ಮಾಡಲ್ಪಟ್ಟಿತು. ... .... ॥೫॥

ತಾ॥ ತಾವರೆಯ ಎಲೆಯೊಳಗಿರುವ ನೀರಿನಂತೆ ಅತಿ ಚಂಚಲಗಳಾದ ಈ ಪ್ರಾಣಸಂರಕ್ಷಣೆಗಾಗಿ ದ್ರವ್ಯಮದದಿಂದ ಮತ್ತರಾಗಿರುವ ಧನಿಕರ ಬಳಿಯಲ್ಲಿ ಹೋಗಿ, ಅವರೇನೋ ನಮ್ಮಗಳನ್ನು ಉದ್ಧಾರ ಮಾಡುವರೆಂಬ ಭ್ರಾಂತಿಯಿಂದ ವಿವೇಕಭ್ರಷ್ಟರಾದ ನಾವು ನಾಚಿಕೆಯನ್ನೂ ಮಾನವನ್ನೂ ತೊರೆದು (ಆತ್ಮ ಪ್ರಶಂಸಾಂಪರಗರ್ಹಣಾಮಿವವರ್ಜಯೇತ್ ಎಂಬ ಆಪಸ್ತಂಬ ಸೂತ್ರವಿದ್ದರೂ) ಎಂದರೆ ಆತ್ಮಶ್ಲಾಘನೆಯು ನರಕಕ್ಕೆ ಹೇತುವಾದುದರಿಂದ ಪರನಿಂದೆಯಂತೆ ಆತ್ಮಪ್ರಶಂಸೆಯನ್ನೂ ಬಿಡಬೇಕೆಂಬ ಅರ್ಥವುಳ್ಳ ಆಪಸ್ತಂಬ ಮಹರ್ಷಿಯ ಸೂತ್ರವಿದ್ದರೂ, ಆ ಧನಿಕರಮುಂದೆ, ಇದ್ದ ಮತ್ತು ಇಲ್ಲದಿರುವ ನಮ್ಮಗುಣಗಳನ್ನೆಲ್ಲಾ ಮನಸ್ಸು ಬಂದಂತೆ ಹೇಳಿಕೊಂಡೆವಲ್ಲಾ, ಹೀಗೆಯೇ ಇನ್ನೂ ಯಾವ ಯಾವ ಪಾಪಗಳನ್ನು ಮಾಡಲಿಲ್ಲ ? ಎಲ್ಲವನ್ನೂ ಮಾಡಲೇ ಮಾಡಿರುವೆವು. .... ॥೫॥

ಶ್ಲೋ॥ ಕ್ಷಾಂತಂನಕ್ಷಮಯಾಗೃಹೋಚಿತಸುಖಂತ್ಯಕ್ತಂನಸಂತೋಷತ
ಸ್ಸೋಢಾದುಸ್ಸಹಶೀತವಾತತಪನಕ್ಲೇಶಾನತಪ್ತಂತಪಃ ॥ ಧ್ಯಾ
ತಂವಿತ್ತಮಹರ್ನಿಶಂನಿಯಮಿತಪ್ರಾಣೈರ್ನಶಂಭೋಃಪದಂ ತತ್ತ
ತ್ಕರ್ಮಕೃತಂಯದೇವಮುನಿಭಿಸ್ತೈಸ್ತೈಃಫಲೈರ್ವಂಚಿತಾಃ ॥೬॥

ಟೀ॥ ಪುರುಷನು ಅನೇಕ ಉಚಿತವಾದ ಕೆಲಸಗಳನ್ನು ಮಾಡಿರುವೆವು, ಆದರೂ ನ್ಯಾಯವಾಗಿ ಮಾಡಲಿಲ್ಲವಾಗಿ ಫಲವನ್ನು ಪಡೆಯಲಿಲ್ಲವೆಂದು ಸೂಚಿಸುತ್ತಾನೆ—ಕ್ಷಮಯಾ=ನಿಜವಾದ ತಾಳ್ಮೆಯಿಂದ, ನಕ್ಷಾಂತಂ=ಸಹಿಸಲ್ಪಡಲಿಲ್ಲವು, ಗೃಹ=ಮನೆಯಲ್ಲಿ, ಉಚಿತಂ=ಯೋಗ್ಯವಾದ, ಸುಖಂ=ಆನಂದವು, ಸಂತೋಷತಃ=ತೃಪ್ತಿಯ ದೆಸೆಯಿಂದ, ನತ್ಯಕ್ತಂ=ಬಿಡಲ್ಪಡಲಿಲ್ಲವು, ದುಸ್ಸಹ=ಸಹಿಸಲಶಕ್ಯವಾದ, ಶೀತ=ಛಳಿಯು, ವಾತ=ಘಾಳಿಯು, ತಪನ=ಉಷ್ಣವು, ಇವುಗಳಿಂದುಂಟಾದ, ಕ್ಲೇಶಾಃ=ವ್ಯಥೆಗಳು, ಸೋಢಾಃ=ಸಹಿಸಲ್ಪಟ್ಟವು, ತಪಃ=ಚಾಂದ್ರಾಯಣಾದಿ ತಪಸ್ಸು=ನತಪ್ತಂ=ಆಚರಿಸಲ್ಪಡಲಿಲ್ಲವು, ನಿಯಮಿತ=ನಿಯಮಿಸಲ್ಪಟ್ಟ,ಪ್ರಾಣೈಃ=ಪ್ರಾಣಗಳುಳ್ಳ, ಅಸ್ಮಾಭಿಃ=ನಮ್ಮಗಳಿಂದ ಅಹರ್ನಿಶಂ=ಅಹೋರಾತ್ರಿಯಲ್ಲಿಯೂ, ವಿತ್ತಂ=ದ್ರವ್ಯವು, ಧ್ಯಾತಂ=ಚಿಂತಿಸಲ್ಪಟ್ಟಿತು, ಶಂಭೋಃ=ಶಂಕರನ, ಪದಂ=ಪಾದವು, ನಧ್ಯಾತಂ=ಧ್ಯಾನ ಮಾಡಲ್ಪಡಲಿಲ್ಲವು, ತತ್=ಆದಕಾರಣದ್ದೆಸೆಯಿಂದ, ಮುನಿಭಿಃ=ಋಷಿಗಳಿಂದ, ಯದ್ಯತ್ಕರ್ಮ=ಯಾವಯಾವ ಕಾರ್ಯವು, ಕೃತಂ=ಮಾಡಲ್ಪಟ್ಟಿತೊ, ತತ್ತತ್ಕರ್ಮ=ಆಯಾಯ ಕಾರ್ಯವು, ಕೃತಂ=ಮಾಡಲ್ಪಟ್ಟಿತು, ಆದರೆ, ತೈಸ್ತೈಃ=ಆಯಾಯ, ಫಲೈಃ=ಫಲಗಳಿಂದ, ವಂಚಿತಾಃ=ವಂಚಿಸಲ್ಪಟ್ಟೆವು. ... ... ... ॥೬॥

ತಾ॥ ಪರರಿಂದುಂಟಾದ ಅವಮಾನಾದಿಗಳನ್ನ ಸ್ವಕಾರ್ಯ ಭಂಗವಾಗುವದೆಂಬ ಭೀತಿಯಿಂದಲೇ ತಾಳ್ಮೆಯನ್ನಳವಟ್ಟೆವು. ಮನೆಗಳಲ್ಲನುಭವಿಸಬೇಕಾದ ದಾರಾಪುತ್ರ ಭೋಜನಾದಿ ಸಂಬಂಧವಾದ ಸುಖಗಳನ್ನು ಲೌಕಿಕ ಕಾರ್ಯಾಸಕ್ತಚಿತ್ತರಾಗಿ ತ್ಯಜಿಸಿದೆವಲ್ಲದೆ ಸಹಜವಾದ ಬ್ರಹ್ಮಚರ್ಯದಿಂದ ಬಿಡಲಿಲ್ಲವು. ಮತ್ತು ಛಳಿಗಾಳಿ ಬಿಸಿಲು ಮೊದಲಾದವುಗಳಿಂದುಂಟಾದ ಕ್ಲೇಶಗಳನ್ನು ಯಾಚನಾರ್ಥವಾಗಿ ದೇಶಾಂತರ ಸಂಚಾರ ಮಾಡುವ ಸಮಯದಲ್ಲಿ ಗತ್ಯಂತರಾಭಾವದಿಂದಸಹಿಸಿದೆವಲ್ಲದೆ ಕೃಛ್ರಚಾಂದ್ರಾಯಣಾದಿ ತಪಶ್ಚರಣಾರ್ಥವಾಗಿ ಸಹಿಸಲಿಲ್ಲವು. ಮತ್ತು ಯಾವಾಗಲೂ ತದೇಕಾಯತ್ತಚಿತ್ತರಾಗಿ ಧನವನ್ನೇ ಧ್ಯಾನಿಸಿದೆವಲ್ಲದೆ ಪರಶಿವನ ಪಾದಾರವಿಂದವನ್ನು ಭಜಿಸಲಿಲ್ಲವು. ಆದುದರಿಂದಲೇ ಮಹರ್ಷಿಗಳು ಮಾಡತಕ್ಕ ಕ್ಷಮೆ, ಸುಖತ್ಯಾಗ, ಶೀತಾತಪಸಹನ, ಧ್ಯಾನ ಮೊದಲಾದವುಗಳನ್ನುಆಚರಿಸಿದಾಗ್ಯೂ ಕ್ರಮತಪ್ಪಿದುದರಿಂದಲೇ ಆಯಾಯ ಫಲಗಳಿಂದ ಭ್ರಷ್ಟರಾದೆವು. ಇವುಗಳಿಗೆಲ್ಲಾ ದುರಾಶೆಯೇ ಮುಖ್ಯಕಾರಣವಾದುದರಿಂದ ಅದನ್ನು ಮುಖ್ಯವಾಗಿ ತ್ಯಜಿಸುವದರಲ್ಲಿ ಪ್ರಯತ್ನಿಸಬೇಕು. .... ॥೬॥

ಶ್ಲೋ॥ ಭೋಗಾನಭುಕ್ತಾ ವಯಮೇವಭುಕ್ತಾಸ್ತಪೋನತಪ್ತಂವಯ

ಮೇವತಪ್ತಾಃ । ಕಾಲೋನಯಾತೋವಯಮೇವಯಾತಾ
ಸ್ತೃಷ್ಣಾನಜೀರ್ಣಾವಯಮೇವಜೀರ್ಣಾಃ ॥ .... ॥೭॥

ಟೀ॥ ಇನ್ನು ಮೂರು ಶ್ಲೋಕಗಳಿಂದ ಮುಪ್ಪನ್ನು ದೂಷಿಸುವದರ ಮೂಲಕ ಆಶೆಯನ್ನು ದೂಷಿಸುತ್ತಾನೆ....ಭೋಗಾಃ=ವಿಷಯಸುಖಗಳು, ನಭುಕ್ತಾಃ=ಅನುಭವಿಸಲ್ಪಡಲಿಲ್ಲವು, ವಯಮೇವ=ನಾವೇ, ಭುಕ್ತಾಃ=ಚಿಂತೆಯಿಂದ ಗ್ರಸ್ತರಾದೆವು, ತಪಃ=ತಪಸ್ಸು, ನತಪ್ತಂ=ಆಚರಿಸಲ್ಪಡಲಿಲ್ಲವು, ವಯಮೇವ=ನಾವೇ ತಪ್ತಾಃ=ತಪ್ತರಾದೆವು, ಕಾಲಃ=ಸಮಯವು, ನಯಾತಃ, ಹೋಗಲಿಲ್ಲವು ವಯಮೇವ= ನಾವೇ. ಯಾತಾಃ=ಹೋದೆವು, ತೃಷ್ಣಾ=ಆಶೆಯು, ನಜೀರ್ಣಾ=ತಗ್ಗಲಿಲ್ಲವು, ವಯಮೇವ=ನಾವೇ, ಜೀರ್ಣಾಃ=ಶಿಥಿಲರಾದೆವು. .... ॥೭॥

ತಾ॥ ಚಿಂತೆಯು ನಮ್ಮನ್ನು ಅನುಭವಿಸಿತಲ್ಲದೆ ನಾವುಗಳು ಹುವ್ವು ಗಂಧ ಮೊದಲಾದವುಗಳಿಂದುಂಟಾದ ವಿಷಯಸುಖಗಳನ್ನನುಭವಿಸಲಿಲ್ಲವು ತಾಪತ್ರಯದಿಂದುಂಟಾದ ಸಂತಾಪವು ನಮ್ಮನ್ನು ತಾಪಪಡಿಸಿತಲ್ಲದೆ ನಾವುಗಳು ತಪಸ್ಸನ್ನಾಚರಿಸಲಿಲ್ಲವು. ಮನೆಯು, ಹೆಂಡತಿಯು, ಮಕ್ಕಳು ಎಂಬಿವರ ಯೋಗಕ್ಷೇಮ ವಿಚಾರಲಂಪಟರಾಗಿ ಕಾಲವನ್ನತಿಕ್ರಮಿಸಿದೆವಲ್ಲದೆ, ಸದಾಚಾರಸಜ್ಜನಸಹವಾಸಾದಿಗಳಿಂದ ಕಾಲವನ್ನು ಕಳೆಯಲಿಲ್ಲವು ನಾವುಗಳು ಜೀರ್ಣರಾಗಿ ಮುದುಕರಾದೆವಲ್ಲದೆ ನಮಗುಂಟಾಗಿರುವ ಆಶೆಗೆ ಮುಪ್ಪುಂಟಾಗಲಿಲ್ಲವು. ಆದಕಾರಣ ಇನ್ನುಮೇಲಾದರೂ ಜಾಗ್ರತೆಯಾಗಿ ಆಶೆಯನ್ನು ನಾಶಮಾಡುವದರಲ್ಲಿ ಪ್ರಯತ್ನಿಸಬೇಕು. .... ॥೭॥

ಶ್ಲೋ॥ ವಳಿಭಿರ್ಮುಖಮಾಕ್ರಾಂತಂಪಲಿತೇನಾಂಕಿತಂಶಿರಃ । ಗಾತ್ರಾಣಿ
ಶಿಥಿಲಾಯಂತೆ ತೃಷ್ಣೈಕಾತರುಣಾಯತೆ .... ॥೮॥

ಟೀ॥ ಮುಖಂ=ಮುಖವು, ವಳಿಭಿಃ=ಚರ್ಮದ ತೆರಿಗಳಿಂದ, ಆಕ್ರಾಂತಂ= ಆಕ್ರಮಿಸಲ್ಪಟ್ಟಿತು, ಶಿರಃ=ತಲೆಯು, ಪಲಿತೇನ=ನರೆಯಿಂದ, ಅಂಕಿತಂ=ಕೂಡಿರುವದು ಗಾತ್ರಾಣಿ=ಅವಯವಗಳು, ಶಿಥಿಲಾಯಂತೇ=ಜೀರ್ಣವಾಗಿ ಹೋಗುತ್ತಿರುವವು, ಏಕಾ=ಒಂದಾದ, ತೃಷ್ಣಾ=ಆಶೆಯು, ತರುಣಾಯತೇ=ಪ್ರಾಯದಲ್ಲಿರುವದು॥೮॥

ತಾ॥ ಮುಖವೆಲ್ಲಾ ಚರ್ಮದ ತೆರಿಗಳಿಂದೊಡಗೂಡಿ ತಲೆಯು ಕೂದಲೆಲ್ಲಾ ನರೆತು ಅವಯವಗಳೆಲ್ಲಾ ಶಿಥಿಲಗಳಾಗಿ ಅಜ್ಜುಗುಜ್ಜು ಮುದುಕನಾದಾಗ್ಯೂ ಆಶೆಯುಮಾತ್ರ ಮುಪ್ಪಾಗದೆ ಯಾವಾಗಲೂ ಪ್ರಾಯದಲ್ಲಿಯೇ ಇರುವುದು. .... .... ॥೮॥

ಶ್ಲೋ॥ ನಿವೃತ್ತಾಭೋಗೇಚ್ಛಾಪುರುಷಬಹುಮಾನೋಪಿಗಳಿತಸ್ಸಮಾನಾ
ಸ್ಸ್ವರ್ಯಾತಾಸ್ಸಪದಿಸುಹೃದೋಜೀವಿತಸಮಾಃ॥ಶನೈರ್ಯಷ್ಟ್ಯು
ತ್ಥಾನಂಘನತಿಮಿರರುದ್ಧೇಚನಯನೇ ಅಹೋಮೂಢಃಕಾಯಸ್ತ
ದಪಿಮರಣಾಪಾಯಚಕಿತಃ .... ॥೯॥

ಟೀ॥ ಭೋಗ=ಸುಖಾನುಭವದಲ್ಲಿ, ಇಚ್ಛಾ=ಅಭಿಲಾಷೆಯು, ನಿವೃತ್ತಾ=ಹೋಯಿತು, ಪುರುಷ=ಮನುಷ್ಯನೆಂಬ, ಬಹುಮಾನೋಪಿ=ಸನ್ಮಾನವೂ, ಗಳಿತಃ=ಶಿಥಿಲವಾಯಿತು, ಜೀವಿತ=ಪ್ರಾಣಗಳೊಡನೆ, ಸಮಾಃ=ಸದೃಶರಾದ, ಸುಹೃದಃ=ಬಂಧುಗಳು, ಸಪದಿ=ಮುಂಚೆಯೇ, ಸ್ವಃ=ಸ್ವರ್ಗವನ್ನು ಕುರಿತು ಯಾತಾಃ=ಹೊರಟುಹೋದರು, ಶನೈಃ=ಮೆಲ್ಲಗೆ, ಯಷ್ಟಿ=ಕಟ್ಟಿಗೆಯಿಂದ, ಉತ್ಥಾನಂ=ಏಳುವಿಕೆಯು, ನಯನೇಚ=ಕಣ್ಣುಗಳೂ, ಘನ=ನಿಬಿಡವಾದ, ತಿಮಿರ=ಕತ್ತಲೆಯಿಂದ, ರುದ್ಧೇ=ತಡೆಯಲ್ಪಟ್ಟಿರುವವು, ತದಪಿ=ಹಾಗಾದರೂ, ಮೂಢಃ=ಜ್ಞಾನಶೂನ್ಯವಾದ, ಕಾಯಃ=ಶರೀರವು, ಮರಣ=ಸಾವಿನಿಂದುಂಟಾಗುವ, ಅಪಾಯ=ನಾಶದ ದೆಸೆಯಿಂದ, ಚಕಿತಃ=ಭಯಪಟ್ಟಿರುವದು, ಅಹೋ=ಆಶ್ಚರ್ಯವು. ॥೯॥

ತಾ॥ ಇಂದ್ರಿಯಪಟುತ್ವವು ಸುತರಾಂ ತಪ್ಪಿಹೋದುದರಿಂದ ಸುಖಪಡುವ ಅಭಿಲಾಷೆಯು ತಪ್ಪಿಹೋಯಿತು. ನಾನೂ ಒಬ್ಬ ಮನುಷ್ಯನೆಂಬ ಅಥವಾ ಪರಪುರುಷರಿಂದುಂಟಾಗುವ ಬಹುಮಾನವು ಶಿಥಿಲವಾಗಿ ಹೋಯಿತು. ಮತ್ತು ನಮಗೆ ಸಮಾನರಾಗಿ ಕೇವಲ ಮಿತ್ರರೂ ಆಗಿದ್ದವರೆಲ್ಲರೂ ಈ ಹಾಳು ಮುದಿಯವಸ್ಥೆ ಬರುವದಕ್ಕೆ ಮುಂಚೆಯೇ ಸ್ವರ್ಗಸ್ಥರಾದರು. ನಮಗಾದರೋ ಶಕ್ತಿಶೂನ್ಯವಾದ್ದರಿಂದ ಕಟ್ಟಿಗೆಯನ್ನೂರಿ ಮೆಲ್ಲಗೆ ಏಳಬೇಕಾದವಸ್ಥೆಯು ಪ್ರಾಪ್ತವಾಗಿರುವದು. ಕಣ್ಣುಗಳಾದರೋ ಚಾಲೇಶ್ವರದಿಂದ ಕಾಣಿಸುವದೇ ಇಲ್ಲವು. ಅಹಹ! ಹೀಗಾದಾಗ್ಯೂ ಈ ಜ್ಞಾನವಿಲ್ಲದ ದೇಹವು ಮರಣವು ಸಂಭವಿಸುವದಲ್ಲಾ ಎಂದು ಭಯಪಡುತ್ತಿರುವದಲ್ಲದೆ ಜ್ಞಾನೋದಯವಾಗುವದಿಲ್ಲವಲ್ಲಾ! ಇವೆಲ್ಲಾ ಆಶೆಯ ದುರ್ವ್ಯಾಪಾರವೇ ಆಗಿದೆ ಆದಕಾರಣ ಅದನ್ನು ಮುಖ್ಯವಾಗಿ ನಾಶಮಾಡಬೇಕೆಂದು ಭಾವವು. ॥೯॥

ಶ್ಲೋ॥ ಆಶಾನಾಮನದೀಮನೋರಥಜಲಾತೃಷ್ಣಾತರಂಗಾಕುಲಾರಾಗಗ್ರಾ
ಹವತೀವಿತರ್ಕವಿಹಗಾಧೈರ್ಯದ್ರುಮಧ್ವಂಸಿಸೀ ॥ ಮೋಹಾ
ವರ್ತಸುದುಸ್ತರಾತಿಗಹನಾಪ್ರೋತ್ತುಂಗಚಿಂತಾತಟೀತಸ್ಯಾಪಾರ
ಗತಾವಿಶುದ್ಧಮನಸೋನಂದಂತಿಯೋಗೀಶ್ವರಾಃ ॥೧೦॥

ಟೀ॥ ಇಂಥಾ ಆಶೆಯನ್ನು ಜಯಿಸಿದವರಿರುವರೇ? ಎಂದರೆ ಅದನ್ನು ನಿಗ್ರಹಿಸುವರೇ ದುರ್ಲಭರು ಆ ಆಶೆಯೆಂಬ ನದಿಯನ್ನು ದಾಟಿದವರು ಯೋಗಿಗಳೇ, ಅವರೇ ಆನಂದ ಪಡುವರೆಂದು ಸೂಚಿಸುತ್ತಾನೆ—ಮನೋರಥ=ಕೋರಿಕೆಗಳೆಂಬ ಜಲಾ—ನೀರುಳ್ಳ, ತೃಷ್ಣಾ=ಅಪ್ರಾಪ್ಯ ವಸ್ತುವಿನಲ್ಲಿ ಪ್ರಾಪ್ತ್ಯಭಿಲಾಷೆಯೆಂಬ, ತರಂಗ=ಅಲೆಗಳಿಂದ, ಆಕುಲಾ=ವ್ಯಾಕುಲವಾದ, ರಾಗ=ಇಷ್ಟವಸ್ತುವಿನಲ್ಲಿ ಸ್ನೇಹವೆಂಬ, ಗ್ರಾಹವತೀ=ಮೊಸಳೆಗಳುಳ್ಳ, ವಿತರ್ಕ=ಸಂಶಯಗಳೆಂಬ, ವಿಹಗಾ=ಪಕ್ಷಿಗಳುಳ್ಳ, ಧೈರ್ಯ=ಸ್ಥೈರ್ಯವೆಂಬ, ದ್ರುಮ=ಮರವನ್ನು, ಧ್ವಂಸಿನೀ=ಉನ್ಮೂಲನ ಮಾಡುವ, ಮೋಹ=ಭ್ರಾಂತಿಯೆಂಬ, ಆವರ್ತ=ಸುಳಿಗಳಿಂದ, ಸುದುಸ್ತರಾ=ದಾಟಲಶಕ್ಯವಾದ, ಅತಿಗಹನಾ=ದುರವಗಾಹವಾದ, ಪ್ರೋತ್ತುಂಗ, ಅಪಾರವಾದ, ಚಿಂತಾ=ಕೊರಗುಗಳೆಂಬ, ತಟೀ=ದಡಗಳುಳ್ಳ, ಆಶಾನಾಮ=ಆಶೆಯೆಂದು ಪ್ರಸಿದ್ಧವಾದ, ಯಾ=ಯಾವ, ನದೀ=ಹೊಳೆಯೋ, ತಸ್ಯಾಃ=ಆ ಆಶಾನದಿಯ, ಪಾರಗತಾಃ=ಪಾರಗಾಮಿಗಳಾದ, ವಿಶುದ್ಧಮನಸಃ=ನಿರ್ಮಲಾಂತಃಕರಣರಾದ, ಯೋಗೀಶ್ವರಾಃ=ಮಹಾಯೋಗಿಗಳು, ನಂದಂತಿ=ಆನಂದವನ್ನನುಭವಿಸುವರು, ಸಾವಯವ ರೂಪಕಾಲಂಕಾರವು. .... ... .... ॥೧೦॥

ತಾ॥ ನಾನಾವಿಧವಾದ ಕೋರಿಕೆಗಳೆಂಬ ನೀರುಳ್ಳದ್ದಾಗಿ ಅಲಭ್ಯವಸ್ತುಗಳಲ್ಲಿ ಲಾಭಾಭಿಲಾಷೆಯೆಂಬ ಅಲೆಗಳಿಂದೊಡಗೂಡಿ, ವಿಷಯಾಭಿಲಾಷೆಗಳೆಂಬ ದೊಡ್ಡ ಮೊಸಳೆಗಳುಂಟಾಗಿ, ಬಹುವಿಧವಾದ ಸಂಶಯಗಳೆಂಬ ಹಕ್ಕಿಗಳುಳ್ಳದ್ದಾಗಿ ಮತ್ತು ಧೈರ್ಯವೆಂಬ ಮರಗಳನ್ನು ಬೇರುಸಹಿತವಾಗಿ ಉರುಳಿಸತಕ್ಕದ್ದಾಗಿ, ಭ್ರಾಂತಿಯೆಂಬ ಸುಳಿಗಳುಳ್ಳದ್ದಾದ ಕಾರಣವೇ ದಾಟಲತ್ಯಂತಾಶಕ್ಯವಾಗಿ, ಚಿಂತೆಗಳೆಂಬ ದಡಗಳುಳ್ಳದ್ದಾಗಿಯೂ ಇರುವ ಆಶೆಯೆಂಬ ನದಿಯನ್ನು ಮಹಾನುಭಾವರಾದ ಯೋಗೀಶ್ವರರು ದಾಟಿರುವರಾದ ಕಾರಣವೇ ನಿತ್ಯವಾಗಿಯೂ ಅಪಾರವಾಗಿಯೂ ಇರುವ ಬ್ರಹ್ಮಾನಂದವನ್ನು ಅನುಭವಿಸುತ್ತಿರುವರು, ಆದುದರಿಂದಲೇ ನಾವುಗಳೂ ತಕ್ಕ ಪ್ರಯತ್ನದಿಂದ ಆ ಆಶೆಯೆಂಬ ಹೊಳೆಯನ್ನು ದಾಟಿ ಆ ಬ್ರಹ್ಮಾನಂದವನ್ನನುಭವಿಸಬೇಕೆಂದು ಭಾವವು. .... ॥೧೦॥

## ವಿಷಯಪರಿತ್ಯಾಗ ವಿಡಂಬನಾರಂಭವು.

ಶ್ಲೋ॥ ನಸಂಸಾರೋತ್ಪನ್ನಂಚರಿತಮನು ಪಶ್ಯಾಮಿಕುಶಲಂವಿಪಾಕಃಪುಣ್ಯಾನಾಂಜನಯತಿಭಯಂಮೇವಿಮೃಶತಃ ॥ ಮಹದ್ಭಿಃಪುಣ್ಯೌ

ಣ್ಯೈಶ್ಚಿರಪರಿಗೃಹೀತಾಶ್ಚ ವಿಷಯಾಮಹಾಂತೋಜಾಯಂತೆವ್ಯಸನ
ಮಿವದಾತುಂವಿಷಯಿಣಾಂ .... ॥೧೧॥

ಟೀ॥ ಹಿಂದೆ ಯೋಗಿಗಳು ಆಶಾನದಿಯನ್ನು ದಾಟಿ ಆನಂದಿಸುವರೆಂದು ಹೇಳಲ್ಪಟ್ಟಿತು. ಆ ಆನಂದವು ವಿಷಯಾಭಿಲಾಷೆಯನ್ನು ತ್ಯಜಿಸಿಯಲ್ಲದೆ ಲಭಿಸ ದಾದ ಕಾರಣ ವಿಷಯ ಪರಿತ್ಯಾಗ ವಿಡಂಬನೆಯನ್ನು ಹೇಳುತ್ತಾನೆ—ಸಂಸಾರ-ಸಂಸಾರದಲ್ಲಿ ಉತ್ಪನ್ನಂ=ಉಂಟಾದ, ಚರಿತಂ=ಚರಿತ್ರೆಯು, ಕುಶಲಂ=ಕ್ಷೇಮ ಕರವಾದದ್ದನ್ನಾಗಿ, ನಪಶ್ಯಾಮಿ=ಅರಿಯೆನು, ಪುಣ್ಯಾನಾಂ=ಪೂರ್ವಸುಕೃತಗಳ, ವಿಪಾಕಃ=ಪರಿಪಾಕವು, ವಿಮೃಶತಃ=ವಿಚಾರಿಸುವ, ಮೇ=ನನಗೆ, ಭಯಂ=ಅಂಜಿ ಕೆಯನ್ನು, ಜನಯತಿ=ಉಂಟುಮಾಡುವದು, ಮಹದ್ಭಿಃ=ಅತಿಶಯವಾದ, ಪುಣ್ಯ=ಸುಕೃತಗಳ, ಓಘೈಃ=ಸಮುದಾಯಗಳಿಂದ, ಚಿರ=ಬಹುಕಾಲದಿಂದ, ಪರಿಗೃಹೀತಾಃ=ಸಂಗ್ರಹಿಸಲ್ಪಟ್ಟ, ವಿಷಯಾಶ್ಚ=ಭೋಗಗಳು ಕೂಡ, ವಿಷಯಿಣಾಂ=ವಿಷಯಾಭಿಲಾಷೆಯುಳ್ಳವರಿಗೆ, ವ್ಯಸನಂ=ವಿಪತ್ತನ್ನು, ದಾತುಮಿವ ಕೊಡುವದಕ್ಕೆ, ಮಹಾಂತಃ=ವೃದ್ಧಿಹೊಂದುಸವುಗಳು, ಭವಂತಿ=ಆಗುವವು, ಶಿಖರಿಣೀವೃತ್ತವು. .... ... ... ॥೧೧॥

ತಾ॥ ಜನ್ಮಾಂತರದಲ್ಲಿ ಅಥವಾ ಈ ಜನ್ಮದಲ್ಲಿಯಾಗಲಿ, ಯಜ್ಞಾದಿ ಸತ್ಕರ್ಮಗಳನ್ನು ಮಾಡಿ ಅದರಿಂದುಂಟಾದ ಸುಕೃತ ಪರಿಪಾಕವನ್ನು ಅನರ್ಥಕರವಾದದ್ದನ್ನಾಗಿಯೇ ಭಾವಿಸುವೆನು, ಏಕೆಂದರೆ (ಕ್ಷೀಣೇಪುಣ್ಯೇಮರ್ತ್ಯಲೋಕಂವಿಶಂತಿ) ಎಂಬ ಸ್ಮೃತಿವಚನದಂತೆ ಪುಣ್ಯವುಗಿದೊಡನೆ ಸ್ವರ್ಗಸುಖವು ತಪ್ಪಿ ಪುನಃ ಕರ್ಮಾನುಸಾರವಾಗಿ ಜನ್ಮವೆತ್ತಿ ಸುಖ ದುಃಖಗಳನ್ನನುಭವಿಸಬೇಕಾಗಿರುವವು. ಆದ-ದರಿಂದಲೇ ಇದನ್ನುವಿಚಾರ ಮಾಡಿದರೆ ಭಯವುಂಟಾಗುವದು. ಮತ್ತು ಬಹುಕಾಲದಿಂದನುಭವಿಸಲ್ಪಡುತ್ತಿರುವ ವಿಷಯ ಸುಖಗಳು ಹೆಚ್ಚಿದಹಾಗೆಲ್ಲಾ ವಿಷಯಾಸಕ್ತರಿಗೆ ಅತಿಶಯವಾದ ವ್ಯಸನವನ್ನೇ ಉಂಟುಮಾಡುವವೆಂದು ನಂಬುವೆನು. ಆದಕಾರಣ ವಿಷಯಗಳಲ್ಲಾ ಸಕ್ತಿಯನ್ನು ತಪ್ಪಿಸಬೇಕೆಂದು ಭಾವವು. ॥೧೧॥

ಶ್ಲೋ॥ ಅವಶ್ಯಂಯಾತಾರಶ್ಚಿರತರಮುಷಿತ್ವಾಪಿವಿಷಯಾವಿಯೋಗೆ ಕೋ

ಭೇದಸ್ತ್ಯಜತಿನಜನೋಯತ್ಸ್ವಯಮಮೂ‌ನ್ ॥ವ್ರಜಂತಸ್ಸ್ವ
ತಂತ್ರ್ಯಾದತುಲಪರಿತಾಪಾಯಮನಸಸ್ಸ್ವಯಂತ್ಯಕ್ತಾಹ್ಯೇತೆಶ
ಮಸುಖಮನಂತಂವಿದಧತಿ॥ .... ॥೧೨॥

ಟೀ॥ ಸರ್ವಪ್ರಕಾರದಲ್ಲಿಯೂ ವಿಷಯಗಳು ಪರಿತ್ಯಾಜ್ಯಗಳೆಂಬದನ್ನು ಸೂಚಿಸಲು ಅವುಗಳ ಅವಸ್ಥೆಯನ್ನು ತಿಳಿಸುತ್ತಾನೆ—ವಿಷಯಾಃ=ಭೋಗಗಳು, ಚಿರತರಂ=ಬಹುಕಾಲದವರೆಗೂ, ಉಷಿತ್ವಾಪಿ=ಇದ್ದಾಗ್ಯೂ, ಅವಶ್ಯಂ=ಗೊತ್ತಾಗಿ, ಯಾತಾರಃ=ಹೋಗತಕ್ಕವುಗಳೇ, ವಿಯೋಗೇ=ವಿರಹದಲ್ಲಿ, ಕಃ=ಏನು, ಭೇದಃ=ವಿಶೇಷವು, ಯತ್=ಯಾವಕಾರಣದ ದೆಶೆಯಿಂದ, ಜನಃ=ಪುರುಷನು, ಅಮೂನ್=ಈ ವಿಷಯಗಳನ್ನು, ಸ್ವಯಂ=ತಾನೇ, ನವಿಸೃಜತಿ=ತ್ಯಜಿಸುವದಿಲ್ಲವೋ, ಸ್ವತಃ=ತಾವಾಗಿಯೇ ತ್ಯಜಂತಃ=ಬಿಡುವಂಥಾವುಗಳಾಗಿ, ಮನಸಃ=ಮನಸ್ಸಿಗೆ, ಅತುಲ=ಅಸಮಾನವಾದ, ಪರಿತಾಪಾಯ=ಸಂತಾಪಕ್ಕೋಸ್ಕರ, ಭವಂತಿ=ಆಗುವವು, ಸ್ವಯಂ=ತನ್ನಿಂದ, ತ್ಯಕ್ತಾಃ=ಬಿಡಲ್ಪಟ್ಟವುಗಳಾಗಿ, ಏತೇ=ಈ ವಿಷಯಗಳು, ಅನಂತಂ=ಅಪರಿಮಿತವಾದ, ಶಮಸುಖಂ=ಶಾಂತಿಸುಖವನ್ನು, ವಿದಧತಿಹಿ=ಉಂಟು ಮಾಡುವವು. .... .... .... ॥೧೨॥

ತಾ॥ ಲೌಕಿಕಭೋಗಗಳೆಲ್ಲವೂ ಎಷ್ಟುದಿವಸಗಳವರೆಗಿದ್ದರೂ ನಿಶ್ಚಯವಾಗಿ ನಾಶವಾಗತಕ್ಕವುಗಳೇ ಅಲ್ಲದೆ ಸ್ಥಿರವಾಗಿರುವವಲ್ಲ. ಆದರೂ ಈ ಭೋಗಗಳಲ್ಲಿ ನಮಗೆ ವಿರಕ್ತಿಯುಂಟಾಗದೆ ಅವುಗಳು ತೊಲಗಿಹೋದರೆ ಆಗ ಅವು ಮನಸ್ಸಿಗಪಾರವಾದ ಸಂತಾಪವನ್ನುಂಟುಮಾಡದಿರವು. ಹಾಗಿಲ್ಲದೆ ಪುರುಷನು ಆ ವಿಷಯಗಳಲ್ಲಿರುವ ದೋಷವನ್ನರಿತು ಇವು ಕೆಟ್ಟಗಳು ಎಂದು ತ್ಯಾಗಮಾಡಿದ್ದೇ ಆದರೆ ಆಗಲವು ಪರಮಾನಂದವನ್ನುಂಟುಮಾಡದೆ ಇರುವದಿಲ್ಲ. ಆದುದರಿಂದ ಸರ್ವಥಾ ವಿಷಯಸುಖಗಳಲ್ಲಿ ದೋಷಗಳನ್ನೆಣಿಸುತ್ತಾ ವಿರಕ್ತಿಯಂ ಪಡೆಯಲು ಪ್ರಯತ್ನಿಸಬೇಕೆಂದು ಭಾವವು ॥ .... .... ॥೧೨॥

ಶ್ಲೋ॥ ಬ್ರಹ್ಮಜ್ಞಾನವಿವೇಕನಿರ್ಮಲಧಿಯಃ ಕುರ್ವಂತ್ಯಹೋದುಷ್ಕರಂಯ
ನ್ಮುಂಚಂತ್ಯುಪಭೋಗಭಾಂಜ್ಯಪಿಧನಾನ್ಯೇಕಾಂತತೋನಿಸ್ಪೃಹಾಃ॥
ಸಂಪ್ರಾಪ್ತಾನ್ನಪುರಾನಸಂಪ್ರತಿ ನಚಪ್ರಾಪ್ತೌದೃಢಪ್ರತ್ಯಯಾನ್
ವಾಂಛಾಮಾತ್ರಪರಿಗ್ರಹಾನಪಿಪರಂತ್ಯಕ್ತುಂನಶಕ್ತಾವಯಂ॥೧೩॥

ಟೀ॥ ವಿಷಯಪರಿತ್ಯಾಗ ಸಮರ್ಥರು ಜ್ಞಾನಿಗಳಲ್ಲದೆ ನಮ್ಮಂಥವರಲ್ಲೆಂಬದನ್ನು ತಿಳಿಸುತ್ತಾನೆ—ಬ್ರಹ್ಮಜ್ಞಾನ=ಆತ್ಮಜ್ಞಾನದಿಂದುಂಟಾದ, ವಿವೇಕ=ತತ್ವವಿಚಾರದಿಂದ, ನಿರ್ಮಲ=ಸ್ವಚ್ಛವಾದ, ಧಿಯಃ=ಪ್ರಜ್ಞೆಯುಳ್ಳವರು, ದುಷ್ಕರಂ=ಅಸಾಧ್ಯವಾದ ಕರ್ಮವನ್ನು, ಕುರ್ವಂತಿ=ಮಾಡುತ್ತಾರೆ, ಅಹೋ=ಆಶ್ಚರ್ಯವು, ಯತ್=ಯಾವಕಾರಣದ್ದೆಶೆಯಿಂದ, ಉಪಭೋಗ=ಸುಖಾನುಭವನವನ್ನು

ಭಾಂಜ್ಯಪಿ=ಹೊಂದಿದವುಗಳಾದಾಗ್ಯೂ; ಧನಾನಿ=ದ್ರವ್ಯಗಳನ್ನು, ನಿಸ್ಪೃಹಾಃ=ಆಶಾಶೂನ್ಯರಾಗಿ, ಏಕಾಂತತಃ=ನಿಶ್ಶೇಷವಾಗಿ, ಮುಂಚಂತಿ=ಬಿಟ್ಟುಬಿಡುವರು, ವಯಂ=ನಾವುಗಳು, ಪುರಾ=ಪೂರ್ವದಲ್ಲಿ, ಸಂಪ್ರಾಪ್ತಾನ್=ಹೊಂದಲ್ಪಟ್ಟವುಗಳನ್ನು, ನ=ಅಲ್ಲವು, ಸಾಂಪ್ರತಿ=ಈಗ, ಪ್ರಾಪ್ತಾನ್=ಹೊಂದಿವುಗಳನ್ನು, ನ=ಅಲ್ಲವು, ಪ್ರಾಪ್ಯೇ=ಮುಂದೆ ಹೊಂದುವದರಲ್ಲಿಯೂ, ದೃಢ=ತಪ್ಪದ, ಪ್ರತ್ಯಯಾನ್=ನಂಬಿಕೆಯುಳ್ಳವುಗಳನ್ನೂ, ನಚ=ಅಲ್ಲವು, (ತು=ಮತ್ತೇನಂದರೆ) ವಾಂಛಾಮಾತ್ರ=ಕೋರಿಕೆಯುಮಾತ್ರದಿಂದ, ಪರಿಗ್ರಹಾನಪಿ=ಸ್ವೀಕಾರವುಳ್ಳವುಗಳನ್ನು ಕೂಡ, ವಿಷಯಾನ್=ಹೂವು ಗಂಧ ಮೊದಲಾದ ವಿಷಯಗಳನ್ನು. ತ್ಯಕ್ತುಂ=ಬಿಡುವುದಕ್ಕೆ, ಪರಂ=ಅತ್ಯಂತವಾಗಿ ನಶಕ್ತಾಃ=ಸಮರ್ಥರಲ್ಲವು. ... ॥೧೩॥

ತಾ॥ ಆತ್ಮಜ್ಞಾನವನ್ನು ಸಂಪಾದಿಸಿ ಅದರಿಂದುಂಟಾದ, ಇದು ಯುಕ್ತ ಇದು ಅಯುಕ್ತವೆಂಬ ವಿವೇಕದಿಂದ ನಿರ್ಮಲವಾದ ಮನಸ್ಸುಳ್ಳ ಯೋಗಿಗಳೇ ಹೂವು ಗಂಧ ಭೋಜನ ಧನ ಧಾನ್ಯ ಮೊದಲಾದ ನಾನಾ ಸುಖ ಸಾಧನೆಗಳು ಅಪ್ರಯತ್ನವಾಗಿ ಸಿದ್ಧವಾಗಿದ್ದರೂ ಮನಸ್ಸಿನಲ್ಲಿಯೇ ಸರ್ವಥಾ ಆಶಾಶೂನ್ಯರಾಗಿ ಸರ್ವ ವಿಷಯಗಳನ್ನು ತ್ಯಾಗಮಾಡುವರು. ಅಜ್ಞಾನಿಗಳಾದ ನಾವುಗಳಾದರೋ, ಹಿಂದೆ ಹೊಂದಿದವುಗಳನ್ನೂ ಅಲ್ಲ. ಮತ್ತು ಈಗ ಹೊಂದುತ್ತಿರುವವುಗಳನ್ನೂ ಅಲ್ಲ. ಮುಂದೆ ಹೊಂದತಕ್ಕವುಗಳನ್ನೂ ಅಲ್ಲ, ಇನ್ನೇನೆಂದರೆ ಎಂದಿಗೂ ಸರ್ವಥಾ ನಮಗೆ ದೊರಿಯುವದೇ ಇಲ್ಲವೆಂಬ ಪದಾರ್ಥಗಳ ಆಶೆಯನ್ನೇ ಬಿಡುವದಿಲ್ಲವು. ಹೇಗಂದರೆ— ಉದಾ॥ (ಚಾದ್ರನನ್ನು ಕೈಯಿಂದ ಹಿಡಿದುಕೊಳ್ಳುವದಕ್ಕೆಹೋದರೆ ಸಿಕ್ಕುವದಿಲ್ಲನೆಂದೂ ಹಾಸ್ಯಾಸ್ಪದವೆಂದೂ ತಿಳಿದಿದ್ದರೂ ಹಿಡಿಯಬೇಕೆಂಬ ಆಶೆಯು ಬಿಡುವದಿಲ್ಲವು.) ಆದುದರಿಂದ ಅವಶ್ಯಕವಾಗಿ ಆತ್ಮಜ್ಞಾನ ಸಂಪಾದನೆಯಲ್ಲಿ ಪ್ರಯತ್ನಮಾಡಬೇಕೆಂದು ಭಾವವು. .... ॥೧೩॥

ಶ್ಲೋ॥ ಧನ್ಯಾನಾಂ ಗಿರಿಕಂದರೇಷುವಸತಾಂ ಜ್ಯೋತಿಃಪರಂಧ್ಯಾಯತಾ
ಮಾನಂದಾಶ್ರುಜಲಂಪಿಬಂತಿಶಕುನಾನಿಶ್ಶಂಕಮಂಕೇಶಯಾಃ ।
ಅಸ್ಮಾಕಂತುಮನೋರಥೋಪರಚಿತಪ್ರಾಸಾದವಾಪೀತಟಕ್ರೀ
ಡಾಕಾನನಕೇಳಿಕೌತುಕಜುಷಾಮಾಯುಃಪರಕ್ಷೀಯತೇ ॥ ೧೪॥

ಟೀ॥ ಹೇಳಿದರ್ಥವನ್ನೇ ಬೇರೆ ರೀತಿಯಿಂದ ಹೇಳುತ್ತಾನೆ—ಗಿರಿಕಂದರೇಷು=ಪರ್ವತ ಗುಹೆಗಳೊಳಗೆ, ವಸತಾಂ=ವಾಸಮಾಡುವ, ಪರಂಜ್ಯೋತಿಃ=ಪರಬ್ರಹ್ಮನನ್ನು, ಧ್ಯಾಯತಾಂ=ಧ್ಯಾನಮಾಡುವ, ಧನ್ಯಾನಾಂ=ಪುಣ್ಯವಂತರ, ಆನಂ

ದ=ಪರಮಸಂತುಷ್ಟಿಯಿಂದುಂಟಾದ, ಅಶ್ರುಕಣಾನ್=ಬಾಷ್ಪಬಿಂದುಗಳನ್ನು ನಿಶ್ಶಂಕಂ=ನಿರ್ಭಯವಾಗಿ,ಅಂಕೇ=ತೊಡೆಯಲ್ಲಿ, ಶಯಾನಾಃ=ಇರುತ್ತಿರುವ,ಶಕುನಾಃ=ಪಕ್ಷಿಗಳು, ಪಿಬಂತಿ=ಪಾನವಮಾಡುವವು, ಮನೋರಥ=ಕೋರಿಕೆಗಳಿಂದ, ಉಪರಚಿತ=ನಿರ್ಮಿಸಲ್ಪಟ್ಟ, ಪ್ರಾಸಾದ,=ಉಪ್ಪರಿಗೆಗಳಲ್ಲಿರುವ, ವಾಪಿ=ಕೊಳಗಳ,ತಟ=ತೀರಗಳಲ್ಲಿ, ಕ್ರೀಡಾಕಾನನ=ಉದ್ಯಾನಗಳಲ್ಲಿಯೂ, ಕೇಳಿ=ವಿಹಾರಗಳೊಳಗೆ, ಕೌತುಕ=ಕುತೂಹಲವನ್ನು, ಜುಷಾಂ=ಹೊಂದಿರುವ, ಅಸ್ಮಾಕಂತು=ನಮ್ಮಗಳಿಗಾದರೋ, ಆಯುಃಪರಂ=ಆಯುಸ್ಸುಮಾತ್ರವೇ, ಕ್ಷೀಯತೇ=ನಾಶವಾಗುವುದು, ॥೧೪॥

ತಾ॥ ಗಿರಿಗುಹೆಗಳೊಳಗೆ ವಾಸವಮಾಡಿಕೊಂಡು ಪರಮಾತ್ಮನನ್ನು ಧ್ಯಾನಮಾಡುತ್ತಾ ಇರುವದರಿಂದಲೇ ಧನ್ಯರಾದ ಯೋಗಿಗಳಿಗೆ ಆತ್ಮಧ್ಯಾನ ಸುಖದಿಂದುಂಟಾದ ಆನಂದಬಾಷ್ಪಗಳನ್ನು, ನಿರ್ಭಯವಾಗಿ ಅವರ ತೊಡೆಗಳಲ್ಲಿ ವಾಸಮಾಡುತ್ತಿರುವ ಪಕ್ಷಿಗಳು ಸುಖವಾಗಿ ಪಾನಮಾಡಿಕೊಂಡಿರುವವು. ಈ ರೀತಿಯಾಗಿ ಅವರು ಮಹೋತ್ಸಾಹದಿಂ ಕಾಲವನ್ನು ಕಳೆಯುತ್ತಿರುವರು. ನಾವುಗಳಾದರೋ ನಿರರ್ಥಕಗಳಾದ ಕೋರಿಕೆಗಳಿಂದ ಕಲ್ಪಿತಗಳಾದ ಉಪ್ಪರಿಗೆಗಳು, ಕ್ರೀಡೋದ್ಯಾನಗಳು ಇವುಗಳೊಳಗೆ ಪಡತಕ್ಕಸುಖಭ್ರಾಂತಿಗಳಿಂದ ಚಿಂತಾತತ್ಪರರಾಗಿ ವೃಥಾ ಕಾಲವನ್ನು ಕಳೆಯುವೆವು. ಆದುದರಿಂದಲೆ ನಾವುಗಳು ನಿರ್ಭಾಗ್ಯರು ಇನ್ನಾದರೂ ಆ ಬ್ರಹ್ಮಜ್ಞಾನವನ್ನು ಸಂಪಾದಿಸಲುದ್ಯುಕ್ತರಾಗಬೇಕೆಂದುಭಾವವು.॥೧೪॥

ಶ್ಲೋ॥ ಭಿಕ್ಷಾಟನಂತದಪಿನೀರಸಮೇಕವಾರಂ ಶಯ್ಯಾಚಭೂಃಪರಿಜನೋ
ನಿಜದೇಹಮಾತ್ರಂ ॥ ವಸ್ತ್ರಂವಿಶೀರ್ಣಶತಖಂಡಮಯೀಚಕಂಥಾ
ಹಾಹಾತಥಾಪಿವಿಷಯಾನಪರಿತ್ಯಜಂತಿ .... ॥೧೫॥

ಟೀ॥ ತಿರಸ್ಕೃತವಿಷಯನಾದ ಒಬ್ಬನೊಬ್ಬ ಅನುಭವಸ್ಥನ ವೈರಾಗ್ಯವಚನವನ್ನು ವಿನಯಿಸಿ ತೋರಿಸುತ್ತಾನೆ—ಭಿಕ್ಷಾ=ತಿರಿಯುವದೇ, ಅಶನಂ=ಆಹಾರವು, ತದಪಿ=ಆ ಭಿಕ್ಷಾನ್ನಾಶನವೂ. ನೀರಸಂ=ಉಪ್ಪು ಹುಳಿ ಮುಂತಾದ ರಸಶೂನ್ಯವಾದದ್ದು, ಏಕವಾರಂ=ಒಂದೇ ಆವರ್ತಿಯು, ಶಯ್ಯಾಚ=ಹಾಸಿಗೆಯು, ಭೂಃ=ನೆಲವು, ಪರಿಜನಃ=ಸೇವಕ ಜನವಾದರೊ, ನಿಜದೇಹಮಾತ್ರಂ=ತನ್ನ ದೇಹಮಾತ್ರವೇ, ವಸ್ತ್ರಂ=ಬಟ್ಟೆಯಾದರೊ, ವಿಶೀರ್ಣ=ಜೀರ್ಣವಾದ, ಶತಖಂಡಮಯೀ=ನೂರುತುಂಡುಗಳ ವಿಕಾರವಾದ, ಕಂಥಾ=ಬೊಂತೆಯು, ತಥಾಪಿ=ಹಾಗಾದಾಗ್ಯೂ, ವಿಷಯಾಃ=ಭೋಗಾಭಿಲಾಷೆಗಳು, ನಪರಿತ್ಯಜಂತಿ=ಬಿಡುವುದಿಲ್ಲವು, ಹಾಹಾ=ಬಹುಕಷ್ಟವು, ವಿಶೇಷೋಕ್ತ್ಯಲಂಕಾರವು,ವಸಂತತಿಲಕಾವೃತ್ತವು. ... ॥೧೫॥

ತಾ॥ ಅನ್ನವೇ ಇಲ್ಲ, ಅಥವಾ ಬಾಧುವೇಳೆ ದೊರೆತರೂ ಭಿಕ್ಷಾನ್ನ, ಅದಕ್ಕೂ ಉಪ್ಪು ಹುಳಿ ಮೊದಲಾದ ಯಾವ ರಸವೂ ಇಲ್ಲವು. ಅದೂ ಒಂದು ಹೊತ್ತಲ್ಲದೆ ಎರಡು ವೇಳೆಯೂ ಇಲ್ಲವು. ಮಲಗುವದೋ ನೆಲದಮೇಲೆಯೋ. ಮತ್ತು ನನಗೆ ನಾನೇ ಸೇವಕನು. ಹೊದಿಯುವ ಬಟ್ಟೆಯೋ ನೂರಾರು ಚಿಂದಿಗಳ ತೇಪೆಗಳಿಂದ ಕೂಡಿದ ಹರಕು ಕಾಥೆಯು. ಇಷ್ಟು ದುರವಸ್ಥೆಯಿಂದಲಿದ್ದರೂ ಮಹಾ ಪಾಪಿಯಾದ ಭೋಗಾಭಿಲಾಷೆಯು ಬಿಡುವದಿಲ್ಲವಲ್ಲ. ಸತ್ತವನನ್ನೇ ಸಾಯುಬಡಿಯುವದು. ಹಾಹಾ! ವಿಷಯಗಳನ್ನಿಷ್ಟು ಪಾಪಿಗಳೆಂದೇ ಹೇಳಲಸಾಧ್ಯವಾಗಿರುವದು. ॥೧೫॥

ಶ್ಲೋ॥ ಸ್ತನೌಮಾಂಸಗ್ರಂಥೀಕನಕ ಕಲಶಾವಿತ್ಯುಪಮಿತೌಮುಖಂಶ್ಲೇ
ಷ್ಮಾಗಾರಂತದಪಿಚಶಶಾಂಕೇನತುಲಿತಂ ॥ ಸ್ರವನ್ಮೂತ್ರಕ್ಲಿನ್ನಂ
ಕರಿವರಶಿರಸ್ಪರ್ಧಿಜಘನಂಮುಹುರ್ನಿಂದ್ಯಂರೂಪಂ ಕವಿಜನವಿಶೇ
ಷೈರ್ಗುರುಕೃತಂ .... .... ॥೧೬॥

ಟೀ॥ ವಿಷಯಗಳೊಳಗೆ ಕಾಮಿನಿಯೇ ಪ್ರಧಾನವಾದುದರಿಂದ, ಆ ಕಾಮಿನಿಯು ದೂಷಣೆ ಇಲ್ಲದೊಡೆ, ವಿಷಯಪರಿತ್ಯಾಗವು ಅಸಾಧ್ಯವೆಂದು ಅವಳನ್ನು ದೂಷಿಸುತ್ತಾನೆ—ಸ್ತನೌ=ಕುಚಗಳು, ಮಾಂಸಗ್ರಂಥೀ=ಮಾಂಸದುಂಡೆಗಳು, ಕನಕ ಕಲಶೌ=ಭಂಗಾರದ ಕೊಡಗಳು, ಇತಿ=ಹೀಗೆಂದು, ಉಪಮಿತೌ=ಹೋಲಿಸಲ್ಪಟ್ಟಿರುವವು. ಮುಖಂ=ವದನವು, ಶ್ಲೇಷ್ಮಾಗಾರಂ—ಶ್ಲೇಷ್ಮ=ಶ್ಲೇಷ್ಮಕ್ಕೆ, (ಕೇಕರಿಕೆಗೆ) ಅಗಾರಂ=ಮನೆಯು, ತದಪಿ=ಅದೂ, ಶಶಾಂಕೇನ=ಚಂದ್ರನೊಡನೆ, ತುಲಿತಂ=ಹೋಲಿಸಲ್ಪಟ್ಟಿರುವದು, ಜಘನಂ=ಕಟಿಪುರೋಭಾಗವು, (ಕಿಬ್ಬುಹೊಟ್ಟೆಯ ಭಾಗವು) ಸ್ರವತ್=ಸುರಿಯುತ್ತಿರುವ, ಮೂತ್ರ=ಮೂತ್ರದಿಂದ, ಕ್ಲಿನ್ನಂ=ನೆನೆದಿರುವದು; ತತ್=ಅದು, ಕರಿವರ=ಗಜರಾಜನ, ಶಿರಃ=ತಲೆಯೊಡನೆ, ಸ್ಪರ್ಧಿ=ಸಮವಾದದ್ದು, ಇತಿ=ಹೀಗೆಂದು, ವರ್ಣಿತಂ=ವರ್ಣಿಸಲ್ಪಟ್ಟಿರುವದು, ಮುಹುಃ=ಪದೇಪದೆ, ನಿಂದ್ಯಂ=ನಿಂದಾರ್ಹವಾದ, ರೂಪಂ=ಸ್ವರೂಪವು, ಕವಿಜನವಿಶೇಷೈಃ=ವಿಶೇಷ ಕವಿಗಳಿಂದ, ಗುರು=ಶ್ರೇಷ್ಠವಾಗಿ, ಕೃತಂ=ಮಾಡಲ್ಪಟ್ಟಿತು. ॥೧೬॥

ತಾ॥ ಕಾಮಿನಿಯರ ಕುಚಗಳು (ವಿವೇಕಿಯಾದವನು ಆಲೋಚಿಸಿದರೆ) ರಕ್ತಮಾಂಸಗಳಿಂದ ಕೂಡಿದ ಗಂಟುಗಳಲ್ಲದೆ ಬೇರಿಲ್ಲವು. ಆದರೂ ಕವಿಗಳು ಅವುಗಳನ್ನು ಸುವರ್ಣದ ಕಲಶಗಳೆಂದು ವರ್ಣಿಸಿರುವರು. ಮತ್ತು ಮುಖವಾದರೂ ಶ್ಲೇಷ್ಮ, ಜೊಲ್ಲು ಸಿಂಬಳ, ಗೀಜುವೊ

ದಲಾದ ಅಸಹ್ಯ ಪದಾರ್ಥಗಳಿಗೆ ಮುಖ್ಯಾಲಯುವಾಗಿರುವದು. ಹೀಗೆ ಅತಿ ಜುಗುಪ್ಸೆಗಾಕರವಾದದ್ದನ್ನು ಚಂದ್ರನಿಗೆ ಸಮವಾಗಿರುವದೆಂದು ಹೇಳುತ್ತಿರುವರು. ಇವಲ್ಲದೆ ಸುರಿಯುವ ಮೂತ್ರದಿಂದ ನೆನೆದು ಅಸಹ್ಯವಾದ ಜಘನವನ್ನು ಮದ್ದಾನೆಯ ಕುಂಭಸ್ಥಲದಂತಿರುವದೆಂದು ಸ್ತುತಿಸುವರು. ಬಹು ದೋಷಾಕರವಾದ ಅವಯವಗಳಿಂದ ಕೂಡಿರುವದರಿಂದಲೇ ನಿಂದಾರ್ಹವಾದ ರೂಪವನ್ನೂ ಕವಿಗಳು ತಮ್ಮ ವಾಕ್ಚಾತುರ್ಯಗಳಿಂದ ಮಹತ್ತರವಾಗಿ ಮಾಡಿಟ್ಟಿರುವರು. ವಿಚಾರಮಾಡಿದರೆ ಸ್ವಲ್ಪವೂ ಸಾರವಿಲ್ಲವು.

ಶ್ಲೋ॥ ಏಕೋರಾಗಿಷುರಾಜತೇಪ್ರಿಯತಮಾದೇಹಾರ್ಧ ಹಾರೀಹರೋನೀ
ರಾಗೇಷುಜನೋವಿಮುಕ್ತಲಲನಾಸಂಗೋನಯಸ್ಮಾತ್ಪರಃ ॥ ದು
ರ್ವಾರಸ್ಮರಬಾಣಪನ್ನಗವಿಷವ್ಯಾ ವಿದ್ಧಮುಗ್ಧೋಜನಶ್ಶೇಷಃಕಾ
ಮವಿಡಂಬಿತಾನ್ನವಿಷಯಾನ್ಭೋಕ್ತುಂನಮೋಕ್ತುಂಕ್ಷಮಃ॥

ಟೀ॥ ಅನುರಾಗವುಳ್ಳವನೂ ಮತ್ತು ವಿರಾಗವುಳ್ಳವನೂ ಈಶ್ವರನೊಬ್ಬನೇ ಅಲ್ಲದೆ ಇತರರೆಲ್ಲರೂ ಕ್ಲೇಶಪಡತಕ್ಕವರೇ ಎಂದು ಪೇಳುತ್ತಾನೆ—ಪ್ರಿಯತಮಾ—ಪಾರ್ವತಿಯು, ದೇಹ—ಶರೀರದ, ಅರ್ಧ—ಅರ್ಧಭಾಗವನ್ನು, ಹಾರೀ—ಅಪಹರಿಸಿರುವ, ಪಾ—(ಧಾರೀ—ಧರಿಸಿರುವ) ಹರಃ—ಈಶ್ವರನು, ಏಕಏವ—ಒಬ್ಬನೇ, ರಾಗಿಷು—ವಿಷಯಾಭಿಲಾಷೆಯುಳ್ಳವರೊಳಗೆ, ರಾಜತೆ—ಹೊಳೆಯುತ್ತಿರುವನು, ನಿರಾಗೇಷು—ವಿರಕ್ತರಾದವರಲ್ಲಿ, ವಿಮುಕ್ತ—ಬಿಡಲ್ಪಟ್ಟ, ಲಲನಾ—ಸುಂದರಿಯರ, ಸಂಗಃ—ಸಂಬಂಧವುಳ್ಳ, ಜನಃ—ಪುರುಷನು, ಯಸ್ಮಾತ್—ಯಾವ ಈಶ್ವರನಿಗಿಂತಲೂ, ಪರಃ—ಮತ್ತೊಬ್ಬನು, ನಾಸ್ತಿ—ಇಲ್ಲವು, ದುರ್ವಾರ—ಅನಿವಾರ್ಯವಾದ, ಸ್ಮರ—ಮನ್ಮಥನ, ಬಾಣ—ಅಂಬುಗಳೆಂಬ, ಪನ್ನಗ—ಹಾವುಗಳ, ವಿಷ—ಗರಳದಿಂದ, ವ್ಯಾವಿದ್ಧ—ಪೆಟ್ಟುಬಿದ್ದ, ಮುಗ್ಧಃ—ಮೂಢವಾಗಿರುವ, ಶೇಷಃ—ಉಳಿದ, ಜನಃ—ಜನವು, ಕಾಮ—ಮನ್ಮಥನಿಂದ, ವಿಡಂಬಿತಾನ್—ಅಣಕಿಸಲ್ಪಟ್ಟ, ವಿಷಯಾನ್—ಭೋಗಾದಿಗಳನ್ನು, ಭೋಕ್ತುಂ—ಅನುಭವಿಸುವುದಕ್ಕೂ, ನಕ್ಷಮಃ—ಶಕ್ತವಲ್ಲವು, ಮೋಕ್ತುಂ—ಬಿಡುವದಕ್ಕೂ, ನಕ್ಷಮಃ—ಶಕ್ತವಲ್ಲವು. ... ... ॥೧೨॥

ತಾ॥ ಕಾಮುಕರೊಳಗೆ ಅಗ್ರಗಣ್ಯನಾದವನು ಈಶ್ವರನೊಬ್ಬನೇ. ಹೇಗೆಂದರೆ- ಕಾಮವನ್ನು ಸಹಿಸಲಾರದೆ ಯಾವಾಗಲೂ ಅರ್ಧಶರೀರವನ್ನೇ ಸ್ತ್ರೀರೂಪವಾಗಿ ಮಾಡಿಕೊಂಡಿರುವನು. ಮತ್ತು ವಿರಾಗಿಗಳೊಳಗೂ ಈತನೇ ಮೊದಲನೇಯವನಾಗಿರುವನು. ಅದಂತೆಂದರೆ, ಸರ್ವದಾ ಸ್ತ್ರೀಸಂಬಂಧವನ್ನು ಬಿಟ್ಟ ಈತನನ್ನು ತನ್ನ ಬಾಣಗಳಿಂದ ಹೊಡೆದು

ಕಾಮುಕನನ್ನಾಗಿ ಮಾಡಬೇಕೆಂದು ಬಂದ ಮನ್ಮಥನನ್ನು ನೇತ್ರಾಗ್ನಿಯಿಂದ ದಹಿಸಿಬಿಟ್ಟನು. ಅಸಾಧ್ಯವಾದ ಮನ್ಮಥಬಾಣಗಳೆಂಬ ಸರ್ಪಗಳಿಂದ ಕಚ್ಚಲ್ಪಟ್ಟು ವಿಷವೇರಿ ಎಚ್ಚರವಿಲ್ಲದೆ ಮೂಢರಾಗಿರುವ ನಾವುಗಳೋ ಹೂವು, ಗಂಧ, ಹೆಣ್ಣು ಮೊದಲಾದ ವಿಷಯುಗಳನ್ನು ಸಂಪೂರ್ಣವಾಗಿ ಅನುಭವಿಸಲೂ ಶಕ್ತರಲ್ಲವು, ಅಥವಾ ನಿಶ್ಶೇಷವಾಗಿ ತ್ಯಾಗಮಾಡುವದಕ್ಕೂ ಸಮರ್ಥರಲ್ಲವು. ಈ ಮೇರಿಗೆ ಭ್ರಷ್ಟರಾಗಿರುವೆವು. ॥೧೭॥

ಶ್ಲೋ॥ ಅಜಾನನ್ದಾಹಾತ್ಮ್ಯಂಪತತುಶಲಭಸ್ತೀವ್ರದಹನೇಸಮೀನೋಽಪ್ಯಜ್ಞಾನಾದ್ಬಡಿಶಯುತಮಶ್ನಾತುಪಿಶಿತಂ ॥ ವಿಜಾನಂತೋಽಪ್ಯೇತಮ ಯಮಿಹವಿಪಜ್ಜಾಲಜಟಿಲಾನ್ನಮುಂಚಾಮಃ ಕಾಮಾನಹಹಗಹನೋಮೋಹಮಹಿಮಾ .... ॥೧೮॥

ಟೀ॥ ವಿಷಯುಗಳಲ್ಲಿ ದೋಷವಿರುವದೆಂದು ತಿಳಿದರೂ ತ್ಯಾಗಮಾಡದಿರುವದಕ್ಕೆ ಕಾರಣವನ್ನು ತಿಳಿಸುತ್ತಾನೆ—ಶಲಭಃ—ಪತಂಗವು, (ಮಿಡತೆಯು) ದಾಹಾತ್ಮ್ಯಂ—ಸುಡುವ ಸ್ವಭಾವವನ್ನು, ಅಜಾನನ್—ತಿಳಿಯದಿರುವದಾಗಿ, ತೀವ್ರ—ಕ್ರೂರವಾದ, ದಹನೇ—ಬೆಂಕಿಯಲ್ಲಿ, ಪತತು—ಬೀಳಲಿ, ಸಃ—ಪ್ರಸಿದ್ಧವಾದ, ಮೀನೋಽಪಿ—ಮೀನುಕೂಡ, ಅಜ್ಞಾನಾತ್—ಅವಿವೇಕದ ದೆಸೆಯಿಂದ, ಬಡಿಶ—ಮತ್ಸ್ಯಬಂಧನದೊಡನೆ, ಯುತಂ—ಕೂಡಿರುವ, ಪಿಶಿತಂ—ಮಾಂಸವನ್ನು, ಅಶ್ನಾತು—ತಿನ್ನಲಿ ಇಹ—ಈಲೋಕದಲ್ಲಿ, ವಿಜಾನಂತೋಽಪಿ—ವಿವೇಕಿಗಳಾದಾಗ್ಯೂ, ವಿಪತ್—ಆಪತ್ತುಗಳ, ಜಾಲ—ಪರಂಪರೆಗಳಿಂದ, ಜಟಿಲಾನ್—ಕೂಡಿರುವ, ಕಾಮಾನ್—ವಿಷಯುಗಳನ್ನು, ನಮುಂಚಾಮಃ—ಬಿಡಲಾರೆವು, ಮೋಹ—ಅಜ್ಞಾನದ, ಮಹಿಮಾ—ಮಾಹಾತ್ಮ್ಯಯು, ಗಹನಃ—ತಿಳಿಯಲಸಾಧ್ಯವು, ಅಹಹ—ಕಷ್ಟವು. ... ॥೧೮॥

ತಾ॥ ಪತಂಗವು ದೀಪವನ್ನು ನೋಡಿ ಇದು ಸುಡುವದೆಂಬ ಭಾವವನ್ನರಿಯದೆ ಮಾಂಸವೆಂಬ ಭ್ರಾಂತಿಯಿಂದ ಉರಿಯಲ್ಲಿ ಬೀಳಬಹುದು. ಮತ್ತು ಮೀನು ತನ್ನ ಪ್ರಾಣಗಳು ಹೋಗುವದಕ್ಕೆ ಇದು ಮೃತ್ಯುವೆಂಬವನ್ನರಿಯದೆ ಗಾಳದ ಕೊನೆಗೆ ತಗಲಿಸಿರುವ ಮಾಂಸವನ್ನು ತಿನ್ನಲಿಕ್ಕೆ ಬಂದು ಮೇಳೆ ಹೋದರೂ ಹೋಗಬಹುದು. ಸ್ತ್ರೀ ಚಂದನವನಿತಾದಿ ಸಂಬಂಧವಾದ ವಿಷಯ ಸುಖಗಳು ಅಸ್ಥಿರಗಳು. ನಾನಾವಿಧವಾದ ಅನರ್ಥಗಳಿಂದ ಕೂಡಿರುವವು, ಸತ್ಯವು, ಎಂದಾಗಿ ದೃಢವಾಗಿ ತಿಳಿದಿದ್ದರೂ ನಾವುಗಳು ಈ ವಿಷಯ ಸುಖಗಳಲ್ಲಿ ಆಶೆಯನ್ನು ಬಿಡುವದಿಲ್ಲವಲ್ಲಾ ಅಹಹ ! ಅಜ್ಞಾನದ ಮಹಿಮೆಯು ಆಶ್ಚರ್ಯಕರವಾಗಿರುವದು. ॥೧೮॥

ಶ್ಲೋ॥ ತೃಷಾಶುಷ್ಯತ್ಯಾಸ್ಯೇಪಿಬತಿಸಲಿಲಂಶೀತಮಧುರಂಕ್ಷುಧಾರ್ತಶ್ಶಾ
ಲ್ಯನ್ನಂಕಬಳಯತಿಮಾಂಸಾದಿಕಲಿತಂ॥ ಪ್ರದೀಪ್ತೇಕಾಮಾಗ್ನೌ
ಸುದೃಢತರಮಾಲಿಂಗತಿವಧೂಂ ಪ್ರತೀಕಾರಂವ್ಯಾಧೇಸ್ಸುಖಮಿತಿ
ವಿಪರ್ಯಸ್ಯತಿಜನಃ .... .... ॥೧೯॥

ಟೀ॥ ಸುಖಸಾಧನವಲ್ಲದಿದ್ದರೂ ಸುಖದಂತೆ ತೋರುವ ಅನ್ನಪಾನಾದಿಗಳಲ್ಲಿ ಅಜ್ಞಾನದ ಮಹಿಮೆಯಿಂದ ಸುಖಬುದ್ಧಿಯನ್ನು ಮಾಡುವನೆಂದು ಹೇಳುವನು. ತೃಷ್ಣಾ=ಬಾಯಾರಿಕೆಯಿಂದ, ಆಸ್ಯೇ=ಬಾಯಿಯು, ಶುಷ್ಯತಿ=ಒಣಗುತ್ತಿರಲು, ಶೀತ=ತಣ್ಣಗೂ, ಮಧುರಂ=ರುಚಿಯಾಗಿಯೂ ಇರುವ, ಸಲಿಲಂ=ಜಲವನ್ನು ಪಿಬತಿ=ಪಾನಮಾಡುತ್ತಾನೆ, ಕ್ಷುಧಾರ್ತಃ=ಹಸಿವಿನಿಂದ ಪೀಡಿತನಾಗಿ, ಮಾಂಸ=ಮಾಂಸವೇ, ಆದಿ=ಮೊದಲಾದವುಗಳಿಂದ, ಕಲಿತಂ=ಕೂಡಿರುವ (ಅಥವಾ ರುಚಿಯಾದ) ಶಾಲ್ಯನ್ನಂ=ಶ್ರೇಷ್ಠವಾದ ಅನ್ನವನ್ನು, ಕಬಳಯತಿ=ಭೋಜನಮಾಡುವನು, ಕಾಮಾಗ್ನೌ=ಮದನಜ್ವಾಲೆಯು, ಪ್ರದೀಪ್ತೇ=ಉರಿಯುತ್ತಿರಲಾಗಿ, ಸುದೃಢತರಂ=ಬಹುಗಟ್ಟಿಯಾಗಿ, ವಧೂಂ=ಅಂಗನೆಯನ್ನು, ಆಲಿಂಗತಿ=ಆಲಿಂಗಿಸಿಕೊಳ್ಳುವನು, ವ್ಯಾಧೇಃ=ಹಸಿವು ಮೊದಲಾದ ರೋಗಕ್ಕೆ, ಪ್ರತೀಕಾರಂ=ಉಪಶಾಂತಿಕರವಾದ ಅನ್ನಪಾನಾದಿ ಚಿಕಿತ್ಸೆಯನ್ನು, ಸುಖಮಿತಿ=ಭೋಗವೆಂದು, ಜನಃ=ಜನವು, ವಿಪರ್ಯಸ್ಯತಿ=ವ್ಯತ್ಯಾಸವಾಗಿ ತಿಳಿಯುವರು. ... ॥೧೯॥

ತಾ॥ ಲೋಕದಲ್ಲಿ ಜನರು ದಾಹವಾದರೆ ಜಲಪಾನವನ್ನು ಮಾಡುವರು. ಹಸಿವೆಯಾದರೆ ಭೋಜನವನ್ನು ಮಾಡುವರು. ಕಾಮೋದ್ರೇಕವಾದರೆ ಅಂಗನಾಲಿಂಗನವನ್ನು ಮಾಡಿಕೊಳ್ಳುವರು. ಆದರೆ ಈ ಹಸಿವು, ದಾಹ, ಕಾಮಗಳೆಂಬುವುಗಳು ರೋಗಗಳೆಂತಲೂ, ನಾವು ಮಾಡುವ ಅನ್ನಪಾನಾದಿಗಳು ಇವುಗಳ ಚಿಕಿತ್ಸೆಗಳೆಂತಲೂ ತಿಳಿಯದೆ ಇವುಗಳೇ ಶಾಶ್ವತವಾದ ಸುಖಗಳೆಂದು ಭಾವಿಸುವರು, ಸುಖವಲ್ಲದ್ದನ್ನು ಸುಖವೆಂದು ಭಾವಿಸುವರಾದಕಾರಣವೇ ಇವೆಲ್ಲಾ ಅಜ್ಞಾನದ ಚೇಷ್ಟೆಯೆಂದುಭಾವವು.

ಶ್ಲೋ॥ ತುಂಗಂವೇಶ್ಮಸುತಾಸ್ಸತಾಮಭಿಮತಾಸ್ಸಂಖ್ಯಾತಿಗಾಸ್ಸಂಪದಃ
ಕಲ್ಯಾಣೀದಯಿತಾವಯಶ್ಚನವಮಿತ್ಯಜ್ಞಾನಮೂಢೋಜನಃ॥ ಮ
ತ್ವಾವಿಶ್ವಮನಶ್ವರಂನಿವಿಶತೇಸಂಸಾರಕಾರಾಗೃಹೇಸಂದೃಶ್ಯ ಕ್ಷಣ
ಭಂಗುರಂತದಖಿಲಂಧನ್ಯಸ್ತುಸನ್ನ್ಯಸ್ಯತಿ .... ॥೨೦॥

ಟೀ॥ ಈ ಮೇರೆಗೆ ಅಜ್ಞಾನಿಯಾದವನು ಸಂಸಾರ ಸುಖದಲ್ಲಿ ಆಸಕ್ತನಾಗಿ ಬದ್ಧನಾಗುವನು, ವಿವೇಕಿಯಾದರೋ ಸರ್ವಸಂಗಪರಿತ್ಯಾಗವನ್ನು ಮಾಡಿ ಧನ್ಯ

ನಾಗುವನೆಂದು ಹೇಳುತ್ತಾನೆ--ವೇಶ್ಮ=ಮನೆಯೂ, ತುಂಗಂ=ಉನ್ನತವಾಗಿರುವದು, ಸುತಾಃ=ಮಕ್ಕಳು, ವಿದುಷಾಂ=ವಿದ್ವಜ್ಜನರಿಗೆ, ಸಂಮತಾಃ=ಶಿಷ್ಯರಾಗಿರುವರು, ಸಂಪದಃ=ಸಂಪತ್ತುಗಳು, ಸಂಖ್ಯಾತಿಗಾಃ=ಅಸಂಖ್ಯೇಯಗಳು (ಅಂದರೆ ಲೆಕ್ಕವಿಲ್ಲದವುಗಳು.) ದಯಿತಾ=ವಲ್ಲಭೆಯೂ, ಕಲ್ಯಾಣೀ=ಶುಭಕರಳು, ವಯಶ್ಚ=ಪ್ರಾಯವು, ನವಂ=ಹೊಸದಾಗಿರುವದು, ಇತಿ ಈ ಪ್ರಕಾರವಾಗಿ, ಅಜ್ಞಾನ=ಮೋಹದಿಂದ, ಮೂಢಃ=ಅವಿವೇಕಿಯಾದ, ಜನಃ=ಜನವು, ವಿಶ್ವಂ=ಪ್ರಪಂಚವನ್ನು ಅನಶ್ವರಂ=ಶಾಶ್ವತವಾದದ್ದನ್ನಾಗಿ, ಮತ್ವಾ=ತಿಳಿದು, ಸಂಸಾರ=ಸಂಸಾರವೆಂಬ, ಕಾರಾಗೃಹೆ=ಸೆರೆಮನೆಯಲ್ಲಿ, ಪ್ರವಿಶತಿ=ಪ್ರವೇಶಮಾಡುವರು, ಧನ್ಯಸ್ತು=ಸುಕೃತಿಯಾದರೋ, ತದಖಿಲಂ=ಮನೆ ಮೊದಲಾದ ಸಮಸ್ತವನ್ನು, ಕ್ಷಣಭಂಗುರಂ=ಅಲ್ಪಕಾಲದಲ್ಲಿ ನಾಶವಾಗುವುದನ್ನಾಗಿ, ಸಂದೃಶ್ಯ=ಚನ್ನಾಗಿಯೋಚಿಸಿ, ಸನ್ನ್ಯಸ್ಯತಿ=ತ್ಯಾಗಮಾಡುವನು, ಶಾರ್ದೂಲವಿಕ್ರೀಡಿತವೃತ್ತವು. .... ||೨೦||

ತಾ|| ಉನ್ನತವಾದ ಮನೆಯೂ, ಸತ್ಪುತ್ರರು, ಅಗಣಿತವಾದ ಸಂಪತ್ತುಗಳು, ಅನುಕೂಲಗಳಾಗಿಯೂ, ವಿಮಲಾಂಗಿಯೂ, ಸತ್ಕುಲಪ್ರಸೂತಳಾಗಿಯೂ, ಸುಶೀಲೆಯಾಗಿಯೂ ಇರುವ ಭಾರ್ಯೆಯು, ಹೊಸದಾಗಿರುವ ಯೌವ್ವನವು ಎಂದು ಈ ರೀತಿಯಾಗಿ ಮೂಢರಾದ ಜನರು ಈ ಗೃಹ, ಪುತ್ರ, ಸಂಪತ್ತು, ಪತ್ನೀ ಮೊದಲಾದ ಪ್ರಪಂಚವನ್ನು ಸತ್ಯ ಸತ್ಯವಾದದ್ದು, ಸುಖಕರವಾಗಿರುವದು, ಶಾಶ್ವತವಾದದ್ದು, ಎಂಬದಾಗಿ ತಿಳಿದು ಪದೇಪದೇ ಜನನ ಮರಣ ದುಃಖಜರಾವಿಘಾತಪರಂಪರಾರೂಪ ಸಂಸಾರವೆಂಬ ಕಾರಾಗೃಹವನ್ನು ಪ್ರವೇಶಿಸುತ್ತಿರುವರು. ಇವುಗಳಲ್ಲಿರುವ ದೋಷವನ್ನರಿತ ಪ್ರಾಜ್ಞನಾದರೋ ಇದು ತುಚ್ಛವಾದದ್ದು. ದುಃಖಕರವಾಗಿರುವದು, ಅಸ್ಥಿರವು ಎಂಬದಾಗಿ ಭಾವಿಸಿ ಸರ್ವವನ್ನು ತ್ಯಜಿಸಿ ಕೃತಕೃತ್ಯನಾಗುವನು. ಆದಕಾರಣ ವಿವೇಕದಿಂದ ಸರ್ವಾನರ್ಥಮೂಲವಾದ ಅಜ್ಞಾನವನ್ನು ನಾಶಮಾಡಿ ಧನ್ಯನಾಗಬೇಕು. .... ||೨೦||

---

## ಯಾಚ್ಞಾದೂಷಣಾರಂಭವು.

ಶ್ಲೋ|| ದೀನಾದೀನಮುಖೈಸ್ಸದೈವ ಶಿಶುಕೈರಾಕೃಷ್ಟಜೀರ್ಣಾಂಬರಾ
ಕ್ರೋಶದ್ಭಿಃ ಕ್ಷುಧಿತೈರ್ನಿರನ್ನವಿಧುರಾ ದೃಶ್ಯಾ ನ ಚೇದ್ಗೇಹಿನೀ ||
ಯಾಚ್ಞಾಭಂಗಭಯೇನ ಗದ್ಗದಗಳತ್ತ್ರುಟ್ಯದ್ವಿಲೀನಾಕ್ಷರಂ ಕೋ
ದೇಹೀತಿ ವದೇತ್ಸ್ವದಗ್ಧಜಠರಸ್ಯಾರ್ಥೇ ಮನಸ್ವೀ ಪುಮಾನ್ ||೨೧||

ಟೀ॥ ಯಾಚ್ಞಾದೈನ್ಯ ದೂಷಣವನ್ನು ಹೇಳುತ್ತಾನೆ—ದೀನ=ಶೋಭಾಹೀನವಾದ, ಮುಖೈಃ=ಮುಖಗಳುಳ್ಳ, ಕ್ರೋಶದ್ಭಿಃ=ಅಳುತ್ತಿರುವ, ಕ್ಷುಧಿತೈಃ=ಹಸಿವೆಗೊಂಡಿರುವ, ಶಿಶುಭಿಃ=ಸಣ್ಣ ಮಕ್ಕಳಿಂದ, ಸದೈವ=ಯಾವಾಗಲೂ, ಆಕೃಷ್ಟ=ಸೆಳೆಯಲ್ಪಟ್ಟ, ಜೀರ್ಣ=ಹಳೆಯದಾದ, ಅಂಬರಾ=ವಸ್ತ್ರವುಳ್ಳ, ನಿರನ್ನ=ಅನ್ನವಿಲ್ಲದಿರುವದರಿಂದಲೇ; ವಿಧುರಾ=ಖಿನ್ನಳಾದ, ದೀನಾ=ಶೋಚನೀಯಳಾದ, ಗೇಹಿನೀ=ಹೆಂಡತಿಯು, ದೃಶ್ಯಾ=ದೃಷ್ಟಿಗೋಚರಳು, ನಚೇತ್=ಆಗದಿದ್ದರೆ, ಮನಸ್ವೀ=ಧೀರನಾದ, ಕಃಪುಮಾನ್=ಯಾವ ಮನುಷ್ಯನು, ಯಾಚ್ಞಾ=ಯಾಚನೆಯ, ಭಂಗ=ಭಂಗದ ದೆಸೆಯಿಂದುಂಟಾದ, ಭಯೇನ=ಭೀತಿಯಿಂದ, ಗದ್ಗದ=ಹೀನಸ್ವರದಿಂದ, ಗಳ=ಕೊರಳಿನಲ್ಲಿ, ತ್ರುಟ್ಯತ್=ತುಂಡಾಗುತ್ತಿರುವವಾದ ಕಾರಣವೇ, [ಜಾರುವ] ವಿಲೀನ=ಅಣಗುತ್ತಿರುವ, ಅಕ್ಷರಂ=ವರ್ಣಗಳುಳ್ಳದಾಗಿರುವಂತೆ, ಸ್ವ=ತನ್ನ, ದಗ್ಧ=ಸುಡಲ್ಪಟ್ಟ, ಜಠರಸ್ಯಾರ್ಥೇ=ಹೊಟ್ಟೆಗಾಗಿ, ದೇಹೀತಿ=ಕೊಡು? ಎಂದು, ವದೇತ್=ಹೇಳುವನು. .... .... ... ॥೨೧॥

ತಾ॥ ಹೊಟ್ಟೆಗೆ ತಿಂದಿ ಇಲ್ಲದಿರುವದರಿಂದ ದೀನವಾದ ಮುಖಗಳುಳ್ಳವುಗಳಾಗಿ ಅಳುತ್ತಲಿರುವ ಸಣ್ಣ ಮಕ್ಕಳಿಂದ ಸುತ್ತಲೂ ಎಳೆಯಲ್ಪಡುತ್ತಿರುವ, ಕಟ್ಟಿಕೊಂಡ ಹರಕು ಬಟ್ಟೆಯುಳ್ಳವಳಾಗಿ, ತಾನೂ ಅನ್ನವಿಲ್ಲದಿರುವ ಕಾರಣ ಕೇವಲ ಶೋಚನೀಯಳಾಗಿರುವ ಹೆಂಡತಿಯೊಬ್ಬಳಿಲ್ಲದಿದ್ದರೆ, ಮಾನವುಳ್ಳ ಯಾವ ಮನುಷ್ಯನು ಕಂಡವರಲ್ಲಿಹೋಗಿ ತನ್ನ ಯಾಚನೆಗೆ ಎಲ್ಲಿ ಭಂಗಉಂಟಾಗುವದೋ ಎಂಬ ಭೀತಿಯಿಂದಲೇ ಹೀನಸ್ವರದಿಂದ ಕೂಡಿದ ಗಂಟಲಿನಿಂದ ಸ್ಪಷ್ಟವಾಗದಿರುವಹಾಗೆ ಮಾತನಾಡುತ್ತಾ, ದೇಹಿಎಂದು ತನ್ನ ಹಾಳುಹೊಟ್ಟೆಯನ್ನು ತುಂಬಿಕೊಳ್ಳುವದಕ್ಕಾಗಿ ಬೇಳಿಕೊಂಡಾನು? ಯಾವದೀವರೊಂದು ಪಾಪದಿಂದ ಅನರ್ಥಮೂಲವಾದಯಾಚನೆಯನ್ನು ತ್ಯಜಿಸಬೇಕೆಂದಾಶಯವು. .... ॥೨೧॥

ಶ್ಲೋ॥ ಅಭಿಮತಮಹಾಮಾನಗ್ರಂಥಿಪ್ರಭೇದಪಟೀಯಸೀ ಗುರುತರಗುಣಗ್ರಾಮಾಂಭೋಜಸ್ಫುಟೋಜ್ಜ್ವಲಚಂದ್ರಿಕಾ। ವಿಪುಲವಿಲಸಲ್ಲಜ್ಜಾವಲ್ಲೀವಿತಾನಕುಠಾರಿಕಾಜಠರಪಿಠರೀದುಷ್ಪೂರೇಯಂಕರೋತಿವಿಡಂಬನಾಂ ॥ .... .... ॥೨೨॥

ಟೀ॥ ದೈನ್ಯವೆಂಬ ಅನರ್ಥಕ್ಕೆ ಕಾರಣವಾದ ಹೊಟ್ಟೆಯನ್ನು ನಿಂದಿಸುತ್ತಾನೆ. ಅಭಿಮತ=ಇಷ್ಟವಾದ, ಮಹಾಮಾನ=ಶ್ಲಾಘ್ಯವಾದ ಗೌರವವೆಂಬ ಗ್ರಂಥಿ=ಗಂಟನ್ನು, ಭೇದ=ಒಡೆಯುವದರಲ್ಲಿ, ಪಟೀಯಸೀ=ಸಮರ್ಥವಾದ, ಗುರುತರ=ಮ

ಹತ್ತಿರವಾದ ಗುಣ=ಸದ್ಗುಣಗಳೆ, ಗ್ರಾಮ=ಸಮುದಾಯವೆಂಬ, ಅಂಭೋಜ=ಕಮಲಗಳನ್ನು, ಸ್ಫುಟ=ಅರಳಿಸುವದರಲ್ಲಿ, ಉಜ್ವಲ=ಹೊಳೆಯುವ=ಚಂದ್ರಿಕಾ=ಬೆಳದಿಂಗಳಂತಿರುವ, ವಿಪುಲ=ವಿಸ್ತಾರವಾದ, ವಿಲಸತ್=ಹೊಳೆಯುವ, ಲಜ್ಜಾವಲ್ಲೀ=ನಾಚಿಕೆಯೆಂಬ ಬಳ್ಳಿಗಳ, ವಿತಾನ=ಸಮುದಾಯಕ್ಕೆ. ಕುಠಾರಿಕಾ=ಕೊಡಲಿಯಂತಿರುವ, ದುಷ್ಪೂರಾ=ತುಂಬಲಶಕ್ಯವಾದ, ಇಯಂ=ಈ ಜಠರ=ಹೊಟ್ಟೆಯೆಂಬ, ಪಿಠರೀ=ಮಡಿಕೆಯು, ವಿಡಂಬನಾಂ=ಯಾಚ್ಞಾ ರೂಪವಾದ ಹಾಸ್ಯವನ್ನು ಕರೋತಿ=ಮಾಡುವದು, ಹರಿಣೀವೃತ್ತವು. ॥೨೧॥

ತಾ॥ ಪ್ರತಿಷ್ಠೆಗೆ ಕಾರಣವಾದುದರಿಂದ ಇಷ್ಟವಾಗಿರುವ ಮಾನವನ್ನು ಹಾಳುಮಾಡತಕ್ಕದ್ದಾಗಿಯೂ, ಸುಶೀಲತ್ವಾದ್ಯನೇಕ ಸದ್ಗುಣಗಳನ್ನು ಭಂಗಪಡಿಸತಕ್ಕದಾಗಿಯೂ, ಅಸತ್ಕಾರ್ಯಕರಣದಲ್ಲಿ ಉಂಟಾಗಿರುವ ಲಜ್ಜೆಯನ್ನು ವಿನಾಶ ಮಾಡುವದಾಗಿಯೂ, ಎಷ್ಟು ತುಂಬಿದರೂ ಪೂರ್ಣವಾಗದಿರುವದಾಗಿಯೂ, ಇರುವ ಈ ಹೊಟ್ಟೆಯೆಂಬ ಮಡಿಕೆಯು ಸರ್ವಥಾ ಅಕಾರ್ಯವಾದ ಯಾಚನೆ ಮೊದಲಾದ ದುಷ್ಕಾರ್ಯಗಳನ್ನು ಮಾಡಿಸುತ್ತಾ ಅಣಕದ ಹಾಸ್ಯ ಮಾಡುತ್ತಿರುವದು. .... ॥೨೧॥

ಶ್ಲೋ॥ ಪುಣ್ಯೇಗ್ರಾಮೇ ವನೇವಾ ಮಹತಿ ಸಿತಪಟಚ್ಛನ್ನಪಾಲಿಂ ಕಪಾಲಿಂ ಹ್ಯಾ
ದಾಯನ್ಯಾಯಗರ್ಭ ದ್ವಿಜಹುತಹುತಭುಗ್ಧೂಮಧೂಮ್ರೋಪಕಂ
ಠೇ । ದ್ವಾರಂದ್ವಾರಂ ಪ್ರವಿಷ್ಟೋ ವರಮುದರದರೀಪೂರಣಾಯ ಕ್ಷು
ಧಾರ್ತೋ ಮಾನೀ ಪ್ರಾಣೈಸ್ಸನಾಥೋ ನ ಪುನರನುದಿನಂ ತುಲ್ಯಕು
ಲ್ಯೇಷು ದೀನಃ ॥ .... .... ॥೨೨॥

ಟೀ॥ ಮಾನವಂತನಾದ ಮನುಷ್ಯನಿಗೆ ತನ್ನ ಬಂಧುಗಳಲ್ಲಿ ಯಾಚನೆಗಿಂತಲೂ, ದೇಶಾಂತರದಲ್ಲಿ ಭಿಕ್ಷಾನ್ನಭೋಜನದಿಂದ ಪ್ರಾಣಧಾರಣವು ಉತ್ತಮವೆಂದು ಹೇಳುತ್ತಾನೆ—ನ್ಯಾಯ=ತರ್ಕ ಮೀಮಾಂಸಾದಿ ಶಾಸ್ತ್ರಗಳೇ, ಗರ್ಭ=ಗರ್ಭದಲ್ಲಿ ಉಳ್ಳ, ದ್ವಿಜ=ಬ್ರಾಹ್ಮಣರಿಂದ ಹುತ=ಹವನ ಮಾಡಲ್ಪಟ್ಟ. ಹುತಭುಕ್=ಅಗ್ನಿಗಳ, ಧೂಮ=ಹೊಗೆಯಿಂದ, ಧೂಮ್ರ=ಹೊಗೆಯ ಬಣ್ಣವಾದ, ಉಪಕಂಠೇ=ಸಮೀಪ ಪ್ರದೇಶವುಳ್ಳ, ಪುಣ್ಯೇ=ಪರಿಶುದ್ಧವಾದ, ಮಹತಿ=ವಿಶಾಲವಾದ, ಗ್ರಾಮೇ=ಅಗ್ರಹಾರದಲ್ಲಿಯಾದರೂ, ವನೇವಾ=ಕಾಡಿನಲ್ಲಿಯಾದರೂ, ಸಿತ=ಶುಭ್ರವಾದ ಪಟ=ವಸ್ತ್ರದಿಂದ, ಛನ್ನ=ಮುಚ್ಚಲ್ಪಟ್ಟ, ಪಾಲಿಂ=ಮೇಲ್ಭಾಗವುಳ್ಳ, ಕಪಾಲಿಂ=ತಟ್ಟೆಯನ್ನು, ಆದಾಯ=ತೆಗೆದುಕೊಂಡು, ಕ್ಷುಧಾರ್ತಃ=ಹಸಿವಿನಿಂದ ಪೀಡಿತನಾಗಿ, ಮಾನೀ=ಮಾನವಂತನಾದ ಮನುಜನು, ಉದರ=ಹೊಟ್ಟೆಯೆಂಬ, ದರೀ=ಗವಿಯ, ಪೂರಣಾಯ=

ತುಂಬುವದಕ್ಕೆ, ದ್ವಾರಂದ್ವಾರಂ=ಪ್ರತಿಮನೆಯ ಬಾಗಿಲನ್ನು, ಪ್ರವಿಷ್ಟಃ=ಹೊಕ್ಕವರಾಗಿ, ಪ್ರಾಣೈಃ=ಪ್ರಾಣಗಳಿಂದ, ಸನಾಥಃ=ಕೂಡಿರುವದು, ವರಂ=ಉತ್ತಮವು, ಅನುದಿನಂ=ಪ್ರತಿನಿತ್ಯವೂ, ತುಲ್ಯ=ಸಮಾನವಾದ, ಕುಲ್ಯೇಷು=ವಂಶಸ್ಥರಲ್ಲಿ, ದೀನಃಪುನಃ=ದೀನನಾಗಿರುವದಾದರೊ, ನವರಂ=ಉತ್ತಮವಲ್ಲವು. ॥೨೩॥

ತಾ॥ ವೇದವೇದಾಂಗಾದಿ ಶಾಸ್ತ್ರಗಳನ್ನು ಓದಿಕೊಂಡು, ತದುಕ್ತಕರ್ಮಾನುಷ್ಠಾನಗಳನ್ನು ಮಾಡುತ್ತಿರುವ ಮಹನೀಯರಾದ ಬ್ರಾಹ್ಮಣರಿರುವ ಅಗ್ರಹಾರದಲ್ಲಿಯಾಗಲೀ, ಅಥವಾ ವಾನಪ್ರಸ್ಥರೇ ಮೊದಲಾದ ಋಷಿಗಳಿರುವ ಪುಣ್ಯ ವನಗಳಲ್ಲಿಯಾಗಲೀ, ಮುಚ್ಚಳದಿಂದ ಸಹಿತವಾದ ಜೋಳಿಗೆಯನ್ನು ಹಿಡಿದುಕೊಂಡು, ಮನೆಮನೆಯ ಬಾಗಿಲಿಗೂ ಹೋಗಿ ತಿರಿದಾದರೂ ಉಂಡು ಪ್ರಾಣಗಳನ್ನು ಧರಿಸಿರುವದು ಮಾನವಂತನಾದ ಪುರುಷನಿಗೆ ಮೇಲಲ್ಲದೆ ತನ್ನ ಸಮಾನನಾದ ಕುಲದಲ್ಲಿ ಹುಟ್ಟಿರುವ ಬಂಧು ಜನಗಳ ಮಧ್ಯದಲ್ಲಿ ದೀನನಾಗಿ ಯಾಚಿಸುವದು ಮಾತ್ರ ಸರ್ವಥಾ ಸರಿಯಲ್ಲ. ಇದಕ್ಕಿಂತಲೂ ಪ್ರಾಣಹಾನಿಯಾದರೂ ಉತ್ತಮವೇ ॥೨೩॥

ಶ್ಲೋ॥ ಗಂಗಾತರಂಗಕಣಶೀಕರಶೀತಲಾನಿ ವಿದ್ಯಾಧರಾಧ್ಯುಷಿತಚಾರುಶಿಲಾತಲಾನಿ । ಸ್ಥಾನಾನಿಕಿಂಹಿಮವತಃಪ್ರಳಯಂಗತಾನಿಯತ್ಸಾವಮಾನಪರಪಿಂಡರತಾಮನುಷ್ಯಾಃ ॥ .... ॥೨೪॥

ಟೀ॥ ಬೇರೆ ಗತಿ ಇಲ್ಲವೆಂದರೆ ಗತಿಯನ್ನು ತೋರಿಸುತ್ತಾನೆ—ಗಂಗಾ=ಗಂಗಾನದಿಯ, ತರಂಗ=ಅಲೆಗಳ, ಕಣ=ಬಿಂದುಗಳ, ಶೀಕರ=ತುಂತುರುಗಳಿಂದ, ಶೀತಲಾನಿ=ತಣ್ಣಗಿರುವ, ವಿದ್ಯಾಧರ=ವಿದ್ಯಾಧರರೆಂಬ ದೇವತೆಗಳಿಂದ, ಅಧ್ಯುಷಿತ=ಆಶ್ರಯಿಸಲ್ಪಟ್ಟ, ಚಾರು=ಮನೋಹರವಾದ, ಶಿಲಾತಲಾನಿ=ಪಾಷಾಣಪ್ರದೇಶಗಳುಳ್ಳ, ಹಿಮಾದ್ರೇಃ=ಹಿಮವತ್ಪರ್ವತದ, ಸ್ಥಾನಾನಿ=ಪ್ರದೇಶಗಳು, ಪ್ರಳಯಂಗತಾನಿಕಿಂ=ನಾಶವಾದವೆ ಏನು? ಯತ್=ಯಾವಕಾರಣದ್ದೆಸೆಯಿಂದ, ಮನುಷ್ಯಾಃ=ಮನುಜರು, ಸಾವಮಾನ=ಅವಮಾನದಿಂದ ಕೂಡಿದ, ಪರ=ಇತರರ, ಪಿಂಡ=ಅನ್ನದಲ್ಲಿ, ರತಾಃ=ಆಸಕ್ತರಾಗಿರುವರೋ? ... ॥೨೪॥

ತಾ॥ ಹೊಟ್ಟೆಗಿಲ್ಲದೆ ಪರರಲ್ಲಿ ಹೋಗಿ ಯಾಚಿಸಲು, ಅವರು ಅಸಹ್ಯಪಟ್ಟು ಹಾಕಿದ ಅನ್ನವನ್ನು ಬಹು ಅನಾದರವಾಗಿದ್ದರೂ ಅದನ್ನೇ ತಿನ್ನಬೇಕೆಂದು ಆಶೆಪಡುವ ಮನುಷ್ಯರಿಗೆ ಗಂಗಾನದಿಯ ಜಲಬಿಂದುಗಳು ಬಿದ್ದು ತಣ್ಣಗಿರುವವಾಗಿಯೂ, ವಿದ್ಯಾಧರರೇ ಮೊದಲಾದ ದೇವತೆಗಳು ವಾಸಮಾಡುವದರಿಂದ ಪರಿಶುದ್ಧಗಳಾಗಿಯೂ ಇರುವ ಹಿಮಾಲಯ ಪರ್ವ

ಹದ ಬಳಿಯಲ್ಲಿರುವ ಶಿಲಾತಲಗಳು ಹಾಳಾಗಿಹೋದವೆ? ಅಂದರೆ ಈ ಪರಾಚಸೇವಾದಿ ಮಾನಭಂಗ ಪಡುವದಕ್ಕಿಂತಲೂ ಅರಣ್ಯವಾಸವು ಸರ್ವೋತ್ತಮವೆಂದಭಿಪ್ರಾಯವು. .... .... ||೨೪||

ಶ್ಲೋ|| ಕಿಂ ಕಂದಾಃ ಕಂದರೇಭ್ಯಃ ಪ್ರಳಯಮುಪಗತಾ ನಿರ್ಝರಾ ವಾ ಗಿರಿ
ಭ್ಯಃ ಪ್ರಧ್ವಸ್ತಾ ವಾ ತರುಭ್ಯಃ ಸರಸಫಲಭೃತೋ ವಲ್ಕಲಿನ್ಯಶ್ಚ ಶಾ
ಖಾಃ । ವೀಕ್ಷ್ಯಂತೇ ಯನ್ಮುಖಾನಿ ಪ್ರಸಭಮುಪಗತಪ್ರಶ್ರಯಾಣಾಂ
ಖಲಾನಾಂ ದುಃಖಾಪ್ತ ಸ್ವಲ್ಪವಿತ್ತಸ್ಮಯಪವನವಶಾನರ್ತಿತಭ್ರೂ
ಲತಾನಿ .... .... ||೨೫||

ಟೀ|| ಜೀವನಾಂತರವನ್ನು ತೋರಿಸಿ ಯಾಚನೆಯನ್ನು ದೂಷಿಸುತ್ತಾನೆ. ಕಂದರೇಭ್ಯಃ=ಗುಹೆಗಳ ದೆಸೆಯಿಂದ, ಕಂದಾಃ=ಗೆಡ್ಡೆ ಗೆಣಸು ಮೊದಲಾದವುಗಳು, ಪ್ರಳಯಂ=ನಾಶವನ್ನು, ಉಪಗತಾಃ ಕಿಂ=ಹೊಂದಿದವೇನು? ಗಿರಿಭ್ಯಃ=ಬೆಟ್ಟಗಳ ದೆಸೆಯಿಂದ, ನಿರ್ಝರಾ ವಾ=ನದಿಗಳು, ಪ್ರಳಯಂ=ನಾಶವನ್ನು, ಉಪಗತಾಃ ಕಿಂ=ಹೊಂದಿದವೇ ಏನು? ತರುಭ್ಯಃ=ಮರಗಳ ದೆಸೆಯಿಂದ, ಸರಸ=ರಸದಿಂದೊಡಗೂಡಿದ, ಫಲ=ಹಣ್ಣುಗಳನ್ನು, ಭೃತಃ=ಧರಿಸಿರುವ, ವಲ್ಕಲಿನ್ಯಃ=ನಾರುವಸ್ತ್ರಗಳುಳ್ಳ, ಶಾಖಾಃ=ರೆಂಬೆಗಳು, ಪ್ರಧ್ವಸ್ತಾ ವಾ=ಉದುರಿಹೋದವೆ? ಯತ್=ಯಾವಕಾರಣದ್ದೆಸೆಯಿಂದ, ಪ್ರಸಭಂ=ಅತ್ಯಂತವಾಗಿ, ಅಪಗತ=ಹೋದ, ಪ್ರಶ್ರಯಾಣಾಂ=ವಿನಯವುಳ್ಳ, ಖಲಾನಾಂ=ನೀಚರ, ದುಃಖ=ಅತಿಕ್ಲೇಶದಿಂದ, ಆಪ್ತ=ಹೊಂದಲ್ಪಟ್ಟ, ಸ್ವಲ್ಪ=ಕೊಂಚವಾದ, ವಿತ್ತ=ದ್ರವ್ಯದಿಂದುಂಟಾದ, ಸ್ಮಯ=ಗರ್ವವೆಂಬ, ಪವನ=ಗಾಳಿಯ, ವಶ=ಅಧೀನದಿಂದ, ಆನರ್ತಿತ=ಚಲಿಸಲ್ಪಟ್ಟ, ಭ್ರೂಲತಾನಿ=ಲತೆಗಳಂತಿರುವ ಹುಬ್ಬುಗಳುಳ್ಳ, ಮುಖಾನಿ=ಮುಖಗಳು, ವೀಕ್ಷ್ಯಂತೇ=ನೋಡಲ್ಪಡುವವೋ?

ತಾ|| ಸುತರಾಂ ವಿನಯಶೂನ್ಯರೆನಿಸಿ, ನೀಚರಾಗಿರುವ ಜನಗಳ ಬಳಿಗೆ ಹೋಗಿ ಅತ್ಯಂತ ಕ್ಲೇಶದಿಂದ ಸಂಪಾದಿಸಿರುವ ಅತ್ಯಲ್ಪ ಧನದಿಂದಲೇ ದುರಹಂಕಾರಿಗಳಾದ ಯಾಚಕರ ಮುಖ ನೋಡಿದ ಮಾತ್ರದಲ್ಲಿಯೇ ಹುಬ್ಬುಗಳನ್ನು ನಾನಾವಿಕಾರ ಮಾಡುವ ಮುಖಗಳನ್ನು ನೋಡಿಕೊಂಡು ಏಕೆ ಭಂಗಪಡುವಿರಿ? ಗುಹೆಗಳೊಳಗೆ ಕಂದ ಮೂಲಗಳಿಲ್ಲವೆ? ಬೆಟ್ಟಗಳಲ್ಲಿರುವ ನದಿಗಳೆಲ್ಲಾ ಬಾಗಿದವೆ? ರುಚಿಯಾಗಿರುವ ಹಣ್ಣುಗಳಿಂದೊಡಗೂಡಿರುವ ಮರದ ಕೊನೆಗಳುದುರಿಹೋದವೆ? ಏಕೆ ದುರೀಶ್ವರಸೇವೆಯನ್ನು ಮಾಡುವಿರಿ, ಕಾಡಿಗೆ ಹೋಗುವದೇ ಲೇಸು.

ಶ್ಲೋ॥ ಪುಣ್ಯೈರ್ಮೂಲಫಲೈಸ್ತಥಾಪ್ರಣಯಿನೀಂವೃತ್ತಿಂಕುರುಷ್ವಾಧುನಾ
ಭೂಶಯ್ಯಾಂನವಪಲ್ಲವೈರಕೃಪಣೈರುತ್ತಿಷ್ಠಯಾವೋವನಂ ॥
ಕ್ಷುದ್ರಾಣಾಮವಿವೇಕಮೂಢಮನಸಾಂಯತ್ರೇಶ್ವರಾಣಾಂಸದಾ
ವಿತ್ತವ್ಯಾಧಿವಿಕಾರವಿಹ್ವಲಗಿರಾನಾಮಾಪಿನಶ್ರೂಯತೇ ॥೨೬॥

ಟೀ॥ ಬಹುಕಾಲ ನೀಚಸೇವೆಯನ್ನು ಮಾಡಿ ಖಿನ್ನನಾಗಿ, ಜುಗುಪ್ಸೆಪಟ್ಟ ಒಬ್ಬನೊಬ್ಬ ವಿರಾಗಿಯ ವಚನವನ್ನು ಅಭಿನಯಿಸಿ ತೋರಿಸುತ್ತಾನೆ—ಅಧುನಾ=ಈಗ, ಪುಣ್ಯೈಃ=ಪರಿಶುದ್ಧಗಳಾದ, ಮೂಲ=ಬೇರುಗಳು, (ಗೆಡ್ಡೆಗಳು) ಫಲ=ಹಣ್ಣುಗಳು ತಥಾ=ಹಾಗೆಯೆ, ಪ್ರಣಯಿನೀಂ=ವಿಶ್ವಾಸವುಳ್ಳ, ವೃತ್ತಿಂ=ಜೀವನವನ್ನು, ಕುರುಷ್ವ=ಮಾಡು, ಅಕೃಪಣೈಃ=ಬಾಡದಿರುವ, ನವಪಲ್ಲವೈಃ=ಹೊಸದಾದ ಚಿಗುರುಗಳಿಂದ ಇವುಗಳಿಂದ, ಭುವಿ=ಭೂಮಿಯಲ್ಲಿ, ಶಯ್ಯಾಂ=ಹಾಸಗೆಯನ್ನು, ಕುರುಷ್ವ=ಮಾಡಿಕೊ, ಉತ್ತಿಷ್ಠ=ಏಳು, ವನಂ=ಕಾಡನ್ನು, ಕುರಿತು ಯಾವಃ=ಹೋಗೋಣ, ಯತ್ರ=ಯಾವ ಅರಣ್ಯದಲ್ಲಿ, ಅವಿವೇಕ=ಯುಕ್ತಾಯುಕ್ತ ಜ್ಞಾನಶೂನ್ಯತೆಯಿಂದ, ಮೂಢ=ಸ್ತಬ್ಧವಾದ, ಮನಸಾಂ=ಚಿತ್ತವುಳ್ಳ, ಕ್ಷುದ್ರಾಣಾಂ=ನೀಚರಾದ, ವಿತ್ತ=ದ್ರವ್ಯವೆಂಬ, ವ್ಯಾಧಿ=ರೋಗದಿಂದುಂಟಾದ, ವಿಕಾರ=ವಿಪರೀತ ಭಾವದಿಂದ, ವಿಹ್ವಲ=ವ್ಯತ್ಯಸ್ತವಾದ, ಗಿರಾಂ=ಮಾತುಗಳುಳ್ಳ, ಈಶ್ವರಾಣಾಂ=ಪ್ರಭುಗಳ, ನಾಮಾಪಿ=ಹೆಸರುಕೂಡ, ನಶ್ರೂಯತೇ=ಕೇಳಲ್ಪಡುವದಿಲ್ಲವೋ? ॥೨೬॥

ತಾ॥ ಯಾವ ವಿಧವಾದ ದೋಷಗಳೂ ಇಲ್ಲದಿರುವದರಿಂದ ಪರಿಶುದ್ಧಗಳೆನಿಸಿ ಸಂತೋಷಕರವಾದ ಜೀವನವನ್ನು ಮಾಡಿಕೊ, ಬಾಡದೆ ಸುಂದರವಾಗಿರುವ ಚಿಗುರುಗಳಿಂದ ನೆಲದಮೇಲೆ ದಿವ್ಯವಾದ ಹಾಸಿಗೆಯನ್ನು ಮಾಡಿಕೋ, ಸಾವಕಾಶ ಮಾಡಬೇಡ, ಏಳು, ಅರಣ್ಯಕ್ಕೆ ಹೋಗೋಣ. ಯುಕ್ತಾಯುಕ್ತ ಜ್ಞಾನಶೂನ್ಯರಾಗಿಯೂ, ವಿಚಾರಶೂನ್ಯರಾಗಿಯೂ, ಧನವೆಂಬ ರೋಗದಿಂ ನಾನಾವಿಧ ವಿಕಾರವಾದ ವಾಕ್ಕುಳ್ಳವರಾಗಿಯೂ—ಇರುವ ಈ ಪಾಪಿ ಪ್ರಭುಗಳ ನಾಮಮಾತ್ರವೂ ಆ ಅರಣ್ಯದಲ್ಲಿ ಕೇಳಲ್ಪಡುವದಿಲ್ಲ. ಆದುದರಿಂದ ಇಹಪರಸುಖ ಲೇಶಸಂಬಂಧ ಶೂನ್ಯವಾದ ದುರೀಶ್ವರ ಸೇವೆಯನ್ನು ತ್ಯಜಿಸಿ ವನವನ್ನಾಶ್ರಯಿಸತಕ್ಕದ್ದೇ ಶ್ಲಾಘ್ಯವು.

ಶ್ಲೋ॥ ಫಲಂಸ್ವೇಚ್ಛಾಲಭ್ಯಂಪ್ರತಿವನಮಖೇದಂಕ್ಷಿತಿರುಹಾಂಪಯಃಸ್ಥಾನೇಸ್ಥಾನೇಶಿಶಿರಮಧುರಂಪುಣ್ಯಸರಿತಾಂ । ಮೃದುಸ್ಪರ್ಶಾಶಯ್ಯಾಸುಲಲಿತಲತಾಪಲ್ಲವಮಯೀಸಹಂತೇಸಂತಾಪಂತದಪಿಧನಿನಾಂದ್ವಾರಿಕೃಪಣಾಃ .... .... ॥೨೭॥

ಜೀವನ ಸಾಮಗ್ರಿಯು ಸಂಪೂರ್ಣವಾಗಿದ್ದರೂ ನಿರ್ಭಾಗ್ಯರು ದೈನ್ಯವನ್ನು ಬಿಡರೆಂದು ಸೂಚಿಸುತ್ತಾನೆ.— ಪ್ರತಿವನಂ=ಎಲ್ಲಾ ವನದಲ್ಲಿಯೂ, ಅಖೇದಂ=ಕ್ಲೇಶವಿಲ್ಲದಂತೆ, ಸ್ವೇಚ್ಛಾ=ಸ್ವೇಚ್ಛೆಯಿಂದ, ಲಭ್ಯಂ=ಹೊಂದತಕ್ಕ. ಕ್ಷಿತಿರುಹಾಂ=ಮರಗಳ, ಫಲಂ=ಹಣ್ಣು, ಅಸ್ತಿ=ಉಂಟು ಸ್ಥಾನೇಸ್ಥಾನೆ=ಪ್ರತಿಸ್ಥಳದಲ್ಲಿಯೂ, ಶಿಶಿರ=ತಂಪಾಗಿಯೂ, ಮಧುರಂ=ರುಚಿಯಾಗಿಯೂ ಇರುವ, ಪುಣ್ಯಸರಿತಾಂ=ಪುಣ್ಯನದಿಗಳ, ಪಯಃ=ಉದಕವು, ಅಸ್ತಿ=ಉಂಟು, ಮೃದು=ಕೋಮಲವಾದ, ಸ್ಪರ್ಶ=ಸ್ಪರ್ಶವುಳ್ಳ, ಸುಲಲಿತ=ಅತ್ಯಂತ ಸುಂದರವಾದ, ಲತಾ=ಬಳ್ಳಿಗಳು, ಪಲ್ಲವಮಯೀ=ಚಿಗುರುಗಳು ಇವುಗಳಸ್ವರೂಪವಾದ,ಶಯ್ಯಾ=ಹಾಸಿಗೆಯು, ತದಪಿ=ಹಾಗಾದಾಗ್ಯೂ, ಧನಿನಾಂ=ಧನವಂತರ, ದ್ವಾರಿ=ಬಾಗಿಲಿನಲ್ಲಿ, ಕೃಪಣಾಃ=ದೀನರಾಗಿ, ಸಂತಾಪಂ=ಕ್ಲೇಶವನ್ನು ಸಹಂತೆ=ಸಹಿಸುವರು. ॥೨೭॥

ತಾ॥ ಪ್ರತ್ಯರಣ್ಯದಲ್ಲಿಯೂ ಎಲ್ಲಾ ಮರಗಳ ಬಳಿಯಲ್ಲಿಯೂ, ಅನಾಯಾಸದಿಂದ ಫಲಗಳು ದೊರಿಯುವವು. ಮತ್ತು ಶೀತಲವಾಗಿಯೂ ರುಚಿಯಾಗಿಯೂ ಇರುವ ಪುಣ್ಯನದಿಗಳ ಉದಕಗಳು ಅತಿ ಸುಲಭವಾಗಿ ಲಭಿಸುವವು. ಸುಂದರವಾಗಿಯೂ, ಮೆತ್ತಗಿರುವದಾಗಿಯೂ, ಚಿಗುರುಗಳಿಂದ ರಚಿಸಲ್ಪಟ್ಟದ್ದಾಗಿಯೂ ಇರುವ ದಿವ್ಯವಾದ ಹಾಸಿಗೆಯು ಸುಲಭಸಾಧ್ಯವಾಗಿರುವದು. ಇಷ್ಟರ ಅನುಕೂಲ್ಯವಿದ್ದರೂ ನಿರ್ಭಾಗ್ಯರು ಧನದುರ್ಮದಾಂಧರ ಬಾಗಿಲಿನಲ್ಲಿ ನಿಂತು ಅತ್ಯಂತ ದೀನರಾಗಿ ಸಂತಾಪವನ್ನು ಸಹಿಸುತ್ತಿರುವರು, ಅಹಹ ! ಆಶ್ಚರ್ಯವು.

ಶ್ಲೋ॥ ಯದ್ವಕ್ತ್ರಂ ಕ್ವೇಧನಪತಿಪುರಃ ಪ್ರಾರ್ಥನಾದುಃಖಭಾಜೋ ಯೇಚಾಲ್ಪ
ತ್ವಂದಧತಿವಿಷಯಾಕ್ಷೇಪಪರ್ಯಸ್ತಬುದ್ಧೇಃ । ತೇಷಾಮಂತ
ಸ್ಸ್ಫುರಿತಹಸಿತಂವಾಸರಾಣಿ ಸ್ಮರೇಯಂಧ್ಯಾನಚ್ಛೇದೆಶಿಖರಿಕು
ಹರಗ್ರಾವಶಯ್ಯಾನಿಷಣ್ಣಃ .... ॥೨೮॥

ಟೀ॥ ದುರೀಶ್ವರರ ಬಳಿಯಲ್ಲಿ ಯಾಚನಾದೈನ್ಯವನ್ನು ಹಾಸ್ಯಮಾಡುತ್ತಾನೆ. ಧನಪತಿ=ಧನಾಢ್ಯನ, ಪುರಃ=ಮುಂಭಾಗದಲ್ಲಿ, ಪ್ರಾರ್ಥನಾ=ಯಾಚನೆ ಎಂಬ,ದುಃಖಂ=ವ್ಯಥೆಯನ್ನು, ಭಾಜಃ=ಹೊಂದಿದವರಾಗಿ. ಯೇ=ಯಾವಜನರು, ವರ್ತಂತೇ=ಇರುವರೋ, ಯೇಚ=ಮತ್ತಾವ ಜನಗಳು, ವಿಷಯ=ಹೂವು ಗಂಧ ಮೊದಲಾದ ವಿಷಯಗಳ, ಆಕ್ಷೇಪ=ಸಂಪಾದನೆಯಲ್ಲಿ ಮಾತ್ರವೇ, ಪರ್ಯಸ್ತ=ಆಸಕ್ತ ವಾದ, ಬುದ್ಧೇಃ=ಬುದ್ಧಿಯುಳ್ಳಮೆಯಿಂದ, ಅಲ್ಪತ್ವಂ=ನೀಚತನವನ್ನು, [illegible]=ವಹಿಸುವರೋ, ತೇಷಾಂ=ಅಂಥಾ ಮನುಷ್ಯರ, ವಾಸರಾಣಿ=ದಿ[illegible]ಗಳನ್ನು, ಧ್ಯಾನ=ಧ್ಯಾನದ ಛೇದೆ=ಅಂತ್ಯದಲ್ಲಿ, ಶಿಖರಿ=ಬೆಟ್ಟಗಳ, ಕುಹರ=ಗವಿಗಳೊಳಗಿರುವ, ಗ್ರಾವ=[illegible]

ಷಾಣವೆಂಬ, ಶಯ್ಯಾ=ಹಾಸಿಗೆಯಲ್ಲಿ, ನಿಷಣ್ಣಃ=ವಿಶ್ರಮಿಸಿಕೊಂಡಿರುವವನಾಗಿ, ಅಂತಃ=ಚಿತ್ತದಲ್ಲಿ, ಸ್ಫುರಿತ=ಉಂಟಾದ, ಹಸಿತಂ=ನಗೆಯುಂಟಾಗುವ ಹಾಗೆ, ಸ್ಮರಿಷ್ಯಾಮಿ=ನೆನಸುವೆನು. ... ... ॥ ೫೮ ॥

ತಾ॥ ಯಾವ ಜನಗಳಾದರೆ ಧನಮದಾಂಧರ ಬಳಿಗೆ ಹೋಗಿ ಯಾಚನೆಯನ್ನು ಮಾಡುತ್ತಾ, ಅದರಿಂದುಂಟಾದ ದುಸ್ಸಹವಾದ ಕ್ಲೇಶಗಳನ್ನನುಭವಿಸುತ್ತಿರುವರೋ, ಮತ್ತಾವ ಮನುಜರು ಯಾವಾಗಲೂ ಅಪತ್ಯ ಸುಖಸಾಧಕವಾದ ಪದಾರ್ಥಗಳನ್ನು ಸಂಪಾದಿಸುವದರಲ್ಲಿಯೇ ಆಸಕ್ತರಾಗಿ ಬಹು ಹೀನರಾಗಿರುವರೋ, ಆ ಜನರು ಅನ್ಯಾಯವಾಗಿ ಕಳೆಯುತ್ತಿರುವ ದಿವಸಗಳನ್ನು ನಾನು ಗಿರಿಗುಹೆಗಳೊಳಗೆ ಪರಮಾತ್ಮನ ಧ್ಯಾನವನ್ನು ಮಾಡುತ್ತಿದ್ದು, ಯಾವಾಗಲಾದರೂ ಹಠಾತ್ತಾಗಿ ಎಚ್ಚೆತ್ತು, ಬಹಿರ್ಮುಖನಾಗಿರುವ ಕಾಲದಲ್ಲಿ ಶಿಲಾತಲದಲ್ಲಿ ವಿಶ್ರಮಿಸಿಕೊಳ್ಳುವದಕ್ಕಾಗಿ ಮಲಗಿರುವ ಕಾಲದಲ್ಲಿ ಸ್ಮರಣೆ ಮಾಡುವೆನು. ಎಂದರೆ ನಾನು ಈ ದುಃಖವನ್ನನುಭವಿಸಿ ಈಗ ಈ ಸುಖವನ್ನು ಅನುಭವಿಸುವೆನು. ವಿವೇಕಿಯಾದವನು ಹನ್ನಂತಿರಬೇಕೆಂದಾಶಯವು. .... .... ॥೫೮॥

ಶ್ಲೋ॥ ಯೇ ಸಂತೋಷನಿರಂತರಪ್ರಮುದಿತಾಸ್ತೇಷಾಂ ನ ಭಿನ್ನಾ ಮುದೋ
ಯೇ ತ್ವನ್ಯೇ ಧನಲುಬ್ಧಸಂಕುಲಧಿಯಸ್ತೇಷಾಂ ನ ತೃಷ್ಣಾ ಹತಾ ।
ಇತ್ಥಂ ಕಸ್ಯ ಕೃತೇ ಕುತಃ ಸ ವಿಧಿನಾ ತಾದೃಕ್ಪದಂ ಸಂಪದಾಂ ಸ್ವಾತ್ಮನ್ಯೇವ ಸಮಾಪ್ತಹೇಮಮಹಿಮಾ ಮೇರುರ್ನ ಮೇ ರೋಚತೇ ॥೫೯॥

ಟೀ॥ ಆಸೆಗೆ ಎಂದಿಗೂ ಪಾರವೇ ಇಲ್ಲದಿರುವದರಿಂದ ಯಾಚ್ಞಾದೈನ್ಯದಿಂದ ಪ್ರಯೋಜನವಿಲ್ಲವೆಂದು ತಿಳಿಸುತ್ತಾನೆ—ಯೇ=ಯಾವಜನರು, ಸಂತೋಷ=ತೃಪ್ತಿಯಿಂದ, ನಿರಂತರಂ=ಯಾವಾಗಲೂ, ಪ್ರಮುದಿತಾಃ=ಸಂತುಷ್ಟರಾದವರೋ, ತೇಷಾಂ=ಅವರುಗಳ, ಮುದಃ=ಸಂತೋಷಗಳು, ನ ಭಿನ್ನಾಃ=ವ್ಯಾಪಾರವಿಲ್ಲವುಗಳಲ್ಲ, ಅನ್ಯೇ=ಇತರರಾದ, ಯೇ ತು=ಮತ್ತಾವಜನರು, ಧನ=ದ್ರವ್ಯದಲ್ಲಿ, ಲುಬ್ಧ=ಆಸಕ್ತವಾದ, ಧಿಯಃ=ಬುದ್ಧಿಯುಳ್ಳವರೋ, ತೇಷಾಂ=ಅಂಥವರುಗಳ, ತೃಷ್ಣಾ=ಧನಾಶೆಯು, ನ ಹತಾ=ನಿರಾಮವಾಗುವದಿಲ್ಲ, ಇತ್ಥಂ=ಈ ಪ್ರಕಾರವಾಗುತ್ತಿರಲಾಗಿ, ಸಃ=ಪ್ರಸಿದ್ಧವಾಗಿರುವ, ಸಂಪದಾಂ=ಸಂಪತ್ತುಗಳಿಗೆ, ತಾದೃಕ್=ಹೇಳಲಶಕ್ಯವಾದ, ಪದಂ=ಸ್ಥಾನವಾಗಿರುವ, ಸ್ವಾತ್ಮನ್ಯೇವ=ತನ್ನಲ್ಲಿಯೇ, ಸಮಾಪ್ತ=ಪರ್ಯವಸಾನವಾದ, ಹೇಮ=ಸುವರ್ಣದ, ಮಹಿಮಾ=ಅತಿಶಯವುಳ್ಳ, ಮೇರುಃ=ಮೇರುಪರ್ವತವು, ವಿಧಿನಾ=ಬ್ರಹ್ಮನಿಂದ, ಕಸ್ಯ ಕೃತೇ=ಯಾವನ ಪ್ರಯೋಜನಕ್ಕಾ

ಗ, ಕೃತಃ=ನಿರ್ಮಿಸಲ್ಪಟ್ಟಿತೊ? ಮೇ=ನನಗೆ, ನಶೋಚತೆ=ಪ್ರಕಾಶಿಸುವುದಿಲ್ಲವು, (ತೋರುವುದಿಲ್ಲವು.) .... .... ... ॥ ೨೯ ॥

ತಾ॥ ಲೋಕದಲ್ಲಿ ಯಾರುವರು ತಮ್ಮ ಅದೃಷ್ಟವಶದಿಂದ ಲಬ್ಧವಾದ ವಸ್ತುವಿನಿಂದಲೇ ತೃಪ್ತರಾಗಿ ಸಂತೋಷಪಡುತ್ತಿರುವರೋ ಅಂಥವರುಗಳಿಗೆ ಆನಂದವು ಪೂರ್ಣವಾಗಿರುವದಲ್ಲದೆ ನ್ಯೂನವಾಗುವದೇ ಇಲ್ಲ. ಮಾತ್ರವಾದರೆ ಯಾವಾಗಲೂ ಧನಾರ್ಜನೆಯಲ್ಲಿಯೇ ಆಸಕ್ತವಾದ ಬುದ್ಧಿಯುಳ್ಳವರಾಗಿರುವರೋ ಅವರಿಗೆ ಆಶೆಯೆಂಬದು ಎಂದಿಗೂ ತೃಪ್ತವಾಗುವದೇ ಇಲ್ಲ. ಹೀಗಿರುವಲ್ಲಿ ಅಪಾರವಾದ ರತ್ನಸುವರ್ಣಾದಿ ಸಮೃದ್ಧಿಗಳಿಗೆ ಗಣಿಯಾಗಿರುವ ಆ ಲೋಕೋತ್ತರವಾದ ಮೇರುಪರ್ವತವನ್ನು ಸೃಷ್ಟಿಕರ್ತನಾದ ಬ್ರಹ್ಮನು ಯಾವ ಪ್ರಯೋಜನಕ್ಕಾಗಿ ನಿರ್ಮಿಸಿರುವನೋ ನಾನರಿಯೆನು. ಏಕೆಂದರೆ, ನಿತ್ಯತೃಪ್ತರಾದವರಿಗೆ ಅದರಿಂದ ಪ್ರಯೋಜನವಿಲ್ಲವು. ಧನಲುಬ್ಧರಿಗೆ ಅದೂ ಸಾಲದು. ಆದ್ದರಿಂದ ಉಪಯೋಗವಿಲ್ಲವು. ಎಂದರೆ ಪ್ರಾಪ್ತವಾದದ್ದರಲ್ಲಿ ತೃಪ್ತರಾಗಬೇಕೆಂದು ಭಾವವು. ॥೨೯॥

ಶ್ಲೋ॥ ಭಿಕ್ಷಾಹಾರಮದೈನ್ಯಮಪ್ರತಿಸುಖಂ ಭೀತಿಚ್ಛಿದಂ ಸರ್ವತೋದು
ರ್ಮಾತ್ಸರ್ಯಮದಾಭಿಮಾನಮಥನಂ ದುಃಖೌಘವಿಧ್ವಂಸನಂ। ಸರ್ವತ್ರಾ
ನ್ವಹಮಪ್ರಯತ್ನಸುಲಭಂ ಸಾಧುಪ್ರಿಯಂ ಪಾವನಂ ಶಂಭೋಸ್ಸತ್ರ
ಮವಾರ್ಯಮಕ್ಷಯನಿಧಿಂ ಶಂಸಂತಿ ಯೋಗೀಶ್ವರಾಃ ॥೩೦॥

ಟೀ॥ ಜೀವನೋಪಾಯವನ್ನು ಸಾಮಾಗ್ರೀ ಸಹಿತವಾಗಿ ತೋರಿಸುತ್ತಾನೆ— ಯೋಗೀಶ್ವರಾಃ=ಮುನಿಶ್ರೇಷ್ಠರು, ಭಿಕ್ಷಾ=ಭಿಕ್ಷಾನ್ನದ, ಆಹಾರಂ=ಭೋಜನವನ್ನು, ಅದೈನ್ಯಂ=ಕಾರ್ಪಣ್ಯರಹಿತವಾದದ್ದನ್ನಾಗಿಯೂ, ಅಪ್ರತಿಸುಖಂ=ಹೋಲಿಕೆಯಿಲ್ಲದ ಸುಖವನ್ನುಳ್ಳದ್ದಾಗಿ, ಸರ್ವತಃ=ಎಲ್ಲ ಕಡೆಯಲ್ಲಿಯೂ, ಭೀತಿಚ್ಛಿದಂ=ಭಯನಿವಾರಕವಾಗಿಯೂ, ದುರ್ಮಾತ್ಸರ್ಯ=ದುಷ್ಟರ ಅಸೂಯೆ, ಮದ=ದರ್ಪವು, ಅಭಿಮಾನ=ಅಹಂಕಾರ ಇವುಗಳನ್ನು, ಮಥನಂ=ನಾಶಮಾಡುವ, ದುಃಖ=ದುಃಖಗಳ, ಓಘ=ಸಮುದಾಯವನ್ನು, ವಿಧ್ವಂಸನಂ=ನಿವಾರಣೆಮಾಡುವ, ಸರ್ವತ್ರ=ಎಲ್ಲಾ ಕಡೆಯಲ್ಲಿಯೂ, ಅನ್ವಹಂ=ಪ್ರತಿದಿವಸದಲ್ಲಿಯೂ, ಅಪ್ರಯತ್ನ=ಪ್ರಯತ್ನವಿಲ್ಲದೆಯೆ, ಸುಲಭಂ=ಲಭ್ಯವಾದ, ಸಾಧು=ಸಜ್ಜನರಿಗೆ, ಪ್ರಿಯಂ=ಇಷ್ಟವಾದ, ಪಾವನಂ=ಪವಿತ್ರವಾದ, ಶಂಭೋಃ=ಈಶ್ವರನ, ಸತ್ರಂ=ತೃಪ್ತಿಸಾಧನವನ್ನಾಗಿಯೂ,

ಅವಾರ್ಯಂ=ನಿವಾರಿಸಲ್ಪಡದಿರುವ, ಅಕ್ಷಯಂ=ನಾಶರಹಿತವಾದ, ನಿಧಿಂ=ನಿಕ್ಷೇಪವನ್ನಾಗಿಯೂ, ಶಂಸಂತಿ=ಹೇಳುವರು. — ॥ ೩೦ ॥

ತಾ॥ ಭಿಕ್ಷಾನ್ನಭೋಜನಮಾಡುವದು, ದೈನ್ಯರಹಿತವಿರುವದಾಗಿಯೂ ಉತ್ತಮ ಸುಖವಾಗಿಯೂ, ಭಯರಹಿತವಾಗಿಯೂ, ಯಾವಾಗಲೂ ಎಲ್ಲೆಲ್ಲಿಯೂ ಪ್ರಯತ್ನಮಾಡದೆ ದೊರಿಯುವದಾಗಿಯೂ, ದರ್ಪಮದಾಹಂಕಾರಗಳಿಗೆ ಅನಾಸ್ಪದವಾಗಿಯೂ, ದುಃಖನಿವಾರಕವಾಗಿಯೂ, ಸಾಧುಗಳಿಗಿಷ್ಟವಾಗಿಯೂ, ದೋಷವಿಲ್ಲದ್ದಾಗಿಯೂ, ಯಾರಿಂದಲೂ ನಿವಾರಿಸಲ್ಪಡದಿರುವದಾಗಿಯೂ, ಕ್ಷಯವಾಗದಿರುವದಾಗಿಯೂ ಇರುವದರಿಂದ ಇವನ್ನು ಮಹಾಯೋಗಿಗಳು ಈಶ್ವರನಿಟ್ಟು ಇರುವ ಅನ್ನಸತ್ರವೆಂದು ಹೇಳುವರು. ನಿತ್ಯಸುಖಾಭಿಲಾಷಿಯಾದವರೆಲ್ಲರೂ ಇದನ್ನು ಅವಶ್ಯಕವಾಗಿ ಆಶ್ರಯಿಸಬೇಕೆಂದಾಶಯವು. .... .... ॥ ೩೧ ॥

## ಭೋಗಾಸ್ಥೈರ್ಯವರ್ಣನಾರಂಭವು.

ಶ್ಲೋ॥ ಭೋಗೇರೋಗಭಯಂಕುಲೇಚ್ಯುತಿಭಯಂವಿತ್ತೇನೃಪಾಲಾದ್ಭಯಂ
ಮಾನೇದೈನ್ಯಭಯಂಬಲೇರಿಪುಭಯಂರೂಪೇಜರಾಯಾಭಯಂ । ಶಾ
ಸ್ತ್ರೇವಾದಭಯಂಗುಣೇಖಲಭಯಂಕಾಯೇಕೃತಾಂತಾದ್ಭಯಂಸ
ರ್ವಂವಸ್ತುಭಯಾನ್ವಿತಂಭುವಿನೃಣಾಂವೈರಾಗ್ಯಮೇವಾಭಯಂ॥

ಟೀ॥ ಭೋಗಗಳು ಅಸ್ಥಿರಗಳೆಂದು ವರ್ಣಿಸದಿದ್ದರೆ ಯಾಚ್ಞಾದೈನ್ಯವನ್ನು ದೂಷಿಸಿದಂತಾಗುವದಿಲ್ಲವೆಂಬ ತಾತ್ಪರ್ಯದಿಂದ ಭೋಗಾಸ್ಥೈರ್ಯವನ್ನು ವ್ಯಕ್ತಪಡಿಸುತ್ತಾನೆ.—ಭೋಗೇ=ಸುಖಾನುಭವದಲ್ಲಿ, ರೋಗ=ರೋಗವದೆಸೆಯಿಂದ, ಭಯಂ=ಅಂಜಿಕೆಯು, ಕುಲೇ=ವಂಶದಲ್ಲಿ, ಚ್ಯುತಿಭಯಂ=ಭ್ರಷ್ಟತೆಯಿಂದಭಯವು. ವಿತ್ತೇ=ದ್ರವ್ಯದಲ್ಲಿ, ನೃಪಾಲಾತ್=ರಾಜನದೆಸೆಯಿಂದ, ಭಯಂ=ಭೀತಿಯು, ಮಾನೇ=ಅಭಿಮಾನದಲ್ಲಿ, ದೈನ್ಯಾತ್=ಕಾರ್ಪಣ್ಯದ ದೆಸೆಯಿಂದ, ಭಯಂ=ಭೀತಿಯು, ಬಲೇ=ಸಾಮರ್ಥ್ಯದಲ್ಲಿ, ರಿಪುಭಯಂ=ಶತ್ರುಗಳ ದೆಸೆಯಿಂದ ಭಯವು, ರೂಪೇ=ಸೌಂದರ್ಯದಲ್ಲಿ, ಜರಾಯಾಃ=ಮುಪ್ಪಿನ ದೆಸೆಯಿಂದ, ಭಯಂ=ಭೀತಿಯು, ಶಾಸ್ತ್ರೇ=ಶಾಸ್ತ್ರದಲ್ಲಿ, ವಾದಿನಃ=ಪ್ರತಿವಾದಿಯ ದೆಸೆಯಿಂದ ಭೀತಿಯು, ಗುಣೇ=ಸದ್ಗುಣದಲ್ಲಿ, ಖಲಭಯಂ=ನೀಚರ ದೆಸೆಯಿಂದ ಭಯವು, ಕಾಯೇ=ಶರೀರದಲ್ಲಿ, ಕೃತಾಂತಾತ್=ಮೃತ್ಯುವಿನದೆಸೆಯಿಂದ ಭೀತಿಯು, ಭುವಿ=ಭೂಮಿಯಲ್ಲಿ, ನೃಣಾಂ=ಮನುಷ್ಯರ ಸಂಬಂಧ

ವಾದ, ಸರ್ವಂ–ಎಲ್ಲಾ, ವಸ್ತು–ಸಾಮಗ್ರಿಯು, ಭಯಾನ್ವಿತಂ–ಭಯದಿಂದಕೂಡಿರುವದು, ವೈರಾಗ್ಯಮೇವ–ವೈರಾಗ್ಯವೊಂದೇ,ಅಭಯಂ–ಭಯರಹಿತವಾಗಿರುವದು.

ತಾ॥ ಬೇಕಾದ ಪದಾರ್ಥಗಳನ್ನು ತಿಂದು ಭೋಗಪಡೋಣವೆಂದರೆ ವಾತಪಿತ್ತ ಮುಂತಾದ್ದರಿಂದ ರೋಗವುಂಟಾಗುವದೆಂಬ ಭಯ, ಸದ್ವಂಶದಲ್ಲಿದ್ದರೆ ಸದಾಚಾರದಿಂದ ಭ್ರಷ್ಟನಾಗುವೆನೆಂದು ಭಯ. ಹಣವಂತನಾಗಿದ್ದರೆ ಅರಸಿನಿಂದ ಭಯ. ಮಾನವಂತನಾಗಿದ್ದರೆ ಎಲ್ಲಿ ದೈನ್ಯಪಡಬೇಕಾಗುವದೊ ಎಂಬ ಭಯವು. ಬಲಿಷ್ಠನಾಗಿದ್ದರೆ ಯಾವಾಗ ಶತ್ರುಗಳು ಬಂದು ಹೊಡೆಯುವರೋ ಎಂಬದಾಗಿ ಅಂಜಿಕೆ. ರೂಪವಂತನಾಗಿದ್ದರೆ ಮುಪ್ಪು ಬರುವದಲ್ಲಾ ಎಂದು ಭಯ. ಶಾಸ್ತ್ರವನ್ನೋದಿಕೊಂಡಿದ್ದರೆ ಸಭೆಯಲ್ಲಿ ಪ್ರತಿವಾದಿಗಳು ಜಯಿಸುವರೆಂಬ ಭಯ. ಗುಣವಂತನಾಗಿದ್ದರೆ ದುಷ್ಟರು ಏನು ಕೆಡಿಸುವರೋ ಎಂಬದಾಗಿ ಭಯ. ಶರೀರಕ್ಕೆ ಸಾಯುವೆನಲ್ಲಾ ಎಂಬದಾಗಿ ಭಯ. ಆದ್ದರಿಂದ ಲೋಕದಲ್ಲಿ ಸಮಸ್ತ ವಸ್ತುವೂ ಭಯದಿಂದೊಡಗೂಡಿರುವದು. ವೈರಾಗ್ಯ ಒಂದುಮಾತ್ರ ಭಯವಿಲ್ಲದ್ದಾಗಿರುವದು. ಆದಕಾರಣ ಶ್ರೇಯಸ್ಕರವಾದ ಆ ವೈರಾಗ್ಯವನ್ನೇ ಆಶ್ರಯಿಸಬೇಕು. .... .... ॥೩೦॥

ಶ್ಲೋ॥ ಆಕ್ರಾಂತಂಮರಣೇನಜನ್ಮ ಜರಸಾಚಾತ್ಯುಜ್ಜ್ವಲಂಯೌವನಂ
ಸಂತೋಷೋಧನಲಿಪ್ಸಯಾಶಮಸುಖಂಪ್ರೌಢಾಂಗನಾವಿಭ್ರಮೈಃ।
ಲೋಕೈರ್ಮತ್ಸರಿಭಿರ್ಗುಣಾವನಭುವೋವ್ಯಾಳೈರ್ನೃಪಾದುರ್ಜನೈ
ರಸ್ಥೈರ್ಯೇಣವಿಭೂತಯೋಪ್ಯುಪಹತಾಗ್ರಸ್ತಂನಕಿಂಕೇನವಾ ॥

ಟೀ॥ ಉಪಕ್ರಮಿಸಿದ ಭೋಗಾಸ್ಥೈರ್ಯ ವರ್ಣನವನ್ನು ಬೇರೆಬೇರೆ ರೀತಿಯಿಂದ ವರ್ಣಿಸುತ್ತಾನೆ—ಜನ್ಮ=ಉತ್ಪತ್ತಿಯು, ಮರಣೇನ–ಸಾವಿನಿಂದ, ಆಕ್ರಾಂತಂ=ಗ್ರಸ್ತವಾಗಿರುವದು, ಅತ್ಯುಜ್ಜ್ವಲಂ–ಅತ್ಯಂತವಾಗಿ ಹೊಳೆವ, ಯೌವನಂ=ಪ್ರಾಯವು, ಜರಸಾ=ಮುಪ್ಪಿನಿಂದ, ಆಕ್ರಾಂತಂ=ಆಕ್ರಮಿಸಲ್ಪಟ್ಟಿರುವದು, ಸಂತೋಷಃ–ಆನಂದವು, ಧನಲಿಪ್ಸಯಾ=ಧನಾಕಾಂಕ್ಷೆಯಿಂದ, ಆಕ್ರಾಂತಃ–ಗ್ರಸ್ತವಾಗಿರುವದು, ಶಮಸುಖಂ–ಇಂದ್ರಿಯನಿಗ್ರಹದಿಂದುಂಟಾದ ಹರ್ಷವು, ಪ್ರೌಢ=ಕುಶಲರಾದ, ಅಂಗನಾ=ಸುದತಿಯರ, ವಿಭ್ರಮೈಃ=ವಿಲಾಸಗಳಿಂದ, (ಸುಂದರವಾದ ಚೇಷ್ಟೆಗಳಿಂದ.) ಆಕ್ರಾಂತಂ=ಆಕ್ರಮಿಸಲ್ಪಟ್ಟಿರುವದು, ಗುಣಾಃ=ವಿದ್ಯಾವಿನಯಾದಿ ಗುಣಗಳು, ಮತ್ಸರಿಭಿಃ–ಅಸೂಯಾಪರರಾದ,ಲೋಕೈಃ=ಜನಗಳಿಂದ, ಗ್ರಸ್ತಾಃ–

ಆಕ್ರಮಿಸಲ್ಪಟ್ಟಿರುವವು. ವನಭುವಃ=ಅರಣ್ಯಭೂಮಿಗಳು, ವ್ಯಾಳೈಃ=ದುಷ್ಟಗಜಂತುಗಳಿಂದ(ಅಥವಾಸರ್ಪಗಳಿಂದ)ಗ್ರಸ್ತಾಃ=ಆಕ್ರಮಿಸಲ್ಪಟ್ಟಿರುವವು,ನೃಪಾಃ=ಅರಸರು, ದುರ್ಜನೈಃ=ಕ್ಷುದ್ರಜನಗಳಿಂದ, ಆಕ್ರಾಂತಾಃ=ಆಕ್ರಮಿಸಲ್ಪಟ್ಟಿರುವರು, ವಿಭೂತಯಃ=ಸಂಪತ್ತುಗಳು, ಅಸ್ಥೈರ್ಯೇಣ=ಚಾಪಲ್ಯದಿಂದ, ಉಪಹತಾಃ=ದೂಷಿತಗಳಾಗಿರುವವು, ಕಿಂ=ಯಾವ ವಸ್ತುವು, ಕೇನವಾ=ಯಾವುದರಿಂದ,ನಗ್ರಸ್ತಂ=ಆಕ್ರಮಿಸಲ್ಪಡಲಿಲ್ಲವು. ... .... ॥ ೩೭ ॥

ತಾ॥ ಹುಟ್ಟು, ಸಾವಿನಿಂದ ಕೂಡಿದ್ದು, ಯೌವನಕ್ಕೆ ಮುಪ್ಪು ಮೃತ್ಯುವು, ಸಂತೋಷಕ್ಕೆ ಧನದಾಶೆಯು ಶತ್ರುವು, ಇಂದ್ರಿಯ ನಿಗ್ರಹದಿಂದುಂಟಾಗಿರುವ ಶಮಸುಖವನ್ನು ಕುಶಲರಾದ ಕಾಮಿನೀಯರ ಅಂಗವಿಲಾಸಗಳು ನಷ್ಟಪಡಿಸುವವು. ಈರ್ಷ್ಯಾಪರರಾದ ಜನರು ಸದ್ಗುಣಗಳನ್ನು ಹಾಳುಮಾಡುವರು. ದುಷ್ಟಗಜಗಳು ಮತ್ತು ಸರ್ಪಗಳು ಅರಣ್ಯಭೂಮಿಗಳನ್ನು ನಾಶಮಾಡುವವು. ಅರಸರು ದುಷ್ಟರಿಂದಾಕ್ರಮಿಸಲ್ಪಟ್ಟಿರುವರು. ಚಾಪಲ್ಯದಿಂದ ಸಂಪತ್ತುಗಳೂ ಗ್ರಸ್ತಗಳಾಗಿರುವವು. ಆದ್ದರಿಂದ ಲೋಕದಲ್ಲಿ ಸರ್ವವೂ ಒಂದೊಂದು ದುಷ್ಟವಸ್ತುಗಳಿಂದ ಕೂಡಿಯೇ ಇರುವದು. ಆದಕಾರಣ ವೈರಾಗ್ಯವನ್ನು ಬಿಟ್ಟು ಯಾವದರಲ್ಲಿಯೂ ನಂಬಿಕೆಯೂ ವಿಶ್ವಾಸವೂ ಮಾಡಕೂಡದೆಂದು ಭಾವವು. ॥೩೭॥

ಶ್ಲೋ॥ಆಧಿವ್ಯಾಧಿಶತೈರ್ಜನಸ್ಯವಿವಿಧೈರಾರೋಗ್ಯಮುನ್ಮೂಲ್ಯತೇಲಕ್ಷ್ಮೀ
ರ್ಯತ್ರಪತಂತಿತತ್ರವಿವೃತದ್ವಾರಾಇವವ್ಯಾಪದಃ ॥ ಜಾತಂಜಾತ
ಮವಶ್ಯಮಾಶುವಿವಶಂಮೃತ್ಯುಃಕರೋತ್ಯಾತ್ಮ ಸಾತ್ತತ್ಕಿಂತೇನ
ನಿರಂಕುಶೇನವಿಧಿನಾಯನ್ನಿರ್ಮಿತಂಸುಸ್ಥಿರಂ ॥೩೮॥

ಟೀ॥ ಪುನಃ ಶ್ರೋತೃಗಳಿಗೆ ಹಿಂದೆ ಹೇಳಿದ ಅರ್ಥದಲ್ಲಿ ನಂಬಿಕೆಯುಂಟಾಗುವದಕ್ಕೆ ಮತ್ತೊಂದುರೀತಿಯಿಂದ ಹೇಳುತ್ತಾನೆ—ವಿವಿಧೈಃ=ನಾನಾಪ್ರಕಾರಗಳಾದ, ಆಧಿ=ಮನೋವ್ಯಥೆಗಳು, ವ್ಯಾಧಿ-ಶಾರೀರ ರೋಗಗಳು ಇವುಗಳ, ಶತೈಃ=ನೂರುಗಳಿಂದ, ಜನಸ್ಯ=ಲೋಕದ, ಆರೋಗ್ಯಂ=ದೇಹದ ಸ್ವಾಸ್ಥ್ಯವು, ಉನ್ಮೂಲ್ಯತೇ=ನಿರ್ಮೂಲವಾಡಲ್ಪಡುವದು, ಯತ್ರ=ಯಾವ ಪುರುಷನಲ್ಲಿ, ಲಕ್ಷ್ಮೀಃ=ಸಂಪತ್ತು, (ತಿಷ್ಠತಿ=ಇರುವದೊ) ತತ್ರ=ಆ ಪುರುಷನಲ್ಲಿ, ವ್ಯಾಪದಃ=ನಾನಾವಿಧವಾದ ಉಪದ್ರವಗಳು, ವಿವೃತ=ತೆಗೆಯಲ್ಪಟ್ಟ, ದ್ವಾರಾಃ=ಬಾಗಿಲುಗಳುಳ್ಳವುಗಳಾಗಿ, ಪತಂತಿ=ಬೀಳುವವು, ಮೃತ್ಯುಃ=ಯಮನು, ಜಾತಂಜಾತಂ=ಹುಟ್ಟಿಹುಟ್ಟಿದ, ವಿವಶಂ=ದಿಕ್ಕಿಲ್ಲದ ಪ್ರಾಣಿಯನ್ನು, ಅವಶ್ಯಂ=ಕ್ಲಿಪ್ತವಾಗಿಯೂ, ಆಶು=ಜಾಗ್ರತೆಯಾಗಿ

ಯೋ, ಆತ್ಮಸಾತ್=ತನ್ನ ಅಧೀನವನ್ನು, ಕರೋತಿ=ಮಾಡಿಕೊಳ್ಳುವನು, ತತ್=ಆದಕಾರಣ, ತೇನ=ಪ್ರಸಿದ್ಧನಾದ, ನಿರಙ್ಕುಶೇನ=ತಡೆಯಿಲ್ಲದ, ವಿಧಿನಾ=ಬ್ರಹ್ಮನಿಂದ, ಯತ್=ಯಾವವಸ್ತುವು ನಿರ್ಮಿತಂ=ನಿರ್ಮಿಸಲ್ಪಟ್ಟಿರುವದೋ, ತತ್=ಆ ವಸ್ತುವು, ಸುಸ್ಥಿರಂ ಕಿಂ=ಸ್ಥಿರವಾಗಿರುವದೇ ಏನು? ... ||೩೩||

ತಾ॥ ಲೋಕದಲ್ಲಿ ಜನರ ಆರೋಗ್ಯವನ್ನು ಮನೋವ್ಯಥೆಗಳು ಮತ್ತು ಜ್ವರ ಮೊದಲಾದ ಉಪದ್ರವಗಳು ಹಾಳುಮಾಡುವವು. ಮತ್ತು ಯಾವ ಮನುಷ್ಯನಲ್ಲಿ ಸಂಪತ್ತಿರುವದೋ ಆವನಿಗೆ ಸಹಸ್ರಶಃ ವಿಪತ್ತುಗಳುಂಟಾಗುವವು. ಇದಲ್ಲದೆ ಹುಟ್ಟಿದ ಪ್ರಾಣಿಗಳನ್ನೆಲ್ಲಾ (ಕೋಳಿಯು ಕಾಳುಗಳನ್ನು ಆದುತಿನ್ನುವ ಹಾಗೆ) ಯಮನು ಬಾಯಿಯಲ್ಲಿ ಹಾಕಿಕೊಳ್ಳುತ್ತಿರುವನು. ಆದರೆ ಸೃಷ್ಟಿಕರ್ತನಾದ ಬ್ರಹ್ಮನು ಧೈರ್ಯವಾಗಿ ಯಾವ ವಸ್ತುವನ್ನಾದರೂ ಸ್ಥಿರವಾಗಿರುವಂತೆ ಸೃಷ್ಟಿಮಾಡಿರುವನು ? ಇಲ್ಲವು, ಹೀಗೆ ಸುತರಾಂ ಅಶಾಶ್ವತಗಳಾದುದರಿಂದಲೇ ಭೋಗಗಳಲ್ಲಿ ಆಸಕ್ತನಾಗಬಾರದು. .... .... ||೩೩||

ಶ್ಲೋ॥ ಭೋಗಾಸ್ತುಂಗತರಂಗಭಂಗತರಲಾಃಪ್ರಾಣಾಃಕ್ಷಣಧ್ವಂಸಿನಸ್ತೋ-
ಕಾನ್ಯೇವದಿನಾನಿಯೌವನಸುಖಸ್ಫೂರ್ತಿಃಪ್ರಿಯಾಸುಸ್ಥಿತಾ ॥ ತ-
ತ್ಸಂಸಾರಮಸಾರಮೇವನಿಖಿಲಂ ಬುದ್ಧ್ವಾಬುಧಾಬೋಧಕಾಲೋ-
ಕಾನುಗ್ರಹಪೇಶಲೇನಮನಸಾಯತ್ನಃಸಮಾಧೀಯತಾಂ ॥೩೪॥

ಟೀ॥ ಭೋಗಗಳು ಅಶಾಶ್ವತಗಳೆಂದು ಹೇಳುವ ಮಾರ್ಗದಿಂದ ಕರ್ತವ್ಯವನ್ನು ತೋರಿಸುತ್ತಾನೆ—ಭೋಗಾಃ=ಹೂವು ಗಂಧ ವನಿತೆ ಮೊದಲಾದ ಭೋಗಗಳು, ತುಂಗತರಂಗ=ದೊಡ್ಡ ಕಲ್ಲೋಲಗಳ, ಭಂಗ=ಸಣ್ಣ ಅಲೆಗಳಂತೆ, ತರಲಾಃ=ಚಪಲಗಳಾದವುಗಳು, ಪ್ರಾಣಾಃ=ಪ್ರಾಣವಾಯುಗಳು, ಕ್ಷಣ=ಕ್ಷಣಕಾಲದಲ್ಲಿ, ಧ್ವಂಸಿನಃ=ನಾಶವುಳ್ಳವುಗಳು, ಯೌವನ=ಪ್ರಾಯದಲ್ಲಿ, ಸುಖ=ವಿಷಯಸುಖಗಳ, ಸ್ಫೂರ್ತಿಃ=ಪ್ರಕಾಶವು, ಸ್ತೋಕಾನಿ=ಅಲ್ಪವಾದ, ದಿನಾನ್ಯೇವ=ದಿವಸಗಳೇ, (ಅಲ್ಪ ದಿವಸಗಳಲ್ಲಿಯೆ,) ಪ್ರಿಯಾಸು=ವಲ್ಲಭೆಯು, ಸುಸ್ಥಿತಾಃ=ಸ್ಥಿರವಾಗಿರುವವೆ? ತತ್=ಆದ ಕಾರಣದ್ದೆಸೆಯಿಂದ, ಬೋಧಕಾಃ=ಹಿತೋಪದೇಶಕರಾದ, ಬುಧಾಃ=ಎಲೈ ವಿದ್ವಾಂಸರುಗಳಿರಾ, ನಿಖಿಲಂ=ಸಮಸ್ತವಾದ, ಸಂಸಾರಂ=ಭೋಗಾದಿರೂಪ ಸಂಸಾರವನ್ನು, ಅಸಾರಮೇವ=ಅಶಾಶ್ವತವಾದದ್ದನ್ನಾಗಿಯೇ, ಬುಧ್ವಾ=ಅರಿತು, ಲೋಕ=ಜನಗಳಿಗೆ, ಅನುಗ್ರಹ=ಹಿತಾಚರಣೆಯಲ್ಲಿ, ಪೇಶಲೇನ=ಕುಂದದವಾದ, ಮನಸಾ=ಚಿತ್ತದಿಂದ, ಪ್ರಯತ್ನಃ=ಉದ್ಯೋಗವು, ಸಮಾಧೀಯತಾಂ=ಮಾಡಲ್ಪಡಲಿ.॥೩೪॥

ತಾ॥ ಹೂವು, ಹಣ್ಣು, ಹೆಣ್ಣು ಮೊದಲಾದ ವಿಷಯ ಸುಖಗಳು ಬಹು ಚಪಲಗಳಾದವು. ಪ್ರಾಣಗಳಾದರೂ ಕ್ಷಣಕಾಲದಲ್ಲಿ ನಾಶವಾಗಿ ಹೋಗುವವು. ಪ್ರಾಯದ ಸಂರಂಭವು ಕೆಲವು ದಿವಸಗಳಿರತಕ್ಕದ್ದಲ್ಲದೆ ಶಾಶ್ವತವಲ್ಲವು. ಅನುಕೂಲಳಾಗಿರುವ ಹೆಂಡತಿಯೂ ಖಂಡಿತವಾಗಿ ಸ್ಥಿರವಲ್ಲ. ಆದ್ದರಿಂದ ಜನರಿಗೆ ಹಿತೋಪದೇಶ ಮಾಡುವ ಪಂಡಿತರುಗಳಿರಾ! ಈ ಸಂಸಾರವನ್ನು ಸುತರಾಂ ಅಶಾಶ್ವತವೆಂದರಿತು ಲೋಕಾನುಗ್ರಹ ಮಾಡಬೇಕೆಂಬ ಬುದ್ಧಿಯಿಂದ ಆತ್ಮಧ್ಯಾನದಲ್ಲಿಯೇ ಪ್ರಯತ್ನವನ್ನು ಮಾಡಿರಿ, ಏಕೆಂದರೆ, ಶ್ರೇಷ್ಠರು ಯಾವ ಯಾವ ಕಾರ್ಯವನ್ನು ಮಾಡುವರೋ ಅದನ್ನೇ ಇತರರೂ ಮಾಡುವರು. ಅದನ್ನೇ ಪ್ರಮಾಣವೆಂಬರು. ಅದನ್ನೇ ಅನುಸರಿಸುವರಾದ್ದರಿಂದ ನಿಮ್ಮಗಳಿಗಿದು ಅವಶ್ಯಕರ್ತವ್ಯವಾಗಿರುವುದು. .... .... .... ॥೩೪॥

ಶ್ಲೋ॥ ಭೋಗಾಮೇಘವಿತಾನಮಧ್ಯವಿಲಸತ್ಸೌದಾಮಿನೀಚಂಚಲಾಆಯು
ರ್ವಾಯುವಿಘಟ್ಟಿತಾಬ್ಜಪಟಲೀಲೀನಾಂಬುವದ್ಭಂಗುರಂ ॥ ಲೋ
ಲಾಯೌವನಲಾಲಸಾಸ್ತನುಭೃತಾಮಿತ್ಯಾಕಲಯ್ಯದ್ರುತಂಯೋ
ಗೇಧೈರ್ಯಸಮಾಧಿಸಿದ್ಧಿಸುಲಭೇಬುದ್ಧಿಂವಿದಧ್ವಂಬುಧಾಃ ॥೩೫॥

ಟೀ॥ ನಂಬಿಕೆಗಾಗಿ ಬೇರೆ ಯುಕ್ತಿಯಿಂದ ಹೇಳುತ್ತಾನೆ— ತನುಭೃತಾಂ=ದೇಹಧಾರಿಗಳಿಗೆ, ಭೋಗಾಃ=ವಿಷಯಸುಖಗಳು, ಮೇಘವಿತಾನ=ಮೇಘಸಮುದಾಯದ, ಮಧ್ಯ=ನಡುವೆ, ವಿಲಸತ್=ಹೊಳೆಯುವ, ಸೌದಾಮಿನೀ=ಮಿಂಚಿನಂತೆ, ಚಂಚಲಾಃ=ಚಪಲಗಳಾಗಿರುವವು, ಆಯುರ್=ಆಯುಸ್ಸು, ವಾಯು=ಗಾಳಿಯಿಂದ, ವಿಘಟ್ಟಿತ=ಹೊಡೆಯಲ್ಪಟ್ಟ, ಅಬ್ಜ=ಕಮಲಗಳ, ಪಟಲೀ=ಗುಂಪಿನಲ್ಲಿ, ಲೀನ=ಸೇರಿರುವ, ಅಂಬುವತ್=ಉದಕದಂತೆ, ಭಂಗುರಂ=ಕ್ಷಣಿಕವಾದದ್ದು, ಯೌವನೇ=ಪ್ರಾಯದಲ್ಲಿ=ಲಾಲಸಾಃ=ವಿಷಯಾಭಿಲಾಷೆಗಳು, ಲೋಲಾಃ=ಚಪಲಗಳಾದವುಗಳು, ಬುಧಾಃ=ಎಲೈ ವಿದ್ವಾಂಸರುಗಳಿರಾ, ದ್ರುತಂ=ಜಾಗ್ರತೆಯಾಗಿ, ಧೈರ್ಯ=ಧೀರತ್ವ, ಸಮಾಧಿ=ಚಿತ್ತಸ್ಥೈರ್ಯ ಇವುಗಳ. ಸಿದ್ಧಿ=ಲಾಭದಿಂದ, ಸುಲಭೇ=ಸುಲಭ್ಯವಾದ, ಯೋಗೇ=ಬ್ರಹ್ಮಧ್ಯಾನದಲ್ಲಿ, ಬುದ್ಧಿಂ=ಪ್ರಜ್ಞೆಯನ್ನು, ವಿದಧ್ವಂ=ಮಾಡಿರಿ. .... ... ॥೩೫॥

ತಾ॥ ವಿಷಯಸುಖಗಳು ವರ್ಷಾಕಾಲದಲ್ಲಿ ಮೇಘಗಳ ಮಧ್ಯದಲ್ಲಿ ಹೊಳೆವ ಮಿಂಚಿನಂತೆ ಕ್ಷಣಕಾಲವಿರುವುದಿಲ್ಲವು. ಜೀವಿತಕಾಲವಾದರೋ

ಗಾಳಿಯಿಂದ ಚಲಿಸುತ್ತಿರುವ ಕಮಲ ಪತ್ರದಲ್ಲಿರುವ ಜಲಬಿಂದುವಿನಂತೆ ಅತಿ ಚಪಲವಾದದ್ದು. ಪ್ರಾಯದಲ್ಲಿ ಉಂಟಾಗುವ ವಿಷಯಾಭಿಲಾಷೆಗಳೂ ಅತಿ ಚಂಚಲಗಳು ಎಂದು ನಿಶ್ಚೈಸಿ ಎಲೈ ಪಂಡಿತರುಗಳಿರಾ । ಜಾಗ್ರತೆಯಾಗಿ ಧೈರ್ಯವನ್ನು, ಚಿತ್ತಸ್ಥೈರ್ಯವನ್ನು ಹೊಂದಿ, ತರುವಾಯು ಸುಲಭವಾದ ಬ್ರಹ್ಮಧ್ಯಾನದಲ್ಲಿ ಬುದ್ಧಿಯನ್ನು ಮಾಡಿರಿ .... ॥೩೫॥

ಶ್ಲೋ॥ ಆಯುಃಕಲ್ಲೋಲಲೋಲಂ ಕತಿಪಯದಿವಸಸ್ಥಾಯಿನೀಯೌವನ
ಶ್ರೀರರ್ಥಾಸ್ಸಂಕಲ್ಪಕಲ್ಪಾಘನ ಸಮಯತಟಿದ್ವಿಭ್ರಮಾಭೋಗ
ಪೂಗಾಃ ॥ ಕಂಠಾಶ್ಲೇಷೋಪಗೂಢಂತದಪಿಚನಚಿರಂಯತ್ಪ್ರಿ
ಯಾಭಿಃಪ್ರಣೀತಂಬ್ರಹ್ಮಣ್ಯಾಸಕ್ತಚಿತ್ತಾಭವತಭವ ಭಯಾಂ
ಭೋಧಿಪಾರಂತರೀತುಂ .... .... ॥೩೬॥

ಟೀ॥ ಆಯುಃ=ಜೀವಿತಕಾಲವು, ಕಲ್ಲೋಲಲೋಲಂ=ಅಲೆಯಂತೆ ಚಪಲವಾದದ್ದು, ಯೌವ್ವನಶ್ರೀಃ=ಪ್ರಾಯದ ಸೊಬಗು, ಕತಿಪಯದಿವಸಸ್ಥಾಯಿನೀ=ಕೆಲವು ದಿವಸಗಳಿರತಕ್ಕದ್ದು, ಅರ್ಥಾಃ=ವಿಭವಗಳು, ಸಂಕಲ್ಪಕಲ್ಪಾಃ=ಮನೋರಥಗಳೊಡನೆ ಸಮಾನವಾದವುಗಳು, ಭೋಗಾಃ=ವಿಷಯಸುಖ ಸಮುದಾಯಗಳು, ಘನಸಮಯ=ಮಳೆಗಾಲದ, ತಟಿತ್=ಮಿಂಚಿನ, ವಿಭ್ರಮಾಃ=ವಿಲಾಸವುಳ್ಳವು, ಗಳು, ಪ್ರಿಯಾಭಿಃ=ಪ್ರೌಢಾಂಗನೆಯರಿಂದ, ಯತ್=ಯಾವ ಕಂಠಾಶ್ಲೇಷೋಪಗೂಢಂ=ಕಂಠಗ್ರಹಣದಿಂದುಂಟಾದ ಆಲಿಂಗನವು, ಪ್ರಣೀತಂ=ಮಾಡಲ್ಪಡುವದೋ ತದಪಿಚ=ಅದೂ, ನಚಿರಂ=ಬಹುಕಾಲವಿರುವದಿಲ್ಲವು, (ಬುಧಾಃ=ಎಲೈಪಂಡಿತರುಗಳಿರಾ) ಭವ=ಸಂಸಾರದ್ದೆಸೆಯಿಂದುಂಟಾದ,ಭಯ=ಭೀತಿಯೆಂಬ,ಅಂಭೋಧಿ=ಸಮುದ್ರದ, ಪಾರಂ=ತೀರವನ್ನು, ತರೀತುಂ=ದಾಟುವದಕ್ಕೆ, ಬ್ರಹ್ಮಣಿ=ಬ್ರಹ್ಮನಲ್ಲಿ,ಆಸಕ್ತಚಿತ್ತಾಃ=ಸಂಬಂಧಿಸಿರುವ ಮನಸ್ಸುಳ್ಳವರು,ಭವತ ಆಗಿರಿ, ... ॥೩೬॥

ತಾ॥ ಪ್ರಾಣಿಯ ಜೀವಿತಕಾಲವು ಅಲೆಗಳಂತೆ ಅತಿ ಚಂಚಲವು. ಪ್ರಾಯದ ಸೊಬಗು ಕೆಲವು ದಿವಸ ಮಾತ್ರ ಇರತಕ್ಕದ್ದು, ಧನಧಾನ್ಯಾದಿ ವಿಭವಗಳು ಮನಸ್ಸಿನಲ್ಲುಂಟಾಗುವ ಸಂಕಲ್ಪಗಳಂತೆ ಕ್ಷಣಿಕಗಳು. ವಿಷಯ ಸುಖಗಳೂ ಮಳೆಗಾಲದ ಮಿಂಚಿನಂತೆ ಅತಿ ಚಂಚಲಗಳು, ಕುಶಲರಾದ ಕಾಮಿನಿಯರ ಕಂಠಾಲಿಂಗನವು ಕೆಲವು ಕಾಲವಿರುವದಲ್ಲದೆ ಶಾಶ್ವತವಲ್ಲವು. ಆದಕಾರಣವೇ ಎಲೈ, ವಿವೇಕಶಾಲಿಗಳಾದ ವಿದ್ವಾಂಸರುಗಳಿರಾ ಸಂಸಾರ ಸಾಗರವನ್ನು ದಾಟಲಿಕ್ಕಾಗಿ ಬ್ರಹ್ಮಧ್ಯಾನ ಪರಾಯಣರಾಗಿರಿ. ॥೩೬॥

ಶ್ಲೋ ॥ ಕೃಚ್ಛ್ರೇಣಾಮೇಧ್ಯಮಧ್ಯೇನಿಯಮಿತತನುಭಿಸ್ಸ್ಥೀಯತೇಗ
ರ್ಭವಾಸೇಕಾಂತಾವಿಶ್ಲೇಷದುಃಖವ್ಯತಿಕರ ವಿಷಮೋಯೌವನೇ
ಚೋಪಭೋಗಃ ॥ ವಾಮಾಕ್ಷೀಣಾಮವಜ್ಞಾವಿಹಸಿತವಸತಿರ್ವೃ
ದ್ಧಭಾವೋಽಪ್ಯಸಾಧುಸ್ಸಂಸಾರೇರೇ ಮನುಷ್ಯಾವದತಯದಿಸುಖಂ
ಸ್ವಲ್ಪಮಪ್ಯಸ್ತಿ ಕಿಂಚಿತ್ .... .... ॥೩೭॥

ಟೀ॥ ಲೋಕದಲ್ಲೆಲ್ಲರೂ ಸಂಸಾರದಲ್ಲಾಸಕ್ತರಾಗಿರುವರು ಆದ್ದರಿಂದ ಅ ದೆಂತು ನಿಂದ್ಯವೆಂದರೆ ಮೊದಲಿನಿಂದ ಅವನ್ನು ವಿಚಾರಮಾಡಲು ಸುಖಲೇಶವೂ ಇ ಲ್ಲೆಂದು ಹೇಳುತಾನೆ—ಗರ್ಭವಾಸೇ=ತಾಯಿಯ ಗರ್ಭದೊಳಗೆ ವಾಸಮಾಡುವಕಾ ಲದಲ್ಲಿ, ಅಮೇಧ್ಯಮಧ್ಯೇ=ಅಮೇಧ್ಯದ ನಡುವೆ, ನಿಯಮಿತತನುಭಿಃ=ಸಂಕೋಚಮಾ ಡಲ್ಪಟ್ಟ ಅವಯವಗಳುಳ್ಳವರಿಂದ, ಕೃಚ್ಛ್ರೇಣ=ಬಹುಕಷ್ಟದಿಂದ, ಸ್ಥೀಯತೇ=ಇರೋ ಣವಾಗುತ್ತದೆ, ಯೌವ್ವನೇ=ಪ್ರಾಯದಲ್ಲಿಯೂ, ಉಪಭೋಗಃ=ಸಂಭೋಗವು ಕಾಂತಾ=ಪ್ರಿಯಳ, ವಿಶ್ಲೇಷ=ವಿಯೋಗದಿಂದುಂಟಾದ, ದುಃಖ=ವ್ಯಸನದ, ವ್ಯತಿಕರ= ಸಂಬಂಧದಿಂದ, ವಿಷಮಃ=ಘೋರವಾದದ್ದು, (ಭವತಿ=ಆಗುವದು,) ವಾಮಾಕ್ಷೀ ಣಾಂ=ಸುಂದರಿಯರ, ಅವಜ್ಞಾ=ತಿರಸ್ಕಾರದಿಂದ, ವಿಹಸಿತ=ಹಾಸ್ಯಮಾಡಲ್ಪಟ್ಟ ವಸತಿಃ=ಇರುವಿಕೆಯುಳ್ಳ, ವೃದ್ಧಭಾವೋಽಪಿ=ಮುಪ್ಪು, ಅಸಾಧುಃ=ಅಸಂಗತವಾ ದದ್ದು, ರೇಮನುಷ್ಯಾಃ=ಎಲೈ ಜನಗಳಿರಾ, ಸಂಸಾರೆ=ಜನನಮರಣಪ್ರವಾಹರೂಪ ವಾದ ಸಂಸಾರದಲ್ಲಿ, ಸ್ವಲ್ಪಂ=ತುಚ್ಛವಾದ, ಕಿಂಚಿತ್=ಅತ್ಯಲ್ಪವಾದರೂ, ಸುಖಂ= ಸುಖವು, ಅಸ್ತಿಯದಿ=ಇರುವದಾದರೆ, ವದತ=ಹೇಳಿರಿ. .... ॥೩೭॥

ತಾ॥ ಮೊದಲು ತಾಯಿಯ ಗರ್ಭದೊಳಗೆ ಅಮೇಧ್ಯ ಮಧ್ಯದಲ್ಲಿ ಅವಯವಗಳನ್ನೆಲ್ಲಾ ಅಡಗಿಸಿಕೊಂಡು ಬಹು ದುಃಖದಿಂದ ವಾಸಮಾಡಬೇ ಕು. ತರುವಾಯ ಪ್ರಾಯದಲ್ಲಿಯೂ, ದಾರಾಪುತ್ರಾದಿ ವಿಯೋಗಗಳಿಂ ದುಂಟಾದ ವ್ಯಥೆಗಳಿಂದ ಕ್ಲೇಶಪಡಬೇಕು. ಬಳಿಕ ಅಶೇಷರಿಗೂ ಅಸ ಹ್ಯಕರವಾಗಿಯೂ, ಅಂಗನೆಯರಿಂದ ಹೀನವಾದ ಮಾತುಗಳನ್ನು ಕೇಳುತ್ತಾ ಲೂ, ಹಾಸ್ಯಮಾಡಿಸಿಕೊಳ್ಳುತ್ತಲೂ ಇರುವ ಮುಪ್ಪು ಸರ್ವಥಾ ದುಃಖಕರ ವಾದದ್ದು. ಆದ್ದರಿಂದ ಎಲೈ ಸೀಚಮನುಜರುಗಳಿರಾ ? ಜನನಮರಣ ಪ್ರ ವಾಹರೂಪವಾಗಿರುವ ಈ ಹಾಳು ಸಂಸಾರದಲ್ಲಿ ಲೇಶವಾದರೂ ಸುಖವುಂ ಟೆ ? ಹೇಳಿರಿ ಇಲ್ಲವಲ್ಲಾ. ಏಕೆ ಇದರಲ್ಲಿ ವ್ಯಥೆಪಡುವಿರಿ, ಪುನರಾ ವೃತ್ತಿರಹಿತವಾದ ಬ್ರಹ್ಮಾನಂದ ಪ್ರಾಪ್ತಿಗಾಗಿಯೇ ಪ್ರಯತ್ನಮಾಡಿರಿ.

ಶ್ಲೋ ॥ ವ್ಯಾಘ್ರೀವತಿಷ್ಠತಿಜರಾಪರಿತರ್ಜಯಂತೀರೋಗಾಶ್ಚಶತ್ರವಇವ

ಪ್ರಹರಂತಿದೇಹಂ॥ಆಯುಃಪರಿಸ್ರವತಿಭಿನ್ನಘಟಾದಿವಾಂಭೋಲೋ
ಕಸ್ತಥಾಪ್ಯಹಿತಮಾಚರತೀತಿಚಿತ್ರಂ .... ॥೪೮॥

ಟೀ॥ ಜನರು ತಮಗೆ ವಿಪತ್ತು ಸಿದ್ಧವಾಗಿದೆಯೆಂದು ತಿಳಿದಿದ್ದರೂ ಜಾಗರೂಕರಾಗುವುದಿಲ್ಲವು, ಇದು ಅತ್ಯಂತಾಶ್ಚರ್ಯವೆಂದು ಹೇಳುತ್ತಾನೆ—ಜರಾ=ಮುಪ್ಪು. ವ್ಯಾಘ್ರೀವ=ಹೆಣ್ಣುಹುಲಿಯಂತೆ, ಪರಿತರ್ಜಯಂತೀ=ಭಯಪಡಿಸುವದಾಗಿ, ತಿಷ್ಠತಿ=ಇರುವದು, ರೋಗಾಶ್ಚ=ಜ್ವರವೊದಲಾದ ಉಪದ್ರವಗಳು,ಶತ್ರವಇವ=ದ್ವೇಷಿಗಳಂತೆ, ದೇಹಂ=ಶರೀರವನ್ನು, ಪ್ರಹರಂತಿ=ಹೊಡಿಯುವವು, ಆಯುಃ=ಜೀವಿತಕಾಲವು, ಭಿನ್ನಘಟಾತ್=ಒಡೆದ ಗಡಿಗೆಯುದೆಸೆಯಿಂದ, ಅಂಭಇವ=ಉದಕದೋಪಾದಿಯಲ್ಲಿ, ಪರಿಸ್ರವತಿ=ನಷ್ಟವಾಗುವದು, ತಥಾಪಿ=ಹಾಗಾದರೂ, ಲೋಕಃ=ಜನವು, ಅಹಿತಂ=ಅಪಕಾರವನ್ನು, ಆಚರತೀತಿ=ಆಚರಿಸುವರೆಂಬುದು, ಚಿತ್ರಂ=ಆಶ್ಚರ್ಯವು. ... ... .... ॥೩೮॥

ತಾ॥ ಮುಪ್ಪು ಹೆಣ್ಣು ಹುಲಿಯಂತೆ ಭಯಪಡಿಸುತ್ತಾ ಕಾದಿರುರುವದು. ವಾತಪಿತ್ತ ಶ್ಲೇಷ್ಮಾದಿ ರೋಗಗಳು ಶತ್ರುಗಳಂತೆ ಬಾಧೆಪಡಿಸುತ್ತಾ ಸಿದ್ಧವಾಗಿರುವವು. ರಂಧ್ರದಿಂದ ಕೂಡಿದ ಗಡಿಗೆಯಿಂದ ಒಳಗಿರುವ ನೀರು ನಷ್ಟವಾಗುವಂತೆ ಆಯುಸ್ಸು ಕ್ರಮವಾಗಿ ನಾಶವಾಗುತ್ತಿರುವದು. ಇಷ್ಟು ಅನರ್ಥವಿದ್ದರೂ ಜನರು ಪರಾಪಕಾರವನ್ನು ಮಾಡುವವರೆಂಬುವದು ಅತ್ಯಾಶ್ಚರ್ಯಕರವಾಗಿರುವದು. ಹಾಗೆ ಮಾಡದೆ ವಿವೇಕಿಯಾದವನು ಸರ್ವದಾ ಪರೋಪಕಾರ ನಿರತನಾಗಿರಬೇಕು. .... ॥೪೮॥

ಶ್ಲೋ॥ ಭೋಗಾಭಂಗುರವೃತ್ತಯೋಬಹುವಿಧಾಸ್ತೈರೇವಚಾಯಂಭವ
ಸ್ತತ್ಕಸ್ಯೇಹಕೃತೇಪರಿಭ್ರಮತರೇಲೋಕಾಃಕೃತಂಚೇಷ್ಟಿತೈಃ ॥
ಆಶಾಪಾಶಶತೋಪಶಾಂತಿವಿಶದಂಚೇತಸ್ಸಮಾಧೇಯತಾಂಕಾಮೋ
ತ್ಪತ್ತಿವಶಾತ್ಸ್ವಧಾಮನಿಯದಿಶ್ರದ್ಧೇಯಮಸ್ಮದ್ವಚಃ ॥೪೯॥

ಟೀ॥ ನನ್ನ ವಚನದಲ್ಲಿ ವಿಶ್ವಾಸವಿದ್ದರೆ ಆತ್ಮನಲ್ಲಿಯೇ ಮನಸ್ಸನ್ನಿಡಬೇಕೆಂದು ಹೇಳುತ್ತಾನೆ—ಭೋಗಾಃ=ವಿಷಯಸುಖಗಳು, ಭಂಗುರವೃತ್ತಯಃ=ನಾಶವಾಗುವ ಸ್ವಭಾವವುಳ್ಳವುಗಳು, ಬಹುವಿಧಾಃ=ಅನೇಕವಿಧಗಳು, ತೈರೇವ=ಅವುಗಳಿಂದಲೇ, ಅಯಂ=ಈ ಭವಃ=ಸಂಸಾರವು, ತತ್=ಆದಕಾರಣ, ರೇಲೋಕಾಃ=ಎಲೈ ಜನಗಳಿರಾ, ಇಹ=ಇಲ್ಲಿ, ಕಸ್ಯಕೃತೇ=ಯಾರಿಗೋಸ್ಕರ, ಪರಿಭ್ರಮತ=ಸುತ್ತುವಿರಿ, ಚೇಷ್ಟಿತೈಃ=ವೃಥಾವ್ಯಾಪಾರಗಳಿಂದ, ಕೃತಂ=ಸಾಕು, ಅಸ್ಮದ್ವಚಃ=ನಮ್ಮ ಮಾತು,ಶ್ರದ್ಧೇಯಂಯದಿ=ವಿಶ್ವಾಸಿಸತಕ್ಕದ್ದಾದರೆ,=ಆಶಾಪಾಶ=ಪಾಶಗಳಂತಿರುವ

ಆಶೆಗಳ, ಶತ=ನೂರುಗಳ, ಉಪಶಾಂತ=ಶಮನದಿಂದ, ವಿಶದಂ=ನಿರ್ಮಲವಾದ, ಚೇತಃ=ಮನಸ್ಸು, ಕಾಮೋತ್ಪತ್ತಿವಶಾತ್=ವಿಶ್ವಾಸವನ್ನುಂಟುಮಾಡೋಣದರ ದೆಶೆಯಿಂದ, ಸ್ವಧಾಮನಿ=ಸ್ವಸ್ವರೂಪವಾದ ಆತ್ಮನಲ್ಲಿ, ಸಮಾಧೀಯತಾಂ=ಇಡಲ್ಪಡಲಿ. ... ... ॥೩೯॥

ತಾ॥ ವಿಷಯಸುಖಗಳು ಅನೇಕ ಪ್ರಕಾರಗಳಾಗಿ ಕ್ಷಣಿಕಗಳಾಗಿಯೂ ಇರುವವು, ಇವುಗಳಿಂದಲೇ ಜನನ ಮರಣ ಪ್ರವಾಹರೂಪವಾದ ಸಂಸಾರವು. ಎಲೈ ಮೂಢಜನಗಳಿರಾ ! ಯಾವಪ್ರಯೋಜನಕ್ಕಾಗಿ ಹಗಲಿರಳೂ ವಿಷಯಸಂಗ್ರಹದಲ್ಲಿ ತೊಳಲುತ್ತಿರುವಿರಿ, ಇನ್ನು ಸಾಕು. ನನ್ನ ಮಾತಿನಲ್ಲಿ ನಿಮಗೆ ನಂಬಿಕೆಯೂ ಪ್ರೀತಿಯೂ ಇದ್ದರೆ ಆಶಾಪಾಶಗಳನ್ನು ತೊರೆದು ಚಿತ್ತವನ್ನು ನಿರ್ಮಲಮಾಡಿ ಸ್ವಸ್ವರೂಪವಾದ ಪರಬ್ರಹ್ಮನಲ್ಲಿ ಭಕ್ತಿಯನ್ನಿಟ್ಟು ನಿತ್ಯ ಸುಖವನ್ನು ಸಂಪಾದಿಸಿರಿ. .... ॥೩೯॥

ಶ್ಲೋ॥ ಬ್ರಹ್ಮೇಂದ್ರಾದಿಮರುದ್ಗಣಾಂಸ್ತೃಣಕಣಾನ್ಯತ್ರಸ್ಥಿತೋಮ
ನ್ಯತೇಯತ್ಸ್ವಾದಾದ್ವಿರಸಾಭವಂತಿವಿಭವಾಸ್ತ್ರೈಲೋಕ್ಯರಾಜ್ಯಾ
ದಯಃ ॥ ಭೋಗಃಕೋಽಪಿಸಏಕಏವಪರಮೋನಿತ್ಯೋದಿತೋ
ಜೃಂಭತೇಭೋಸಾಧೋಕ್ಷಣಭಂಗುರೇತದಿತರೇ ಭೋಗೇರತಿಂ
ಮಾಕೃಥಾಃ .... .... ॥೪೦॥

ಟೀ॥ ಭೋಗದಲ್ಲಿಯೋ ಆಶೆ ಇದ್ದರೆನಾನು ಹೇಳುವ ಭೋಗದಲ್ಲಿಯೋ ವಿಶ್ವಾಸವನ್ನು ಮಾಡಿರೆಂದು ಹೇಳುತ್ತಾನೆ—ಯತ್ರ=ಯಾವ ಪರಮಾತ್ಮನಲ್ಲಿ, ಸ್ಥಿತಃ=ಇರುವನಾಗಿ, ಬ್ರಹ್ಮೇಂದ್ರಾದಿ ಮರುದ್ಗಣಾನ್=ಬ್ರಹ್ಮ, ಇಂದ್ರ, ಮರುತ್ತು ಮೊದಲಾದ ದೇವತೆಗಳ ಗುಂಪುಗಳನ್ನು, ತೃಣ=ಹುಲ್ಲಿನ, ಕಣಾನ್=ಲೇಶಗಳನ್ನಾಗಿ ಮನ್ಯತೆ=ತಿಳಿಯುತ್ತಾನೆಯೋ, ಯತ್ಸ್ವಾದಾತ್=ಯಾವ ಪರಮಾತ್ಮಾನುಭವದ ರುಚಿಯ ದೆಶೆಯಿಂದ, ತ್ರೈಲೋಕ್ಯರಾಜ್ಯಾದಯಃ=ತ್ರಿಲೋಕಾಧಿಪತ್ಯವೇ ಮೊದಲಾದ, ವಿಭವಾಃ=ಸಂಪತ್ತುಗಳು, ವಿರಸಾಃ=ನಿಸ್ಸಾರವಾದವುಗಳು, ಭವಂತಿ=ಆಗುವವೋ, ಕೋಪಿ=ಹೇಳಲಶಕ್ಯವಾದ, ನಿತ್ಯೋದಿತಃ=ನಿರಂತರಾಭಿವೃದ್ಧಿಯುಳ್ಳ, ಸಏವ=ಅದು ಒಂದೇ, ಭೋಗಃ=ಸುಖವು, ಪರಮಃ=ಸರ್ವೋತ್ತಮವಾದದ್ದಾಗಿ, ಜೃಂಭತೆ=ಪ್ರಕಾಶಿಸುವದು, ಭೋಸಾಧೋ=ಎಲೈ ಸಜ್ಜನನೆ, ಕ್ಷಣಭಂಗುರೆ=ಕ್ಷಣಕಾಲದಲ್ಲಿ ನಾಶವಾಗುವ, ತದಿತರೆ=ಆತ್ಮಸುಖಕ್ಕಿಂತಲೂ ಬೇರಾದ, ಭೋಗೆ=ವಿಷಯಸುಖದಲ್ಲಿ, ರತಿಂ=ಪ್ರೀತಿಯನ್ನು, ಮಾಕೃಥಾಃ=ಮಾಡಬೇಡ. ॥೪೦॥

ತಾ॥ ಯಾವ ಪರಮಾತ್ಮ ಧ್ಯಾನಪರಾಯಣನಾಗಿರುವ ಮನುಷ್ಯ

ನು ಬ್ರಹ್ಮ ಇಂದ್ರ ಮೊದಲಾದ ದೇವತೆಗಳನ್ನೆಲ್ಲಾ ಒಂದು ಹುಲ್ಲುಕಡ್ಡಿಗೆ ಸಮಾನವಾದವರನ್ನಾಗಿ ಎಣಿಸುವನೋ. ಮತ್ತಾವ ಪರಮಾತ್ಮಾಭವದಿಂದ ತ್ರಿಲೋಕಾಧಿಪತ್ಯವೇ ಮೊದಲಾದ ಸಕಲ ಸಂಪತ್ತನ್ನು ನಿಸ್ಸಾರವಾದದ್ದನ್ನಾಗಿ ಅರಿಯುವನೋ, ಅಂಥ ಪರಬ್ರಹ್ಮಾನುಭವವೆಂಬ ಭೋಗವೊಂದೇ ಸರ್ವೋತ್ತಮವಾಗಿಯೂ, ನಾಶರಹಿತವಾಗಿಯೂ, ಕ್ಷಣೇಕ್ಷಣೇ ಹೆಚ್ಚುತ್ತಿರುವದಾಗಿಯೂ ಇರುವದು. ಆದ್ದರಿಂದ ಎಲೈ ಸತ್ಪುರುಷನೇ ಅಂಥಾ ಆತ್ಮಾರಾಮನಾಗಿರಬೇಕಲ್ಲದೆ ತುಚ್ಛವಾಗಿ ಕ್ಷಣಕಾಲದಲ್ಲಿ ಹಾಳಾಗಿಹೋಗುವ ವಿಷಯ ಸುಖಾನುಭವದಲ್ಲಿ ಎಂದಿಗೂ ಆಸಕ್ತನಾಗಬೇಡ.

## ಕಾಲಮಹಿಮಾನುವರ್ಣನ ಪ್ರಾರಂಭವು.

ಶ್ಲೋ॥ ಸಾರಮ್ಯಾನಗರೀಮಹಾಂಸ್ಸನೃಪತಿಸ್ಸಾಮಂತಚಕ್ರಂಚ ತತ್ಪಾ
ರ್ಶ್ವೇತಸ್ಯಚಸಾವಿದಗ್ಧಪರಿಷತ್ತಾಶ್ಚಂದ್ರಬಿಂಬಾನನಾಃ ॥ ಉ
ದ್ವೃತ್ತಸ್ಸಚರಾಜಪುತ್ರನಿವಹಸ್ತೇವಂದಿನಸ್ತಾಃಕಥಾಸ್ಸರ್ವಂಯ
ಸ್ಯವಶಾದಗಾತ್ಸ್ಮೃತಿಪಥಂಕಾಲಾಯತಸ್ಮೈನಮಃ. ॥೪೧॥

ಟೀ॥ ಸಮಸ್ತವೂ ಕಾಲಾಧೀನವಾದ್ದರಿಂದ ಆದರ ಮಹಿಮೆಯನ್ನು ವರ್ಣಿಸುತ್ತಾನೆ—ಸಾ=ಆ, (ಪೂರ್ವದಲ್ಲಿ ಅನುಭವಿಸಲ್ಪಟ್ಟ) ರಮ್ಯಾ=ಸುಂದರವಾದ ನಗರೀ=ಪಟ್ಟಣವು, ಮಹಾನ್=ಶ್ರೇಷ್ಠನಾದ, ಸಃ=ಆ, ನೃಪತಿಃ=ರಾಜನು, ತತ್=ಆ, ಸಾಮಂತಚಕ್ರಂ=ಮಂಡಲಾಧಿಪತಿಗಳ ಸಮುದಾಯವು, ತಸ್ಯ=ಆ ರಾಜನ, ಪಾರ್ಶ್ವೇ=ಪಕ್ಕದಲ್ಲಿ, ಸಾ=ಆ, ವಿದಗ್ಧಪರಿಷತ್=ವಿದ್ವಜ್ಜನರ ಸಭೆಯೂ, ತಾಃ=ಆ, ಚಂದ್ರಬಿಂಬಾನನಾಃ=ಚಂದ್ರವದನೆಯರು, ಉದ್ವೃತ್ತಃ=ಉದ್ದಂಡವಾದ, ಸಚ=ಆ, ರಾಜಪುತ್ರನಿವಹಃ=ರಾಜಕುಮಾರ ಮಂಡಲವು, ತೇ=ಆ, ವಂದಿನಃ=ಸ್ತುತಿಪಾಠಕರು, ತಾಃ=ಆ, ಕಥಾಃ=ಕಥೆಗಳು, ಸರ್ವಂ=ಈ ಸಮಸ್ತವೂ, ಯಸ್ಯ=ಯಾವ ಕಾಲದ, ವಶಾತ್=ಅಧೀನದ್ದೆಶೆಯಿಂದ, ಸ್ಮೃತಿಪಥಂ=ಸ್ಮರಣೆಯ ಮಾರ್ಗವನ್ನು, ಅಗಾತ್=ಹೊಂದಿತೋ, ತಸ್ಮೈ=ಆ, ಕಾಲಾಯ=ಕಾಲಕ್ಕೋಸ್ಕರ, ನಮಃ=ನಮಸ್ಕಾರವು ... ... .... ॥೪೧

ತಾ॥ ಹಿಂದೆ ಅನುಭವಿಸಿದ ಆ ರಾಜಧಾನಿಯೂ, ಅದನ್ನು ಪಾಲಿಸುತ್ತಿದ್ದ ಆ ರಾಜನು, ಆತನಿಗೆ ಶರಣಾಗತರಾಗಿ ಬರುತ್ತಿದ್ದ ಸಾಮಂತರಾಜರು, ಆ ರಾಜನ ಪಾರ್ಶ್ವದಲ್ಲಿರುತ್ತಿದ್ದ ಪಂಡಿತರ ಸಭೆಯೂ, ಆತನ ಬಳಿಯ

ಳಿದ್ದ ಚಂದ್ರಾನನೆಯರಾದ ಆ ಕಾಮಿನಿಯರು, ಮದೋನ್ಮತ್ತರಾದ ಆ ರಾಜಸಭೆಯಲ್ಲಿ ಹೇಳುತ್ತಿದ್ದ ಕಥೆಗಳು, ಇವುಗಳೆಲ್ಲವೂ ಯಾವ ಕಾಲದ ಮಹಿಮೆಯಿಂದ ನಡೆಯುತ್ತಿತ್ತೋ, ಮತ್ತು ಯಾವ ಕಾಲವು ಕಳೆದುಹೋದ್ದರಿಂದ ಇವೆಲ್ಲವೂ ಸ್ಮರಣೆಗೆ ಬರುವಹಾಗಾದವೋ, ಸರ್ವ ನಿಯಾಮಕವಾದ ಆ ಕಾಲಕ್ಕೆ ನಮಸ್ಕರಿಸುವೆನು .... ॥೪೧॥

ಶ್ಲೋ॥ ಯತ್ರಾನೇಕಃಕ್ವಚಿದಪಿಗೃಹೇತತ್ರತಿಷ್ಠತ್ಯಥೈಕೋಯತ್ರಾಪ್ಯೇಕಸ್ತದನುಬಹುವಸ್ತತ್ರನೈಕೋಪಿಚಾಂತೇ ॥ ಇತ್ಥಂನೇಯೌರಜನಿದಿವಸೌಲೋಲಯನ್‌ದ್ವಾವಿವಾಕ್ಷೌಕಾಲಃಕಲ್ಯೋಭುವನ ಫಲಕೇ ಕ್ರೀಡತಿಪ್ರಾಣಿಶಾರೈಃ .... ॥ ೪೨ ॥

ಟೀ॥ ಕಾಲವೇ ಸರ್ವಕ್ಕೂ ನಿಯಾಮಕವೆಂಬರ್ಥವನ್ನು ಸೂಚಿಸುತ್ತಾನೆ. ಯತ್ರ=ಯಾವ ಮನೆಯಲ್ಲಿ, (ಕೋಷ್ಠದಲ್ಲಿ) ಕ್ವಚಿತ್=ಒಂದಾನೊಂದು ಸಮಯದಲ್ಲಿ, ಅನೇಕಃ=ಅನೇಕಜನವು, ಪಾಚಿಕೆಯು, ತಿಷ್ಠತಿ=ಇತ್ತೋ, ಅಥ=ಅನಂತರದಲ್ಲಿ, ತಸ್ಮಿನ್=ಆ ಮನೆಯಲ್ಲಿ, ಏಕಃ=ಒಬ್ಬನು, (ಒಂದು) ತಿಷ್ಠತಿ=ಇರುವನು, (ಇರುವದು) ಯತ್ರ=ಎಲ್ಲಿ, ಏಕಃ=ಒಬ್ಬನು, ತದನು=ಅನಂತರದಲ್ಲಿ, ಬಹವಃ=ಅನೇಕರು, ತಿಷ್ಠಂತಿ=ಇರುವರೋ, ತತ್ರ=ಅಲ್ಲಿ, ಅಂತೇ=ಕಡೆಗೆ, ಏಕೋಪಿ=ಒಬ್ಬನೂ, (ಒಂದೂ) ನಚ=ಇಲ್ಲವು, ಇತ್ಥಂ=ಈಮೇಲೆ ಹೇಳಿದಂತೆ, ಭುವನಫಲಕೇ=ಪಗಡೆಯ ಹಲಿಗೆಯಂತಿರುವ ಭುವನದಲ್ಲಿ, ನೇಯೈಃ=ಆಡಲಿಕ್ಕೆ ಯೋಗ್ಯಗಳಾದ, ಪ್ರಾಣಿಶಾರೈಃ=ಪಗಡೆಯ ಕಾಯಿಗಳಂತಿರುವ ಪ್ರಾಣಿಗಳಿಂದ, ಕಲ್ಯಃ=ಆಟದಲ್ಲಿ ಸಮರ್ಥವಾದ, ಕಾಲಃ=ಕಾಲವು, ಜೂಜುಗಾರನು, ರಜನಿದಿವಸೌ=ರಾತ್ರಿ ಹಗಲುಗಳನ್ನು, ದ್ವಾವಕ್ಷಾವಿವ=ಎರಡು ಪಗಡೆಯ ದಾಳಗಳಂತೆ, ಲೋಲಯನ್=ಆಡಿಸುವನಾಗಿ, ಕ್ರೀಡತಿ=ಆಡುತ್ತಾನೆ. .... .... ॥೪೨॥

ತಾ॥ ಆಟವಾಡುವದರಲ್ಲಿ ಘಟ್ಟಿಗನಾದ ಕಾಲವೆಂಬ ಪಗಡೆಯ ಆಟಗಾರನು, ಭುವನವೆಂಬ ಆಟದ ಹಲಿಗೆಯ ಮೇಲೆ ಹಗಲು ರಾತ್ರಿಗಳೆಂಬ ದಾಳಗಳನ್ನು ಪದೇಪದೇ ಹಾಕಿ, ಪ್ರಾಣಿಗಳೆಂಬ ಕಾಯಿಗಳನ್ನುನಡಿಸುತ್ತಾ ಆಟವಾಡುವನು. ಈ ಆಟದೊಳಗೆ ಒಂದು ಸಮಯದಲ್ಲಿ ಒಂದು ಮನೆಯೊಳಗೆ ಅನೇಕ ಕಾಯಿಗಳಿರುವವು, ಆ ಮನೆಯಲ್ಲಿ ಮತ್ತೊಂದು ಕಾಲದಲ್ಲಿಇನ್ನೊಂದು ಮನೆಯಲ್ಲಿಬಾರದೇ ಇದ್ದು, ತರುವಾಯ ಅನೇಕಗಳಿದ್ದು, ಬಳಿಕ ಒಂದೂಇಲ್ಲದಂತೆ ಆಗುವದು. ಎಂದರೆ ಕಾಲಮಹಿಮೆಯಿಂದ

ಒಂದು ಮನೆಯಲ್ಲಿ ಒಬ್ಬರಿದ್ದು ತರುವಾಯ ಅನೇಕರಿದ್ದು ಬಳಿಕ ಒಬ್ಬರೂ ಇಲ್ಲದೆ ಹೀಗೆಲ್ಲಾ ವಿಚಿತ್ರವಾಗುವದು, ಆದ್ದರಿಂದ ಸಮಸ್ತವೂ ಕಾಲಾಧೀನವು ॥ .... .... .... ॥ ೪೨ ॥

ಶ್ಲೋ॥ ಆದಿತ್ಯಸ್ಯಗತಾಗತೈರಹರಹಸ್ಸಂ ಕ್ಷೀಯತೇಜೀವಿತಂ ವ್ಯಾಪಾರೈ
ರ್ಬಹುಕಾರ್ಯಭಾರಗುರುಭಿಃಕಾಲೋಪಿನಜ್ಞಾಯತೇ॥ದೃಷ್ಟ್ವಾ
ಜನ್ಮಜರಾವಿಪತ್ತಿಮರಣಂತ್ರಾಸಶ್ಚನೋತ್ಪದ್ಯತೇಪೀತ್ವಾ ಮೋ
ಹಮಯೀಂಪ್ರಮಾದಮದಿರಾಮುನ್ಮತ್ತಭೂತಂಜಗತ್ ॥೪೩॥

ಟೀ ॥ ಜನರು ಮತ್ತರಾಗಿ ಈ ಕಾಲಮಹಿಮೆಯನ್ನು ಅರಿಯದಿರುವರೆಂದು ಹೇಳುತ್ತಾನೆ—ಆದಿತ್ಯಸ್ಯ=ಸೂರ್ಯನ, ಗತಾಗತೈಃ=ಉದಯಾಸ್ತಮಯಗಳಿಂದ ಅಹರಹಃ=ಪ್ರತಿದಿವಸದಲ್ಲಿಯೂ, ಜೀವಿತಂ=ಆಯುಸ್ಸು, ಸಂಕ್ಷೀಯತೆ=ಕ್ಷಯವಾಗುವದು, ಬಹುಕಾರ್ಯಭಾರ=ಅನೇಕ ಕೆಲಸಗಳ ಭಾರದಿಂದ, ಗುರುಭಿಃ=ಮಹತ್ತರಗಳಾದ, ವ್ಯಾಪಾರೈಃ=ಉದ್ಯೋಗಗಳಿಂದ, ಕಾಲೋಪಿ=ಸಮಯವೂ, ನಜ್ಞಾಯತೆ=ತಿಳಿಯಲ್ಪಡುವದಿಲ್ಲವು, ಜನ್ಮ=ಉತ್ಪತ್ತಿಯು,ಜರಾ=ಮುಪ್ಪು, ವಿಪತ್ತಿ=ಆಪತ್ತು, ಮರಣಂ=ಸಾವು ಇವುಗಳನ್ನು, ದೃಷ್ಟ್ವಾ=ನೋಡಿ, ತ್ರಾಸಶ್ಚ=ಭಯವೂ ನೋತ್ಪದ್ಯತೆ=ಉಂಟಾಗುವದಿಲ್ಲವು, ಜಗತ್=ಲೋಕವು, ಮೋಹಮಯೀಂ=ಅಜ್ಞಾನಪ್ರಚುರವಾಗಿರುವ, ಪ್ರಮಾದಮದಿರಾಂ=ಅಜಾಗರೂಕತೆಯೆಂಬ ಮದ್ಯವನ್ನು, ಪೀತ್ವಾ=ಕುಡಿದು, ಉನ್ಮತ್ತಭೂತಂ=ಹುಚ್ಚಿನಿಂದ ಕೂಡಿರುವದು. ॥ರ೩॥

ತಾ॥ ಸೂರ್ಯನ ಉದಯಾಸ್ತಮಯಗಳಿಂದ ನಿತ್ಯವೂ ಆಯುಸ್ಸು ಕ್ಷಯಿಸಿಹೋಗುತ್ತಿರುವದು. ಎಂದರೆ ದೇಹಗೇಹಾದಿ ನಿಮಿತ್ತವಾಗಿರುವ ನಾನಾವಿಧ ವ್ಯಾಪಾರಗಳಿಂದ ಹೀಗೆ ಕಳೆದು ಹೋಗುವ ಕಾಲವೂ ತಿಳಿಯುವದೇ ಇಲ್ಲ. ಮತ್ತು ಜನನ, ಮುಪ್ಪು, ವಿಪತ್ತು ಸಾವು, ಇವುಗಳನ್ನು ಯಾವಾಗಲೂ ನೋಡುತ್ತಿದ್ದರೂ ಭಯವೂ ಉಂಟಾಗುವದಿಲ್ಲ. ಆದರೆ ಸಮಸ್ತ ಜನರೂ ಅಜ್ಞಾನದಿಂದ ಮಾಡಲ್ಪಟ್ಟ ಅಜಾಗರೂಕತೆಯೆಂಬ ಹೆಸರುಳ್ಳ ಮದ್ಯವನ್ನು ಕುಡಿದಿರುವರಾದ ಕಾರಣವೇ ಮದವೇರಿ ವಿವೇಕವಿಲ್ಲದೆ ಹುಚ್ಚು ಹಿಡಿದಂತಿರುವರು. .... ॥೪೩॥

ಶ್ಲೋ॥ ರಾತ್ರಿಸ್ಸೈವಪುನಸ್ಸಏವದಿವಸೋಮತ್ವಾಮುಧಾಜಂತವೋಃ ಧಾ
ವಂತ್ಯುದ್ಯಮಿನಸ್ತಥೈವನಿಭೃತಪ್ರಾರಬ್ಧತತ್ತತ್ಕ್ರಿಯಾಃ ॥ ವ್ಯಾ
ಪಾರೈಃಪುನರುಕ್ತಭೂತವಿಷಯೈರಿತ್ಥಂವಿಧೇನಾಮುನಾಸಂಸಾರೇ
ಣಕದರ್ಥಿತಾವಯಮಹೋಮೋಹಾನ್ನಲಜ್ಜಾಮಹೇ ॥೪೪॥

ಟೀ॥ ಹೇಳಿದ ಅರ್ಥವನ್ನೇ ಬೇರೆ ರೀತಿಯಿಂದ ಹೇಳುತ್ತಾನೆ—ರಾತ್ರಿಃ=ಇರುಳು, ಸೈವ=ಅದೇ, ದಿವಸಃಪುನಃ=ಹಗಲೂ, ಸಏವ=ಅದೇ, ಇತಿ=ಹೀಗೆಂದು, ಮತ್ವಾ=ತಿಳಿದು, ಜಂತವಃ=ಪ್ರಾಣಿಗಳು, ಉದ್ಯಮಿನಃ=ಉದ್ಯೋಗವುಳ್ಳವರಾಗಿ, ನಿಭೃತ=ರಹಸ್ಯವಾಗಿ, ಪ್ರಾರಬ್ಧ=ಪ್ರಾರಂಭಿಸಲ್ಪಟ್ಟ, ತತ್ತತ್ಕ್ರಿಯಾಃ=ಆಯಾಯ ಕಾರ್ಯಗಳುಳ್ಳವರಾಗಿ, ಪುನರುಕ್ತಭೂತ=ಅನುಭವಿಸಲ್ಪಟ್ಟ, ವಿಷಯೈಃ=ಭೋಗಗಳುಳ್ಳ, ವ್ಯಾಪಾರೈಃ=ನಡತೆಗಳಿಂದ, ಮುಧಾ=ವ್ಯರ್ಥವಾಗಿ, ಧಾವಂತಿ=ವ್ಯಥೆಪಡುತ್ತಾರೆ, ಇತ್ಥಂವಿಧೇನ=ಈ ರೀತಿಯುಳ್ಳ, ಅಮುನಾ=ಈ, ಸಂಸಾರೇಣ=ಸಂಸಾರದಿಂದ, ಕದರ್ಥಿತಾಃ=ಹೀನಾರ್ಥವುಳ್ಳವರಾಗಿ ಮಾಡಲ್ಪಟ್ಟ, ವಯಂ=ನಾವು, ಮೋಹಾತ್=ಅಜ್ಞಾನದ್ದೆಸೆಯಿಂದ, ನಲಜ್ಜಾಮಹೆ=ಲಜ್ಜೆಪಡುವದಿಲ್ಲ, ಅಹೋ=ಆಶ್ಚರ್ಯವು. .... .... ... ॥೪೪॥

ತಾ॥ ನಿನ್ನೆ ಅನುಭವಿಸಿದ ರಾತ್ರಿಯೇ ಈಗ ನಡೆಯುತ್ತಿರುವದು, ಈಗ ನಡೆಯುವ ಹಗಲೂ ನಿನ್ನೆ ಅನುಭವಿಸಿದ್ದೇ. ಹೀಗೆ ಬಂದದ್ದೇ ಬರುತ್ತಿರುವದು ಎಂದು ತಿಳಿದಿದ್ದರೂ ಪ್ರಾಣಿಯು ಏನೋ ಮಾಡಬೇಕೆಂದು ರಹಸ್ಯವಾಗಿ ಪ್ರಯತ್ನಮಾಡುತ್ತಾನೆ ಆದರೂ ಹಿಂದೆ ಅನುಭವಿಸಲ್ಪಟ್ಟ ವಿಷಯಗಳೇ ಉಳ್ಳ ಕಾರ್ಯಗಳಿಂದ ವೃಥಾಕ್ಲೇಶಪಡುವನು. ಈ ವಿಧವಾಗಿರುವ ಜನನ ಮರಣ ಪ್ರವಾಹರೂಪವಾದ ಸಂಸಾರದಿಂದ ಪ್ರಯೋಜನ ಹೀನರಾಗಿ ಮಾಡಲ್ಪಟ್ಟೆವು. ಅಹಹ! ನಮಗೆ ಇಂಥ ಭ್ರಾಂತಿಯುಂಟಾಗಿರುವದೆಂದು ನಾಚಿಕೆಪಡುವದಿಲ್ಲವಲ್ಲಾ ಆಶ್ಚರ್ಯವಾಗಿರುವದು.

ಶ್ಲೋ॥ ನಧ್ಯಾತಂಪದಮೀಶ್ವರಸ್ಯವಿಧಿವತ್ಸಂಸಾರವಿಚ್ಛಿತ್ತಯೇ ಸ್ವರ್ಗ
ದ್ವಾರಕವಾಟಪಾಟನಪಟುರ್ಧರ್ಮೋಪಿನೋಪಾರ್ಜಿತಃ ॥ ನಾ
ರೀಪೀನಪಯೋಧರೋರುಯುಗಳಂ ಸ್ವಪ್ನೇಪಿನಾಲಿಂಗಿತಂಮಾ
ತುಃಕೇವಲಮೇವಯೌವನವನಚ್ಛೇದೇಕುಠಾರಾವಯಂ ॥೪೫॥

ಟೀ॥ ಯಾವ ವಿಧವಾದ ಸುಖವೂ ಇಲ್ಲದ್ದರಿಂದ ನಮ್ಮ ಜನ್ಮವೇ ವ್ಯರ್ಥವೆಂದು ಹೇಳುತ್ತಾನೆ— ಸಂಸಾರವಿಚ್ಛಿತ್ತಯೇ=ಜನನ ಮರಣವಿಲ್ಲದಿರುವದಕ್ಕೆ, ಈಶ್ವರಸ್ಯ=ಭಗವಂತನ, ಪದಂ=ಪಾದವು, ವಿಧಿವತ್=ಶಾಸ್ತ್ರೋಕ್ತವಾಗಿ, ನಧ್ಯಾತಂ=ಧ್ಯಾನಿಸಲ್ಪಡಲಿಲ್ಲ, ಸ್ವರ್ಗ=ದೇವಲೋಕದ, ದ್ವಾರ=ಬಾಗಿಲಿನ, ಕವಾಟ=ಕದಗಳ, ಪಾಟನ=ಒಡಿಯುವದಕ್ಕೆ, ಪಟುಃ=ಸಮರ್ಥವಾದ, ಧರ್ಮೋಪಿ=ಪುಣ್ಯವೂ, ನೋಪಾರ್ಜಿತಃ=ಸಂಪಾದಿಸಲಿಲ್ಲ, ನಾರೀ=ಹೆಂಗಸಿನ, ಪೀನ=ಬಲಿತ ಪಯೋಧರ=ಕುಚಗಳು, ಊರು=ತೊಡೆಗಳು ಇವುಗಳ, ಯುಗಳಂ=ಯುಗ್ಮವು,

ಸ್ವಪ್ನೇಪಿ—ಸ್ವಪ್ನಾವಸ್ಥೆಯಲ್ಲಿಯೂ, ನಾಲಿಂಗಿತಂ—ಆಲಿಂಗಿಸಲ್ಪಡಲಿಲ್ಲವು, ಕೇವಲಂ—ಮುಖ್ಯವಾಗಿ, ಮಾತುಃ—ತಾಯಿಯ, ಯೌವನ—ಪ್ರಾಯವೆಂಬ, ವನ—ಅಡವಿಯ, ಛೇದೆ—ಕತ್ತರಿಸುವುದರಲ್ಲಿ, ವಯಂ—ನಾವು, ಕುಠಾರಾಏವ—ಕೊಡಲಿಗಳೇ. ॥೪೫॥

ತಾ॥ ಜನನ ಮರಣವಿಲ್ಲದಿರುವದಕ್ಕೆ ಎಂದರೆ ಪುನರಾವೃತ್ತಿರಾಹಿತ್ಯಕ್ಕಾಗಿ ಪರಮಾತ್ಮನ ಪಾದಗಳನ್ನು ಏಕಾಗ್ರಚಿತ್ತದಿಂದ ಧ್ಯಾನಿಸಲಿಲ್ಲ. ಅದಿಲ್ಲದಿದ್ದರೂ ಇಹಲೋಕದಲ್ಲಿ ಜ್ಯೋತಿಷ್ಟೋಮಾದಿ ಯಾಗಗಳನ್ನು ಮಾಡಿ ಅದರಿಂದುಂಟಾದ ಸುಕೃತವಾದರೂ ಇದ್ದರೆ ಅದರ ಬಲದಿಂದ ಸ್ವರ್ಗಾದಿ ಲೋಕಗಳಿಗೆ ಹೋಗಿ ಅದರ ಬಾಗಿಲನ್ನು ಒಡೆದು ಒಳಹೊಕ್ಕು ಸುಖಪಡಬಹುದಾಗಿತ್ತು, ಅಂಥಧರ್ಮವನ್ನೂ ಸಂಪಾದಿಸಲಿಲ್ಲ. ಅದಿಲ್ಲದಿದ್ದರೂ ಈ ಲೋಕ ಸುಖಗಳನ್ನಾದರೂ ಅನುಭವಿಸಿರುವೆನೆ ಎಂದರೆ ಕನಕಕುಂಭಗಳಂತಿರುವ ಕಾಮಿನಿಯರ ಕುಚಮಂಡಲಾದವುಗಳನ್ನು ಕನಸಿನಲ್ಲಿಯೂ ಆಲಿಂಗಿಸಲಿಲ್ಲ. ಆದ್ದರಿಂದಲೇ ನಮ್ಮ ಜನ್ಮವು ನಮ್ಮ ತಾಯಿಯ ಪ್ರಾಯವೆಂಬ ತೋಟವನ್ನು ಕತ್ತರಿಸುವದಕ್ಕೆ ಕೊಡಲಿಯಾಯಿತಲ್ಲದೆ ಇನ್ನೇನೂ ಪ್ರಯೋಜನವಿಲ್ಲವು. .... ॥೪೫॥

ಶ್ಲೋ॥ ನಾಭ್ಯಸ್ತಾ ಪ್ರತಿವಾದಿಬೃಂದದಮನೀ ವಿದ್ಯಾವಿನೀತೋಚಿತಾ ಖಡ್ಗಾಗ್ರೈಃ ಕರಿಕುಂಭಪೀಠದಳನೈರ್ನಾಕಂ ನ ನೀತಂ ಯಶಃ ॥ ಕಾಂತಾಕೋಮಲಪಲ್ಲವಾಧರರಸಃ ಪೀತೋ ನ ಚಂದ್ರೋದಯೇ ತಾರುಣ್ಯಂ ಗತಮೇವ ನಿಷ್ಫಲಮಹೋ ಶೂನ್ಯಾಲಯೇ ದೀಪವತ್ ॥೪೬॥

ಟೀ॥ ಪ್ರತಿವಾದಿ—ಎದುರುಬಿದ್ದು ವಾದಿಸುವ ಶಾಸ್ತ್ರಜ್ಞರ, ಬೃಂದ—ಸಮುದಾಯವನ್ನು, ದಮನೀ—ಭಂಜನ ಮಾಡುವ, ವಿನೀತ—ವಿನಯಸಂಪನ್ನರಿಗೆ, ಉಚಿತಾ—ಯೋಗ್ಯವಾದ, ವಿದ್ಯಾ—ವಿದ್ಯೆಯು, ನಾಭ್ಯಸ್ತಾ—ಅಭ್ಯಾಸಮಾಡಲ್ಪಡಲಿಲ್ಲ. ಕರಿಕುಂಭಪೀಠ-ಮಣೆಗಳಂತಿರುವ ಆನೆಯ ಕುಂಭಸ್ಥಳಗಳನ್ನು, ದಳನೈಃ—ಸೀಳುವ, ಖಡ್ಗಾಗ್ರೈಃ—ಕತ್ತಿಗಳ ಕೊನೆಗಳಿಂದ, ಯಶಃ—ಕೀರ್ತಿಯು, ನಾಕಂ—ಸ್ವರ್ಗವನ್ನು, ನನೀತಂ—ಹೊಂದಿಸಲ್ಪಡಲಿಲ್ಲವು, ಚಂದ್ರೋದಯೇ—ಚಂದ್ರೋತ್ಪತ್ತಿಕಾಲದಲ್ಲಿ, ಕಾಂತಾ—ಕಾಮಿನಿಯರ, ಕೋಮಲ—ಮೃದುವಾದ, ಪಲ್ಲವಾಧರ—ಚಿಗುರಿನಂತಿರುವ ತುಟಿಯ, ರಸಃ—ಅಮೃತರಸವು, ನಪೀತಃ—ಪಾನ ಮಾಡಲ್ಪಡಲಿಲ್ಲವು, ತಾರುಣ್ಯಂ—ಪ್ರಾಯವು, ಶೂನ್ಯಾಲಯೇ—ಹಾಳುಮನೆಯಲ್ಲಿ, ದೀಪವತ್—ದೀಪದಂತೆ, ನಿಷ್ಫಲಂ—ವ್ಯರ್ಥವಾಗಿ, ಗತಮೇವ—ಹೋಯಿತು, ಅಹೋ—ಆಶ್ಚರ್ಯವು. .... .... .... ॥೪೬॥

ತಾ॥ ವೇದವೇದಾಂಗಾದಿ ಶಾಸ್ತ್ರಗಳನ್ನು ಗುರುಮುಖದಿಂದ ಅಭ್ಯಾಸಮಾಡಿ ಸಭಾಮುಖದಲ್ಲಿ ವಾದಾರ್ಥವಾಗಿ ಬರುವ ವಿದ್ವಜ್ಜನರೊಡನೆ ವಿವಾದಮಾಡಿ ಗೆಲ್ಲತಕ್ಕ ಸದ್ವಿದ್ಯೆಯನ್ನೂ ಅಭ್ಯಾಸಮಾಡಲಿಲ್ಲ. ಮತ್ತು ಮದ್ದಾನೆಯ ಕುಂಭಸ್ಥಳಗಳನ್ನು ಒಡೆಯುವ ಖಡ್ಗಗಳಿಂದ ಯೋಗ್ಯವಾದ ಯುದ್ಧವನ್ನು ಮಾಡಿ ಅದರಿಂದುಂಟಾದ ಸ್ವರ್ಗಾದಿಲೋಕಾಂತರಗಳನ್ನು ವ್ಯಾಪಿಸುವ ಕೀರ್ತಿಯನ್ನೂ ಸಂಪಾದಿಸಲಿಲ್ಲ. ಅಥವಾ ಚಂದ್ರೋದಯಾದಿ ಸಮಯಗಳಲ್ಲಿ ದಿವ್ಯ ಸುಂದರಿಯರಾದ ಕಾಮಿನಿಯರ ಅಧರಾಮೃತಪಾನವನ್ನೂ ಮಾಡಲಿಲ್ಲ. ಆದುದರಿಂದಲೆ ಹಾಳು ಮನೆಯಲ್ಲಿ ಯಾರಿಗೂ ಉಪಯೋಗವಿಲ್ಲದಂತೆ ಉರಿಯುವ ದೀಪದಂತೆ ನಮಗೆ ಬಂದ ವಯಸ್ಸು ನಿರರ್ಥಕವಾಗಿಯೇ ಹೋಯಿತು. .... ‖೪೬‖

ಶ್ಲೋ॥ ವಿದ್ಯಾನಾಧಿಗತಾಕಳಂಕರಹಿತಾವಿತ್ತಂಚನೋಪಾರ್ಜಿತಂಶುಶ್ರೂ
ಷಾಪಿಸಮಾಹಿತೇನಮನಸಾಪಿತ್ರೋರ್ನಸಂಪಾದಿತಾ ॥ ಆಲೋಲಾ
ಯತಲೋಚನಾಃಪ್ರಿಯತಮಾಸ್ಸ್ವಪ್ನೇಪಿನಾಲಿಂಗಿತಾಃ ಕಾಲೋ
ಯಂಪರಪಿಂಡಲೋಲುಪತಯಾಕಾಕೈರಿವಪ್ರೇರ್ಯತೇ ‖೪೭‖

ಟೀ॥ ಕಳಂಕರಹಿತಾ=ದೋಷರಹಿತವಾದ, ವಿದ್ಯಾ=ಸದ್ವಿದ್ಯೆಯು, ನಾಧಿಗತಾ=ಅಭ್ಯಾಸ ಮಾಡಲ್ಪಡಲಿಲ್ಲ, ವಿತ್ತಂಚ=ದ್ರವ್ಯವೂ, ನೋಪಾರ್ಜಿತಂ=ಸಂಪಾದಿಸಲ್ಪಡಲಿಲ್ಲ, ಸಮಾಹಿತೇನ=ಸ್ವಸ್ಥವಾದ, ಮನಸಾ=ಮನಸ್ಸಿನಿಂದ ಪಿತ್ರೋಃ=ತಾಯಿತಂದೆಗಳ, ಶುಶ್ರೂಷಾಪಿ=ಸೇವೆಯೂ, ನಸಂಪಾದಿತಾ=ಸಂಪಾದಿಸಲ್ಪಡಲಿಲ್ಲ, ನೆರವೇರಿಸಲಿಲ್ಲ, ಆಲೋಲಾಯತಲೋಚನಾಃ=ಚಂಚಲನೇತ್ರಗಳುಳ್ಳ, ಪ್ರಿಯತಮಾಃ=ಕಾಂತೆಯರು, ಸ್ವಪ್ನೇಪಿ=ಸ್ವಪ್ನಾವಸ್ಥೆಯಲ್ಲಿಯೂ, ನಾಲಿಂಗಿತಾಃ=ಆಲಿಂಗಿಸಲ್ಪಡಲಿಲ್ಲ, ಅಯಂ=ಈ, ಕಾಲಃ=ಸಮಯವು, ಕಾಕೈರಿವ=ಕಾಗೆಗಳಿಂದಲೋಪಾದಿಯಲ್ಲಿ, ಪರ=ಇತರರ, ಪಿಂಡ=ಅನ್ನದಲ್ಲಿ, ಲೋಲುಪತಯಾ=ಆಸಕ್ತಿಯಿಂದ, ಪ್ರೇರ್ಯತೇ=ಕಳೆಯಲ್ಪಡುತ್ತದೆ. .... ‖೪೭‖

ತಾ॥ ದೋಷವಿಲ್ಲದೆ ಫಲಪ್ರದವಾದ ವೇದವೇದಾಂಗಾದಿ ವಿದ್ಯೆಗಳನ್ನು ಅಭ್ಯಾಸ ಮಾಡಲಿಲ್ಲ. ಅಧಿಕವಾದ ದ್ರವ್ಯವನ್ನು ಸಂಪಾದಿಸಲಿಲ್ಲ ಮತ್ತು ಕ್ರಮವಾಗಿ ಮಾತಾಪಿತೃಗಳ ಸೇವೆಯನ್ನು ಮಾಡಲಿಲ್ಲ. ಚಂಚಲಾಕ್ಷಿಯರಾದ ಕಾಮಿನಿಯರನ್ನು ದೃಢವಾಗಿ ಸ್ವಪ್ನದಲ್ಲಿಯೂ ಆಲಿಂಗನ ಮಾಡಿಕೊಳ್ಳಲಿಲ್ಲ, ಮತ್ತೇನೆಂದರೆ, ಬಲಿಪಿಂಡಗಳನ್ನು ತಿಂದುಕೊಂಡು ಕಾಗೆಗಳು ಕಾಲಕಳೆಯುವಂತೆ ನಾವುಗಳೂ ಯಾವಾಗಲೂ ಪರಾನ್ನ

ವನ್ನು ತಿಂದುಕೊಂಡು ಕಾಲವನ್ನು ಕಳೆಯುತ್ತಿರುವೆವು. ಅಂತು ಯಾವ ವಿಧದಲ್ಲಿಯೂ ನಮ್ಮ ಜನ್ಮವು ಸಫಲವಾಗದೆ ಹೋಯಿತು. ॥೪೭॥

ಶ್ಲೋ ॥ ವಯಂಯೇಭ್ಯೋಜಾತಾಶ್ಚಿರಪರಿಚಿತಾ ಏವಖಲುತೇಸಮಂಯೈಃ॥
ಸ್ಸಂವೃದ್ಧಾಸ್ಸ್ಮೃತಿವಿಷಯತಾಂತೇಪಿಗಮಿತಾಃ ॥ಇದಾನೀಮೇ
ತೇಸ್ಮಃಪ್ರತಿದಿವಸಮಾಸನ್ನಪತನಾಗತಾಸ್ತುಲ್ಯಾವಸ್ಥಾಂಸಿಕತಿಲನ
ದೀತೀರತರುಭಿಃ .... .... ॥೪೮

ಟೀ॥ ಕಾಲಪರಿಪಾಕವನ್ನು ಹೇಳುತ್ತಾನೆ–ವಯಂ=ನಾವುಗಳು, ಯೇಭ್ಯಃ=ಯಾವ ತಾಯಿತಂದೆಗಳಿಂದ, ಜಾತಾಃ=ಹುಟ್ಟಿದೆವೊ, ತೇ=ಅವರು, ಚಿರಪರಿಚಿತಾ ಏವ=ಬಹುಕಾಲದಿಂದ ಪರಿಚಯವುಳ್ಳವರೆ, (ಅಭವನ್=ಆದರು) ಖಲು=ನಿಶ್ಚಯವು, ಯೈಸ್ಸಮಂ=ಯಾವ ಜನರೊಡನೆ, ಸಂವೃದ್ಧಾಃ=ಬೆಳೆದೆವೋ, ತೇಪಿ=ಅವರೂ, ಸ್ಮೃತಿವಿಷಯತಾಂ=ಜ್ಞಾಪಕಕ್ಕೆ ಬರುವಿಕೆಯನ್ನು, (ಕಾಲೇನ=ಸಮಯದಿಂದ) ಗಮಿತಾಃ=ಹೊಂದಿಸಲ್ಪಟ್ಟರು, ಇದಾನೀಂ=ಈಗ, ಏತೇವಯಂ=ಈ ನಾವು, ಪ್ರತಿದಿವಸಂ=ನಿತ್ಯವೂ, ಆಸನ್ನಪತನಾಃ=ಸಮೀಪವಾದಮರಣವುಳ್ಳವರಾಗಿ, ಸಿಕತಿಲ=ಮರಳುಳ್ಳ, ನದೀ=ಹೊಳೆಯ, ತೀರ=ದಡದಲ್ಲಿರುವ, ತರುಭಿಃ=ಮರಗಳೊಡನೆ, ತುಲ್ಯಾವಸ್ಥಾಂ=ಸಮವಾದ ದಶೆಯನ್ನು, ಗತಾಃ=ಹೊಂದಿರುವೆವು. ॥೪೮॥

ತಾ॥ ನಾವುಗಳು ಯಾರಿಂದ ಜನಿಸಿದೆವೋ ಆ ನಮ್ಮ ತಾಯಿತಂದೆಗಳು ಮರಣ ಹೊಂದಿ ಎಷ್ಟೋದಿವಸಗಳಾದ್ದರಿಂದ ಅವರ ಗುರುತೇ ಮರೆತುಹೋಗುತ್ತಾ ಬಂತು. ಮತ್ತು ಯಾರ ಜೊತೆಯಲ್ಲಿ ಬೆಳೆದೆವೋ ಅವರೆಲ್ಲರೂ ಕಳೆದುಹೋದ್ದರಿಂದ ಜ್ಞಾಪಕಕ್ಕೆ ಬರುವರಾದರು. ಈಗಾಗ ಸಂಭವಿಸುವ ಮರಣಾವಸ್ಥೆಯುಳ್ಳವರಾಗಿ ಹೊಳೆಗಳ ದಡದಲ್ಲಿ ಪ್ರವಾಹದ ಬಲದಿಂದ ಬೇರುಗಳೆಲ್ಲ ಕಡಿದು ಬಿದ್ದುಹೋಗುವ ಮರಗಳಂತೆ ನಿಂತಿರುವೆವು. ಎಂದರೆ, ಕಾಲವೇನೋ ಕಳೆದು ಹೋಯಿತು. ದೊಡ್ಡವರೂ ಸಮಾನರೂ ಎಲ್ಲರೂ ಹೋದರು. ನಾವೂ ಹೋಗುವದಕ್ಕೆ ಸಿದ್ಧವಾಗಿರುವೆವು. ಪ್ರಯೋಜನ ಮಾತ್ರ ಲೇಶವೂ ಇಲ್ಲವಾಯಿತು. .... ॥೪೮॥

ಶ್ಲೋ ॥ ಆಯುರ್ವರ್ಷಶತಂನೃಣಾಂಪರಿಮಿತಂರಾತ್ರೌತದರ್ಧಂಗತಂತ
ಸ್ಯಾರ್ಧಸ್ಯಪರಸ್ಯಚಾರ್ಧಮಪರಂಬಾಲತ್ವವೃದ್ಧತ್ವಯೋಃ ॥
ಶೇಷಂವ್ಯಾಧಿವಿಯೋಗದುಃಖಸಹಿತಂಸೇವಾದಿಭಿರ್ನೀಯತೇಜೀ
ವೇವಾರಿತರಂಗಚಂಚಲತರೇಸೌಖ್ಯಂಕುತಃಪ್ರಾಣಿನಾಂ ॥೪೯॥

ಟೀ॥ ವಿಚಾರ ಮಾಡಿದರೆ ಪ್ರಾಣಿಗಳಿಗೆ ಕ್ಷಣಕಾಲವೂ ಅವಕಾಶವೇ ಇಲ್ಲವೆಂಬದನ್ನು, ತೋರಿಸುತ್ತಾನೆ—ನೃಣಾಂ=ಮನುಷ್ಯರಿಗೆ, ಆಯುಃ=ಜೀವಿತಕಾಲವು, ವರ್ಷಶತಂ=ನೂರು ಸಂವತ್ಸರಗಳು, ಪರಿಮಿತಂ=ಕ್ಲೃಪ್ತವಾಗಿರುವದು, ತದರ್ಧಂ=ಅದರಲ್ಲಿ ಅರ್ಧಭಾಗವು, ರಾತ್ರೌ=ಇರುಳಿನಲ್ಲಿ, ಗತಂ=ಹೋಯಿತು, ಪರಸ್ಯ=ಎರಡನೆಯದಾದ, ತಸ್ಯಅರ್ಧಸ್ಯ=ಆ ಅರ್ಧದ, ಅಪರಂ=ಮತ್ತೊಂದು ಅರ್ಧವು, (೨೫ ವರ್ಷಗಳು) ಬಾಲತ್ವವೃದ್ಧತ್ವಯೋಃ=ಬಾಲ್ಯ ವಾರ್ಧಕ್ಯಗಳಲ್ಲಿ ಗತಂ=ಹೋಯಿತು, ಶೇಷಂ=ಉಳಿದ ಕಾಲವು, ವ್ಯಾಧಿ=ರೋಗಗಳು, ವಿಯೋಗ=ವಿರಹವು ಇವುಗಳಿಂದುಂಟಾದ, ದುಃಖ=ವ್ಯಸನದಿಂದ, ಸಹಿತಂ=ಕೂಡಿದಂಥಾದ್ದಾಗಿ, ಸೇವಾದಿಭಿಃ=ಪರಿಚರ್ಯ ಮೊದಲಾದವುಗಳಿಂದ, ನೀಯತೇ=ಕಳೆಯಲ್ಪಡುವದು, ವಾರಿತರಂಗಚಂಚಲತರೇ=ಉದಕದ ಅಲೆಯಂತೆ ಅತ್ಯಂತ ಚಪಲವಾದ, ಜೀವೇ=ಜೀವನದಲ್ಲಿ, ಪ್ರಾಣಿನಾಂ=ದೇಹಧಾರಿಗಳಿಗೆ, ಸೌಖ್ಯಂ=ಸುಖವು, ಕುತಃ=ಎಲ್ಲಿಯದು?॥೪೯॥

ತಾ॥ ಮನುಷ್ಯರಿಗೆ ನೂರು ಸಂವತ್ಸರಗಳು ಜೀವಿತಕಾಲವೆಂದು ಗೊತ್ತಾಗಿರುವದು, ಅದರಲ್ಲಿ ಸರಿಯಾಗಿ ಅರ್ಧವು ರಾತ್ರಿಯಲ್ಲಿ ಕಳೆದು ಹೋಗುವದು, ಮತ್ತೆ ಈ ಅರ್ಧದಲ್ಲಿ ಅರ್ಧವು ಬಾಲ್ಯದಿಂದಲೂ ಮುಪ್ಪಿನಿಂದಲೂ ಕಳೆದುಹೋಗುವದು. ಇನ್ನು ಉಳಿದ ಅತ್ಯಲ್ಪಕಾಲವಲ್ಲಿ ನಾನಾವಿಧ ವಾತಪಿತ್ತ ಜ್ವರಾದಿ ರೋಗಗಳೂ, ಪುತ್ರಮಿತ್ರ ಕಳತ್ರಾದಿ ವಿಯೋಗಗಳೂ, ಅಪರಿಮಿತವಾದ ವ್ಯಸನಗಳೂ ಸಂಭವಿಸುವವು. ಇವುಗಳನ್ನು ಅನುಭವಿಸುತ್ತಲೂ, ಜೀವನಕ್ಕಾಗಿ ಪರರ ಸೇವೆಯನ್ನು ಮಾಡುತಲೂ ಈಕಾಲವು ಕಳೆಯಲ್ಪಡುವದು. ಅಂತು ವಿಚಾರ ಮಾಡಿದರೆ ಪ್ರಾಣಿಗಳಿಗೆ ಕಾಲವುಮಾತ್ರ ಕಳೆದು ಸುಖಲೇಶವೂ ಇಲ್ಲದೆಹೋಗುವದು. ॥೪೯॥

ಶ್ಲೋ॥ ಕ್ಷಣಂಬಾಲೋಭೂತ್ವಾಕ್ಷಣಮಪಿಯುವಾಕಾಮರಸಿಕಃ ಕ್ಷಣಂ
ವಿತ್ತೈರ್ಹೀನಃಕ್ಷಣಮಪಿಚಸಂಪೂರ್ಣವಿಭವಃ । ಜರಾಜೀರ್ಣೈ
ರಂಗೈರ್ನಟಇವವಳೀ ಮಂಡಿತತನುರ್ನರಸ್ಸಂಸಾರಾಂತೇವಿಶತಿಯ
ಮಧಾನೀಯವನಿಕಾಂ .... .... ॥೫೦॥

ಟೀ॥ ಕಾಲತ್ರಯದಿಂದ ಕೂಡಿ ಬಾಲ್ಯಾದ್ಯವಸ್ಥೆಗಳಿಂದೆಲ್ಲರೂ ಮೃತರಾಗುವರೆಂದು ಹೇಳುತ್ತಾನೆ—ಕ್ಷಣಂ=ಕ್ಷಣಕಾಲ, ಬಾಲಃ=ಶಿಶುವು, ಭೂತ್ವಾ=ಆಗಿ, ಕ್ಷಣಮಪಿ=ಮತ್ತೆ ಕ್ಷಣಕಾಲ, ಕಾಮ=ವಿಷಯಗಳಲ್ಲಿ, ರಸಿಕಃ=ಅನುರಾಗವುಳ್ಳ, ಯುವಾ=ಪ್ರಾಯದವನು, ಭೂತ್ವಾ=ಆಗಿ, ಕ್ಷಣಂ=ಕ್ಷಣಕಾಲವು, ವಿತ್ತೈಃ=ದ್ರವ್ಯಗಳಿಂದ, ಹೀನಃ=ರಹಿತನಾದವನು, ಭೂತ್ವಾ=ಆಗಿ, ಕ್ಷಣಮಪಿ=ಮತ್ತೆ ಕ್ಷಣಕಾ

ಲ, ಸಂಪೂರ್ಣವಿಭವಶ್ಚ=ಪೂರ್ಣಧನಿಕನು, ಭೂತ್ವಾ=ಆಗಿ, ಕ್ಷಣಂ=ಕ್ಷಣಕಾಲ, ಜರಾಜೀರ್ಣೈಃ=ಮುಪ್ಪಿನಿಂದ ಶಿಥಿಲವಾದ, ಅಂಗೈಃ=ಅವಯವಗಳಿಂದ (ಉಪಲಕ್ಷಿತಃ=ಕೂಡಿದವನಾಗಿ) ವಳೀ=ಚರ್ಮದ ತಿರಿಗಳಿಂದ, ಮಂಡಿತ=ಅಲಂಕೃತವಾದ, ತನುಃ=ಶರೀರವುಳ್ಳವನು, ಭೂತ್ವಾ=ಆಗಿ, ನರಃ=ಮನುಷ್ಯನು, ನಟಇವ=ವೇಷಧಾರಿಯಾದ ನರ್ತಕನಂತೆ, ಸಂಸಾರಾಂತೇ=ಸಂಸಾರದ ಕೊನೆಯಲ್ಲಿ, ಯಮಧಾನೀ=ಯಮನ ರಾಜಧಾನಿಯೆಂಬ, ಯವನಿಕಾಂ=ತೆರೆಯನ್ನು, ವಿಶತಿ=ಪ್ರವೇಶಿಸುತ್ತಾನೆ. ... ... ... ॥೫೦॥

ತಾ ॥ ಲೋಕದಲ್ಲಿ ಮನುಷ್ಯನು ಮೊದಲು ಸ್ವಲ್ಪಕಾಲ ಬಾಲನಾಗಿಯೂ, ತರುವಾಯ ಕೊಂಚಕಾಲ ರಸಿಕ ಶಿಖಾಮಣಿಯಾದ ತರುಣನಾಗಿ, ಬಳಿಕ ಕ್ಷಣಕಾಲದರಿದ್ರನಾಗಿ, ಅನಂತರ ಸಂಪೂರ್ಣವಾದ ಸಂಪತ್ತುಳ್ಳವನಾಗಿ, ತದನಂತರ ಮುದಿತನದಿಂದ ಜೀರ್ಣಶರೀರವುಳ್ಳವನಾಗಿ, ಸುಕ್ಕಾದ ತೊಗಲಿನ ತಿರಿಗಳಿಂದೊಡಗೂಡಿ ಆಮೇಲೆ ಸಂಸಾರದ ಕಡೆಗೆ, ನಟನು ಹೇಗೆ ನಾನಾವೇಷಗಳನ್ನು ಧರಿಸಿ ತೆರೆಯೊಳಗೆ ಹೊಗುವನೋ ಅದರಂತೆ ತೆರೆಯಂತಿರುವ ಯಮಪುರಿಗೆ ತೆರಳುವನು. ॥೫೦॥

## ಯತಿನೃಪತಿಸಂವಾದ ವರ್ಣನಾರಂಭವು.

ಶ್ಲೋ॥ ತ್ವಂ ರಾಜಾ ವಯಮಪ್ಯುಪಾಸಿತ ಗುರುಪ್ರಜ್ಞಾಭಿಮಾನೋನ್ನತಾಃ
ಖ್ಯಾತಸ್ತ್ವಂ ವಿಭವೈರ್ಯಶಾಂಸಿ ಕವಯೋ ದಿಕ್ಷು ಪ್ರತನ್ವಂತಿ ನಃ ।
ಇತ್ಥಂ ಮಾನಧನಾತಿದೂರಮುಭಯೋರಪ್ಯಾವಯೋರಂತರಂ ಯ
ದ್ಯಸ್ಮಾಸು ಪರಾಙ್ಮುಖೋಸಿ ವಯಮಪ್ಯೇಕಾಂತತೋ ನಿಸ್ಪೃಹಾಃ ॥

ಟೀ॥ ವಿಷಯಸುಖವು ತುಚ್ಛವೆಂದು ಪರಿತ್ಯಜಿಸಿ ವೈರಾಗ್ಯದಿಂದ ಯತಿಭಾವವನ್ನು ವಹಿಸಿರುವಳಿಕಾತನಿಗೆ ಲೋಕವೇ ಲಕ್ಷ್ಯವಿಲ್ಲದ್ದರಿಂದ ರಾಜನೊಡನಾತನ ಸಂವಾದವನ್ನು ಅಭಿನಯಿಸಿ ತೋರಿಸುತ್ತಾನೆ—ತ್ವಂ=ನೀನು, ರಾಜಾ=ಅರಸು, ವಯಮಪಿ=ನಾವೂ, ಉಪಾಸಿತ=ಉಪಾಸನ ಮಾಡಲ್ಪಟ್ಟ, ಗುರು=ಆಚಾರ್ಯನಾಜ್ಞೆ, ಪ್ರಜ್ಞಾ=ತಿಳುವಳಿಕೆಯುಳ್ಳವ. ಅಭಿಮಾನ=ಗೌರವದಿಂದ, ಉನ್ನತಾಃ=ಶ್ರೇಷ್ಠರಾದವರು, ತ್ವಂ=ನೀನು, ವಿಭವೈಃ=ಸಂಪತ್ತುಗಳಿಂದ, ಖ್ಯಾತಃ=ಪ್ರಸಿದ್ಧನು. ಕವಯಃ=ಕವಿಗಳು, ನಃ=ನಮ್ಮ, ಯಶಾಂಸಿ=ಕೀರ್ತಿಗಳನ್ನು, ದಿಕ್ಷು=ದಿಕ್ಕುಗಳಲ್ಲಿ, ಪ್ರತನ್ವಂತಿ=ಪ್ರಖ್ಯಾತಿಪಡಿಸುವರು. ಇತ್ಥಂ=ಈಪ್ರಕಾರವಾಗಿ, ಉಭಯೋಃ=

ಹೆಚ್ಚಿರಾದ, ಆವಯೋಃ=ನಮಗೆ, ಅಂತರಂ=ತಾರತಮ್ಯವು, ಮಾನಧನ=ಗೌರವ ದ್ರವ್ಯಗಳಿಂದ, ಅತಿದೂರಂ=ಬಹುದೂರದಲ್ಲಿರುವದು, ಅಸ್ಮಾಸು=ನಮ್ಮಗಳ ವಿಷಯದಲ್ಲಿ, ಪರಾಙ್ಮುಖೋಸಿಯದಿ=ವಿಮುಖನಾದರೆ, ವಯಮಪಿ=ನಾವೂ, ಏಕಾಂತತಃ=ಕೇವಲವಾಗಿ, (ಅಂತರಂಗದಲ್ಲಿ) ನಿಸ್ಪೃಹಾಃ=ಆಶಾರಹಿತರು. ||೫೧||

ತಾ|| ಎಲೈ ಅರಸೇ! ನೀನು ರಾಜನೆಂದು ಪೂಜ್ಯನು, ನಾವು ಗುರು ಸೇವೆಯನ್ನು ಮಾಡಿ ಅದರಿಂದುಂಟಾದ ಪ್ರಜ್ಞೆಯಿಂದ ಶ್ರೇಷ್ಠರಾಗಿರುವೆವು. ನೀನು ವಿಭವಗಳಿಂದ ಪ್ರಸಿದ್ಧನಾಗಿರುವಿ, ನಮ್ಮನ್ನು ತೃಣೀಕರಣಾದಂತೆಣಿಸಿರುವ ಬ್ರಹ್ಮೇಂದ್ರಾದಿಸಂಪತ್ತುಳ್ಳ ಮಹಾನುಭಾವರೆಂದು ಕವಿಗಳು ದಿಕ್ಕುದಿಕ್ಕುಗಳಲ್ಲಿಯೂ ಸ್ತುತಿಸಿ, ಕೀರ್ತಿಯನ್ನು ಪ್ರಸಿದ್ಧಪಡಿಸುವರು. ಈ ಮೇರೆಗೆ ನಿನಗೂ ನಮಗೂ ದ್ರವ್ಯದಿಂದಲೂ, ಮಹಿಮೆಯಿಂದಲೂ, ಪರ್ವತಕ್ಕೂ ಸಾಸುವೆಗೂ ಇರುವಷ್ಟು ತಾರತಮ್ಯವಿರುವದು. ಒಂದುವೇಳೆ ನಮ್ಮಲ್ಲಿ ನೀನು ಆದರಮಾಡದೆ ಹೋದರೆ ಯಾವವಿಧವಾದ ಆಶೆಯೂ ಇಲ್ಲದಿರುವದರಿಂದ ನಿನ್ನಿಂದ ನಮಗೆ ಆಗಬೇಕಾಗಿರುವದು ಲೇಶವೂ ಇಲ್ಲವು. .... .... .... ||೫೧||

ಶ್ಲೋ|| ಅರ್ಥಾನಾಮೀಶಿಷೇತ್ವಂ ವಯಮಪಿಚಗಿರಾಮೀಶ್ಮಹೇಯಾವದ
ರ್ಥಂಶೂರಸ್ತ್ವಂವಾದಿದರ್ಪವ್ಯುಪಶಮನವಿಧಾವಕ್ಷಯಂಪಾಟವಂ
ನಃ ಸೇವಂತೇತ್ವಾಂಧನಾಢ್ಯಾಮತಿಮಲಹತಯೇಮಾಮಪಿಶ್ರೋ
ತುಕಾಮಾಮಯ್ಯಪ್ಯಾಸ್ಥಾನತೇಚೇತ್ತ್ವಯಿಮಮನಿತರಾಮೇ
ವರಾಜನ್ನನಾಸ್ಥಾ || .... .... ||೫೨||

ಟೀ|| ಹೇಳಿದ ಅರ್ಥವನ್ನೇ ಬೇರೆಬಗೆಯಾಗಿ ಹೇಳುತ್ತಾನೆ—ತ್ವಂ=ನೀನು, ಅರ್ಥಾನಾಂ=ದ್ರವ್ಯಗಳಿಗೆ, ಈಶಿಷೇ=ಈಶ್ವರನಾಗಿರುವಿ, ವಯಮಪಿಚ=ನಾವೂ, ಯಾವದರ್ಥಂ=ಅರ್ಥವುಳ್ಳ ಸಮಸ್ತವಾದ, ಗಿರಾಂ=ವಾಕ್ಯಗಳಿಗೆ, ಈಶ್ಮಹೇ=ಪ್ರಭುಗಳಾಗಿರುವೆವು, ತ್ವಂ=ನೀನು, ಶೂರಃ=ವೀರನು, ನಃ=ನಮಗೆ, ವಾದಿ=ಪ್ರತಿವಾದಿಗಳ, ದರ್ಪ=ಅಹಂಕಾರದ, ವ್ಯುಪಶಮನ=ಶಾಂತಿಮಾಡುವ, ವಿಧೌ=ಕಾರ್ಯದಲ್ಲಿ, ಅಕ್ಷಯಂ=ಅಮೋಘವಾದ, ಪಾಟವಂ=ಸಾಮರ್ಥ್ಯವು, ಧನಾಢ್ಯಾಃ=ಧನಿಕರು, ತ್ವಾಂ=ನಿನ್ನನ್ನು, ಸೇವಂತೇ=ಸೇವಿಸುವರು, ಶ್ರೋತುಕಾಮಾಃ=ಶಾಸ್ತ್ರಶ್ರವಣೇಚ್ಛೆಯುಳ್ಳವರು, ಮತಿ=ಬುದ್ಧಿಯ, ಮಲ=ಮಾಲಿನ್ಯದ, ಹತಯೇ=ನಿವಾರಣೆಗಾಗಿ, ಮಾಮಪಿ=ನನ್ನನ್ನೂ, ಸೇವಂತೇ=ಸೇವಿಸುವರು, ರಾಜನ್=ಎಲೈ ದೊರೆಯೇ, ನು.

ಯಿ=ನನ್ನಲ್ಲಿ. ಆಸ್ಥಾ=ವಿಶ್ವಾಸವು, ತೇ=ನಿನಗೆ, ನಚೇತ್=ಇಲ್ಲವಿದ್ದರೆ, ಮಮ=ನನಗೂ. ತ್ವಯಿ=ನಿನ್ನಲ್ಲಿ. ನಿತರಾಮೇವ=ವಿಶೇಷವಾಗಿಯೇ. ಅನಾಸ್ಥಾ=ಅನಾದರವು.

ತಾ॥ ಎಲೈಅರಸೇ! ನೀನು ದ್ರವ್ಯಕ್ಕೆ ಅಧಿಪತಿಯಾಗಿರುವಿ, ನಾವು ನಾನಾವಿಧ ರಹಸ್ಯಾರ್ಥವುಳ್ಳ ವಾಕ್ಯಗಳಿಗೆಲ್ಲಾ ಯಜಮಾನರಾಗಿರುವೆವು. ಶತ್ರುಸಂಹಾರದಲ್ಲಿ ನೀನು ಶೂರನಾಗಿರುವಿ. ಸಭಾಮುಖದಲ್ಲಿ ವಿವಾದಕ್ಕೆ ಬಂದ ವಿದ್ವಜ್ಜನರ ದರ್ಪವನ್ನು ಇಳಿಗಿಸುವದರಲ್ಲಿ ನಾವು ಅತ್ಯಂತ ಪ್ರೌಢರಾಗಿರುವೆವು. ಧನಿಕರು ನಿನ್ನನ್ನು ಸೇವಿಸುವರು, ಶಾಸ್ತ್ರಾಧ್ಯಯನ ಮಾಡಬೇಕೆಂಬುವರೆಲ್ಲರೂ ಬುದ್ಧಿಗೆ ನೈರ್ಮಲ್ಯವನ್ನು ಸಂಪಾದಿಸುವದಕ್ಕೆ ನಮ್ಮನ್ನು ಸೇವಿಸುವರು, ನಮ್ಮಲ್ಲಿ ನೀನು ಅನಾದರ ಮಾಡುವದಾದರೆ, ನಮಗೆ ನಿನ್ನಲ್ಲಿ ಸುತರಾಂ ಅನಾದರವೆಂದು ತಿಳಿ. .... ॥೫೦॥

ಶ್ಲೋ॥ ವಯಮಿಹಪರಿತುಷ್ಟಾ ವಲ್ಕಲೈಸ್ತ್ವಂದುಕೂಲೈಸ್ಸಮಇವಪರಿ

ತೋಷೋನಿರ್ವಿಶೇಷೋವಿಶೇಷಃ। ಸತುಭವತುದರಿದ್ರೋಯಸ್ಯ

ತೃಷ್ಣಾವಿಶಾಲಾಮನಸಿಚಪರಿತುಷ್ಟೇಕೋರ್ಥವಾನ್ಕೋದರಿದ್ರಃ॥

ಟೀ॥ ಸನ್ಯಸ್ತರಾದ ನಾವುಗಳೆಲ್ಲಿದ್ದರೂ ಸಂತೋಷಕ್ಕೆ ನ್ಯೂನತೆ ಇಲ್ಲವೆಂದು ಹೇಳುತ್ತಾನೆ.—ಇಹ=ಇಲ್ಲಿ ವಯಂ=ನಾವು. ವಲ್ಕಲೈಃ=ನಾರುಮಡಿಗಳಿಂದ. ಸಂತುಷ್ಟಾಃ=ತೃಪ್ತರಾಗಿರುವೆವು. ತ್ವಂ=ನೀನು, ದುಕೂಲೈಃ=ಪಟ್ಟೆವಸ್ತ್ರಗಳಿಂದ. ಸಂತುಷ್ಟಃ=ತೃಪ್ತನಾಗಿರುವಿ. ಪರಿತೋಷಃ=ಸಂತೋಷವು ಸಮಇವ=ಸಮಾನವಾದದ್ದೆ. ವಿಶೇಷಃ=ಉತ್ಕರ್ಷವು ನಿರ್ವಿಶೇಷಃ=ಅತಿಶಯರಹಿತವಾದದ್ದು. (ತಾರತಮ್ಯವಿಲ್ಲವು) ಯಸ್ಯ=ಯಾವನಿಗೆ. ತೃಷ್ಣಾ=ಆಶೆಯು, ವಿಶಾಲಾ=ಅಧಿಕವಾದದ್ದೋ. ಸಃ=ಅವನು. ದರಿದ್ರಃ=ಬಡವನೇ, ಭವತು=ಆಗಲಿ. ಮನಸಿಚ=ಮನಸ್ಸು ಪರಿತುಷ್ಟೇ=ತೃಪ್ತವಾದದ್ದಾಗುತ್ತಿರಲಾಗಿ. ಅರ್ಥವಾನ್=ಧನಿಕನು. ಕಃ=ಯಾರು ದರಿದ್ರಃ=ಬಡವನು. ಕಃ=ಯಾರು. .... .... ।೫೧।

ತಾ॥ ಎಲೈಅರಸೇ! ನೀನು ದಿವ್ಯವಾದ ಪೀತಾಂಬರಗಳಿಂದ ಸಂತುಷ್ಟನಾಗಿದ್ದರೂ ನಾವು ನಾರುಮಡಿಗಳಿಂದಲೇ ತೃಪ್ತರಾಗಿರುವೆವು. ಲೋಕದಲ್ಲಿಯಾವನಾದರೂ ವಿಶೇಷಆಶೆಯುಳ್ಳವನಾಗಿ ದರಿದ್ರನೂ ಆಗಿದ್ದರೂ ಮನಸ್ಸು ತೃಪ್ತವಾದರೆ ದ್ರವ್ಯವಂತನಿಗೂ ದರಿದ್ರನಿಗೂ ಲೇಶವೂ ಭೇದವಿರುವದಿಲ್ಲವು. .... .... ॥೫೧॥

ಶ್ಲೋ॥ ಫಲಮಲಮಶನಾಯಸ್ವಾದುಪಾನಾಯತೋಯಂ ಕ್ಷಿತಿರಪಿಶಯ

ನಾರ್ಥಂವಾಸಸೇವಲ್ಕಲಂಚ । ನವಧನಮಧುಪಾನಭ್ರಾಂತಸ

ರ್ವೇಂದ್ರಿಯಾಣಾ ಮವಿನಯಮನುಮಂತುಂನೋತ್ಸಹೇದುರ್ಜ
ನಾನಾಂ ॥ .... .... ॥೫೪॥

ಟೀ॥ ಅಶನಾಯ=ಆಹಾರಕ್ಕೆ, ಫಲಂ=ಹಣ್ಣು, ಅಲಂ=ಸಾಕು, ಪಾನಾಯ=ಕುಡಿಯುವದಕ್ಕೆ, ಸ್ವಾದು=ರುಚಿಯಾದ, ತೋಯಂ=ಜಲವು, ಅಲಂ=ಸಾಕು, ಶಯನಾರ್ಥಂ=ಮಲಗುವದಕ್ಕೆ. ಹಾಸುವದಕ್ಕೆ. ಕ್ಷಿತಿರಪಿ=ಭೂಮಿಯೇ, ಅಲಂ=ಸಾಕು, ವಾಸಸೇ=ಹೊದಿಯುವದಕ್ಕೆ, ವಲ್ಕಲಂಚ=ನಾರುಮಡಿಯು. ಅಲಂ=ಸಾಕು, ನವ=ನೂತನವಾದ, ಧನ=ದ್ರವ್ಯವೆಂಬ, ಮಧುಪಾನ=ಮದ್ಯಪಾನದಿಂ, ಭ್ರಾಂತ=ಮದಿಸಿದ, ಸರ್ವೇಂದ್ರಿಯಾಣಾಂ=ಸಕಲೇಂದ್ರಿಯಗಳುಳ್ಳ, ದುರ್ಜನಾನಾಂ=ನೀಚರ, ಅವಿನಯಂ=ಅವಿಧೇಯತೆಯನ್ನು, ಅನುಮಂತುಂ=ಸಮ್ಮತಿಸುವದಕ್ಕೆ, ನೋತ್ಸಹೇ=ಕುತೂಹಲ ಪಡುವದಿಲ್ಲ. .... ... ॥೫೪॥

ತಾ॥ ಎಲೈ ಅಗಸೇ! ಕೇಳು; ಆಹಾರಮಾಡುವದಕ್ಕೆ ಹಣ್ಣೇ ಸಾಕು. ದಾಹವಾದರೆ ಕುಡಿಯುವದಕ್ಕೆ ನೀರೇಸಾಕು. ಹೊದಿಯುವದಕ್ಕೆ ನಾರುಮಡಿಯೇಸಾಕು. ಮಲಗುವದಕ್ಕೆ ಭೂಮಿಯೇಸಾಕು. ಇದರಿಂದಲೇ ತೃಪ್ತರಾಗುವೆವು. ಆದರೆ ಧನವೆಂಬ ಮದ್ಯಪಾನವನ್ನು ಮಾಡಿ ಮದಿಸಿ ಕಾಣುಕಾಣದೆ ಕಿವಿಕೇಳದೆ ಕೊಬ್ಬಿರುವ ನೀಚರ ಅವಿನಯವನ್ನು ಮಾತ್ರ ಸಹಿಸಲಾರೆವು. .... .... ॥೫೪॥

ಶ್ಲೋ॥ ಅಶ್ನೀಮಹಿವಯಂಭಿಕ್ಷಾಮಾಶಾವಾಸೋವಸೀಮಹಿ । ಶಯೀಮ
ಹಿಮಹೀಪೃಷ್ಠೇ ಕುರ್ವೀಮಹಿಕಿಮೀಶ್ವರೈಃ ॥೫೫॥

ಟೀ॥ ಹೇಳಿದರ್ಥವನ್ನು ಬೇರೆ ಬಗೆಯಿಂದ ಹೇಳುತ್ತಾನೆ—ವಯಂ=ನಾವು, ಭಿಕ್ಷಾಂ=ಭಿಕ್ಷಾನ್ನವನ್ನು, ಅಶ್ನೀಮಹಿ=ಭುಜಿಸುವೆವು, ಆಶಾವಾಸಃ=ದಿಕ್ಕೆಂಬ ವಸ್ತ್ರವನ್ನು, ವಸೀಮಹಿ=ಹೊದ್ದುಕೊಳ್ಳುವೆವು, ಮಹೀಪೃಷ್ಠೇ=ಭೂಮಿಯ ಮೇಲೆ ಶಯೀಮಹಿ=ಮಲಗುವೆವು, ಈಶ್ವರೈಃ=ಪ್ರಭುಗಳಿಂದ, (ಐಶ್ವರ್ಯದಿಂದ) ಕಿಂಕುರ್ವೀಮಹಿ=ಏನುಮಾಡೋಣ. .... .... ॥೫೫॥

ತಾ॥ ಎಲೈರಾಜಸೇ! ಕೇಳು, ಭಿಕ್ಷಾನ್ನವನ್ನು ಭೋಜನ ಮಾಡುವೆವು. ದಿಗಂಬರರಾಗಿಯೇ ಇರುವೆವು, ನೆಲದಮೇಲೆಯೇ ಮಲಗುವೆವು, ಐಶ್ವರ್ಯವಂತರಿಂದ ನಮಗೇನಾಗಬೇಕಾಗಿರುವದು. ॥೫೫॥

ಶ್ಲೋ॥ ನನಟಾನವಿಟಾನಗಾಯಕಾನಚಸಭ್ಯೇತರವಾದಚುಂಚವಃ । ನೃಪ
ಮೀಕ್ಷಿತುಮತ್ರಕೇವಯಂಸ್ತನಭಾರನಮಿತಾನಯೋಷಿತಃ ॥

ಟೀ॥ ಯತಿಗೆ ರಾಜದರ್ಶನ ಯೋಗ್ಯತೆಯಿಲ್ಲವೆಂಬ ನೆವದಿಂದ ರಾಜನನ್ನು ನಿಂದಿಸುತ್ತಾನೆ—(ವಯಂ=ನಾವು,) ನನಟಾಃ=ವೇಷಧಾರಿಗಳಾದ ನರ್ತಕರಲ್ಲವು, ನವಿಟಾಃ=ಕಾಮುಕರಲ್ಲ, (ನಾಯಕಿಯರನ್ನನುಕೂಲಪಡಿಸುವದರಲ್ಲಿ ಚತುರರಲ್ಲ) ನಗಾಯಕಾಃ=ಸಂಗೀತಗಾರರಲ್ಲ, ಸಭ್ಯ=ಸಭಾಯೋಗ್ಯರಾದವರಿಗಿಂತಲೂ, ಇತರ=ಅನ್ಯರೊಡನೆ, ವಾದ=ವಿವಾದಮಾಡುವದರಲ್ಲಿ, ಚುಂಚವಃ=ಸಮರ್ಥರು, ನಚ=ಅಲ್ಲವು, ಸ್ತನ=ಕುಚಗಳ, ಭಾರ=ಗೌರವದಿಂದ, ಆನಮಿತ=ನಮ್ರವಾದಯೋಷಿತಃ=ಕಾಮಿನಿಯರೂ, ನ=ಅಲ್ಲವು, ಅತ್ರ=ಇವರಲ್ಲಿ, ನೃಪಂ=ರಾಜನನ್ನು, ಈಕ್ಷಿತುಂ=ನೋಡುವದಕ್ಕೆ ಕೇ=ಯಾರು, ವೈತಾಳೀಯವೃತ್ತವು. ॥೫೬॥

ತಾ॥ ನಾವು ನಾನಾವಿಧ ವೇಷಗಳನ್ನು ಹಾಕಿ ನರ್ತನಮಾಡುವ ನಟರಲ್ಲ. ಸಂಗೀತ ವನ್ನು ಹಾಡುವದರಲ್ಲಿ ಚತುರರಾದ ಗಾಯಕರೂ ಅಲ್ಲ. ಸಭಾಜನರಲ್ಲದೆ ಇತರ ಸಾಧಾರಣ ಜನರೊಡನೆ ಚಮತ್ಕಾರವಾಗಿ ವಿವಾದಿಸಿ ಅವರ ಮನಸ್ಸಂತೋಷಪಡಿಸುವದರಲ್ಲಿ ನಮಗೆ ಸಾಮರ್ಥ್ಯವಿಲ್ಲ. ಉನ್ನತವಾದ ಸ್ತನಗಳಿಂದ ಸ್ವಲ್ಪ ಬಾಗಿರುವ ದೇಹವುಳ್ಳ ಕಾಮಿನಿಯರೂ ಅಲ್ಲ. ಇವರಲ್ಲಿ ಯಾರಾದರೂ ಒಬ್ಬರಾಗಿದ್ದರೆ ರಾಜದರ್ಶನ ಯೋಗ್ಯತೆಯುಂಟಾಗುತ್ತಿತ್ತು. ಎಂದರೆ ಮೇಲೆ ಹೇಳಿದವರೇ ರಾಜರ ಬಳಿಯಲ್ಲಿರತಕ್ಕವರು ಎಂದಾಶಯವು. .... .... ॥೫೬॥

ಶ್ಲೋ॥ ವಿಪುಲಹೃದಯೈರೀಶೈರೇತಜ್ಜಗಜ್ಜನಿತಂಪುರಾ ವಿಧೃತಮಪರೈ
ರ್ದತ್ತಂಚಾನ್ಯೈರ್ವಿಜಿತ್ಯ ತೃಣಂಯಥಾ । ಇಹಹಿಭುವನಾನ್ಯ
ನ್ಯೈರ್ಧೀರಾಶ್ಚತುರ್ದಶಭುಂಜತೇ ಕತಿಪಯಪುರಸ್ವಾಮ್ಯೇಪುಂಸಾಂಕ
ಏಷಮದಜ್ವರಃ ॥ .... .... ॥೫೭॥

ಟೀ॥ ರಾಜನಿಂದೆಯನ್ನೇ ನಾಲ್ಕು ಶ್ಲೋಕಗಳಿಂದ ವಿವರಿಸುತ್ತಾನೆ—ಪುರಾ=ಪೂರ್ವಕಾಲದಲ್ಲಿ, ವಿಪುಲಹೃದಯೈಃ=ಉದಾರಬುದ್ಧಿಯುಳ್ಳ, ಈಶೈಃ=ಹರಿಶ್ಚಂದ್ರಾದಿ ಸಾರ್ವಭೌಮರಿಂದ, ಏತತ್=ಈ, ಜಗತ್=ಲೋಕವು, ಜನಿತಂ=ಉತ್ಪನ್ನವಾಡಲ್ಪಟ್ಟಿತು, ಅಪರೈಃ=ಯಯಾತಿ ಮೊದಲಾದವರಿಂದ, ವಿಧೃತಂ=ಧರಿಸಲ್ಪಟ್ಟಿತು, ಅನ್ಯೈಃ=ಬಲಿ ಮೊದಲಾದವರಿಂದ, ವಿಜಿತ್ಯ=ಜಯಿಸಿ, ತೃಣಂಯಥಾ=ಹುಲ್ಲಿನಂತೆ, ದತ್ತಂಚ=ಕೊಡಲ್ಪಟ್ಟಿತು, ಇಹಹಿ=ಈಗಲೂ, ಅನ್ಯೈಃಧೀರಾಃ=ಇತರ ಶೂರರು, ಚತುರ್ದಶಭುವನಾನಿ=ಹದಿನಾಲ್ಕು ಲೋಕಗಳನ್ನು, ಭುಂಜತೇ=ಅನುಭವಿಸುವರು, ಕತಿಪಯ ಪುರಸ್ವಾಮ್ಯೇ=ಕೆಲವು ಗ್ರಾಮಗಳ ಆಧಿಪತ್ಯದಲ್ಲಿ, ಪುಂಸಾಂ=ಪುರುಷರಿಗೆ, ಏಷಃ=ಈ, ಮದಜ್ವರಃ=ದರ್ಪವೆಂಬ ಜ್ವರವು. ಕಃ=ಯಾವದು, ಹರಿಣೀವೃತ್ತವು. ... ... ... ॥೫೭॥

ತಾ॥ ಪೂರ್ವದಲ್ಲಿ ಹರಿಶ್ಚಂದ್ರ ಮೊದಲಾದ ಮಹಾರಾಯರು ಸಂಪೂರ್ಣ ಧರ್ಮಾಚರಣದಿಂದ ಈ ಭೂಮಂಡಲವನ್ನು ಸ್ಥಾಪಿಸಿದರು. ಮತ್ತೆ ಕೆಲವರಾದ ಯಯಾತಿ ಮೊದಲಾದವರು ಚನ್ನಾಗಿ ಪಾಲಿಸಿದರು. ಬಲಿ ಚಕ್ರವರ್ತಿ ಮೊದಲಾದವರು ಜಯಿಸಿ ತಮ್ಮ ಅಧೀನಮಾಡಿಕೊಂಡು ಹುಲ್ಲಿನಂತೆಣಿಸಿ ಯಾಚಕರಿಗೆ ದಾನ ಮಾಡಿದರು. ಈಗಲೂ ಕೆಲರು ಈ ಹದಿನಾಲ್ಕು ಲೋಕಗಳನ್ನೂ ಘನತೆಯಿಂದ ಅನುಭವಿಸುತ್ತಿರುವರು. ಹೀಗಿರುವಲ್ಲಿ ಸಾಮಾನ್ಯವಾಗಿ ೫-೬ ಗ್ರಾಮಗಳಿಗೆ ಯಜಮಾನರಾಗಿ ದೊರೆಗಳೆಂದೆನ್ನಿಸಿಕೊಂಡಿರುವ ಇವರಿಗೆಲ್ಲಾ ಪೂರ್ವಿಕರನ್ನು ನೆನಸಿ ಲಜ್ಜಿಸಬೇಕಾಗಿರುವಲ್ಲಿ ಈ ದುರಹಂಕಾರವೇತಕ್ಕೆ ನಿರರ್ಥಕವಲ್ಲವೆ?

ಶ್ಲೋ॥ ಅಭುಕ್ತಾಯಾಂಯಸ್ಯಾಂಕ್ಷಣಮಪಿನಜಾತಂನೃಪಶತೈರ್ಭುವಸ್ತ
ಸ್ಯಾಲಾಭೇಕಇವಬಹುಮಾನಃಕ್ಷಿತಿಭೃತಾಂ ॥ತದಂಶಸ್ಯಾಪ್ಯಂಶೇ
ತದವಯವಲೇಶೇಪಿಪತಯೋ ವಿಷಾದೇಕರ್ತವ್ಯೇವಿದಧತಿಜಡಾಃ
ಪ್ರತ್ಯುತಮುದಂ　....　....　॥೫೮॥

ಟೀ॥ ನೃಪಶತೈಃ=ಅನೇಕ ಭೂಪಾಲರಿಂದ, ಯಸ್ಯಾಂ=ಯಾವ, ಭುವಿ=ಭೂಮಿಯು, ಅಭುಕ್ತಾಯಾಂ=ಅನುಭವಿಸಲ್ಪಡದಿರುವಲ್ಲಿ, ಕ್ಷಣಮಪಿ=ಕ್ಷಣಕಾಲವಾದರೂ, ನಜಾತಂ=ಇರಲಿಲ್ಲವೋ! ತಸ್ಯಾಃ=ಆ, ಭುವಃ=ಭೂಮಿಯ, ಲಾಭೇ=ಪ್ರಾಪ್ತಿಯಲ್ಲಿ, ಕ್ಷಿತಿಭೃತಾಂ=ಭೂಪಾಲರಿಗೆ, ಬಹುಮಾನಃ=ಉತ್ಕರ್ಷವು, ಕಇವ=ಎಷ್ಟರದು, ತದಂಶಸ್ಯ=ಆ ಭೂಮಿಯ ಒಂದುಭಾಗದ, ಅಂಶೇಪಿ=ಒಂದುಭಾಗದಲ್ಲಿಯೂ, ಅವಯವ=ಅಂಶದ, ಲೇಶೇಪಿ=ಚೂರಿನಲ್ಲಿಯೂ, ಪತಯಃ=ಪ್ರಭುಗಳಾದ, ಜಡಾಃ=ಮೂಢರು, ವಿಷಾದೇ=ವ್ಯಸನವು, ಕರ್ತವ್ಯೇ=ಮಾಡತಕ್ಕದ್ದಾಗಿರಲಾಗಿ, ಪ್ರತ್ಯುತ=ಬದಲಾಗಿ, ಮುದಂ=ಸಂತೋಷವನ್ನು, ವಿದಧತಿ=ಮಾಡುತ್ತಾರೆ.

ತಾ॥ ಪೂರ್ವದಲ್ಲಿ ಅನೇಕ ಮಹಾರಾಜರು ಕ್ಷಣವಿರಾಮವಿಲ್ಲದಂತೆ ಸಮಸ್ತ ಭೂಮಂಡಲವನ್ನು ಅನುಭವಿಸುತ್ತಿದ್ದರು. ಅಂಥವರಿಗೆ ಬಹುಮಾನವೆಂಬದು ಅತ್ಯಲ್ಪವಾಗಿಯೂ, ಲಕ್ಷ್ಯವಿಲ್ಲದ್ದಾಗಿಯೂ ಇರುವದು. ಹೀಗಿರುವಲ್ಲಿ ಭೂಮಂಡಲದ ಅನೇಕ ಭಾಗಗಳಲ್ಲೊಂದು ಭಾಗದ ಚೂರು ಮಾಳಿಗೆ ದೊರೆಗಳಾಗಿರುವ ಕ್ಷುದ್ರ ಮೂಢರಾದ ನಮ್ಮ ಅವಸ್ಥೆಯು ಇಷ್ಟು ಹೀನವಾದದ್ದೆಂದು ವ್ಯಥೆಪಡಬೇಕಾಗಿರುವಲ್ಲಿ, ಇದಕ್ಕೆವಿಪರೀತವಾಗಿ ಮಹಾ ಸಂತೋಷಪಡುವರು. ಅಹಹ! ಆಶ್ಚರ್ಯವಾಗಿರುವದು. ॥೫೮॥

ಶ್ಲೋ॥ ಮೃತ್ಪಿಂಡೋಜಲರೇಖಯಾವಲಯಿತಸ್ಸರ್ವೋಪ್ಯಯಂನನ್ವಣುಃ
ಸ್ವಾಂಶೀಕೃತ್ಯತಮೇವಸಂಗರಶತೈರಾಜ್ಞಾಂಗಣಾಭುಂಜತೇ॥ ತೇದ
ದ್ಯುರ್ದದತೋಥವಾಕಿಮಪರಂಕ್ಷುದ್ರಾದರಿದ್ರಾಭೃಶಂಧಿಗ್ಧಿಕ್ತಾನ್
ಪುರುಷಾಧಮಾನ್ಧನಕಣಾನ್ವಾಂಛಂತಿತೇಭ್ಯೋಪಿಯೇ ॥೫೯॥

ಟೀ॥ ಈ ಕ್ಷುದ್ರರಾಜರನ್ನ ಯಾಚಿಸುವವರು ಇವರಿಗಿಂತಲೂ ತುಚ್ಛರೆಂದು ಹೇಳುತ್ತಾನೆ—ಜಲ=ಉದಕದ, ರೇಖಯಾ=ಗೆರೆಯಿಂದ, ವಲಯಿತಃ=ಸುತ್ತಲ್ಪಟ್ಟಿರುವ, ಸರ್ವಃ=ಸಮಸ್ತವಾದ, ಮೃತ್ಪಿಂಡಃ=ಮಣ್ಣಿನ ಉಂಡೆಯು, ಅಣುರ್ನನು=ಸ್ವಲ್ಪವಲ್ಲವೆ, ತಮೇವ=ಆ ಮಣ್ಣಿನುಂಡೆಯನ್ನೇ, ಸಂಗರಶತೈಃ=ಅನೇಕ ಯುದ್ಧಗಳಿಂದ, ಸ್ವಾಂಶೀಕೃತ್ಯ=ತಮ್ಮಭಾಗವಾಗಿ ಮಾಡಿಕೊಂಡು, ರಾಜ್ಞಾಂ=ದೊರೆಗಳ, ಗಣಾಃ=ಸಮುದಾಯಗಳು, ಭುಂಜತೆ=ಅನುಭವಿಸುವರೋ, ತೆ=ಅವರು, ದದ್ಯುಃ=ಕೊಡುವರೆ, ಅಥವಾ=ಪಕ್ಷಾಂತರದಲ್ಲಿ, ದದತಃ=ಕೊಡುವರಾದರೋ, ಅಪರಂ=ಮತ್ತೊಂದುದುಷ್ಕರವು. ಕಿಂ=ಯಾವದುಂಟು, ಭೃಶಂ=ಅತ್ಯಂತವಾಗಿ. ಕ್ಷುದ್ರಾಃ=ತುಚ್ಛರು, ದರಿದ್ರಾಶ್ಚ=ನಿರ್ಭಾಗ್ಯರು, ತೇಭ್ಯೋಪಿ=ಆ ನಿರ್ಭಾಗ್ಯ ರಾಜರಿಂದಲೂ, ಯೆ=ಯಾರು, ಧನಕಣಾನ್=ದ್ರವ್ಯಲೇಶಗಳನ್ನು, ವಾಂಛಂತಿ=ಅಪೇಕ್ಷಿಸುವರೋ, ತಾನ್=ಆ, ಪುರುಷಾಧಮಾನ್=ಅತ್ಯಂತಾಧಮ ಜನರನ್ನು, ಧಿಕ್‌ಧಿಕ್=ನಿಂದಿಸು, ನಿಂದಿಸು. ... .... .... ॥೫೯॥

ತಾ॥ ಲೋಕದಲ್ಲಿ ಈನಮಗೆ ಕಾಣಬರುವ ಭೂಮಂಡಲವು ಸಮುದ್ರರೂಪವಾದ ಜಲರೇಖೆಯಿಂದ ಸುತ್ತಲ್ಪಟ್ಟಿರುವದು. ಈ ಅಲ್ಪಭೂಮಿಯನ್ನು ಅನೇಕ ರಾಜರು ಒಬ್ಬರಿಗೊಬ್ಬರು ಹೊಡೆದಾಡಿ ಒಂದೊಂದು ಸೇರೆಯಗಲದ ನೆಲಕ್ಕೆ ಒಬ್ಬೊಬ್ಬ ರಾಜನಾಗಿರುವನು. ಈ ತುಚ್ಛ ರಾಜರು ದಾನಮಾಡುವರೆ? ಮಾಡುವದೇ ಇಲ್ಲ, ಅಥವಾ ಒಂದುವೇಳೆ ಮಾಡಿದರೂ ಅದೂ ಅತ್ಯಲ್ಪವಾಗಿಯೇ ಇರುವದು. ಅಂಥ ಕ್ಷುದ್ರರಾಜರನ್ನು ಆಶ್ರಯಿಸಿ ಯಾಚಿಸತಕ್ಕವರು ಶುದ್ಧ ಅಧಮಾಧಮರಲ್ಲವೆ? ॥೫೯॥

ಶ್ಲೋ॥ ಸಜಾತಃಕೋಪ್ಯಾಸೀನ್ಮದನರಿಪುಣಾಮೂರ್ಧ್ನಿಧವಳಂಕಪಾಲಂ
ಯಸ್ಯೋಚ್ಚೈರ್ವಿನಿಹಿತಮಲಂಕಾರವಿಧಯೇ ॥ ನೃಭಿಃಪ್ರಾಣ
ತ್ರಾಣಪ್ರವಣಮತಿಭಿಃಕೈಶ್ಚಿದಧುನಾನಮದ್ಭಿಃಕಃ ಪುಂಸಾಮಯ
ಮತುಲದರ್ಪಜ್ವರಭರಃ ॥ .... .... ॥೬೦॥

ಟೀ॥ ಮುಂದೆ ಹೇಳಲ್ಪಡುವ ಜನ್ಮವೇ ಸಫಲವೆಂದು ಹೇಳುತ್ತಾನೆ—ಸಃ=ಆ, ಕೋಪಿ=ಒಬ್ಬಾನೊಬ್ಬ ಪುರುಷನೇ, ಜಾತಃ=ಹುಟ್ಟಿದವನು, ಯಸ್ಯ=ಯಾವ

ಮನುಷ್ಯನ, ಧವಳಂ=ಶುಭ್ರವಾದ, ಕಪಾಲಂ=ತಲೆಯ ಚಿಪ್ಪು, ಮದನರಿಪುಣಾ=ಈಶ್ವರನಿಂದ, ಉಚ್ಚೈಃ=ಉನ್ನತವಾದ, ಮೂರ್ಧ್ನಿ=ಶಿರಸ್ಸಿನಲ್ಲಿ, ಅಲಂಕಾರವಿಧಯೆ=ಭೂಷಣವಿಧಾನಕ್ಕಾಗಿ, ವಿನಿಹಿತಂ=ಇಡಲ್ಪಟ್ಟಿತೋ, ಅಧುನಾ=ಈಗ, ಪ್ರಾಣಾ=ಪ್ರಾಣವಾಯುಗಳ, ತ್ರಾಣ=ಪಾಲನೆಯಲ್ಲಿ, ಪ್ರವಣ=ಅಧೀನವಾದ, ಮತಿಭಿಃ=ಬುದ್ಧಿಯುಳ್ಳ, ನಮದ್ಭಿಃ=ನಮ್ರರಾದ, ಕೈಶ್ಚಿತ್=ಕೆಲವರಾದ, ನೃಭಿಃ=ಮನುಷ್ಯರಿಂದ, ಪುಂಸಾಂ=ಪೌರುಷಶಾಲಿಗಳೆಂದು ತಿಳಿದಿರುವ ಭೂಪಾಲರ, ಅಯಂ=ಈ, ಅತುಲ=ಅಸಮಾನವಾದ, ದರ್ಪ=ಅಭಿಮಾನವೆಂಬ, ಜ್ವರಭರಃ=ಜ್ವರಾತಿಶಯವು, ಕಃ=ಎಂಥಾದ್ದು. .... .... ... ॥೬೦॥

ತಾ॥ ಯಾವನ ತಲೆಯ ಚಿಪ್ಪನ್ನು ಮದನಾರಿಯಾದ ಶಂಕರನು ತನ್ನುತ್ತಮವಾದುತ್ತಮಾಂಗಕ್ಕೆ ಅಲಂಕಾರಕ್ಕಾಗಿ ಗ್ರಹಿಸಿ ಧರಿಸಿದನೋ ಅಂಥವನೊಬ್ಬನ ಜನ್ಮವೇ ಸಫಲವಲ್ಲದೆ ಕಡನೆ ಹೊಟ್ಟೆಹೊರಿಯುವದಕ್ಕಾಗಿ ಬೇರೆ ಗತಿಇಲ್ಲದಂತೆ ಅಡ್ಡಬಿದ್ದು ನಮಸ್ಕರಿಸುವ ಕೆಲವರಿಂದ ತಮ್ಮನ್ನು ಮಹಾ ಪೌರುಷಶಾಲಿಗಳೆಂದು ಭಾವಿಸಿಕೊಳ್ಳುವ ಕ್ಷುದ್ರರಾಜರ ದುರಹಂಭಾವವು ಇನ್ನೆಷ್ಟರದೋ ವಿವೇಕಿಗಳೇ ಆಲೋಚಿಸಬೇಕು. ಇಂಥವರ ಜನ್ಮವೆಲ್ಲಾ ನಿಷ್ಫಲವಾದದ್ದೆಂದು ಭಾವವು. ॥೬೦॥

## ಮನಸ್ಸಂಬೋಧನ ವರ್ಣನಾರಂಭವು.

ಶ್ಲೋ॥ ಪರೇಷಾಂಚೇತಾಂಸಿಪ್ರತಿದಿವಸಮಾರಾಧ್ಯಬಹುಧಾಪ್ರಸಾದಂಕಿಂ
ನೇತುಂವಿಶಸಿಹೃದಯಕ್ಲೇಶಕಲಿತಂ । ಪ್ರಸನ್ನೇತ್ವಯ್ಯಂತಸ್ಸ್ವ
ಯಮುದಿತಚಿಂತಾಮಣಿಗಣೋವಿವಿಕ್ತಸ್ಸಂಕಲ್ಪಃಕಿಮಭಿಲಷಿತಂ
ಪುಷ್ಯತಿನತೇ ॥ .... .... ॥೬೧॥

ಟೀ॥ ಮನೋನಿಗ್ರಹವುಳ್ಳವನೇ ಯತಿಯಾದ್ದರಿಂದ ಸಂದರ್ಭಾನುಸಾರವಾಗಿ ಮನಸ್ಸನ್ನು ಸಂಬೋಧಿಸಿ ಅದರ ನಿಗ್ರಹ ಪ್ರಕಾರವನ್ನೂ ಹೇಳುತ್ತಾನೆ—ಹೃದಯ=ಎಲೈಮನಸ್ಸೆ, ಪ್ರತಿದಿವಸಂ=ನಿತ್ಯವೂ, ಬಹುಧಾ=ಬಹುಪ್ರಕಾರವಾಗಿ, ಪರೇಷಾಂ=ಪರರ, ಚೇತಾಂಸಿ=ಮನಸ್ಸುಗಳನ್ನು, ಆರಾಧ್ಯ=ಸೇವಿಸಿ, ಕ್ಲೇಶಕಲಿತಂ=ಕ್ಲೇಶಗಳಿಂದ ಸಂಪಾದಿಸಲ್ಪಟ್ಟ, ಪ್ರಸಾದಂ=ಅನುಗ್ರಹವನ್ನು, ನೇತುಂ=ಹೊಂದಿಸಿಕೊಳ್ಳುವದಕ್ಕೆ, ವಿಶಸಿಕಿಂ=ಏತಕ್ಕೆ ಪ್ರವರ್ತಿಸುತ್ತೀಯೆ, ತ್ವಯಿ=ನೀನು, ಅಂತಃ=ಅಂತರಂಗದಲ್ಲಿ, ಪ್ರಸನ್ನೇ=ನಿರ್ಮಲವಾಗುತ್ತಿರಲಾಗಿ, ಸ್ವಯಂ=ಸ್ವತಃ, ಉದಿತಃ=ಆವಿರ್ಭವಿಸಿದ, ಚಿಂತಾಮಣಿಗಣಃ=ಚಿಂತಾರತ್ನಸ್ವರೂಪವಾದ, ವಿವಿಕ್ತಃ=

ನಿಷ್ಕಲಂಕವಾದ, ಸಂಕಲ್ಪಃ—ಕೋರಿಕೆಯು, ತೇ—ನಿನ್ನ, ಅಭಿಲಷಿತಂ—ಇಷ್ಟಾರ್ಥ ವನ್ನು, ನಪುಷ್ಯತಿಕಿಂ—ಪೋಷಿಸುವದಿಲ್ಲವೆ ಏನು ? ... ॥೬೧॥

ತಾ॥ ಎಲೆ ಮನಸ್ಸೆ, ಯಾವಾಗಲೂ ಪರರಲ್ಲಿ ಹೋಗಿ ಅವರ ಮನಸ್ಸು ಒಪ್ಪುವಂತೆ ಕ್ಲೇಶಪಟ್ಟು ಸೇವಿಸಿ ಅವರಿಂ ಏನೋ ಮಹದನುಗ್ರಹವನ್ನು ಸಂಪಾದಿಸಿಕೊಳ್ಳಬೇಕೆಂದು ಏಕೆ ವ್ಯರ್ಥವಾಗಿ ವ್ಯಥೆ ಪಡುತ್ತೀಯೆ ? ಮತ್ತೆಲ್ಲಿಯೂ ಹೋಗದೆ ನೀನಿರುವ ಸ್ಥಳದಲ್ಲಿಯೇ ಕ್ಲೇಶಗಳನ್ನೆಲ್ಲಾ ತೊರೆದು ನೀನು ನಿರ್ಮಲವಾದರೆ, ನಿನ್ನಲ್ಲಿಯೇ ಸ್ಫುರಿಸುವ ಚಿಂತಾರತ್ನರೂಪವಾದ ಸಂಕಲ್ಪವು ಸಕಲವಾದ ಇಷ್ಟಾರ್ಥವನ್ನೂ ಉಂಟುಮಾಡುವದಿಲ್ಲವೆ ? ಆದ್ದರಿಂದ ಸ್ವಸ್ಥವಾಗಿರು. .... ॥೬೧॥

ಶ್ಲೋ॥ ಪರಿಭ್ರಮಸಿಕಿಮ್ಮುಧಾಕ್ವಚನಚಿತ್ತವಿಶ್ರಾಮ್ಯತಾಂಸ್ವಯಂಭವ
ತಿಯದ್ಯಥಾಭವತಿತತ್ತಥಾನಾನ್ಯಥಾ ॥ ಅತೀತಮನನುಸ್ಮರನ್ನಪಿಚ
ಭಾವ್ಯಸಂಕಲ್ಪಯನ್ನತರ್ಕಿತಸಮಾಗಮಾನನುಭವಾಮಿಭೋಗಾ
ನಹಂ .... .... .... ॥೬೨॥

ಟೀ॥ ಮನಸ್ಸು ನಿರ್ಮಲವಾಗಿದ್ದಲ್ಲಿ ಫಲವನ್ನು ಹೇಳಿ ಇಲ್ಲದಿದ್ದರೆ ದೋಷವನ್ನು ಹೇಳುತ್ತಾನೆ—ಚಿತ್ತ—ಎಲೆ ಮನಸ್ಸೆ, ಮುಧಾ—ವ್ಯರ್ಥವಾಗಿ, ಕಿಂ—ಏತಕ್ಕಾಗಿ, ಭ್ರಮಸಿ—ಸಂಚರಿಸುವಿ. ಕ್ವಚನ—ಎಲ್ಲಾದರೂ ಒಂದು ಸ್ಥಳದಲ್ಲಿ, ವಿಶ್ರಾಮ್ಯತಾಂ—ಇರೋಣವಾಗಲಿ, ಯತ್—ಯಾವಕಾರ್ಯವು, ಯಥಾ—ಹೇಗೆ, ಭವತಿ—ಆಗುವದೋ, ತತ್—ಅದು, ತಥಾ—ಹಾಗೆಯೇ, ಸ್ವಯಂ—ಪ್ರಯತ್ನವಿಲ್ಲದೆಯೇ, ಭವತಿ—ಆಗುವದು, ಅನ್ಯಥಾ—ಬೇರೆ ವಿಧವಾಗಿ, ನ—ಆಗುವದಿಲ್ಲವು, ಅಹಂ—ನಾನು, ಅತೀತಂ—ಕಳೆದದ್ದನ್ನು, ಅನನುಸ್ಮರನ್—ಸ್ಮರಿಸದಿರುವನಾಗಿ, ಭಾವಿಚಾಪಿ—ಮುಂದೆ ಬರುವದನ್ನು, ಅಸಂಕಲ್ಪಯನ್—ಕೋರದಿರುವನಾಗಿ, ಅತರ್ಕಿತ—ಊಹಿಸಲ್ಪಡದಿರುವ, ಸಮಾಗಮಾನ್—ಬರುವಿಕೆಯುಳ್ಳ, ಭೋಗಾನ್—ವಿಷಯಗಳನ್ನು, ಅನುಭವಾಮಿ—ಅನುಭವಿಸುವೆನು, ಪ್ರಥ್ವೀವೃತ್ತವು. .... ... ॥೬೨॥

ತಾ॥ ಎಲೆ ಮನಸ್ಸೆ ! ಏತಕ್ಕೆ ವೃಥಾ ಭ್ರಮಿಸುತ್ತೀಯೆ, ಎಲ್ಲಿಯಾದರೂ ಒಂದು ಕಡೆಯೊಳು ಸುಮ್ಮನೆ ನಿಲ್ಲು, ನೀನು ವ್ಯರ್ಥವಾಗಿ ತಿರುಗುವದರಿಂದ ನನಿಗೇನೂ ಆಗುವದಿಲ್ಲ. ಯಾವಕಾರ್ಯವು ಹೇಗೆ ಆಗುವದೋ ಅದರಂತೆಯೇ ಆಗುವದಲ್ಲದೆ ಅನ್ಯಥಾ ಎಂದಿಗೂ ಆಗಲಾರದು. ಇದಲ್ಲದೆ ನಾನೂ ಹಿಂದೆ ಕಳೆದದ್ದನ್ನು ಚಿಂತಿಸದೆ ಮುಂದೆ ಬರುವದನ್ನು ಕೋರದೆ ದೈವಗತಿಯಿಂದ ಆಯಾಯಕಾಲದಲ್ಲಿ ಲಭಿಸಿದ್ದರಲ್ಲಿಯೇ ತೃಪ್ತ

ನಾಗಿ ಅನುಭವಿಸಿಕೊಂಡಿರುವೆನು. ನೀನು ಚಾಪಲ್ಯದಿಂದಳಲಿದು ಏನೂ ಪ್ರಯೋಜನವಿಲ್ಲವು. .... .... ||೭೦||

ಶ್ಲೋ|| ಏತಸ್ಮಾದ್ವಿರಮೇಂದ್ರಿಯಾರ್ಥಗಹನಾದಾಯಾಸಕಾದಾಶ್ರಯ ಶ್ರೇ
ಯೋಮಾರ್ಗಮಶೇಷದುಃಖಶಮನವ್ಯಾಪಾರದಕ್ಷಂ ಕ್ಷಣಾತ್। ಸ್ವಾ
ತ್ಮೀಭಾವಮುಪೈಹಿ ಸಂತ್ಯಜ ನಿಜಾಂ ಕಲ್ಲೋಲಲೋಲಾಂ ಗತಿಂ ಮಾ
ಭೂಯೋ ಭಜ ಭಂಗುರಾಂ ಭವರತಿಂ ಚೇತಃ ಪ್ರಸೀದಾಧುನಾ ||

ಟೀ|| ವಿಶೇಷಾಕಾರವಾಗಿ ಮನಸ್ಸಂಬೋಧನ ಪ್ರಕಾರವನ್ನು ಹೇಳುತ್ತಾನೆ. ಚೇತಃ—ಎಲೈ ಮನಸ್ಸೇ. ಏತಸ್ಮಾತ್—ಈ, ಆಯಾಸಕಾತ್=ಆಯಾಸ ಪಡಿಸುವ, (ದುಃಖವನ್ನುಂಟುಮಾಡುವ) ಇಂದ್ರಿಯಾರ್ಥ=ವಿಷಯಂಗಳೆಂಬ, ಗಹನಾತ್=ಕಾಡಿನ ದೆಸೆಯಿಂದ, ವಿರಮ=ವಿರಾಮವನ್ನು ಹೊಂದು, ಕ್ಷಣಾತ್=ಕ್ಷಣಕಾಲದಲ್ಲಿ, ಅಶೇಷ=ಅಪರಿಮಿತವಾದ, ದುಃಖಶಮನ=ದುಃಖ ಧ್ವಂಸವೆಂಬ, ವ್ಯಾಪಾರ=ಕಾರ್ಯದಲ್ಲಿ, ದಕ್ಷಂ=ಸಮರ್ಥವಾದ, ಶ್ರೇಯೋಮಾರ್ಗಂ=ಜ್ಞಾನಮಾರ್ಗವನ್ನು, ಆಶ್ರಯ=ಅನುಸರಿಸು, ಸ್ವಾತ್ಮೀಭಾವಂ=ಸ್ವಸ್ವರೂಪಾನುಸಂಧಾನವನ್ನು, ಉಪೈಹಿ=ಹೊಂದು, ನಿಜಾಂ=ಸ್ವಂತವಾದ, ಕಲ್ಲೋಲ=ಅಲೆಗಳಂತೆ, ಲೋಲಾಂ=ಚಂಚಲವಾದ, ಗತಿಂ=ವ್ಯಾಪಾರವನ್ನು, ಸಂತ್ಯಜ=ಬಿಟ್ಟುಬಿಡು, ಭೂಯಃ=ತಿರಿಗಿ, ಭಂಗುರಾಂ=ನಾಶವಾಗುವ, ಭವರತಿಂ=ಸಂಸಾರಾಸಕ್ತಿಯನ್ನು. ಮಾಭಜ=ಸೇವಿಸಬೇಡ. ಅಧುನಾ=ಈಗ, ಪ್ರಸೀದ=ಪ್ರಸನ್ನವಾಗು. .... ||೭೧||

ತಾ|| ಎಲೈ, ಮನಸ್ಸೆ! ಬಹು ಕ್ಲೇಶಕರವಾದ ವಿಷಯಗಳೆಂಬ ಕಾಡನ್ನು ಪ್ರವೇಶಿಸದೆಸುಮ್ಮನಿರು. ಸಮಸ್ತ ದುಃಖಗಳನ್ನು ಶಾಂತಿಪಡಿಸುವ ಸ್ವಭಾವವುಳ್ಳ ಜ್ಞಾನಮಾರ್ಗವನ್ನಾಶ್ರಯಿಸು, ಮತ್ತು ಸ್ವಸ್ವರೂಪವನ್ನು ಚಿಂತಿಸು. ನಿನ್ನ ಸ್ವಂತವಾದ ಅತಿ ಚಾಪಲಾವಸ್ಥೆಯನ್ನು ಬಿಡು. ಕ್ಷಣಿಕವಾದ ಸಂಸಾರದಲ್ಲಾಸಕ್ತಿಯನ್ನಿಡಬೇಡ, ಅನುಗ್ರಹಿಸುವಂಥಾದ್ದಾಗು.

ಶ್ಲೋ|| ಮೋಹಂ ಮಾರ್ಜಯ ತಾಮುಪಾರ್ಜಯ ರತಿಂ ಚಂದ್ರಾರ್ಧಚೂಡಾ
ಮಣೌ ಚೇತಃ ಸ್ವರ್ಗತರಂಗಿಣೀತಟಭುವಾಮಾಸಂಗಮಂಗೀಕು
ರು। ಕೋ ವಾ ವೀಚಿಷು ಬುದ್ಬುದೇಷು ಚ ತಟಿಲ್ಲೇಖಾಸು ಚ ಶ್ರೀಷು
ಚ ಜ್ವಾಲಾಗ್ರೇಷು ಚ ಪನ್ನಗೇಷು ಚ ಸರಿದ್ವೇಗೇಷು ಚ ಪ್ರತ್ಯಯಃ||

ಟೀ|| ವಿಶ್ವಾಸಾರ್ಹವಾದವುಗಳನ್ನೇ ಪ್ರೀತಿಸಬೇಕಲ್ಲದೆ ಮತ್ತೊಂದನ್ನೂ ಪ್ರೀತಿಸಬೇಡವೆಂಬರ್ಥವನ್ನು ಹೇಳುತ್ತಾನೆ.—ಚೇತಃ=ಎಲೈ ಮನಸ್ಸೆ, ಮೋಹಂ=ಭ್ರಾಂತಿಜ್ಞಾನವನ್ನು, ಮಾರ್ಜಯ=ತ್ಯಜಿಸು, ಚಂದ್ರಾರ್ಧಚೂಡಾಮಣೌ=ಚಂದ್ರಾ

ಕತ್ನದಂತಿರುವ ಶ್ರೀ ಕೃಷ್ಣನಲ್ಲಿ, ತಾಂ=ಹೇಳಲಶಕ್ಯವಾದ, ರತಿಂ=ಅನುರಾಗವ ನ್ನು, ಉಪಾರ್ಜಯ=ಸಂಪಾದಿಸು, ಸ್ವರ್ಗತರಂಗಿಣೀ=ದೇವಗಂಗೆಯ. ತಟಭುವಾಂ=ತೀರಪ್ರದೇಶಗಳ, ಅಸಂಗಂ=ನಿವಾಸಾಸಕ್ತಿಯನ್ನು, ಅಂಗೀಕುರು=ಅಂಗೀಕರಿಸು, ವೀಚಿಷು=ಅಲೆಗಳಲ್ಲಿ, ಬುದ್ಬುದೇಷು ಚ=ನೀರಿನ ಗುಳ್ಳೆಗಳಲ್ಲಿ, ತಟಿಲ್ಲೇಖಾಸು ಚ=ರೇಖೆಗಳಂತಿರುವ ಮಿಂಚುಗಳ, ಶ್ರೀಷು ಚ=ಸಂಪತ್ತುಗಳಲ್ಲಿ, ಜ್ವಾಲಾ=ಉರಿಗಳ, ಅಗ್ರೇಷು ಚ=ಕೊನೆಗಳಲ್ಲಿ, ಪನ್ನಗೇಷು ಚ=ಸರ್ಪಗಳಲ್ಲಿ, ಸುಹೃದ್ವರ್ಗೇಷು ಚ=ಬಂಧು ಸಮುದಾಯಗಳಲ್ಲಿಯೂ, ಕೋವಾ=ಯಾವ, ಪ್ರತ್ಯಯಃ=ನಂಬಿಕೆಯು, ದೀಪಕಾಲಂಕಾರವು. ..... ..... ... ॥೬೮॥

ತಾ॥ ಎಲೆ ಮನಸ್ಸೆ, ದಾರಾಪುತ್ರಾದಿಗಳಲ್ಲಿ ಆಸಕ್ತಿಯನ್ನುಂಟುಮಾಡುವ ಭ್ರಾಂತಿಜ್ಞಾನವನ್ನು ತ್ಯಜಿಸು, ಸರ್ವಾರ್ಥದಾಯಕನಾದ ಶ್ರೀಕೃಷ್ಣನಲ್ಲಿ ಭಕ್ತಿಯನ್ನಿಡು, ಗಂಗಾನದಿಯ ಪ್ರಾಂತ ಭೂಮಿಗಳಲ್ಲಿ ವಾಸಮಾಡಬೇಕೆಂಬ ಕುತೂಹಲವನ್ನು ಹೊಂದು, ಲೋಕದಲ್ಲಿ ಯಾವನು ಅಲೆಗಳಲ್ಲಿ, ನೀರಿನ ಗುಳ್ಳೆಗಳಲ್ಲಿ, ಮಿಂಚುಗಳಲ್ಲಿ, ಸಂಪತ್ತುಗಳಲ್ಲಿಯೂ ಸ್ಥಿರಬುದ್ಧಿಯನ್ನಿಡುತ್ತಾನೆ. ಇದಲ್ಲದೆ ಜ್ವಾಲೆಗಳಲ್ಲಿಯೂ ಸರ್ಪಗಳಲ್ಲಿಯೂ ಬಂಧುಜನಗಳಲ್ಲಿಯೂ ಸುಖ ಉಂಟಾಗುವದೆಂದು ವಿಶ್ವಾಸ ಮಾಡುವನೇ? ಸರ್ವಥಾ ಮಾಡಲಾರನು. ..... ..... ..... ॥೬೮॥

ಶ್ಲೋ ॥ ಚೇತಶ್ಚಿಂತಯಮಾರಮಾಂಸಕೃದಿಮಾಮಸ್ಥಾಯಿನೀಮಾಸ್ಥಯಾ
ಭೂಪಾಲಭ್ರುಕುಟೀಕುಟೀವಿಹರಣವ್ಯಾಪಾರಪಣ್ಯಾಂಗನಾಂ॥ಕಂ
ಥಾಕಂಚುಕಿನಃಪ್ರವಿಶ್ಯಭವನದ್ವಾರಾಣಿವಾರಾಣಸೀ ರಥ್ಯಾಪಙ್ಕ್ತಿ
ಷುಪಾಣಿಪಾತ್ರಪತಿತಾಂಭಿಕ್ಷಾಮಪೇಕ್ಷಾಮಹೇ ॥೬೯॥

ಟೀ॥ ಬೇರೆಬೇರೆ ವಿಧದಿಂದ ಸಂಬೋಧಿಸುತ್ತಾನೆ—ಚೇತಃ=ಎಲೆ ಮನಸ್ಸೆ, ಅಸ್ಥಾಯಿನೀಂ=ಅಸ್ಥಿರವಾದ, ಭೂಪಾಲ=ರಾಜರ. ಭ್ರುಕುಟೀಕುಟೀ=ಕಣ್ಣುಹುಬ್ಬೆಂಬ ಗುಡಿಸಿಲಿನಲ್ಲಿ, ವಿಹರಣ=ವಿಹಾರವೆಂಬ, ವ್ಯಾಪಾರ=ನಡತೆಯುಳ್ಳ, ಪಣ್ಯಾಂಗನಾಂ=ವಾರಾಂಗನೆಯಂತಿರುವ. ಇಮಾಂ=ಈ. ರಮಾಂ=ಸಂಪತ್ತನ್ನು. ಆಸ್ಥಯಾ=ಆದರದಿಂದ. ಸಕೃತ್=ಒಂದುಕಾಲದಲ್ಲಿಯೂ. ಮಾಚಿಂತಯ=ಆಲೋಚಿಸಬೇಡ (ಕೋರಬೇಡ) ಕಂಥಾಕಂಚುಕಿನಃ=ಬೊಂತೆಯೆಂಬ ಬಟ್ಟೆಯುಳ್ಳವರಾಗಿ. ವಾರಾಣಸೀರಥ್ಯಾಪಙ್ಕ್ತಿಷು=ಕಾಶೀಪಟ್ಟಣದ ರಾಜಮಾರ್ಗಗಳಲ್ಲಿ. ಭವನದ್ವಾರಾಣಿ=ಮನೆಗಳ ಬಾಗಿಲುಗಳನ್ನು. ಪ್ರವಿಶ್ಯ=ಪ್ರವೇಶಿಸಿ. ಪಾಣಿಪಾತ್ರಪತಿತಾಂ=ಹಸ್ತವೆಂಬ ಪಾತ್ರೆಯಲ್ಲಿ ಬಿದ್ದ. ಭಿಕ್ಷಾಂ=ಭಿಕ್ಷಾನ್ನವನ್ನು. ಅಪೇಕ್ಷಾಮಹೆ=ಕೋರುವೆವು. ... ..... ..... ..... ॥೬೯॥

ತಾ॥ ಎಲೆ ಮನಸ್ಸೆ, ಅಶಾಶ್ವತವಾಗಿಯೂ, ಭೂಮಿಪಾಲರ ಕಣ್ಣು ಹುಬ್ಬುಗಳೆಂಬ ಕುಟೀರಗಳೊಳಗೆ ಸಂಚರಿಸುವ ಸ್ವಭಾವವುಳ್ಳದ್ದಾದುದರಿಂದಲೇ ಬಹು ಜನಗಳಿಗೆ ಅನುಕೂಲರಾದ ವೇಶ್ಯಾ ಸ್ತ್ರೀಯರಂತಿರುವ ಸಂಪತ್ತನ್ನು ಬಾಧು ಕಾಲಕ್ಕೂ ಕೋರಬೇಡ; ಬೊಂತೆಯನ್ನು ಹೊದೆದು ಕಾಶೀಪಟ್ಟಣದ ರಾಜಮಾರ್ಗಗಳಲ್ಲಿರುವ ಮನೆಗಳನ್ನು ಹೊಕ್ಕು ಬೇಡಿ, ಪಾಣಿಪಾತ್ರೆಯಲ್ಲಿ ಬಿದ್ದ ಭಿಕ್ಷಾನ್ನದಿಂದ ಜೀವನವಾಗುವದಿಲ್ಲವೇ? ಅದೇ ಉತ್ತಮವೆಂದರ್ಥ. .... .... ॥೬೫॥

ಶ್ಲೋ॥ ಅಗ್ರೇಗೀತಂಸರಸಕವಯಃ ಪಾರ್ಶ್ವಯೋರ್ದಾಕ್ಷಿಣಾತ್ಯಾಃಪಶ್ಚಾ
ಲ್ಲೀಲಾವಲಯರಣಿತಂಚಾಮರಗ್ರಾಹಿಣೀನಾಂ ॥ ಯದ್ಯಸ್ತ್ಯೇ
ವಂಕುರುಭವರಸಾಸ್ವಾದನೇಲಂಪಟತ್ವಂನೋಚೇಚ್ಚೇತಃಪ್ರವಿಶ
ಸಹಸಾನಿರ್ವಿಕಲ್ಪೇಸಮಾಧೌ .... ॥೬೬॥

ಟೀ॥ ಎಲೆ ಮನಸ್ಸೆ. ಸಂಸಾರಸುಖವನ್ನೇ ಅನುಭವಿಸಬೇಕೆಂದು ನಿನಗೆ ಕೋರಿಕೆ ಇದ್ದಲ್ಲಿ ಈ ಮುಂದೆ ಹೇಳುವ ಸಾಮಗ್ರಿ ಇದ್ದರೆ ಅಲ್ಲಿಯೇ ವಿಶ್ವಸಿಸು. ಇಲ್ಲದಿದ್ದರೆ ಆತ್ಮಧ್ಯಾನದಲ್ಲಿರೆಂದು ಹೇಳುತ್ತಾನೆ—ಚೇತಃ=ಎಲೆ ಮನಸ್ಸೆ. ಅಗ್ರೇ=ಮುಂಭಾಗದಲ್ಲಿ. ಗೀತಂ=ವೀಣಾದಿ ಗಾನವು, ಪಾರ್ಶ್ವಯೋಃ=ಎರಡು ಪಕ್ಕಗಳಲ್ಲಿಯೂ. ದಾಕ್ಷಿಣಾತ್ಯಾಃ=ದಕ್ಷಿಣ ದೇಶಸ್ಥರಾದ. ಕವಯಃ=ಕವಿಗಳು, ಪಶ್ಚಾತ್=ಹಿಂಭಾಗದಲ್ಲಿ. ಚಾಮರ=ಚಾಮರಗಳನ್ನು. ಗ್ರಾಹಿಣೀನಾಂ=ಹಿಡಿಯುವ ರಮಣಿಯರ. ಲೀಲಾ=ವಿಲಾಸಾರ್ಥವಾದ. ವಲಯ=ಕಡಗಗಳ. ರಣಿತಂ=ಝುಂಕಾರವು. ಏವಂ=ಈಪ್ರಕಾರವಾಗಿ. ಅಸ್ತಿಯದಿ=ಇದ್ದದ್ದೇ ಆದರೆ. ಭವ=ಸಂಸಾರ ಸಂಬಂಧವಾದ. ರಸಾಸ್ವಾದನೆ=ಸುಖಾನುಭವದಲ್ಲಿ. ಲಂಪಟತ್ವಂ=ಆಸಕ್ತಿಯನ್ನು. ಕುರು=ಮಾಡು, ನೋಚೇತ್=ಇಲ್ಲದಿದ್ದರೆ, ಸಹಸಾ=ಜಾಗ್ರತೆಯಾಗಿ. ನಿರ್ವಿಕಲ್ಪೇ=ಆತಂಕವಿಲ್ಲದ. ಸಮಾಧೌ=ಆತ್ಮಧ್ಯಾನದಲ್ಲಿ. ಪ್ರವಿಶ=ಪ್ರವೇಶಮಾಡು, ಮಂದಾಕ್ರಾಂತಾವೃತ್ತವು. .... .... .... ॥೬೬॥

ತಾ॥ ಎಲೆ ಮನಸ್ಸೆ, ಮುಂಗಡೆಯಲ್ಲಿ ವಿಚಿತ್ರವಾಗಿ ಗಾನಮಾಡುವ ಗಾಯಕರ ಸಮುದಾಯವೂ, ಉಭಯ ಪಾರ್ಶ್ವಗಳಲ್ಲಿ ಸರಸವಾಗಿ ಕವಿತ್ವಮಾಡುವ ದಕ್ಷಿಣದೇಶಸ್ಥರಾದ ಕವಿಗಳು, ಹಿಂಗಡೆಯಲ್ಲಿ ಚಾಮರವನ್ನು ಬೀಸುವ ಚಂಚಲಾಕ್ಷಿಯರ ಕೈಕಡಗಗಳ ಝುಂಕಾರವು, ಈರೀತಿಯಾದ ಸಂಪತ್ತಿದ್ದ ಪಕ್ಷದಲ್ಲಿ ಸಂಸಾರಸುಖಾನುಭವದಲ್ಲಿಯೇ ಆಸಕ್ತಿಯುಳ್ಳ

ದ್ದಾಗಿರು. ಈ ಅನುಕೂಲವಿಲ್ಲದಿದ್ದರೆ ತುಚ್ಛ ಸುಖಾಸಕ್ತಿಯನ್ನು ತ್ಯಜಿಸಿ ಆತ್ಮಧ್ಯಾನದಲ್ಲಿ ವಿಶ್ವಾಸವನ್ನು ಮಾಡು. .... ॥೬೬॥

ಶ್ಲೋ॥ ಪ್ರಾಪ್ತಾಶ್ಶ್ರಿಯಸ್ಸಕಲಕಾಮದುಘಾಸ್ತತಃಕಿಂನ್ಯಸ್ತಂಪದಂಶಿರ
ಸಿವಿದ್ವಿಷತಾಂತತಃಕಿಂ । ಸಂಪಾದಿತಾಃಪ್ರಣಯಿನೋವಿಭವೈಸ್ತ
ತಃಕಿಂಕಲ್ಪಸ್ಥಿತಾಸ್ತನುಭೃತಾಂತನವಸ್ತತಃಕಿಂ ॥೬೭॥

ಟೀ॥ ವಿಚಾರಮಾಡಿದರೆ ಸಂಪತ್ತು ಮೊದಲಾದವುಗಳ ಲಾಭದಲ್ಲಿ ಏನೂ ಪ್ರಯೋಜನವಿಲ್ಲವೆಂಬರ್ಥವನ್ನು ವ್ಯಕ್ತಪಡಿಸುತ್ತಾನೆ—ತನುಭೃತಾಂ=ಪ್ರಾಣಿಗಳಿಗೆ, ಸಕಲ=ಸಮಸ್ತವಾದ, ಕಾಮ=ಇಷ್ಟಾರ್ಥಗಳನ್ನು. ದುಘಾಃ=ಊಡುಮಾಡುವ. ಶ್ರಿಯಃ=ಸಂಪತ್ತುಗಳು. ಪ್ರಾಪ್ತಾಃ-ಹೊಂದಲ್ಪಟ್ಟವು, ತತಃ=ಅನಂತರದಲ್ಲಿ, ಕಿಂ=ಏನು. ವಿದ್ವಿಷತಾಂ=ಶತ್ರುಗಳ. ಶಿರಸಿ=ತಲೆಯಲ್ಲಿ. ಪದಂ=ಪಾದವು, ನ್ಯಸ್ತಂ=ಇಡಲ್ಪಟ್ಟಿತು. ತತಃ-ತರುವಾಯ. ಕಿಂ=ಏನು, ವಿಭವೈಃ=ಸಂಪತ್ತುಗಳಿಂದ. ಪ್ರಣಯಿನಃ=ಮಿತ್ರರು, ಸಂಪಾದಿತಾಃ=ಸಂಗ್ರಹಿಸಲ್ಪಟ್ಟರು. ತತಃ-ಬಳಿಕ ಕಿಂ=ಏನು. ಕಲ್ಪಸ್ಥಿತಾಃ=ಕಲ್ಪಾಂತರಸ್ಥಾಯಿಗಳಾದ. ತನವಃ=ಶರೀರಗಳು, ಸಂಪಾದಿತಾಃ=ಸಂಪಾದಿಸಲ್ಪಟ್ಟವು. ತತಃ=ತದನಂತರದಲ್ಲಿ. ಕಿಂ=ಏನು, ॥೬೭॥

ತಾ॥ ಎಲೆ ಮನಸ್ಸೆ, ಸಕಲವಾದ ಇಷ್ಟಾರ್ಥಗಳನ್ನೀಯುವ ಸಂಪತ್ತುಗಳನ್ನು ಪಡೆದಬಳಿಕ ಮಾಡತಕ್ಕದ್ದೇನು? ಸಕಲ ಶತ್ರುಗಳನ್ನು ಜಯಿಸಿದ ಬಳಿಕ ಮಾಡಬೇಕಾಗಿರುವುದೇನು? ಇದರಂತೆಯೆ ವಿಭವಗಳಿಂದ ಸನ್ಮಿತ್ರರನ್ನು ಸಂಪಾದಿಸಿದ ಬಳಿಕ ಕರ್ತವ್ಯವೇನು? ಹೀಗೆಯೇ ಅನೇಕ ಕಲ್ಪಗಳವರೆಗೆ ಸ್ಥಿರವಾಗಿರುವಂತೆ ಶರೀರಗಳನ್ನು ಯೋಗಾದಿ ಬಲದಿಂದ ಸಂಪಾದಿಸಿದರೂ ಆಮೇಲೆ ಮಾಡತಕ್ಕದ್ದೇನಿರುವದು? ಆದಕಾರಣವೇ ಈವಿಷಯಸುಖಗಳಲ್ಲಿ ಶ್ರೇಯಸ್ಸಿಲ್ಲವೆಂದು ಭಾವವು. ॥೬೭॥

ಶ್ಲೋ॥ ಭಕ್ತಿರ್ಹರೌಮರಣಜನ್ಮಭಯಂಹೃದಿಸ್ಥಂಸ್ನೇಹೋನಬಂಧುಷುನ
ಮನ್ಮಥಜಾವಿಕಾರಾಃ । ಸಂಸರ್ಗದೋಷರಹಿತಾವಿಜನಾವನಾಂ
ತಾವೈರಾಗ್ಯಮಸ್ತಿಕಿಮಿತಃಪರಮರ್ಥನೀಯಂ ॥೬೮॥

ಟೀ॥ ಶ್ರೇಯಸ್ಸಾಧನಗಳೆಂದು ವ್ಯವಹರಿಸಲ್ಪಡುತ್ತಿರುವ ಲೋಕ ವ್ಯಾಪಾರಗಳನ್ನು ತಿರಸ್ಕರಿಸಿದಲ್ಲಿ ಮತ್ತೆ ಯಾವದು ಶ್ರೇಯಸ್ಕರವೆಂದರೆ ವ್ಯಕ್ತಪಡಿಸುತ್ತಾನೆ—ಹರೌ=ವಿಷ್ಣುವಿನಲ್ಲಿ, ಭಕ್ತಿಃ=ಭಜಿಸುವ ಅನುರಾಗವು, ಮರಣ=ಸಾವು. ಜನ್ಮ=ಹುಟ್ಟು ಇವುಗಳ ದೆಸೆಯಿಂದುಂಟಾದ, ಭಯಂ=ಭೀತಿಯು. ಹೃದಿಸ್ಥಂ=ಮನಸ್ಸಿನಲ್ಲಿರತಕ್ಕದ್ದಾಗಿ. ಬಂಧುಷು=ಪುತ್ರಮಿತ್ರಾದಿಗಳಲ್ಲಿ, ಸ್ನೇಹಃ=ಅನುರಾಗವು

ಗವು, ನಕಾರ್ಯಃ=ಮಾಡತಕ್ಕದ್ದಲ್ಲ, ಮನ್ಮಥಜಾಃ=ಮನ್ಮಥನಿಂದ ಹುಟ್ಟುವ, ವಿಕಾರಾಃ=ವಿಕಾರಗಳು, ನಕಾರ್ಯಾಃ=ಮಾಡತಕ್ಕವುಗಳಲ್ಲವು, ಸಂಸರ್ಗ=ದುಸ್ಸಂಗವೆಂಬ, ದೋಷ=ದೋಷಗಳಿಂದ, ರಹಿತಾಃ=ಶೂನ್ಯಗಳಾದ, ವಿಜನಾಃ=ಜನಶೂನ್ಯವಾದ, ವನಾಂತಾಃ=ವನಪ್ರದೇಶಗಳು, ಸೇವ್ಯಾಃ=ಸೇವಿಸತಕ್ಕವುಗಳು, ವೈರಾಗ್ಯಂ=ವೈರಾಗ್ಯವು, ಅಸ್ತಿ=ಉಂಟು, ಇತಃ=ಇದಕ್ಕಿಂತಲು, ಪರಂ=ಹೆಚ್ಚಾದದ್ದು. (ಮತ್ತೊಂದು) ಅರ್ಥನೀಯಂ=ಯಾಚಿಸತಕ್ಕದ್ದು, ಕಿಂ=ಯಾವದು. ॥೬೮॥

ತಾ॥ ಎಲೈ ಚಿತ್ತವೆ! ಹರಿಯಲ್ಲಿ ಭಕ್ತಿಯನ್ನಿಡು, ಹುಟ್ಟು ಸಾವುಗಳಿಂದುಂಟಾದ ಭಯವನ್ನು ಅಂತರಂಗದಲ್ಲಿಡು, ಪುತ್ರಮಿತ್ರ ಕಳತ್ರಾದಿಗಳಲ್ಲಿ ಮಮತೆಯನ್ನು ತ್ಯಜಿಸು, ಮನ್ಮಥನಿಂದ ಉಂಟಾಗಿ ಸ್ತ್ರೀವಿಷಯವಾದ ವಿಕಾರಗಳನ್ನು ತ್ಯಜಿಸು, ಯಾವ ವಿಧವಾದ ದುಷ್ಟಸಂಗವಿಲ್ಲದೆ ನಿಶ್ಚಿಂತೆಯಾಗಿರುವ ವನಭೂಮಿಯನ್ನು ಆಶ್ರಯಿಸು, ಸರ್ವೋತ್ತಮವಾದ ವೈರಾಗ್ಯವನ್ನು ಹೊಂದು, ಲೋಕದಲ್ಲಿ ಇದಕ್ಕಿಂತಲೂ ಯಾಚಿಸಬೇಕಾದ ಮತ್ತೊಂದು ಪದಾರ್ಥವು ಯಾವದುಂಟು? ಸಕಲ ಶ್ರೇಯಸ್ಸುಗಳನ್ನೂ ಉಂಟುಮಾಡುವದರಿಂದ ವೈರಾಗ್ಯವೇ ಪರಮಭಾಗ್ಯವೆಂದು ಭಾವವು.

ಶ್ಲೋ॥ ತಸ್ಮಾದನಂತಮಜರಂಪರಮಂವಿಕಾಸಿತದ್ಬ್ರಹ್ಮಚಿಂತಯಕಿಮೇಭಿರಸದ್ವಿಕಲ್ಪೈಃ । ಯಸ್ಯಾನುಷಂಗಿಣಇಮೇಭುವನಾಧಿಪತ್ಯಭೋಗಾದಯಃಕೃಪಣಲೋಕಮತಾಭವಂತಿ ॥೬೯॥

ಟೀ॥ ಬ್ರಹ್ಮವಿಚಾರದಲ್ಲಿ ಆಸಕ್ತನಾಗಿರುವವನಿಗೆ ತ್ರಿಲೋಕಾಧಿಪತ್ಯವೇ ಮೊದಲಾದ ಸಮಸ್ತ ಸಂಪತ್ತುಗಳೂ ತುಚ್ಛವಾಗಿತೋರುವವೆಂದು ವಿವರಿಸುತ್ತಾನೆ.— ತಸ್ಮಾತ್=ಆದಕಾರಣ, ಅನಂತಂ=ಕೊನೆಯಿಲ್ಲದ. ಅಜರಂ=ಮುಪ್ಪಿಲ್ಲದ, ಪರಮಂ=ಸರ್ವೋತ್ಕೃಷ್ಟವಾದ, ವಿಕಾಸಿ=ಸರ್ವವ್ಯಾಪಿಯಾದ, ತದ್ಬ್ರಹ್ಮ=ಆ ಪರಮಾತ್ಮನನ್ನು, ಚಿಂತಯ=ವಿಚಾರಿಸು, ಕ್ರಿಯಮಾಣೈಃ=ಮಾಡುತ್ತಿರುವ, ಅಸದ್ವಿಕಲ್ಪೈಃ=ತುಚ್ಛವಾದ ವಿಚಾರಗಳಿಂದ, ಕಿಂ=ಏನು ಪ್ರಯೋಜನ ? ಯಸ್ಯ=ಯಾವ ಬ್ರಹ್ಮನ, ಅನುಷಂಗಿಣಃ=ಸಂಬಂಧವುಳ್ಳ, (ನಿನಗೆ) ಇಮೇ=ಈ, ಭುವನಾಧಿಪತ್ಯ=ಲೋಕಾಧಿಪತ್ಯದ, ಭೋಗ=ಅನುಭವವೆ, ಆದಯಃ=ಮೊದಲಾದವುಗಳು, ಕೃಪಣಲೋಕಮತಾಃ—ಕೃಪಣಲೋಕ=ನಿರ್ಭಾಗ್ಯರಿಗೆ, ಮತಾಃ=ಇಷ್ಟವಾದವುಗಳು, ಭವಂತಿ=ಆಗುವವು. ... .... ... ॥೬೯॥

ತಾ॥ ಎಲೆ ಮನಸ್ಸೆ, ವೈರಾಗ್ಯವೆ ಯಾಚಿಸತಕ್ಕದ್ದೆಂದು ಹೇಳಿದೆನಾದಕಾರಣ ಎಲ್ಲ ದೇಶದಲ್ಲಿಯೂ, ಎಲ್ಲ ಕಾಲಗಳಲ್ಲಿಯೂ, ಎಲ್ಲ ವಸ್ತು

ಗಳಲ್ಲಿಯೂ ವ್ಯಾಪಿಸಿರುವವನಾಗಿ, ಜರಾಮರಣ ಶೂನ್ಯನಾಗಿಯೂ ಇರೋ ವೆದರಿಂದಲೇ ಸ್ವತಃ ಪ್ರಕಾಶವಾಗಿರುವ ಸರ್ವೋತ್ತಮನಾದ ಪರಮಾತ್ಮನ ವಿಚಾರವನ್ನೇ ಮಾಡು, ಆತನನ್ನೇ ಚಿಂತಿಸು, ಆತನ ವಿಚಾರವನ್ನು ಮಾಡುವ ನಿನಗೆ ತ್ರಿಲೋಕಾಧಿಪತ್ಯವೇ ಮೊದಲಾದ ಸಮಸ್ತ ಲೌಕಿಕ ಭೋಗಗಳೂ ಕೇವಲ ಹೀನವಾದವುಗಳೆಂದು ಸ್ಪಷ್ಟವಾಗಿ ತೋರುವವು. ಅಲ್ಲದೆ ನೀನು ಕೋರುವ ಸಂಪತ್ತುಗಳೆಲ್ಲಾ ಸಿದ್ಧಿಸುವವು.

ಶ್ಲೋ॥ ಪಾತಾಳಮಾವಿಶಸಿಯಾಸಿನಭೋವಿಲಂಘ್ಯದಿಙ್ಮಂಡಲಂಭ್ರಮಸಿಮಾ
ನಸಚಾಪಲೇನ । ಭ್ರಾಂತ್ಯಾಪಿಜಾತುವಿಮಲಂಕಥಮಾತ್ಮನೀನಂ
ನಬ್ರಹ್ಮಸಂಸ್ಮರಸಿನಿರ್ವೃತಿಮೇಷಿಯೇನ ॥೭೦॥

ಟೀ॥ ಹೇಳಿದ ಅರ್ಥವನ್ನೇ ಬೇರೆ ರೀತಿಯಿಂದ ಹೇಳಿ ದೃಢಪಡಿಸುತ್ತಾನೆ—ಮಾನಸ=ಎಲೆ ಮನಸ್ಸೆ, ಚಾಪಲೇನ=ಚಾಪಲ್ಯದಿಂದ, ಪಾತಾಳಂ=ಪಾತಾಳಲೋಕವನ್ನು, ಆವಿಶಸಿ=ಪ್ರವೇಶಿಸುವಿ, ನಭಃ=ಅಂತರಿಕ್ಷವನ್ನು, ವಿಲಂಘ್ಯ=ದಾಟಿ, ಯಾಸಿ=ಹೋಗುವಿ, ದಿಕ್=ದಿಕ್ಕುಗಳ, ಮಂಡಲಂ=ಚಕ್ರವನ್ನು, ಭ್ರಮಸಿ=ಸಂಚರಿಸುವಿ, ಭ್ರಾಂತ್ಯಾಪಿ=ಭ್ರಮೆಯಿಂದಲೂ, ಜಾತು=ಒಂದುಕಾಲದಲ್ಲಿಯೂ, ವಿಮಲಂ=ನಿರ್ಮಲವಾದ, ಆತ್ಮನೀನಂ=ಆತ್ಮಹಿತಕರವಾದ, ಬ್ರಹ್ಮ=ಪರಮಾತ್ಮನನ್ನು, ಕಥಂ=ಏತಕೋಸ್ಕರ, ನಸ್ಮರಸಿ=ಧ್ಯಾನಿಸುವದಿಲ್ಲ, ಯೇನ=ಯಾವ ಧ್ಯಾನ್ಯದಿಂದ, ನಿರ್ವೃತಿಂ=ಆನಂದವನ್ನು, ಏಷಿ=ಹೊಂದುವಿಯೋ. ... ॥೭೦॥

ತಾ॥ ಎಲೆ ಮನಸ್ಸೆ, ಏನೋ ಸೌಭಾಗ್ಯವನ್ನು ಸಂಪಾದಿಸುವೆನೆಂಬ ಭ್ರಮೆಯಿಂದ ಪಾತಾಳವನ್ನು ಪ್ರವೇಶಿಸುವಿ, ಅಂತರಿಕ್ಷವನ್ನು ದಾಟಿ ಮೇಲಕ್ಕೆ ಹಾರುವಿ. ಮತ್ತು ಸಮಸ್ತ ದಿಕ್ಕುಗಳಲ್ಲಿಯೂ ಭ್ರಮಿಸುವಿ ಅಹಹ! ಯಾವಾಗಲಾದರೂ ಭ್ರಾಂತಿಯಿಂದಲಾದರೂ ನಿರತಿಶಯವಾದ ಆನಂದವನ್ನುಂಟುಮಾಡುವದರಿಂದಲೇ ನಿನಗೆ ಅತ್ಯಂತ ಹಿತಕರವಾಗಿರುವ ಬ್ರಹ್ಮವನ್ನು ಏತಕ್ಕೆ ಸ್ಮರಿಸುವದಿಲ್ಲ? ಇನ್ನಾದರೂ ಸ್ಮರಿಸು. ॥೭೦॥

## ನಿತ್ಯಾನಿತ್ಯವಸ್ತು ವಿಚಾರಾರಂಭವು.

ಶ್ಲೋ॥ ಕಿಂವೇದೈಸ್ಸ್ಮೃತಿಭಿಃ ಪುರಾಣಪಠನೈ ಶ್ಶಾಸ್ತ್ರೈರ್ಮಹಾವಿಸ್ತರೈ
ಸ್ಸ್ವರ್ಗಗ್ರಾಮಕುಟೀನಿವಾಸಫಲದೈಃ ಕರ್ಮಕ್ರಿಯಾವಿಭ್ರಮೈಃ।
ಮುಕ್ತ್ವೈಕಂ ಭವದುಃಖಭಾರರಚನಾವಿಧ್ವಂಸಕಾಲಾನಲಂ ಸ್ವಾ
ತ್ಮಾನಂದಪದಪ್ರವೇಶಕಲನಂ ಶೇಷೈರ್ವಣಿಗ್ವೃತ್ತಿಭಿಃ ॥೭೧॥

ಟೀ॥ ಬ್ರಹ್ಮಾತ್ಮವಿಚಾರದಿಂದ ಆತ್ಮಾನುಭವ ಲಾಭವಲ್ಲದೆ ಕೇವಲ ವೇದ ವೇದಾಂಗಾದಿ ವಿದ್ಯಾಧ್ಯಯನದಿಂದ ಪ್ರಯೋಜನವಿಲ್ಲವೆಂದು ಜನಗಳನ್ನು ಸಂಬೋಧಿಸುತ್ತಾನೆ—ವೇದೈಃ=ವೇದಗಳಿಂದ, ಕಿಂ=ಏನುಪ್ರಯೋಜನ, ಸ್ಮೃತಿಭಿಃ=ಮನ್ವಾದಿ ಸ್ಮೃತಿಗಳಿಂದ, ಕಿಂ=ಏನುಪ್ರಯೋಜನ, ಪುರಾಣ=ಬ್ರಹ್ಮಾಂಡಾದಿ ಪುರಾಣಗಳ, ಪಠನೈಃ=ಪಠನಗಳಿಂದ, ಕಿಂ=ಏನುಪ್ರಯೋಜನ, ಮಹಾವಿಸ್ತರೈಃ=ಬಹು ವಿಶಾಲಗಳಾದ, ಶಾಸ್ತ್ರೈಃ=ತರ್ಕ ವ್ಯಾಕರಣಾದಿ ಶಾಸ್ತ್ರಗಳಿಂದಲೂ, ಕಿಂ=ಏನುಪ್ರಯೋಜನ, ಸ್ವರ್ಗ=ನಾಗಲೋಕವು, ಗ್ರಾಮ=ಅಗ್ರಹಾರಾದಿ ಗ್ರಾಮವು, ಕುಟೀ=ಪರ್ಣಶಾಲೆ ಮೊದಲಾದದ್ದು, ಇವುಗಳಲ್ಲಿ; ನಿವಾಸ=ವಾಸಂದ, ಫಲದೈಃ=ಫಲಪ್ರದಗಳಾದ, ಕರ್ಮ=ಸ್ನಾನಸಂಧ್ಯಾದಿ ಕರ್ಮಗಳು, ಕ್ರಿಯಾ=ಯಜ್ಞಾದಿ ಕ್ರಿಯೆಗಳು, ಇವುಗಳೆಂಬ ವಿಭ್ರಮೈಃ=ವಿಲಾಸಗಳಿಂದ; ಕಿಂ=ಏನುಪ್ರಯೋಜನ, ಭವ=ಸಂಸಾರದದೆಸೆಯಿಂದ ಉಂಟಾದ, ದುಃಖ=ದಾರಿದ್ರ್ಯಾದಿ ದುಃಖದ, ಭಾರ=ಅತಿಶಯದ, ರಚನಾ=ಲಾಭದ, ವಿಧ್ವಂಸ=ನಾಶಕ್ಕೆ, ಕಾಲಾನಲಂ=ಪ್ರಳಯಾಗ್ನಿರೂಪವಾದ, ಸ್ವಾತ್ಮಾನಂದ=ಆತ್ಮಸುಖಾನುಭವದ, ಪದ=ಸ್ಥಾನದಲ್ಲಿ, ಪ್ರವೇಶ=ಪ್ರವೇಶದ, ಕಲನಂ=ರಚನೆಯೆಂಬ, ಏಕಂ=ಒಂದನ್ನು. ಮುಕ್ತ್ವಾ=ಬಿಟ್ಟು, ಶೇಷೈಃ=ಉಳಿದ, ವಣಿಗ್ವೃತ್ತಿಭಿಃ=ವರ್ತಕ ವ್ಯಾಪಾರಗಳಿಂದು ಕಿಂ=ಏನುಪ್ರಯೋಜನವು. ... ... ॥೭೧॥

ತಾ॥ ಜನನಮರಣ ಪ್ರವಾಹರೂಪವಾದ ಸಂಸಾರದಲ್ಲಿ ಉಂಟಾಗುವ ದಾರಿದ್ರ್ಯ, ದಾರಾಪುತ್ರಾದಿ ವಿಯೋಗಾದಿ ದುಃಖವನ್ನು ನಿರ್ಮೂಲವಾಗಿ ನಾಶಮಾಡಿ, ನಿರತಿಶಯವಾದ ಸಚ್ಚಿದಾನಂದಾತ್ಮಾನುಭವವನ್ನು ಸಂಪಾದಿಸಿಕೊಡುವ ಅಧ್ಯಾತ್ಮವಿಚಾರ ಪ್ರೊಂದನ್ನು ಬಿಟ್ಟು, ಕೇವಲ ಋಗ್ಯಜುಸ್ಸಾಮಾದಿ ವೇದಾಧ್ಯಯನಗಳಿಂದಲೂ, ಮನ್ವಾದಿ ಅಷ್ಟಾದಶ ಸ್ಮೃತಿಗಳಿಂದಲೂ, ಪುರಾಣ ಪಠನಗಳಿಂದಲೂ, ಅತ್ಯಂತ ವಿಸ್ತಾರಗಳಾಗಿರುವ ತರ್ಕ ವ್ಯಾಕರಣ ಮೀಮಾಂಸಾದಿ ಶಾಸ್ತ್ರಗಳ ಅಧ್ಯಯನಗಳಿಂದಲೂ, ಮತ್ತು ಸ್ವರ್ಗಲೋಕ ಮನುಷ್ಯಲೋಕಗಳಲ್ಲಿ ಇದ್ದುಕೊಂಡು ಆಚರಿಸುವ ನಾನಾ

ವಿಧವಾದ ಸ್ನಾನ ಸಂಧ್ಯಾ ಯಜ್ಞಾದಿ ಕ್ರಿಯಾವಿಲಾಸಗಳಿಂದಲೂ, ಲೇಶವೂ ಪ್ರಯೋಜನವಿಲ್ಲ ಇವೆಲ್ಲ ವ್ಯಾಪಾರಗಳು.

ಶ್ಲೋ॥ ಯತೋಮೇರುಶ್ಶ್ರೀಮಾನ್ನಿಪತತಿಯುಗಾಂತಾಗ್ನಿವಳಿತಸ್ಸಮು
ದ್ರಾಶ್ಶುಷ್ಯಂತಿಪ್ರಚುರಮಕರಗ್ರಾಹನಿಲಯಾಃ । ಧರಾಗಚ್ಛ
ತ್ಯಂತಂಧರಣಿಧರಪಾದೈರಪಿಧೃತಾಶರೀರೇಕಾವಾರ್ತಾಕರಿಕಲಭ
ಕರ್ಣಾಗ್ರಚಪಲೇ ॥ ॥೨೨॥

ಟೀ॥ ಅಶಾಶ್ವತಪ್ರಕಾರವನ್ನು ಹೇಳುತ್ತಾನೆ—ಯತಃ=ಯಾವಕಾರಣದ್ದೆ ಸೆಯಿಂದ, ಶ್ರೀಮಾನ್=ಸಂಪದ್ಯುಕ್ತವಾದ, ಮೇರುಃ=ಮೇರುಪರ್ವತವು, ಯುಗಾಂತಾಗ್ನಿ=ಪ್ರಳಯಾಗ್ನಿಯಿಂದ, ವಳಿತಃ=ಸುತ್ತಲ್ಪಟ್ಟದ್ದಾಗಿ, ನಿಪತತಿ=ಬೀಳುವದು, ಪ್ರಚುರ=ಅತಿಶಯವಾದ. ಮಕರ=ಮೊಸಳೆಗಳು, ಗ್ರಾಹ=ಜಲಗ್ರಾಹಗಳು, ಇವುಗಳಿಗೆ. ನಿಲಯಾಃ=ಆಧಾರಗಳಾದ, ಸಮುದ್ರಾಃ=ಸಾಗರಗಳು, ಶುಷ್ಯಂತಿ=ಒಣಗುವವು, ಧರಣಿಧರ=ಪರ್ವತಗಳ, ಪಾದೈಃ=ಪಾದಗಳಿಂದ, ಧೃತಾ=ಧರಿಸಲ್ಪಟ್ಟ, ಧರಾ=ಭೂಮಿಯು, ಅಂತಂ=ನಾಶವನ್ನು, ಗಚ್ಛತಿ=ಹೊಂದುವದು, ಕರಿಕಲಭ=ಆನೆಮರಿಯ. ಕರ್ಣ=ಕಿವಿಯ, ಅಗ್ರ=ಕೊನೆಯಂತೆ, ಚಪಲೇ=ಚಂಚಲವಾದ, ಶರೀರೇ=ದೇಹದಲ್ಲಿ, ಕಾವಾರ್ತಾ=ಎಲ್ಲಿಯವಾತು ... ॥೨೨॥

ತಾ॥ ಅತ್ಯಂತ ಶಾಶ್ವತವೆಂದು ವ್ಯವಹಾರ ವಿಷಯವಾಗಿ ರತ್ನಾದಿಗಳಿಗೆ ಆಕರವಾಗಿರುವ ಮೇರುಪರ್ವತವು ಪ್ರಳಯಾಗ್ನಿಯಿಂದ ಸುತ್ತಲ್ಪಟ್ಟು ಅಡಗಿಹೋಗುವದು. ಮತ್ತು ಅನೇಕ ಮೊಸಳೆಗಳಿಗೂ, ಜಲಚರಗಳಿಗೂ ಆಧಾರವಾಗಿರುವ ಸಪ್ತಸಮುದ್ರಗಳು ಬತ್ತಿಹೋಗುವವು. ಸಪ್ತಕುಲಾಚಲ ಪರ್ವತಗಳಿಂದ ಧರಿಸಲ್ಪಟ್ಟಿರುವ ಭೂಮಿಯು ನಾಶವನ್ನೈದುವದು. ಶಾಶ್ವತವಾಗಿರುವ ಈ ಪದಾರ್ಥಗಳಿಗೇ ಇಂಥಾ ನಾಶವು ಸಂಭವಿಸುತ್ತಿರುವಲ್ಲಿ ಅತ್ಯಂತಚಪಲವಾದದ್ದರಿಂದಲೇ ಕ್ಷಣಿಕವಾಗಿರುವ ಶರೀರದಲ್ಲಿ ಸ್ಥಿರತ್ವವೆಂಬುವದು ಎಂದಿಗಾದರೂ ಸಂಭವಿಸುವದುಂಟೆ? ಸರ್ವಥಾ ಸಂಭವಿಸುವದಿಲ್ಲವು. .... .... .... ॥೨೨॥

ಶ್ಲೋ॥ ಗಾತ್ರಂಸಂಕುಚಿತಂಗತಿರ್ವಿಗಳಿತಾಭ್ರಷ್ಟಾಚದಂತಾವಳಿರ್ದೃಷಿ
ರ್ನಶ್ಯತಿವರ್ಧತೇಬಧಿರತಾವಕ್ತ್ರಂಚಲಾಲಾಯತೇ ವಾಕ್ಯಂನಾದ್ರಿ
ಯತೇಚಬಾಂಧವಜನೋಭಾರ್ಯಾನಶುಶ್ರೂಷತೇಹಾಕಷ್ಟಂಪುರು
ಷಸ್ಯಜೀರ್ಣವಯಸಃಪುತ್ರೋಪ್ಯಮಿತ್ರಾಯತೇ ॥೨೩॥

ಟೀ॥ ಮನುಷ್ಯನಿಗೆ ಮುಪ್ಪಿನಿಂದುಂಟಾಗುವ ದುರವಸ್ಥೆಯನ್ನು ಎರಡು ಶ್ಲೋಕಗಳಿಂದ ಹೇಳುತ್ತಾನೆ—ಗಾತ್ರಂ=ಶರೀರವು, ಸಂಕುಚಿತಂ=ಕುಗ್ಗಿತು, ಗತಿಃ=ಸಂಚಾರವು, ವಿಗಳಿತಾ=ಶಿಥಿಲವಾಯಿತು, ದಂತಾವಳಿಃ=ದಂತಪಙ್ಕ್ತಿಯು ಭ್ರಷ್ಟಾ=ಉದುರಿತು, ದೃಷ್ಟಿಃ=ಕಣ್ಣು, ನಶ್ಯತಿ=ನಾಶವಾಗುವದು, (ಕಾಣುವದಿಲ್ಲವು) ಬಧಿರತಾ=ಕಿವುಡತನವು, ವರ್ಧತೇ=ಹೆಚ್ಚುತಲಿರುವುದು, ವಕ್ತ್ರಂಚ=ಮುಖವು, ಲಾಲಾಯತೇ=ಜೊಲ್ಲಿನಿಂದ ಕೂಡಿರುವುದು, ಬಾಂಧವಜನಃ=ಬಂಧುವರ್ಗವು, ವಾಕ್ಯಂ=ವಚನವನ್ನು, ನಾದ್ರಿಯತೇ=ಆದರಿಸುವದಿಲ್ಲ, ಭಾರ್ಯಾಪಿ=ಹೆಂಡತಿಯೂ, ನಶುಶ್ರೂಷತೇ=ಸೇವಿಸುವದಿಲ್ಲ, ಜೀರ್ಣ=ಶಿಥಿಲವಾದ, ವಯಸಃ=ವಯಸ್ಸುಳ್ಳ, ಪುರುಷಸ್ಯ=ಪುರುಷನಿಗೆ, ಪುತ್ರೋಽಪಿ=ಮಗನೂ, ಅಮಿತ್ರಾಯತೇ=ಶತ್ರುವಿನಂತಾಚರಿಸುವನು, ಹಾಕಷ್ಟಂ=ಅತ್ಯಂತ ಕಷ್ಟವು. ... ॥೨೩॥

ತಾ॥ ಶರೀರವು ರಕ್ತಮಾಂಸಗಳಿಂದ ಶೂನ್ಯವಾಗಿ ಕುಗ್ಗಿಹೋಯಿತು. ಶಕ್ತಿ ಇಲ್ಲದಿರುವದರಿಂದ ಅಡಿಯಿಟ್ಟು ಸಂಚರಿಸಲಾಗದು. ಹಲ್ಲುಗಳು ಉದುರಿಹೋದವು. ಕಣ್ಣುಗಳು ಕಾಣುವದಿಲ್ಲ. ಕಿವುಡತನ ಹೆಚ್ಚುತ್ತಲಿರುವುದು. ಬಾಯಿಯಿಂದ ಜೊಲ್ಲು ಸುರಿಯುತ್ತಲಿರುವುದು. ನೆಂಟರಿಷ್ಟರೊಬ್ಬರೂ ಮಾತನ್ನೇ ಕೇಳುವದಿಲ್ಲ. ಹೆಂಡತಿಯು ಸೇವಿಸಳು. ವಯಸ್ಸು ಜೀರ್ಣವಾಗಿ ಮುಪ್ಪುಬಂದಮನುಷ್ಯನಿಗೆ ಸಾಕ್ಷಾತ್ ಮಗನೂ ಶತ್ರುವಾಗುವನು. ಅಹಹ! ಮುದಿತನವು ಅತ್ಯಂತ ಅಸಹ್ಯಕರವಾದದ್ದು.

ಶ್ಲೋ॥ ವರ್ಣಂಸಿತಂಝಡಿತಿವೀಕ್ಷ್ಯಶಿರೋರುಹಾಣಾಂ ಸ್ಥಾನಂಜರಾಪರಿ
ಭವಸ್ಯತದಾಪುಮಾಂಸಂ। ಆರೋಪಿತಾಸ್ಥಿಶತಕಂಪರಿಹೃತ್ಯಯಾಂ
ತಿಚಂಡಾಲಕೂಪಮಿವದೂರತರಂತರುಣ್ಯಃ ॥ .... ॥೨೪॥

ಟೀ॥ ತರುಣ್ಯಃ=ಯುವತಿಯರು, ಶಿರೋರುಹಾಣಾಂ=ಕೂದಲುಗಳ, ಸಿತಂ=ಶುಭ್ರವಾದ. ವರ್ಣಂ=ಧಾವಳ್ಯಗುಣವನ್ನು, ಝಡಿತಿ=ಜಾಗ್ರತೆಯಾಗಿ, ವೀಕ್ಷ್ಯ=ನೋಡಿ, ತದಾ=ಆಗ. ಜರಾ=ಮುಪ್ಪಿನಿಂದುಂಟಾದ, ಪರಿಭವಸ್ಯ=ತಿರಸ್ಕಾರಕ್ಕೆ, ಸ್ಥಾನಂ=ಆಕರವಾದ, ಪುಮಾಂಸಂ=ಪುರುಷನನ್ನು. ಆರೋಪಿತ=ನಡಲ್ಪಟ್ಟ, (ಹಾಕಲ್ಪಟ್ಟ) ಅಸ್ಥಿ=ಮೂಳೆಗಳ, ಶತಕಂ=ನೂರುಳ್ಳ, ಚಂಡಾಲಕೂಪಮಿವ=ಚಂಡಾಲರ ಭಾವಿಯನ್ನೋಪಾದಿಯಲ್ಲಿ, ಪರಿಹೃತ್ಯ=ಪರಿತ್ಯಜಿಸಿ, ದೂರತರಂ=ಅತ್ಯಂತ ದೂರವಾಗಿ, ಯಾಂತಿ=ಹೋಗುವರು. ... ॥೨೪॥

ತಾ॥ ಮನುಷ್ಯನ ತಲೆಯಮೇಲಿರುವ ಕೂದಲುಗಳು ಬಿಳುಪಾಗುವ ಸಂದರ್ಭವನ್ನು ನೋಡಿದೊಡನೆಯೇ ಇವನನ್ನು ಮುಪ್ಪೆಂಬ ಪಿಶಾಚ

ದಿಂದ ಹಿಡಿಯಲ್ಪಟ್ಟವನನ್ನಾಗಿ ಎಣಿಸಿ, ಯುವತಿಯರು ಮೂಳೆಗಳಿಂದ ಕೂಡಿರುವ ಚಂಡಾಲರ ಕೊಳವನ್ನು ದೂರವಾಗಿ ಬಿಡುವಂತೆ, ದೂರದಲ್ಲಿ ತ್ಯಜಿಸುವರು. ಆದುದರಿಂದಲೇ ಮುಪ್ಪು ಅತ್ಯಂತ ಅಸಹ್ಯಕರವಾದದ್ದು.

ಶ್ಲೋ॥ ಯಾವತ್ಸ್ವಸ್ಥಮಿದಂಶರೀರಮರುಜಂ ಯಾವಜ್ಜರಾದೂರತೋ
ಯಾವಚ್ಚೇಂದ್ರಿಯಶಕ್ತಿರಪ್ರತಿಹತಾಯಾವತ್ಕ್ಷಯೋನಾಯು
ಷಃ । ಆತ್ಮಶ್ರೇಯಸಿತಾವದೇವವಿದುಷಾ ಕಾರ್ಯಃಪ್ರಯತ್ನೋ
ಮಹಾನ್ ಸಂದೀಪ್ತೇಭವನೇತುಕೂಪಖನನಂ ಪ್ರತ್ಯುದ್ಯಮಃ
ಕೀದೃಶಃ॥ .... .... .... ॥೩೫॥

ಟೀ॥ ದುರವಸ್ಥೆಯುಂಟಾಗುವದಕ್ಕಿಂತ ಮೊದಲೇ ಶ್ರೇಯಸ್ಸಂಪಾದನೆಗಾಗಿ ಪ್ರಯತ್ನಮಾಡತಕ್ಕದ್ದೆಂಬರ್ಥವನ್ನು ಸ್ಫುಟಮಾಡುತ್ತಾನೆ—ಯಾವತ್=ಯಾವ ವರಿಗೆ, ಇದಂಶರೀರಂ=ಈ ದೇಹವು ಸ್ವಸ್ಥಂ=ಪೀಡಾರಹಿತವಾಗಿರುವದೊ, ಯಾವತ್=ಎಷ್ಟರಪರ್ಯಂತ, ಅರುಜಂ=ಆರೋಗ್ಯದಿಂದ ಕೂಡಿರುವದೊ, ಯಾವತ್=ಎಷ್ಟರವರೆಗೆ, ಜರಾ=ಮುಪ್ಪು, ದೂರತಃ=ದೂರದಲ್ಲಿಯೊ, ಯಾವತ್=ಎಷ್ಟರ ವರೆವಿಗೆ, ಇಂದ್ರಿಯ=ಕಣ್ಣು ಮೊದಲಾದವುಗಳ, ಶಕ್ತಿಶ್ಚ=ಪಟುತ್ವವು, ಅಪ್ರತಿಹತಾ=ಅಖಂಡವಾಗಿರುವುದೊ, ಯಾವತ್=ಯಾವವರೆಗೆ, ಆಯುಷಃ=ಆಯುಸ್ಸಿನ; ಕ್ಷಯಃ=ನಾಶವು, ನ=ಆಗುವದಿಲ್ಲವೊ, ತಾವತ್=ಅಷ್ಟರೊಳಗೆ, ವಿದುಷಾ=ಅಭಿಜ್ಞನಾದ ಪುರುಷನಿಂದ, ಆತ್ಮ=ತನಗೆ; ಶ್ರೇಯಸಿ=ಮೋಕ್ಷರೂಪವಾದ ಶ್ರೇಯಸ್ಸುಂಟಾಗುವ ವಿಷಯದಲ್ಲಿ, ಮಹಾನ್=ದೊಡ್ಡದಾದ, ಪ್ರಯತ್ನಃ=ಉದ್ಯೋಗವು, ಕಾರ್ಯಃ=ಮಾಡಲ್ಪಡತಕ್ಕದ್ದು, ಭವನೇ=ಮನೆಯು, ಸಂದೀಪ್ತೇಸತಿ=ಸುಡಲ್ಪಡುತ್ತಿರಲಾಗಿ, ಕೂಪ=ಭಾವಿಯ, ಖನನಂಪ್ರತಿ=ಅಗಿಯೋಣವನ್ನು ಕುರಿತು, ಉದ್ಯಮಃ=ಪ್ರಯತ್ನವು, ಕೀದೃಶಃ=ಎಂಥಾದ್ದಾಗಿರುವದು. ॥೩೫॥

ತಾ॥ ಶರೀರಕ್ಕೆ ಯಾವವಿಧವಾದ ಪೀಡೆಯೂ ಇಲ್ಲದೆ, ರೋಗಾದ್ಯುಪದ್ರವವಾಗದೆ, ಮುಪ್ಪು ಬಾರದೆ, ಕಂಣು ಮೊದಲಾದ ಇಂದ್ರಿಯಗಳ ಶಕ್ತಿಯು ಉಡುಗದೆ, ಆಯುಸ್ಸು ಕ್ಷಯಿಸದೆಯೂ ಯಾವವರೆಗೆ ಇರುವುದೋ ಅಷ್ಟರೊಳಗೆ ಯುಕ್ತಾಯುಕ್ತಜ್ಞಾನವುಳ್ಳ ಪ್ರಜ್ಞಾಶಾಲಿಯು ಮೋಕ್ಷರೂಪವಾದ ಶ್ರೇಯಸ್ಸನ್ನು ಸಾಧಿಸಿಕೊಳ್ಳುವದಕ್ಕಾಗಿ ಅವಶ್ಯಕವಾಗಿ ಸಫಲವಾಗುವ ಪ್ರಯತ್ನವನ್ನು ಮಾಡಬೇಕು. ಹಾಗಿಲ್ಲದೆ ಮುಂದೆ ವಯಸ್ಸಾದ ತರುವಾಯ ಶ್ರೇಯಸ್ಸನ್ನು ಸಂಪಾದಿಸಿಕೊಳ್ಳುವೆನೆಂಬುವವನ ವಿವೇಕವು ಮನೆಯು ಬೆಂಕಿಯಿಂದ ಹತ್ತಿ ಬೇಯುವ ಸಮಯದಲ್ಲಿ ಅದನ್ನು ಆರಿಸು

ವದಕ್ಕಾಗಿ ಆಗ ಭೂಮಿಯನ್ನು ತೋಡುವದಕ್ಕೆ ಪ್ರಯತ್ನ ಪಡುವವನ ವಿವೇಕದಂತಾಗುವದು, .... .... ||೭೫||

ಶ್ಲೋ|| ತಪಸ್ಯಂತಸ್ಸಂತಃ ಕಿಮಧಿನಿವಸಾಮಸ್ಸುರನದೀಂ ಗುಣೋದಾರಾ
ನ್ದಾರಾನುತಪರಿಚರಾಮಸ್ಸವಿನಯಂ | ಪಿಬಾಮಶ್ಶಾಸ್ತ್ರೌಘಾನು
ತವಿವಿಧಕಾವ್ಯಾಮೃತರಸಾನ್ನವಿದ್ಮಃ ಕಿಂಕುರ್ಮಃ ಕತಿಪಯನಿಮೇ
ಷಾಯುಷಿಜನೇ || .... .... ||೭೬||

ಟೀ|| ಅವಶ್ಯಕವಾಗಿ ತಪಸ್ಸೇ ಸಂಪಾದನೀಯವೆಂದು ಕೆಲವರ ನಿಶ್ಚಯವನ್ನು ಹೇಳುತ್ತಾನೆ—ತಪಸ್ಯಂತಸ್ಸಂತಃ=ತಪಸ್ಸನ್ನಾಚರಿಸುವಂಥವರಾಗಿ, ಸುರನದೀಂ=ಗಂಗಾನದಿಯನ್ನು, ಅಧಿವಸಾಮಃ ಕಿಂ=ಆಶ್ರಯಿಸೋಣವೆ, ಉತ=ಅಥವಾ, ಸವಿನಯಂ=ವಿನಯದಿಂದೊಡಗೂಡಿ, ಗುಣ=ಸೌಶೀಲ್ಯಾದಿ ಗುಣಗಳಿಂದ, ಉದಾರಾನ್=ಗಂಭೀರರಾಗಿರುವ, ದಾರಾನ್=ಹೆಂಡತಿಯರನ್ನು, ಪರಿಚರಾಮಃ=ಅನುಸರಿಸೋಣವೆ, ಶಾಸ್ತ್ರೌಘಾನ್=ಶಾಸ್ತ್ರಸಮುದಾಯಗಳನ್ನು, ಪಿಬಾಮಃ ಕಿಂ=ಕುಡಿಯೋಣವೆ ? ಉತ=ಅಥವಾ, ವಿವಿಧ=ನಾನಾವಿಧವಾದ, ಕಾವ್ಯ=ನಾಟಕಾಲಂಕಾರಾದಿಗಳೆಂಬ, ಅಮೃತರಸಾನ್=ಅಮೃತರಸಗಳನ್ನು, ಪಿಬಾಮಃ=ಪಾನ ಮಾಡೋಣವೇ, ಜನೇ=ಜನಸಮುದಾಯವು, ಕತಿಪಯ=ಕೆಲವಾದ, ನಿಮೇಷ=ಕ್ಷಣಗಳ, ಆಯುಷಿಸತಿ=ಆಯುಸ್ಸುಳ್ಳದ್ದಾಗುತ್ತಿರಲಾಗಿ, ಕಿಂಕುರ್ಮಃ=ಏನನ್ನು ಮಾಡೋಣ. ... ... .... ||೭೬||

ತಾ|| ತಪಸ್ಸನ್ನಾಚರಿಸುವುದಕ್ಕಾಗಿ ಗಂಗಾದಿಯನ್ನಾಶ್ರಯಿಸೋಣವೇ? ಗುಣವತಿಯರಾದ ಹೆಂಡತಿಯರನ್ನು ಅತ್ಯಂತ ವಿನಯದಿಂದ ಸೇವಿಸೋಣವೇ? ನಾನಾವಿಧ ಶಾಸ್ತ್ರಾಭ್ಯಾಸವನ್ನು ಮಾಡೋಣವೆ? ಕಾವ್ಯಾಮೃತ ರಸಗಳನ್ನು ಪಾನ ಮಾಡೋಣವೆ? ಅತ್ಯಂತ ನ್ಯೂನವಾಗಿರುವ ಈ ಪುರುಷಾಯುಷದಲ್ಲಿ ಯಾವದು ಮಾಡುವುದುಕ್ಕೆ ಸಾಧ್ಯವಾದೀತು; ಎಂದರೆ ಪತ್ನೀಸೇವೆಗಿಂತಲೂ ಶ್ರೇಯಸ್ಕರವಾದ ತಪಸ್ಸೇ ಶ್ಲಾಘ್ಯವೆಂದು ಭಾವವು .... .... . ||೭೬||

ಶ್ಲೋ|| ದುರಾರಾಧ್ಯಾಶ್ಚಾಮೀತುರಗಚಲಚಿತ್ತಾಃ ಕ್ಷಿತಿಭುಜೋ ವಯಂಚ
ಸ್ಥೂಲೇಚ್ಛಾಸ್ಸುಮಹತಿಫಲೇಬದ್ಧಮನಸಃ | ಜರಾದೇಹಂಮೃ
ತ್ಯುರ್ಹರತಿದಯಿತಂ ಜೀವಿತಮಿದಂ ಸಖೇನಾನ್ಯಚ್ಛ್ರೇಯೋಜಗ
ತಿವಿದುಷೋನ್ಯತ್ರತಪಸಃ || .... ||೭೭||

ಟೀ॥ ನಿಶ್ಚಿತಾರ್ಥವನ್ನು ಹೇಳುತ್ತಾನೆ—ತುರಗ=ಅಶ್ವಗಳಂತೆ, ಚಲ=ಚಂಚಲವಾದ, ಚೇತಾಃ=ಮನಸ್ಸುಳ್ಳ, ಅವೀ=ಈ, ಕ್ಷಿತಿಭುಜಃ=ದೊರೆಗಳು, ದುರಾರಾಧ್ಯಾಃ=ಆರಾಧಿಸಲಸಾಧ್ಯರು, ಸ್ಫೂರ್ಲೀಚ್ಛಾ=ಅಧಿಕಾಶೆಯುಳ್ಳ, ವಯಂಚ=ನಾವುಗಳೂ, ಸುಮಹತಿ=ಅತ್ಯಧಿಕವಾದ, ಫಲೆ=ಧನದಲ್ಲಿ, ಬದ್ಧ=ಕಟ್ಟಲ್ಪಟ್ಟ, ಮನಸಃ=ಮನಸ್ಸುಳ್ಳವರು, ಜರಾ=ಮುಪ್ಪು, ದೇಹಂ=ಶರೀರವನ್ನು, ಹರತಿ=ಕ್ಷಯಪಡಿಸುವುದು, ಮೃತ್ಯುಃ=ಯಮನು, ದಯಿತಂ=ಇಷ್ಟವಾದ, ಇದಂ=ಈ, ಜೀವಿತಂ=ಪ್ರಾಣಗಳನ್ನು, ಹರತಿ=ಅಪಹರಿಸುವನು, ಸಖೆ=ಎಲೈ ಮಿತ್ರನೆ, ಜಗತಿ=ಲೋಕದಲ್ಲಿ, ವಿದುಷಃ=ತತ್ವಜ್ಞನಿಗೆ, ತಪಸಃ ಅನ್ಯತ್ರ=ತಪಸ್ಸಿಗಿಂತಲೂ ಮತ್ತೊಂದುಸ್ಥಳದಲ್ಲಿ, ಅನ್ಯತ್=ಇನ್ನೊಂದು, ಶ್ರೇಯಃ=ಶ್ರೇಯಸ್ಕರವಾದದ್ದು, ನ=ಇಲ್ಲವು

ತಾ॥ ಎಲೈ ಸ್ವಬಂಧುದಾದ ಮಿತ್ರನೇ ಕೇಳು—ಅಶ್ವಗಳಂತೆ ಅತಿ ಚಪಲಚಿತ್ತರಾದ ಅರಸರನ್ನು ಸೇವಿಸಿ ಪ್ರಸನ್ನರನ್ನಾಗಿ ಮಾಡಿಕೊಳ್ಳುವಿಕೆಯು ಬಹು ದುಸ್ಸಾಧ್ಯವು. ಅವರು ದಾತೃಗಳಲ್ಲದಿದ್ದರೂ ನಮಗೆ ಧನಾಕಾಂಕ್ಷೆ ಎಂಬದು ಅತಿಶಯವಾಗಿರುವುದು, ಮುಪ್ಪು ದಿನೇದಿನೆ ದೇಹವನ್ನು ಕುಗ್ಗಿಸುತ್ತಲಿರುವುದು. ಮೃತ್ಯುವು ಪ್ರಾಣಗಳನ್ನು ಅಪಹರಿಸುವದಕ್ಕೆ ಸಿದ್ಧವಾಗಿರುವನು. ಆದುದರಿಂದಲೇ ಈ ಲೋಕದಲ್ಲಿ ಪುರುಷನಿಗೆ ತಪಸ್ಸನ್ನಾಚರಿಸುವುದಕ್ಕಿಂತಲೂ ಬೇರೊಂದು ಶ್ರೇಯಸ್ಕರವಾದ ವಸ್ತುವು ಸರ್ವಥಾ ಇಲ್ಲವು. .... .... ॥೭೭॥

ಶ್ಲೋ॥ ಮಾನೇ ಮ್ಲಾಯಿನಿ ಖಂಡಿತೇ ಚ ವಸುನಿ ವ್ಯರ್ಥೇ ಪ್ರಯಾತೇಽರ್ಥಿನಿ
ಕ್ಷೀಣೇ ಬಂಧುಜನೇ ಗತೇ ಪರಿಜನೇ ನಷ್ಟೇ ಶನೈರ್ಯೌವನೇ । ಯು
ಕ್ತಂ ಕೇವಲಮೇತದೇವ ಸುಧಿಯಾಂ ಯಜ್ಜಹ್ನುಕನ್ಯಾಪಯಃ ಪೂ
ತಗ್ರಾವಗಿರೀಂದ್ರಕಂದರತಟೀಕುಂಜೇ ನಿವಾಸಃ ಕ್ವಚಿತ್ ॥೭೮॥

ಟೀ॥ ಶ್ರೇಯಸ್ಸಿಗೆ ಹೇತುವಾದ ತಪಸ್ಸನ್ನು ಆಚರಿಸುವುದಕ್ಕೆ ಸ್ಥಾನವನ್ನು ತೋರಿಸುತ್ತಾನೆ—ಮಾನೇ=ಅಭಿಮಾನವು, ಮ್ಲಾಯಿನಿ=ಭಗ್ನವಾಗುತ್ತಿರಲಾಗಿ, ವಸುನಿ=ದ್ರವ್ಯವು, ಖಂಡಿತೇ=ನಷ್ಟವಾಗುತ್ತಿರಲಾಗಿ, ಅರ್ಥಿನಿ=ಯಾಚಕನು, ವ್ಯರ್ಥೇ=ನಿರರ್ಥಕನಾಗಿ, ಪ್ರಯಾತೇಸತಿ=ಹೊರಟು ಹೋಗುತ್ತಿರಲಾಗಿ ಬಾಂಧವಜನೇ=ಪುತ್ರಕಳತ್ರಾದಿಜನವು, ಕ್ಷೀಣೇ=ಕೃಶವಾಗುತ್ತಿರಲಾಗಿ, ಪರಿಜನೇ=ಭೃತ್ಯವರ್ಗವು, ಗತೇಸತಿ=ಹೊರಟುಹೋಗುತ್ತಿರಲಾಗಿ, ಯೌವನೇ=ಪ್ರಾಯವು, ಶನೈಃ=ಮೆಲ್ಲಗೆ, ನಷ್ಟೇಸತಿ=ಶಿಥಿಲವಾಗುತ್ತಿರಲಾಗಿ, ಸುಧಿಯಾಂ=ಬುದ್ಧಿಶಾಲಿಗಳಿಗೆ, ಕ್ವಚಿತ್=ಬಂದಾನೊಂದು, ಜಹ್ನುಕನ್ಯಾ=ಭಾಗೀರಥಿಯ, ಪಯಃ=ಉದ್ಧ

ಬಿಂದ, ಶುಚಿ=ಪರಿಶುದ್ಧವಾದ, ಗ್ರಾವ=ಶಿಲೆಗಳುಳ್ಳ, ಗಿರೀಂದ್ರ=ಹಿಮವತ್ಪರ್ವತದ, ಕಂದರ=ಗುಹೆಯ, ತಟೀ=ಪ್ರದೇಶದಲ್ಲಿರುವ, ಕುಂಜ=ಲತಾಗೃಹದಲ್ಲಿ, ನಿವಾಸ ಇತಿ ಯತ್=ವಾಸಮಾಡುವದಾವದೋ, ಏತತ್=ಇದೇ, ಕೇವಲಂ=ಮುಖ್ಯವಾಗಿ, ಯುಕ್ತಂ=ಉಚಿತವಾದದ್ದು. ... .... ॥೨೮॥

ತಾ॥ ಅಭಿಮಾನವು ತಗ್ಗಿ, ದ್ರವ್ಯವು ನಷ್ಟವಾಗಿ, ಯಾಚಿಸಲು ಬಂದ ಯಾಚಕರು ತಮ್ಮ ಮನೋರಥವನ್ನು ಹೊಂದದೆ ವ್ಯರ್ಥವಾಗಿ ಹೋಗುತ್ತಾ, ಪುತ್ರಮಿತ್ರಕಳತ್ರಾದಿ ಬಂಧುಜನರು ಅನ್ನವಿಲ್ಲದೆ ಕೃಶಿಸಿ, ಸೇವಕ ಜನರು ತ್ಯಜಿಸಿಹೋಗುತ್ತಾ, ಯೌವನವು ಕ್ರಮವಾಗಿ ನಷ್ಟವಾಗುತ್ತಿರಲಾಗಿ, ವಿವೇಕಶಾಲಿಯಾದ ಪುರುಷನಿಗೆ ಭಾಗೀರಥಿಯ ಜಲಪ್ರವಾಹದಿಂದ ಪರಿಶುದ್ಧವಾದ ಶಿಲೆಗಳುಳ್ಳ ಹಿಮಾಲಯದ ಗುಹೆಯಲ್ಲಿರುವ ಲತಾಗೃಹದಲ್ಲಿ ವಾಸಮಾಡುವದೊಂದೇ ಶ್ಲಾಘ್ಯವಾದದ್ದೆಂದರಿಯತಕ್ಕದ್ದು.

ಶ್ಲೋ॥ ರಮ್ಯಾಶ್ಚಂದ್ರಮರೀಚಯಸ್ತೃಣವತೀ ರಮ್ಯಾವನಾಂತಸ್ಥಲೀರ
ಮ್ಯಂಸಾಧುಸಮಾಗಮಾಗತಸುಖಂಕಾವ್ಯೇಷುರಮ್ಯಾಃಕಥಾಃ ॥
ಕೋಪೋಪಾಹಿತಬಾಷ್ಪಬಿಂದುತರಳಂರಮ್ಯಂಪ್ರಿಯಾಯಾಮು
ಖಂಸರ್ವಂರಮ್ಯಮನಿತ್ಯತಾಮುಪಗತೇಚಿತ್ತೇನಕಿಂಚಿತ್ಪುನಃ ॥

ಟೀ॥ ನಿತ್ಯಾನಿತ್ಯ ವಸ್ತು ವಿಚಾರವನ್ನು ಮಾಡಿದರೆ ರಮ್ಯವಸ್ತುವೆಲ್ಲಾ ಮನಸ್ಸಿಗೆ ಅರಮ್ಯವಾಗಿ ತೋರುವದೆಂದು ಹೇಳುತ್ತಾನೆ—ಚಂದ್ರಮರೀಚಯಃ=ಚಂದ್ರಿಕೆಗಳು. ರಮ್ಯಾಃ=ರಮಣೀಯಗಳು, ತೃಣವತೀ=ಹುಲ್ಲುಳ್ಳ. ವನಾಂತಸ್ಥಲೀ=ವನ ಮಧ್ಯಪ್ರದೇಶವು, ರಮ್ಯಾ=ಸುಂದರವಾದದ್ದು, ಸಾಧು=ಸಜ್ಜನರ, ಸಮಾಗಮ=ಸಹವಾಸದಿಂದ, ಆಗತಂ=ಪ್ರಾಪ್ತವಾದ, ಸುಖಂ=ಸುಖವು, ರಮ್ಯಂ=ಮನೋಹರವು, ಕಾವ್ಯೇಷು=ಕಾವ್ಯಗಳಲ್ಲಿರುವ, ಕಥಾಃ=ಕಲ್ಪನಾ ಕಥೆಗಳು, ರಮ್ಯಾಃ=ಶ್ರಾವ್ಯವಾದವುಗಳು, ಕೋಪೋಪಾಹಿತ=ಪ್ರಣಯಕಲಹದಿಂದುಂಟಾದ, ಬಾಷ್ಪಬಿಂದು=ಆನಂದಬಾಷ್ಪ ಬಿಂದುಗಳಿಂದ, ತರಳಂ=ಚಪಲವಾದ, ಪ್ರಿಯಾಯಾಃ=ವಲ್ಲಭೆಯ, ಮುಖಂ=ವದನವು, ರಮ್ಯಂ=ಸುಂದರವಾದದ್ದು, ಚಿತ್ತೇ=ಮನಸ್ಸು. ಅನಿತ್ಯತಾಂ=ನಿತ್ಯಾನಿತ್ಯ ವಸ್ತುವಿಚಾರವನ್ನು, ಉಪಗತೇಸತಿ=ಹೊಂದುತ್ತಿರಲಾಗಿ, ಕಿಂಚಿತ್ಪುನಃ=ಅಣುಮಾತ್ರವು, ರಮ್ಯಂ=ರಮಣೀಯವಾದದ್ದು, ನ=ಆಗುವದಿಲ್ಲವು. .... .... .... ॥೨೯॥

ತಾ॥ ಲೋಕದಲ್ಲಿ ಬೆಳದಿಂಗಳು ಸುಂದರವಾದದ್ದು, ಹಸರುಹುಲ್ಲುಳ್ಳ ವನಭೂಮಿಯು ರಮಣೀಯವಾದದ್ದು, ಸಜ್ಜನರ ಸಹವಾಸದಿಂದುಂಟಾದ

ಸುಖವು ಶ್ಲಾಘ್ಯವು, ನಾನಾವಿಧ ಕಾವ್ಯಗಳಲ್ಲಿರುವ ಕಲ್ಪನಾಕಥೆಗಳು ಶ್ರಾವ್ಯವಾಗಿಯೇ ಇರುವುವು, ಪ್ರಣಯಕಲಹದಿಂದುಂಟಾದ ಆನಂದಬಾಷ್ಪದಿಂದೊಡಗೂಡಿದ ಪ್ರಿಯಳ ಮುಖವು ಪ್ರೇಮಾಸ್ಪದವು, ಆದರೆ ಇದು ನಿತ್ಯವು, ಇದು ಅನಿತ್ಯವು, ಎಂಬ ವಿಚಾರಮಾರ್ಗದಲ್ಲಿ ಮನಸ್ಸು ಪ್ರವರ್ತಿಸಿದ್ದೇ ಆದರೆ, ಈ ಸರ್ವವೂ ತುಚ್ಛವಾದದ್ದೆಂದು ಕ್ಷಣಮಾತ್ರದಲ್ಲಿ ಸ್ಪಷ್ಟವಾಗುವದು.

ಶ್ಲೋ॥ ರಮ್ಯಂಹರ್ಮ್ಯತಲಂನಕಿಂವಸತಯೇಶ್ರವ್ಯಂನಗೇಯಾದಿಕಂಕಿಂವಾ
ಪ್ರಾಣಸಮಾಸಮಾಗಮಸುಖಂನೈವಾಧಿಕಪ್ರೀತಯೇ । ಕಿಂತು
ಭ್ರಾಂತಪತಂಗಪಕ್ಷಪವನವ್ಯಾಲೋಲದೀಪಾಂಕುರಚ್ಛಾಯಾಚಂ
ಚಲಮಾಕಲಯ್ಯಸಕಲಂಸಂತೋವನಾಂತಂಗತಾಃ ॥೮೦॥

ಟೀ॥ ಹೇಳಿದ ಅರ್ಥವನ್ನೇ ಬೇರೆ ಬಗೆಯಿಂದ ಹೇಳುತ್ತಾನೆ—ಹರ್ಮ್ಯತಲಂ=ಉಪ್ಪರಿಗೆಯು, ವಸತಯೆ=ವಾಸಮಾಡುವುದಕ್ಕೆ, ನರಮ್ಯಂಕಿಂ=ಶ್ಲಾಘ್ಯವಲ್ಲವೆ. ಗೇಯಾದಿಕಂ=ಗಾನ ಮೊದಲಾದದ್ದು, ನಶ್ರವ್ಯಂಕಿಂ=ಶ್ರೋತ್ರಹಿತಕರವಲ್ಲವೆ. ಪ್ರಾಣಸಮಾ=ಪ್ರಾಣಪ್ರಿಯಳ, ಸಮಾಗಮ=ಸಂಬಂಧದಿಂದುಂಟಾದ, ಸುಖಂ=ಸುಖವು, ಅಧಿಕಪ್ರೀತಯೆ=ಅತ್ಯಂತ ಸಂತೋಷಕ್ಕಾಗಿ, ನೈವಕಿಂ=ಆಗುವದಿಲ್ಲವೆ, ಸಂತಃ=ಸತ್ಪುರುಷರು. ಸಕಲಂ=ಈ ಸಮಸ್ತವನ್ನು, ಭ್ರಾಂತ=ಹಾರುವ ಪತಂಗ=ಮಿಡತೆಯ, ಪಕ್ಷ=ರೆಕ್ಕೆಗಳ, ಪವನ=ವಾಯುವಿನಿಂದ, ವ್ಯಾಲೋಲ=ಅತಿಚಂಚಲವಾದ, ದೀಪಾಂಕುರ=ಸಣ್ಣ ದೀಪದ, ಛಾಯಾ=ಕಾಂತಿಯಂತೆ, ಚಂಚಲಂ=ಚಪಲವಾದದ್ದನ್ನಾಗಿ, ಆಕಲಯ್ಯ=ಆಲೋಚಿಸಿ, ವನಾಂತಂ=ವನಮಧ್ಯಪ್ರದೇಶವನ್ನು ಕುರಿತು, ಗತಾಃ=ಹೊರಟುಹೋದರು, ... ॥೮೦॥

ತಾ॥ ವಾಸಮಾಡುವದಕ್ಕೆ ದಿವ್ಯವಾದ ಉಪ್ಪರಿಗೆಯು ಶ್ಲಾಘ್ಯವಾದದ್ದು, ಗಾಯಕರು ಹಾಡುವ ಗಾನವು ಕಿವಿಗಿಂಪಾಗಿರುವುದು. ಪ್ರಾಣಪ್ರಿಯಳಾದ ವಲ್ಲಭೆಯ ಸಂಭೋಗದಿಂದುಂಟಾದ ಸುಖವು ಅತ್ಯಂತ ಪ್ರೀತಿಯನ್ನುಂಟುಮಾಡುವದು. ಆದರೆ ಯುಕ್ತಾಯುಕ್ತ ವಿಚಾರಪರರಾದ ಸಜ್ಜನರು ಈ ಸಮಸ್ತ ಸಂಪತ್ತನ್ನು ಮಿಡತೆಯ ರೆಕ್ಕೆಗಳಿಂದ ಹೊಡೆಯಲ್ಪಡುತ್ತಿರುವ ಸಣ್ಣ ದೀಪದ ಕಾಂತಿಯಂತೆ ಅತ್ಯಂತ ಅಸ್ಥಿರವಾದದ್ದೆಂದು ದೃಢವಾಗಿ ನಿಶ್ಚಯಿಸಿ, ಶಾಶ್ವತವಾಗಿರುವ ಬ್ರಹ್ಮಾನಂದ ಸಾಧಕವಾದ ತಪಸ್ಸನ್ನಾಚರಿಸುವುದಕ್ಕೋಸ್ಕರ ವನಭೂಮಿಯನ್ನೈದುವರು.

## ಶಿವಾರ್ಚನಾರಂಭವು.

ಶ್ಲೋ॥ ಅಸಂಸಾರಾತ್ತ್ರಿಭುವನಮಿದಂ ಚಿನ್ವತಾಂ ತಾತ ತಾದೃಙ್ನೈವಾಸ್ಮಾಕಂ
ನಯನಪದವೀಂ ಶ್ರೋತ್ರಮಾರ್ಗಂ ಗತೋ ವಾ ॥ ಯೋಯಂ ಧತ್ತೇ
ವಿಷಯಕರಿಣೀ ಗಾಢಗೂಢಾಭಿಮಾನಕ್ಷೀಬಸ್ಯಾಂತಃಕರಣಕರಿಣಃ
ಸಂಯಮಾನಾಯಲೀಲಾಂ .... .... ॥೮೧॥

ಟೀ॥ ನಿತ್ಯಾನಿತ್ಯ ವಸ್ತುವಿಚಾರ ಪ್ರಕರಣದಲ್ಲಿ ತಪಸ್ಸು ಅತ್ಯಂತಾವಶ್ಯಕವೆಂದು ಹೇಳಲ್ಪಟ್ಟಿತು. ಅದು ಯಾವ ರೀತಿಯಾಗಿರುವದೆಂದರೆ ಶಿವಾರ್ಚನಾರೂಪವೆಂದು ಅದನ್ನು ವರ್ಣಿಸುತ್ತಾನೆ—ತಾತ=ಎಲೈ ತಂದೆಯೇ, ಆಸಂಸಾರಾತ್=ಅನಾದಿ ಸಂಸಾರವನ್ನು ಮೊದಲು ಮಾಡಿಕೊಂಡು, ಇದಂ=ಈ, ತ್ರಿಭುವನಂ=ಮೂರುಲೋಕ ಸಮುದಾಯವನ್ನು, ಚಿನ್ವತಾಂ=ಹುಡುಕುವ (ವಿಚಾರಿಸುವ) ಅಸ್ಮಾಕಂ=ನಮಗೆ, ನಯನಪದವೀಂ=ಲೋಚನಮಾರ್ಗವನ್ನು, ಶ್ರೋತ್ರಮಾರ್ಗಂ ಗತೋವಾ=ಕಿವಿಗಳ ಮಾರ್ಗವನ್ನಾಗಲಿ, ತಾದೃಕ್=ಅಂಥವನಾದ ಪುಮಾನ್=ಪುರುಷನು, ನೈವಗತಃ=ಹೊಂದಲೇ ಇಲ್ಲವು, ಯೋಯಂ=ಯಾವ ಈ ಪುರುಷನು, ವಿಷಯ=ಶಬ್ದ, ಗಂಧ ಮೊದಲಾದ ವಿಷಯಗಳೆಂಬ, ಕರಿಣೀ=ಹೆಣ್ಣಾನೆಗಳಲ್ಲಿ ಗಾಢ=ದೃಢವಾಗಿಯೂ, ಗೂಢ=ರಹಸ್ಯವಾಗಿಯೂ ಇರುವ, ಅಭಿಮಾನ=ಅತ್ಯಂತಾಸಕ್ತಿಯಿಂದ, ಕ್ಷೀಬಸ್ಯ=ಮದಿಸಿರುವ, ಅಂತಃಕರಣಕರಿಣಃ=ಮನಸ್ಸೆಂಬ ಮದ್ದಾನೆಯು, ಸಂಯಮ=ನಿಯಮಿಸುವದರಲ್ಲಿ, ಅನಾಯ=ಬಲೆಯ, ಲೀಲಾಂ=ವಿಲಾಸವನ್ನು, ಧತ್ತೇ=ಧರಿಸುವನೋ. .... .... ॥೮೧॥

ತಾ॥ ಎಲೈ ತಂದೆಯೇ ಕೇಳು—ಯಾವ ಪರಮೇಶ್ವರನೆಂಬ ಪರಮಪುರುಷನು ಸ್ವಚ್ಛಂದನ ವನಿತಾದಿ ವಿಷಯಗಳೆಂಬ ಹೆಣ್ಣಾನೆಗಳಲ್ಲಿ ಅತ್ಯಂತಾನುರಾಗದಿಂದ ಕೊಬ್ಬಿರುವ ಮನಸ್ಸೆಂಬ ಮದ್ದಾನೆಯನ್ನು ಶಿಕ್ಷಿಸಿ, ನಿಮಿಷಮಾತ್ರದಲ್ಲಿ ನಿಯಮಿಸಲು ಸಮರ್ಥನೋ, ಅಂಥಾ ಪುರುಷನನ್ನು ಈ ಜನನಮರಣ ಪ್ರವಾಹರೂಪವಾದ ಸಂಸಾರವು ಹುಟ್ಟಿದ್ದು ಮೊದಲು ಈವರೆಗೂ ವಿಚಾರಮಾಡಿದರೂ ಕಣ್ಣಲ್ಲಿ ನೋಡಿರುವೆವೆ, ಅಥವಾ ಕಿವಿಯಲ್ಲಿ ಕೇಳಿರುವೆವೆ, ಇಲ್ಲವಲ್ಲ. ಆದುದರಿಂದಲೇ ಆ ಸರ್ವೋತ್ತಮನನ್ನು ಅವಶ್ಯವಾಗಿ ಅರ್ಚಿಸಬೇಕು. .... .... .... ॥೮೧॥

ಶ್ಲೋ॥ ಯದೇತತ್ಸ್ವಚ್ಛಂದಂ ವಿಹರಣಮಕಾರ್ಪಣ್ಯಮಶನಂ ಸಹಾರ್ಯೈಃ
ಸಂವಾಸಃ ಶ್ರುತಮುಪಶಮೈಕವ್ರತಫಲಂ ॥ ಮನೋಮಂದಸ್ಪಂ-

ದಂಬಹಿರಪಿಚಿರಸ್ಯಾಪಿವಿಮೃಶನ್ನಜಾನೇಕಸ್ಯೈಷಾ ಪರಿಣತಿರುದಾ-
ರಸ್ಯತಪಸಃ .... .... .... ॥೮೨॥

ಟೀ॥ ತಪಸ್ಸಿನ ರೀತಿಯನ್ನು ಹೇಳುತ್ತಾನೆ—ಸ್ವಚ್ಛಂದಂ=ಯಥೇಚ್ಛವಾದ ವಿಹರಣಂ=ಸಂಚಾರವು, ಅಕಾರ್ಪಣ್ಯಂ=ದೈನ್ಯವಿಲ್ಲದ, ಅಶನಂ=ಭೋಜನವು, ಆರ್ಯೈಸ್ಸಹ=ಸಾಧುಗಳೊಡನೆ,ಸಂವಾಸಃ=ಸಹವಾಸವು,ಉಪಶಮೈಕವ್ರತಫಲಂ= ಉಪಶಮ=ಉಪಶಾಂತಿಯೇ, ಏಕ=ಮುಖ್ಯವಾದ, ವ್ರತಫಲಂ=ನಿಯಮಫಲವುಳ್ಳ, ಶ್ರುತಂ=ಶಾಸ್ತ್ರಶ್ರವಣವು. ಬಹಿಃ=ಬಹಿರ್ವ್ಯಾಪಾರದಲ್ಲಿ, ಮಂದ=ಸ್ವಲ್ಪವಾದ, ಸ್ಪಂದಂ=ಚಲನವುಳ್ಳ, ಮನೋಪಿ=ಮನಸ್ಸು, ಏಷಾ=ಇದು, ಕಸ್ಯ=ಯಾವ ಪುರುಷನ, ಉದಾರಸ್ಯ=ಅಮೋಘವಾದ, ತಪಸಃ=ತಪಸ್ಸಿನ, ಪರಿಣತಿಃ=ಪರಿಪಾಕವೋ, ಚಿರಸ್ಯ=ಬಹುಕಾಲದ ವರೆಗೂ, ವಿಮೃಶನ್ನಪಿ=ವಿಚಾರ ಮಾಡಿದವನಾದರೂ, ನಜಾನೇ=ತಿಳಿಯೆನು, .... ... ॥೮೨॥

ತಾ॥ ಪರಾಧೀನವಿಲ್ಲದೆ ವನಭೂಮಿಯಲ್ಲಿ ಇಷ್ಟಾನುಸಾರವಾಗಿ ಸಂಚರಿಸುತ್ತಾ, ದೈನ್ಯಪಡದೆ ಕಂದಮೂಲಾದಿಗಳನ್ನು ಆಹಾರಮಾಡುತ್ತಾ, ಆತ್ಮಧ್ಯಾನ ಪರಾಯಣರಾದ ಸಾಧುಗಳೊಡನೆ ವಾಸಮಾಡುತ್ತಾ, ವಿಷಯಾಸಕ್ತಿಯಿಂದ ಹಿಂತಿರಿಗಿ ಕೇವಲ ಶಾಂತಿಯನ್ನೇ ಉಂಟುಮಾಡುವ ವೇದಾಂತ ಶಾಸ್ತ್ರಶ್ರವಣವನ್ನು ಮಾಡಿಕೊಂಡು, ಆತ್ಮಧ್ಯಾನದಿಂದ ಬಹಿರ್ಮುಖವಾದ ಕಾಲದಲ್ಲಿ ಸ್ವಲ್ಪ ಚಪಲವಾದ ಮನಸ್ಸುಳ್ಳವನಾಗಿರುವಿಕೆಯೆಂಬುದು ಅನೇಕ ಜನ್ಮಾಂತರಗಳ ತಪಃಫಲವಿದ್ದರೆ ಲಭಿಸುವದಲ್ಲದೆ ಸಾಧಾರಣ ಪುರುಷನಿಗೆ ಲಭಿಸುವದಿಲ್ಲವು. .... ॥೮೨॥

ಶ್ಲೋ॥ ಜೀರ್ಣಾಏವಮನೋರಥಾಶ್ಚಹೃದಯೇಯಾತಂಚತದ್ಯೌವನಂಹಂ
ತಾಂಗೇಷುಗುಣಾಶ್ಚವಂಧ್ಯಫಲತಾಂಯಾತಾಗುಣಜ್ಞೈರ್ವಿನಾ ।
ಕಿಂಯುಕ್ತಂಸಹಸಾಭ್ಯುಪೈತಿಬಲವಾನ್ಕಾಲಃಕೃತಾಂತೋಕ್ಷಮೀ
ಹಾಜ್ಞಾತಂಮದನಾಂತಕಾಂಘ್ರಿಯುಗಳಂಮುಕ್ತ್ವಾಸ್ತಿನಾನ್ಯಾಗತಿಃ॥

ಟೀ॥ ಶಂಕರನ ಚರಣವೇ ಶರಣೆಂಬರ್ಥವನ್ನು ಅಭಿನಯಿಸಿ ತೋರಿಸುತ್ತಾನೆ—ಮನೋರಥಾಃ=ಕೋರಿಕೆಗಳು, ಹೃದಯೇ=ಮನಸ್ಸಿನಲ್ಲಿಯೇ, ಜೀರ್ಣಾಶ್ಚ=ನಷ್ಟವಾದವು, ಅಂಗೇಷು=ಅವಯವಗಳಲ್ಲಿಯೇ, ತತ್=ಆ, ಯೌವನಂ=ಪ್ರಾಯವು, ಯಾತಂ=ಗಳಿತವಾಯಿತು, ಗುಣಜ್ಞೈರ್ವಿನಾ=ಗುಣಜ್ಞರಿಂದ ಶೂನ್ಯವಾಗಿಯೇ, ಗುಣಾಶ್ಚ=ವಿದ್ಯಾವಿನಯಾದಿ ಗುಣಗಳು, ವಂಧ್ಯಫಲತಾಂ=ನಿಷ್ಫಲತ್ವವನ್ನು, ಯಾತಾಃ=ಹೊಂದಿದವು, ಬಲೀ=ಬಲಿಷ್ಠನಾದ, ಕಾಲಃ=ಕಾಲಸ್ವರೂಪನಾ

ಷೆ, ಕೃತಾಂತಃ=ಯಮನು, ಅಕ್ಷಮಿ=ಸಹನವಿಲ್ಲದಿರುವನಾಗಿ, ಸಹಸಾ=ಜಾಗ್ರತೆ ಯಾಗಿ, ಅಭ್ಯುಪೈತಿ=ಎದುರಾಗಿ ಬರುತ್ತಿರುವನು, ಯುಕ್ತಂ=ಉಚಿತವಾದದ್ದು, ಕಿಂ=ಏನು, ಹಾ=ಕಷ್ಟವು, ಜ್ಞಾತಂ=ತಿಳಿಯಲ್ಪಟ್ಟಿತು, ಮದನಾಂತಕಾಂಘ್ರಿಯುಗಳಂ=ಮನ್ಮಥ ಶತ್ರುವಾದ ಶಂಕರನ ಪಾದಯುಗ್ಮವನ್ನು, ಮುಕ್ತ್ವಾ=ಬಿಟ್ಟು, ಅನ್ಯಾ=ಮತ್ತೊಂದಾದ, ಗತಿಃ=ಶರಣವು, ನಾಸ್ತಿ=ಇಲ್ಲವು. ||೮೩||

ತಾ|| ನಾನಾಭೋಗಗಳನ್ನು ಅಪೇಕ್ಷಿಸುವ ಕೋರಿಕೆಗಳು ಲಭಿಸದಿರುವದರಿಂದ ಮನಸ್ಸಿನಲ್ಲಿಯೇ ಅಣಗಿಹೋದವು. ಕಾಮಿಸೀ ಭೋಗೋಪಯುಕ್ತವಾದ ಪ್ರಾಯವು ಅವಯವಗಳಲ್ಲಿಯೇ ಶಿಥಿಲವಾಯಿತು. ವಿದ್ಯಾವಿನಯಾದಿಗುಣಗಳು ಕೇಳುವರಿಲ್ಲದ್ದರಿಂದಲೇ ನಿಷ್ಫಲಗಳಾದವು. ಮಹಾಬಲಿಷ್ಠನಾದ ಯಮನಾದರೋ ಸ್ವಲ್ಪವೂ ಸಹನವಿಲ್ಲದೆ ಪ್ರಾಣಗಳನ್ನು ಅಪಹರಿಸುವದಕ್ಕೆ ಎದುರುಬಿದ್ದು ಬರುತ್ತಿರುವನು. ಅಯ್ಯೋ! ಈ ಸಮಯದಲ್ಲಿ ಗತಿಯಾರು? ಹಾ! ಜ್ಞಾಪಕಕ್ಕೆ ಬಂತು, ಮಾರವೈರಿಯಾದ ಶಂಕರನ ಚರಣಯುಗ್ಮವೇ ಶರಣಲ್ಲದೆ ಮತ್ತೊಂದನ್ನೂ ಕಾಣೆನು. ಆದ ರಿಂದ ಅದನ್ನೇ ಮರೆಹೋಗಬೇಕೆಂಬು ಭಾವವು .... ||೮೩||

ಶ್ಲೋ|| ಮಹೇಶ್ವರೇವಾಜಗತಾಮಧೀಶ್ವರೇ ಜನಾರ್ದನೇವಾಜಗದಂತರಾ
ತ್ಮನೀ। ನವಸ್ತುಭೇದಪ್ರತಿಪತ್ತಿರಸ್ತಿಮೇತಥಾಪಿಭಕ್ತಿಸ್ತರುಣೇಂ
ದುಶೇಖರೇ .... .... ||೮೪||

ಟೀ|| ಜಗತಾಂ=ಲೋಕಗಳಿಗೆ, ಅಧೀಶ್ವರೇ=ಸ್ವಾಮಿಯಾದ, ಮಹೇಶ್ವರೇವಾ=ಪರಮೇಶ್ವರನಲ್ಲಿಯೂ, ಜಗತ್=ಲೋಕಗಳಿಗೆ, ಅಂತರಾತ್ಮನಿ=ಅಂತರ್ಯಾಮಿಯಾಗಿರುವ, ಜನಾರ್ದನೇವಾ=ಲಕ್ಷ್ಮೀಪತಿಯಲ್ಲಿಯಾಗಲಿ, ವಸ್ತುಭೇದಪ್ರತಿಪತ್ತಿಃ=ಪದಾರ್ಥಭೇದ ಜ್ಞಾನವು, ಮೇ=ನನಗೆ, ನಾಸ್ತಿ=ಇಲ್ಲವು, ತಥಾಪಿ=ಆದರೂ, ತರುಣೇಂದುಶೇಖರೇ=ಚಂದ್ರಶೇಖರನಲ್ಲಿ, ಭಕ್ತಿಃ=ಭಜನಾನುರಾಗವು. ||೮೪||

ತಾ|| ಸರ್ವ ಜಗನ್ನಿಯಾಮಕನಾದ ಜಗದೀಶ್ವರನಲ್ಲಿಯೂ, ಸಕಲ ಲೋಕಾಂತರ್ಯಾಮಿಯಾಗಿರುವ ಮಹಾವಿಷ್ಣುವಿನಲ್ಲಿಯೂ, ಈತನು ಬೇರೆ ಆತನು ಬೇರೆ ಎಂಬ ಭೇದಭಾವನೆಯು ನನಗೆ ಸರ್ವಥಾ ಇಲ್ಲವು. ಆದರೂ ಚಂದ್ರಶೇಖರನಲ್ಲಿಯೇ ಭಜನಾನುರಾಗವು ಬಹಳವಾಗಿರುವದು ||೮೪||

ಶ್ಲೋ|| ಸ್ಫುರತ್ಸ್ಫಾರಜ್ಯೋತ್ಸ್ನಾ ಧವಳಿತತಲೇಕ್ವಾಪಿಪುಲಿನೇಸುಖಾಸೀ
ನಾಃಶಾಂತಧ್ವನಿಷುರಜನೀಷುದ್ಯುಸರಿತಃ || ಭವಾಭೋಗೋದ್ವಿ

ಗ್ನಾಶ್ಶಿವಶಿವಶಿವೇತ್ಯುಚ್ಚವಚಸಃ ಕದಾಯಾಸ್ಯಾಮೋಽಂತರ್ಗತಬಹು
ಳಬಾಷ್ಪಾಕುಲದಶಾಂ .... .... ||೮೫||

ಟೀ|| ಶಾಂತಿರಸಸ್ಫೋರಕವಾದ ವಾಕ್ಯಗಳನ್ನು ಹೇಳುತ್ತಾನೆ — ಶಾಂತ=ಶಮನವಾದ, ಧ್ವನಿಷು=ಮೃಗಪಕ್ಷ್ಯಾದಿಧ್ವನಿಗಳುಳ್ಳ, ರಜನೀಷು=ರಾತ್ರಿಗಳಲ್ಲಿ, ಸ್ಫುರತ್=ಪ್ರಕಾಶಿಸುವ, ಸ್ಫಾರ=ಅತಿಶಯವಾದ, ಜ್ಯೋತ್ಸ್ನಾ=ಬೆಳ್ದಿಂಗಳಿಂದ, ಧವಳಿತ=ಶುಭ್ರವಾದ, ತಲೆ=ಪ್ರದೇಶವುಳ್ಳ, ಕ್ವಾಪಿ=ಯಾವಾನೊಂದು, ದ್ಯುಸರಿತಃ=ಸ್ವರ್ಗಂಗೆಯ, ಪುಳಿನೆ=ಮರಳುದಿಣ್ಣೆಯಲ್ಲಿ, ಸುಖಂ=ಸುಖವಾಗಿ, ಆಸೀನಾಃ=ಕುಳಿತುಕೊಂಡವರಾಗಿ, ಭವ=ಸಂಸಾರದ, ಆಭೋಗ=ವಿಶಾಲತೆಯ ದೆಸೆಯಿಂದ, ಉದ್ವಿಗ್ನಾಃ=ಭಯಪಟ್ಟವರಾದ ಕಾರಣವೇ, ಶಿವಶಿವಶಿವೇತ್ಯುಚ್ಚವಚಸಃ=ಶಿವಶಿವಶಿವ ಎಂದು ಉನ್ನತವಾದ ವಾಕ್ಕುಳ್ಳವರಾಗಿ, ಸದಾ=ಯಾವಾಗ, ಅಂತರ್ಗತ=ಒಳಹೊಕ್ಕಿರುವ, ಬಹುಳ=ಅಧಿಕವಾಗಿರುವ, ಬಾಷ್ಪ=ಆನಂದಬಾಷ್ಪಗಳಿಂದ, ಆಕುಲ=ವ್ಯಾಕುಲವಾದ, ದಶಾಂ=ಅವಸ್ಥೆಯನ್ನು, ಯಾಸ್ಯಾಮಃ=ಹೊಂದುವೆವು. ||೮೫||

ತಾ|| ಮೃಗಪಕ್ಷಿ ಮೊದಲಾದವುಗಳ ಧ್ವನಿಗಳಿಲ್ಲದಿರುವದರಿಂದ ಅತ್ಯಂತ ಶಾಂತವಾಗಿ ರಾತ್ರಿಗಳಲ್ಲಿ ಶ್ಲಾಘ್ಯವಾಗಿ ಹೊಳೆವ ಬೆಳ್ದಿಂಗಳಿಂದ ಶುಭ್ರವಾಗಿರುವ ದೇವಗಂಗೆಯ ಮರಳುದಿಣ್ಣೆಗಳಲ್ಲಿ ಸುಖವಾಗಿ ಕುಳಿತು, ಅಪಾರವಾದ ಸಂಸಾರಭಯದಿಂದ ಖಿನ್ನರಾಗಿ ಉಚ್ಚಸ್ವರದಿಂದ ಶಿವ, ಶಿವ, ಶಿವ, ಎಂಬದಾಗಿ ಭಗವನ್ನಾಮವನ್ನುಚ್ಚರಿಸುತ್ತಾ. ಅದರಿಂದುಂಟಾದ ಆನಂದಬಾಷ್ಪಗಳಿಂದೊಡಗೂಡಿದವರಾಗಿ ಯಾವಾಗ ಇರುವೆವೋ, ಆ ಸಮಯವೇ ಶ್ಲಾಘ್ಯವಾದದ್ದೆಂದು ಭಾವವು .... ||೮೫||

ಶ್ಲೋ|| ವಿತೀರ್ಣೇ ಸರ್ವಸ್ವೇ ತರುಣಕರುಣಾಪೂರ್ಣಹೃದಯಾಃ ಸ್ಮರಂ
ತಸ್ಸಂಸಾರೇ ವಿಗುಣಪರಿಣಾಮಾಂ ವಿಧಿಗತಿಂ | ವಯಂ ಪುಣ್ಯಾರ
ಣ್ಯೇ ಪರಿಣತ ಶರಚ್ಚಂದ್ರಕಿರಣಾಸ್ತ್ರಿಯಾಮಾಂ ನೇಷ್ಯಾಮೋ ಹರ
ಚರಣಚಿಂತ್ಯೈಕಶರಣಾಃ .... ||೮೬||

ಟೀ|| ಸರ್ವಸ್ವೇ=ಸರ್ವಧನವು. ವಿತೀರ್ಣೇ=ಕೊಡಲ್ಪಡುತ್ತಿರಲಾಗಿ. ತರುಣ=ಅತಿಶಯವಾದ. ಕರುಣಾ=ದಯೆಯಿಂದ. ಪೂರ್ಣ=ತುಂಬಿರುವ. ಹೃದಯಾಃ=ಅಂತಃಕರಣವುಳ್ಳವರಾಗಿ. ಸಂಸಾರೇ=ಸಂಸಾರದಲ್ಲಿ. ವಿಧಿಗತಿಂ=ದೈವಗತಿಯನ್ನು. ವಿಗುಣಪರಿಣಾಮಾಂ=ವಿಷಮಪರಿಪಾಕವುಳ್ಳದ್ದನ್ನಾಗಿ. ಸ್ಮರಂತಃ=ಸ್ಮರಿಸುವಂಥವರಾಗಿ. ವಯಂ=ನಾವು. ಪುಣ್ಯಾರಣ್ಯೇ=ಪುಣ್ಯವನದಲ್ಲಿ. ಹರ=ಶಂಕರನ. ಚರಣ=ಪಾದಗಳ. ಚಿಂತಾ=ಧ್ಯಾನವೇ. ಏಕ=ಮುಖ್ಯವಾದ, ಶರಣಾಃ=ಗತಿಯಾಗಿಯುಳ್ಳವರಾ

ಗಿ. ಪರಿಣತ=ಪಕ್ವವಾದ, ಶರಚ್ಚಂದ್ರಕಿರಣೈಃ=ಶರತ್ಕಾಲದ ಬೆಳುದಿಂಗಳಿಂದ, ತ್ರಿಯಾಮಾಃ=ರಾತ್ರಿಗಳನ್ನು, ನೇಷ್ಯಾಮಃ=ಕಳೆಯೋಣ. ||೮೬||

ತಾ|| ದೈವಗತಿಯಿಂದ ಲಭಿಸಿರುವ ಸರ್ವಧನವನ್ನೂ ಯಾಚಕರಿಗೆ ಕೊಟ್ಟು, ವ್ಯಥೆಪಡದೆ ಅತ್ಯಂತದಯಾಳುಗಳಾಗಿ, ಜನನಮರಣ ಪ್ರವಾಹ ರೂಪವಾದ ಸಂಸಾರದಲ್ಲಿ ವಿಚಿತ್ರವಾಗಿಯೂ, ವಿಷಮವಾಗಿಯೂ ಇರುವ ದೈವಪರಿಪಾಕವನ್ನು ಸ್ಮರಿಸುತ್ತಾ, ತಪೋವನವನ್ನು ಆಶ್ರಯಿಸಿ, ಹರಚರಣ ಸ್ಮರಣೆಯನ್ನೇ ಶರಣವನ್ನಾಗಿನಂಬಿ, ಶರತ್ಕಾಲದ ಚಂದ್ರಕಿರಣಗಳಿಂದ ರಮಣೀಯವಾಗಿರುವ ರಾತ್ರಿಗಳನ್ನು ಎಂದಿಗೆ ಕಳೆಯೋಣ? ಅಂಥ ಸಮಯವು ನಮಗೆಂದಿಗೆ ಪ್ರಾಪ್ತವಾದೀತು? ಎಂಬದಾಗಿ ಸಾಧುಗಳು ಕೋರುವರೆಂದು ಭಾವವು .... .... ||೮೬||

ಶ್ಲೋ|| ಕದಾ ವಾರಾಣಸ್ಯಾಮಮರತಟಿನೀರೋಧಸಿ ವಸನ್ವಸಾನಃ ಕೌಪೀನಂ
ಶಿರಸಿ ನಿದಧಾನೋಽಂಜಲಿಪುಟಂ || ಅಯೇ ಗೌರೀನಾಥ ತ್ರಿಪುರಹರ
ಶಂಭೋ ತ್ರಿನಯನ ಪ್ರಸೀದೇತಿ ಕ್ರೋಶನ್ನಿಮಿಷಮಿವ ನೇಷ್ಯಾಮಿ
ದಿವಸಾನ್ .... .... .... ||೮೭||

ಟೀ|| ಕದಾ=ಯಾವಕಾಲದಲ್ಲಿ, ವಾರಾಣಸ್ಯಾಂ=ಕಾಶಿಯಲ್ಲಿ, ಅಮರತಟಿನೀರೋಧಸಿ=ದೇವಗಂಗೆಯ ತೀರದಲ್ಲಿ, ವಸನ್=ವಾಸಮಾಡುವವನಾಗಿ, ಕೌಪೀನಂ=ವಸ್ತ್ರಖಂಡವನ್ನು, (ಪುಟ್ಟಗೋಚಿ) ವಸಾನಃ=ಉಟ್ಟುಕೊಂಡವನಾಗಿ, ಶಿರಸಿ=ತಲೆಯಲ್ಲಿ, ಅಂಜಲಿಪುಟಂ=ಕರಸಂಪುಟವನ್ನು, ನಿದಧಾನಃ=ಇಟ್ಟವನಾಗಿ, ಅಯೇ=ಎಲೈ, ಗೌರೀನಾಥ=ಪಾರ್ವತೀಪತಿಯೆ, ತ್ರಿಪುರಹರ=ತ್ರಿಪುರಸಂಹಾರಿಯೆ, ಶಂಭೋ=ಶಂಕರನೇ, ತ್ರಿನಯನ=ಮುಕ್ಕಣ್ಣನೇ, ಪ್ರಸೀದ=ಪ್ರಸನ್ನನಾಗು, ಇತಿ=ಈ ಮೇರೆಗೆ, ಕ್ರೋಶನ್=ಉಚ್ಚಸ್ವರದಿಂದುಚ್ಚರಿಸುವವನಾಗಿ, ದಿವಸಾನ್=ದಿನಗಳನ್ನು, ನಿಮಿಷಮಿವ=ಕ್ಷಣಕಾಲದಂತೆ, ನೇಷ್ಯಾಮಿ=ಕಳೆಯುವೆನು. ||೮೭||

ತಾ|| ನನಗೆ ಇದ್ದ ಸಮಸ್ತ ಸಂಪತ್ತನ್ನು ತ್ಯಜಿಸಿ, ಅಭಿಮಾನವನ್ನು ತೊರೆದು, ಕೇವಲ ಕೌಪೀನಧಾರಿಯಾಗಿ, ಕಾಶೀಪಟ್ಟಣವನ್ನು ಹೊಕ್ಕು, ದೇವಗಂಗೆಯ ತೀರದಲ್ಲಿ ಕುಳಿತು, ತಲೆಯಮೇಲೆ ಕೈಗಳನ್ನು ಜೋಡಿಸಿಟ್ಟು, ಎಲೈ ಶಂಕರನೇ, ಪಾರ್ವತೀವಲ್ಲಭನೇ, ತ್ರಿಪುರಾರಿಯೇ, ಮುಕ್ಕಣ್ಣನೇ, ಪ್ರಸನ್ನನಾಗೆಂದು ಪರಮೇಶ್ವರನ ನಾಮಗಳನ್ನುಚ್ಚರಿಸುತ್ತಾ, ಅನೇಕ ದಿವಸವನ್ನು ಒಂದು ನಿಮಿಷದಂತೆ ಎಂದಿಗೆ ಕಳೆವೇನು. ಕೇವಲ ಶಾಂತಿ ರಸೋತ್ಪಾದಕಗಳಾದ ವಚನಗಳೆಂದರಿಯುವುದು ||೮೭||

ಶ್ಲೋ|| ಸ್ನಾತ್ವಾಗಾಂಗ್ಯೈಃಪಯೋಭಿಃ ಶುಚಿಕುಸುಮಫಲೈರರ್ಚಯಿತ್ವಾ
ವಿಭೋತ್ವಾಂಧ್ಯೇಯೇಧ್ಯಾನಂ ನಿವೇಶ್ಯಕ್ಷಿತಿಧರಕುಹರಗ್ರಾವಪ
ರ್ಯಂಕಮೂಲೇ ಆತ್ಮಾರಾಮಃಫಲಾಶೀಗುರುವಚನರತಸ್ತ್ವತ್ಪ್ರ
ಸಾದಾತ್ಸ್ಮರಾರೇದುಃಖಂಮೋಕ್ಷ್ಯೇ ಕದಾಹಂಸಮಕರಚರಣೇಪುಂ
ಸಿಸೇವಾಸಮುತ್ಥಂ .... .... ||೮೮||

ಟೀ|| ಗಾಂಗ್ಯೈಃ=ಗಂಗಾಸಂಬಂಧವಾದ, ಪಯೋಭಿಃ=ಜಲಗಳಿಂದ. ಸ್ನಾತ್ವಾ=ಸ್ನಾನ ಮಾಡಿ, ವಿಭೋ=ಎಲೈ ಶಂಕರನೆ, ಶುಚಿ=ಶುದ್ಧವಾದ. ಕುಸುಮ=ಪುಷ್ಪಗಳು. ಫಲೈಃ=ಹಣ್ಣುಗಳು ಇವುಗಳಿಂದ. ತ್ವಾಂ=ನಿನ್ನನ್ನು. ಅರ್ಚಯಿತ್ವಾ=ಪೂಜಿಸಿ. ಧ್ಯೇಯೇ=ಧ್ಯಾನಯೋಗ್ಯವಾದ ನಿನ್ನ ಚರಣದಲ್ಲಿ. ಧ್ಯಾನಂ=ಚಿತ್ತೈಕಾಗ್ರ್ಯವನ್ನು. ನಿವೇಶ್ಯ=ಇಟ್ಟು. ಕ್ಷಿತಿಧರಕುಹರ=ಪರ್ವತಗುಹೆಯಲ್ಲಿರುವ. ಗ್ರಾವ=ಶಿಲೆಯ ಮೂಲೆ=ಪ್ರದೇಶದಲ್ಲಿ. ಆತ್ಮಾರಾಮಃ=ಆತ್ಮಧ್ಯಾನಪರಾಯಣನಾಗಿ. ಫಲಾಶೀ=ಫಲಾಹಾರಿಯಾಗಿ. ಗುರುವಚನರತಃ=ಆಚಾರ್ಯವಚನತತ್ಪರನಾಗಿ. ಸ್ಮರಾರೇ=ಎಲೈ ಮದನಾಂತಕನಾದ ಶಂಭುವೆ. ತ್ವತ್ಪ್ರಸಾದಾತ್=ನಿನ್ನ ನುಗ್ರಹದ್ದೆಸೆಯಿಂದ. ಸಮಕರ=ಮಕರರೇಖೆಯಿಂದೊಡಗೂಡಿದ. ಚರಣೇ=ಪಾದವುಳ್ಳ. ಪುಂಸಿ=ಪುರುಷನಲ್ಲಿ ಸೇವಾ=ಸೇವೆಯಿಂದ. ಸಮುತ್ಥಂ=ಉಂಟಾದ. ದುಃಖಂ=ವ್ಯಥೆಯನ್ನು ಕದಾ=ಎಂದಿಗೆ. ಮೋಕ್ಷ್ಯೇ=ಬಿಟ್ಟೇನು. ... ||೮೮||

ತಾ|| ದಿವ್ಯವಾದ ದೇವಗಂಗೋದಕದಲ್ಲಿ ಸ್ನಾನಮಾಡಿ, ಯಥಾಶಾಸ್ತ್ರವಾಗಿ ಶುದ್ಧವಾದ ಕುಸುಮ ಫಲಾದಿಗಳಿಂದರ್ಚಿಸಿ, ಧ್ಯಾನಯೋಗ್ಯವಾದ ನಿನ್ನ ಪದಾರವಿಂದ ಧ್ಯಾನವನ್ನು ಚಿತ್ತೈಕಾಗ್ರ್ಯದಿಂದಾಚರಿಸುತ್ತಾ, ಹಿಮಾಲಯ ಗುಹಾಪ್ರಾಂತ ಶಿಲೆಗಳಲ್ಲಿ ಕುಳಿತು ಫಲಾಹಾರಿಯಾಗಿಯೂ, ಗುರುವಚನಾಚರಣತತ್ಪರನಾಗಿಯೂ ಇರುತ್ತಾ, ಎಲೈ ಮದನಾಂತಕನೇ! ಎಂದಿಗೆ ಈ ಲೌಕಿಕ ರಾಜಸೇವೆಯಿಂದುಂಟಾದ ಪ್ರಬಲವಾದ ದುಃಖವನ್ನು ಬಿಟ್ಟು ಸುಖವಾಗಿರುವೆನೋ ಅಂತು ಅನುಗ್ರಹಿಸು .... ||೮೮||

ಶ್ಲೋ|| ಏಕಾಕೀನಿಸ್ಪೃಹಶ್ಶಾಂತಃಪಾಣಿಪಾತ್ರೋದಿಗಂಬರಃ | ಕದಾಹಂ
ಶಂಭೋಭವಿಷ್ಯಾಮಿಕರ್ಮನಿರ್ಮೂಲನಕ್ಷಮಃ .... ||೮೯||

ಟೀ|| ಏಕಾಕೀ=ಅಸಹಾಯನಾಗಿಯೂ (ನಿಸ್ಸಂಗನಾಗಿಯೂ) ನಿಸ್ಪೃಹಃ=ಆಶಾಶೂನ್ಯನಾಗಿ. ಪಾಣಿ=ಹಸ್ತವೆ. ಪಾತ್ರಃ=ಭಿಕ್ಷಾಪಾತ್ರೆಯಾಗುಳ್ಳವನಾಗಿ. ದಿಕ್=ದಿಕ್ಕುಗಳೇ. ಅಂಬರಃ=ವಸ್ತ್ರವಾಗುಳ್ಳವನಾಗಿ. ಶಂಭೋ=ಎಲೈ ಶಂಕರನೆ, ಕರ್ಮ=ಆಗಾಮಿಸಂಚಿತಾದಿ ಕರ್ಮಗಳ. ನಿರ್ಮೂಲನ=ನಾಶದಲ್ಲಿ. ಕ್ಷಮಃ=ಸಮರ್ಥನು, ಕದಾ=ಯಾವಾಗ, ಭವಿಷ್ಯಾಮಿ=ಆಗುವೆನು. ... ||೮೯||

ತಾ॥ ದುಸ್ಸಂಗಶೂನ್ಯನಾಗಿ, ವಿಷಯಾಭಿಲಾಷ ರಹಿತನಾಗಿ, ಹಸ್ತವನ್ನೇ ಭಿಕ್ಷಾಪಾತ್ರೆಯನ್ನಾಗಿ ಮಾಡಿಕೊಂಡು ದಿಗಂಬರನಾಗಿ, ಎಲೈಪರಮೇಶ್ವರನೇ! ನಿನ್ನ ಅನುಗ್ರಹದಿಂದ ಎಂದಿಗೆ ಆಗಾಮಿ ಸಂಚಿತಾದಿಕರ್ಮಬಂಧದಿಂದ ಮುಕ್ತನಾಗುವೆನೋ ಅದರಂತೆ ಅನುಗ್ರಹಿಸು. ॥೮೯॥

ಶ್ಲೋ॥ ಪಾಣಿಂಪಾತ್ರಯತಾಂನಿಸರ್ಗಶುಚಿನಾಭೈಕ್ಷೇಣಸಂತುಷ್ಯತಾಂ
ಯತ್ರಕ್ವಾಪಿನಿಷೀದತಾಂಬಹುತೃಣಂವಿಶ್ವಂಮುಹುಃಪಶ್ಯತಾಂ।
ಅತ್ಯಾಗೇಪಿತನೋರಖಂಡಪರಮಾನಂದಾವಬೋಧಸ್ಪೃಶಾಮಧ್ವಾ
ಕೋಪಿಶಿವಪ್ರಸಾದಸುಲಭಸ್ಸಂಪತ್ಸ್ಯತೇಯೋಗಿನಾಂ ॥೯೦॥

ಟೀ॥ ಈಪ್ರಕಾರವಾಗಿರುವವರಿಗೆ ಶಂಕರಾನುಗ್ರಹವು ಶೀಘ್ರವಾಗಿಯೇ ಲಭಿಸುವದೆಂದು ವಿರಮಿಸುತ್ತಾನೆ—ಪಾಣಿಂ=ಕರತಲವನ್ನು ಪಾತ್ರಯತಾಂ=ಭೋಜನಪಾತ್ರೆಯನ್ನಾಗಿ ಮಾಡಿಕೊಳ್ಳುವ, ನಿಸರ್ಗ=ಸ್ವಭಾವದಿಂದ, ಶುಚಿನಾ=ಶುದ್ಧವಾದ, ಭೈಕ್ಷೇಣ=ಭಿಕ್ಷಾನ್ನದಿಂದ, ಸಂತುಷ್ಯತಾಂ=ತೃಪ್ತಿಪಡುವ, ಯತ್ರಕ್ವಾಪಿ=ಯಾವದಾದರೊಂದು ಪ್ರದೇಶದಲ್ಲಿ, ನಿಷೀದತಾಂ=ವಾಸಮಾಡುವ, ಮುಹುಃ=ಪದೆಪದೆ, ವಿಶ್ವಂ=ಪ್ರಪಂಚವನ್ನು, ಬಹುತೃಣಂ=ತೃಣಕಲ್ಪವನ್ನಾಗಿ, ಪಶ್ಯತಾಂ=ಎಣಿಸುವ, ತನೋಃ=ಶರೀರದ, ಅತ್ಯಾಗೇಪಿ=ಸಂಬಂಧಶೂನ್ಯತೆಯಲ್ಲಿಯೂ, (ದೇಹತ್ಯಾಗದಲ್ಲಿಯೂ) ಅಖಂಡ=ಅಪಾರವಾದ, ಪರಮಾನಂದ=ಬ್ರಹ್ಮಾನಂದದ, ಅವಬೋಧ=ಅನುಭವವನ್ನು, ಸ್ಪೃಶಾಂ=ಸ್ಪೃಶಿಸುವಂಥ, ಯೋಗಿನಾಂ=ಧ್ಯಾನನಿಷ್ಠರಾದ ಯೋಗಿಗಳಿಗೆ, ಶಿವಪ್ರಸಾದಸುಲಭಃ=ಈಶ್ವರಾನುಗ್ರಹದಿಂದ ಸುಲಭಸಾಧ್ಯವಾದ, ಕೋಪಿ=ಹೇಳಲಶಕ್ಯವಾದ, ಅಧ್ವಾ=ಮಾರ್ಗವು, ಸಂಪತ್ಸ್ಯತೇ=ಸಪನ್ನವಾಗುವದು. ... ... ... ॥೯೦॥

ತಾ॥ ಹಸ್ತವನ್ನು ಭಿಕ್ಷಾಭೋಜನಪಾತ್ರೆಯನ್ನಾಗಿ ಮಾಡಿಕೊಂಡು, ಸ್ವಭಾವ ಶುದ್ಧವಾದ ಭಿಕ್ಷಾನ್ನದಿಂದ ತೃಪ್ತಿಪಡುತ್ತಾ, ಸ್ಮಶಾನದಲ್ಲಿಯಾಗಲಿ, ವನದಲ್ಲಾಗಲಿ, ಸಂಚರಿಸುತ್ತಾ, ಸಮಸ್ತವಿರಿಂಚಿ ಪ್ರಪಂಚವನ್ನು ತೃಣಕಣದಂತೆ ಭಾವಿಸುತ್ತಾ, ಪಾಂಚಭೌತಿಕ ಶರೀರ ಸಂಬಂಧವು ತಪ್ಪದಿದ್ದರೂ ಅಖಂಡ ಸಚ್ಚಿದಾನಂದಾತ್ಮಾನುಭವ ಸುಖವನ್ನನುಭವಿಸುತ್ತಿರುವ ಯೋಗಿಗಳಿಗೆ ಪರಮೇಶ್ವರಾನುಗ್ರಹದಿಂದ ಮೋಕ್ಷಮಾರ್ಗವು ಸುಲಭವಾಗಿ ಸಾಧ್ಯವಾಗುವುದು. ಆದ್ದರಿಂದ ಮೇಲೆ ಹೇಳಲ್ಪಟ್ಟ ಅಮೋಘವಾದ ಮಾರ್ಗವನ್ನು ಸಂಪಾದಿಸುವದಕ್ಕವಶ್ಯಕವಾಗಿ ತಕ್ಕ ಪ್ರಯತ್ನವನ್ನು ಮಾಡಬೇಕೆಂದು ಭಾವವು. .... .... ॥೯೦॥

## ಅವಧೂತ ಚರ್ಯಾರಂಭವು.

ಶ್ಲೋ॥ ಕೌಪೀನಂಶತಖಂಡಜರ್ಜರತರಂಕಂಥಾಪುನಸ್ತಾದೃಶೀ ನೈಶ್ಚಿಂತ್ಯಂನಿರಪೇಕ್ಷಭೈಕ್ಷಮಶನಂನಿದ್ರಾಶ್ಮಶಾನೇವನೇ॥ಸ್ವಾತಂತ್ರ್ಯೇಣನಿರಂಕುಶಂವಿಹರಣಂಸ್ವಾಂತಂಪ್ರಶಾಂತಂಸದಾಸ್ಥೈರ್ಯಂಯೋಗಮಹೋತ್ಸವೇಪಿಚಯದಿತ್ರೈಲೋಕ್ಯರಾಜ್ಯೇನಕಿಂ ॥೯೧॥

ಟೀ॥ ಮೋಕ್ಷೋಪಯೋಗಿಯಾದ ಬ್ರಹ್ಮಾತ್ಮೈಕ್ಯಾನುಸಂಧಾನವನ್ನು ಮಾಡುವ ಅವಧೂತರ ಚರಿತ್ರೆಯನ್ನು ವರ್ಣಿಸುತ್ತಾನೆ—ಶತಖಂಡ=ನೂರಾರು ಚೂರುಗಳಿಂದ, ಜರ್ಜರತರಂ=ಜೀರ್ಣವಾದ, ಕೌಪೀನಂ=ವಸ್ತ್ರಖಂಡವು, ತಾದೃಶೀ=ಅದೇ ರೀತಿಯಾದ, ಕಂಥಾಪುನಃ=ಬೊಂತೆಯು, ನೈಶ್ಚಿಂತ್ಯಂ=ವಿಷಯಚಿಂತಾರಾಹಿತ್ಯವು, ನಿರಪೇಕ್ಷ=ಪರಾಪೇಕ್ಷಾಶೂನ್ಯವಾದ, ಭೈಕ್ಷಂ=ಬಿಕ್ಷದಿಂದ ಲಭಿಸಿದ, ಅಶನಂ=ಭೋಜನವು, ಸ್ಮಶಾನೆ=ಪ್ರೇತಭೂಮಿಯಲ್ಲಿ, ವನೇ=ಕಾಡಿನಲ್ಲಿಯಾದರೂ, ನಿದ್ರಾ=ನಿದ್ರೆಯು, ಸ್ವಾತಂತ್ರ್ಯೇಣ=ಇಚ್ಛಾನುಸಾರದಿಂದ, ನಿರಂಕುಶಂ=ಪ್ರತಿಬಂಧವಿಲ್ಲದ, ವಿಹರಣಂ=ಸಂಚಾರವು, ಸದಾ=ಯಾವಾಗಲೂ, ಪ್ರಶಾಂತಂ=ನಿರ್ಮಲವಾದ, ಸ್ವಾಂತಂ=ಮನಸ್ಸು, ಯೋಗ=ಸಮಾಧಿಯೆಂಬ, ಮಹೋತ್ಸವ=ಅಧಿಕೋತ್ಸವದಲ್ಲಿ ಸ್ಥೈರ್ಯಮಪಿಚ=ಸ್ಥಿರತ್ವವೂ, ಇವುಗಳೂ, ಸಂತಿಯದಿ=ಇದ್ದದ್ದೇ ಆದರೆ, ತ್ರೈಲೋಕ್ಯರಾಜ್ಯೇನ=ತ್ರಿಲೋಕಾಧಿಪತ್ಯದಿಂದಲೂ, ಕಿಂ=ಏನು ಪ್ರಯೋಜನವು. ॥೯೧॥

ತಾ॥ ನೂರಾರು ಚೂರುಗಳಿಂದ ಹೊಲೆಯಲ್ಪಟ್ಟು ಶತಚ್ಛಿದ್ರವಾಗಿರುವ ಒಂದು ಕೌಪೀನವು, ಇದಕ್ಕಿಂತಲೂ ಹೆಚ್ಚಾಗಿರುವಂತೆ ಹೊದಿಯಲಿಕ್ಕೆ ತಕ್ಕ ಒಂದು ಬೊಂತೆಯು, ವಿಷಯಸುಖಗಳಲ್ಲಿ ಅನಾಸಕ್ತಿಯು, ಪರಾಪೇಕ್ಷೆ ಇಲ್ಲದಿರುವ ಭಿಕ್ಷಾನ್ನ ಭೋಜನವು, ಸ್ಮಶಾನದಲ್ಲಿಯಾಗಲಿ ಅಥವಾ ಕಾಡಿನಲ್ಲಿಯಾಗಲಿ, ನಿದ್ರೆಮಾಡುವಿಕೆಯು, ಮನಸ್ಸು ಬಂದಂತೆ ಯಾರ ನಿರ್ಬಂಧವೂ ಇಲ್ಲದೆ ಸಂಚಾರ ಮಾಡುವಿಕೆಯು, ನಿರ್ಮಲವಾಗಿ ಶಾಂತವಾಗಿರುವ ಮನಸ್ಸು, ಸಮಾಧಿಯಲ್ಲಿ ಚಿತ್ತಸ್ಥೈರ್ಯವು ಇವುಗಳು ಇದ್ದವುಗಳೇ ಆದರೆ, ಅಂಥವನಿಗೆ ತ್ರಿಲೋಕಾಧಿಪತ್ಯವೇ ಮೊದಲಾದ ಸಾಮ್ರಾಜ್ಯಗಳು ನಿಷ್ಫಲಗಳೆಂದು ಭಾವವು. .... ॥೯೧॥

ಶ್ಲೋ॥ ಬ್ರಹ್ಮಾಂಡಂಮಂಡಲೀಮಾತ್ರಂ ಕಿಂಲೋಭಾಯಮನಸ್ವಿನಃ।
ಶಫರೀಸ್ಫುರಿತೇನಾಬ್ಧಿಃಕ್ಷುಬ್ಧೋನಖಲುಜಾಯತೇ ॥೯೨॥

ಟೀ॥ ಅವಧೂತನಿಗೆ ಇದಕ್ಕಿಂತ ಅಧಿಕವಾದ ಸಂಪತ್ತುಗಳು ತುಚ್ಛವಾಗುವವೆಂದು ದೃಷ್ಟಾಂತದಿಂದಿದಿಗೆ ಹೇಳುತ್ತಾನೆ—ಬ್ರಹ್ಮಾಂಡಂ=ಬ್ರಹ್ಮನಿರ್ಮಿತ ಸಮಸ್ತ ಜಗತ್ತು, ಮಂಡಲೀಮಾತ್ರಂ=ಬಿಂಬಮಾತ್ರವು, ಮನಸ್ವಿನಃ=ಧೀರನಾದ ಯೋಗಿಯು, ಲೋಭಾಯ=ವಂಚನೆಗೋಸ್ಕರ, ಕಿಂ=ಆಗುವದೇ, ಶಫರೀ=ಪ್ರೋಷ್ಠಿಯು, ಸ್ಫುರಿತೇನ=ಚಲನೆಯಿಂದ, ಅಬ್ಧಿಃ=ಮಹಾಸಮುದ್ರವು, ಕ್ಷುಬ್ಧಃ=ಅಲ್ಲೋಲಕಲ್ಲೋಲವಾದದ್ದು, (ಕಡೆಯಲ್ಪಟ್ಟದ್ದು) ನಜಾಯತೇಖಲು=ಆಗುವದಿಲ್ಲವಲ್ಲ. .... .... .... ||೯೨||

ತಾ॥ ಒಂದು ಸಣ್ಣ ಮೀನು ಹೊರಳಾಡಿದ ಮಾತ್ರದಿಂದ ಮಹಾಸಮುದ್ರವು ಹೇಗೆ ಅಲ್ಲೋಲಕಲ್ಲೋಲದಿಂದೊಡಗೂಡಿ ಮೇರೆದಪ್ಪುವದಿಲ್ಲವೋ, ಅದರಂತೆಯೇ ಚತುರ್ಮುಖ ನಿರ್ಮಿತವಾಗಿ ಚತುರ್ದಶಭುವನದ ಸಂಪತ್ತು ಯೋಗಿಯನ್ನು ಆಶೆಪಡಿಸಿ ವಂಚಿಸಲಾರದು. ||೯೨||

ಶ್ಲೋ॥ ಮಾತರ್ಲಕ್ಷ್ಮಿ ಭಜಸ್ವಕಂಚಿದಪರಂಮತ್ಕಾಂಕ್ಷಿಣೀ ಮಾಸ್ಮಭೂ
ರ್ಭೋಗೇಷುಸ್ಪೃಹಯಾಲವಸ್ತವವಶೇಕಾನಿಸ್ಪೃಹಾಣಾಮಸಿ
ಸದ್ಯಸ್ಸ್ಯೂತಪಲಾಶಪತ್ರಪುಟಿಕಾಪಾತ್ರೇಪವಿತ್ರೀಕೃತೈರ್ಭಿಕ್ಷಾವ
ಸ್ತುಭಿರೇವಸಂಪ್ರತಿವಯಂವೃತ್ತಿಂಸಮೀಹಾಮಹೇ ||೯೩||

ಟೀ॥ ವೈರಾಗ್ಯದ ರೀತಿಯನ್ನು ಹೇಳುತ್ತಾನೆ —ಮಾತಃ=ತಾಯಿಯಾದ ಲಕ್ಷ್ಮಿ=ಸಂಪಲ್ಲಕ್ಷ್ಮಿಯೇ, ಅಪರಂ=ಮತ್ತೊಬ್ಬನಾದ, ಕಂಚಿತ್=ಪುರುಷನನ್ನು, ಭಜಸ್ವ=ಹೊಂದು, ಮತ್ಕಾಂಕ್ಷಿಣೀ=ನನ್ನನ್ನು ಅಪೇಕ್ಷಿಸುವಳು, ಮಾಸ್ಮಭೂಃ=ಆಗಬೇಡ, ಭೋಗೇಷು=ವಿಷಯಾನುಭವಗಳಲ್ಲಿ, ಸ್ಪೃಹಯಾಲವಃ=ಆಸಕ್ತರಾದ [illegible] ತವ=ನಿನ್ನ, ವಶೇ=ಅಧೀನದಲ್ಲಿ,ವರ್ತಂತೇ=ಇರುವರು, ನಿಸ್ಪೃಹಾಣಾಂ=ವಿಷಯಾಭಿಲಾಷರಹಿತರಿಗೆ, ಕಾಸಿ=ಯಾರಾಗಿರುವೆ, ವಯಂ=ನಾವು, ಸಂಪ್ರತಿ=ಈಗ, ಸದ್ಯಃ=ಕ್ಷಣಕಾಲದಲ್ಲಿಯೇ, ಸ್ಯೂತ=ರಚಿಸಲ್ಪಟ್ಟ, ಪಲಾಶಪತ್ರ=ಮುತ್ತುಗದೆಲೆಯ, ಪುಟಿಕಾ=ದೊನ್ನೆಯೆಂಬ, ಪಾತ್ರೇ=ಪಾತ್ರೆಯಲ್ಲಿ, ಪವಿತ್ರೀಕೃತೈಃ=ಶುದ್ಧವಾಗಿರುವ. ಭಿಕ್ಷಾ=ಭಿಕ್ಷದಿಂದ ಬಂದ, ವಸ್ತುಭಿಃ=ಅನ್ನಾದಿಗಳಿಂದ. ವೃತ್ತಿಂ=ಜೀವನವನ್ನು, ಸಮೀಹಾಮಹೇ=ಕೋರುವೆವು. .... ... . ||೯೩||

ತಾ॥ ಎಲೆ ತಾಯಿಯಾದ ಲಕ್ಷ್ಮಿಯೇ, ಪ್ರಾಯಃ ಇದುವರೆಗೂ ನನ್ನನ್ನು ರಕ್ಷಿಸಿದೆ, ಇನ್ನು ಸಾಕು, ಮತ್ತೆಲ್ಲಿಯಾದರೂ ಮತ್ತೊಬ್ಬ ಭಾಗ್ಯಪುರುಷನನ್ನು ಆಶ್ರಯಿಸು, ನಿನ್ನನ್ನು ಅಪೇಕ್ಷಿಸುವವರು ಅನೇಕರಿದ್ದಾರೆ, ನಿಸ್ಪೃಹರಾದ ನಮ್ಮನ್ನು ಸರ್ವಥಾ ಅಪೇಕ್ಷಿಸಬೇಡ, ನಿಮಗೆ ಭಿ

ಏಕೆಯೆಂತೆಂದು ಕೇಳುವಿಯೋ ? ಕ್ಷಣಮಾತ್ರದಲ್ಲಿ ಮುತ್ತುಗದೆಲೆಗಳಿಂದ ಒಂದು ಪಾತ್ರೆಯನ್ನು ನಿರ್ಮಿಸಿ, ಮನೆಮನೆ ಬಾಗಿಲುಗಳನ್ನು ಹೊಕ್ಕು, ಭಿಕ್ಷಾಚರಣೆಯಿಂದ ಆ ಪಾತ್ರೆಯಲ್ಲಿ ಲಭಿಸಿದ ಅನ್ನಾದಿಗಳಿಂದ ಜೀವಿಸಲು ಅಪೇಕ್ಷಿಸುವೆವು. ಆದುದರಿಂದ ನಮ್ಮನ್ನು ಬಿಡುವಳಾಗು. ||೯೩||

ಶ್ಲೋ|| ಮಹಾಶಯ್ಯಾ ಪೃಥ್ವೀ ವಿಪುಲಮುಪಧಾನಂ ಭುಜಲತಾ ವಿತಾನಂ ಚಾ
ಕಾಶಂ ವ್ಯಜನಮನುಕೂಲೋಽಯಮನಿಲಃ । ಶರಚ್ಚಂದ್ರೋ ದೀ
ಪೋ ವಿರತಿವನಿತಾಸಂಗಮುದಿತಸ್ಸುಖೀ ಶಾಂತಶ್ಶೇತೇ ಮುನಿರತನು
ಭೂತಿರ್ನೃಪ ಇವ. .... .... ||೯೪||

ಟೀ|| ಯೋಗಿಗೆ ಸಾರ್ವಭೌಮನೊಡನೆ ಸಾಮ್ಯವನ್ನು ಹೇಳುತ್ತಾನೆ—ಪೃಥ್ವೀ=ಭೂಮಿಯು, ಮಹಾಶಯ್ಯಾ=ದೊಡ್ಡ ಹಾಸಿಗೆಯು, ಭುಜಲತಾ=ಬಾಹುವಲ್ಲಿಯು, ವಿಪುಲಂ=ವಿಶಾಲವಾದ, ಉಪಧಾನಂ=ತಲೆದಿಂಬು, ಆಕಾಶಂ=ಅಂತರಿಕ್ಷವು, ವಿತಾನಂ=ಮೇಲುಕಟ್ಟು, ಅನುಕೂಲಃ=ಈಗ ಚಲಿಸುವ, ಅಯಂ=ಈ, ಅನಿಲಃ=ವಾಯುವು, ವ್ಯಜನಂ=ಬೀಸಣಿಗೆಯು, ಶರಚ್ಚಂದ್ರಃ=ಶರತ್ಕಾಲದ ಚಂದ್ರನು, ದೀಪಃ=ದೀಪವು, ವಿರತಿ=ವೈರಾಗ್ಯವೆಂಬ, ವನಿತಾ=ಕಾಮಿನಿಯು, ಸಂಗ=ಸಂಬಂಧದಿಂದ, ಮುದಿತಃ=ಸಂತುಷ್ಟನಾಗಿ, ಸುಖೀ=ಆನಂದವುಳ್ಳವನಾಗಿ, ಶಾಂತಃ=ಶಮವುಳ್ಳವನಾಗಿಯೂ ಇರುವ, ಮುನಿಃ=ಮನನಶೀಲನಾದ ಯೋಗೀಶ್ವರನು, ಅತನು ಭೂತಿಃ=ಅಖಂಡಿತೈಶ್ವರ್ಯ ಸಂಪನ್ನನಾದ, ನೃಪ ಇವ=ಸಾರ್ವಭೌಮನಂತೆ, ಶೇತೇ=ಮಲಗಿರುವನು. ... ... ||೯೪||

ತಾ|| ವಿಶಾಲವಾಗಿರುವ ಭೂಮಿಯನ್ನು ದಿವ್ಯವಾದ ಹಾಸಿಗೆಯನ್ನು ಮಾಡಿಕೊಂಡು, ಭುಜವನ್ನು ತಲೆದಿಂಬಾಗಿ ವಿರಚಿಸಿ, ಆಕಾಶವನ್ನು ಮೇಲ್ಕಟ್ಟನ್ನಾಗಿ ಕಲ್ಪಿಸಿ, ಅನುಕೂಲನಾಗಿ ಬೀಸುತ್ತಿರುವ ಗಾಳಿಯನ್ನು ಬೀಸಣಿಗೆಯನ್ನಾಗಿ ಭಾವಿಸಿ, ಶರತ್ಕಾಲದಲ್ಲಿ ಹೊಳೆವ ಚಂದ್ರನನ್ನು ದೀಪವನ್ನಾಗಿಯೂ ಮಾಡಿಕೊಂಡು, ವೈರಾಗ್ಯವೆಂಬ ಕಾಮಿನಿಯ ಸಂಭೋಗದಿಂದ ಸಂತುಷ್ಟನಾದ್ದರಿಂದಲೇ ಕೇವಲ ಶಾಂತನಾಗಿ ಆನಂದಿಸುತ್ತಾ ಮಲಗಿರುವ ಯೋಗಿಯು ಸಾರ್ವಭೌಮನಿಗಿಂತಲೂ ವಿಶೇಷವಾಗಿ ಸುಖಪಡುವನು. ಏಕೆಂದರೆ, ಸಾರ್ವಭೌಮನ ಸಂಪತ್ತಿಗೆ ಕ್ಲುಪ್ತವುಂಟು, ಯೋಗಿಯ ಸಂಪತ್ತು ಅಪಾರವಾಗಿರುವದು.

ಶ್ಲೋ|| ಭಿಕ್ಷಾಶೀ ಜನಮಧ್ಯಸಂಗರಹಿತಸ್ಸ್ವಾಯತ್ತಚೇಷ್ಟಸ್ಸದಾ ಹಾನಾ
ದಾನವಿರಕ್ತಮಾರ್ಗನಿರತಃ ಕಶ್ಚಿತ್ತಪಸ್ವೀ ಸ್ಥಿತಃ|| ರಥ್ಯಾಕೀರ್ಣವಿ

ಶೀರ್ಣಜೀರ್ಣವಸನಸ್ಸಂಪ್ರಾಪ್ತಕಂಥಾಸನೋನಿರ್ಮಾನೋನಿರಹಂ
ಕೃತಿಶ್ಶಮಸುಖಾಭೋಗೈಕಬದ್ಧಸ್ಪೃಹಃ ॥೯೫॥

ಟೀ॥ ಯೋಗಿಯ ಸ್ವರೂಪವನ್ನು ನಿರೂಪಿಸುತ್ತಾನೆ— ಭಿಕ್ಷಾಶೀ=ಭಿಕ್ಷಾನ್ನ ಭೋಜನವನ್ನು ಮಾಡುವ, ಜನಮಧ್ಯ=ಜನಗಳ ಗುಂಪಿನಲ್ಲಿ, ಸಂಗರಹಿತಃ=ಆಸಕ್ತಿರಹಿತನಾದ. ಸದಾ=ಯಾವಾಗಲೂ, ಸ್ವಾಯತ್ತಚೇಷ್ಟಃ=ಸ್ವಾಧೀನವಾದ ವ್ಯಾಪಾರವುಳ್ಳ, ಹಾನಾದಾನ=ಬಿಡುವಿಕೆ, ತೆಗೆದುಕೊಳ್ಳುವಿಕೆಗಳ ಬಳೆಯಿಂದ, ವಿರಕ್ತ=ಸಂಪರ್ಕವಿಲ್ಲದ, ಮಾರ್ಗ=ದಾರಿಯಲ್ಲಿ, ತತ್ಪರಃ=ಆಸಕ್ತನಾದ. ರಥ್ಯಾ=ಚತುಷ್ಪಥದಲ್ಲಿ, ಆಕೀರ್ಣ=ಬಿಸಾಡಲ್ಪಟ್ಟ, ವಿಶೀರ್ಣ=ಹರಡಿರುವ, ಜೀರ್ಣ=ಶಿಥಿಲವಾದ, ವಸನಃ=ವಸ್ತ್ರವುಳ್ಳ, ಸಂಪ್ರಾಪ್ತ=ಲಭಿಸಿದ, ಕಂಥಾ=ಬೊಂತೆಯೆ, ಆಸನಃ=ಪೀಠವಾಗಿವುಳ್ಳ, ನಿರ್ಮಾನಃ=ಅಭಿಮಾನಶೂನ್ಯವಾದ, ನಿರಹಂಕೃತಿಃ=ಅಹಂಕಾರ ರಹಿತನಾದ, ಶಮ=ನಿರ್ವಿಕಾರಚಿತ್ತತ್ವದಿಂದುಂಟಾದ, ಸುಖಾಭೋಗ=ಸುಖಾನುಭವದಲ್ಲಿ, ಏಕ=ಮುಖ್ಯವಾಗಿ, ಬದ್ಧ=ಕಟ್ಟಲ್ಪಟ್ಟ, ಸ್ಪೃಹಃ=ಆಶೆಯುಳ್ಳ, ಕಶ್ಚಿತ್=ಒಬ್ಬಾನೊಬ್ಬ. ತಪಸ್ವೀ=ಮಹಾತಪಸ್ಸುಳ್ಳಯೋಗಿಯು, ಸ್ಥಿತಃ=ಇರುವನು. ॥೯೫॥

ತಾ॥ ಭಿಕ್ಷಾನ್ನವನ್ನು ಭೋಜನ ಮಾಡಿಕೊಂಡು, ದುಷ್ಟರೊಡನೆ ಸಹವಾಸವನ್ನು ತ್ಯಜಿಸಿ, ಸ್ವೇಚ್ಛಾನುಸಾರವಾದ ವ್ಯಾಪಾರವುಳ್ಳವನಾಗಿ ವಿಧಿನಿಷೇಧಗಳಿಲ್ಲದೆ ಅಲ್ಲಲ್ಲಿ ಮಾರ್ಗಗಳಲ್ಲಿ ಬಿದ್ದ ಹರಕು ಚಿಂದಿಬಟ್ಟೆಗಳನ್ನು ಹೊದೆದು, ಆ ಕಂತೆಯನ್ನೇ ಆಸನವಾಗಿ ಮಾಡಿಕೊಂಡು, ಅಭಿಮಾನರಹಿತನಾಗಿ, ಅಹಂಕಾರವನ್ನು ತೊರೆದು, ಶಾಂತಿಸುಖದಲ್ಲಿಯೇ ತತ್ಪರನಾಗಿಯೂ ಇರುವದೇ ಮಹಾ ತಪಸ್ವಿಯಾದ ಯೋಗಿಯ ಚರಿತ್ರೆಯಾಗಿರುವದು. .... .... .... ॥೯೫॥

ಶ್ಲೋ॥ ಚಂಡಾಲಃಕಿಮಯಂದ್ವಿಜಾತಿರಥವಾಶೂದ್ರೋಥಕಿಂತಾಪಸಃಕಿಂ
ವಾತತ್ತ್ವನಿವೇಶಪೇಶಲಮತಿರ್ಯೋಗೀಶ್ವರಃಕೋಪಿಕಿಂ॥ ಇತ್ಯು
ತ್ಪನ್ನವಿಕಲ್ಪಜಲ್ಪಮುಖರೈರಾಭಾಷ್ಯಮಾಣೋಜನೈರ್ನಕ್ರುದ್ಧಾಃ
ಪಥಿನೈವತುಷ್ಟಮನಸೋಯಾಂತಿಸ್ವಯಂಯೋಗಿನಃ ॥೯೬॥

ಟೀ॥ ಅಯಂ=ಇವನು, ಚಂಡಾಲಃಕಿಂ=ಚಂಡಾಲನೆ, ಅಥವಾ=ಹಾಗಿಲ್ಲದಿದ್ದರೆ, ಅಯಂ=ಇವನು, ದ್ವಿಜಾತಿಃಕಿಂ=ಬ್ರಾಹ್ಮಣನೊ, ಅಥ=ಅಥವಾ, ತಾಪಸಃಕಿಂ=ತಪಸ್ವಿಯೊ, ವಾ=ಅಥವಾ, ತತ್ತ್ವ=ಆತ್ಮತತ್ತ್ವದ, ನಿವೇಶ=ಪರ್ಯಾಲೋಚನೆಯಿಂದ, ಪೇಶಲ=ಸುಂದರವಾದ, ಮತಿಃ=ಬುದ್ಧಿಯುಳ್ಳ, ಕೋಪಿ=ಒಬ್ಬಾನೊಬ್ಬ, ಯೋಗೀಶ್ವರಃಕಿಂ=ತಪಸ್ವಿಯೋ, ಇತಿ=ಈ ಪ್ರಕಾರವಾಗಿ, ಉತ್ಪನ್ನ=ಹುಟ್ಟಿದ, ವಿಕಲ್ಪಜ

ಭ್ಯ=ನಾನಾವಿಧವಾಕ್ಯಗಳಿಂದ, ಮುಖೈಃ=ವಾಚಾಲಕರಾದ, ಜನೈಃ=ಜನಗಳಿಂದ, ಪಥಿ=ಮಾರ್ಗದಲ್ಲಿ, ಆಭಾಷ್ಯಮಾಣಾಃ=ಆಕ್ಷೇಪಿಸಲ್ಪಟ್ಟವರಾಗಿ, (ಮಾತನಾಡಿಸಲ್ಪಟ್ಟವರಾಗಿ) ಯೋಗಿನಃ=ಮಹಾ ತಪಸ್ವಿಗಳಾದ ಯೋಗಿಗಳು, ಕುದ್ಧಾಃ=ಕೋಪಿಷ್ಠರು, ನ=ಆಗುವದಿಲ್ಲ, ತುಷ್ಟಮಾನಸಾಃ=ಸಂತುಷ್ಟಚಿತ್ತರೂ, ನ=ಆಗುವದಿಲ್ಲ, ಸ್ವಯಂಯಾಂತಿ=ಸುಮ್ಮನೆ ಹೋಗುವರು. ... ||೯೭||

ತಾ|| ಮಹಾ ತಪಸ್ವಿಗಳಾಗಿ ಯೋಗಾರೂಢರಾಗಿರುವ ಅವಧೂತರು ಮಾರ್ಗದಲ್ಲಿ ಹೋಗುತ್ತಿರಲು, ಜನಗಳು ಇವರ ಇರುವಿಕೆಯನ್ನು ನೋಡಿ, ಇವನು ಚಂಡಾಲನೋ, ಅಥವಾ ಬ್ರಾಹ್ಮಣನೋ, ಇಲ್ಲವೆ ಶೂದ್ರನೋ, ಇಲ್ಲವಿದ್ದರೆ ತಪಸ್ವಿಯೋ. ತತ್ವವಿಚಾರ ಪರನಾದ ಮಹಾ ಯೋಗಿಯೋ ಎಂಬದಾಗಿ ನಾನಾವಿಧದಿಂದ ಮಾತನಾಡಿಕೊಳ್ಳುತಲಿದ್ದರೂ, ಇವರು ಆ ಮಾತುಗಳಿಂದ ಲೇಶವಾದರೂ ಹರ್ಷ ವಿಷಾದಗಳನ್ನು ಹೊಂದದೆ ತಮ್ಮ ಇಷ್ಟಾನುಸಾರವಾಗಿ ಹೊರಟು ಹೋಗುವರು. ಇವರು ದ್ವಂದ್ವದುಃಖ ವಿನಿರ್ಮುಕ್ತರೆಂದು ಭಾವವು. ..... ..... ||೯೭||

ಶ್ಲೋ|| ಹಿಂಸಾಶೂನ್ಯಮಯತ್ನಲಭ್ಯಮಶನಂಧಾತ್ರಾಮರುತ್ಕಲ್ಪಿತಂವ್ಯಾ
ಳಾನಾಂಪಶವಸ್ತೃಣಾಙ್ಕುರಭುಜಸ್ತುಷ್ಟಾಸ್ಸ್ಥಲೀಶಾಯಿನಃ||ಸಂ
ಸಾರಾರ್ಣವಲಂಘನಕ್ಷಮಧಿಯಾಂವೃತ್ತಿಃಕೃತಾಸಾನೃಣಾಂತಾಮ
ನ್ವೇಷಯತಾಂಪ್ರಯಾಂತಿಸತತಂಸರ್ವೇಸಮಾಪ್ತಿಂಗುಣಾಃ ||

ಟೀ|| ಹಿಂಸಾದಿರಹಿತವಾದ ಜೀವನವನ್ನು ಹೇಳುತ್ತಾನೆ—ಹಿಂಸಾಶೂನ್ಯಂ=ಹಿಂಸಾರಹಿತವಾಗಿ, ಅಯತ್ನಲಭ್ಯಂ=ಅಪ್ರಯತ್ನಸಾಧ್ಯವಾದ, ಅಶನಂ=ಆಹಾರವು, ಧಾತ್ರಾ=ಬ್ರಹ್ಮನಿಂದ, ವ್ಯಾಳಾನಾಂ=ಸರ್ಪಗಳಿಗೆ, ಮರುತ್ಕಲ್ಪಿತಂ=ವಾಯುವಿನಿಂದ, ನಿರ್ಮಿಸಲ್ಪಟ್ಟಿರುವದು, ಪಶವಃ=ಪಶು ಮೊದಲಾದವುಗಳು. ತೃಣಾಙ್ಕುರಭುಜಃ=ಎಳೇಹುಲ್ಲನ್ನು ತಿನ್ನುವಂಥವುಗಳಾಗಿ, ಸ್ಥಲೀಶಾಯಿನ=ಭೂಪ್ರದೇಶದಲ್ಲಿ ಮಲಗುವವುಗಳಾಗಿ, ತುಷ್ಟಾಃ=ತೃಪ್ತಗಳಾಗಿರುವವು, ಸಂಸಾರಾರ್ಣವ=ಸಂಸಾರಸಮುದ್ರದ, ಲಂಘನ=ದಾಟುವದರಲ್ಲಿ, ಕ್ಷಮ=ಸಮರ್ಥವಾದ, ಧಿಯಾಂ=ಬುದ್ಧಿಯುಳ್ಳ, ನೃಣಾಂ=ಮನುಷ್ಯರಿಗೆ, ಸಾ=ಆ. ವೃತ್ತಿಃ=ಜೀವನವು, ಕೃತಾ=ನಿರ್ಮಿಸಲ್ಪಟ್ಟಿರುವದು, ತಾಂ=ಆ, ವೃತ್ತಿಂ=ಜೀವನವನ್ನು, ಅನ್ವೇಷಯತಾಂ=ಹುಡುಕುವವರಿಗೆ. ಸರ್ವೇ=ಸಮಸ್ತವಾದ, ಗುಣಾಃ=ಗುಣಗಳು, ಸಮಾಪ್ತಿಂ=ನಾಶವನ್ನು, ಪ್ರಯಾಂತಿ=ಹೊಂದುವವು. ... ... ||೯೮||

ತಾ|| ಬ್ರಹ್ಮನು ಯಾವ ಪ್ರಾಣಿಗಳಿಗೂ ಹಿಂಸೆಯಾಗದಂತೆ ಯಾವ

ವಿಧವಾದ ಪ್ರಯತ್ನವೂ ಇಲ್ಲದೆ ವಾಯುವಿನಿಂದ ಸರ್ಪಗಳಿಗೆ ಆಹಾರವ ನ್ನು ಕಲ್ಪಿಸಿರುವನು. ಇದರಂತೆಯೇ ಪಶುಗಳೂ ಕಾಡುನೆಲಗಳಲ್ಲಿ ಬೆಳೆದಿರುವ ಹುಲ್ಲುಗಳನ್ನು ಮೇದು, ಅಲ್ಲಲ್ಲಿ ಭೂಮಿಯಮೇಲೆಮಲಗಿ ಸಂತೋಷ ಪಡುವವು. ಹಾಗೆಯೇ ಸಂಸಾರ ಸಮುದ್ರವನ್ನು ದಾಟಬೇಕೆಂಬ ಕುಶಲಬುದ್ಧಿಯುಳ್ಳ ಯೋಗಿಗಳಿಗೂ ಭಿಕ್ಷಾರೂಪವಾದ ಆಹಾರವು ನಿರ್ಮಿತವಾಗಿರುವದು. ಆ ವೃತ್ತಿಯನ್ನಾಶ್ರಯಿಸಿದವರು ವಿಷಯಾಭಿಲಾಷೆಗಳನ್ನೆಲ್ಲಾ ತ್ಯಜಿಸಿ ಶ್ರೇಯಸ್ಸನ್ನು ಪಡೆಯುವರು. .... ||೯೩||

ಶ್ಲೋ|| ಗಂಗಾತೀರೇಹಿಮಗಿರಿಶಿಲಾಬದ್ಧಪದ್ಮಾಸನಸ್ಯಬ್ರಹ್ಮಧ್ಯಾನಾಭ್ಯಸನೆ
ವಿಧಿನಾಯೋಗನಿದ್ರಾಂಗತಸ್ಯ || ಕಿಂತೈರ್ಭಾವ್ಯಂಮಮಸುದಿವ
ಸೈರ್ಯತ್ರತೇನಿರ್ವಿಶಂಕಾಃಕಂಡೂಯಂತೇಜರಠಹರಿಣಾಸ್ಸ್ವಾಂಗ
ಮಂಗೇಮದೀಯೇ || .... ||೯೪||

ಟೀ|| ಯೋಗಿಯು ಸುಖದ ರೀತಿಯನ್ನು ಹೇಳುತ್ತಾನೆ--ಗಂಗಾ=ಗಂಗಾನದಿಯ, ತೀರೇ=ದಡದಲ್ಲಿ, ಹಿಮಗಿರಿ=ಹಿಮವತ್ಪರ್ವತದ, ಶಿಲಾ=ಪಾಷಾಣದಲ್ಲಿ, ಬದ್ಧ=ಕಟ್ಟಲ್ಪಟ್ಟ, ಪದ್ಮಾಸನಸ್ಯ=ಪದ್ಮಾಸನವುಳ್ಳ, ಬ್ರಹ್ಮಧ್ಯಾನ=ಬ್ರಹ್ಮೋಪಾಸನೆಯ, ಅಭ್ಯಸನ=ಅಭ್ಯಾಸದ, ವಿಧಿನಾ=ನಿಯಮದಿಂದ. ಯೋಗನಿದ್ರಾಂ=ಯೋಗನಿದ್ರೆಯನ್ನು, ಗತಸ್ಯ=ಹೊಂದಿದ, ಮಮ=ನನಗೆ, ತೈಃ=ಆ, ಸುದಿವಸೈಃ=ಪುಣ್ಯದಿನಗಳಿಂದ, ಭಾವ್ಯಂ=ಭಾವಿಸತಕ್ಕದ್ದು, ಯತ್ರ=ಯಾವಸ್ಥಳದಲ್ಲಿ, ತೇ=ಆ, ಜರಠ=ಮುಪ್ಪಾದ ಹರಿಣಾಃ=ಜಿಂಕೆಗಳು, ನಿರ್ವಿಶಂಕಾಃ=ಭಯರಹಿತಗಳಾಗಿ, ಸ್ವಾಂಗಂ=ತಮ್ಮ ಶರೀರವನ್ನು, ಮದೀಯೆ=ನನ್ನ ಸಂಬಂಧವಾದ, ಅಂಗೆ=ಶರೀರದಲ್ಲಿ, ಕಂಡೂಯಂತೇ=ಕೆರೆದುಕೊಳ್ಳುವವೋ. ... .... ||೯೪||

ತಾ|| ಗಂಗಾನದಿಯ ತೀರದಲ್ಲಿರುವ ಹಿಮವತ್ಪರ್ವತದ ಬಳಿಯಲ್ಲಿ ದಿವ್ಯವಾದ ಶಿಲಾತಲದೊಳು ಪದ್ಮಾಸನದಿಂದ ಕುಳಿತು, ಬ್ರಹ್ಮಧ್ಯಾನಪರಾಯಣನಾಗಿ, ಯೋಗನಿದ್ರೆಯೊಳಿರುತಿರಲು, ಆ ಪ್ರಾಂತದಲ್ಲಿರುವ ವೃದ್ಧ ಕುರಂಗಗಳು ತಮ್ಮ ಶರೀರದಲ್ಲಿ ಉಂಟಾದ ತೀಟೆಯನ್ನು ಕಳೆದುಕೊಳ್ಳಲಿಕ್ಕೆ ನನ್ನ ಶರೀರವನ್ನು ನಿರ್ಭಯವಾಗಿ ಉಜ್ಜಿಕೊಳ್ಳುತ್ತಿರಲು, ಆ ರೀತಿಯಿಂದ ಕಳೆಯುವ ದಿವಸಗಳನ್ನು ಸರ್ವದಾ ಭಾವಿಸುವೆನು. ಅವೇ ನನಗೆ ಸುದಿವಸಗಳು. .... .... ||೯೪||

ಶ್ಲೋ|| ಪಾಣಿಃಪಾತ್ರಂಪವಿತ್ರಂಭ್ರಮಣಪರಿಗತಂಭೈಕ್ಷಮಕ್ಷಯ್ಯಮ

ಮನ್ನಂವಿಸ್ತೀರ್ಣಂವಸ್ತ್ರಮಾಶಾದಶಕಮಚಪಲಂತಲ್ಪಮಸ್ವಲ್ಪ
ಮುರ್ವೀ । ಯೇಷಾಂನಿಸ್ಸಂಗತಾಂಗೀಕರಣಪರಿಣತಸ್ವಾಂತಸಂ
ತೋಷಿಣಸ್ತೇಧನ್ಯಾಸ್ಸನ್ಯಸ್ತದೈನ್ಯವ್ಯತಿಕರನಿಕರಾಃಕರ್ಮನಿರ್ಮೂಲ
ಯಂತಿ ॥ .... .... ॥೯೯॥

ಟೀ॥ ಸರ್ವಸಂಗ ಪರಿತ್ಯಾಗ ಸಂದರ್ಭವನ್ನು ಅರುಹುವನು—ಪವಿತ್ರಂ= ಪರಿಶುದ್ಧವಾದ, ಪಾಣಿಃ=ಹಸ್ತವೆ, ಪಾತ್ರಂ=ಭೋಜನ ಪಾತ್ರವು, (ಭಿಕ್ಷಾಪಾತ್ರವು) ಭ್ರಮಣ=ಸಂಚಾರದಿಂದ ಪರಿಗತಂ=ಪ್ರಾಪ್ತವಾದ, ಭೈಕ್ಷ್ಯಂ=ಭಿಕ್ಷವು, ಅಕ್ಷಯ್ಯಂ=ನಾಶರಹಿತವಾದ, ಅನ್ನಂ=ಅಶನವು, ಆಶಾದಶಕಂ=ದಶದಿಕ್ಕುಗಳು, ವಿಸ್ತೀರ್ಣಂ=ವಿಶಾಲವಾದ, ವಸ್ತ್ರಂ=ವಸ್ತ್ರವು, ಉರ್ವೀ=ಭೂಮಿಯು, ಅಸ್ವಲ್ಪಂ= ವಿಶಾಲವಾದ, ಅಚಪಲಂ=ಅಚಂಚಲವಾದ, ತಲ್ಪಂ=ಹಾಸಿಗೆಯು, ಯೇಷಾಂ=ಯಾರಿಗೆ, ನಿಸ್ಸಂಗತಾ=ಸಂಗರಾಹಿತ್ಯದ, ಅಂಗೀಕರಣ=ಸ್ವೀಕಾರದಿಂದ, ಪರಿಣತ= ಪರಿಪಕ್ವವಾದ, ಸ್ವಾಂತ=ಅಂತಃಕರಣದಿಂದ, ಸಂತೋಷಿಣಃ=ಸಂತೋಷವುಳ್ಳ, ಸನ್ಯಸ್ತ=ತ್ಯಜಿಸಲ್ಪಟ್ಟ, ದೈನ್ಯ=ಕಾರ್ಪಣ್ಯದ, ವ್ಯತಿಕರನಿಕರಾಃ=ಸಂಬಂಧ ಸಮುದಾಯವುಳ್ಳ, ತೇ=ಅ, ಧನ್ಯಾಃ=ಕೃತಾರ್ಥರು, ಕರ್ಮ=ಸಂಚಿತಾದಿ ಕರ್ಮವನ್ನು, ನಿರ್ಮೂಲಯಂತಿ=ನಾಶಮಾಡಿಕೊಳ್ಳುವರು. .... ॥೯೯॥

ತಾ॥ ಪಾಣಿಯನ್ನು ಭಿಕ್ಷಾಪಾತ್ರವಾಗಿಮಾಡಿ, ಸಂಚಾರದಿಂದ ಪ್ರಾಪ್ತವಾದ ಶುದ್ಧ ಭಿಕ್ಷಾನ್ನವನ್ನು ಭುಜಿಸಿ, ವಿಶಾಲವಾದ ದಿಗ್ವಸ್ತ್ರವನ್ನುಟ್ಟು, ಚಾಂಚಲ್ಯ ರಹಿತವಾದ ಭೂಮಿಯೆಂಬ ಹಾಸಿಗೆಯ ಮೇಲೆ ಮಲಗುತ್ತಾ, ಸರ್ವಸಂಗ ಪರಿತ್ಯಾಗವನ್ನು ಮಾಡಿ, ಅದರಿಂದ ವೈರಾಗ್ಯರೂಪವಾದ ದೈನ್ಯ ಪರಿತ್ಯಾಗದಿಂದಲೂ, ಸಂತುಷ್ಟಚಿತ್ತರಾದ ಮಹಾ ಯೋಗಿಗಳೇ ಸಂಚಿತಾದಿ ಕರ್ಮಗಳನ್ನು ನಿರ್ಮೂಲಮಾಡಿ ಪರಮ ಪದವನ್ನು ಹೊಂದುವರು. .... .... .... ॥೯೯॥

ಶ್ಲೋ॥ ಮಾತರ್ಮೇದಿನಿತಾತಮಾರುತಸಖೇತೇಜಸ್ಸುಬಂಧೋಜಲಭ್ರಾತ
ರ್ವ್ಯೋಮನಿಬದ್ಧಏವಭವತಾಮಂತ್ಯಃಪ್ರಣಾಮಾಂಜಲಿಃ ।ಯು
ಷ್ಮತ್ಸಂಗವಶೋಪಜಾತಸುಕೃತಸ್ಫಾರಸ್ಫುರನ್ನಿರ್ಮಲಜ್ಞಾನಾಪಾ
ಸ್ತಸಮಸ್ತಮೋಹಮಹಿಮಾಲೀಯೇಪರಬ್ರಹ್ಮಣಿ ॥ ॥೧೦೦॥

ಟೀ॥ ಪಂಚಭೂತಗಳನ್ನು ಸಂಬೋಧಿಸಿ ಪೇಳುವನು—ಮಾತಃ=ಜನನಿಯಾದ, ಮೇದಿನಿ=ಭೂಮಿಯೆ, ತಾತ=ಜನಕನಾದ, ಮಾರುತ=ವಾಯುವೆ, ಸಖೇ= ಮಿತ್ರನಾದ, ತೇಜಃ=ತೇಜಸ್ಸೆ, ಸುಬಂಧೋ=ಸದ್ಬಂಧುವಾದ, ಜಲ=ಎಲೈಉದಕವೇ,

ಭ್ರಾತಃ=ಸಹಜವಾದ, ವ್ಯೋಮ=ಅಂತರಿಕ್ಷವೆ. ಭವತಾಂ=ನಿಮ್ಮಗಳಿಗೆ, ಅಂತ್ಯಃ=ಕಡೆಯದಾದ, ಪ್ರಣಾಮಾಂಜಲಿಃ=ನಮಸ್ಕಾರರೂಪವಾದ ಅಂಜಲಿಯು. ನಿಬದ್ಧ ಏವ=ಜೋಡಿಸಲ್ಪಟ್ಟಿರುವುದು, ಯುಷ್ಮತ್=ನಿಮ್ಮಗಳ,ಸಂಗ=ಸಂಬಂಧದ, ವಶ=ಅಧೀನದಿಂದ, ಉಪಜಾತ=ಉಂಟಾದ, ಸುಕೃತ=ಪುಣ್ಯದಿಂದ, ಸ್ಫಾರ=ವಿಸ್ತಾರವಾದ, ಸ್ಫುರತ್=ಪ್ರಕಾಶಿಸುವ, ನಿರ್ಮಲ=ಸ್ವಚ್ಛವಾದ, ಜ್ಞಾನ=ವಿವೇಕದಿಂದ, ಅಪಾಸ್ತ=ತ್ಯಜಿಸಲ್ಪಟ್ಟ, ಸಮಸ್ತ=ಸಕಲವಾದ, ಮೋಹ=ಪುತ್ರಮಿತ್ರಕಳತ್ರಾದಿಗಳಲ್ಲಿರುವ ಅಭಿಮಾನವೆಂಬ ಭ್ರಾಂತಿಯು, ಮಹಿಮಾ=ಅತಿಶಯವುಳ್ಳವನಾಗಿ, ಪರಬ್ರಹ್ಮಣಿ=ಸಚ್ಚಿದಾನಂದ ಸ್ವರೂಪನಾದ ಪರಬ್ರಹ್ಮನಲ್ಲಿ, ಲೀಯೇ=ಏಕೀಭಾವವಾಗುವೆನು. ... ... ... ।೧೦೦॥

ತಾ॥ಎಲೈ ಜನನಿಯಾದ ಭೂದೇವಿಯೇ, ತಂದೆಯಾದ ಮಾರುತನೇ, ಮಿತ್ರಸ್ವರೂಪವಾದ ತೇಜಸ್ಸೆ, ಎಲೈ ಬಂಧುವಿನಂತಿರುವ ಜಲವೆ, ಸೋದರನಂತಿರುವ ಎಲೈ ಅಂಬರವೆ, ಇಗೋ ನಿಮ್ಮಗಳಿಗೆ ಇದು ಕಡೆಯ ನಮಸ್ಕಾರವು. ಏಕೆಂದರೆ, ಇದುವರೆಗೆ ನಿಮ್ಮಗಳ ಸಂಬಂಧದಿಂದ ಉಂಟಾದ ಯಾವ ಸುಕೃತವು ಉಂಟೋ ಅಂಥಾ ಸುಕೃತದಿಂದ ಪಡೆದ ಅತ್ಯಂತ ಮಹತ್ತಾಗಿಯೂ, ಪ್ರಕಾಶಿಸುವುದಾಗಿಯೂ, ನಿರ್ಮಲವಾಗಿಯೂ ಇರುವ, ಆತ್ಮಾನಾತ್ಮ ವಿವೇಕಜ್ಞಾನದಿಂದ ಅಪಾರವಾದ ಪುತ್ರ ಮಿತ್ರ ಕಳತ್ರಾದಿಗಳಲ್ಲಿ ಇದ್ದ ದುರಭಿಮಾನಗಳನ್ನು ಪರಿತ್ಯಜಿಸಿ, ಪರಬ್ರಹ್ಮನಲ್ಲಿ ಏಕೀಭಾವವನ್ನು ಪಡೆಯುವೆನು. ಎಂದರೆ, ಈಷಣತ್ರಯರಹಿತನಾದುದರಿಂದಲೇ ಚಿದಾನಂದ ಸ್ವರೂಪನಾಗಿ ವಿದೇಹಕೈವಲ್ಯಪರ್ಯಂತವೂ ಜೀವನ್ಮುಕ್ತನಾಗಿರುವೆನೆಂದು ಅಂತರಂಗವು. .... .... ॥೧೦೦॥

ಶ್ಲೋ॥ ಸೋಮನಾಥಕೃಪಾಪಾತ್ರನಾರಾಯಣವಿಲೇಖಿತಾ ।
ಸುಭಾಷಿತಸ್ಯಟೀಕೇಯಂಜೀಯಾದಾಚಂದ್ರತಾರಕಂ ॥

ಈ ಪ್ರಕಾರವಾಗಿ ಭರ್ತೃಹರಿ ಯೋಗೀಂದ್ರ ವಿರಚಿತವಾದ
"ಸುಭಾಷಿತ ತ್ರಿಶತಿ" ಎಂಬ ಕಾವ್ಯವು, ದೊಡ್ಡಬೆಲೆ
ನಾರಾಯಣ ಶಾಸ್ತ್ರಿಯಿಂದ ಕರ್ಣಾಟಕ
ಟೀಕಾತಾತ್ಪರ್ಯದೊಂದಿಗೆ ರಚಿಸಲ್ಪಟ್ಟ
ಸಂಪೂರ್ಣವಾದುದು.